ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ—ಸಂಖ್ಯೆ ೩೩

ಶ್ರೀ ವಸಿಷ್ಠ ಮಹರ್ಷಿ ವಿರಚಿತವೂ ಶ್ರೀ ವಾಲ್ಮೀಕಿ ಮಹರ್ಷಿ ಪ್ರೋಕ್ತವೂ
ಆದ

ಯೋಗವಾಸಿಷ್ಠ

ಸಂಪುಟ ೧೧

ಉಪಶಮ ಪ್ರಕರಣ

ಕನ್ನಡಿಸಿದವರು :
ವೇದಾಂತ ಶಿರೋಮಣಿ
ಮಣಿಕುಂಡಲಂ ಎಸ್. ವೆಂಕಟೇಶ ಶಾಸ್ತ್ರಿ

ಶ್ರೀ ಗುರುನಾಥ ಪ್ರಿಂಟಿಂಗ್ ವರ್ಕ್ಸ್,
೨೧, ಮನವಾರ್ತೆಪೇಟೆ, ಬೆಂಗಳೂರು ನಗರ.
೧೯೪೯

ಯೋಗವಾಸಿಷ್ಠ

ಸಂಪುಟ ೧೧

ಉಪಶಮ ಪ್ರಕರಣ

ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ—ಸಂಖ್ಯೆ ೩೪

ಶ್ರೀ ವಸಿಷ್ಠ ಮಹರ್ಷಿ ವಿರಚಿತವೂ ಶ್ರೀ ವಾಲ್ಮೀಕಿ ಮಹರ್ಷಿ ಪ್ರೋಕ್ತವೂ
ಆದ

ಯೋಗವಾಸಿಷ್ಠ

ಸಂಪುಟ ೧೧

ಉಪಶಮ ಪ್ರಕರಣ

ಕನ್ನಡಿಸಿದವರು :
ವೇದಾಂತ ಶಿರೋಮಣಿ
ಮಣಿಕುಂಡಲಂ ಎಸ್. ವೆಂಕಟೇಶ ಶಾಸ್ತ್ರಿ

ಶ್ರೀ ಗುರುನಾಥ ಪ್ರಿಟಿಂಗ್ ವರ್ಕ್ಸ್,
೨೧, ಮನವಾರ್ತೆಪೇಟೆ, ಬೆಂಗಳೂರು ನಗರ.
೧೯೪೯

ಪೀಠಿಕೆ

ಯೋಗವಾಸಿಷ್ಠವು ಅದ್ವೈತಸಿದ್ಧಾಂತಕ್ಕೆ ಸೇರಿದ ಪ್ರಕರಣ ಗ್ರಂಥ. ಇದಕ್ಕೆ ವಾಸಿಷ್ಠರಾಮಾಯಣ ಎಂದೂ ಹೆಸರುಂಟು. ಅದ್ವೈತ ಗುರುಪರಂಪರೆಯ ಆದ್ಯರಾದ ವಸಿಷ್ಠರು "ಸೃಷ್ಟಿಯ ಮೊದಲು ದಿನಗಳಲ್ಲಿ ಲೋಕದಲ್ಲಿ ಶಾಂತಿಯು ನೆಲೆಗೊಳ್ಳಲೆಂದು ಭಗವಂತನಾದ ಚತುರ್ಮುಖನು ಉಪದೇಶಿಸಿದ ಜ್ಞಾನವಿದ್ಯೆ"ಯನ್ನು ಶ್ರೀರಾಮನ ಚಿತ್ತಶಾಂತಿಗೆಂದು ಹೇಳಿದರೆಂದೂ, ಅದನ್ನೇ ವಾಲ್ಮೀಕಿಗಳು ಬ್ರಹ್ಮನಾಜ್ಞೆಯಿಂದ ಗ್ರಂಥವಾಗಿ ವಿರಚಿಸಿದರೆಂದೂ ಈ ಗ್ರಂಥದಲ್ಲಿ ಹೇಳಿದೆ. ವಿದ್ಯಾರಣ್ಯರು ನಿಶ್ಚಲದಾಸರು ಮೊದಲಾದ ಅದ್ವೈತಾಚಾರ್ಯರನೇಕರು ಈ ಗ್ರಂಥದ ಅನೇಕಾಂಶಗಳನ್ನು ತಮ್ಮ ಗ್ರಂಥಗಳಲ್ಲಿ ಸಂಗ್ರಹಿಸಿದ್ದಾರೆ. ವಾಸಿಷ್ಠ ಸಿದ್ಧಾಂತವೂ ಶಾಂಕರಸಿದ್ಧಾಂತವೂ ಕೆಲವೆಡೆಗಳಲ್ಲಿ ಭಿನ್ನೈಸುವುದೆಂದು ಕೆಲವರ ಅಭಿಪ್ರಾಯವಿದೆ. ಆದರೂ ಅದ್ವೈತ ಸಂಪ್ರದಾಯವನ್ನು ಹಿಡಿದ ಮುಮುಕ್ಷುಗಳೂ ಜಿಜ್ಞಾಸುಗಳೂ ಈ ಗ್ರಂಥವನ್ನು ಪರಮಾದರದಿಂದ ಅಧ್ಯಯನ ಮಾಡುತ್ತಾರೆ.

ಭೋಗೈಕಪರಾಯಣವಾದ ಆಧುನಿಕ ನಾಗರಿಕತೆಯು ದೇಶಗಳಲ್ಲಿಯೇ ಹುಟ್ಟಿ ಬೆಳೆದ ಅನೇಕ ದಾರ್ಶನಿಕರು ನಿರೂಪಿಸಿರುವ ಸಿದ್ಧಾಂತಗಳಿಗೂ ಈ ವಾಸಿಷ್ಠ ಸಿದ್ಧಾಂತಕ್ಕೂ ಎಷ್ಟೋ ಅಂಶಗಳಲ್ಲಿ ಏಕತಾನತೆಯು ಇರುವುದು ಒಂದು ವಿಶೇಷ ಸಂಗತಿ.

ಈ ಗ್ರಂಥದಲ್ಲಿ ನಿರ್ಣಯಸಾಗರ ಪ್ರೆಸ್ಸಿನಲ್ಲಿ ತಾತ್ಪರ್ಯಪ್ರಕಾಶವೆಂಬ ವ್ಯಾಖ್ಯಾನದೊಡನೆ ಮುದ್ರಿತವಾಗಿರುವ ಮೂಲವನ್ನೇ ಬಹುಮಟ್ಟಿಗೆ ಅನುಸರಿಸಲಾಗಿದೆ. ಹಿಂದೆ ಆಸ್ಥಾನ ವಿದ್ವಾನ್ ಬ್ರಹ್ಮಶ್ರೀ ಗುಂಡಶಾಸ್ತ್ರಿಗಳು ಕೃಷ್ಣರಾಜ ವೈಭವವೆಂಬ ಹೆಸರಿನಿಂದ ವೈರಾಗ್ಯ, ಮುಮುಕ್ಷು, ವ್ಯವಹಾರ, ಉತ್ಪತ್ತಿ, ಸ್ಥಿತಿ ಉಪಶಮಗಳೆಂಬ ಮೊದಲಿನೈದು ಪ್ರಕರಣಗಳನ್ನು ಮೂಲ-ಅನುವಾದ ಸಹಿತವಾಗಿ ಬಾಗಿ ಪ್ರಕಟಿಸಿದ್ದರು. ಈಗ ಇಲ್ಲಿ ಪ್ರಕಟವಾಗಿರುವ ಅನುವಾದವು ಸ್ವತಂತ್ರವು. ಅವಶ್ಯವೆಂದು ತೋರಿದ ಕಡೆಗಳಲ್ಲಿಯೂ ಗ್ರಂಥಾಂತರಗಳಲ್ಲಿ ಹೇಳಿರುವುದು ಓದುಗರ ಗ್ರಮನಕ್ಕೆ ಬಂದು ಓದಿದ ವಿಷಯವು ಧೃಢವಾಗಲೆಂದೂ ಟಿಪ್ಪಣಿಗಳನ್ನು ಕೊಡಲಾಗಿದೆ.

ಭಾರತವಿಂದು ಜಾಗ್ರತವಾಗಿದೆ. ಮಾದರಿಯ ಮೈಸೂರು ಅಕ್ಷರ ಪ್ರಚಾರ ವನ್ನು ದೇಶಾದ್ಯಂತವೂ ಹರಡಿ ಕೀರ್ತಿವಂತವಾಗಿದೆ. ನಾನಾಮುಖವಾಗಿ ಬೆಳೆಯುತ್ತಿರುವ ದೇಶದ ಸೌಭಾಗ್ಯ ಮಂದಿರಕ್ಕೆ ಕಲಶವಾಗಿ ಜನರಲ್ಲಿ ವಿದ್ಯಾವಂತ ರಾಗಬೇಕಾದರೆ ಬ್ರಹ್ಮವಿದ್ಯೆಯನ್ನು ಕಲಿಯಲೇಬೇಕೆಂಬ ಪ್ರಾಚೀನರ ಉಪದೇಶ ವಿಂದು ಎಲ್ಲರ ಮನಸ್ಸಿಗೂ ಬರುವ ಕಾಲವೂ ಬಂದಿದೆ. ಇಂತಹ ಸಂಧಿಕಾಲಗಳಲ್ಲಿ ಈ ಗ್ರಂಥವು ಸುಲಭ ಕನ್ನಡದಲ್ಲಿ ಬರುವುದು ಕನ್ನಡಲೋಕದ ಸುದೈವ. ಕಾವ್ಯ ಶೈಲಿಯಲ್ಲಿ ವೇದಾಂತವನ್ನು ಇಷ್ಟು ಸುಂದರವಾಗಿ ಸುಲಭವಾಗಿ ಬೋಧಿಸುವ ಗ್ರಂಥ ಇನ್ನೊಂದಿಲ್ಲ. ಇದನ್ನು ಓದಿ ಅರ್ಥಮಾಡಿಕೊಳ್ಳಲು ಗ್ರಂಥಾಂತರಗಳ ಸಹಾಯವು ಬೇಕಿಲ್ಲ. ಶ್ರದ್ಧೆಯೊಂದಿದ್ದರೆ ಸಾಕು: ಅದರಿಂದ ಈ ಗ್ರಂಥದಿಂದ ಆಗುವ ಲೋಕೋ ಪಕಾರವು ಅಷ್ಟಿಷ್ಟಲ್ಲ.

ಈ ಗ್ರಂಥವು ಈ ರೂಪದಲ್ಲಿ ಬರುವುದಕ್ಕೆ ಕಾರಣರು ನಮ್ಮನ್ನಾಳುವ ಶ್ರೀಮನ್ಮಹಾರಾಜರು ಶ್ರೀ ಜಯಚಾಮರಾಜೇಂದ್ರ ಒಡೆಯರು ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ. ಅವರು. ಈ ಗ್ರಂಥ ಪಠನ ಪಾಠಗಳಿಂದ ಲಭಿಸುವ ಶ್ರೇಯಸ್ಸೆಲ್ಲವೂ ಮಹಾ ಸನ್ನಿಧಾನಕ್ಕೇ ಸೇರಿದುದು.

ಈ ಕಾರ್ಯಕ್ಕೆ ತನ್ನನ್ನು ನಿಯಮಿಸಿದ ಆಳುವ ಮಹಾಸ್ವಾಮಿಯವರಿಗೆ ಅನುವಾದಕನು ಅತ್ಯಂತ ಕೃತಜ್ಞನಾಗಿ ಈ ಗ್ರಂಥದ ಅಧ್ಯಯನದಿಂದ ತನಗೆ ಆದ ಪರಮೋಪಕಾರವನ್ನು ನೆನೆದು ಸಮಸ್ತ ಸನ್ಮಂಗಳಾನಿ ಭವಂತು ಎಂದು ಹರಕೆ ಹೊರುತ್ತಾನೆ.

ಬೆಂಗಳೂರು ನಗರ.
೧೫-೫-೪೯

ದೇವುಡು.

ಸೂಚನೆ:— ಈ ಸಂಪುಟವನ್ನು ವೇದಾಂತ ಶಿರೋಮಣಿ ಬ್ರಹ್ಮಶ್ರೀ ಮ. ಸು. ವೆಂಕಟೇಶ ಶಾಸ್ತ್ರಿಗಳು ಕನ್ನಡಿಸಿದ್ದಾರೆ.

ವಿಷಯ ಸೂಚಿಕೆ

ಶ್ರೀ

ಯೋಗವಾಸಿಷ್ಠ

ಉಪಶಮ ಪ್ರಕರಣ

ದ್ವಾವಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಅಥವಾ ರಘುವಂಶಾಖ್ಯನಭಃಪೂರ್ಣನಿಶಾಕರ ।
ಬಲಿವದ್ಬುದ್ಧಿಭೇದೇನ ಜ್ಞಾನಮಾಸಾದಯಾಮಲಂ ॥ ೧ ॥

ಶ್ರೀರಾಮ ಉವಾಚ—

ಭಗವನ್ ಸರ್ವಧರ್ಮಜ್ಞ ತ್ವತ್ಪ್ರಸಾದಾನ್ಮಯಾ ಹೃದಿ ।
ಪ್ರಾಪ್ತಂ ಪ್ರಾಪ್ತವ್ಯಮಖಿಲಂ ವಿಶ್ರಾನ್ತಂ ಚಾಮಲೇ ಪದೇ ॥ ೨ ॥

ಇಪ್ಪತ್ತೆರಡನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು—ರಘುವಂಶವೆಂಬ ಆಕಾಶಕ್ಕೆ ಪೂರ್ಣಚಂದ್ರನಂತಿರುವ ರಾಘವನೇ, ಅಥವಾ ಬಲಿಯಂತೆ ಬುದ್ಧಿಯನ್ನು (ಸನ್ಮಾರ್ಗಕ್ಕೆ ತಿರುಗಿಸಿಕೊಂಡು) ಬದಲಾಯಿಸಿಕೊಂಡು ಜ್ಞಾನವನ್ನು ಸಂಪಾದಿಸಿಕೋ.

[ಬುದ್ಧಿ ಭೇದೇನ= ಅಕಸ್ಮಾತ್ ವಿಚಾರೋದಯೇನ. ತಾ. ಪ್ರ.]

೨. ಶ್ರೀರಾಮನು ಕೇಳಿದನು—ಸರ್ವ ಧರ್ಮಗಳನ್ನೂ ಬಲ್ಲ ಭಗವಂತನೇ, ನಿನ್ನ ಕೃಪೆಯಿಂದ, ನನಗೆ ದೊರೆಯಬೇಕಾಗಿದ್ದುದೆಲ್ಲವೂ ದೊರೆಯಿತು. ನಿರ್ಮಲವಾದ ಬ್ರಹ್ಮಪದದಲ್ಲಿ ನನಗೆ ವಿಶ್ರಾಂತಿಯೂ ದೊರೆಯಿತು.

ಶರದೀವಾಂಬರಾದಭ್ರಂ ಅದಭ್ರಂ ಮಮ ಚೇತಸಃ ।
ವಿಭೋ ವ್ಯಪಗತಂ ಸರ್ವಂ ತೃಷ್ಣಾಖ್ಯಂ ತನ್ಮಹಾತಮಃ ॥ ೩ ॥

ಅಮೃತಾಪೂರಿತಃ ಖಸ್ಥಃ ಶೀತಲಾತ್ಮಾ ಮಹಾದ್ಯುತಿಃ ।
ತಿಷ್ಠಾಮ್ಯಾನಂದವಾನಂತಃ ಸಾಯಂ ಪೂರ್ಣ ಇವೋಡುರಾಟ್ ॥ ೪ ॥

ಅಶೇಷಸಂಶಯಾಂಭೋದಶರತ್ಸಮಯ ಕಿಂ ತ್ವಹಂ ।
ತೃಪ್ತಿಮೇಷಾಂ ನ ಗಚ್ಛಾಮಿ ವಚಸಾಂ ವದತಸ್ತವ ॥ ೫ ॥

ಬಲೇರ್ವಿಜ್ಞಾನಸಂಪ್ರಾಪ್ತಿಂ ಪುನರ್ಮದ್ಬೋಧವೃದ್ಧಯೇ ।
ವಿಭೋ ಕಥಯ ಖಿದ್ಯಂತೇ ಸಂತೋ ನಾವನತಂ ಪ್ರತಿ ॥ ೬ ॥

ಶ್ರೀ ವಸಿಷ್ಠ ಉವಾಚ:—

ಶೃಣು ರಾಘವ ತೇ ವಕ್ಷ್ಯೇ ಬಲೇರ್ವೃತ್ತಾಂತಮುತ್ತಮಂ ।
ಶ್ರುತೇನ ಯೇನ ತ್ವಂ ತತ್ತ್ವಂ ಬೋಧಂ ಪ್ರಾಪ್ಸ್ಯಸಿ ಶಾಶ್ವತಂ ॥ ೭ ॥

---

೩. ಶರದೃತುವಿನಲ್ಲಿ ಮೇಘಗಳೆಲ್ಲವೂ ಆಕಾಶದಿಂದ ಹೊರಟು ಹೋಗುವಂತೆ, ನನ್ನ ಮನಸ್ಸಿನಲ್ಲಿದ್ದ ಅನಲ್ಪವಾದ ತೃಷ್ಣೆಯೆಂಬ ಮಹಾ ತಮಸ್ಸು, ಎಲೈ ವಿಭುವೆ, ಎಲ್ಲವೂ ಜಾರಿಹೋಯಿತು.

೪. ಸಾಯಂಕಾಲದ ಪೂರ್ಣ ಚಂದ್ರನಂತೆ ನಾನೂ ಅಮೃತ ಪೂರ್ಣನಾಗಿರುವೆನು. ಸ್ವಸ್ಥನಾಗಿರುವೆನು. ಶಾಂತನಾಗಿರುವೆನು. ಮಹಾ ತೇಜಸ್ವಿಯಾಗಿರುವೆನು. ಹೃದಯದಲ್ಲಿ ಆನಂದವು ಪರಿಪೂರ್ಣವಾಗಿ ಸುಖನಾಗಿರುವೆನು.

೫. ಅಶೇಷ ಸಂಶಯಗಳೆಂಬ ಮೇಘಗಳಿಗೆಲ್ಲ ಶರತ್ಸಮಯಪ್ರಾಯನಾದ ಸರ್ವಜ್ಞನೆ, ನೀನು ಹೇಳುತ್ತಿದ್ದರೆ ಎಷ್ಟು ಕೇಳಿದರೂ ನನಗೆ ತೃಪ್ತಿಯಾಗುವುದಿಲ್ಲ.

೬. (ಅದರಿಂದ) ಬಲಿಗೆ ವಿಜ್ಞಾನವು ಪ್ರಾಪ್ತಿಯಾದುದನ್ನು ಕುರಿತು, ನನ್ನ ಜ್ಞಾನವು ವಿವೃದ್ಧವಾಗಲೆಂದು ಮತ್ತೆ, ಎಲೈ ವಿಭುವೆ, ಹೇಳು. ಸತ್ಪುರುಷರು ಶರಣಾಗತನಾದವನಿಗೆ (ಉಪದೇಶ ಮಾಡುವುದರಲ್ಲಿ ಎಷ್ಟು ಕಷ್ಟವಾದರೂ) ಆಯಾಸ ಪಡುವುದಿಲ್ಲವಲ್ಲವೆ ?

೭. ಶ್ರೀ ವಸಿಷ್ಠನು ಹೇಳಿದನು— ರಾಘವ ಕೇಳು, ಉತ್ತಮವಾದ ಬಲಿ

ಅಸ್ತ್ಯಸ್ಮಿನ್ ಜಗತಃ ಕೋಶೇ ಕಸ್ಮಿಂಶ್ಚಿದ್ದಿಂಗ್ನಿಕುಂಜಕೇ ।
ಪಾತಾಳಮಿತಿ ವಿಖ್ಯಾತೋ ಲೋಕೋ ಭೂಮೇರಧಃ ಸ್ಥಿತಃ ॥ ೮ ॥

ಕ್ಷೀರೋದಾರ್ಣವಜಾತಾಭಿಃ ದಿಗ್ಧಾಭಿರಮೃತಾಂಶುಭಿಃ ।
ಕ್ವಚಿದ್ದಾನವಕನ್ಯಾಭಿಃ ಭಾತಿ ನಿರ್ವಿವರಾಂತರಃ ॥ ೯ ॥

ಜಿಹ್ವಾಗಣೋದ್ದಾಮರವಾಲಿಃ ಲೋಕರಸನಾಯುಗೈಃ ।
ಕ್ವಚಿದ್ಭೋಗಿಭಿರಾಪೂರ್ಣಃ ಸಹಸ್ರಶತಮಸ್ತಕೈಃ ॥ ೧೦ ॥

ವೃತ್ತಾಂತವನ್ನೂ ನಿನಗೆ ಹೇಳುವೆನು. ಅದನ್ನು ಕೇಳಿದರೆ ನಿನಗೆ ಶಾಶ್ವತವಾದ ತತ್ವ ಬೋಧವು ಆಗುವದು.

೮. ಈ ಬ್ರಹ್ಮಾಂಡದಲ್ಲಿ ಒಂದಾನೊಂದು ದಿಕ್ಕಿನಲ್ಲಿ ಪಾತಾಳವೆಂದು ವಿಖ್ಯಾತವಾದ ಲೋಕವೊಂದು ಇರುವುದು. ಅದು ಭೂಮಿಯ ಕೆಳಗಡೆ ಇರುವುದು.

೯. ಕ್ಷೀರ ಸಮುದ್ರದಲ್ಲಿ ಹುಟ್ಟಿ, ಅಮೃತಮಯನಾದ ಕಾಂತಿಯಿಂದ ಕೂಡಿರುವ ದಾನವ ಕನ್ಯೆಯರಿಂದ ಪರಿಪೂರ್ಣವಾಗಿರುವ ಮೂಲೆಯೊಂದು ಅಲ್ಲಿ ಮೆರೆಯುತ್ತಿರುವುದು.

[ದಾನವರು ಸಮುದ್ರ ಮಧ್ಯದಲ್ಲಿಯೂ ವಾಸವಾಗಿರುವರೆಂದು ಪ್ರಸಿದ್ಧಿಯುಂಟು. ಆದರಿಂದ, ಕ್ಷೀರ ಸಮುದ್ರದಲ್ಲಿ ಹುಟ್ಟಿದ ಕಾರಣ ಅಮೃತ ಕಾಂತಿಯು ಅವರಲ್ಲಿ ಇರುವುದು. ತಾ. ಪ್ರ.]

೧೦. ಇನ್ನೊಂದು ಕಡೆ ಶೇಷಾದಿ ಮಹಾ ನಾಗಗಳಿರುವರು.ಅವರು ಒಬ್ಬೊಬ್ಬರಿಗೂ ನೂರು, ಸಾವಿರ, ಹೆಡೆಗಳೂ ಎರಡು ಎರಡು ನಾಲಗೆಗಳೂ ಇದ್ದು, ಅವುಗಳೆಲ್ಲದರಿಂದಲೂ ಅವರು ವ್ಯಾಕರಣ, ಛಂದಶ್ಶಾಸ್ತ್ರ, ಮೊದಲಾದುವುಗಳನ್ನು ಅಧ್ಯಯನ ಮಾಡುತ್ತಿರಲು, ಆ ಧ್ವನಿಯು ಆ ಪ್ರದೇಶವನ್ನೆಲ್ಲ ತುಂಬಿರುವುದು.

ದೇಹಾದ್ರಿವಲಿತಾಶೇಷವಿಶ್ವೋದ್ಧರಣಘಸ್ಮರೈಃ ।
ಕ್ವಚಿದ್ದನುಸುತೈರ್ವ್ಯಾಪ್ತಃ ಚಲದ್ಭಿರಿವ ಮೇರುಭಿಃ ॥ ೧೧ ॥

ಕುಂಭಕೂಟಾಗ್ರವಿಶ್ರಾಂತವಸುಧಾಮಂಡಲೋದರೈಃ ।
ಕ್ವಚಿದ್ದಿಗ್ದಂತಿಭಿರ್ದಂತದ್ರುಮಾದ್ರಿಭಿರುಪಾಶ್ರಿತಃ ॥ ೧೨ ॥

ಮಹಾಕಟಕಟಾಶಬ್ದತ್ರಸ್ತಭೂತಪರಂಪರೈಃ ।
ಕ್ವಚಿದ್ದುರ್ಗಂಧಭೂತಾಢ್ಯೈಃ ಅಧೋ ನಾರಕಮಂಡಲೈಃ ॥ ೧೩ ॥

ಆಭೂತಲಮಭಿಪ್ರೋತಸಪ್ತಪಾತಾಳಮಂಡಲೈಃ ।
ಕ್ವಚಿದ್ರತ್ನಾಕರೈರ್ವ್ಯಾಪ್ತಃ ಪಾತಾಳೈರ್ವಿವರೈರಿವ ॥ ೧೪ ॥

---

೧೧. ಚಲಸುತ್ತಿರುವ ಮೇರು ಪರ್ವತಗಳೋ ಎನ್ನುವಂತಿರುವ ದೇಹಗಳಿಂದ ಜಗತ್ತೆಲ್ಲವನ್ನೂ ವ್ಯಾಪಿಸಿಕೊಂಡು, ಯಜ್ಞ ಹವಿಸ್ಸುಗಳನ್ನೆಲ್ಲ ಬಲಾತ್ಕಾರವಾಗಿ ಕಿತ್ತು ತಿನ್ನುವ ದಾನವೇಂದ್ರರು ಆ ಪಾತಾಳದಲ್ಲಿರುವರು.

[ವಿಶ್ವೋದ್ಧರಣಸ್ಯ-ಧರ್ಮಸ್ಯ-ಯಜ್ಞಹವಿಷಃ ತಾ. ಪ್ರ.]

೧೨. ಒಂದು ಕಡೆ, ತಮ್ಮ ಕುಂಭಮಂಡಲದ ತುದಿಯಲ್ಲಿ ಭೂಮಂಡಲದ ಮಧ್ಯಭಾಗವನ್ನು ವಹಿಸಿರುವುಗಳಾಗಿಯೂ-ಕೊಂಬುಗಳೆಂಬ ವೃಕ್ಷಗಳಿಗೆ ಪರ್ವತದಂತೆ ಆಧಾರಭೂತಗಳಾಗಿಯೂ ಇರುವ ದಿಗ್ಗಜಗಳು ಆಶ್ರಯಿಸಿಕೊಂಡಿರುವುವು.

೧೩. ಇನ್ನೊಂದು ಕಡೆ, ಅಧೋದೇಶದಲ್ಲಿ ದುರ್ಗಂಧವನ್ನು ಕಾರುತ್ತಿರುವ, ಅದ್ಭುತವಾದ ಕಟಕಟಾ ಶಬ್ದವನ್ನು ಮಾಡುತ್ತಿರುವ, ನೋವಿನಿಂದ ನರಳುತ್ತಿರುವ ಪ್ರಾಣಿಗಳ ಪರಂಪರೆಯುಳ್ಳ ನರಕ ಮಂಡಲಗಳಿರುವುವು.

೧೪. ಭೂಲೋಕದವರೆಗೂ ಇರುವ ಸಪ್ತ ಪಾತಾಲ ಮಂಡಲಗಳನ್ನು ಒಂದರ ಮೇಲೊಂದು ಸೇರಿಸಿರುವುದರಿಂದ, ಆ ಪಾತಾಳಗಳ ಸಂದುಗಳಲ್ಲಿ ಸಮುದ್ರಗಳನ್ನು ಅಡಕಿಸಿಟ್ಟಿರುವಂತಿರುವುದು.

ಸುರಾಸುರಶಿರಸ್ಸ್ರಸ್ತಪಾದಾಂಭೋರುಹಪಾಂಸುನಾ ।
ಕ್ವಚಿದ್ಭಗವತಾ ತೇನ ಕಪಿಲೇನ ಪವಿತ್ರಿತಃ ॥ ೧೫ ॥

ಆಸುರೀಸಂಭೃತಾನಂತಪೂಜನಕ್ರೀಡನೈಷಿಣಾ ।
ಕ್ವಚಿದ್ಭಗವತಾ ತೇನ ಹಾಟಕೇಶೇನ ಪಾಲಿತಃ ॥ ೧೬ ॥

ತಸ್ಮಿನ್ಸುರದೋಸ್ಸ್ತಂಭಧಾರ್ಯಮಾಣಮಹಾಭರೇ ।
ಬಭೂವ ದಾನವೋ ರಾಜಾ ವಿರೋಚನಸುತೋ ಬಲಿಃ ॥ ೧೭ ॥

ಸಾಕ್ರಂದೇನ ಸಮಂ ಸರ್ವೈಃ ಸುರವಿದ್ಯಾಧರೋರಗೈಃ ।
ಪಾದಸಂವಾಹನಂ ಯಸ್ಯ ಸುರರಾಜೇನ ವಾಂಛಿತಂ ॥ ೧೮ ॥

ಕೋಶಸ್ತ್ರೈಲೋಕ್ಯರತ್ನಾನಾಂ ಪಾತಾ ಸರ್ವಶರೀರಿಣಾಂ ।
ಧರ್ತಾ ಭುವನಧರ್ತೄಣಾಂ ಯಸ್ಯ ಪಾಲಯಿತಾ ಹರಿಃ ॥ ೧೯ ॥

---

೧೫. ಇನ್ನೊಂದು ಕಡೆಯು, ಸುರಾಸುರರೆಲ್ಲರೂ ಯಾವನ ಪಾದ ಧೂಳಿಯನ್ನೂ ತೆಗೆದು ಶಿರಸ್ಸಿನಲ್ಲಿ ಧರಿಸುವರೋ, ಅಂತಹ ಭಗವಾನ್ ಕಪಿಲಿನ ವಾಸದಿಂದ ಪವಿತ್ರವಾಗಿರುವುದು.

೧೬. ಅಸುರ ಸ್ತ್ರೀಯರು ಒಪ್ಪಿಸುವ ಅನಂತ ಪೂಜಾದಿಗಳನ್ನು ಕ್ರೀಡಾರ್ಥವಾಗಿ ಆಪೇಕ್ಷಿಸುವ ಹಾಟಕೇಶ್ವರ ಭಗವಂತನಿಂದ ಇನ್ನೊಂದು ಕಡೆಯು ಪವಿತ್ರವಾಗಿರುವುದು.

[ಹಾಟಕೇಶೇನ ಸ್ವರ್ಣಲಿಂಗಾತ್ಮನಾ ಪುರಾಣೇಷು ಪ್ರಸಿದ್ಧೇನ ಶಿವೇನ ತಾ. ಪ್ರ.]

೧೭. ಆ ಪಾತಾಳದಲ್ಲಿ ಅಸುರ ನಾಯಕರ ಮಹಾಭುಜಗಳು ಧರಿಸಿರುವ ಮಹಾರಾಜ್ಯದಲ್ಲಿ ವಿರೋಚನನ ಮಗನಾದ ಬಲೀಂದ್ರನು ರಾಜನಾಗಿದ್ದನು.

೧೮. ಸುರರು, ವಿದ್ಯಾಧರರು, ನಾಗರು ಮೊದಲಾದವರೆಲ್ಲರೊಡನೆ, ಅಳುತ್ತಾ ಅಳುತ್ತಾ ಸುರೇಂದ್ರನು ಆತನ ಪಾದಗಳನ್ನು ಒತ್ತಬೇಕಾಗಿರುವುದು.

೧೯. ತ್ರೈಲೋಕ್ಯಗಳೆಂಬ ರತ್ನಗಳನ್ನು ಹೊಟ್ಟೆಯಲ್ಲಿ ಇಟ್ಟುಕೊಂಡಿರುವ

ಐರಾವಣಸ್ಯ ಸಂಶೋಷರಿ ಯನ್ನಾಮ್ನಾ ಕಟಭಿತ್ತಯಃ ।
ಕೇಕಯೋವಾಹಿಹೃನ್ನಾಡ್ಯೋ ಜಗ್ಮುರಾಜಗ್ಮುರಾರ್ತತಾಂ ॥ ೨೦ ॥

ಪ್ರತಾಪೋಗ್ರೋಷ್ಮಭಿರ್ಯಸ್ಯ ಕಲ್ಪಕಾಲಇವಾಬ್ಧಯಃ ।
ಯಯುಃ ಶೋಷೋನ್ಮುಖಾಃ ಸಪ್ತ ಸಪ್ತತಾಂ ಕುಪಿತಾಕೃತೇಃ ॥ ೨೧ ॥

ಯದಧ್ವರಾಗ್ರ್ಯಧೂಮಾಭ್ರರಾಜಯೋ ವಲಿತಾಬ್ಧಯಃ ।
ಬ್ರಹ್ಮಾಂಡಕೋಟರಸ್ಯಾಸ್ಯ ಸದಾ ಕವಚತಾಂ ಯಯುಃ ॥ ೨೨ ॥

ಯಸ್ಯ ದೃಷ್ಟಿದೃಢಾಘಾತನುನ್ನಾ ಧಾರಕುಲಾಚಲಾಃ ।
ವಿನಮಂತಿ ದಿಶಃ ಸರ್ವಾಃ ಲತಾಃ ಫಲನತಾಇವ ॥ ೨೩ ॥

ಸರ್ವಪ್ರಾಣಿಗಳನ್ನೂ ಕಾಪಾಡುವ ಭೂಮಿಯನ್ನು ಧರಿಸಿರುವ (ಇಂದ್ರ ಶೇಷ ಮನು ಮೊದಲಾದವರನ್ನೂ) ಧರಿಸಿರುವ, ಶ್ರೀ ಹರಿಯು ಆತನಿಗೆ ರಕ್ಷಕನು.

೨೦. ನವಿಲಿನ ಕೂಗಿನಿಂದ ಹಾವಿನ ಎದೆಗಳು ಒಡೆಯುವಂತೆ, ಆ ಬಲೀಂದ್ರನ ಹೆಸರು ಕೇಳಿದೊಡನೆಯೇ, ಐರಾವತದ ಸಪ್ತ ಮದ ಸ್ಥಾನಗಳೂ ಒಣಗಿ ಹೋಗಿ ತಲ್ಲಣಿಸುತ್ತಿದ್ದುವು.

೨೧. ಆತನು ಕೋಪಿಸಿಕೊಂಡರೆ, ಪ್ರಲಯ ಕಾಲದಲ್ಲಿ ಆಗುವ ಹಾಗೆ, ಆತನ ಪ್ರತಾಪ ಜ್ವಾಲೆಯ ಬಿಸಿಗೆ, ಸಪ್ತ ಸಾಗರಗಳೂ ಒಣಗಿ ಹೋಗಿ ಏಳು ಹಳ್ಳಗಳಾಗುವುವು.

೨೨. ಆತನು ಆಚರಿಸಿದ ಅಶ್ವಮೇಧಯಾಗದಲ್ಲಿ ಹುಟ್ಟಿದ ಧೂಮದಿಂದ ಸಂಭವಿಸಿದ ಮೇಘಗಳ ಗುಂಪುಗಳು (ನೀರು ಕುಡಿಯುವುದಕ್ಕೆ ಹೋಗಿ) ಸಾಗರಗಳನ್ನು ಸರ್ವದಾ ಮುಸುರಿಕೊಂಡಿರಲು, ಬ್ರಹ್ಮಾಂಡ ಕೋಟರಕ್ಕೆ ಹೊಚ್ಚಿರುವ ಹೊದಿಕೆಗಳೋ ಎಂಬಂತೆ ಇರುವುವು.

[ಅಧ್ವರಾಗ್ರ್ಯಾಃ–ಅಶ್ವಮೇಧಾಃ ಟಾ. ಪ್ರ.]

೨೩. ಆತನ ದೃಷ್ಟಿ ಮಾತ್ರಕ್ಕೆ ಹೆದರಿ ಕುಲಾಚಲಗಳೆಲ್ಲವೂ ಬಗ್ಗಿಹೋಗಿರಲು, ಫಲ ಭಾರದಿಂದ ಬಗ್ಗಿರುವ ಲತೆಗಳಂತೆ, ದಿಕ್ಕು ವಿದಿಕ್ಕುಗಳೆಲ್ಲವೂ ತಲೆಬಾಗಿರುವಂತೆ ಇರುವುದು.

ಲೀಲಾವಿಜಿತನಿಶ್ಶೇಷಭುವನಾಭೋಗಭೂಷಣಃ ।
ದಶಕೋಟೀಃ ಸ ವರ್ಷಾಣಿ ದೈತ್ಯೋ ರಾಜ್ಯಂ ಚಕಾರ ಹ ॥ ೨೪ ॥

ಅಥ ಗಚ್ಛತ್ಸ್ವನಲ್ಪೇಷು ಯುಗೇಷ್ವಾವರ್ತವೃತ್ತಿಷು ।
ಸುರಾಸುರಮಹೌಘೇಷು ಪ್ರೋತ್ಪತತ್ಸು ಪತತ್ಸು ಚ ॥ ೨೫ ॥

ಅಜಸ್ರಮತಿಭುಕ್ತೇಷು ತ್ರೈಲೋಕ್ಯೋದಾರವೃತ್ತಿಷು ।
ಭೋಗೇಷ್ವಭಜದುದ್ವೇಗಂ ಬಲಿರ್ದಾನವನಾಯಕಃ ॥ ೨೬ ॥

ಮೇರುಶೃಂಗಶಿಖಾರತ್ನಕೃತವಾತಾಯನಸ್ಥಿತಃ ।
ಏಕದಾ ಚಿನ್ತಯಾಮಾಸ ಸ್ವಯಂ ಸಂಸಾರಸಂಸ್ಥಿತಿಂ ॥ ೨೭ ॥

ಕಿಯನ್ತಮಿದಮಕ್ಷುಣ್ಣಶಕ್ತಿನೈವ ಮಯಾಧುನಾ ।
ಸಾಮ್ರಾಜ್ಯಮಿಹ ಕರ್ತವ್ಯಂ ವಿಹರ್ತವ್ಯಂ ಜಗತ್ತ್ರಯೇ ॥ ೨೮ ॥

---

೨೪. ವಿಸ್ತಾರವಾದ ಬ್ರಹ್ಮಾಂಡ ಮಂಡಲಕ್ಕೆ ಭೂಷಣಪ್ರಾಯರಾದವರು (ಇಂದ್ರಾದಿಗಳು) ಎಲ್ಲರನ್ನೂ ಲೀಲಾಮಾತ್ರದಿಂದಲೇ ಗೆದ್ದ ಆ ದೈತ್ಯೇಂದ್ರನು ಹತ್ತು ಕೋಟಿ ವರ್ಷಗಳು ರಾಜ್ಯವನ್ನು ಆಳಿದನು.

೨೫. ಆ ಕಾಲದಲ್ಲಿ, ಹರಿಯುವ ನೀರಿನಲ್ಲಿ ಕಾಣುವ ಸುಳಿಗಳಂತೆ ಸುತ್ತುತ್ತಿರುವ ಎಷ್ಟೋ ಯುಗಗಳು ಬಹು ಬಹುವಾಗಿ ಕಳೆದುಹೋದುವು. ಎಷ್ಟೋ ಸುರಾಸುರರ ಗುಂಪು ಗುಂಪುಗಳು ಉಚ್ಛ್ರಾಯಕ್ಕೆ ಬಂದುವು, ಮುರಿದುಬಿದ್ದುವು.

೨೬. ಹೀಗೆ ಒಂದೇ ಸಮನಾಗಿ ಅತಿ ಭೋಗಗಳನ್ನು ಭೋಗಿಸಿ, ಭೋಗಿಸಿ, ತ್ರೈಲೋಕ್ಯಗಳಲ್ಲಿ ಶ್ರೇಷ್ಠವಾದ ಅನೇಕ ಸುಖ ಪರಂಪರೆಗಳನ್ನು ಅನುಭವಿಸಿ, ಅನುಭವಿಸಿ, ದಾನವ ಚಕ್ರವರ್ತಿಯಾದ ಬಲೀಂದ್ರನು ಭೋಗಗಳಲ್ಲಿ ನಾದನು.

೨೭. (ಹೀಗೆ ಭೋಗವಿಮುಖನಾದ) ಆತನು ಒಂದು ಸಲ ಮೇರು ಶಿಖರದಲ್ಲಿದ್ದ ತನ್ನ ಅರಮನೆಯಲ್ಲಿ) ರತ್ನ ಖಚಿತವಾದ ವಾತಾಯನವೊಂದರಲ್ಲಿ ಕುಳಿತು ಈ ಸಂಸಾರವೆಂದರೇನು ಎಂಬುದನ್ನು ಕುರಿತು ಯೋಚಿಸಿದನು.

೨೮. ನಾನು ಹೀಗೆ, ನನ್ನ ಶಕ್ತಿಯು ಕ್ಷೀಣವಾಗದಂತೆ ಕಾಪಾಡಿಕೊಂಡು,

ಮಹತಾ ಮಮ ರಾಷ್ಟ್ರೇಣ ತ್ರೈಲೋಕ್ಯಾದ್ಭುತ ಕಾರಿಣಾ ।
ಕಿಂ ವಾ ಭವತಿ ಭುಕ್ತೇನ ಭೂರಿಭೋಗಾತಿಹಾರಿಣಾ ॥ ೨೯ ॥

ಅಪಾತಮಾತ್ರಮಧುರಂ ಅವಶ್ಯಕಪರಿಕ್ಷಯಂ ।
ಭೋಗೋಪಭೋಗಮಾತ್ರಂ ಮೇ ಕಿಂ ನಾಮೇದಂ ಸುಖಾವಹಂ । ॥ ೩೦ ॥

ಪುನರ್ದಿನೈಕಕಲನಾ ಶರ್ವರೀಸಂಸ್ಥಿತಿಃ ಪುನಃ ।
ಪುನಸ್ತಾನ್ಯೇವ ಕರ್ಮಾಣಿ ಲಜ್ಜಾಯೈ ನ ಚ ತುಷ್ಟಯೇ ॥ ೩೧ ॥

ಪುನರಾಲಿಂಗ್ಯತೇ ಕಾನ್ತಾ ಪುನರೇವ ಚ ಭುಜ್ಯತೇ ।
ಸೇಯಂ ಶಿಶುಜನಕ್ರೀಡಾ ಲಜ್ಜಾಯೈ ಮಹತಾಮಿಹ ॥ ೩೨ ॥

ಈ ಮೂರು ಲೋಕಗಳ ಸಾಂರಾಜ್ಯವನ್ನು ಎಲ್ಲಿಯವರೆಗೆ ನಿರ್ವಹಿಸಬೇಕು ? ಈ ಲೋಕಗಳಲ್ಲಿ ಇನ್ನೆಷ್ಟು ಕಾಲ ವಿಹರಿಸುತ್ತಿರಬೇಕು ?

೨೯. ನನ್ನ ರಾಜ್ಯವು ದೊಡ್ಡದಾಗಿರುವುದು ನಿಜ. ಇದರಲ್ಲಿ ಅತಿ ಮನೋಹರಗಳಾದ ಭೋಗಗಳು ಬೇಕಾದ ಹಾಗೆ ತುಂಬಿರುವುದೂ ನಿಜ. ಈ ರಾಜ್ಯವನ್ನು ನೋಡಿ ಜಗತ್ತ್ರಯವೂ ಅಬ್ಬಾ ಎನ್ನುವುದು ನಿಜ. ಆದರೆ ತಾನೇ, ಇದನ್ನು ಅನುಭವಿಸಿದರೆ ಏನು ಫಲ ?

೩೦. ಈ ರಾಜ್ಯಭೋಗವು ಅಪಾತಮಾತ್ರವಾಗಿ (ಎಂದರೆ ವಿಚಾರವು ಉದಯಿಸುವವರೆಗೆ) ಮಧುರವಾಗಿರುವುದು. ಅವಶ್ಯವಾಗಿ (ಎಂದಾದರೂ ಒಂದು ದಿನ) ನಾಶವಾಗಿಯೇ ಆಗುವುದು. ಈ ರಾಜ್ಯವು ಕೇವಲ ಭೋಗಕ್ಕೆ ಮಾತ್ರ ಸಾಧನವಾಗಿರುವುದು. ಇಂತಹ ರಾಜ್ಯವನ್ನು ಅನುಭವಿಸುವುದರಿಂದ ಏನು ಸುಖವು ಲಭಿಸೀತು ?

೩೧. ಮತ್ತೆ ದಿನವು ಉದಯಿಸುವುದು ಮತ್ತೆ ರಾತ್ರಿಯಾಗುವುದು. ದಿನದಿನವೂ ರಾತ್ರಿ ರಾತ್ರಿಯೂ ಮತ್ತೆ ಮತ್ತೆ ಅದೇ ಕರ್ಮಗಳು. ಹೀಗೆ ಮಾಡಿದುದನ್ನೇ ಮಾಡುತ್ತಿರುವದು ಕೇವಲ ಲಜ್ಜಾಸ್ಪದವೇ ಹೊರತು ಇದರಲ್ಲಿ ತೃಪ್ತಿಯೆಲ್ಲಿಂದ ಬಂದೀತು ?

೩೨. ಮತ್ತೆ ಮತ್ತೆ ಕಾಂತಾಲಿಂಗನ, ಮತ್ತೆ ಮತ್ತೆ ಭೋಜನ, ಎಂಬ ಇದು

ತಮೇವ ಭುಕ್ತವಿರಸಂ ವ್ಯಾಪಾರೌಘಂ ಪುನಃಪುನಃ ।
ದಿವಸೇದಿವಸೇ ಕುರ್ವನ್ ಪ್ರಾಜ್ಞಃ ಕಸ್ಮಾನ್ನ ಲಜ್ಜತೇ ॥ ೩೩ ॥

ಪುನರ್ದಿನಂ ಪುನಾರಾತ್ರಿಃ ಪುನಃ ಕಾರ್ಯಪರಮ್ಪರಾಃ ।
ಪುನಃಪುನರಹಂ ಮನ್ಯೇ ಪ್ರಾಜ್ಞಸ್ಯೇಯಂ ವಿಡಮ್ಬನಾ ॥ ೩೪ ॥

ಊರ್ಮಿತಾಂ ಪುನರಾಸಾದ್ಯ ಪುನರೇತಿ ನಿರೂರ್ಮಿತಾಂ ।
ಯಥಾ ಜಲಂ ತಥೈವಾಯಂ ತಾಂತಾಮೇತಿ ಕ್ರಿಯಾಂ ಜನಃ ॥ ೩೫ ॥

ಉನ್ಮತ್ತಚೇಷ್ಟಿತಾಕಾರಾ ಪುನಃಪುನರಿಯಂ ಕ್ರಿಯಾ ।
ಜನಂ ಹಾಸಯತೇ ಪ್ರಾಜ್ಞಂ ಬಾಲಲೀಲೋಪಮಾ ಮುಹುಃ ॥ ೩೬ ॥

ಕೇವಲ ಮಕ್ಕಳಾಟದಂತಿರುವುದು. ಇದರಿಂದ ಮಹಾತ್ಮರಿಗೆ ಲಜ್ಜೆಯಾಗದಿರುವುದೆಂತು ?

೩೩. ಮಾಡಿ ಮಾಡಿ ಬೇಸರವಾಗಿರುವ ವ್ಯಾಪಾರಗಳನ್ನೇ ಮತ್ತೆ ಮತ್ತೆ ದಿನ ದಿನವೂ ಮಾಡಬೇಕಾದಾಗ ಯಾವ ಪ್ರಾಜ್ಞನಿಗೆ ತಾನೇ ನಾಚಿಕೆಯಾಗುವುದಿಲ್ಲ ?

೩೪. ಪುನಃ ದಿನ, ಪುನಃ ರಾತ್ರಿ, ಪುನಃ ಅದೇ ಮೊದಲಿನ ಕಾರ್ಯ ಪರಂಪರೆ, ಹೀಗೆ ಮಾಡಿದುದನ್ನೇ ಮಾಡುತ್ತಿರುವುದು ಯಾವ ಪ್ರಾಜ್ಞನಿಗೆ ತಾನೇ ಅಪಹಾಸ್ಯ ಕಾರಣವಾಗುವುದಿಲ್ಲ ?

೩೫. ನೀರು ಒಮ್ಮೆ ತರಂಗವಾಗಿ, ಮತ್ತೆ ಜಲವಾಗಿ, ಮತ್ತೆ ಮತ್ತೆ ತರಂಗ ಜಲಗಳೇ ಆಗುವಂತೆ, ಜನರು ಮಾಡಿ ಮಾಡಿದ ಕೆಲಸವನ್ನೇ ಮಾಡಿ ಮಾಡುತ್ತಲೇ ಇರುವರು.

೩೬. ಹುಚ್ಚನ ಕೆಲಸಗಳಂತೆ, ಮಾಡಿದುದನ್ನೇ ಮಾಡುತ್ತಿರುವಿಕೆಯು ನಿಜವಾಗಿಯೂ ಪ್ರಾಜ್ಞನಾದವನನ್ನೂ ಹಾಸ್ಯಕ್ಕೆ ಗುರಿಮಾಡುವುದು. ಇದು ನಿಜವಾಗಿಯೂ ಹುಡುಗಾಟವೇ ಅಲ್ಲದೆ ಇನ್ನೇನು ?

ಕೃತಯಾಪ್ಯನಯಾ ನಿತ್ಯಂ ಕ್ರಿಯಯಾಽಕೃತಕಾರ್ಯಯಾ ।
ಕೋಽರ್ಥಃ ಸ್ಯಾತ್ ತಾದೃಶೋ ಯೇನ ಪುನಃ ಕರ್ಮ ನ ವಿದ್ಯತೇ ॥ ೩೭ ॥

ತೆಯನ್ತಮಥವಾ ಕಾಲಂ ಇದಮಾಡಮ್ಬರಂ ಮಹತ್ ।
ಇಹಾಸ್ಮಾಭಿರನುಷ್ಠೇಯಂ ಕಿಂ ತಾವತ್ ಸಮವಾಪ್ಯತೇ ॥ ೩೮ ॥

ಅನನ್ತೇಯಂ ಶಿಶುಕ್ರೀಡಾ ವಸ್ತು ಶೂನ್ಯೈವ ವಸ್ತುತಃ ।
ಅವೃತ್ತ್ಯಾ ಕ್ರಿಯತೇ ವ್ಯರ್ಥಂ ಅನರ್ಥಪ್ರಸರಾರ್ಥಿಭಿಃ ॥ ೩೯ ॥

ಫಲಮೇಕಂ ಮಹೋದಾರಂ ನೇಹ ಪಶ್ಯಾಮಿ ಕಿಂಚನ ।
ಕಾರ್ಯಮಸ್ತೀತರತ್ ಪ್ರಾಪ್ತೇ ಯಸ್ಮಿನ್ ನಾಮ ನ ಕಿಂಚನ ॥ ೪೦ ॥

ಭೋಗಾದೃತೇ ಕಿಮನ್ಯತ್ ಸ್ಯಾತ್ ತದ್ಭವ್ಯಮವಿನಾಶಿ ಯತ್ ।
ಏವಂ ಸಂಚಿನ್ತಯಾಮ್ಯಾಶು ದಧ್ಯೌ ಮತ್ವೇತ್ಯಸೌ ಬಲಿಃ ॥ ೪೧ ॥

---

೩೭. ಮಾಡಿದ ಕೆಲಸವನ್ನೇ ಮತ್ತೆ ಮಾಡಬೇಕಾಗಿದ್ದರೆ, ಹಾಗೆ ಮಾಡಿದುದರಿಂದ ಆಗುವ ಪರಮೋದ್ದೇಶವಾದರೂ ಏನು ? ಮತ್ತೆ ಈ ಕೆಲಸವನ್ನು ಇನ್ನೂ ಮಾಡಬೇಕಾಗಿಲ್ಲವೆಂದು ಆಗಬೇಕಾಗಿದ್ದರೆ ಏನು ಮಾಡಬೇಕು ?

೩೮. ಅಥವಾ ಇನ್ನೆಷ್ಟು ಕಾಲ ನಾವು ಈ ಭಾರಿ ಆಟವನ್ನು ಕಟ್ಟಬೇಕು ? ಅಥವಾ ಇದನ್ನು ಆಡಿದುದರಿಂದ ನಮಗೆ ಆಗುವ ಪ್ರಯೋಜನವಾದರೂ ಏನು ?

೩೯. ಈ ಮಕ್ಕಳಾಟಿಕೆಗೆ ಕೊನೆಯೇ ಇದ್ದಂತಿಲ್ಲ. ನಿಜವಾಗಿ ನೋಡಿದರೆ ಇದು ವಸ್ತು ಶೂನ್ಯ (ನಿಸ್ಸಾರ)-(ದುಃಖ) ವಾಗಿರುವುದು. ಈ ಆಟವನ್ನು ವ್ಯರ್ಥವಾಗಿ, ಅನರ್ಥ ಪರಂಪರೆಗಳೇ ಆಗಲೆಂದು ಕೋರುವವರು ಮತ್ತೆ ಮತ್ತೆ ಆಡುವರು.

೪೦. ಈ ಕಾರ್ಯ ಪರಂಪರೆಗಳನ್ನೆಲ್ಲ ನಿರ್ವಹಿಸಿದರೆ ಆಗುವ ಭಾರಿಯ ಫಲವೊಂದನ್ನಾದರೂ ಕಾಣೆನು. ಯಾವುದನ್ನೂ ಮಾಡುವುದರಿಂದ ಇನ್ನು ಯಾವ ಕಾರ್ಯವನ್ನೂ ಮಾಡಬೇಕಾಗಿಲ್ಲವೋ ಅಂತಹುದನ್ನು ಯಾವುದನ್ನೂ ಕಾಣೆನಲ್ಲ!

೪೧. ನಶ್ವರವಾದ ಈ ಭೋಗಗಳನ್ನು ಬಿಟ್ಟರೆ ಶಾಶ್ವತವಾದ ಭವ್ಯವಾದ

ಅಥಾಭ್ಯುವಾಚಾಸುರರಾಟ್ ಅಃ ಸಂಸ್ಮೃತಮಿತಿ ಕ್ಷಣಾತ್ ।
ಸ್ವಾತ್ಮನ್ಯೇವ ಮನಸ್ಯರ್ಥಂ ಸಭ್ರೂಭಂಗಂ ವಿಮರ್ಶಯನ್ ॥ ೪೨ ॥

ಪುರಾ ಕಿಲೇಹ ಭಗವಾನ್ ಪೃಷ್ಟೋಽಭೂತ್ ಸ ವಿರೋಚನಃ ।
ಪಿತಾ ಮಯಾತ್ಮತತ್ತ್ವಜ್ಞೋ ದೃಷ್ಟಲೋಕಪರಾವರಃ ॥ ೪೩ ॥

ಯಥಾ ಸಕಲದುಃಖಾನಾಂ ಸುಖಾನಾಂಚ ಮಹಾಮತೇ ।
ಯತ್ರ ಸರ್ವೇಭ್ರಮಾಃ ಶಾನ್ತಾಃ ಕೋಽಸೌ ಸೀಮಾನ್ತಉಚ್ಯತೇ ॥ ೪೪ ॥

ಇನ್ನು ಯಾವುದು ತಾನೇ ಇರುವುದು ಎಂಬುದೇ ನನಗೆ ಯೋಚನೆಯಾಗಿರುವುದು, ಎಂದು ಆ ಬಲಿಯು ಬಹಳವಾಗಿ ಯೋಚಿಸಿದನು.

೪೨. ಹುಬ್ಬುಗಟಿಕ್ಕಿಕೊಂಡು ತನ್ನ ಮನಸ್ಸಿನಲ್ಲಿಯೇ ವಿಮರ್ಶೆ ಮಾಡುತ್ತಿದ್ದ ಆ ಅಸುರ ಸಮ್ರಾಟನು, ಒಂದು ಕ್ಷಣವಾದ ಮೇಲೆ, “ಆಃ ! ನೆನೆಸಾಯಿತು” ಎಂದುಕೊಂಡನು.

೪೩. “ನಾನು ಹಿಂದೆ ಇದೇ ಪ್ರಶ್ನವನ್ನು ನಮ್ಮ ತಂದೆಯಾದ ಭಗವಾನ್ ವಿರೋಚನನನ್ನು ಕೇಳಿದ್ದೆನು. ಆತನು ಆತ್ಮ ತತ್ವಜ್ಞನು. ಇಹಪರಗಳನ್ನು ಚೆನ್ನಾಗಿ ಬಲ್ಲವನು.”

೪೪. ಸಕಲ ದುಃಖಗಳಿಗೂ ಸಕಲ ಸುಖಗಳಿಗೂ ಅವಧಿ ಯಾವುದು ? ಎಲೈ ಮಹಾ ಮತಿಯೆ, ಸಂಸಾರದ ವ್ಯವಹಾರವೆಲ್ಲವೂ ಎಲ್ಲಿ ಮುಗಿಯುವುದು ?

ಕೋಪಶಾನ್ತೋ ಮನೋಮೋಹಃ ಕ್ವಾತೀತಾಃ ಸಕಲೈಷಣಾಃ ।
ವಿರಾಮರಹಿತಂ ಕುತ್ರ ತಾತ ವಿಶ್ರಮಣಂ ಚಿರಂ ॥ ೪೫ ॥

ಕಿಂ ಪ್ರಾಪ್ತೇಹ ಸಮಸ್ತೇಭ್ಯಃ ಪ್ರಾಪ್ಯೇಸ್ಮಿಂಸ್ತೃಪ್ತಿಮಾರ್ಪುಮಾ ।
ಕಿಂ ದೃಷ್ಟ್ವಾ ದರ್ಶನಂ ಭೂಯೋ ನ ತಾತೋಪಕರೋತ್ಯಲಂ ॥ ೪೬ ॥

ಅತ್ಯನ್ತಬಹವೋಪ್ಯೇತೇ ಭೋಗಾಹಿ ನ ಸುಖಾವಹಾಃ ।
ಕ್ಷೋಭಯಂತಿ ಮನೋ ಮೋಹೇ ಪಾತಯನ್ತಿ ಸತಾಮಪಿ ॥ ೪೭ ॥

ತತ್ ತಾತ್ವಾವಿಹತಾನನ್ದಸುನ್ದರಂ ಕಿಂಚಿದೇವ ಮೇ ।
ತಾದೃಕ್ ಕಥಯ ಯತ್ರಸ್ಥಃ ಚಿರಂ ವಿಶ್ರಾನ್ತಿಮೇಷ್ಯಹಂ ॥ ೪೮ ॥

---

೪೫. ತಂದೆಯೇ, ಮನೋಮೋಹವೆಲ್ಲವೂ ಎಲ್ಲಿ ಉಪಶಾಂತವಾಗುವುದು ? ಮನಸ್ಸಿನ ಆಶೆಗಳೆಲ್ಲವೂ ಎಲ್ಲಿ ಕೊನೆಗಾಣುವುವು ? ವಿಚ್ಛೇದವಿಲ್ಲದ ವಿಶ್ರಾಂತಿಯು ಎಲ್ಲಿ ದೊರೆಯುವುದು ?

೪೬. ಯಾವುದನ್ನು ಹೊಂದಿದರೆ, ಎಲ್ಲದರಿಂದಲೂ ಹೊಂದಬಹುದಾದ ತೃಪ್ತಿಯೆಲ್ಲವನ್ನೂ ಪುರುಷನು ಪಡೆಯುವನು? ಏನನ್ನು ನೋಡಿದರೆ, ಇನ್ನು ಯಾವುದನ್ನೂ ದರ್ಶನ ಮಾಡಬೇಕಾಗಿಲ್ಲ ಎನ್ನಿಸುವುದು ?

೪೭. ಈ ಭೋಗಗಳು ಬೇಕುಬೇಕಾದ ಹಾಗೆ ಇದ್ದರೂ ಕೂಡ, ಇವುಗಳಿಂದ (ನನಗೆ) ಯಾವ ಸುಖವೂ ತೋರುವುದಿಲ್ಲ. ಇವು ಮನಸ್ಸನ್ನು ಕ್ಷೋಭಗೊಳಿಸುವುವು. ಸತ್ಪುರುಷರನ್ನೂ ಮೋಹದಲ್ಲಿ ಕೆಡಹುವುವು.

೪೮. ಅದರಿಂದ, ತಂದೆಯೇ, ಅವಿಹತ ಆನಂದ ಸುಂದರವಾದುದು ಯಾವುದೋ ಅದನ್ನು ಹೇಳು. ಅದರಲ್ಲಿ ನೆಲೆಯಾಗಿ ನಿಂತು ನಾನು ಚಿರವಿಶ್ರಾಂತಿಯನ್ನು ಹೊಂದುವೆನು.

ಇತ್ಯಾಕರ್ಣ್ಯ ಪುರಾ ನಿಶಾಕರಕರಸ್ಪರ್ಧಾಳುಗುಚ್ಛಸ್ಥಲ
ತ್ಪುಷ್ಪಾಪೂರಕೃತಾವಗುಣ್ಠನಪದಸ್ಯೋಕ್ತಂ ತಲೇ ತೇನ ಮೇ ।
ಪಿತ್ರಾ ಸ್ವರ್ಗಹೃತಸ್ಯ ಸಾಗರತರೋಃ ಸಂರೋಪಿತಸ್ಯಾಜಿರೇ
ಸ್ಫಾರಾಕಾರರಸಾಯನಾಸವಸಮಂ ಸಮ್ಮೋಹಶಾನ್ತ್ಯೈ ವಚಃ　　॥ ೪೯ ॥

ಇತ್ಯಾರ್ಷೇ ವಾಸಿಷ್ಠಮಹಾರಾಮಾಯಣೇ ವಾಲ್ಮೀಕಿಯೇ ಉಪಶಮ ಪ್ರಕರಣೇ
"ವಿರೋಚನಸ್ಮರಣಂ" ನಾಮ ದ್ವಾವಿಂಶಃ ಸರ್ಗಃ

---

೪೯. ಈ ಮಾತನ್ನು ಕೇಳಿ, ಚಂದ್ರಕಿರಣಗಳ ಗುಣಗಳನ್ನು ಸ್ಪರ್ಧಿಸುವ ಪುಷ್ಪಗುಚ್ಛಗಳ ಗುಂಪಿನಿಂದ ಮುಚ್ಚಿಹೋಗಿರುವ ಬುಡವುಳ್ಳ, ಹಿಂದೆ ಯುದ್ಧದಲ್ಲಿ ಗೆದ್ದು ಸ್ವರ್ಗದಿಂದ ಬಲವಂತವಾಗಿ ತಂದು ನಮ್ಮ ತಂದೆಯೇ ನೆಟ್ಟಿದ್ದ, ಕ್ಷೀರ ಸಾಗರದಲ್ಲಿ ಹುಟ್ಟಿದ ಕಲ್ಪವೃಕ್ಷದ ಬುಡದಲ್ಲಿ ಕುಳಿತು, ಆ ಕಲ್ಪವೃಕ್ಷದ ರಸಾಯನ ದಂತಿರುವ ಮಕರಂದಷ್ಟೇ ಸವಿಯಾದ ಮಾತುಗಳಿಂದ ನಮ್ಮ ತಂದೆಯು ನನಗೆ (ಹೀಗೆ) ಹೇಳಿದನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಉಪಶಮ ಪ್ರಕರಣದಲ್ಲಿ "ವಿರೋಚನಸ್ಮರಣ" ಎಂಬ ಇಪ್ಪತ್ತೆರಡನೆಯ ಸರ್ಗವು

ತ್ರಯೋವಿಂಶಃ ಸರ್ಗಃ

ವಿರೋಚನ ಉವಾಚ:—

ಅಸ್ತಿ ಪುತ್ರಾತ್ಯತಿವಿತತೋ ದೇಶೋ ವಿಪುಲಕೋಟರಃ ।
ತ್ರೈಲೋಕ್ಯಾನಾಂ ಸಹಸ್ರಾಣಿ ಯತ್ರ ಮಾಂತಿ ಬಹೂನ್ಯಪಿ ॥ ೧ ॥

ಯತ್ರ ನಾಮ್ಭೋಧಯೋ ನಾಪಿ ಸಾಗರಾ ವಾ ನ ಚಾದ್ರಯಃ ।
ನ ವನಾನಿ ನ ತೀರ್ಥಾನಿ ನ ನದ್ಯೋ ನ ಸರಾಂಸಿ ಚ ॥ ೨ ॥

ಇಪ್ಪತ್ತಮೂರನೆಯ ಸರ್ಗ

೧. ವಿರೋಚನನು ಹೇಳಿದನು—ಪುತ್ರನೆ, ಬಹಳ ವಿಸ್ತಾರವಾದ ದೇಶವೊಂದುಂಟು. ಜಗತ್ತ್ರಯಗಳು ಸಾವಿರ ಸಾವಿರವಾದರೂ ಅದರಲ್ಲಿ ಹಿಡಿಯುವುವು.

(ಚಿತ್ತಂ ವೃತ್ತಿವಿಹೀನಂ ತೇ ಯದಾ ಯಾತಮಚಿತ್ತತಾಂ।ತದಾಮೋಕ್ಷಮಯೀಮಂತಃ ಸತ್ತಾಮಾಪ್ನೋಷಿ ತಾಂತ ತಾಂ ॥ ಇತಿ ಮೋಕ್ಷಸ್ಯ ಚಿತ್ತಜಯಾಧೀನತ್ವಂ ಉಕ್ತಂ॥ ಚಿತ್ತಜಯೇಚ ಆತ್ಯಂತಿಕ ಆಶಾತ್ಯಾಗಉಪಾಯ ಉಕ್ತಃ ಸ ಚ ಆತ್ಮದರ್ಶನಮಂತರೇಣ ನ ಸಿಧ್ಯತಿ ॥ ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ ರಸವರ್ಜಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ ॥ ಇತಿ ಭಗವದ್ವಚನಾತ್ ॥ ಆತ್ಮದರ್ಶನಂ ಚ ಮನೋಜಯಮಂತರೇಣನ ಸಿಧ್ಯತಿ ಇತಿ ಅನ್ಯೋನ್ಯಾಶ್ರಯತಾಪನ್ನಂ ಇದಂ ಅಶಕ್ಯಮೇವ ಇತ್ಯಾಶಂಕಾಂ ಪರಿಹರ್ತುಂ ಸಾಧನದ್ವಯಯೌಗಪದ್ಯಾಭ್ಯಾಸಾದಿ ಉಪಾಯಭೇದಂ ವಕ್ತುಂ ಬಲ್ಯುಪಾಖ್ಯಾನಾಂತರಾಲೇ ರಾಜಮಂತ್ರ್ಯುಪಾಖ್ಯಾನಂ ವಿರೋಚನ ಮುಖೇನ ಪ್ರಸ್ತೌತಿ॥ದೇಶೋ ಮೋಕ್ಷಾಖ್ಯಃ ತಾ.ಪ್ರ.)

೨. ಆ ದೇಶದಲ್ಲಿ ಸಮುದ್ರಗಳಿಲ್ಲ: ಸಾಗರಗಳಿಲ್ಲ: ಪರ್ವತಗಳಿಲ್ಲ: ವನಗಳಿಲ್ಲ: ತೀರ್ಥಗಳಿಲ್ಲ: ನದಿಗಳಿಲ್ಲ; ಸರೋವರಗಳಿಲ್ಲ.

ನ ಮಹೀ ನಾಪಿ ಚಾಕಾಶಂ ನ ದ್ಯೌರ್ನ ಪವನಾದಯಃ ।
ನ ಚನ್ದ್ರಾರ್ಕೌ ನ ಲೋಕೇಶಾಃ ನ ದೇವಾ ನ ಚ ದಾನವಾಃ　॥ ೩ ॥

ನ ಭೂತಯಕ್ಷರಕ್ಷಾಂಸಿ ನ ಗುಲ್ಮಾ ನ ವನಶ್ರಿಯಃ ।
ನ ಕಾಷ್ಠತೃಣಭೂತಾನಿ ಸ್ಥಾವರಾಣಿ ಚರಾಣಿ ಚ　॥ ೪ ॥

ನಾಪೋ ನ ಜ್ವಲನೋ ನಾಶಾಃ ನೋರ್ಧ್ವಂ ನಾಧೋ ನ ವಿಷ್ಟಪಂ ।
ನ ಲೋಕೋ ನಾತಪೋ ನಾಹಂ ನ ಹರೀನ್ದ್ರಹರಾದಯಃ　॥ ೫ ॥

ಏಕ ಏವಾಸ್ತಿ ಸುಮಹಾನ್ ತತ್ರ ರಾಜಾ ಮಹಾದ್ಯುತಿಃ ।
ಸರ್ವಕೃತ್ ಸರ್ವಗಃ ಸರ್ವಃ ಸ ಚ ತೂಷ್ಣೀಂ ವ್ಯವಸ್ಥಿತಃ　॥ ೬ ॥

ತೇನ ಸಙ್ಕಲ್ಪತೋ ಮನ್ತ್ರೀ ಸರ್ವಸಮ್ಮನ್ತ್ರಣೋನ್ಮುಖಃ ।
ಅಘಟಂ ಘಟಯತ್ಯಾಶು ಘಟಂ ವಿಘಟಯತ್ಯಲಂ　॥ ೭ ॥

---

೩. ಭೂಮಿಯಿಲ್ಲ: ಆಕಾಶವಿಲ್ಲ: ಅಂತರಿಕ್ಷವಿಲ್ಲ: ಗಾಳಿ ಮೊದಲಾದವುಗಳಿಲ್ಲ: ಸೂರ್ಯಚಂದ್ರರಿಲ್ಲ: ಲೋಕಾಧೀಶ್ವರರಿಲ್ಲ: ದೇವತೆಗಳಿಲ್ಲ: ದಾನವರಿಲ್ಲ.

೪. ಭೂತಗಳೂ ಯಕ್ಷರಾಕ್ಷಸರೂ ಇಲ್ಲ: ಪೊದೆಗಳಿಲ್ಲ: ದಟ್ಟವಾದ ಕಾಡುಗಳಿಲ್ಲ: ಕಾಷ್ಠಗಳೂ ತೃಣಗಳೂ ಮೃಗಗಳೂ ಇಲ್ಲ: ಸ್ಥಾವರಗಳಿಲ್ಲ: ಜಂಗಮಗಳಿಲ್ಲ:

೫. ನೀರಿಲ್ಲ: ಬೆಂಕಿಯಿಲ್ಲ: ದಿಕ್ಕುಗಳಿಲ್ಲ; ಮೇಲುಗಡೆ, ಕೆಳಗಡೆಯೆಂಬುದಿಲ್ಲ: ಸ್ವರ್ಗವಿಲ್ಲ: ಲೋಕವಿಲ್ಲ: ಬಿಸಿಲಿಲ್ಲ: ನಾನು ಇಲ್ಲ: ಹರಿ, ಇಂದ್ರ, ಹರ, ಮೊದಲಾದವರೂ ಇಲ್ಲ.

೬. ಅಲ್ಲಿ ರಾಜನು ಒಬ್ಬನೇ ಒಬ್ಬನು ಇರುವನು. ಮಹಾತೇಜಸ್ವಿಯಾದ ಆತನು ಎಲ್ಲವನ್ನೂ ಮಾಡುವನು. ಎಲ್ಲೆಲ್ಲೂ ಇರುವನು. ಎಲ್ಲವೂ ತಾನೇ ಆಗಿರುವನು. ಇಷ್ಟಾದರೂ ಸುಮ್ಮನೆ ಕುಳಿತಿರುವನು.

(ರಾಜಾ ಆತ್ಮಾ: ತೂಷ್ಣೀಂ ವ್ಯವಸ್ಥಿತಃ ಕೂಟಸ್ಥ ಇತಿಯಾವತ್ ತಾ.ಪ್ರ.)

೭. ಆ ರಾಜನ ಸಂಕಲ್ಪ ಬಲದಿಂದ ಆ ದೇಶದಲ್ಲಿ ಒಬ್ಬ ಮಂತ್ರಿಯಿರುವನು. ಅವನು ಎಲ್ಲಾ ಮಂತ್ರಗಳನ್ನೂ ಮಾಡಬಲ್ಲವನು. ದುರ್ಘಟವಾದುದನ್ನೂ ಘಟಿಸಬಲ್ಲನು: ಘಟಿಸುವುದನ್ನು ವಿಘಟಿಸುವನು.

ಭೋಕ್ತುಂ ನ ಕಿಂಚಿಚ್ಛಕ್ನೋತಿ ನ ಚ ಜಾನಾತಿ ಕಿಂಚನ ।
ರಾಜಾರ್ಥಂ ಕೇವಲಂ ಸರ್ವಂ ಕರೋತ್ಯಜ್ಞೋಽಪಿ ಸ ಸದಾ ॥ ೮ ॥

ಸ ಏವ ಸರ್ವಕಾರ್ಯೈಕಕರ್ತಾ ತಸ್ಯ ಮಹೀಪತೇಃ ।
ರಾಜಾ ಕೇವಲಮೇಕಾನ್ತೇ ಸ್ವಸ್ಥ ಏವಾವತಿಷ್ಠತೇ ॥ ೯ ॥

ಬಲಿರುವಾಚ—

ಆಧಿವ್ಯಾಧಿವಿನಿರ್ಮುಕ್ತಃ ಕಃ ಸ ದೇಶೋ ಮಹಾಮತೇ ।
ಕಥಮಾಸಾದ್ಯತೇ ಚಾಪಿ ಕೇನ ವಾಧಿಗತಃ ಪ್ರಭೋ ॥ ೧೦ ॥

ಕಃ ಸ ತಾದೃಗ್ವಿಧೋ ಮನ್ತ್ರೀ ರಾಜಾ ಚಾಪಿ ಮಹಾಬಲಃ ।
ಹೇಲಾಲೂನಜಗಜ್ಜಾಲೈಃ ಯೋಽಸ್ಮಾಭಿರಪಿ ನೋ ಜಿತಃ ॥ ೧೧ ॥

(ಅಘಟಂ ಅತ್ಯಂತಾನುಪಪನ್ನಂ ಅಪಿ ಆತ್ಮನಃ ಸಂಸಾರಿತ್ವಂ ಘಟಯತಿ।ಘಟಂ ಘಟಮಾನಮಪಿ ಪೂರ್ಣಾನಂದೈಕರಸತ್ವಂ ವಿಘಟಯತಿ, ನಾಸ್ತಿ, ನಭಾತಿ, ಇತ್ಯಪಲಾಪಯತಿ. ತಾ.ಪ್ರ.)

೮. ಅವನು ಏನನ್ನೂ ಭೋಗಿಸಲಾರನು: ಅವನು ಏನನ್ನೂ ಅರಿಯಲಾರನು. ಅವನು ಯಾವಾಗಲೂ ಅಜ್ಞನೇ ಆದರೂ ಸರ್ವವನ್ನೂ ಕೇವಲ ರಾಜನಿಗೋಸ್ಕರವೇ ಮಾಡುವನು.

೯. ಆ ರಾಜನಿಗೆ ಆಗಬೇಕಾದ ಸರ್ವ ಕಾರ್ಯಗಳನ್ನೂ ಅವನೇ! ಮಾಡುವನು. ರಾಜನು ಕೇವಲನಾಗಿ, ಏಕಾಂತದಲ್ಲಿ, ಸ್ವಸ್ಥನಾಗಿ ಕುಳಿತಿರುವನು.

(ಏಕಾಂತೇ ಅದ್ವಿತೀಯ ಸ್ವಭಾವೇ. ತಾ. ಪ್ರ.)

೧೦. ಬಲಿಯು ಕೇಳಿದನು—ಆಧಿ (ಮನೋವ್ಯಥೆ) ವ್ಯಾಧಿ (ದೇಹರೋಗ) ಗಳು ಒಂದೂ ಇಲ್ಲದ ಆ ದೇಶವು ಯಾವುದು ? ಮಹಾಮತಿಯಾದ ತಂದೆಯೇ. ಅಲ್ಲಿಗೆ ಹೋಗುವುದು ಹೇಗೆ? ಯಾರಾದರೂ ಅಲ್ಲಿಗೆ ಹೋಗಿದ್ದವರುಂಟೆ ?

೧೧. ನೀನು ಹೇಳಿದಂತಹ ಆ ಮಂತ್ರಿಯು ಯಾರು ? ಮಹಾಬಲನಾದ ಆ ರಾಜನು ಯಾರು ? ಲೀಲಾಮಾತ್ರದಿಂದ ಜಗಜ್ಜಾಲಗಳನ್ನೆಲ್ಲ ಗೆದ್ದಿರುವ ನಾವೂ ಅವನನ್ನು ಗೆದ್ದಿಲ್ಲವೆಂದಮೇಲೆ ಅವನ ಬಲವೆಂತಹುದು ?

ಅಪೂರ್ವಮೇತದಾಖ್ಯಾನಂ ಮಮಾಮರಭಯಪ್ರದ ।
ಕಥಯಾಪನಯಾಸ್ಮಾಕಂ ಹೃದ್ವ್ಯೋಮ್ನಃ ಸಂಶಯಾಮ್ಬುದಂ ॥ ೧೨ ॥

ವಿರೋಚನ ಉವಾಚ—

ಸ ತತ್ರ ಮನ್ತ್ರೀ ಬಲವಾನ್ ದೇವಾಸುರಗಣೈಃ ಸುತ ।
ಸಮೇತೈರ್ಲಕ್ಷಗುಣಿತೈರಪಿ ನಾಕ್ರಮ್ಯತೇ ಮನಾಕ್ ॥ ೧೩ ॥

ನಾಸೌ ಸಹಸ್ರನಯನೋ ನ ಯಮೋ ನ ಧನೇಶ್ವರಃ ।
ನಾಮರೋ ನಾಸುರೋ ವಾಪಿ ಯದಿ ಪುತ್ರಕ ಜೀಯತೇ ॥ ೧೪ ॥

ತತ್ರಾಸಿಮುಸಲಪ್ರಾಸವಜ್ರಚಕ್ರಗದಾದಯಃ ।
ಹೇತಯಃ ಕುಣ್ಠತಾಂ ಯಾನ್ತಿ ದೃಷದೀವೋತ್ಪಲಾಹತಿಃ ॥ ೧೫ ॥

ಗಮ್ಯೋಽಸೌ ನಾಸ್ತ್ರಶಸ್ತ್ರಾಣಾಂ ನ ಭಟೋದ್ಭವಕರ್ಮಣಾಂ ।
ತೇನ ದೇವಾಸುರಾಃ ಸರ್ವೇ ಸರ್ವದೈವ ವಶೀಕೃತಾಃ ॥ ೧೬ ॥

---

೧೨. ದೇವತೆಗಳಿಗೂ ಭಯಂಕರನಾದ ತಂದೆಯೇ; ಈ ಕಥೆಯು ಬಹಳ ವಿಚಿತ್ರವಾಗಿರುವುದು. ಇದನ್ನು ನನಗೆ ಹೇಳು. ನನ್ನ ಮನಸ್ಸು ಎಂಬ ಆಕಾಶದಲ್ಲಿ ಹುಟ್ಟಿರುವ ಸಂಶಯವೆಂಬ ಮೋಡವು ಅಡಗಲಿ.

೧೩. ವಿರೋಚನನು ಹೇಳಿದನು—ಮಗನೆ, ಆ ಮಂತ್ರಿಯು ಬಹು ಬಲಾಢ್ಯನು. ದೇವಾಸುರಗಣಗಳೆಲ್ಲವೂ ಸೇರಿ, ಇನ್ನೂ ಒಂದು ಲಕ್ಷದಷ್ಟು ಹೆಚ್ಚಾಗಿ ಬಂದರೂ ಅವನನ್ನು ಏನೂ ಮಾಡಲಾರರು.

೧೪. ಅವನು ಇಂದ್ರನಲ್ಲ: ಯಮನಲ್ಲ: ಕುಬೇರನಲ್ಲ: ದೇವತೆಯಲ್ಲ: ದಾನವನಲ್ಲ: ಅಷ್ಟೇ ಅಲ್ಲ. ಅವನನ್ನು ಯಾರೂ ಗೆಲ್ಲಲಾರರು.

೧೫. ಖಡ್ಗ, ಮುಸಲ, ಪ್ರಾಸ, ವಜ್ರ, ಚಕ್ರ, ಗದಾ, ಮೊದಲಾದ ಆಯುಧಗಳೆಲ್ಲವೂ, ಕಲ್ಲಿನ ಮೇಲೆ ಬೀಳುವ ಕನ್ನೈದಿಲೆಯ ಏಟುಗಳಂತೆ ವ್ಯರ್ಥವಾಗುವುವು.

೧೬. ಅಸ್ತ್ರಶಸ್ತ್ರಗಳು ಇವನನ್ನು ಏನೂ ಮಾಡಲಾರವು. ವೀರಭಟರೂ ಏನೂ

ಅವಿಷ್ಣುನಾಪಿ ತೇನೇಹ ಹಿರಣ್ಯಾಕ್ಷಾದಯೋಽಸುರಾಃ ।
ಪಾತಿತಾಃ ಕಲ್ಪವಾತೇನ ಮೇರುಕಲ್ಪದ್ರುಮಾ ಇವ ॥ ೧೭ ॥

ನಾರಾಯಣಾದಯೋ ದೇವಾಃ ಅಪಿ ಸರ್ವಾವಬೋಧಿನಃ ।
ತೇನಾಕ್ರಮ್ಯ ಯಥಾಕಾಮಂ ಅವಟೇಷು ನಿವೇಶಿತಾಃ ॥ ೧೮ ॥

ತತ್ಪ್ರಸಾದೇನ ಸಾಟೋಪಂ ಪಂಚಮಾತ್ರಶರಃ ಸ್ಮರಃ ।
ತ್ರೈಲೋಕ್ಯಮಿದಮಾಕ್ರಮ್ಯ ಸಮ್ರಾಡಿವ ವಿವಲ್ಗತಿ ॥ ೧೯ ॥

ಸುರಾಸುರೌಘಗೃಹ್ಯೋಽಪಿ ಗುಣಹೀನೋಽಪಿ ದುರ್ಮತಿಃ ।
ದುರಾಕೃತಿರಪಿ ಕ್ರೋಧಃ ತತ್ಪ್ರಸಾದೇನ ಜೃಂಭತೇ ॥ ೨೦ ॥

ಮಾಡಲಾರರು. ಅದರಿಂದ, ದೇವಾಸುರರೆಲ್ಲರೂ ಯಾವಾಗಲೂ ಇವನಿಗೆ ವಶವಾಗಿ ಇರುವರು.

೧೭. ಅವನು ವಿಷ್ಣುವಲ್ಲದಿದ್ದರೂ ಹಿರಣ್ಯಾಕ್ಷ ಮೊದಲಾದ ಅಸುರೇಂದ್ರರನ್ನೆಲ್ಲ, ಮೇರುವಿನಲ್ಲಿ ಬೆಳೆದ ಕಲ್ಪದ್ರುಮಗಳನ್ನು ಪ್ರಲಯಕಾಲದ ವಾಯುವು ಉರುಳಿಸುವಂತೆ, ಉರುಳಿಸಿ ಬಿಟ್ಟಿರುವನು.

೧೮. ಅಷ್ಟೇನು! ಸ್ವಯಂ ಸರ್ವಜ್ಞರಾದ ನಾರಾಯಣಾದಿ ದೇವಾಧಿದೇವರೆಲ್ಲರೂ ಅವನ ಏಟಿಗೆ ಸಿಕ್ಕಿಹೋಗಿರುವರು. ಅವನು ಅವರೆಲ್ಲರನ್ನೂ ಹಳ್ಳಗಳಲ್ಲಿ ಎಸೆದುಬಿಟ್ಟಿರುವನು.

(ಅವಟೇಷು–ಗರ್ಭಶ್ವಭ್ರೇಷು. ತಾ. ಪ್ರ.)

೧೯. ಅವನ ಪ್ರಸಾದದಿಂದಲೇ ಮನ್ಮಥನು ಐದೇ ಐದು ಬಾಣವುಳ್ಳವನಾದರೂ ಲೋಕತ್ರಯಗಳನ್ನೂ ಆಕ್ರಮಿಸಿಕೊಂಡು ಚಕ್ರವರ್ತಿಯಂತೆ ಮೆರೆಯುತ್ತಿರುವನು.

೨೦. ಅವನ ಪ್ರಸಾದದಿಂದಲೇ, ಕ್ರೋಧನು ಗುಣಹೀನನಾಗಿದ್ದರೂ ದುರ್ಮತಿಯಾಗಿದ್ದರೂ ದುರಾಕೃತಿಯಾಗಿದ್ದರೂ ದುರ್ಗುಣಿಯಾಗಿದ್ದರೂ ಸುರಾಸುರರ ಕುಲಕುಲಗಳನ್ನೇ ಹಿಡಿದು ಕುಣಿಸುತ್ತಿರುವನು.

ದೇವಾಸುರಸಹಸ್ರಾಣಾಂ ಸಂಗರೋ ಯಃ ಪುನಃಪುನಃ ।
ತದೇತತ್ ಕ್ರೀಡನಂ ತಸ್ಯ ಮನ್ತ್ರಿಣೋ ಮನ್ತ್ರಶಾಲಿನಃ ॥ ೨೧ ॥

ಸ ಮನ್ತ್ರೀ ಕೇವಲಂ ಪುತ್ರ ತೇನೈವ ಪ್ರಭುಣಾ ಯದಿ ।
ಜೀಯತೇ ತತ್ ಸುಜೇಯೋಽಸೌ ಅನ್ಯಥಾಽತ್ವಚಲೋಪಮಃ ॥ ೨೨ ॥

ತಸ್ಯೈವ ತತ್ಪ್ರಭೋಃ ಕಾಲೇ ಜೇತುಂ ತಂ ಮನ್ತ್ರಿಣಂ ನಿಜಂ ।
ಇಚ್ಛಾ ಸಂಜಾಯತೇ ತೇನ ಜೀಯತೇಽಸಾವಯತ್ನತಃ ॥ ೨೩ ॥

ತ್ರೈಲೋಕ್ಯಬಲಿನಾಂ ಮಲ್ಲಂ ಉಚ್ಛ್ವಸಿತಜಗತ್ತ್ರಯಂ ।
ಜೇತುಂ ಚೇದಸ್ತಿ ತೇ ಶಕ್ತಿಃ ತತ್ ಪರಾಕ್ರಮವಾನಸಿ ॥ ೨೪ ॥

---

೨೧. ದೇವಾಸುರರ ಯುದ್ಧವು ಪದೇ ಪದೇ ನಡೆಯುತ್ತಿರುವುದಲ್ಲ : ಇದು ಮಂತ್ರಜ್ಞನಾದ ಆ ಮಂತ್ರಿಯ ಲೀಲೆಯೇ !

೨೨. ಅವನನ್ನು ಹುಟ್ಟಿಸಿದ ಆ ಪ್ರಭುವು ಮಾತ್ರ ಅವನನ್ನು ಗೆಲ್ಲಬಹುದು. ಅಲ್ಲದೆ, ಇನ್ನು ಯಾರೂ ಅವನನ್ನು ಗೆಲ್ಲುವಂತಿಲ್ಲ. ಇತರರಿಗೆ ಅವನು ಪರ್ವತದಂತೆ ಅಜೇಯನು.

೨೩. ಆ ಪ್ರಭುವಿಗೆ ಯಾವುದೋ ಒಂದು ಕಾಲದಲ್ಲಿ (ವಿವೇಕ ಹುಟ್ಟಿದಾಗ) ತಾನಾಗಿ ಆ ಮಂತ್ರಿಯನ್ನು ಗೆಲ್ಲಬೇಕು ಎನ್ನಿಸುವುದು. ಆಗ ಆ ಮಂತ್ರಿಯು ಏನೊಂದು ಪ್ರಯತ್ನವೂ ಇಲ್ಲದೆಯೇ ಜಿತವಾಗುವನು.

(ಕಾಲೇ ಬಹುತರ ಸುಕೃತಪರಿಪಾಕಾತ್ ವಿವೇಕೋದಯಕಾಲೇ–ಅಯತ್ನತಃ ಜ್ಞಾನಮಾತ್ರತಃ ತಾ. ಪ್ರ.)

೨೪. ಹೀಗೆ ಮೂರು ಲೋಕದಲ್ಲಿರುವವರನ್ನೆಲ್ಲ ಗೆದ್ದಿರುವ ಆ ಜಟ್ಟಿಯನ್ನು ಮೂರು ಲೋಕವೂ ಅಯ್ಯೋ ಎನ್ನುವಂತೆ ಗೋಳಿಡಿಸುವ ಅವನನ್ನು ಗೆಲ್ಲಲು ನಿನಗೆ ಶಕ್ತಿಯಿದ್ದರೆ, ನಿಜವಾಗಿಯೂ ನೀನು ಪರಾಕ್ರಮಶಾಲಿಯು.

ತಸ್ಮಿನ್ನಭ್ಯುದಿತೇ ಸೂರ್ಯೇ ತ್ರೈಲೋಕ್ಯಕಮಲಾಕರಾಃ ||
ಇಮೇ ವಿಕಾಸಮಾಯಾನ್ತಿ ವಿಲೀಯನ್ತೇಽಸ್ತಮಾಗತೇ || ೨೫ ||

ತಮೇಕಮೇಕಯಾ ಬುದ್ಧ್ಯಾ ವ್ಯಾಮೋಹಪರಿಹೀನಯಾ |
ಯದಿ ಜೇತುಂ ಸಮರ್ಥೋಽಸಿ ಧೀರಸ್ತದಸಿ ಸುವ್ರತ || ೨೬ ||

ತಸ್ಮಿನ್ ಜಿತೇ ಜಿತಾಲೋಕಾಃ ಭವಿಷ್ಯನ್ತ್ಯಜಿತಾಅಪಿ |
ಅಜಿತೇ ತ್ವಜಿತಾಏತೇ ಚಿರಕಾಲಜಿತಾಅಪಿ || ೨೭ ||

ತಸ್ಮಾದನನ್ತಸಿದ್ಧ್ಯರ್ಥಂ ಶಾಶ್ವತಾಯ ಸುಖಾಯ ಚ |
ತಜ್ಜಯೇ ಯತ್ನಮಾತಿಷ್ಠ ಕಷ್ಟಯಾಪಿ ಹಿ ಚೇಷ್ಟಯಾ || ೨೮ ||

---

೨೫. ಆ ಮಂತ್ರಿಯೆಂಬ ಸೂರ್ಯನು ಉದಯಿಸಿದರೇನೇ ತ್ರೈಲೋಕ್ಯಗಳೆಂಬ ಕಮಲ ಷಂಡಗಳು ಅರಳುವುದು. ಅವನು ಅಸ್ತನಾದರೆ ಇವೂ ಅಸ್ತವಾಗುವುವು.

೨೬. ಅಂತಹ ಆ ಮಂತ್ರಿಯನ್ನು ನೀನು ಮೋಹಶೂನ್ಯವಾಗಿ ಸ್ಥಿರವಾಗಿರುವ ನಿನ್ನ ಬುದ್ಧಿಯಿಂದ ನೀನು ಗೆಲ್ಲಬಲೆಯಾದರೆ, ಎಲೆ ಸುವ್ರತನೆ, ಆಗ ನೀನು ಧೀರನು.

೨೭. ಅವನೊಬ್ಬನನ್ನು ಗೆದ್ದರೂ, ಈ ಲೋಕಗಳನ್ನೆಲ್ಲ ಗೆಲ್ಲದಿದ್ದರೂ ಗೆದ್ದಂತೆಯೇ! ಅವನನ್ನು ಗೆಲ್ಲದೆ, ಈ ಲೋಕಗಳನ್ನೆಲ್ಲ ಗೆದ್ದರೂ, ಅವು ಯಾವಾಗಲೂ ಗೆಲ್ಲದಿದ್ದಂತೆಯೇ !

೨೮. ಆದರಿಂದ, ಅನಂತವಾದ ಸಿದ್ಧಿಗಳಾಗಲೆಂದು, ಶಾಶ್ವತವಾದ ಸುಖವಾಗಲೆಂದು, ಎಷ್ಟೇ ಕಷ್ಟವಾದರೂ ಬಿಡದೆ ಅವನನ್ನು ಜಯಿಸಲು ಪ್ರಯತ್ನಮಾಡು.

(ಅಂತೋಮೃತ್ಯುಃ ತದಭಾವೋಽನಂತರಮೃತ್ಯುಂಜಯಃ ತಾ. ಪ್ರ.)

ಸಸುರದನುಜನಾಗಯಕ್ಷಸಂಘಂ
　　ಸನರಮಹೋರಗಕಿನ್ನರಂ ಸಮೇತಂ ।
ತ್ರಿಜಗದಪಿವಶೀಕೃತಂ ಸಮಾನ್ತಾತ್
　　ಅತಿಬಲಿನಾ ನನು ಹೇಲಯೈವ ತೇನ　　॥ ೨೯ ॥

ಇತ್ಯಾರ್ಷೇ ವಾಸಿಷ್ಠರಾಮಾಯಣೇ ವಾಲ್ಮೀಕಿಯೇ ಉಪಶಮಪ್ರಕರಣೇ
"ವಿರೋಚನವಚನಂ" ನಾಮ ತ್ರಯೋವಿಂಶಃ ಸರ್ಗಃ

---

೨೯. ದೇವದಾನವನಾಗಯಕ್ಷರೂ ನರಮಹೋರಗಕಿನ್ನರರೂ ಕೂಡಿರುವ ಈ ಜಗತ್ತ್ರಯವೂ ಆ ಅತಿ ಬಲನಾದ ಮಂತ್ರಿಗೆ ಲೀಲಾಮಾತ್ರದಿಂದ ವಶವಾಗಿರುವುದು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಉಪಶಮ ಪ್ರಕರಣದಲ್ಲಿ "ವಿರೋಚನವಚನ" ಎಂಬ ಇಪತ್ತಮೂರನೆಯ ಸರ್ಗವು.

ಚತುರ್ವಿಂಶಃ ಸರ್ಗಃ

ಬಲಿರುವಾಚ—

ಕೇನೋಪಾಯೇನ ಬಲವಾನ್ ಸ ತಾತ ಪರಿಜೀಯತೇ ।
ಕೋಸಾವತಿಮಹಾವೀರ್ಯಃ ಸರ್ವಂ ಪ್ರಕಥಯಾಶು ಮೇ ॥ ೧ ॥

ವಿರೋಚನ ಉವಾಚ—

ಮನ್ತ್ರಿಣಸ್ತಸ್ಯ ತನಯ ನಿತ್ಯಾಜೇಯಸ್ಥಿತೇರಪಿ ।
ಶೃಣು ವಚ್ಮಿ ಸುಸಾಧತ್ವಂ ಯೇನಾಸೌ ಪರಿಜೀಯತೇ ॥ ೨ ॥

ಪುತ್ರ ಯುಕ್ತ್ಯಾ ಗೃಹೀತೋಽಸೌ ಕ್ಷಣಾದಾಯಾತಿ ವಶ್ಯತಾಂ ।
ಯುಕ್ತಿಂ ವಿನಾ ದಹತ್ಯೇಷಃ ಆಶೀವಿಷಇವೋದ್ಧತಃ ॥ ೩ ॥

ಇಪ್ಪತ್ತನಾಲ್ಕನೆಯ ಸರ್ಗ

೧. ಬಲಿಯು ಹೇಳಿದನು—ತಂದೆಯೇ, ಮಹಾಬಲಶಾಲಿಯಾದ ಆ ಮಂತ್ರಿಯನ್ನು ಗೆಲ್ಲುವುದಾದರೂ ಹೇಗೆ? ಈ ಮಹಾಪರಾಕ್ರಮಿಯು ಯಾರು? ಇದೆಲ್ಲವನ್ನೂ ನನಗೆ ಚೆನ್ನಾಗಿ ಹೇಳು.

೨. ವಿರೋಚನನು ಹೇಳಿದನು—ಮಗನೆ, ಯಾವಾಗಲೂ ಅಜೇಯನೇ ಆಗಿರುವ ಆ ಮಂತ್ರಿಯನ್ನು ಸುಲಭವಾಗಿ ಗೆಲ್ಲುವಂತಹ ಉಪಾಯವೊಂದಿರುವುದು. ಅದನ್ನು ಹೇಳುವೆನು, ಕೇಳು.

೩. ಮಗನೆ, ಈ ಮಂತ್ರಿಯು (ಇಷ್ಟು ಬಲಿಷ್ಠನಾಗಿದ್ದರೂ) ಒಂದು ಯುಕ್ತಿಯಿಂದ ಅವನನ್ನು ಹಿಡಿಯಬಹುದು. ಹಾಗೆ ಹಿಡಿದ ಕೂಡಲೇ ಅವನು ವಶನಾಗುವನು. ಹಾಗೆ ಯುಕ್ತಿಯನ್ನು ಉಪಯೋಗಿಸದಿದ್ದಲ್ಲಿ ಅವನು ನಮ್ಮನ್ನು ಮಹಾಸರ್ಪದಂತೆ ಉದ್ಧತನಾಗಿ ಸುಟ್ಟುಬಿಡುವನು.

(ಯುಕ್ತ್ಯಾ-ರಾಜಯೋಗಾಖ್ಯಯಾ ತಾ. ಪ್ರ.)

ಬಾಲವಲ್ಲಾಲಯಿತ್ವೈನಂ ಯುಕ್ತ್ಯಾ ನಿಯಮನ್ತಿ ಯೇ ।
ರಾಜಾನಂ ತಂ ಸಮಾಲೋಕ್ಯ ಪದಮಾಸಾದಯನ್ತಿ ತೇ ॥ ೪ ॥

ದೃಷ್ಟೇ ತಸ್ಮಿನ್ ಮಹಿಪಾಲೇ ಸ ಮನ್ತ್ರೀ ವಶಮೇತಿ ಚ ।
ತಸ್ಮಿಂಶ್ಚ ಮನ್ತ್ರಿಣ್ಯಾಕ್ರಾನ್ತೇ ಸ ರಾಜಾ ದೃಶ್ಯತೇ ಪುನಃ ॥ ೫ ॥

ಯಾವನ್ನ ದೃಷ್ಟೋ ರಾಜಾಸೌ ತಾವನ್ಮನ್ತ್ರೀ ನ ಜೀಯತೇ ।
ಮನ್ತ್ರೀ ಚ ಯಾವನ್ನ ಜಿತಃ ತಾವದ್ರಾಜಾ ನ ದೃಶ್ಯತೇ ॥ ೬ ॥

ರಾಜಸ್ಯದೃಷ್ಟೇ ದುರ್ಮನ್ತ್ರೀ ಸ ದುಃಖಾಯ ಫಲತ್ಯತಿ ।
ಮನ್ತ್ರಿಣ್ಯನಿರ್ಜಿತೇ ರಾಜಾ ಸೋಽತ್ಯನ್ತಂ ಯಾತ್ಯದೃಶ್ಯತಾಂ ॥ ೭ ॥

---

೪. ಈ ಮಂತ್ರಿಯನ್ನು ಎಳೆಯ ಮಗುವಿನಂತೆ ಲಾಲನೆಮಾಡುವುದೇ ಆ ಯುಕ್ತಿಯು. ಆ ಯುಕ್ತಿಯಿಂದ ಅವನನ್ನು ಹಿಡಿದು ವಶಪಡಿಸಿಕೊಂಡವರು, ಅವನ ರಾಜನನ್ನೂ ನೋಡುವರು. ಆ ರಾಜನ ಪದವಿಯನ್ನು ಹೊಂದಿ ರಾಜರೂ ಆಗುವರು.

(ಪದಂ–ರಾಜಪದಂ. ತಾ. ಪ್ರ.)

೫. ಆ ಮಹೀಪಾಲನನ್ನು ಕಂಡರೂ ಸಾಕು, ಆ ಮಂತ್ರಿಯು ವಶನಾಗುವನು. ಆ ಮಂತ್ರಿಯನ್ನು ಹಿಡಿದರಂತೂ ಆ ರಾಜನು ಕಂಡೇ ಕಾಣುವನು.

೬. ರಾಜನನ್ನು ಕಾಣುವವರೆಗೂ ಆ ಮಂತ್ರಿಯು ಸೋಲುವುದಿಲ್ಲ: ಮಂತ್ರಿಯನ್ನು ಗೆಲ್ಲುವವರೆಗೂ ರಾಜನನ್ನು ನೋಡಲಾಗುವುದಿಲ್ಲ.

೭. ಆ ರಾಜನ ದರ್ಶನವಾಗುವವರೆಗೂ ಆ ಮಂತ್ರಿಯು ನಮಗೆ ದುಷ್ಟನೇ ಆಗಿದ್ದು ದುಷ್ಫಲಗಳನ್ನೇ ಕೊಡುವನು. ಆ ಮಂತ್ರಿಯು ಜಿತನಾಗುವವರೆಗೂ ರಾಜನು ಅದೃಶ್ಯನಾಗಿಯೇ ಇರುವನು.

ಅಭ್ಯಾಸೇನೋಭಯಂ ತಸ್ಮಾತ್ ಸಮಮೇವ ಸಮಾರಭೇತ್ ।
ರಾಜಸನ್ದರ್ಶನಂ ತಸ್ಯ ಮನ್ತ್ರಿಣಶ್ಚ ಪರಾಜಯಂ ॥ ೮ ॥

ಪೌರುಷೇಣ ಪ್ರಯತ್ನೇನ ಸ್ವಭ್ಯಾಸೇನ ಶನೈಶ್ಶನೈಃ ।
ದ್ವಯಂ ಸಂಪಾದ್ಯ ಯತ್ನೇನ ದೇಶಮಾಪ್ನೋಷಿ ತಂ ಶುಭಂ ॥ ೯ ॥

ತ್ವಮಭ್ಯಾಸೇ ಫಲೀಭೂತೇ ತಂ ದೇಶಮಭಿಗಚ್ಛಸಿ ।
ಯದಿ ದೈತ್ಯೇನ್ದ್ರ ತದ್ಭೂಯೋ ಮನಾಗಪಿ ನ ಶೋಚಸಿ ॥ ೧೦ ॥

ಸಂಶಾನ್ತಸಕಲಾಯಾಸಾಃ ನಿತ್ಯಪ್ರಮುದಿತಾಶಯಾಃ ।
ಸಾಧವಸ್ತತ್ರ ತಿಷ್ಠನ್ತಿ ಪ್ರಶಾನ್ತಾಶೇಷಸಂಶಯಾಃ ॥ ೧೧ ॥

---

೮. ಅದರಿಂದ, ಎರಡೂ ಕಾರ್ಯಗಳು ಆಗುವಂತಹ ಉಪಾಯವನ್ನು ಒಂದೇ ಕಾಲದಲ್ಲಿ ಹೂಡಿ, ರಾಜಸಂದರ್ಶನವೂ ಮಂತ್ರಿಪರಾಜಯವೂ ಎರಡೂ ಲಭಿಸುವಂತಹ ಯುಕ್ತಿಯನ್ನು ಅಭ್ಯಾಸದಿಂದ ಸಾಧಿಸಬೇಕು.

(ಸಂದರ್ಶನ ಪರಾಜಯಶಬ್ದೌ ತತ್ತದುಪಾಯಪರೌ. ತಾ. ಪ್ರ.)

೯. ಪೌರುಷದಿಂದಲೂ ಪ್ರಯತ್ನದಿಂದಲೂ ದೃಢವಾದ ಅಭ್ಯಾಸದಿಂದಲೂ ಮೆಲ್ಲ ಮೆಲ್ಲಗೆ ಎರಡನ್ನೂ ಕಷ್ಟಪಟ್ಟು ಸಂಪಾದಿಸಿದರೆ, ನೀನು ಶುಭವಾದ ಆ ದೇಶವನ್ನು ಸೇರುವೆ.

೧೦. ನಿನ್ನ ಅಭ್ಯಾಸವು ಫಲವಾಗಿ ನೀನೇನಾದರೂ ಆ ದೇಶಕ್ಕೆ ಹೋದುದೇ ಆದರೆ ಮತ್ತೆ ನಿನಗೆ ದುಃಖವೆಂಬುದು ಯಾವಾಗಲೂ ಇರುವುದಿಲ್ಲ.

[ಫಲೀಭೂತೇ ಸಫಲೀಭೂತೇ ಜ್ಞಾನಫಲಾತ್ಮನಾಪರಿಣತೇ ತಾ. ಪ್ರ.]

೧೧. ಆ ದೇಶದಲ್ಲಿರುವ ಪ್ರಜೆಗಳೆಲ್ಲರೂ ಸಕಲ ವಿಧವಾದ ಅನರ್ಥಗಳೂ ಶಾಂತರಾದವರು: ಯಾವಾಗಲೂ ಸಂತೋಷ ಚಿತ್ತರಾದವರು: ಸಮಸ್ತ ಸಂಶಯಗಳನ್ನೂ ಕಳೆದುಕೊಂಡವರು: ಪರಮ ಸಾಧುಗಳು.

ಶೃಣು ಕಃ ಪುತ್ರ ದೇಶೋಽಸೌ ಸರ್ವಂ ಪ್ರಕಟಯಾಮಿ ತೇ ।
ದೇಶನಾಮ್ನಾ ಮಯೋಕ್ತಸ್ತೇ ಮೋಕ್ಷಃ ಸಕಲದುಃಖಹಾ ॥ ೧೨ ॥

ರಾಜಾ ತು ತತ್ರ ಭಗವಾನಾತ್ಮಾ ಸರ್ವಪದಾತಿಗಃ ।
ತೇನ ಮಂತ್ರೀಕೃತಃ ಪ್ರಾಜ್ಞೋ ಮನೋ ನಾಮ ಮಹಾಮತೇ ॥ ೧೩ ॥

ಮನೋನಿಸ್ಮೃತಯಾ ವಿಶ್ವಮಿದಂ ಪರಿಣತಿಂ ಗತಂ ।
ಘಟತ್ವೇನೇವ ಮೃತ್ಪಿಂಡೋ ಧೂಮೋಽಂಬುದತಯೈವ ಚ ॥ ೧೪ ॥

ತಸ್ಮಿನ್ ಜಿತೇ ಜಿತಂ ಸರ್ವಂ ಸರ್ವಮಾಸಾದಿತಂ ಭವೇತ್ ।
ದುರ್ಜಯಂ ತದ್ವಿಜಾನೀಯಾದ್ಯುಕ್ತ್ಯೈವ ಪರಿಜೀಯತೇ ॥ ೧೫ ॥

---

೧೨. ಈ ದೇಶವು ಯಾವುದು ಎಂಬುದನ್ನು ಹೇಳುವೆನು ಕೇಳು. ದೇಶವೆಂದು ನಾನು ಹೇಳಿದುದು ಸಕಲ ದುಃಖಗಳನ್ನೂ ಅಳಿಸುವ ಮೋಕ್ಷವು.

೧೩. ಎಲೆ ಮಹಾಮತಿಯೇ, ಅಲ್ಲಿರುವ ಅರಸು ಸರ್ವ ಪದವಿಗಳನ್ನೂ ಮೀರಿದ ಪದವಿಯಲ್ಲಿರುವ ಆತ್ಮನು. ಅವನ ಮಂತ್ರಿಯಾಗಿರುವ ಆ ಪ್ರಾಜ್ಞನೇ ಮನಸ್ಸು.

[ಸರ್ವಾಣಿ ಮನುಷ್ಯಾನಂದಾದಿ ಹಿರಣ್ಯಗರ್ಭಾನಂದಾಂತಪದಾನಿ ಅತೀತ ಗಚ್ಛತೀತಿ–ಸರ್ವಪದಾತಿಗಃ । ಪ್ರಾಜ್ಞಃ ಸರ್ವ ಪ್ರಜ್ಞಾಸಮಷ್ಟಿರೂಪಃ–ತಾ. ಪ್ರ]

೧೪. ಮಣ್ಣಿನ ಹೆಂಟೆಯು ಮಡಗಿಯಾಗುವಂತೆ, ಆ ಮನಸ್ಸಿನಿಂದಲೇ ಈ ವಿಶ್ವವೆಲ್ಲವೂ ಪರಿಣತವಾಗಿರುವುದು.

[ಮನಸಿನಿಸ್ಮೃತಯಾ ಮನಸಿ ವಾಸನಾತ್ಮಕ ಸೂಕ್ಷ್ಮಭಾವೇನ ಸ್ಥಿತತಯಾ-ಪರಣತಿಂ ಸ್ಥೂಲ್ಯಂ [ಇಲ್ಲಿ ಪರಿಣತ ಎಂದು ಹೇಳಿದ್ದರೂ ಕಾರಣವು ತನ್ನ ಸ್ವರೂಪವನ್ನು ಬಿಡದೆ ಕಾರ್ಯವಾಗಿದ್ದುಕೊಂಡು ಪ್ರತ್ಯೇಕಸ್ಥಿತಿಯನ್ನು ಪಡೆದಿರುವಂತೆ ತೋರುವುದು ಎಂಬುದನ್ನು ಗಮನಿಸಿ. ಇದೇ ಶಂಕರರು ಹೇಳುವ ವಿವರ್ತವಾದ]

೧೫. ಆ ಮನಸ್ಸೆಂಬ ಮಂತ್ರಿಯನ್ನು ಗೆದ್ದುದೇ ಆದರೆ ಎಲ್ಲವನ್ನೂ ಗೆದ್ದಂತಾ

ಬಲಿರುವಾಚ--

ಯಾ ಯುಕ್ತಿರ್ಭಗವಂಸ್ತಸ್ಯ ಚಿತ್ತಸ್ಯಾಕ್ರಮಣೇ ಸ್ಫುಟಂ ।
ತಾಂ ಮೇ ಕಥಯ ತತ್ತಾವದ್ಯಥಾ ಜೇಷ್ಯಾಮಿ ದಾರುಣಂ ॥ ೧೬ ॥

ವಿರೋಚನ ಉವಾಚ:--

ವಿಷಯಾನ್ಪ್ರತಿ ಭೋಃ ಪುತ್ರ ಸರ್ವಾನೇವ ಹಿ ಸರ್ವಥಾ ।
ಅನಾಸ್ಥಾ ಪರಮಾ ಹ್ಯೇಷಾ ಸಾ ಯುಕ್ತಿರ್ಮನಸೋ ಜಯೇ ॥ ೧೭ ॥

ಏಷೈವ ಪರಮಾ ಯುಕ್ತಿರನಯೈವ ಮಹಾಪದಃ ।
ಸ್ವಮನೋಮತ್ತಮಾತಂಗೋ ದ್ರಾಗಿತ್ಯೇವಾವದವ್ಯತೇ ॥ ೧೮ ॥

ಏಷಾ ಹ್ಯತ್ಯಂತದುಷ್ಪ್ರಾಪಾ ಸುಪ್ರಾಪಾ ಚ ಮಹಾಮತೇ ।
ಅನಭ್ಯಸ್ತಾತಿದುಷ್ಪ್ರಾಪಾ ಸ್ವಭ್ಯಸ್ತಾ ಪ್ರಾಪ್ಯತೇ ಸುಖಂ ॥ ೧೯ ॥

ಯಿತು: ಎಲ್ಲವನ್ನೂ ಪಡೆದಂತೆಯೂ ಆಯಿತು. ಆದರೆ, ಆ ಮನಸ್ಸು ದುರ್ಜಯವು ಎಂಬುದನ್ನು ತಿಳಿದಿರು. ಅದನ್ನು ಯುಕ್ತಿಯಿಂದಲೇ ಗೆಲ್ಲಬೇಕು.

೧೬. ಬಲಿಯು ಕೇಳಿದನು:-ಆ ಮನಸ್ಸನ್ನು ಗೆಲ್ಲುವುದಕ್ಕೆ ಎಲೈ ಭಗವಂತನೆ, ಯಾವ ಯುಕ್ತಿಯು ಶ್ರೇಷ್ಠವಾದುದು? ಅದನ್ನೇ ನನಗೆ ಹೇಳು. ಆ ಯುಕ್ತಿಯನ್ನು ಹಿಡಿದು ಆ ಘೋರವಾದ ಮನಸ್ಸನ್ನು ವಶಪಡಿಸಿಕೊಳ್ಳುವೆನು.

೧೭. ವಿರೋಚನನು ಹೇಳಿದನು:—ಮಗನೆ, ವಿಷಯಗಳನ್ನು ಸಂಪೂರ್ಣವಾಗಿ, ಸರ್ವಥಾ, ಸರ್ವದಾ, ಆಸ್ಥೆಯೊಳ್ಳಷ್ಟೂ ಇಲ್ಲದೆ ತೊರೆದಿರುವುದೇ ಮನೋಜಯಕ್ಕೆ ಪರಮೋಪಾಯವು.

೧೮. ಹೀಗೆ ವಿಷಯ ಪರಾಂಗ್ಮುಖನಾಗಿರುವುದೇ ಆ ಮಹಾಯುಕ್ತಿಯು. ಇದೊಂದರಿಂದಲೇ, ಮಹಾಮದಯುಕ್ತವಾದ ಆ ಮನಸ್ಸೆಂಬ ಮಹಾಮಾತಂಗವು ಒಂದು ಕ್ಷಣದಲ್ಲಿ ವಶವಾಗುವುದು.

೧೯. ಈ ಯುಕ್ತಿಯು ಕೂಡ ಎಷ್ಟು ಸುಲಭವೋ ಅಷ್ಟೇ ದುರ್ಲಭವೂ ಹೌದು (ಎಂಬುದನ್ನು ಮರೆಯದಿರು.) ಎಲೆ ಮಹಾಮತಿಯೆ, ಇದು ಅಭ್ಯಾಸವಿಲ್ಲದಿದ್ದರೆ ದುರ್ಲಭವು: ಅಭ್ಯಾಸ ಮಾಡಿದರೆ ಸುಲಭವು.

ಕ್ರಮಾದಭ್ಯಸ್ಯಮಾನೈಷಾ ವಿಷಯಾರತಿರಾತ್ಮಜ ।
ಸರ್ವತಃ ಸ್ಫುಟತಾಮೇತಿ ಸೇಕಸಿಕ್ತಾ ಲತಾ ಯಥಾ ॥ ೨೦ ॥

ನಾಸಾದ್ಯತೇ ಹ್ಯನಭ್ಯಸ್ತಾ ಕಾಂಕ್ಷತಾಪಿ ಶಠಾತ್ಮನಾ ।
ಪುತ್ರ ಶಾಲಿರಿವಾವ್ಯುಪ್ತಾ ತಸ್ಮಾದೇನಾಂ ಸಮಾಹರ ॥ ೨೧ ॥

ತಾವದ್ಭ್ರಮಂತಿ ದುಃಖೇಷು ಸಂಸಾರಾವಟವಾಸಿನಃ ।
ವಿರತಿಂ ವಿಷಯೇಷ್ವೇತೇ ಯಾವನ್ನಾಯಾಂತಿ ದೇಹಿನಃ ॥ ೨೨ ॥

ಅಭ್ಯಾಸೇನ ವಿನಾ ಕಶ್ಚಿನ್ನಾಪ್ನೋತಿ ವಿಷಯಾರತಿಂ ।
ಅಪ್ಯತ್ಯಂತಬಲೋ ದೇಹೀ ದೇಶಾಂತರಮಿವಾಗತಿಃ ॥ ೨೩ ॥

ಧ್ಯೇಯತ್ಯಾಗಮತೋಽಜಸ್ರಂ ಧ್ಯಾಯತಾ ದೇಹಧಾರಿಣಾ ।
ಭೋಗೇಷ್ವರತಿರಭ್ಯಾಸಾದ್ವೃದ್ಧಿಂ ನೇಯಾ ಲತಾ ಯಥಾ ॥ ೨೪ ॥

---

೨೦. ಕ್ರಮವಾಗಿ ಅಭ್ಯಾಸಮಾಡುತ್ತಾ ಬಂದರೆ ಈ ವಿಷಯ ವಿರತಿಯು, ಮಗನೆ, ನೀರು ಹೊಯ್ಯುತ್ತಿದ್ದರೆ ಬೆಳೆಯುವ ಲತೆಯಂತೆ, ಎಲ್ಲೆಲ್ಲಿಯೂ ಚೆನ್ನಾಗಿ ಹೊಮ್ಮುವುದು.

೨೧. ಬಿತ್ತದಿದ್ದ ಭತ್ತದ ತೆನೆಯು ಎಷ್ಟೆಷ್ಟು ಅಪೇಕ್ಷಿಸಿದರೂ ಹೇಗೆ ಸಿಕ್ಕದೆಯೋ ಹೋಗುವುದೋ ಹಾಗೆಯೇ, ಭೋಗಲೋಲುಪನಾದವನು ಎಷ್ಟೇ ಕೋರುತ್ತಿದ್ದರೂ ಅಭ್ಯಾಸಮಾಡದೆ ಅವನಿಗೆ ಅದು ಸಿಕ್ಕುವುದಿಲ್ಲ: ಅದರಿಂದ ಅದನ್ನು ಮೊದಲು ಅಭ್ಯಾಸಮಾಡು.

೨೨. ಸಂಸಾರವೆಂಬ ಹಳ್ಳಗಳಲ್ಲಿ ಬಿದ್ದುಹೋಗಿರುವವರು, ಈ ವಿಷಯ ವಿರತಿ(ಯೆಂಬ ಚಿಂತಾಮಣಿ)ಯನ್ನು ಪಡೆಯುವವರೆಗೂ ದುಃಖದಿಂದ ದುಃಖಕ್ಕೆ ಅಲೆಯುತ್ತಲೇ ಇರಬೇಕಾಗುವುದು.

೨೩. ಪುರುಷನು ಎಷ್ಟು ಬಲಶಾಲಿಯಾಗಿದ್ದರೂ ನಡೆಯದೆ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಹೋಗುವುದು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಅಭ್ಯಾಸಮಾಡದಿದ್ದವನು ಯಾವನೂ ವಿಷಯ ವಿರತಿಯನ್ನು ಪಡೆಯಲಾರನು.

೨೪. ಆದರಿಂದ, ಮನುಷ್ಯನಾಗಿ ಹುಟ್ಟಿದವನು ಧ್ಯೇಯ ತ್ಯಾಗವನ್ನು

ಪುರುಷಾರ್ಥಾದೃತೇ ಪುತ್ರ ನೇಹ ಸಂಪ್ರಾಪ್ಯತೇ ಶುಭಂ || ೨೫ ||

ಕುರಿತು ಒಂದೇ ಸಮನಾಗಿ ಚಿಂತಿಸುತ್ತಾ, ವಿಷಯ ವಿರತಿಯನ್ನು, ಬಳ್ಳಿಯನ್ನು ಬೆಳೆಸುವಂತೆ ಬೆಳೆಸಬೇಕು.

(ನಾಕಸ್ಮಾತ್ ಸರ್ವೇವಿಷಯಾಃ ತ್ಯಕ್ತುಂ ಶಕ್ಯಾಃ। ಕಿಂತು ಕ್ರಮೇಣ ಏಕೈಕಂ ವಿಷಯಂ ಚಿರಂತ್ಯಕ್ತ್ವಾ ಸಕೃತ್‌ಸಕೃತ್ ಕದಾಚಿತ್ ಸೇವಮಾನಃ ಕ್ರಮಾತ್ ಸರ್ವ ವೈರಾಗ್ಯ ಪರಿಪಾಕೇ ತ್ಯಜೇತ್ । ತತ್ರಚ ಪುರುಷ ಪ್ರಯತ್ನದಾರ್ಢ್ಯೇ, ಪುನಃ ಹರ್ಷಾಮರ್ಷಾ ತೌಲ್ಯಪ್ರಸಂಗವಾರಕಂ ಆವಶ್ಯಕಂ ಇತ್ಯಾಶಯೇನ-ಆಹ-ತಾ. ಪ್ರ.)

(ಹಿಂದೆ ಇದೇ ಪ್ರಕರಣದ ಸರ್ಗ ೫ ರಲ್ಲಿ ಹೇಳಿರುವುದನ್ನು ಇಲ್ಲಿ ಚಿಂತಿಸಿ.

ಪೂರ್ವಂ ರಾಘವ ಶಾಸ್ತ್ರೇಣ ವೈರಾಗ್ಯೇಣ ಪರೇಣಚ ||
ತಥಾ ಸಜ್ಜನಸಂಗೇನ ನೀಯತಾಂ ಪುಣ್ಯತಾಂ ಮನಃ || ಶ್ಲೋ.೧೪, ಸರ್ಗ ೫

ಇಲ್ಲಿ ವೈರಾಗ್ಯವನ್ನು ಕುರಿತು ಹೇಳುತ್ತಿದ್ದಾರೆ.

ಹಾಗೆಯೇ ವಾಸನಾತ್ಯಾಗವನ್ನು ಧ್ಯೇಯ, ಜ್ಞೇಯ, ವಿಭಾಗದಿಂದ ಎರಡು ರೂಪವಾಗಿ ಸರ್ಗ ೧೬ರಲ್ಲಿ ಹೇಳಿರುವುದನ್ನೂ ಧ್ಯಾನಿಸಿ:—ಶ್ಲೋಕಗಳು ೮—೯.

ನಾಹಂ ಪದಾರ್ಥಸ್ಯ ನ ಮೇ ಪದಾರ್ಥ ಇತಿ ಭಾವಿತೇ|| ೮ ಅಂತಶ್ಶೀತಲಯಾ ಬುದ್ಧ್ಯಾ ಕುರ್ವತ್ಯಾ ಲೀಲಯಾ ಕ್ರಿಯಾಂ । ಯೋ ನೂನಂ ವಾಸನಾತ್ಯಾಗೋ ಧ್ಯೇಯೋ ರಾಮ:ಸ ಕೀರ್ತಿತಃ || ೯ ಸರ್ವಂ ಸಮತಯಾ ಬುದ್ಧ್ಯಾ ಯಂ ಕೃತ್ವಾ ವಾಸನಾಕ್ಷಯಂ || ಜಹಾತಿ ನಿರ್ಮಮೋ ದೇಹಂ ಜ್ಞೇಯೋಽಸೌ ವಾಸನಾ ಕ್ಷಯಃ || ೧೦ ||

ಅಹಂ, ಇದಂ, ಇವೆರಡೂ ಬೇರೆ ಬೇರೆ ಎಂದು ಪ್ರತ್ಯೇಕಿಸಿ ತಿಳಿಯುವುದು. ಧ್ಯೇಯವಾಸನಾತ್ಯಾಗ. ಅಹಂ, ಇದಂ, ಇವೆರಡೂ ಬ್ರಹ್ಮಾಭಿನ್ನಗಳೇ ಎಂದು ತಿಳಿಯುವುದು ಜ್ಞೇಯವಾಸನಾತ್ಯಾಗ.

೨೫. ಮೋಕ್ಷವೇ ಪರಮಪುರುಷಾರ್ಥವು. ಅವನ್ನು ಬಿಟ್ಟು ಇನ್ನೇನೇನು ಪಡೆದರೂ ಶುಭವು ದೊರೆಯುವುದಿಲ್ಲ.

ಕ್ರಿಯಾಫಲಂ ಪರಿಪ್ರಾಪ್ತಂ ಹರ್ಷಾಮರ್ಷವಿವರ್ಜಿತಂ।
ದೈವಮಿತ್ಯುಚ್ಯತೇ ಲೋಕೇ ನ ದೈವಂ ದೇಹವತ್ಕ್ವಚಿತ್] ೨೬ ॥

ಅವಶ್ಯಂಭವಿತವ್ಯಾಖ್ಯಾ ಸ್ವೇಹಯಾ ನಿಯತಿಶ್ಚ ಯಾ
ಉಚ್ಯತೇ ದೈವಶಬ್ದೇನ ಸಾ ನರೈರೇವ ನೇತರೈಃ ॥ ೨೭ ॥

---

೨೬. ಹರ್ಷ, ಅಮರ್ಷ, ಶೂನ್ಯವಾಗಿರುವ, ಸರ್ವಕರ್ಮಗಳ ಸತ್ಫಲ ಸ್ವರೂಪವಾದ ಮೋಕ್ಷಪದವಿಯು ದೈವದಿಂದ ಲಭಿಸುವುದು ಎಂದು ಲೋಕದಲ್ಲಿ ಹೇಳುವುದುಂಟು. ಆದರೆ ದೈವವನ್ನು ಮೂರ್ತಿಮತ್ತಾಗಿ ಕಂಡವರು ಯಾರು ?

(ಸಾಮಾನ್ಯ ಜನರು ಹೇಳುವ "ಅದೃಷ್ಟ"ವನ್ನು ದೈವವೆಂದು ಕರೆದು, ಸೋಮಾರಿಗಳು ಪ್ರಯತ್ನ ಮಾಡದಿರುವುದಕ್ಕಾಗಿ ತಪ್ಪಿಸಿಕೊಳ್ಳುವುದಕ್ಕಾಗಿ ಹೇಳುವ ಅನಿರ್ದಿಷ್ಟ ದೈವವನ್ನು ಕುರಿತು ಈ ನಿಂದೆಯೇ ಹೊರತು ಪ್ರಯತ್ನಪೂರ್ವಕವಾಗಿ ಮಾಡಬೇಕಾದ ಉಪಾಸನೆಯ ಗುರಿಯಾದ ದೈವವನ್ನು ಕುರಿತು ಅಲ್ಲ. ಮುಂದೆ ೩೧ನೆಯ ಪ್ರಕರಣದಲ್ಲಿ ೩೬ನೆಯ ಶ್ಲೋಕ ಮತ್ತು ಮುಂದೆ ನೋಡಿ.

ಪ್ರಲಯ ಸ್ಥಿತಿಸರ್ಗಾಣಾಂ ಹರಿಃಕಾರಣತಾಂಗತಃ ॥ ೩೬ ॥
ಅಸ್ಮಾನ್ನಿಮೇಷಾದಾರಭ್ಯ ನಾರಾಯಣಮಹಂ ಸದಾ ॥
ಸಂಪ್ರಪನ್ನೋಽಸ್ಮಿ ಸರ್ವತ್ರ ನಾರಾಯಣಮಹೋಽಸ್ಮ್ಯಹಂ ॥ ೩೭ ॥
ಅವಿಷ್ಣುಃ ಪೂಜಯನ್ ವಿಷ್ಣುಂ ನ ಪೂಜಾಫಲಭಾಗ್ಭವೇತ್ ।

ಮತ್ತೆ ಸರ್ಗ೩೨—ಪ್ರಹ್ಲಾದ ಇತಿಸಂಚಿಂತ್ಯ ಕೃತ್ವಾ ನಾರಾಯಣೀಂ ತನುಂ ॥
ಪುನಃ ಸಂಚಿಂತಯಾಮಾಸ ಪೂಜಾರ್ಥಮ ಸುರದ್ವಿಷಃ ॥
ವಿಷ್ಣುರ್ಭೂತ್ವಾಯಜೇದ್ವಿಷ್ಣುಂ ಅಯಂ ವಿಷ್ಣುರಹಂಸ್ಥಿತಃ ॥ ೩೯.

ಹಾಗೆಯೇ "ನಾದೇವೋ ದೇವಮರ್ಚತಿ" ಎಂಬ ಆಗಮೋಕ್ತಿಯನ್ನೂ ಚಿಂತಿಸಿ.)

೨೭. ಮನುಷ್ಯನು ತಾನು ಮಾಡುವ ಶುಭಾಶುಭ ಕರ್ಮಗಳಿಗೆ ತಕ್ಕ ಶುಭಾಶುಭ ಫಲಗಳನ್ನು ಪಡೆವೇ ಪಡೆಯಬೇಕೆಂಬ ಒಂದು ನಿಯತಿಯು ಈ ಲೋಕದಲ್ಲಿ

ಯದ್ಯಸ್ಯೇಹ ಯದಾ ಯತ್ರ ಸಂಪನ್ನಂ ಸಮತಾಂ ಗತಂ ।
ಹರ್ಷಾಮರ್ಷವಿನಾಶಾಯ ತದ್ದೈವಮಿತಿ ಕಥ್ಯತೇ ॥ ೨೮ ॥

ದೈವಂ ನಿಯತಿರೂಪಂ ಚ ಪೌರುಷೇಣೋಪಜೀಯತೇ ।
ಸಮ್ಯಗ್ಜ್ಞಾನವಿಲಾಸೇನ ಮೃಗತೃಷ್ಣಾಭ್ರಮೋ ಯಥಾ ॥ ೨೯ ॥

ಯಥಾ ಸಂಕಲ್ಪ್ಯತೇ ಯದ್ಯತ್ಪೌರುಷೇಣ ತಥೈವ ತತ್ ।
ಫಲವತ್ತ್ವಾಗೃಹೀತತ್ವೇ ಫಲವತ್ತ್ವಾಸುಖಪ್ರದಂ ॥ ೩೦ ॥

ಕರ್ತಾ ನೋ ಮನ ಏವೇಹ ಯತ್ಕಲ್ಪಯತಿ ತತ್ತಥಾ ।
ನಿಯತಿಂ ಯಾದೃಶೀಮೇತತ್ಸಂಕಲ್ಪಯತಿ ಸಾ ತಥಾ ॥ ೩೧ ॥

ಉಂಟು. ಅದನ್ನೇ ಸಾಮಾನ್ಯನರು ದೈವದೈವ ಎಂದು ಕರೆಯುವರು. ತಿಳಿದವರು ದೈವವೆಂಬ ಪ್ರತ್ಯೇಕ ಪದಾರ್ಥವೊಂದುಂಟು ಎಂದು ಹೇಳುವುದಿಲ್ಲ.

೨೮. ತಿಳಿದವನು ಹೇಳುವ ದೈವವು ಬೇರೆ. ತನಗೆ ಬೇಕೆಂದ ಎಲ್ಲವೂ ಸಿಕ್ಕಿ, ಎಲ್ಲವೂ ಒಂದೇ ಎಂಬುವ ಸ್ಥಿತಿಯು ದೊರೆತಾಗ, ತನಗೆ ಲಭಿಸುವ ಲಾಭ ನಷ್ಟಗಳಿಂದ ಹರ್ಷ, ಅಮರ್ಷಗಳು ಮನಸ್ಸಿಗೆ ಬಂದು ಉದ್ವೇಗವಾಗದಿರಲಿ ಎಂದು ಜ್ಞಾನಿಯು ಒಂದು ದೈವವನ್ನು ಅಂಗೀಕರಿಸುವನು.

೨೯. ನಿಯತಿ ರೂಪವಾದ ದೈವವನ್ನೂ ಸಮ್ಯಗ್ ಜ್ಞಾನಶಕ್ತಿಯಿಂದಲೂ ಪೌರುಷದಿಂದಲೂ ಮೃಗತೃಷ್ಣೆಯ ಭ್ರಾಂತಿಯನ್ನು ಗೆಲ್ಲುವಂತೆ ಗೆಲ್ಲಬಹುದು.

(ಪಂಚದಶಿಯಲ್ಲಿ ಹೇಳಿರುವ ಈಶಸೃಷ್ಟಿ, ಜೀವಸೃಷ್ಟಿ ಭೇದವನ್ನು ಧ್ಯಾನಿಸಿ. ಜೀವಸೃಷ್ಟಿಯನ್ನು ಮೀರಿರುವ ಜೀವನ್ಮುಕ್ತನು ಈಶಸೃಷ್ಟಿಯಲ್ಲಿ ಇನ್ನೂ ಇರುವಾಗ ಅಂಗೀಕರಿಸುವ ದೈವವನ್ನೂ, ಅದರಿಂದ ತನಗೆ ಪ್ರತ್ಯವಾಯವು ಬರದಿರಲೆಂದು ಸಮ್ಯಗ್‌ಜ್ಞಾನ ಶಕ್ತಿಯನ್ನು ಆಶ್ರಯಿಸುವಿಕೆಯನ್ನೂ ಇಲ್ಲಿ ಹೇಳಿದೆ.)

೩೦. ಯಾವುದೇ ಆಗಲಿ ನಮ್ಮ ಪೌರುಷದಿಂದ ನಾವು ಅದನ್ನು ಹೇಗೆ ಬೇಕೆಂದರೆ ಹಾಗೆ ಕಲ್ಪಿಸಿಕೊಳ್ಳಬಹುದು. ನಾವು ಯಾವುದನ್ನು ಫಲಪ್ರದಾಯಕ ವೆಂದು ಅಂಗೀಕರಿಸುವೆವೋ ಅದೇ ನಮಗೆ ಫಲ ಕೊಡುವುದು.

೩೧. ಅದರಿಂದ ಫಲಾನುಭವರೂಪ ಭೋಕ್ತೃತ್ವಕ್ಕೆ ಸಂಕಲ್ಪ ಮಾಡುವ

ನಿಯತಾನಿಯತಾನ್ಕಾಂಶ್ಚಿದರ್ಥಾನನಿಯತಾನಪಿ ।
ಕರೋತಿ ಚಿತ್ತಂ ತೇನೈತಚ್ಚಿತ್ತಂ ನಿಯತಿಯೋಜಕಂ ॥ ೩೨ ॥

ನಿಯತ್ಯಾಂ ನಿಯತಿಂ ಕುರ್ವನ್ಕದಾಚಿ ತ್ಸ್ವಾರ್ಥನಾಮಿಕಾಂ ।
ಸ್ಫುರತ್ಯಸ್ಮಿಂಜಗತ್ಕೋಶೇ ಜೀವೋ ವ್ಯೋಮ್ನೀವ ಮಾರುತಃ ॥ ೩೩ ॥

ಮನವೇ ಕರ್ತೃವು ಎಂದು ನಮ್ಮ ಅಭಿಪ್ರಾಯವು. ಮನಸ್ಸು ಯಾವುದನ್ನು ಹೇಗೆ ಕಲ್ಪಿಸಿದರೆ ಅದು ಹಾಗೆಯೇ ಆಗುವುದು. ನಿಯತಿಯ ಸ್ವರೂಪವು ಇದು ಎಂದು ಮನಸ್ಸು ಗೊತ್ತುಮಾಡಿದರೆ, ಅದೇ ನಿಯತಿಯಾಗುವುದು.

(ಕರ್ತಾಜೀವೋನ । ಅಸ್ಮಾಕಂ ಮತೇ ಮನಏವ—ತಾ. ಪ್ರ.)

೩೨. ಚಿತ್ತವು ನಿಯತವನ್ನು ಅನಿಯತವನ್ನು ಗೊತ್ತುಮಾಡುವುದೂ ಚಿತ್ತವೇ ಆದಕಾರಣ, ಚಿತ್ತದಿಂದಲೇ ನಿಯತಿ ಎಂದು ಹೇಳಬೇಕು.

೩೩. ಈ ಸಂಸಾರದಲ್ಲಿರುವ ಜೀವನಿಗೆ, ಆಕಾಶದಲ್ಲಿ ವಾಯು ಸಂಚಾರವಾಗುವಂತೆ, ಹೀಗೆ ಸರ್ವಲೋಕದಿಂದ ಅಂಗೀಕೃತವಾದ (ಬಾಹ್ಯ) ನಿಯತಿಯಲ್ಲಿ ತನ್ನ ಸ್ವರೂಪವನ್ನು ತಾನು ನೋಡಿಕೊಳ್ಳುವುದೆಂಬ ಮತ್ತೊಂದು (ಅಂತರ್) ನಿಯತಿಯು ಯಾವಾಗಲೋ ಒಮ್ಮೆ ಹುಟ್ಟುವುದು.

(ಶ್ರೀವಿದ್ಯಾತತ್ವಜ್ಞರು ಸೃಷ್ಟಿ ಮುಖವಾಗಿರುವ ಬ್ರಹ್ಮವನ್ನು ಪ್ರಕಾಶವೆಂದೂ ಸೃಷ್ಟಿಯನ್ನೂ ವಿಮರ್ಶವೆಂದೂ ಹೇಳುವರು. ವಿಮರ್ಶದ ನಿಯತಿಯು ಪ್ರವೃತ್ತ್ಯಾತ್ಮಕವಾದುದು. ಮುಮುಕ್ಷುವಾಗುವ ಜೀವನಿಗೆ ನಿವೃತ್ತ್ಯಾತ್ಮಕವಾದ ನಿಯತಿಯು ಆಶ್ರಯಣೀಯವು. ಅದು ಕದಾಚಿತ್ತಾಗಿ ಮುಂದಕ್ಕೆ ಓಡುತ್ತಿರುವ ನೀರಿನಲ್ಲಿ ಹಠಾತ್ತಾಗಿ ಕಾಣಿಸುವ ಪ್ರತ್ಯಗ್ಗತಿಯಂತೆ ಪ್ರಕಟವಾಗಿ ಇವನನ್ನು ಬ್ರಹ್ಮದತ್ತ ಕೊಂಡೊಯ್ಯುವುದು.

ವಿಮರ್ಶಶಕ್ತಿಯ ನಿಯತಿಯು ಕೇಂದ್ರದಿಂದ ಪರಿಧಿಯ ಕಡೆಗೆ ಹೋಗುತ್ತಾ ಬಹಿರ್ಮುಖವಾಗಿರುವುದು. ಪ್ರಕಾಶಶಕ್ತಿಯ ನಿಯತಿಯು ಪರಿಧಿಯಿಂದ ಕೇಂದ್ರ ಕಡೆಗೆ ಹೋಗುತ್ತಾ ಅಂತರ್ಮುಖವಾಗಿರುವುದು.)

ನಿಯತ್ಯಾ ವಿಹಿತಂ ಕುರ್ವನ್ಕದಾಚಿನ್ನಿಯತಿಂ ಚರಃ ।
ಸಂಜ್ಞಾರ್ಥಂ ರೂಢನಿಯತಿಶಬ್ದಃ ಸ್ಫುರತಿ ಸಾನುವತ್ ॥ ೩೪ ॥

ತಸ್ಮಾದ್ಯಾವನ್ಮನಸ್ತಾವನ್ನ ದೈವಂ ನಿಯತಿರ್ನ ಚ ।
ಮನಸ್ಯಸ್ತಂಗತೇ ಸಾಧೋ ಯದ್ಭವತ್ಯಸ್ತು ತತ್ತಥಾ ॥ ೩೫ ॥

---

೩೪. ಇಂತಹ ಜೀವನು ನಿಯತಿಯಿಂದ ವಿಹಿತವಾದ ಕರ್ಮವನ್ನು ಮಾಡಲೂ ಮಾಡುವನು. ಇನ್ನು ಕೆಲವು ವೇಳೆ ನಿಯತಿಯನ್ನು ಮೀರಲೂ ಮೀರುವನು. ಆದರೆ ಇಂಥವನು ನಿಯತಿವಶನಾಗಿರುವನು ನಿಯತಿಯನ್ನು ಮೀರಿದನು ಎಂದು ಹೇಳುವುದು ಹೇಳುವುದು ಸಾನುಮಾನ್ಯಾಯದಿಂದ. ಆದರಿಂದ, ನಿಯತಿ ಶಬ್ದವು ಕೇವಲ ರೂಢವು. ಕೇವಲ ಸಂಜ್ಞಾಮಾತ್ರವಲ್ಲದೆ ಪರಮಾರ್ಥವಲ್ಲ.

(ಸಾನುಮಾನ್ಯಾಯ:—ಬೆಟ್ಟದ ತಪ್ಪಲಿನಲ್ಲಿ ಇರುವ ಗಿಡಗಳು ಅಲ್ಲಾಡುತ್ತಿದ್ದರೆ ಬೆಟ್ಟವೇ ಅಲ್ಲಾಡಿದಂತೆಯೂ, ಅವು ಸ್ಥಿರವಾಗಿದ್ದರೆ ಬೆಟ್ಟವು ಸ್ಥಿರವಾಗಿರುವುದೆಂದೂ ಹೇಳುವಂತೆ.

ವೈಭವವು ತಾತ್ಪರ್ಯ ಪ್ರಕಾಶವನ್ನು ಹಿಡಿದು ಹೀಗೆ ಬರೆದಿದೆ.

ಈ ರೀತಿಯಾಗಿ ಸಮಾಧಿಯಲ್ಲಿರತಕ್ಕ ಜೀವನು ಯಾವುದೋ ಒಂದು ಸಮಯದಲ್ಲಿ ಬಹಿರ್ಮುಖಸ್ಥಿತಿಯುಂಟಾದಾಗ, ಶಾಸ್ತ್ರವಿಧಿ ಚೋದಿತವಾದ ಸ್ವವರ್ಣ ಸ್ವಾಶ್ರಮೋಚಿತ ಕರ್ಮವನ್ನು ಮಾಡುತಿರುವನು. ಒಂದು ಬೆಟ್ಟದ ತಪ್ಪಲಿನಲ್ಲಿರುವ ಗಿಡಗಳು ಅಲ್ಲಾಡಿದಾಗ ಆ ತಪ್ಪಲೇ ಅಳ್ಳಾಡುವುದೆಂದೂ ಗಿಡಗಳು ಅಳ್ಳಾಡದಿರುವಾಗ ತಪ್ಪಲು ಸ್ಥಿರವಾಗಿರುವುದೆಂದೂ ಹೇಗೆ ವ್ಯವಹಾರ ವುಂಟಾಗುವುದೋ ಹಾಗೇ ಇವನೂ ಸ್ವಭಾವತಃ ಕರ್ಮಸಂಬಂಧ ಶೂನ್ಯನಾಗಿದ್ದರೂ ಲೋಕ ವ್ಯವಹಾರಾರ್ಥವಾಗಿ "ಇವನು ಶಿಷ್ಟನು. ಇವನು ಸದಾಚಾರ ಸಂಪನ್ನನು" ಇತ್ಯಾದಿ ಶಬ್ದಗಳು ಇವನಲ್ಲಿ ರೂಢವಾಗಿರುವುವು.

ನಾವು "ಕದಾಚಿನ್ನಿಯತಿಂಚರಃ" ಎಂಬಲ್ಲಿ ಆಗಾಗ ನಿಯತಿಯನ್ನು ಮೀರುವನು ಎಂದು ಅರ್ಥ ಮಾಡಿದ್ದೇವೆ.

೩೫. ಆದರಿಂದ, ಎಲ್ಲಿಯವರೆಗೆ ಮನಸ್ಸು ಇರುವುದೋ ಅಲ್ಲಿಯವರೆಗೆ

ಜೀವೋ ಹಿ ಪುರುಷೋ ಜಾತಃ ಪೌರುಷೇಣ ಸ ಯದ್ಯಥಾ ।
ಸಂಕಲ್ಪಯತಿ ಲೋಕೇಽಸ್ಮಿಂಸ್ತತ್ತಥಾ ತಸ್ಯ ನಾನ್ಯಥಾ ॥ ೨೬ ॥

ಪುರುಷಾರ್ಥಾದೃತೇ ಪುತ್ರ ನ ಕಿಂಚಿದಿಹ ವಿದ್ಯತೇ ।
ಪರಂ ಪೌರುಷಮಾಶ್ರಿತ್ಯ ಭೋಗೇಷ್ವರತಿಮಾಹರೇತ್ ॥ ೨೭ ॥

ದೈವವೂ ಇಲ್ಲ: ನಿಯತಿಯೂ ಇಲ್ಲ. ಆ ಮನಸ್ಸು ಅಸ್ತವಾಗಿ ಹೋದರೆ, ಎಲೆ ಸಾಧುವೆ, ಏನಾಗುವುದೋ ಅದು ಆಗಿಹೋಗಲಿ.

೨೬. ಜೀವನೇ ಪುರುಷನಾಗಿ ಎಂದರೆ ದೇಹಧಾರಿಯಾಗಿ ಹುಟ್ಟಿರುವನು ಎಂದ ಮೇಲೆ, ಅವನು ಪೌರುಷಮಾಡಿ ಏನೇನು ಆಗಬೇಕೆಂದು ಸಂಕಲ್ಪ ಮಾಡುವನೋ ಅದೆಲ್ಲವೂ ಹಾಗೆ ಹಾಗೆಯೇ ಆಗುವುದು.

(ವಿಭುವಾಗಿ ಎಂದರೆ ಸರ್ವವ್ಯಾಪಿಯಾಗಿರುವ ಆತ್ಮನೇ ಜೀವನಾಗಿದ್ದರೂ ತಾನು ಅಣುವೆಂದುಕೊಳ್ಳುವುದಕ್ಕೆ ಆಣವಮಲಸಂಪನ್ನನಾಗಿರುವುದೇ ಕಾರಣ ವೆಂದು ಶ್ರೀ ವಿದ್ಯಾತತ್ವಜ್ಞರ ಮತ. ಮಲವು ಆಣವ, ಮಾಯಿಕ, ಕಾರ್ಮಿಕ, ಎಂದು ಮೂರುವಿಧವಾಗಿರುವುದು. ವಿಭುವು ಅಣುವೆಂದುಕೊಂಡು ಪ್ರಾದೇಶಿಕ ಪರಿಚ್ಛೇದವನ್ನು ಒಪ್ಪಿಕೊಳ್ಳುವುದು ಮೊದಲನೆಯದರ ಫಲ. ಸರ್ವಜ್ಞನಾಗಿದ್ದರೂ ಅಜ್ಞನೆಂದುಕೊಳ್ಳುವುದು ಎರಡನೆಯ ದರ ಫಲ. ಆನಂದ ಸ್ವರೂಪನಾಗಿದ ರೂ ದುಃಖಿಯೆಂದುಕೊಳ್ಳುವುದು ಮೂರನೆಯದರ ಫಲ.

ವಸಿಷ್ಠರೂ ಹಿಂದೆ ಪಿಂಡಗ್ರಹ ನಿವೃತ್ತಿಯಾದವನಿಗೆ ವಿಭುತ್ವಾದಿಗಳೆಲ್ಲವೂ ಬರುವುವು ಎಂದು ಹೇಳಿರುವುದನ್ನೂ ಅದೇ ಅಂಶವನ್ನು ಮುಂದೆ ಬರುವ ಪ್ರಹ್ಲಾ ದೋಪಾಖ್ಯಾನದಲ್ಲಿ ವಿವರಿಸಿರುವುದನ್ನೂ ನೋಡಿ.)

(ಪುರುಷೋ ಜಾತಃ ಕರ್ಮಜ್ಞಾನಾದಿ ಶರೀರಂ ಪ್ರಾಪ್ತಸ್ಸ ಯದ್ಯಥಾ ಸಂಕಲ್ಪಯತಿ ತತ್ತಥಾ ಭವತೀತಿ ಸ್ವಾಯತ್ತೇ ಸಂಕಲ್ಪೇ ಪೌರುಷೇಣ ವೈರಾಗ್ಯಾದಿ ಸಾಧನಾನಿ ಸಂಪಾದ್ಯ ಪರಮಪುರುಷಾರ್ಥಾತ್ಮಕ ಬ್ರಹ್ಮಾತ್ಮಭಾವ ಏವ ಸಂಕಲ್ಪ ನೀಯಃ ನ ಸಂಸಾರೀ ಆತ್ಮಭಾವಃ ಇತ್ಯಾಶಯೇನಾಹ ಪುರುಷಾರ್ಥಾದೃತೇ ಇತ್ಯಾದಿನಾ—ತಾ. ಪ್ರ.)

೨೭. ಪುರುಷಕಾರವಲ್ಲದೆ, ಮಗನೆ, ಈ ಲೋಕದಲ್ಲಿ ಇನ್ನೇನೂ ಇಲ್ಲ.

ನ ಭೋಗೇಷ್ವರತಿರ್ಯಾವಜ್ಜಾಯತೇ ಭವನಾಶನೀ ।
ನ ಪರಾ ನಿರ್ವೃತಿಸ್ತಾವತ್ಪ್ರಾಪ್ಯತೇ ಜಯದಾಯಿನೀ । ॥ ೩೮ ॥

ವಿಷಯೇಷು ರತಿರ್ಯಾವತ್ಸ್ಥಿತಾ ಸಂಮೋಹಕಾರಿಣೀ ।
ತಾವದ್ಭವದಶಾದೋಲಾ ವಿಲೋಲಾನ್ದೋಲನಸ್ಥಿತಿಃ ॥ ೩೯ ॥

ಅಭ್ಯಾಸೇನ ವಿನಾ ಪುತ್ರ ನ ಕದಾಚನ ದುಃಖದಾ ।
ಭೋಗಭೋಗಿಭರಪ್ರೋತಾ ಕದಾಶಾ ವಿನಿವರ್ತತೇ ॥ ೪೦ ॥

ಆದ್ದರಿಂದ, ಉತ್ತಮವಾದ ಪೌರುಷವನ್ನೇ ಆಶ್ರಯಿಸಿ ವಿಷಯ ವಿರತಿಯನ್ನು ಸಾಧಿಸಬೇಕು.

೩೮. ಸಂಸಾರವನ್ನು ನಿವಾರಿಸುವ ಈ ವಿಷಯ ವಿರತಿಯು ಹುಟ್ಟುವವರೆಗೂ ಮನೋಜಯವನ್ನು ಕೊಡುವ ಪರ ನಿರ್ವೃತಿಯು ಲಭಿಸುವುದಿಲ್ಲ.

(ಗೀತೆಯು ಹೇಳುವುದನ್ನು ಹೋಲಿಸಿ:—

ಇಂದ್ರಿಯಗಳು ಭೋಗಸಮರ್ಥವಲ್ಲದಿರುವಾಗ ವಿಷಯಗಳು ದೂರವಾಗಿದ್ದರೂ, ಇಂದ್ರಿಯ ಮನೋಬುದ್ಧಿಗತವಾದ ಭೋಗಚಾಪಲ್ಯವು ತಪ್ಪುವುದಿಲ್ಲ. ಆ ಚಾಪಲ್ಯವೂ ತೀರಿಹೋಗುವುದು ಪರದರ್ಶನವಾದಾಗ—

ಇದೇ ಅಂಶವನ್ನು ಉದ್ಧವ ಗೀತೆಯಲ್ಲಿ ಚೆನ್ನಾಗಿ ವಿವರಿಸಿದ್ದಾರೆ.

ಇಲ್ಲಿ ಹೇಳುವ ಪರ ನಿರ್ವೃತಿಯು ಈ ಚಾಪಲ್ಯ ತೀರುವಿಕೆ, ಇದನ್ನೇ ಮುಂಡಕಾದಿಗಳಲ್ಲಿ ಹೃದಯ ಗ್ರಂಥಿ ವಿಚ್ಛೇದ, ಅವಿದ್ಯಾಗ್ರಂಥಿ ಭೇದ, ಇತ್ಯಾದಿಯಾಗಿ ಹೇಳಿರುವರು.

೩೯. ಮನೋಬುದ್ಧಿಗಳಿಗೆ ಸಮ್ಮೋಹವನ್ನುಂಟುಮಾಡುವ ವಿಷಯಾಭಿರತಿಯು ಎಲ್ಲಿಯವರೆಗೆ ಇರುವುದೋ ಅಲ್ಲಿಯವರೆಗೂ ಸಂಸಾರದಲ್ಲಿ ಒದ್ದಾಡುವುದೆಂಬ ತೊಟ್ಟಿಲ ತೂಗುವಿಕೆಯು ಇದ್ದೇ ಇರುವುದು.

೪೦, ಅಭ್ಯಾಸ ಮಾಡದೇ ಹೋದರೆ, ಮಗನೆ, ದುಃಖಪ್ರದವಾದ ಈ ಕದಾಶೆಯು, ಭೋಗಗಳೆಂಬ ಸರ್ಪಗಳಿಂದ ತುಂಬಿ ಯಾವಾಗಲೂ ಹೆದರಿಸುತ್ತಿರುವ ಈ ದುರಾಶೆ (ತೃಷ್ಣೆ)ಯು, ಹಿಂತಿರುಗುವುದೇ ಇಲ್ಲ.

(ಕದಾಶಾ–ಕುತ್ಸಿತಭೋಗಗಳಲ್ಲಿರುವ ಆಶೆ.)

ಬಲಿರುವಾಚ—

ಭೋಗೇಷ್ವರತಿರೇವಾಂತಃ ಕಥಂ ಸರ್ವಾಸುರೇಶ್ವರ ।
ಸ್ಥಿತಿಮಾಯಾತಿ ಜೀವಸ್ಯ ದೀರ್ಘಜೀವಿತದಾಯಿನೀ ॥ ೪೧ ॥

ವಿರೋಚನ ಉವಾಚ—

ಆತ್ಮಾವಲೋಕನಲತಾ ಫಲನೀ ಫಲಿತಿ ಸ್ಫುಟಂ ।
ಜೀವಸ್ಯ ಭೋಗೇಷ್ವರತಿಂ ಶರದೀವ ಮಹಾಲತಾ ॥ ೪೨ ॥

ಆತ್ಮಾವಲೋಕನೇನೈಷಾ ವಿಷಯಾರತಿರುತ್ತಮಾ ।
ಹೃದಯೇ ಸ್ಥಿತಿಮಾಯಾತಿ ಶ್ರೀರಿವಾಂಭೋಜಕೋಟರೇ ॥ ೪೩ ॥

ತಸ್ಮಾತ್ಪ್ರಜ್ಞಾನಿಕಾಷೇಣ ವಿಚಾರೇಣಾತಿಚಾರುಣಾ ।
ದೇವಮಾಲೋಕಯೇದ್ಭೋಗಾದ್ರತಿಂ ಚಾವಹರೇತ್ಸಮಂ ॥ ೪೪ ॥

---

೪೧. ಬಲಿಯು ಕೇಳಿದನು—ಸರ್ವಾಸುರರಿಗೂ ಈಶ್ವರನಾದ ತಂದೆಯೇ, ವಿಷಯವಿರತಿಯೇ ಎಲ್ಲದಕ್ಕೂ ಕೊನೆಯು. ಇದೇ ಶಾಶ್ವತಸ್ಥಿತಿಯನ್ನು ಕೊಡುವುದು ಎಂದಲ್ಲವೆ? ಆ ವಿಷಯ ವಿರತಿಯು ಅದೆಂತು ಕೈಸೇರುವುದು?

೪೨. ವಿರೋಚನನು ಹೇಳಿದನು—ಮಗನೆ, ಆತ್ಮದರ್ಶನವೆಂಬುದೊಂದು ಲತೆಯಿರುವುದು. ಅದು ಎಂದಿಗೂ ನಿಷ್ಫಲವಾಗುವುದಿಲ್ಲ. ಶರತ್ಕಾಲದಲ್ಲಿ ಫಲ" ಬಿಡುವ ಮಹಾಲತೆಯಂತೆ, ಅದು ತಪ್ಪದೆ, ಜೀವನಿಗೆ "ಭೋಗಗಳಲ್ಲಿ ವಿರತಿಯೆಂಬ ಸತ್ಫಲವನ್ನು ನೀಡುವುದು.

(ಫಲಿನೀ ಮೋಕ್ಷಫಲವತೀ ಭೋಗೇಷು ಅರತಿಂ ವೈರಾಗ್ಯಮವಾಂತರಫಲಂ ಫಲತಿ । ಯಥಾ ದ್ರಾಕ್ಷಾದಿಮಹಾಲತಾ ಶರದಿ ಶಲಾಟುಂ ಫಲತಿ ತದ್ವತ್. ತಾ.ಪ್ರ.)

(ಶಲಾಟು-ಹೀಚು.)

೪೩. ಕಮಲಗರ್ಭದಲ್ಲಿ ಶ್ರೀ ಮಹಾಲಕ್ಷ್ಮಿಯು ನೆಲಸುವಂತೆ, ಆತ್ಮದರ್ಶನ ಮಾಡಿದವನ ಹೃದಯದಲ್ಲಿ ವಿಷಯವೈರಾಗ್ಯವು ದೃಢವಾಗಿ ಸ್ಥಿತಿಯನ್ನು ಪಡೆಯುವುದು.

೪೪. ಅದರಿಂದ, ಪ್ರಜ್ಞಾ ಎಂಬ ಉತ್ತಮ ರತ್ನಕ್ಕೆ ಸಾಣೆಯೋ ಎಂಬಂತಿ

ರುವ ಉತ್ತಮವೂ ಸುಂದರವೂ ಆದ ವಿಚಾರದಿಂದ ಆತ್ಮದರ್ಶನವನ್ನು ಸಂಪಾದಿಸ ಬೇಕು. ಅದರ ಜೊತೆ ಜೊತೆಯಲ್ಲಿಯೇ ವೈರಾಗ್ಯವನ್ನೂ ಸಾಧಿಸಬೇಕು.

[ಹಿಂದೆ ಸ್ಥಿತಿಪ್ರಕರಣದಲ್ಲಿ ಶ್ರೀ ವಸಿಷ್ಠರು "ತ್ರಿಪುಟಿಯಲ್ಲಿ ಒಂದನ್ನು ಬಿಟ್ಟರೆ ಬ್ರಹ್ಮದರ್ಶನವಾಗುವುದು. ಒಂದು ವಿಷಯವನ್ನು ಕಾಣುತ್ತಿದ್ದು, ಅದನ್ನು ಬಿಟ್ಟು ಇನ್ನೊಂದು ವಿಷಯಕ್ಕೆ ತಿರುಗಿದಾಗ, ಅವೆರಡರ ನಡುವೆ ಇರುವ ಸಂಧಿಯಲ್ಲಿ ಬ್ರಹ್ಮ ದರ್ಶನವಾಗುವುದು" ಎಂದು ಹೇಳಿದ್ದಾರೆ. ಇದೇ ಅಂಶವನ್ನು ಮತ್ತೆ ನಿರ್ವಾಣ ಪ್ರಕರಣದ ಭುಶುಂಡೋಪಾಖ್ಯಾನದಲ್ಲಿ ಎತ್ತಿದ್ದಾರೆ.

ಬ್ರಹ್ಮದರ್ಶನ ವಿಚಾರವಾಗಿ ಹೇಳುತ್ತ ಗೀತೆಯು ೧೩ನೆಯ. ಅಧ್ಯಾಯದಲ್ಲಿ ಕ್ಷೇತ್ರ ಕ್ಷೇತ್ರಜ್ಞಯೋರ್ಜ್ಞಾನಂ ಯತ್‌ತಜ್ಞಾನಂ ಮತಂಮಮ ॥ ಎಂದು ಹೇಳಿ ಕ್ಷರಾಕ್ಷರ ಪುರುಷರಿಗೆ ಇರುವ ವ್ಯತ್ಯಾಸವನ್ನು ತೋರಿಸಿದೆ. ದೃಶ್ಯವಾದ ಪ್ರಪಂಚ ದಲ್ಲಿ ಕ್ಷರವು ಯಾವುದು ಅಕ್ಷರವು ಯಾವುದು ಎಂದು ಗೊತ್ತುಮಾಡಿಕೊಂಡು ಕ್ಷರ ವನ್ನು ಬಿಟ್ಟು ಅಕ್ಷರವನ್ನು ಹಿಡಿಯುವುದೇ ಇಷೀಕೋಪಾಸನೆಯು. ಇದನ್ನೇ ಭಗವಂತನು "ಯದ್ಯದ್ವಿಭೂತಿ ಮತ್ಸತ್ವಂ ಶ್ರಿಮದೂರ್ಜಿತಮೇವವಾ । ತತ್ತದೇವಾ ವಗಚ್ಛತ್ವಂ ಮಮತೇಜೋಂಶ ಸಂಭವಂ ॥ ಎಂದು ಹೇಳಿ ವಿಭೂತಿಯೋಗದಲ್ಲಿ ಸೂಚಿಸಿದ್ದಾನೆ.

ಹಾಗೆಯೇ "ಸರ್ವೇಂದ್ರಿಯ ಗುಣಾಭಾಸಂ ಸರ್ವೇಂದ್ರಿಯ ವಿವರ್ಜಿತಂ ಅಸಕ್ತಂ ಗುಣಭೃಚ್ಚೈವ ನಿರ್ಗುಣಂ ಗುಣ ಭೋಕ್ತೃ ಚ॥ "ಎಂದು ಹೇಳಿ ಬ್ರಹ್ಮವು ಅರ್ಥಾತ್ ಆತ್ಮವು ಇಂದ್ರಿಯಾತೀತವು ಎಂದು ಹೇಳಿದ್ದಾನೆ. ಈ ಇಂದ್ರಿಯಾತೀತ ವಾದ ಬ್ರಹ್ಮ(ಆತ್ಮ)ವನ್ನು ದರ್ಶನಮಾಡುವುದು ಎಂದರೆ ಹೇಗೆ? ಇಂದ್ರಿಯ ಕರ್ಮವಾದ ದರ್ಶನವು ಇಂದ್ರಿಯಾತೀತವಾದ ಬ್ರಹ್ಮಕ್ಕೆ ಅನ್ವಯಿಸುವುದು ಹೇಗೆ?

ತ್ರಿಪುಟಿಯು ದೃಕ್, ದೃಶ್ಯ, ದರ್ಶನ ಎಂಬ ಮೂರರಿಂದ ಕೂಡಿರುವುದು. "ಪಿಂಡಗ್ರಹ ನಿವೃತ್ತಿಯಾದವನಿಗೇ ವೇದಾಂತ" ಎಂಬ ವಸಿಷ್ಠೋಕ್ತಿಯನ್ನು ಆಧರಿಸಿ ವಿಚಾರ ಮಾಡುವಾಗ, ದೃಕ್, ದೃಶ್ಯಗಳಲ್ಲಿರುವ ಘನತ್ವಾದಿಗಳ ನಿವೃತ್ತಿಯಾಗಲು, ಇವೆರಡೂ ದರ್ಶನವೆಂಬ ಒಂದು ಕ್ರಿಯೆಯ ಎರಡು ಕೊನೆಗಳು ಎಂಬ ಸಿದ್ಧಾಂತವು ತಿಳಿಯುವುದು. ಆಗ ದೃಕ್ ದೃಶ್ಯಗಳಿಗಿರುವ ಪ್ರತ್ಯಕ್ತ್ವವು ಹಾರಿಹೋಗಿ ಎರಡೂ ಒಂದೇ ಆಗಿ,ದರ್ಶನವೊಂದೇ ನಿಲ್ಲುವುದು. ದೃಕ್ ದೃಶ್ಯಗಳಿಲ್ಲದ ದರ್ಶನವೇ ಆತ್ಮ. ಅದು ಇಂದ್ರಿಯಾತೀತವು.

ಚಿತ್ತಸ್ಯ ಭೋಗೈರ್ದ್ವೌ ಭಾಗೌ ಶಾಸ್ತ್ರೈರೇಕಂ ಪ್ರಪೂರಯೇತ್ ।
ಗುರುಶುಶ್ರೂಷಯಾ ಚೈಕಮವ್ಯುತ್ಪನ್ನಸ್ಯ ಸತ್ಕ್ರಮೇ ॥ ೪೫ ॥

ಹೀಗೆ ದರ್ಶನವು ಸಿಕ್ಕಿತೆನ್ನುವುದಕ್ಕೆ ಗುರುತೇನು ? ಎಂದು ವಿಮರ್ಶಿಸಿ ಕೊಂಡು ತನಗೆ ದರ್ಶನವಾಗಿದೆಯೇ ಎಂಬುದನ್ನು ತನಗೆ ಆಗಿರುವ ಅನುಭವ ಗಳಿಂದಲೇ ತಿಳಿದುಕೊಳ್ಳತಕ್ಕದ್ದು.

ಆತ್ಮದರ್ಶನವು ಆದಾಗ "ರಸೋಪ್ಯಸ್ಯ ಪರಂದೃಷ್ಟ್ವಾ ನಿವರ್ತತೇ" ಎಂಬಂತೆ, ಮೊದಲನೆಯದಾಗಿ ವಿಷಯ ವೈರಾಗ್ಯವು ತಾನೇ ತಾನಾಗಿ ಇಂದ್ರಿಯ ಚಾಪಲ್ಯವು ಕ್ಷೀಣವಾಗುತ್ತ ಹೋಗುವುದು. ಎರಡನೆಯದಾಗಿ ಏಕಾಂತದಲ್ಲಿ ಅಭಿರುಚಿಯು ಹುಟ್ಟುವುದು. ಮೂರನೆಯದಾಗಿ ಆತ್ಮಾರಾಮನಾಗುವನು. ನಾಲ್ಕನೆಯದಾಗಿ ಆತ್ಮಲಕ್ಷಣಗಳಾದ ವ್ಯಾಪ್ತ್ಯಾದಿ ಧರ್ಮಗಳು ಇವನಲ್ಲಿಯೂ ತಲೆದೋರಿ, ದೇಶಕಾಲಾದಿ ವಿಚ್ಛೇದರಹಿತ ವ್ಯಾಪ್ತಿಯು ಅನುಭವಕ್ಕೆ ಬರುವುದು. ಆಗ ಶಂಕರರು ಹೇಳುವ "ನಾನ್ಯತ್ಕಿಂಚನ ವಿದ್ಯತೇ ವಿಮೃಶತಾಂ ಯಸ್ಮಾತ್ಪರಸ್ಮಾತ್ ವಿಭೋಃ" ಎಂಬ ವಾಕ್ಯವು ಅನುಭವಕ್ಕೆ ಬರುವುದು.

ಇದೆಲ್ಲವೂ ದೇಹಾಭಿಮಾನವನ್ನು ಬಿಟ್ಟ ಮೇಲೆ ಆಗತಕ್ಕ ಅನುಭವಗಳು.

ಈ ಮೇಲಿನ ಶ್ಲೋಕದಲ್ಲಿ ಹೇಳಿರುವ "ವಿಚಾರ"ವನ್ನು ಕುರಿತು ಆಚಾರ್ಯರು "ಅನುಕೂಲ ತರ್ಕವನ್ನೇ ಹಿಡಿದು ವಿಚಾರಮಾಡಬೇಕು" ಎಂದು ಹೇಳಿರುವುದನ್ನು ಚಿಂತಿಸಿ. ವಿಚಾರವು ದೀವಿಗೆಯ ಹಾಗೆ. ಉಪಯೋಗಿಸುವವನಿಗೆ ವಿವೇಕವಿಲ್ಲದಿದ್ದರೆ ಅದರ ತಪ್ಪೇನೂ ಇಲ್ಲ.)

೪೫. ಸಂಸ್ಕಾರವಿಲ್ಲದ ಚಿತ್ತವಾದಲ್ಲಿ, ಕ್ರಮವಾಗಿ ಸಂಸ್ಕಾರವಾಗಲೆಂದು ಚಿತ್ತದಲ್ಲಿ ಎರಡು ಭಾಗವನ್ನು ಭೋಗಗಳಿಗೂ ಒಂದು ಭಾಗವನ್ನು ಶಾಸ್ತ್ರಕ್ಕೂ ಇನ್ನೊಂದು ಭಾಗವನ್ನು ಗುರುಶುಶ್ರೂಷೆಗೂ ಉಪಯೋಗಿಸುತ್ತಾ ಬರಬೇಕು.

(ತತ್ರ ಚಿತ್ತ ಪರಿಪಾಕ ಭೇದಾನುಸಾರೇಣ ಭೂಮಿಕಾಭೇದಾನ್ ವಿವಕ್ಷುಃ ಪ್ರಥಮ ಭೂಮಿಕಾಮಾಹ—ತಾ. ಪ್ರ.)

ಕಿಂಚಿದ್ವ್ಯುತ್ಪತ್ತಿಯುಕ್ತಸ್ಯ ಭಾಗಂ ಭೋಗೈಃ ಪ್ರಪೂರಯೇತ್ ।
ಗುರುಶುಶ್ರೂಷಯಾ ಭಾಗೌ ಭಾಗಂ ಶಾಸ್ತ್ರಾರ್ಥಚಿಂತಯಾ ॥ ೪೬ ॥

ವ್ಯುತ್ಪತ್ತಿಮನುಯಾತಸ್ಯ ಪೂರಯೇಚ್ಚೇತಸೋಽನ್ವಹಂ ।
ದ್ವೌ ಭಾಗೌ ಶಾಸ್ತ್ರವೈರಾಗ್ಯೈರ್ದ್ವೌ ಧ್ಯಾನಗುರುಪೂಜಯಾ ॥ ೪೭ ॥

ಸಾಧುತಾಮಾಗತೋ ಜೀವೋ ಯೋಗ್ಯೋ ಜ್ಞಾನಕಥಾಕ್ರಮೇ ।
ನಿರ್ಮಲಾಕೃತಿರಾದತ್ತೇ ಪಟ ಉತ್ತಮರಂಜನಾಂ ॥ ೪೮ ॥

ಶನೈಃ ಶನೈರ್ಲಾಲನೀಯಂ ಯುಕ್ತಿಭಿಃ ಪಾವನೋಕ್ತಿಭಿಃ ।
ಶಾಸ್ತ್ರಾರ್ಥಪರಿಣಾಮೇನ ಪಾಲಯೇಚ್ಚಿತ್ತಬಾಲಕಂ ॥ ೪೯ ॥

---

೪೬. ಕ್ರಮವಾಗಿ ಚಿತ್ತಕ್ಕೆ ಕಿಂಚಿತ್ತಾಗಿಯಾದರೂ ಸಂಸ್ಕಾರವು ಲಭಿಸಿದ ಮೇಲೆ, ಭೋಗಕ್ಕೆ ಒಂದು ಭಾಗವನ್ನೂ ಗುರುಶುಶ್ರೂಷಣಕ್ಕೆ ಎರಡು ಭಾಗವನ್ನೂ ಶಾಸ್ತ್ರಚಿಂತನಕ್ಕೆ ಇನ್ನೊಂದು ಭಾಗವನ್ನೂ ಉಪಯೋಗಿಸಬೇಕು.

೪೭. ಚಿತ್ತಕ್ಕೆ ಸಂಸ್ಕಾರವು ಬಲಿಯುತ್ತ ಬಂದಂತೆಲ್ಲ, ದಿನ ದಿನವೂ ಶಾಸ್ತ್ರ ವೈರಾಗ್ಯ ಸಾಧನಗಳಿಗಾಗಿ ಎರಡು ಭಾಗಗಳನ್ನೂ ಧ್ಯಾನ ಗುರುಪೂಜೆಗಳಿಂದ ಇನ್ನೆರಡು ಭಾಗಗಳನ್ನೂ ಕಳೆಯಬೇಕು.

(ರತ್ನತತ್ವವತ್ ಚಿರಪರೀಕ್ಷಣೇನ ತತ್ವತೋ ಅವಧಾರಣಂ ವ್ಯುತ್ಪತ್ತಿಃ— ತಾ. ಪ್ರ.)

೪೮. ಚೆನ್ನಾಗಿ ಒಗೆದ ಬಟ್ಟೆಯು ಬಣ್ಣವನ್ನು ಹಿಡಿಯಲು ಯೋಗ್ಯವಾಗುವಂತೆ, ಮೇಲೆ ಹೇಳಿದಂತೆ ಸಂಸ್ಕಾರವನ್ನು ಪಡೆದ ಜೀವನು ಜ್ಞಾನಕ್ಕೆ ಅಧಿಕಾರಿಯಾಗುವನು.

(ಚತುರ್ವಿಧೇಽಪಿ ಕ್ರಮೇ ಶುದ್ಧ ಚಿತ್ತ ಏವಾಧಿಕಾರೀ ನಾನ್ಯ ಇತ್ಯಾಹ- ತಾ.ಪ್ರ.)

೪೯. ಚಿತ್ತವೆಂಬ ಬಾಲಕನನ್ನು ಮೆತ್ತಮೆತ್ತಗೆ, ಯುಕ್ತಿಗಳಿಂದಲೂ ಪವಿತ್ರವಾದ ಸ್ಮರಣಾದಿಗಳಿಂದಲೂ ಶಾಸ್ತ್ರಾರ್ಥವನ್ನು ಆಚರಿಸುವುದರಿಂದಲೂ ಮಕ್ಕಳನ್ನು ರಂಜಿಸುವಂತೆ ರಂಜಿಸುತ್ತಾ ದಾರಿಗೆ ತರಬೇಕು.

(ಯುಕ್ತಿಭಿಃ ದುಃಖ-ಅನ್ವಯ ವ್ಯತಿರೇಕ ಪ್ರದರ್ಶನೈಃ ಪಾವನೋಕ್ತಿಭಿಃ

ಪರೇ ಪರಿಣತಂ ಜ್ಞಾನೇ ಶಿಥಿಲೀಭೂತದುರ್ಗ್ರಹಂ ।
ಜ್ಯೋತ್ಸ್ನಾಽಹೀನಸ್ಫಟಿಕವಚ್ಚೇತಃ ಶೀತಂ ವಿರಾಜತೇ ॥ ೫೦ ॥

ಪ್ರಜ್ಞಯಾ ಪರಯಾ ಋಜ್ವ್ಯಾ ಭೋಗಾನಾಮೀಶ್ವರಸ್ಯ ಚ ।
ಸಮಮೇವಾಥ ದೇಹಸ್ಯ ರೂಪಮಾಶ್ವವಲೋಕಯೇತ್ ॥ ೫೧ ॥

ಶ್ರುತಿ ಸ್ಮೃತಿಗುರೂಕ್ತಿಭಿಃ ಶಾಸ್ತ್ರಾರ್ಥೇ ಚಿತ್ತಸ್ಯ ಪರಿಣಾಮಃ ಚಿತ ಪರಿಶೀಲನೇನ ಸ ಶರ್ಕರಾಮಲಕವತ್ ಮಧುರೈಕರಸಸ್ಯ ಪರಿಣತಿಃ ತೇನ— ತಾ. ಪ್ರ)

೫೦. ಆತ್ಮಜ್ಞಾನದಲ್ಲಿ ಪರಿಣತಿಯನ್ನು ಹೊಂದಿದ ಮನಸ್ಸು ತನ್ನಲ್ಲಿರುವ ಮಾಲಿನ್ಯವನ್ನು ಎಂದರೆ ಜಗತ್ತು ಸತ್ಯವೆಂಬ ಭಾವವನ್ನು ಬಿಡುವುದು. ಬೆಳುದಿಂಗಳಿನಲ್ಲಿ ಇಟ್ಟಿರುವ ಸ್ಫಟಿಕವು ಬೆಳುದಿಂಗಳಿನ ಮುದ್ದೆಯೇ ಆಗಿ ತೋರುವಂತೆ, ಶಾಂತವಾಗಿ ವಿರಾಜಿಸುವುದು.

(ಶಿಥಿಲೀಭೂತೋ ದುರ್ಗ್ರಹೋ ಬಾಹ್ಯಮಲಿನ ಜಡಾಕಾರಗ್ರಹಣಂ ಯಸ್ಯ । ಜ್ಯೋತ್ಸ್ನಯಾ ಅಹೀನೇನ ಅಪೃಥಗ್ಭೂತೇನ ಸ್ಫಟಿಕೇನ ತುಲ್ಯಂ ಚಿತ್ಪ್ರಕಾಶಸಮರಸಮಿತಿ ಯಾವತ್ ಲೀನೇತಿ ಪಾಠೇ ಸ್ಪಷ್ಟಂ। ಶೀತಂ ನಿಸ್ತಾಪಂ— ತಾ. ಪ್ರ.)

(ಇಲ್ಲಿ ಬೆಳುದಿಂಗಳಿನಲ್ಲಿ ಇಟ್ಟ ಸ್ಫಟಿಕವೆಂದು ಹೇಳಿರುವ ದೃಷ್ಟಾಂತವು ಭೇದ ಅಭೇದ ಎರಡನ್ನೂ ಎಷ್ಟು ಚೆನ್ನಾಗಿ ತೋರಿಸುವುದು ಚಿಂತಿಸಿ.)

೫೧. (ಭೇದ, ವೈಷಮ್ಯ, ಕೌಟಿಲ್ಯಗಳಿಲ್ಲದೆ) ಋಜುವಾಗಿರುವ, (ಬ್ರಹ್ಮಾಕಾರವಾಗಿರುವುದರಿಂದ) ಉತ್ತಮವಾಗಿರುವ, ಪ್ರಜ್ಞೆಯನ್ನು ಪಡೆದವನು ಭೋಗಗಳಿಗೆಲ್ಲ (ಎಂದರೆ ಭೋಗಸಾಧನಗಳಾದ ಇಂದ್ರಿಯವೃತ್ತಿಗಳಿಗೆಲ್ಲ) ಈಶ್ವರನಾಗಿರುವ ಜೀವವನ್ನೂ, ಭೋಗಗಳಿಗೆಲ್ಲ ಆಯತನವಾಗಿರುವ ದೇಹವನ್ನು ಒಂದೇ ಕಾಲದಲ್ಲಿ ನೋಡುವನು (ಎಂದರೆ ಜೀವದೇಹಗಳೆರಡಕ್ಕೂ ಅಧಿಷ್ಠಾನವಾಗಿರುವ ಸಚ್ಚಿದಾನಂದ, ಅದ್ವಯ, ಏಕರಸವಾಗಿ, ಅಧಿಷ್ಠಾನವಾಗಿರುವ, ಬ್ರಹ್ಮಸ್ವರೂಪವನ್ನೇ ಕಾಣುವನು.

ಗೀತೆಯಲ್ಲಿ ಹದಿನೆಂಟನೆಯ ಅಧ್ಯಾಯದಲ್ಲಿ ಹೇಳಿರುವ ಸಾತ್ವಿಕ ಬುದ್ಧಿಯನ್ನೇ ಇಲ್ಲಿ ಪರಾಪ್ರಜ್ಞೆಯೆಂದು ಹೇಳಿದೆ. ಋಜ್ವೀ ಎಂಬ ವಿಶೇಷದಿಂದಲೂ ಹಿಂದಿನ ಶ್ಲೋಕದಲ್ಲಿ ಶಿಥಿಲೀಭೂತದುರ್ಗ್ರಹಂ ಎಂದು ಹೇಳಿರುವುದರಿಂದಲೂ ಇಲ್ಲಿ ಬುದ್ಧಿಗೆ ಇರುವ ಇತರ ಗ್ರಹಗಳು (complexes) ಯಾವುದೂ ಇಲ್ಲದೆ ಸಹಜವಾಗಿರುವ

ಬುದ್ಧಿ, ಗೀತೆಯು ಹೇಳುವ ("ಯದಾತೇ ಮೋಹಕಲಿಲಂ ಬುದ್ಧಿರ್ವ್ಯತಿತರಿಷ್ಯತೀ ॥ ತದಾಗಂತಾಸಿ ನಿರ್ವೇದಂ ಶ್ರೋತವ್ಯಸ್ಯ ಶ್ರುತಸ್ಯಚ") ಮೊಹಕಲಿಲವನ್ನು ದಾಟಿರುವ ಬುದ್ಧಿ, (ಇಂದ್ರಿಯಾಣಿ ಮನೋಬುದ್ಧಿ ರಸ್ಯಾಧಿಷ್ಠಾನ ಮುಚ್ಯತೇ ॥.... ಜಹಿಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಂ")ಪೂರ್ಣವನ್ನು ಅಪೂರ್ಣವೆಂಬ ಭ್ರಾಂತಿ ಹಿಡಿಯುವಂತೆ ಮಾಡುವ ಮಹಾಶತ್ರುವಾದ ಕಾಮವನ್ನು ಹೊರನೂಕಿರುವ ಸದ್ಬುದ್ಧಿ ಎಂದು ಅರ್ಥಮಾಡಬೇಕು.

ಹಾಗೆಯೇ ಪಂಚದಶಿಯಲ್ಲಿ ಮೊದಲನೆಯ ಪ್ರಕರಣವಾದ ಪ್ರತ್ಯಕ್ತತ್ವ ವಿವೇಕದಲ್ಲಿ ಹೇಳಿರುವ ಸೃಷ್ಟಿ ಪ್ರಕಾರವನ್ನು ಗಮನಿಸಿ:—

ಅನ್ವಯ ವ್ಯತಿರೇಕ ಕ್ರಮವಾಗಿ ಜಾಗ್ರತ್ಸ್ವಪ್ನ ಸುಷುಪ್ತಿಗಳಲ್ಲಿರುವ ಸಂವಿತ್ತು ಏಕರೂಪವಾದ್ದರಿಂದ ಏಕವೆಂದು ನಿರೂಪಿಸಿ, ಸಂವಿತ್ತು ತನ್ನ ಸ್ವಸ್ವರೂಪವನ್ನು ಸರಿಯಾಗಿ ಗ್ರಹಿಸಲು ಇರುವ ಪ್ರತಿಬಂಧ ಸ್ವರೂಪವನ್ನು ೧೫ ನೆಯ ಶ್ಲೋಕದಿಂದ ಮುಂದಕ್ಕೆ ಹೀಗೆ ಹೇಳಿದೆ:—

ಸಚ್ಚಿದಾನಂದ ಬ್ರಹ್ಮದ ಪ್ರತಿಬಿಂಬದೊಡನೆ ಕೂಡಿರುವ ಸತ್ತ್ವರಜಸ್ತಮೋ ಗುಣಗಳ ಸಾಮ್ಯಾವಸ್ಥೆಯು ಯಾವುದುಂಟೋ ಅದೇ ಪ್ರಕೃತಿಯು. ಆ ಪ್ರಕೃತಿಯ ಶುದ್ಧಸತ್ವದಲ್ಲಿ ಪ್ರತಿಬಿಂಬಿಸಿದ ಬ್ರಹ್ಮವೇ ಈಶ್ವರನಾಗುವುದು. ರಜಸ್ತಮೋಗುಣ ಗಳೊಡನೆ ಬೆರೆದು ಅಶುದ್ಧ (ಮಲಿನ)ವಾಗಿರುವ ಸತ್ವದಲ್ಲಿ ಪ್ರತಿಬಿಂಬಿಸಿದ ಬ್ರಹ್ಮವೂ ಜೀವನಾಗುವುದು. ಶುದ್ಧಸತ್ವವು ಮಾಯೆಯು, ಅಶುದ್ಧಸತ್ವವು ಅವಿದ್ಯೆಯು. ಹೀಗೆ ಪರಬ್ರಹ್ಮ ಚೈತನ್ಯವನ್ನು ಪ್ರತಿಬಿಂಬವಾಗಿ ಧರಿಸಿದ ಅವಿದ್ಯೆಯೇ ಕಾರಣ ಶರೀರವಾಗುವುದು. ಆ ಪ್ರತಿಬಿಂಬವೇ ಜೀವನಾಗುವುದು. ಕಾರಣ ಶರೀರವನ್ನೇ ತಾನೆಂದುಕೊಂಡು ಅಭಿಮಾನಿಸುವ ಜೀವನು ಪ್ರಾಜ್ಞನಾಗುವನು. (ಶ್ಲೋ. ೧೭)

ರಜೋಗುಣದ ಬಲದಿಂದ ಪ್ರತ್ಯೇಕತ್ವವನ್ನು ಸಿದ್ಧಿಗೊಳಿಸುವ ಅವಿದ್ಯೆಯು ತಮೋಗುಣವನ್ನು ಆಶ್ರಯಿಸಿ, ಈಶ್ವರಾಜ್ಞೆಯಿಂದ ಜೀವಭೋಗಾರ್ಥವಾಗಿ ಪಂಚ ಭೂತಗಳನ್ನು ಸೃಷ್ಟಿಸುವುದು. (೧೮)

ಆ ಪಂಚಭೂತಗಳ ಸತ್ವಾಂಶದಿಂದ ಜ್ಞಾನೇಂದ್ರಿಯಗಳೂ (೧೯) ಅಂತಃ ಕರಣವೂ ಹುಟ್ಟುವುವು. (ಸಂಶಯಾತ್ಮಕವಾದ ಮನಸ್ಸು, ನಿಶ್ಚಯಾತ್ಮಕವಾದ ಬುದ್ಧಿ ಇವೆರಡೂ ಅಂತಃಕರಣದ ವೃತ್ತಿ ರೂಪಗಳು.) (೨೦)

ಪ್ರಜ್ಞಾವಿಚಾರವಶತಃ ಸಮಮೇವ ಸದಾ ಸುತ ।
ಆತ್ಮಾವಲೋಕನಂ ತೃಷ್ಣಾಸಂತ್ಯಾಗಂ ಚ ಸಮಾಹರೇತ್ ॥ ೫೨ ॥

ಆ ಪಂಚಭೂತಗಳ ರಜೋಗುಣದಿಂದ ಕರ್ಮೇಂದ್ರಿಯಗಳು ಹುಟ್ಟಿದುವು (೨೧) ಸಮಷ್ಟ್ಯಂಶದಿಂದ ಪಂಚವೃತ್ತಿಗಳಿರುವ ಪ್ರಾಣವು ಹುಟ್ಟಿತು. (೨೨)

ಹೀಗೆ ಪಂಚಭೂತಗಳ ಸತ್ವರಜೋ ಗುಣಗಳ ವ್ಯಷ್ಟಿ (ಪ್ರತ್ಯೇಕ) ಸಮಷ್ಟಿ (ಎಲ್ಲ ಕೂಡಿದ್ದು) ಅಂಶಗಳಿಂದ ಹುಟ್ಟಿದ ಜ್ಞಾನೇಂದ್ರಿಯಗಳೈದು, ಕರ್ಮೇಂದ್ರಿಯಗಳೈದು, ಪ್ರಾಣಗಳೈದು, ಮನೋಬುದ್ಧಿಗಳೆರಡು, ಇವಿಷ್ಟೂ ಸೇರಿ ಸೂಕ್ಷ್ಮ ಶರೀರವಾಗುವುದು. ಕಾರಣ ಶರೀರಾಭಿಮಾನಿಯಾಗಿ ಪ್ರಾಜ್ಞನೆಂಬ ಹೆಸರು ಪಡೆದಿದ್ದ ಜೀವನು ಈ ಸೂಕ್ಷ್ಮ ಶರೀರದ ಅಭಿಮಾನಿಯಾಗಿ ಇದೇ ತಾನು ಎಂದು ಕೊಂಡಾಗ ತೈಜಸನೆನ್ನಿಸಿಕೊಳ್ಳುವನು. (೨೩–೨೪)

ಹೀಗೆ ಪರಮೇಶ್ವರನ ಅಪ್ಪಣೆಯಿಂದ ಆ ಜೀವದ ಭೋಗಕ್ಕೋಸ್ಕರ ಭೋಗಕ್ಕೆ ಆಶ್ರಯವಾದ ದೇಹವನ್ನು ಆ ಪಂಚಭೂತಗಳ ತಮೋಂಶವನ್ನು ಪಂಚೀಕರಣ ಮಾಡಿ ಸ್ಥೂಲ ದೇಹವು ರಚಿತವಾಗುವುದು. (೨೬–೨೭)

ಈ ತೈಜಸ ನಾಮಕರಾದ ಜೀವರಲ್ಲಿ ದೇವ, ತಿರ್ಯಜ್, ಮನುಷ್ಯ ಎಂಬ ಮೂರು ಭೇದಗಳು. ಅವರು ತಮ್ಮ ಸ್ವಸ್ವರೂಪವನ್ನು ಕಾಣದವರಾಗಿ, ಬಾಹ್ಯ ವಿಷಯಗಳನ್ನೇ ನೋಡುವವರಾದರು. (೨೯)

ಇಂತಹ ಈ ಜೀವರು ಭೋಗಕ್ಕಾಗಿ ಕರ್ಮಮಾಡುತ್ತ, ಮಾಡಿದ ಕರ್ಮದ ಫಲವನ್ನು ಅನುಭವಿಸುತ್ತ, ನದಿಯಲ್ಲಿರುವ ಹುಳುಗಳು ಸುಳಿಯಿಂದ ಸುಳಿಗೆ ಹೋಗುತ್ತಾ ಒದ್ದಾಡುವಂತೆ ಒದ್ದಾಡುತ್ತಿದ್ದು, ಕಾಲಾಂತರದಲ್ಲಿ ಕರುಣಾನಿಧಿಯಾದ ಗುರುವಿನಿಂದ ಉದ್ಧೃತರಾಗುವರು. (೩೦ ೩೧)

(ಕೀದೃಶೀ ಪರೇ ಪರಿಣತಿಃ ತಾಂ ದರ್ಶಯತಿ. ತಾ. ಪ್ರ.)

೫೨. (ಮೇಲೆ ಹೇಳಿದಂತಹ)ಪ್ರಜ್ಞೆಯನ್ನು ಮುಂದುಮಾಡಿಕೊಂಡು ವಿಚಾರ ಮಾಡುತ್ತಾ ಆತ್ಮದರ್ಶನವನ್ನೂ ತೃಷ್ಣಾತ್ಯಾಗವನ್ನೂ ಏಕಕಾಲದಲ್ಲಿಯೇ ಸಾಧಿಸಬೇಕು.

ಪರದೃಷ್ಟೌ ವಿತೃಷ್ಣತ್ವಂ ತೃಷ್ಣಾಭಾವೇ ಚ ದೃಕ್ಪರಾ ।
ಏತೇ ಮಿಥಃ ಸ್ಥಿತೇ ದೃಷ್ಟೀ ತೇಜೋಪದೀಪದಶೇ ಯಥಾ ॥ ೫೩ ॥

ಭೋಗಪೂಗೇ ಗತಾಸ್ವಾದೇ ದೃಷ್ಟೇ ದೇವೇ ಪರಾವರೇ ।
ಪರೇ ಬ್ರಹ್ಮಣಿ ವಿಶ್ರಾಂತಿರನಂತೋದೇತಿ ಶಾಶ್ವತೀ ॥ ೫೪ ॥

ವಿಷಯಾಕಲಿತಾನಂದಂ ನಾನಂತೋದೇತಿ ನಿರ್ವೃತಿಃ ॥ ೫೫ ॥

ನ ಕದಾಚನ ಜೀವಾನಾಮಾತ್ಮವಿಶ್ರಮಣಾದೃತೇ ।
ಯಜ್ಞದಾನತಪಸ್ತೀರ್ಥಸೇವಾಭಿರ್ಜಾಯತೇ ಸುಖಂ ॥ ೫೬ ॥

---

೫೩. ಆತ್ಮದರ್ಶನದಿಂದ ವಿತೃಷ್ಣೆಯುಂಟಾಗುವುದು. ತೃಷ್ಣಾಭಾವದಿಂದಲೇ ಆತ್ಮದರ್ಶನವಾಗುವುದು. ಅಗ್ನಿಯು ತೇಜೋರೂಪವಾಗಿ ಕತ್ತಲನ್ನೂ ನೀಗುತ್ತಲೂ, ದೀಪವಾಗಿ ತೈಲ ಕುಡಿಯುತ್ತಲೂ ಇರುವಂತೆ (ಒಂದೇ ಕ್ರಿಯೆಯು ವಿತೃಷ್ಣೆಯನ್ನೂ ಆತ್ಮದರ್ಶನವನ್ನೂ ಏಕಕಾಲದಲ್ಲಿಯೇ ಸಾಧಿಸುವುದು.)

(ವಿಚಾರಫಲಂ ಪುರುಷಾಪರಾಧ ನಿವೃತ್ತಿಃ ಜ್ಞಾನಫಲಂ ಮೂಲಾವಿದ್ಯಾನಿವೃತ್ತಿಶ್ಚ ॥ ನ ಪೃಥಕ್ ಸಿದ್ಧ್ಯತೇ ಇತ್ಯಾಹ । ಯಥಾವಹ್ನೇಃ ತೇಜೋದಶಾ ಪ್ರಭಾವಸ್ಥಾ, ದೀಪದಶಾದೀಪಾಕಾರಾವಸ್ಥಾ ಚ ತಿಮಿರತೈಲ ಉಭಯ ನಿವರ್ತಿಕೇ ಮಿಥಃ ಅನ್ಯೋನ್ಯ ಯೌಗಪದ್ಯೇನ ಸ್ಥಿತೇ ತದ್ವದಿತ್ಯರ್ಥ:—ತಾ.ಪ್ರ.)

೫೪. ಭೋಗಸಮುದಾಯದಲ್ಲಿ ರುಚಿಯು ತಪ್ಪಿಹೋಗಿ, ಪರಾತ್ಪರವಸ್ತುವಿನ ದರ್ಶನವಾದಮೇಲೆ, ಆ ಪರಬ್ರಹ್ಮದಲ್ಲಿ ನಿಲುವಿಕೆಯಾಗಿ, ಶಾಶ್ವತವಾದ ವಿಶ್ರಾಂತಿಯು ಲಭಿಸುವುದು.

೫೫. ವಿಷಯಾನುಭವದಿಂದ ಆನಂದವು ಎಂದುಕೊಂಡಿರುವವರೆಗೂ ಅನಂತವಾದ ನಿರ್ವೃತಿಯು ಹುಟ್ಟುವುದಿಲ್ಲ.

೫೬. ಜೀವರಿಗೆ ಯಾವಾಗಲೇಆಗಲಿ (ಪರನಿರ್ವೃತಿರೂಪವಾದ) ಸುಖವು

ನ ತಪೋಭಿರ್ನ ದಾನೇನ ನ ತೀರ್ಥೈರಪಿ ಜಾಯತೇ
ಭೋಗೇಷು ವಿರತಿರ್ಜಂತೋಃ ಸ್ವಭಾವಾಲೋಕನಾದೃತೇ । ॥ ೫೬ ॥

ಕಯಾಚಿದಪಿ ನೋ ಯುಕ್ತ್ಯಾ ಬುದ್ಧಿರಾತ್ಮಾವಲೋಕನೇ
ಸ್ವಪ್ರಯತ್ನಾದೃತೇ ಪುಂಸಃ ಶ್ರೇಯಸೇ ಸಂಪ್ರವರ್ತತೇ । ॥ ೫೭ ॥

ಭೋಗಸಂತ್ಯಾಗಸಂಪ್ರಾಪ್ತಪರಮಾರ್ಥಾದೃತೇ ಸುತ
ನ ಬ್ರಹ್ಮಪದವಿಶ್ರಾಂತಿಸುಖಮಾಸಾದ್ಯತೇ ಪರಂ । ॥ ೫೮ ॥

ಆಬ್ರಹ್ಮಸ್ತಂಭಪರ್ಯಂತೇ ಜಗತ್ಯಸ್ಮಿನ್ನ ಕುತ್ರಚಿತ್ ।
ತದ್ವದಾಶ್ವಸ್ಯತೇ ಭಾತೇ ಪರಮೇ ಕಾರಣೇ ಯಥಾ ॥ ೫೯ ॥

ಯಜ್ಞ,ದಾನ, ತಪಸ್ಸು, ತೀರ್ಥಯಾತ್ರೆ, ಸೇವೆಗಳಿಂದ, ಲಭಸುವುದಿಲ್ಲ, ಆ ನಿರ್ವೃತಿ ಸುಖವು ಆತ್ಮನಲ್ಲಿ ವಿಶ್ರಾಂತಿ ಪಡೆಯುವುದು ಒಂದರಿಂದಲೇ ಲಭಿಸುವುದು.

೫೬. ಎಷ್ಟು ತಪಸ್ಸು ಮಾಡಿದರೂ, ಎಷ್ಟು ದಾನಗಳನ್ನು ಕೊಟ್ಟರೂ, ಎಷ್ಟು ತೀರ್ಥಯಾತ್ರೆಗಳನ್ನು ಆಚರಿಸಿದರೂ ಜೀವರಿಗೆ ವಿಷಯವಿರತಿಯು ಲಭಿಸುವುದಿಲ್ಲ: ವಿಷಯ ವಿರತಿಯು ಲಭಿಸುವುದು ಸ್ವ-ಭಾವ-ಆಲೋಕನದಿಂದ ಮಾತ್ರವೇ !

೫೭. ಪ್ರಬಲವಾದ ಪ್ರಯತ್ನವಿಲ್ಲದೆ ಹೋದರೆ ಏನೇನು ಸಾಧನಗಳನ್ನು ಅವಲಂಬಿಸಿದರೂ ಬುದ್ಧಿಯು ನಿಶ್ಶ್ರೇಯಸ್ಸ್ವರೂಪವಾದ ಆತ್ಮಾವಲೋಕನದಲ್ಲಿ ಪ್ರವರ್ತಿಸುವುದೇ ಇಲ್ಲ.

೫೮. ಭೋಗಗಳನ್ನು ಬೇಡವೆನ್ನುವ ವೈರಾಗ್ಯವು ಲಭಿಸುವವರೆಗೂ ಬ್ರಹ್ಮ ಪದದಲ್ಲಿ ಪಡೆಯುವ ವಿಶ್ರಾಂತಿಯೆಂಬ ಉತ್ತಮ ಸುಖವು ಲಭಿಸುವುದೇ ಇಲ್ಲ.

೫೯. ಬ್ರಹ್ಮದಿಂದ ಹಿಡಿದು ಸ್ತಂಬ (ಸಣ್ಣಕ್ರಿಮಿ)ದವರೆಗಿರುವ ಈ ಜಗತ್ತಿನ ಲ್ಲೆಲ್ಲಾ ಹುಡುಕಿದರೂ, ಕಾರಣವಾದ ಬ್ರಹ್ಮದ ದರ್ಶನವು ಲಭಿಸಿದಾಗ ಉಂಟಾಗುವ ಆನಂದವು ಇನ್ನು ಯಾತರಿಂದಲೂ ಉಂಟಾಗುವುದಿಲ್ಲ.

ಪೌರುಷಂ ಯತ್ನಮಾಶ್ರಿತ್ಯ ದೈವಂ ಕೃತ್ವಾ ಸುದೂರತಃ ।
ಭೋಗಾನ್ವಿಗರ್ಹಯೇತ್ಪ್ರಾಜ್ಞಃ ಶ್ರೇಯೋದ್ವಾರದೃಢಾರ್ಗಲಾ ॥ ೬೦ ॥

ಪ್ರೌಢಾಯಾಂ ಭೋಗಗರ್ಹಾಯಾಂ ವಿಚಾರ ಉಪಜಾಯತೇ
ವೃದ್ಧಾಯಾಂ ಪ್ರಾವೃಷಿ ಶ್ರೀಮಾ೯ ಶರತ್ಕಾಲ ಇವಾಮಲಃ ॥ ೬೧ ॥

ವಿಚಾರೋ ಭೋಗಗರ್ಹಾತೋ ವಿಚಾರಾದ್ಭೋಗಗರ್ಹಣಂ।
ಅನ್ಯೋನ್ಯಮೇತೇ ಪೂರ್ಯೇತೇ ಸಮುದ್ರಜಲದಾವಿವ ॥ ೬೨ ॥

ಭೋಗಗರ್ಹಾವಿಚಾರಶ್ಚ ಸ್ವಾತ್ಮಾಲೋಕಶ್ಚ ಶಾಶ್ವತಃ ।
ಅನ್ಯೋನ್ಯಂ ಸಾಧಯಂತ್ಯರ್ಥಂ ಸುಸ್ನಿಗ್ಧಾಃ ಸುಹೃದೋ ಯಥಾ ॥ ೬೩ ॥

ಪೂರ್ವಂ ದೈವಮನಾದೃತ್ಯ ಪೌರುಷೇಣ ಪ್ರಯತ್ನತಃ ।
ದಂತೈರ್ದಂತಾನ್ಪ್ರಸಂಪೀಡ್ಯ ಭೋಗೇಷ್ವರತಿಮಾಹರೇತ್ ॥ ೬೪ ॥

---

೬೦. ಅದರಿಂದ, ದೈವವೇ ಎಲ್ಲವನ್ನು ಮಾಡಿಕೊಳ್ಳಲಿ ಎಂಬ ಉದಾಸೀನವಾದವನ್ನು ಬಿಟ್ಟು, ಪೌರುಷವನ್ನು ಪ್ರಬಲವಾದ ಪ್ರಯತ್ನವನ್ನೂ ಹಿಡಿದು ಶ್ರೇಯೋದ್ವಾರದ ಬಾಗಿಲಿಗೆ ಬಿದ್ದಿರುವ ಅಗಳಿಗಳಂತಿರುವ ಭೋಗಗಳನ್ನು ಸುದೂರದಲ್ಲಿಯೇ ಬಿಡಬೇಕು.

೬೧. ಭೋಗ ತಿರಸ್ಕಾರವು ಬಲವಾದರೆ, ಮಳೆಗಾಲವು ತೀರುತ್ತಿದ್ದ ಹಾಗೆಯೇ ಬರುವ ನಿರ್ಮಲವಾದ ಶರತ್ಕಾಲದಂತೆ, ವಿಚಾರವು ಹುಟ್ಟುವುದು.

೬೨. ಸಮುದ್ರವನ್ನು ಮೇಘಗಳೂ ಮೇಘಗಳನ್ನು ಸಮುದ್ರವೂ ಪೋಷಿಸುವಂತೆ, ವಿಚಾರವನ್ನು ಭೋಗತಿರಸ್ಕಾರವೂ, ಭೋಗತಿರಸ್ಕಾರವನ್ನು ವಿಚಾರವೂ ಬೆಳೆಸುವುವು.

೬೩. ಭೋಗತಿರಸ್ಕಾರ ವಿಚಾರಗಳೂ ಶಾಶ್ವತವಾದ ಆತ್ಮದರ್ಶನವೂ, ವಿಶ್ವಾಸಪರರಾದ ಸ್ನೇಹಿತರು ಒಬ್ಬರ ಕೆಲಸವನ್ನೊಬ್ಬರು ಮಾಡಿಕೊಡುವಂತೆ, ಆಗಬೇಕಾಗಿರುವ ಸಿದ್ಧಿಯನ್ನು ಸಾಧಿಸಿ ಕೊಡುವುವು.

೬೪. ಅದರಿಂದ ಎಲ್ಲದಕ್ಕೂ ಮೊದಲು, ಪುರುಷಕಾರರೂಪವಲ್ಲದ ಮತ್ತೊಂದು ದೈವದಲ್ಲಿ ಇಟ್ಟಿರುವ ನಂಬುಗೆಯನ್ನು ಕಿತ್ತೆಸೆದು, ಪ್ರಯತ್ನ

ದೇಶಾಚಾರಾವಿರುದ್ಧೇನ ಬಾಂಧವ್ಯೈಕಮತೇನ ಚ ।
ಪೌರುಷೇಣ ಕ್ರಮೇಣಾದೌ ಧನಾನಿ ಸಮುಪಾರ್ಜಯೇತ್ ॥ ೬೫ ॥

ಧನೈರಭ್ಯಾಹರೇದ್ಭವ್ಯಾನ್ಸ್ವಜನಾನ್ಗುಣಶಾಲಿನಃ
ಪ್ರವರ್ತತೇ ಸಮಾಸಂಗಾತ್ತೇಷಾಂ ಭೋಗವಿಗರ್ಹಣಾ ॥ ೬೬ ॥

ತತೋ ವಿಚಾರಸ್ತದನು ಜ್ಞಾನಂ ಶಾಸ್ತ್ರಾರ್ಥಸಂಗ್ರಹಃ।
ತತಃ ಕ್ರಮೇಣ ಪರಮಪದಪ್ರಾಪ್ತಿಃ ಪ್ರಜಾಯತೇ ॥ ೬೭ ॥

ಪುರಸ್ಸರವಾಗಿ ಪೌರುಷವನ್ನು ಹಿಡಿದು, ಹಲ್ಲುಮುಡಿ ಕಚ್ಚಿಕೊಂಡು, ಭೋಗ ವೈರಾಗ್ಯವನ್ನು ಸಂಪಾದಿಸಬೇಕು.

೬೫. (ಪರಮಾರ್ಥ ಚಿಂತನವು ನಿರ್ವಿಘ್ನವಾಗಿ ನಡೆಯಲು ಅನುಕೂಲ ವಾಗುವಂತೆ) ದೇಶ, ಆಚಾರಗಳಿಗೆ ವಿರುದ್ಧವಿಲ್ಲದಂತೆ, ಬಾಂಧವಾದಿಗಳಿಗೆ ತೊಂದರೆ ಯಿಲ್ಲದಂತೆ, ಸ್ವಪೌರುಷದಿಂದ ಮೊದಲು ಧನವನ್ನು ಸಂಪಾದಿಸಬೇಕು.

೬೬. ಹಾಗೆ ಸಂಪಾದಿಸಿದ ಸದ್ಧನಗಳಿಂದ ಯೋಗ್ಯರು, ಗುಣಶಾಲಿಗಳೂ ಆದ ಮಹಾತ್ಮರನ್ನು ಆರಾಧಿಸಬೇಕು. ಅಂತಹ ಸತ್ಪುರುಷರ ಸಂಗದಿಂದ ಭೋಗ ವಿರಾಗವು ಲಭಿಸುವುದು.

೬೭. ಭೋಗ ವೈರಾಗ್ಯದಿಂದ ವಿಚಾರವೂ, ಅದರಿಂದ ಶಾಸ್ತ್ರಾರ್ಥ ಸಂಗ್ರಹ ರೂಪವಾದ ಜ್ಞಾನವೂ ಅದರಿಂದ ಕ್ರಮವಾಗಿ ಪರಮಪದ ಪ್ರಾಪ್ತಿಯೂ ಉಂಟಾಗುವುದು.

(ವಿಚಾರಾನಂತರ ಜ್ಞಾನಂ ವಿಚಾರಿತ ವಾಕ್ಯಾರ್ಥ ಜ್ಞಾನಂ ತದನುಗತಿ ಸಾಮಾನ್ಯ ನ್ಯಾಯಾಲೋಚನಾತ್ ಶಾಸ್ತ್ರಾರ್ಥ ಸಂಗ್ರಹಃ ಸರ್ವಶ್ರುತೀನಾಂ ಅದ್ವಿತೀಯೇ ಬ್ರಹ್ಮಣಿ ತಾತ್ಪರ್ಯ ನಿರ್ಣಯೋ ಭವತೀತ್ಯರ್ಥಃ—ತಾ.ಪ್ರ.)

ಯದಾ ತೂಪರತೇ ಕಾಲೇ ವಿಷಯೇಭ್ಯೋ ವಿರಂಸ್ಯಸೇ।
ತದಾ ವಿಚಾರವಶತಃ ಪರಮಂ ಪದಮೇಷ್ಯಸಿ ॥ ೬೮ ॥

ಸಮ್ಯತ್ತ್ವಪ್ಸ್ಯಸಿ ವಿಶ್ರಾಂತಿಮಾತ್ಮನ್ಯತ್ಯಂತಪಾವನೇ।
ನ ಪುನಃ ಕಲ್ಪನಾಪಂಕೇ ದುಃಖಾಯ ನಿಪತಿಷ್ಯಸಿ ॥ ೬೯ ॥

ಸ್ಥಿತಾಪಿ ನಾಸ್ಥಾ ತೇ ಶುದ್ಧ ನಮಸ್ತೇಽಸ್ತು ಸದಾಶಿವ ॥ ೭೦ ॥

---

೬೮. ಭೋಗ ವೈರಾಗ್ಯವು ಉಂಟಾಗಿ ವಿಷಯ ಸೇವನವನ್ನು ಬಿಟ್ಟಾಗ ವಿಚಾರವು ಹುಟ್ಟಿ ಆ ಮೂಲಕವಾಗಿ ಪರಮಪದವನ್ನು ಹೊಂದುವೆ.

(ತತೋ ಮನನ ನಿಧಿಧ್ಯಾಸನ ಕ್ರಮೇಣ, ಭೂಮಿಕಾರೋಹಣ ಕ್ರಮೇಣ ವಾ, ಇತ್ಥಂ ಸಾಂಪ್ರತಂ, ವಿಷಯವಿರಾಮೇಣ ಪರಮಪದ ಪ್ರಾಪ್ತ್ಯುಪಾಯ ಉಕ್ತಃ । ವಿಷಯಾನ್ ತ್ಯಕ್ತುಂ ಅಸಮರ್ಥಶ್ಚೇತ್ ಯೌವನಕಾಲೇ, ಉಪರತೇ ಸತಿ, ಯದಾ ವಿಷಯೇಭ್ಯೋ ವಿರಂಸ್ಯಸೇ ತದೈವ ವಿಚಾರವಶತಃ ಪರಮಂ ಪದಮೇಷ್ಯಸಿ ನ ಅಧುನಾ ಇತ್ಯರ್ಥಃ—ತಾ.ಪ್ರ.)

೬೯. ಒಂದುಸಲ ನಿನಗೆ ಪಾವನಕ್ಕೆ ಪಾವನವಾದ ಆತ್ಮನಲ್ಲಿ ಸಮ್ಯಕ್ ವಿಶ್ರಾಂತಿಯು ದೊರಿತುದೇ ಆದರೆ, ಮತ್ತೆ ಚಿತ್ತತ್ವ ಲಕ್ಷಣವಾದ ಕಲ್ಪನಾಪಂಕದಲ್ಲಿ ಬಿದ್ದು ದುಃಖವನ್ನು ಅನುಭವಿಸುವುದಿಲ್ಲ.

೭೦. ನಿನಗೆ ಬೇಕಾದಷ್ಟು ಭೋಗ ಸಾಧನ ಸಂಪತ್ತಿಯಿದ್ದರೂ, ನೀನು ಅವುಗಳಲ್ಲಿ ಆಸಕ್ತಿಯಿಲ್ಲದವನಾಗಿರುವೆ. ಅದರಿಂದ, ಎಲೈ ಶುದ್ಧನೇ, ನೀನು ಸದಾಶಿವ ಸ್ವರೂಪವಾಗಿರುವೆ ನಿನಗೆ ನಮಸ್ಕಾರವು.

(ಸಾಂಪ್ರತಮೇವ ಬ್ರಹ್ಮಭೂತಾಯ ನಮೋಽಸ್ತು ಇತಿ ಅನುಚಿತೋಽಪಿ ಪುತ್ರ ದೃಶಾ, ನಮಸ್ಕಾರೋ ಬ್ರಹ್ಮದೃಷ್ಟ್ಯಾ ಕೃತಃ—ತಾ. ಪ್ರ.)

ದೇಶಕ್ರಮೇಣ ಧನಮುಲ್ಪವಿಗರ್ಹಣೇನ ।
ತೇನಾಂಗ ಸಾಧುಜನಮರ್ಜಯ ಮಾನಪೂರ್ವಂ ॥
ತತ್ಸಂಗಮೋತ್ಥವಿಷಯಾದ್ಯವಹೇಲನೇನ ।
ಸಮ್ಯಗ್ವಿಚಾರವಿಭವೇನ ತವಾತ್ಮಲಾಭಃ ॥ ೭೧ ॥

ಇತ್ಯಾರ್ಷೇ ವಾಸಿಷ್ಠಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ಉಪಶಮ ಪ್ರಕರಣೇ "ಚಿತ್ತವಿಚಿಕಿತ್ಸಾಯೋಗೋಪದೇಶೋ" ನಾಮ
ಚತುರ್ವಿಂಶಃ ಸರ್ಗಃ

---

೭೧. ದೇಶ (ಆಚಾರ) ಕ್ರಮದಿಂದ ಧನವನ್ನು ಆರ್ಜಿಸು. ಆ ಧನದಿಂದ ಅಲ್ಪವಾದ ಭೋಗಗಳನ್ನು ಆರಾಧಿಸದೆ ಅವುಗಳನ್ನು ತಿರಸ್ಕರಿಸಿ, ಆ ಧನವನ್ನು ಸಮ್ಮಾನಪೂರ್ವಕವಾಗಿ ಸಾಧುಜನರನ್ನು ಆರಾಧಿಸುವುದರಲ್ಲಿ ವಿನಿಯೋಗಿಸಿ ಅವರನ್ನು ಸಂಪಾದಿಸು. ಅದರ ಸಂಗದಿಂದ ನಿನಗೆ ವಿಷಯ ನಿರಾಕರಣ ಬುದ್ಧಿಯೂ ವಿಚಾರವೂ ಲಭಿಸುವುವು. ಆ ವಿಚಾರ ಬಲದಿಂದ ನಿನಗೆ ಆತ್ಮಲಾಭವಾಗುವುದು.

("ವೇದಾಂತಗಳಲ್ಲಿ ಅನ್ನಮಯಕೋಶವಾದ ಸ್ಥೂಲ ದೇಹವೇ ಆತ್ಮವೆಂಬ ವಿರೋಚನ ಸಿದ್ಧಾಂತವೊಂದಿದೆ.

ಇಂದ್ರನೂ ವಿರೋಚನನೆಂಬ ದೈತ್ಯರಾಜನೂ ಪ್ರಜಾಪತಿಯ ಬಳಿಗೆ ಹೋಗಿ ಜ್ಞಾನೋಪದೇಶವನ್ನು ಬಯಸಿದರಂತೆ. ಆತನು "ನಿಮ್ಮ ನಿಮ್ಮ ಪ್ರತಿಬಿಂಬವನ್ನು ನೋಡಿಕೊಳ್ಳಿ. ಅದೇ ಆತ್ಮ" ಎಂದು ಹೇಳಿದನಂತೆ. ಅಷ್ಟರಿಂದಲೇ ವಿರೋಚನನು ದೇಹದ ಪ್ರತಿಬಿಂಬವನ್ನು ನೋಡಿ ಅದೇ ಆತ್ಮವೆಂದು ತಿಳಿದುಕೊಂಡನಂತೆ. ಇಂದ್ರನು ವಿಚಾರಮಾಡಿ ಮಾಡಿ ಮತ್ತೆ ಪ್ರಜಾಪತಿಗೆ ಬಳಿಗೆ ಬಂದು ಆತ್ಮ ಸ್ವರೂಪವನ್ನು ಸರಿಯಾಗಿ ಗ್ರಹಿಸಿದನಂತೆ.

ಈ ವೈರೋಚನ ಸಿದ್ಧಾಂತ ವಿಷಯವಾಗಿ, ಪಂಚದಶಿ, ಚಿತ್ರದೀಪ, ಶ್ಲೋಕ ೬೦ ಮತ್ತು ಮುಂದೆ ನೋಡಿ.)

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ •
ಉಪಶಮ ಪ್ರಕರಣದಲ್ಲಿ "ಚಿತ್ತವಿಚಿಕಿತ್ಸಾಯೋಗೋಪದೇಶ" ಎಂಬ
ಇಪ್ಪತ್ತನಾಲ್ಕನೆಯ ಸರ್ಗವು.

ಪಂಚವಿಂಶಃ ಸರ್ಗಃ

ಬಲಿರುವಾಚ—

ಏತನ್ಮೇ ಕಥಿತಂ ಪೂರ್ವಂ ಪಿತ್ರಾ ಚಾರುವಿಚಾರಿಣಾ ।
ಇದಾನೀಂ ಸಂಸ್ಮೃತಂ ದಿಷ್ಟ್ಯಾ ಸಂಪ್ರಬೋಧಮಹಂ ಗತಃ ॥ ೧ ॥

ಅದ್ಯೇಯಂ ಮಮ ಸಂಜಾತಾ ಭೋಗಾನ್ಪ್ರತ್ಯರತಿಃ ಸ್ಫುಟಂ ।
ದಿಷ್ಟ್ಯಾ ಶಮಸುಖಂ ಸ್ವಚ್ಛಂ ವಿಶಾಮ್ಯಮೃತಶೀತಲಂ ॥ ೨ ॥

ಪುನರಾಪೂರಯನ್ನಾಶಾಂ ಪುನರಪ್ಯಾಹರನ್ಧನಂ ।
ಪುನರಾವರ್ಜಯನ್ಕಾಂತಾಂ ಖಿನ್ನೋಽಸ್ಮಿ ವಿಭವಸ್ಥಿತೌ ॥ ೩ ॥

ಇಪ್ಪತ್ತೈದನೆಯ ಸರ್ಗ

೧. ಬಲಿಯು ಹೇಳಿಕೊಂಡನು:—ಹೀಗೆಂದು ನನಗೆ ಬಹುವಿಚಾರಿಯಾದ ನಮ್ಮ ತಂದೆಯು ಹಿಂದೆಯೇ ಹೇಳಿದನು. ಅದೃಷ್ಟವಶದಿಂದ ಅದು ಈಗ ನೆನೆಪಿಗೆ ಬಂತು. ನನಗೆ ಪ್ರಬೋಧವೂ ಬಂತು.

೨. ಈಗ ನನಗೆ ಭೋಗಗಳಲ್ಲಿ ಸುತರಾಂ ವಿರತಿಯು ಹುಟ್ಟಿರುವುದು. ಅದೃಷ್ಟವಶದಿಂದ ಸ್ವಚ್ಛವಾದ ನಿಷ್ಕಲ್ಮಷವಾಗಿ ಅಮೃತದಂತೆ ಶೀತಲವಾಗಿರುವ ಶಾಂತಿಯೆಂಬ ಸುಖವನ್ನು ಪಡೆಯುವೆನು.

೩. ಇದುವರೆಗೂ ಮತ್ತೆ ಮತ್ತೆ ಆಶೆಯನ್ನು ಪೂರ್ತಿಮಾಡಿಕೊಳ್ಳುವುದು. ಮತ್ತೆ ಮತ್ತೆ ಹಣವನ್ನು ತರುವುದು. ಮತ್ತೆ ಮತ್ತೆ ಹೆಂಡತಿಯನ್ನು ಒಲಿಸಿಕೊಳ್ಳುವುದು. ಹೀಗೆ ಮಾಡುತ್ತ ಇಷ್ಟು ವೈಭವವಿದ್ದರೂ ಖಿನ್ನನಾಗಿರುವೆನು.

ಅಹೋ ನು ಖಲು ರಮ್ಯೇಯಂ ಶಮಭೂಃ ಶೀತಲಾಂತರಾ ।
ಸರ್ವ ಏವ ಶಮಂ ಯಾಂತಿ ಸುಖದುಃಖದೃಶಃ ಶಮೇ ॥ ೪ ॥

ಶಾಮ್ಯಾಮಿ ಪರಿನಿರ್ವಾಮಿ ಸುಖಮಾಸೇ ಶಮೇ ಸ್ಥಿತಃ ।
ಅಯಮಂತಃ ಪ್ರಹೃಷ್ಯಾಮಿ ಚಂದ್ರಬಿಂಬ ಇವಾರ್ಪಿತಃ ॥ ೫ ॥

ಉತ್ತಾಂಡವನ್ಮನೋರಂಹಃ ಪ್ರೋಷಿತೋರುಶರೀರಕಂ ।
ಅನಾರತಪರಿಕ್ಷೋಭಂ ಹಾ ದುಃಖಂ ವಿಭವಾರ್ಜನಂ ॥ ೬ ॥

---

೪. ಆಹಾ ! ಅಂತಶ್ಶಾಂತಿಯನ್ನು ತಂದಿರುವ ಈ ಪ್ರಶಾಂತಿ ಭೂಮಿಕೆಯು ಎಷ್ಟು ರಮ್ಯವಾಗಿರುವುದು ! ಎಷ್ಟು ಹಿತವಾಗಿರುವುದು ! ಸುಖ, ದುಃಖ, ಎಂಬ ಪ್ರಾಪಂಚಿಕ ಭಾವನೆಗಳೆಲ್ಲವೂ ಈ ಶಮದಲ್ಲಿ ಶಾಂತಯಾದುವಲ್ಲ!

೫. ಈಗ ಶಾಂತನಾಗಿರುವೆನು: ಸಮಸ್ತ ದುಃಖಗಳೂ ಶಾಂತನಾಗಿ ಹೋಗಿರುವುವು. ಶಾಂತಿಯಲ್ಲಿ ನಿಂತು ಸುಖವಾಗಿರುವೆನು. ಚಂದ್ರಬಿಂಬದ ಮಧ್ಯದಲ್ಲಿ (ಅಮೃತ ಕಲಶದ ನಡುವೆ) ಇದ್ದವನಂತೆ, ನನ್ನಲ್ಲಿಯೇ (ಇತರ ಕಾರಣ ವಿಲ್ಲದೆಯೇ) ಸಂತೋಷಪಡುತ್ತಿರುವೆನು.

(ಲೋಕದಲ್ಲಿ ಲಭಿಸುವ ಆನಂದವೆಲ್ಲವೂ ಸವಿಷಯವು:—ಎಂದರೆ ಯಾವು ದಾದರೊಂದು ವಿಷಯವು ದೊರೆತಾಗ ತಾನೂ ಪ್ರಕಟವಾಗಿ, ಯಾವುದೂ ದೊರೆಯದಿದ್ದಾಗ ಇಲ್ಲವಾಗಿ, ಇದ್ದುದು ಹೋದಾಗ ತಾನೂ ಹೋದಂತೆಯೇ ಆಗುವುದು: ಆದರೆ, ವೈರಾಗ್ಯವನ್ನು ಸಾಧಿಸಿ ಅಂತರಿಂದ್ರಿಯ ಬಹಿರಿಂದ್ರಿಯ ನಿಗ್ರಹವನ್ನು ಪಡೆದ ಮೇಲೆ, ಪ್ರತಿಬಂಧ ನಿವೃತ್ತಿಯಾದ ಮೇಲೆ ತಾನಾಗಿ ಹೊರ ಹೊಮ್ಮುವ ಆನಂದವು ಆತ್ಮನ ಸಹಜ ಲಕ್ಷಣವಾದ ನಿರ್ವಿಷಯಾನಂದವು.

ಆತ್ಮನಿಗೆ ಆನಂದವು ಸಹಜವಾಗಿದ್ದರೂ ಈ ಪ್ರತಿಬಂಧ ಭ್ರಾಂತಿಯಿರುವು ದರಿಂದಲೇ ಆ ಆನಂದವು ತೋರದಿರುವುದು. ಈ ಪ್ರತಿಬಂಧ ವಿಚಾರವನ್ನು ಸುರೇಶ್ವರಾಚಾರ್ಯರ ವಾರ್ತಿಕ ಗ್ರಂಥದಲ್ಲಿಯೂ ಪಂಚದಶಿಯಲ್ಲಿ ತೃಪ್ತಿ ದೀಪದಲ್ಲಿಯೂ ವಿವರವಾಗಿ ಹೇಳಿದೆ.

೬. ಈ ವಿಭವಗಳನ್ನು ಆರ್ಜಿಸುವುದು ಅಷ್ಟು ಸುಲಭವಲ್ಲ ! ಮನಸ್ಸೆಲ್ಲವೂ

ಅಂಗಮಂಗೇನ ಸಂಪೀಡ್ಯ ಮಾಂಸಂ ಮಾಂಸೇನ ಚ ಸ್ತ್ರಿಯಃ ।
ಪುರಾಹಮುಭವಂ ಪ್ರೀತೋ ಯತ್ತನ್ಮೋಹವಿಜೃಂಭಿತಂ ॥ ೭ ॥

ದೃಷ್ಟಾಂತದೃಷ್ಟಯೋ ದೃಷ್ಟಾ ಭುಕ್ತಂ ಭೋಕ್ತವ್ಯಮುಕ್ಷತಂ ।
ಆಕ್ರಾಂತಮಖಿಲಂ ಭೂತಂ ಜಾತಂ ಕಿಮಿವ ಶೋಭನಂ ॥ ೮ ॥

ಪುನಸ್ತಾನ್ಯೇವ ತಾನ್ಯೇವ ತತ್ರೇಹಾನ್ಯತ್ರ ವಾಪಿ ಚ ।
ಇತಶ್ಚೇತಶ್ಚ ವಸ್ತೂನಿ ನಾಪೂರ್ವಂ ನಾಮ ಕಿಂಚನ ॥ ೯ ॥

ಸರ್ವಮೇವ ಪರಿತ್ಯಜ್ಯ ಪರಿಹೃತ್ಯ ಧಿಯಾ ಸ್ವಯಂ ।
ಸ್ವಸ್ಥ ಏವಾವತಿಷ್ಠೇಽಹಂ ಪೂರ್ಣಾತ್ಪೂರ್ಣ ಇವಾತ್ಮನಿ ॥ ೧೦ ॥

ಎದ್ದೆದ್ದು ಕುಣಿದು, ಆ ವೇಗಕ್ಕೆ ಸಿಕ್ಕಿ ಶರೀರವೆಲ್ಲವೂ ದುಡಿದು, ಒಂದೇ ಸಮನಾಗಿ ಬಹು ಕ್ಷೋಭವನ್ನು ಅನುಭವಿಸಬೇಕಾಗುವುದು.

೭. ಅಂಗಗಳಿಂದ ಅಂಗಗಳೂ ಮಾಂಸಖಂಡಗಳಿಂದ ಮಾಂಸಖಂಡಗಳೂ ಒತ್ತುವಂತೆ ಸ್ತ್ರೀಯರನ್ನು ಆಲಿಂಗಿಸಿಕೊಂಡು ಹಿಂದೆ ಯಾವುದನ್ನು ಸುಖವೆಂದು ಕೊಳ್ಳುತ್ತಿದ್ದೆನೋ ಅದೆಲ್ಲವೂ ಮೋಹದ ವಿಜೃಂಭಣವು.

೮. ಲೋಕವೆಲ್ಲ "ಭೋಗವೆಂದರೆ ಬಲೀಂದ್ರನ ಭೋಗವೇಭೋಗ" ಎನ್ನುವ ಮಟ್ಟಿಗೆ ಭೋಗಗಳನ್ನು ಅಖಂಡವಾಗಿ ಅನುಭವಿಸಿದೆನು. ಲೋಕದಲ್ಲಿದ್ದವರ ಮೇಲೆಲ್ಲ ನನ್ನ ಅಧಿಕಾರವನ್ನು ಪ್ರಯೋಗಿಸಿದೆನು. ಆದರೆ ಅದರಿಂದ ನನಗೆ ಏನು ಶುಭಫಲವಾಯಿತು ?

೯. ಇಲ್ಲಿ, ಅಲ್ಲಿ, ಅಥವಾ ಇನ್ನೆಲ್ಲಿ ನೋಡಿದರೂ, ಎಲ್ಲೆಲ್ಲಿ ಹುಡುಕಿದರೂ ಹಿಂದೆ ನೋಡಿದ ವಸ್ತುಗಳೇ, ಅವವೇ, ಮತ್ತೆ ಮತ್ತೆ ಕಾಣಿಸುತ್ತಿರುವಲ್ಲದೆ, ಅಪೂರ್ವವಾದ ಒಂದು ವಸ್ತುವೂ ಕಾಣಿಸುವುದಿಲ್ಲವಲ್ಲ !

[ತತ್ರಸ್ವರ್ಗಾದೌ ಇಹಭುವಿ ಅನ್ಯತ್ರನಾಗಲೋಕಾದೌ ತಾ. ಪ್ರ.]

೧೦. ಎಲ್ಲವನ್ನೂ ಪರಿತ್ಯಜಿಸಿ, ನಾನಾಗಿ ಬುದ್ಧಿ ಪೂರ್ವಕವಾಗಿ, ಎಲ್ಲವನ್ನೂ ಪರಿಹರಿಸಿಕೊಂಡು, ಸ್ವಸ್ಥನಾಗಿ, ಪರಿಪೂರ್ಣವಾದ ಸಮುದ್ರದಂತೆ, [ನಿಶ್ಚಲನಾಗಿ] ಕುಳಿತುಕೊಳ್ಳುವೆನು.

ಪಾತಾಲೇ ಭೂತಲೇ ಸ್ವರ್ಗೇ ಸ್ತ್ರೀಯೋ ರತ್ನೋಪಲಾದಯಃ ।
ಸಾರಂ ತದಪಿ ತುಚ್ಛೇನ ಕಾಲೇನಾಶು ನಿಗೀರ್ಯತೇ ॥ ೧೧ ॥

ಏತಾವಂತಮಹಂ ಕಾಲಂ ಭೃಶಂ ಬಾಲೋಽಭವಂ ಪುರಾ ।
ಯಃ ಕುರ್ವನ್ದ್ವೇಷಮಮರೈಸ್ತುಚ್ಛಯಾ ಜಗದಿಚ್ಛಯಾ ॥ ೧೨ ॥

ಮನೋನಿರ್ಮಾಣಮಾತ್ರೇಣ ಜಗನ್ನಾಮ್ನಾ ಮಹಾಧಿನಾ ।
ತ್ಯಕ್ತೇನಾನೇನ ಕೋಽರ್ಥಃ ಸ್ಯಾತ್ಕೋನು ರಾಗೋ ಮಹಾತ್ಮನಃ ॥ ೧೩ ॥

ಕಷ್ಟಂ ಚಿರತರಂ ಕಾಲಮನರ್ಥೋಽರ್ಥಧಿಯಾ ಮಯಾ ।
ಅಜ್ಞಾನಮದಮತ್ತೇನ ಕಾಲೇನ ಸ್ವೇನ ಸೇವಿತಃ ॥ ೧೪ ॥

---

೧೧. ಪಾತಾಳದಲ್ಲಿ, ಭೂಮಿಯಲ್ಲಿ, ಸ್ವರ್ಗದಲ್ಲಿ, ಯಾವ ಯಾವ ಸ್ತ್ರೀ, ರತ್ನ, ಮುಂತಾದುವುಗಳನ್ನು ಸಾರವೆಂದು ಹೇಳುವರೋ ಅವೆಲ್ಲವೂ ಕೂಡ ಸ್ವಲ್ಪ ಕಾಲದಲ್ಲಿಯೇ ಕಾಲವಶವಾಗುವುವು.

೧೨. ಇದುವರೆವಿಗೂ ನಾನು ಕೇವಲ ಮಗುವಿನಂತೆ ಇದ್ದು, ಅತಿ ತುಚ್ಛವಾದ ಜಗತ್ತಿನ ಆಧಿಪತ್ಯಕ್ಕಾಗಿ ದೇವತೆಗಳೊಡನೆ ದ್ವೇಷ ಕಟ್ಟಿಕೊಂಡು ಹಾರಾಡುತ್ತಿದ್ದೆನಲ್ಲ ;

೧೩. ಮನಸ್ಸಂಕಲ್ಪದಿಂದ ನಿರ್ಮಿತವಾಗಿರುವ ಜಗತ್ತೆಂಬ ಈ ಮಹದ್ವ್ಯಥೆಯನ್ನು ಕಟ್ಟಿಕೊಂಡು ಆಗಬೇಕಾದುದೇನು ? ಮಹಾತ್ಮನಾದವನಿಗೆ ಇದರಲ್ಲಿ ಆಸ್ಥೆ ತಾನೇ ಏನಿರುವುದು ?

೧೪. ಅಯ್ಯೋ ! ಎಂತಹ ಕಷ್ಟವಾಯಿತು ! ಎಷ್ಟು ದೀರ್ಘ ಕಾಲ ನಾನು ಅಜ್ಞಾನ ಮದಮತ್ತನಾಗಿ, ನನಗೆ ನಾನೇ ಮೃತ್ಯುವಾಗಿ, ಅನರ್ಥವನ್ನೇ ಅರ್ಥವೆಂಬ ಬುದ್ಧಿಯಿಂದ ಸೇವಿಸಿದೆನಲ್ಲ !

(ಕಾಲೇನ ಸ್ವಮೃತ್ಯು ಭೂತೇನ ಸ್ವೇನೈವ ಮಯಾ—ತಾ. ಪ್ರ.)

ತರತ್ತರಲತೃಷ್ಣೇನ ಕಿಮಿವಾಸ್ಮಿಂಜಗತ್ತ್ರಯಂ ।
ಮಯಾ ನ ಕೃತಮಜ್ಞೇನ ಪಶ್ಚಾತ್ತಾಪಾಭಿವೃದ್ಧಯೇ ॥ ೧೫ ॥

ಏತಯಾ ತದಲಂ ಮೇಽಸ್ತು ತುಚ್ಛಯಾ ಪೂರ್ವಚಿಂತಯಾ ।
ಪೌರುಷಂ ಯಾತಿ ಸಾಫಲ್ಯಂ ವರ್ತಮಾನಚಿಕಿತ್ಸಯಾ ॥ ೧೬ ॥

ಅದ್ಯಾಪರಿಮಿತಾಕಾರಕಾರಣೈಕತಯಾತ್ಮನಿ ।
ಸರ್ವತಃ ಸುಖಮಭ್ಯೇತಿ ರಸಾಯನಮಿವಾರ್ಣವೇ ॥ ೧೭ ॥

ಕೋಽಯಂ ತಾವದಹಂ ಕಿಂ ಸ್ಯಾದಾತ್ಮೇತ್ಯಾತ್ಮಾವಲೋಕನಂ ।
ಪೃಚ್ಛಾಮ್ಯೌಶನಸಂ ನಾಥಂ ನೂನಮಜ್ಞಾನಶಾಂತಯೇ ॥ ೧೮ ॥

---

೧೫. ಅತಿ ಚಂಚಲವಾದ ತೃಷ್ಣೆಗೆ ವಶನಾಗಿ, ಅಜ್ಞನಾದ ನಾನು, ಈ ಮೂರು ಲೋಕದ ಒಡೆತನಕ್ಕಾಗಿ ಏನನ್ನು ತಾನೇ ಮಾಡಲಿಲ್ಲ? ಅದನ್ನೆಲ್ಲ ನೆನೆಸಿಕೊಂಡರೆ ಈಗ ಪಶ್ಚಾತ್ತಾಪವು ತಾನೇ ತಾನಾಗುವುದಲ್ಲ !

೧೬. ತುಚ್ಛವಾದ ಈ ಹಿಂದಿನದೆಲ್ಲವನ್ನೂ ಕುರಿತು ಚಿಂತಿಸಿ ಫಲವಿಲ್ಲ. ಈಗ ಮಾಡಬೇಕಾಗಿರುವುದನ್ನು ಕುರಿತು ಯೋಚಿಸಿದರೆ ಪ್ರಯತ್ನವು ಸಫಲವಾಗುವುದು.

೧೭–೧೮. ಹೀಗೆ ಲೆಕ್ಕವಿಲ್ಲದಷ್ಟು ರೂಪವಾಗಿರುವ ಈ ಜಗತ್ತಿಗೆಲ್ಲ ಕಾರಣರೂಪವಾದ ಆತ್ಮನಲ್ಲಿ ಸೇರಿ ಸರ್ವ ರೀತಿಯಲ್ಲೂ ಸುಖವುಂಟಾಗುವಂತೆ, "ಈ ಜಗತ್ತು ಯಾವುದು ? ನಾನು ಎನ್ನುವುದು ಏನು ? ಆತ್ಮನು ಯಾರು ? ಆತ್ಮಾವಲೋಕನ ಎನ್ನುವುದು ಏನು" ಎಂದು ನಮ್ಮ ಕುಲಕ್ಕೆ ಗುರುವಾದ ಶುಕ್ರನನ್ನು ಕೇಳಿ, ಈ ಅಜ್ಞಾನವನ್ನು ಕಳೆದುಕೊಳ್ಳುವೆನು.

ಸಂಚಿಂತಯಾಮಿ ಪರಮೇಶ್ವರಮಾಶು ಶುಕ್ರಂ
ಉದ್ಯತ್ಪ್ರಸಾದಮಥ ತೇ ನ ಗಿರೋಪದಿಷ್ಟೇ ।
ತಿಷ್ಠಾಮ್ಯನಂತವಿಭವೇ ಸ್ವಯಮಾತ್ಮನಾತ್ಮ
ನ್ಯಕ್ಷೀಣಮರ್ಥಮುಪದೇಶಗಿರಃ ಫಲಂತಿ ॥ ೧೯ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ "ಬಲಿಚಿಂತಾಸಿದ್ಧಾಂತಯೋಗೋಪದೇಶೋ"ನಾಮ ಪಂಚವಿಂಶಃ ಸರ್ಗಃ

---

೧೯. ಪರಮೇಶ್ವರ ಸ್ವರೂಪನಾದ ಶುಕ್ರಾಚಾರ್ಯನನ್ನು ಕುರಿತು ಧ್ಯಾನಿಸುವೆನು. ಉತ್ತಮ ಪ್ರಸಾದವಾಗುವಂತೆ ಆತನು ಅನುಗ್ರಹ ರೂಪವಾಗಿ ಆಡುವ ಮಾತುಗಳಿಂದ ಉಪದೇಶವನ್ನು ಪಡೆದು. ಅನಂತ ವಿಭವ ಸಂಪನ್ನವಾದ ಆತ್ಮ ತತ್ವದಲ್ಲಿ ಆತ್ಮಸ್ವರೂಪನಾಗಿ ನಿಲ್ಲುವೆನು. ಮಹಾತ್ಮರ ಉಪದೇಶ ವಾಕ್ಯಗಳು ಅಕ್ಷಯವಾದ ಫಲಗಳನ್ನು ಕೊಡುವುವು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ಬಲಿಚಿಂತಾಸಿದ್ಧಾಂತಯೋಗೋಪದೇಶ" ಎಂಬ ಇಪತ್ತೈದನೆಯ ಸರ್ಗವು.

ಷಡ್ವಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಇತಿ ಸಂಚಿತ್ಯ ಬಲವಾನ್ಬಲಿರಾಮೀಲಿತೇಕ್ಷಣಃ ।
ದಧ್ಯೌ ಕಮಲಪತ್ರಾಕ್ಷಂ ಶುಕ್ರಮಾಕಾಶಮಂದಿರಂ ॥ ೧ ॥

ಸರ್ವಸ್ಥಂ ಚಿಂತಯಾನಂ ತು ನಿತ್ಯಧ್ಯಾನೋಽಥ ಭಾರ್ಗವಃ ।
ಚೇತಃಸ್ಥಂ ಜ್ಞಾತವಾನ್ ಶಿಷ್ಯಂ ಬಲಿಂ ಗುರ್ವರ್ಥಿನಂ ಪುರೇ ॥ ೨ ॥

ಅಥ ಸರ್ವಗತಾನಂತಚಿದಾತ್ಮಾ ಭಾರ್ಗವಃ ಪ್ರಭುಃ ।
ಆಸಿನಾಯ ಸದೇಹಂ ಸ್ವಂ ರತ್ನವಾತಾಯನೇ ಬಲೇಃ ॥ ೩ ॥

ಇಪ್ಪತ್ತಾರನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು—ಬಲವಂತನಾದ ಬಲಿಯು ಹೀಗೆ ಯೋಚಿಸಿಕೊಂಡು, ಕಣ್ಣು ಮುಚ್ಚಿಕೊಂಡು, ಬ್ರಹ್ಮಾಕಾಶದಲ್ಲಿ ವಿಶ್ರಾಂತನಾಗಿರುವ, ಕಮಲದಲದಂತೆ ಕಣ್ಣಿರುವ ಶುಕ್ರಾಚಾರ್ಯನನ್ನು ಸ್ಮರಿಸಿಕೊಂಡನು.

೨. ಆ ಭಾರ್ಗವನು ಯಾವಾಗಲೂ ಬ್ರಹ್ಮ ಚಿಂತನದಲ್ಲಿರುವವನು. ಆ ಬ್ರಹ್ಮವು ಸರ್ವಸ್ಥವು (ಎಲ್ಲೆಲ್ಲಿಯೂ ಇರುವದು.) ಆದರಿಂದ ಬ್ರಹ್ಮಣಿಸ್ಥಿತನಾದ ಆತನು ತನ್ನ ಶಿಷ್ಯನಾದ ಬಲಿಯು ತನ್ನ ರಾಜಧಾನಿಯಲ್ಲಿ ಗುರು ದರ್ಶನವಾಗಬೇಕೆಂದು ತನ್ನನ್ನು ಚಿಂತಿಸುತ್ತಿರುವುದನ್ನು ತಿಳಿದುಕೊಂಡನು.

೩. ಅನಂತರ, ಸರ್ವಗತವೂ ಅನಂತವೂ ಚಿದಾತ್ಮವೂ ಆದ ಬ್ರಹ್ಮವೇ ಆಗಿರುವ ಆ ಸರ್ವಶಕ್ತನಾದ ಶುಕ್ರಾಚಾರ್ಯನು ಬಲಿಯ ಅರಮನೆಯ ರತ್ನಮಯವಾದ ಕಿಟಕಿಯ ಬಳಿಗೆ ತನ್ನ ದೇಹವನ್ನು ತಂದನು.

ಗುರುದೇಹಪ್ರಭಾಜಾಲಪರಿಸ್ಪೃಷ್ಟತನುರ್ಬಲಿಃ ।
ಬುಬುಧೇ ಪ್ರಾತರರ್ಕಾಂಶುಸಂಬೋಧಿತಮಿವಾಂಬುಜಂ ॥ ೪ ॥

ತತ್ರ ರತ್ನಾರ್ಘ್ಯದಾನೇನ ಮಂದಾರಕುಸುಮೋತ್ಕರೈಃ ।
ಪಾದಾಭಿವಂದನೈರ್ದೇವಂ ಪೂಜಯಾಮಾಸ ಭಾರ್ಗವಂ ॥ ೫ ॥

ರತ್ನಾರ್ಘ್ಯಪರಿಪೂರ್ಣಾಂಗಂ ಕೃತಮಂದಾರಶೇಖರಂ ।
ಮಹಾಹಾರ್ಸನವಿಶ್ರಾಂತಮುಘೋವಾಚ ಗುರುಂ ಬಲಿಃ ॥ ೬ ॥

ಬಲಿರುವಾಚ—

ಭಗರ್ವತ್ವತ್ಪ್ರಸಾದೋತ್ಥಾ ಪ್ರತಿಭೇಯಂ ಪುರಸ್ತವ ।
ನಿಯೋಜಯತಿ ಮಾಂ ವಕ್ತುಂ ಕಾರ್ಯಂ ಕರ್ತುಮಿವಾರ್ಕಭಾಃ ॥ ೭ ॥

---

೪. ಆಗ ಆ ಶುಕ್ರಾಚಾರ್ಯನ ದೇಹದ ಕಾಂತಿಯು ಆ ಬಲಿಯ ದೇಹದ ಮೇಲೆ ಬಿದ್ದು ಅದನ್ನೆಲ್ಲ ತೊಳೆಯಿತೋ ಎನ್ನುವಂತೆ ವ್ಯಾಪಿಸಿತು. ಆಗ, ಪ್ರಾತಃ ಕಾಲದ ಸೂರ್ಯ ಕಿರಣಗಳಿಂದ ಪ್ರಬೋಧಗೊಳ್ಳುವ ಪದ್ಮದಂತೆ, ಆತನೂ ಪ್ರಬುದ್ಧನಾದನು.

೫. ಆಗಲೇ ಅಲ್ಲಿಯೇ ಬಲಿಚಕ್ರವರ್ತಿಯು ಶುಕ್ರಾಚಾರ್ಯನಿಗೆ ರತ್ನಗಳಿಂದ ಅರ್ಘ್ಯನನ್ನು ಕೊಟ್ಟು, ಪಾದಗಳಿಗೆ ನಮಸ್ಕಾರ ಮಾಡಿ, ಮಂದಾರ ಪುಷ್ಪಗಳಿಂದ ಪೂಜೆ ಮಾಡಿದನು.

೬. ಬಲಿಯು ಅರ್ಘ್ಯವಾಗಿ ಕೊಟ್ಟ ರತ್ನಗಳಿಂದಲೂ, ಪೂಜಿಸಿದ ಮಂದಾರ ಪುಷ್ಪಗಳಿಂದಲೂ ಅಲಂಕೃತನಾಗಿ, ದಿವ್ಯವಾದ ರತ್ನಾಸನದಲ್ಲಿ ಕುಳಿತುಕೊಂಡಿರುವ ಶುಕ್ರನನ್ನು ಕುರಿತು ಬಲಿಯು ಹೀಗೆ ಹೇಳಿದನು.

೭. ಬಲಿಯು ಹೇಳಿದನು—ಸೂರ್ಯನ ಪ್ರಕಾಶವು ಎಲ್ಲರನ್ನೂ ಕಾರ್ಯ ಮಾಡಲು ನಿಯೋಗಿಸುವಂತೆ, ನಿನ್ನ ಪ್ರಸಾದದಿಂದ ನನಗೆ ಲಭಿಸಿರುವ ಪ್ರತಿಭೆಯು ನಿನ್ನ ಎದುರಿಗೆ ನಿಂತು ಮಾತನಾಡುವಂತೆ ಪ್ರೇರಿಸುತ್ತಿರುವುದು.

ಭೋಗಾನ್ಪ್ರತಿ ವಿರಕ್ತೋಽಸ್ಮಿ ಮಹಾಸಂಮೋಹದಾಯಿನಃ ।
ತತ್ತತ್ತ್ವಂ ಜ್ಞಾತುಮಿಚ್ಛಾಮಿ ಮಹಾಸಂಮೋಹಹಾರಿ ಯತ್ ॥ ೮ ॥

ಕಿಯನ್ಮಾತ್ರಮಿದಂ ಭೋಗಜಾಲಂ ಕಿನ್ಮಯಮೇವ ವಾ ।
ಕೋಽಹಂ ಕಸ್ತ್ವಂ ಕಿಮೇತೇ ವಾ ಲೋಕಾ ಇತಿ ವದಾಶು ಮೇ ॥ ೯ ॥

ಶ್ರೀಶುಕ್ರ ಉವಾಚ—

ಬಹುನಾತ್ರ ಕಿಮುಕ್ತೇನ ಖಂ ಗಂತುಂ ಯತ್ನವಾನಹಂ ।
ಸರ್ವದಾನವರಾಜೇಂದ್ರ ಸಾರಂ ಸಂಕ್ಷೇಪತಃ ಶೃಣು ॥ ೧೦ ॥

ಚಿದಿಹಾಸ್ತಿ ಹಿ ಚಿನ್ಮಾತ್ರಮಿದಂ ಚಿನ್ಮಯಮೇವ ಚ ।
ಚಿತ್ತ್ವಂ ಚಿದಹಮೇತೇ ಚ ಲೋಕಾಶ್ಚಿದಿತಿ ಸಂಗ್ರಹಃ ॥ ೧೧ ॥

---

೮. ಮಹಾ ಸಮ್ಮೋಹವನ್ನು ಉಂಟು ಮಾಡುವ ಭೋಗಗಳಲ್ಲಿ ನಾನು ಬೇಸರಪಟ್ಟಿರುವೆನು. ಆದರಿಂದ, ಆ ಮಹಾ ಸಮ್ಮೋಹವನ್ನು ಉಪ ಸಂಹಾರ ಮಾಡಬಲ್ಲ ತತ್ವವನ್ನು ತಿಳಿಯಲು ಆಶೆಪಡುತ್ತಿರುವೆನು.

೯. ಈ ಭೋಗ ಜಾಲದ ಯೋಗ್ಯತೆಯೇನು ? ಇದು ಯಾವುದರಿಂದ ಆಗಿರುವುದು ? 'ನಾನು ನಾನು' ಎಂದುಕೊಳ್ಳುವುದು ಯಾವುದು ? 'ನೀನು ನೀನು' ಎಂಬುದು ಯಾವುದು ? ಈ ಲೋಕಗಳು ಎಂಬವು ಯಾವುವು ? ಇದೆಲ್ಲವನ್ನೂ ಕುರಿತು ನನಗೆ ಈಗಲೇ ಹೇಳು.

೧೦. ಶ್ರೀ ಶುಕ್ರನು ಹೇಳಿದನು—ಈ ವಿಚಾರವಾಗಿ ವಿಸ್ತಾರವಾಗಿ ಹೇಳಿ ಏನು ಪ್ರಯೋಜನ ? ನಾನು ಆಕಾಶ ಮಾರ್ಗವಾಗಿ ಹೊರಟಿರುವೆನು. ದಾನವ ಕುಲದ ಚಕ್ರವರ್ತಿಯೇ, ಅದರಿಂದ ಸಂಕ್ಷೇಪವಾಗಿ ಸಾರಭೂತವಾದುದನ್ನು ಮಾತ್ರ ಹೇಳುವೆನು, ಕೇಳು.

೧೧. ಈ ಲೋಕದಲ್ಲಿ ಇರುವುದೆಲ್ಲ ಚಿತ್ತು ಒಂದೇ. ಈ ಭೋಗ ಜಾಲವೂ ಚಿನ್ಮಾತ್ರಮಯವು ಚಿನ್ಮಯವು. ನೀನೂ ಚಿತ್ತು. ನಾನೂ ಚಿತ್ತು. ಈ ಲೋಕಗಳೂ ಚಿತ್ತು. ಅದರಿಂದ ಚಿತ್ತು ಅಲ್ಲದ ಯಾವುದೂ ಇಲ್ಲವೇ ಇಲ್ಲ ಎಂಬುದೇ ಸಂಗ್ರಹವಾದ ತತ್ವಾರ್ಥವು.

ಭವ್ಯೋಽಸಿ ಚೇತ್ತದೇತಸ್ಮಾತ್ಸರ್ವಮಾಪ್ನೋಽಸಿ ನಿಶ್ಚಯಾತ್ ।
ನೋಚೇತ್ತದ್ಬಹ್ವಪಿ ಪ್ರೋಕ್ತಂ ತ್ವಯಿ ಭಸ್ಮನಿ ಹೂಯತೇ ॥ ೧೨ ॥

ಚಿಜ್ಜೇತ್ಯಕಲನಾಬಂಧಸ್ತನ್ಮುಕ್ತಿರ್ಮುಕ್ತಿರುಚ್ಯತೇ ।
ಚಿದಚೇತ್ಯಾಖಿಲಾತ್ಮೇತಿ ಸರ್ವಸಿದ್ಧಾಂತಸಂಗ್ರಹಃ ॥ ೧೩ ॥

---

೧೨. ನೀನು ಶ್ರದ್ಧಾವಂತನೂ ವಿವೇಕಿಯೂ ಆಗಿರುವುದೇ ಆದರೆ, ಈ ಒಂದು ಸಿದ್ಧಾಂತದಿಂದಲೇ ಎಲ್ಲವನ್ನೂ ಪಡೆದುಕೊಳ್ಳುವೆ. ಹಾಗೆ ನೀನು ಶ್ರದ್ಧಾ ವಿವೇಕ ಸಂಪನ್ನನಲ್ಲದಿದ್ದರೆ, ನಿನಗೆ ಬೇಕಾದಷ್ಟು ಹೇಳಿದರೂ ಎಲ್ಲವೂ ಬೂದಿಯಲ್ಲಿ ಹೋಮ ಮಾಡಿದಂತಾಗುವುದು.

೧೩. ಚಿತ್ತು ಚೇತ್ಯರೂಪವಾಗಿ ಕಲ್ಪಿತವಾಗುವುದೇ ಬಂಧವು. ಹಾಗೆ ಕಲ್ಪಿತವಾದ ಬಂಧನದಿಂದ ತಪ್ಪಿಸಿಕೊಳ್ಳುವುದೇ ಮುಕ್ತಿಯು ಚಿತ್ತು ಯಾವಾಗಲೂ ಚೇತ್ಯವಲ್ಲ. ಅದು ಅಖಿಲಾತ್ಮ (ವು ಆದ್ದರಿಂದ ಯಾವುದೋ ಒಂದು ಅಲ್ಲ.) ಎಂಬುದೇ ಸಿದ್ಧಾಂತಗಳ ಸಂಗ್ರಹ ಸರ್ವಸ್ವವು.

(ಇಂದ್ರಿಯಾಧೀನವಾದ ಮನಸ್ಸು ಬಹಿರ್ಮುಖವಾಗುವುದೇ ವೃತ್ತಿಯು. ಇದು ಸ್ಥೂಲವಾಗಿದ್ದರೆ ಕಾಯಚೇಷ್ಟಾರೂಪವಾಗಿ ಪ್ರಾಪಂಚಿಕ ವ್ಯವಹಾರವಾಗುವುದು. ಹಾಗಿಲ್ಲದೆ ಕರ್ಮೇಂದ್ರಿಯಗಳು ಚೇಷ್ಟಾಶೂನ್ಯವಾಗಿದ್ದರೂ, ಜ್ಞಾನೇಂದ್ರಿಯ ವ್ಯಾಪಾರದಲ್ಲಿ ಪ್ರವೃತ್ತನಾಗಿದ್ದರೆ, ಅದು ಚಿಂತನವು. ಅದಕ್ಕಿಂತ ಸೂಕ್ಷ್ಮವಾಗಿ ತನ್ಮಾತ್ರಗಳಲ್ಲಿ ಸಿಕ್ಕಿಬಿದ್ದು ಅಲ್ಲಿ ವ್ಯಾಪಾರ ಮಾಡುತ್ತಿರುವುದೇ ಸ್ವಪ್ನದಂತಹ ಸೂಕ್ಷ್ಮ ವ್ಯಾಪಾರವು. ಮೊದಲನೆಯೆರಡೂ ಜಾಗರದಲ್ಲಿಯೂ ಮೂರನೆಯದು ಸ್ವಪ್ನದಲ್ಲಿಯೂ ನಡೆಯುವ ವ್ಯಾಪಾರಗಳು. ಇವು ಎಷ್ಟೋ ಸೂಕ್ಷ್ಮವಾಗಿದ್ದರೂ ದ್ವಿತ್ವಕಲ್ಪನೆಯಿಂದ, ಭೇದಾಂಗೀಕಾರದಿಂದ ನಡೆಯುವ ವ್ಯಾಪಾರಗಳು.

ಈ ದ್ವಿತ್ವವೂ ಭೇದಕಲ್ಪನೆಯೂ ಬರುವುದು ತಾನು ಪ್ರತ್ಯೇಕ ಎಂದುಕೊಳ್ಳುವುದರಿಂದ. ಹಿಂದೆ ಉತ್ಪತ್ತಿ ಪ್ರಕರಣದಲ್ಲಿ ಹೇಳಿರುವ ಆಕಾಶಜೋಪಾಖ್ಯಾನವನ್ನು ಸ್ಮರಿಸಿಕೊಳ್ಳಿ.

ಪ್ರವಾಹವು ಹೋಗುತ್ತಿರುವಾಗ ನೀರಿನ ಹನಿಗಳು ಸಿಡಿದು ಒಂದು ಗಳಿಗೆ

ಏವಂ ನಿಶ್ಚಯಮಾದಾಯ ವಿಲೋಕಯಸಿ ಹೇಲಯಾ ।
ಸ್ವಯಮೇವಾತ್ಮನಾತ್ಮಾನಮನಂತಂ ಪದಮಾಪ್ಸ್ಯಸಿ ॥ ೧೪ ॥

ನೀರಿನ ಮೇಲೆಯೇ ಪ್ರತ್ಯೇಕವಾಗಿ ಇದ್ದು ಮತ್ತೆ ಅಲ್ಲಿಯೇ ಲೀನವಾಗುವುದನ್ನು ಚಿಂತಿಸಿದರೆ ದ್ವಿತ್ವವು ವ್ಯಕ್ತವಾಗುವುದು.

ಹಾಗೆಯೇ ಒಂದೇ ಬೀಜದಿಂದ ಹೊರಟ ಸಸಿಯಲ್ಲಿ ವಿರುದ್ಧ ಲಕ್ಷಣಗಳಾದ ಬೇರು, ಕಾಂಡ, ಎಲೆ, ಹೂ, ಕಾಯಿ, ಹಣ್ಣುಗಳೆಲ್ಲವೂ ಪ್ರಕಟವಾಗುವುದನ್ನು ಚಿಂತಿಸಿ ನೋಡಿ. ನಮ್ಮವರು ಹೇಳುವ ಸೃಷ್ಟಿಯ ಕಥೆಗಳಲ್ಲಿ ಕಶ್ಯಪ ಸೃಷ್ಟಿಯನ್ನು ಕುರಿತು ಚಿಂತಿಸಿ, ಕಶ್ಯಪನು ಅದಿತಿ, ದಿತಿ, ವಿನತಾ, ಕದ್ರು ಮೊದಲಾದ ಹೆಂಡತಿಯರಲ್ಲಿ ದೇವತೆಗಳು, ದೈತ್ಯರು, ಪಕ್ಷಿಗಳು, ಸರ್ಪಗಳು, ಮೊದಲಾದವರನ್ನು ಪಡೆದನು. ಅದರಿಂದ, ಬೀಜವೊಂದೇ ಕ್ಷೇತ್ರ ಕ್ಷೇತ್ರಾಂತರಗಳಲ್ಲಿ ರೂಪಾಂತರಗಳನ್ನು ಹೊಂದಿ ನಾಮಾಂತರಗಳನ್ನು ಪಡೆದು ವ್ಯವಹಾರಕ್ಕೆ ಬರುವುದು.

ಹಾಗೆಯೇ ಕ್ಷೇತ್ರ, ಬೀಜ, ಎರಡೂ ಭಗವದ್ಗೀತೆಯ ಪ್ರಕಾರ ಒಂದೇ!
ಪ್ರಕೃತಿಂ ಸ್ವಾಮವಷ್ಟಭ್ಯ ವಿಸೃಜಾಮಿ ಪುನಃ ಪುನಃ ಭೂತ ॥
ಗ್ರಾಮ ಮಿಮಂ ಕೃತ್ಸ್ನಂ ಅವಶಂ ಪ್ರಕೃತೇರ್ವಶಾತ್ ॥೮॥
ಅಧ್ಯಾಯ ೧೩-ಶ್ಲೊ ೨೦-೨೧

ಮತ್ತು ಅಧ್ಯಾಯ ೧೮ ಶ್ಲೋ ೫೯-೬೦-೬೧ ಅದೇ ಅಧ್ಯಾಯ

ಮಯಾಧ್ಯಕ್ಷೇಣಪ್ರಕೃತಿಃ ಸೂಯತೇ ಸಚರಾಚರಂ ॥೨೦॥ ಅದೇ ಅಧ್ಯಾಯ ಪಿತಾಹಮಸ್ಯಜಗತೋ ಮಾತಾಧಾತಾ ಪಿತಾಮಹಃ॥೧೭॥ಪ್ರಭವಃ ಪ್ರಲಯಸ್ಸ್ಥಾನಂ ನಿಧಾನಂ ಬೀಜಮವ್ಯಯಂ॥೧೮॥ ಅಮೃತಂ ಚೈವ ಮೃತ್ಯುಶ್ಚ ಸದಸಚ್ಚಾಹಮರ್ಜುನ ॥೧೯॥

(ಹೀಗೆಯೇ ಮುಂದೆಯೂ ಅನುಸಂಧಾನ ಮಾಡಿ)

೧೪. ಈ ನಿಶ್ಚಯವನ್ನು ನೀನು ಒಪ್ಪಿಕೊಂಡುದೇ ಆದರೆ ಲೋಕವೆಲ್ಲವನ್ನೂ ಲೀಲಾಜಾಲವಾಗಿ ಕಾಣುವೆ. ಆಗ ಬೇರೊಬ್ಬರ ಸಹಾಯವಿಲ್ಲದೆ, ಸ್ವಯಂ, ನೀನೇ ಅನಂತವಾದ ಆತ್ಮಪದವನ್ನು ಹೊಂದುವೆ.

ಖಂ ಪ್ರಜಾಪ್ಯಹಮತ್ರೈವ ಮುನಯಃ ಸಪ್ತ ಸಂಗತಾಃ ।
ಕೇನಾಪಿ ಸುರಕಾರ್ಯೇಣ ವಸ್ತವ್ಯಂ ತತ್ರ ವೈ ಮಯಾ ॥ ೧೫ ॥

ರಾಜನ್ಯಾವದಯಂ ದೇಹಸ್ತಾವನ್ಮುಕ್ತಧಿಯಾಮಪಿ ।
ಯಥಾಪ್ರಾಪ್ತಕ್ರಿಯಾತ್ಯಾಗೋ ರೋಚತೇ ನ ಸ್ವಭಾವತಃ ॥ ೧೬ ॥

ಇತಿ ಕಥಿತವತಾಥ ಭಾರ್ಗವೇಣ
ಸ್ಫುಟಜಲರಾಶಿಪಥಾ ಮಹಾಜವೇನ ।
ಪ್ಲುತಮಲಿಶಬಲೇ ನಭೋಂತರಾಲೆ
ತರಲತರಂಗವದಾಕುಲೇ ಗ್ರಹೌಘೈಃ ॥ ೧೭ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ಉಪಶಮ ಪ್ರಕರಣೇ "ಬಲ್ಯುಪದೇಶೋಯೋಗೋ" ನಾಮ
ಷಡ್ವಿಂಶಃ ಸರ್ಗಃ

---

೧೫. ಸಪ್ತರ್ಷಿಗಳೂ ಆಗಲೇ ಯಾವುದೋ ಒಂದು ದೇವಕಾರ್ಯಕ್ಕಾಗಿ ಸೇರಿರುವರು. ನಾನು ಅಲ್ಲಿ ಇರಬೇಬೇಕು. ಆದರಿಂದ ನಾನು ಸ್ವರ್ಗಕ್ಕೆ ಹೋಗುವೆನು.

೧೬. ರಾಜನೆ, ಎಲ್ಲಿಯವರೆಗೆ ಈ ದೇಹವಿರುವುದೋ ಅದುವರೆಗೂ ಜೀವನ್ಮುಕ್ತರಿಗೂ ಕೂಡ, ಸ್ವಭಾವಾನುಸಾರವಾಗಿ ಮಾಡಬೇಕಾಗಿರುವ ಕರ್ತವ್ಯವನ್ನು ಬಿಡುವುದೂ ಒಪ್ಪಿಗೆಯಾಗುವುದಿಲ್ಲ.

(ಮುಕ್ತನಾದ ಶುಕ್ರನಿಗೂ ಸಪ್ತರ್ಷಿಗಳಿಗೂ ಕರ್ತವ್ಯವಾಗಿ ಬಂದಿರುವುದು ದೇವಕಾರ್ಯ ಸ್ವಭಾವ ಎಂಬುದಕ್ಕೆ ಜನ್ಮತಃ, ಜ್ಞಾನತಃ, ಪದತಃ ಎಂದು ಅರ್ಥಮಾಡಿದರೆ ಸರಿಹೋಗುವುದು. ಇಂಗ್ಲೀಷಿನ Ex-officio ಎಂಬ ಪದದ ಅರ್ಥವನ್ನು ಚಿಂತಿಸಿ.)

೧೭. ಹೀಗೆ ಹೇಳಿ, ಶುಕ್ರಾಚಾರ್ಯನು ಮೋಡಗಳನ್ನು ಸೀಳುವಂತಹ ಮಹಾವೇಗದಿಂದ, ಚಂಚಲವಾದ ಜಲತರಂಗಗಳಂತೆ (ಪ್ರಕಾಶ ಪರಂಪರೆಯಿಂದ) ಮೆರೆಯುತ್ತಿರುವ ಗ್ರಹಗಳ ಗುಂಪು-ಗುಂಪುಗಳಿಂದ ತುಂಬಿರುವ, ಭ್ರಮರ ಪಂಕ್ತಿಯೋ ಎಂಬಂತೆ ನೀಲವಾಗಿರುವ, ಆಕಾಶ ಮಧ್ಯದಲ್ಲಿ ಹಾರಿ ಹೊರಟುಹೋದನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಉಪಶಮ ಪ್ರಕರಣದಲ್ಲಿ "ಬಲ್ಯುಪದೇಶ" ಎಂಬ ಇಪ್ಪತ್ತಾರನೆಯ ಸರ್ಗವು

ಸಪ್ತವಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ--

ಸುರಾಸುರಸಭಾಜ್ಯೇಷ್ಠೇ ತಸ್ಮಿನ್ ಭೃಗುಸುತೇ ಗತೇ ।
ಮನಸಾ ಚಿಂತಯಾಮಾಸ ಬಲಿರ್ಬುದ್ಧಿಮತಾಂ ವರಃ ॥ ೧ ॥

ಯುಕ್ತಮುಕ್ತಂ ಭಗವತಾ ಚಿದೇವೇದಂ ಜಗತ್ತ್ರಯಂ ।
ಚಿದಹಂ ಚಿದಿಮೇ ಲೋಕಾಶ್ಚಿದಾಶಾಶ್ಚಿದಿಯಂ ಕ್ರಿಯಾ ॥ ೨ ॥

ಸಬಾಹ್ಯಾಭ್ಯನ್ತರಂ ಸರ್ವಂ ಚಿದೇವ ಪರಮಾರ್ಥತಃ ।
ಅಸ್ತಿ ಚಿದ್ವ್ಯತಿರೇಕೇಣ ನೇಹ ಕಿಂಚನ ಕುತ್ರಚಿತ್ ॥ ೩ ॥

ಇಪ್ಪತ್ತೇಳನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು--ಸುರಾಸುರರ ಸಭೆಯಲ್ಲಿ ಹಿರಿಯನಾದ ಶುಕ್ರಾಚಾರ್ಯನು ಹೊರಟುಹೋದ ಮೇಲೆ, ಬುದ್ಧಿವಂತರಲ್ಲಿ ಶ್ರೇಷ್ಠನಾದ ಬಲಿಯು ಮನಸ್ಸಿನಲ್ಲಿ ಹೀಗೆ ಯೋಚಿಸಿದನು.

೨. ಭಗವಂತನಾದ ಶುಕ್ರನು ಹೇಳಿದುದು ಸರಿ. ಈ ಜಗತ್ತ್ರಯವೆಲ್ಲವೂ ಚಿತ್ತೇ ಸರಿ! ನಾನೂ ಚಿತ್ತೇ! ಈ ಲೋಕಗಳೂ ಚಿತ್ತೇ! ದಿಕ್ಕುಗಳೂ ಚಿತ್ತೇ! ಈ ವ್ಯಾಪಾರಗಳೂ ಚಿತ್ತೇ!

೩, ಒಳಗೆ ಹೊರಗೆ, ಇರುವ ಸರ್ವವೂ ಪರಮಾರ್ಥದೃಷ್ಟಿಯಿಂದ ನೋಡಿದರೆ ಚಿತ್ತೇ! ಎಲ್ಲಿ ನೋಡಿದರೂ ಚಿತ್ತಲ್ಲದ ಇನ್ನು ಯಾವುದೂ ಇಲ್ಲವೇ ಇಲ್ಲ.

(ಪರಮಾರ್ಥದೃಷ್ಟಿ ಆಪಾತದೃಷ್ಟಿ ಎಂದು ದೃಷ್ಟಿಗಳೆರಡು. ವಿಚಾರಮಾಡದೆ ಕಂಡಷ್ಟನ್ನು ಕಂಡ ಹಾಗೆಯೇ ಒಪ್ಪಿಕೊಳ್ಳುವುದು ಆಪಾತ ದೃಷ್ಟಿ ಹಾಗಿಲ್ಲದೆ ಎಲ್ಲಿಯ ವರೆಗೆ ಸ್ವಾನುಭವ, ಶಾಸ್ತ್ರ, ವಿವೇಕ, ಯುಕ್ತಿಗಳನ್ನು ಹಿಡಿದು ಹೋಗಬಹುದೋ ಅಲ್ಲಿಯವರೆಗೆ ಹೋಗಿ ಸಿದ್ಧಾಂತಮಾಡುವುದು ಪರಮಾರ್ಥ ದೃಷ್ಟಿ.

ಅಯಮಾದಿತ್ಯ ಇತ್ಯರ್ಕೋ ನ ಚಿತಾ ಯದಿ ಚೇತ್ಯತೇ ।
ತದರ್ಕತಮಸೋರ್ಭೇದಃ ಕಥಮೇವೋಪಲಭ್ಯತೇ ॥ ೪ ॥

ಇಯಂ ಭೂರಿತಿ ಭೂರೇಷಾ ಚಿತಾ ಯದಿ ನ ಚೇತ್ಯತೇ ।
ಭೂಮೇಃ ಕಿಂ ನಾಮ ಭೂಮಿತ್ವಂ ತತ್ಸ್ವಪ್ನೇ ಭವ್ಯತಾಂ ಗತಂ ॥ ೫ ॥

ಸ್ವಾನುಭವವೇ ಎಲ್ಲ ಜ್ಞಾನಕ್ಕೂ ಮೂಲವಾದರೂ ಅದನ್ನೇ ಪರಮಾರ್ಥ ವೆನ್ನದೆ ಶಾಸ್ತ್ರೋಪದೇಶವನ್ನೂ ಅದನ್ನೂ ಸಮನ್ವಯಮಾಡಬೇಕು. ಅನೇಕ ವೇಳೆ ಅನುಭವವು ಶಾಸ್ತ್ರೋಪದೇಶವನ್ನು ತನ್ನ ಕಡೆಗೆ ತಿರುಗಿಸಿಕೊಳ್ಳಬಹುದಾದ ಸಂಭವವುಂಟಾಗಿ, ಅನುಭವ, ಉಪದೇಶ ಎರಡನ್ನೂ ಸಮನ್ವಯಮಾಡಲು ವಿವೇಕ ವನ್ನು ಹಿಡಿಯಬೇಕು. ಅನುಭವ, ಉಪದೇಶ, ವಿವೇಕ, ಮೂರೂ ಪುರುಷತಂತ್ರ ವಾಗಿ ಅಪೂರ್ಣವಾದ್ದರಿಂದ, ತಪ್ಪುದಾರಿಹಿಡಿಯಬಹುದು. ಅದರಿಂದ ಅವೆಲ್ಲವನ್ನು ಯುಕ್ತಿಯಿಂದ ಸರಿಹೋಗಿಸಿಕೊಳ್ಳಬೇಕು.

ಒಟ್ಟಿನಲ್ಲಿ ಕರಣಗಳಿಂದ ಸಂಗ್ರಹಿಸಬೇಕಾದ ಜ್ಞಾನವು ಶುದ್ಧವಾಗಿರಲು ಏನೇನು ಮಾಡಬೇಕೋ ಎಲ್ಲವನ್ನೂ ಮಾಡಬೇಕು. "ಆ ಜ್ಞಾನವು ತನ್ನ ಸ್ವರೂಪ, ತಾನು ಜ್ಞಾನವಲ್ಲದೆ ಇನ್ನೇನೂ ಅಲ್ಲ"ಎಂಬ ಅರಿವು ದೃಢವಾಗಿ ವ್ಯವಹಾರ ಪ್ರಬೋಧ ಕವಾಗುವವರೆಗೆ ಅಲ್ಪತ್ವವೂ, ಬಾಹ್ಯತ್ವವೂ ತಪ್ಪುವುದಿಲ್ಲ. ಸಾಂಪ್ರದಾಯಿಕರ ಮಾತಿ ನಲ್ಲಿ ಹೇಳುವುದಾದರೆ, ಪ್ರಜ್ಞಾನ ಘನಪ್ರವೇಶವಾಗುವವರೆಗೆ ಈ ನಾಲ್ಕನ್ನೂ ಹಿಡಿದು ವ್ಯವಹರಿಸಬೇಕು. ಪ್ರಜ್ಞಾನ ಘನಪ್ರವೇಶನಾದ ಮೇಲೆ ಬರುವುದು ಪರಮಾರ್ಥ ದೃಷ್ಟಿ.)

(ಜ್ಯೋತಿಶ್ಶಾಸ್ತ್ರದಲ್ಲಿ ರವಿ ಗುರು ಬುಧ ಶುಕ್ರಯೋಗದ ಫಲವನ್ನು ಕುರಿತು ಏನು ಹೇಳಿದೆ ಎಂಬುದನ್ನು ಚಿಂತಿಸಿ.)

೪. ಆದಿತ್ಯನು ಇವನು ಎಂದು ಚಿತ್ತು ಮೊದಲೇ ಗೊತ್ತುಮಾಡಿರುವುದು. ಹಾಗಿಲ್ಲದಿದ್ದರೆ, ಸೂರ್ಯನಿಗೂ, ಕತ್ತಲೆಗೂ ಭೇದವನ್ನು ಮಾಡುವವರು ಯಾರು?

೫. ಭೂಮಿಯನ್ನು ಭೂಮಿಯೆಂದು ಮೊದಲೇ ಚಿತ್ತು ಗೊತ್ತುಮಾಡಿರು ವುದು. ಹಾಗಿಲ್ಲದಿದ್ದರೆ ಭೂಮಿಯ ಭೂಮಿತ್ವವೆನ್ನುವುದೇನು ? ಭೂಮಿಯೆಂದು ರೂಢಿಯಲ್ಲಿ ಬರುತ್ತಿದ್ದುದು ತಾನೇ ಹೇಗೆ ?

ಇಮಾ ದಿಶೋ ದಿಶ ಇತಿ ಚೇತ್ಯಂತೇ ನ ಚಿತಾ ಯದಿ ।
ತತ್ಕಿಂ ನಾಮ ದಿಶಾಂ ದಿಕ್ತ್ವಂ ಶೈಲಾನಾಂ ಚಾಪಿ ಕಾದ್ರಿತಾ ॥ ೬ ॥

ಇಮಂ ಜಗಜ್ಜಗದಿತಿ ಚಿತಾ ಯದಿ ನ ಚೇತ್ಯತೇ ।
ತತ್ಕಿಂ ಜಗತ್ವಂ ಜಗತೋ ನಭಸ್ತ್ವಂ ನಭಸೋಽಥ ಕಿಂ ॥ ೭ ॥

ಕಾಯೋಽಯಂ ಪರ್ವತಾಕಾರಶ್ಚಿತಾ ಯದಿ ನ ಚೇತ್ಯತೇ ।
ತತ್ಕಿಂ ನಾಮ ಶರೀರತ್ವಂ ಶರೀರಸ್ಯ ಶರೀರಿಣಾಂ ॥ ೮ ॥

ಚಿದಿಂದ್ರಿಯಾಣಿ ಚಿತ್ಕಾಯಶ್ಚಿನ್ಮನಶ್ಚಿತ್ತದೇಷಣಾ ।
ಚಿದಂತಶ್ಚಿದ್ಬಹಿಶ್ಚಿತ್ಖಂ ಚಿದ್ಭಾವಾಶ್ಚಿದ್ಭವಸ್ಥಿತಿಃ ॥ ೯ ॥

ಚಿತೈವೈನಮಹಂ ಸರ್ವಂ ಸ್ಪರ್ಶನೈಷಣಪೂರ್ವಕಂ ।
ಕರೋಮಿ ಮಾತ್ರಾಸಂಸ್ಪರ್ಶಂ ಶರೀರೇಣ ನ ಕಿಂಚನ ॥ ೧೦ ॥

---

೬. ದಿಕ್ಕುಗಳನ್ನು ದಿಕ್ಕುಗಳೆಂದೂ ಗೊತ್ತುಮಾಡಿರುವುದೂ ಚಿತ್ತೆ ! ಇಲ್ಲದಿದ್ದರೆ ದಿಕ್ಕುಗಳಿಗೆ ದಿಕ್ತ್ವವೆಲ್ಲಿ ? ಶೈಲಗಳಿಗೆ ಅದ್ರಿತ್ವವೆಲ್ಲಿ ?

೭. ಇದು ಜಗತ್ತು ಎಂದು ಜಗತ್ತನ್ನೇ ಚಿತ್ತು ಗೊತ್ತುಮಾಡದಿದ್ದರೆ, ಜಗತ್ತಿನ ಜಗತ್ತ್ವವೆಲ್ಲಿ ? ನಭದ ನಭಸ್ತ್ವವೆಲ್ಲಿ ?

೮. ಬೆಟ್ಟದ ಹಾಗಿರುವ ಈ ಶರೀರವನ್ನು ಚಿತ್ತು ಚೇತನಗೊಳಿಸದಿದ್ದರೆ, ಶರೀರಿಗಳಿಗೆ ಶರೀರವಿದ್ದರೆ ತಾನೇ ಏನು ?

೯. (ಅದರಿಂದ) ಚಿತ್ತೇ ಇಂದ್ರಿಯಗಳು, ಚಿತ್ತೇ ದೇಹವು, ಚಿತ್ತೇ ಮನವು, ಅದರ ಸಂಕಲ್ಪವೂ ಚಿತ್ತೇ ! ಒಳಗಿರುವುದೂ ಚಿತ್ತು, ಹೊರಗಿರುವುದೂ ಚಿತ್ತು. ಚಿತ್ತೇ ಆಕಾಶವು, ಚಿತ್ತೇ ಸಮಸ್ತ ಪ್ರಾಣಿ ವಸ್ತು ಜಾತವು. ಸಂಸಾರವೂ ಚಿತ್ತೇ !

೧೦. ನಾನು ಸಂಕಲ್ಪ ಪೂರ್ವಕವಾಗಿ ಸುಖದುಃಖಾದಿ ಸ್ವರೂಪವಾದ ಮಾತ್ರಾ ಸಂಸ್ಪರ್ಶವನ್ನೂ ಅನುಭವಿಸುತ್ತಿರುವುದೂ ಚಿತ್ತಿನಿಂದಲೇ ಹೊರತು ಶರೀರದಿಂದಲ್ಲ.

(ಮಾತ್ರಾ ಸ್ಪರ್ಶಾಸ್ತು ಕೌಂತೇಯ। ಶೀತೋಷ್ಣ ಸುಖದುಃಖದಾಃ । ಆಗಮಾಪಾಯಿನೋ ನಿತ್ಯಂ । ತಾಂ ತಿತಿಕ್ಷಸ್ವ-ಭಾರತ ॥ ಗೀತಾ.)

ಕಿಮನೇನ ಶರೀರೇಣ ಕಾಷ್ಠಲೋಷ್ಟಸಮೇನ ಮೇ ।
ಅಶೇಷಜಗದೇಕಾತ್ಮಾ ಚಿದಹಂ ಚೇತನಾತ್ಮಕಃ ॥ ೧೧ ॥

ಅಹಂ ಚಿದಂಬರೇ ಭಾನೌ ಅಹಂ ಚಿದ್ಭೂತಪಂಜರೇ ।
ಸುರಾಸುರೇಷು ಚಿದಹಂ ಸ್ಥಾವರೇಷು ಚರೇಷು ಚ ॥ ೧೨ ॥

ಚಿದಸ್ತೀಹ ದ್ವಿತೀಯಾ ಹಿ ಕಲ್ಪನೈವ ನ ವಿದ್ಯತೇ ।
ದ್ವಿತ್ವಸ್ಯಾಸಂಭವಾಲ್ಲೋಕೇ ಕಃ ಶತ್ರು ಕಶ್ಚ ವಾ ಸುಹುತ್ ॥ ೧೩ ॥

ಮಾತ್ರಾ ಎಂದರೆ ಪಂಚಭೂತಗಳ ಸೂಕ್ಷ್ಮಾಂಶಗಳು ಶರೀರವು ಆಗಿರುವುದು ಪಂಚೀಕೃತ ಪಂಚ ಮಹಾ ಭೂತಗಳಿಂದ. ಪಂಚಭೂತಗಳಸೂಕ್ಷ್ಮರೂಪವೇ ತನ್ಮಾತ್ರೆ.

ಪಂಚೀಕರಣದಲ್ಲಿ ಈ ವಿಚಾರವನ್ನು ಸ್ಪಷ್ಟವಾಗಿ ಹೇಳಿದೆ. ಪಂಚೀಕರಣ ವನ್ನು ಅನುಭವಾಮೃತ, ವಿವೇಕ ಚಿಂತಾಮಣಿ, ಪರಮಾರ್ಥ ಬೋಧೆ. ಪಂಚದಶಿ, ಗಳಲ್ಲಿ ನೋಡಿ.

೧೧. ಕಾಷ್ಠ (ಸೌದೆ) ಲೋಷ್ಟ (ಮಣ್ಣು ಹೆಂಟೆ) ಗಳಿಗೆ ಸಮನಾಗಿ ಜಡವಾ ಗಿರುವ ಈ ಶರೀರದಿಂದ ನನಗೆ ಆಗಬೇಕಾದುದೇನು ? ಅಶೇಷ ಜಗತ್ತು ಆಗಿರುವ ಏಕಾತ್ಮನೂ ಚೇತನಾತ್ಮಕನೂ ಆದ ಚಿತ್ತೇ ನಾನು !

೧೨. ಆಕಾಶದಲ್ಲಿರುವ ಸೂರ್ಯನಲ್ಲಿರುವ ಚಿತ್ತೂ ನಾನೇ ! ಪ್ರಾಣಿಗಳಲ್ಲಿರುವ ಚಿತ್ತೂ ನಾನೇ ! ಸುರಾಸುರರಲ್ಲಿ ಇರುವ ಚಿತ್ತೂ ನಾನೇ ! ಸ್ಥಾವರ ಜಂಗಮ ಗಳಲ್ಲಿರುವ ಚಿತ್ತೂ ನಾನೇ !

೧೩. ಇರುವುದೆಲ್ಲಾ ಚಿತ್ತು ಒಂದೇ ಆಗಿರಲು, ಇನ್ನು ಚಿತ್ತಲ್ಲದ ಎರಡನೆ ಯದರ ಕಲ್ಪನೆಯಾದರೂ ಎಲ್ಲಿಂದ ಬರಬೇಕು ? ಲೋಕದಲ್ಲಿ ಚಿತ್ತು ಅಲ್ಲದ ಎರಡನೆಯದೊಂದು ಇಲ್ಲವೇ ಇಲ್ಲವಾಗಿರಲು ಶತ್ರುವು ಯಾರು ? ಮಿತ್ರರು ಯಾರು ?

ಬಲಿನಾಮ್ನಃ ಶರೀರಸ್ಯ ಚ್ಛಿನ್ನೇ ಶಿರಸಿ ಭಾಸುರೇ ।
ಚಿತಃ ಕಿಂತದ್ಭವೇಚ್ಛಿನ್ನಂ ಸರ್ವಲೋಕಾವಪೂರಣಾತ್ ॥ ೧೪ ॥

ಚಿತಾ ಸಂಚೇತಿತೋ ದ್ವೇಷೋ ದ್ವೇಷೋ ಭವತಿ ನಾನ್ಯಥಾ ।
ತಸ್ಮಾದ್ದ್ವೇಷಾದಯಃ ಸರ್ವೇ ಭಾವಾಭಾವಾಶ್ಚಿದಾತ್ಮಕಾಃ ॥ ೧೫ ॥

ನ ಚಿತೋ ವ್ಯತಿರೇಕೇಣ ಪ್ರವಿಚಾರ್ಯಾಪಿ ಕಿಂಚನ ।
ಆಸಾದ್ಯತೇ ಕಿಲ ಸ್ಫಾರಾದಸ್ಮಾತ್ತ್ರಿಭುವನೋದರಾತ್ ॥ ೧೬ ॥

ನ ದ್ವೇಷೋಽಸ್ತಿ ನ ರಾಗೋಸ್ತಿ ನ ಮನೋ ನಾಸ್ಯ ವೃತ್ತಯಃ ।
ಚಿನ್ಮಾತ್ರಸ್ಯಾತಿಶುದ್ಧಸ್ಯ ವಿಕಲ್ಪಕಲನಾ ಕುತಃ ॥ ೧೭ ॥

ಚಿದಹಂ ಸರ್ವಗೋ ವ್ಯಾಪೀ ನಿತ್ಯಾನಂದಮಯಾತ್ಮಕಃ ।
ವಿಕಲ್ಪಕಲನಾತೀತೋ ದ್ವಿತೀಯಾಂಶವಿವರ್ಜಿತಃ ॥ ೧೮ ॥

---

೧೪. ಬಲಿಯೆಂಬ ನಾಮವಿರುವ ಈ ಶರೀರದ ತಲೆಯನ್ನು ಕತ್ತರಿಸಿ ಹಾಕಿದರೆ, ಸರ್ವ ಲೋಕಗಳನ್ನೂ ವ್ಯಾಪಿಸಿರುವ ಚಿತ್ತಿಗೆ ಏನು ಹೋದಂತಾಯಿತು?

೧೫. ದ್ವೇಷವೇ ಆದರೂ ಚಿತ್ತಿನಿಂದ ಪ್ರೇರಿತವಾದರೆ ದ್ವೇಷವಾಗುವುದೇ ಹೊರತು, ಅನ್ಯಥಾ ಆಗುವುದಿಲ್ಲ. ಅದರಿಂದ ದ್ವೇಷಾದಿಭಾವಗಳೂ ಅಭಾವಗಳೂ ಎಲ್ಲವೂ ಚಿದಾತ್ಮಕಗಳೇ !

೧೬. ಎಷ್ಟೇ ವಿಚಾರ ಮಾಡಿದರೂ, ಇಷ್ಟು ದೊಡ್ಡದಾಗಿರುವ ಈ ಜಗತ್ತ್ರಯದಲ್ಲಿ ಚಿತ್ತು ಅಲ್ಲದ್ದು, ಚಿತ್ತಿಗಿಂತ ಬೇರೆಯಾದುದು, ಯಾವುದೂ ಇಲ್ಲ.

೧೭. ದ್ವೇಷವಿಲ್ಲ, ರಾಗವಿಲ್ಲ, ಮನಸ್ಸಿಲ್ಲ, ಮನಸ್ಸಿನ ವೃತ್ತಿಗಳಿಲ್ಲ. ಅತಿ ಶುದ್ಧವಾದ ಚಿತ್ತಿಗೆ ವಿಕಲ್ಪಾದಿಗಳು ಬಂದುವು ಎಂಬ ಕಲ್ಪನೆಯಾದರೂ ಎಂತು ?

೧೮. ನಾನು ಚಿದಾಕಾರನು, ಸರ್ವಗತನು, ಸರ್ವವ್ಯಾಪಿಯು, ನಿತ್ಯಾನಂದಮಯನು. ವಿಕಲ್ಪಗಳಿಗೆ ಅತೀತನು. ಅಖಂಡ ಸ್ವರೂಪನು.

ಚಿತ್ಶಕ್ತಿರಿತಿ ಯನ್ನಾಮ ನಿರ್ಣಾಮಾಯಾ ನ ನಾಮ ತತ್ ।
ಶಬ್ದಾತ್ಮಿಕೈಷಾ ಚಿಚ್ಛಕ್ತಿಃ ಪರಿಸ್ಫುರತಿ ಸರ್ವಗಾ ॥ ೧೯ ॥

ದೃಶ್ಯದರ್ಶನನಿರ್ಮುಕ್ತ ಕೇವಲಾಮಲರೂಪವಾನ್ ।
ನಿತ್ಯೋದಿತೋ ನಿರಾಭಾಸೋ ದ್ರಷ್ಟಾಸ್ಮಿ ಪರಮೇಶ್ವರಃ ॥ ೨೦ ॥

ಕಲ್ಪನಾವಿಕಲಾಕಾಶಃ ಕಾಲಕಾಂತಕಲಾಮಯಃ ।
ಆಭಾಸಮಾತ್ರಮುದಿತೋ ನಿತ್ಯಾಭಾಸವಿವರ್ಜಿತಃ ॥ ೨೧ ॥

ಭಾರೂಪೈಕಸ್ವರೂಪೇಽಸ್ಮಿನ್ಸ್ವರೂಪೇಣ ಜಯಾಮ್ಯಹಂ ॥ ೨೨ ॥

ಚೇತ್ಯರಂಜನರಿಕ್ತಾಯ ವಿಮುಕ್ತಾಯ ಮಹಾತ್ಮನೇ ।
ಪ್ರತ್ಯಕ್ಚೇತನರೂಪಾಯ ಸ್ವರೂಪಾಯ ನಮೋಽಸ್ತು ತೇ ॥ ೨೩ ॥

---

೧೯. ಚಿತ್ ಎಂಬ ಯಾವ ಹೆಸರುಂಟೋ ಆ ಹೆಸರೂ ಕೂಡ, ನಿರ್ನಾಮವಾದ ಆ ಚಿತ್ತಿಗೆ ಬಂದುದು. ಶಬ್ದಾತ್ಮಕವಾದ ಈ ಚಿಚ್ಛಕ್ತಿಯು ಸರ್ವಗತವಾಗಿ ಎಲ್ಲೆಲ್ಲೂ ತಾನೇ (ಇರುವಾಗ, ಅದಕ್ಕೆ ವರ್ಣಾತ್ಮಕ ನಾಮವೆಂತು ಬಂದೀತು ?)

೨೦. ದೃಶ್ಯ, ದರ್ಶನ, ಎಂಬ ಭೇದವೇ ಇಲ್ಲದ ನಿರ್ಮಲ ರೂಪನಾದ ದೃಕ್ ಸ್ವರೂಪನು ನಾನು. ನಾನು ನಿತ್ಯೋದಿತನು. ನಿರಾಭಾಸನು. ಕೇವಲನು. ಪರಮೇಶ್ವರನು.

೨೧. ಯಾವುದೊಂದು ಕಲ್ಪನೆಯೂ ಇಲ್ಲದವನು ನಾನು. ಕಾಲವೆಂಬ ಒಂದು ಸುಂದರ ಕಳೆಯುಳ್ಳವನು ನಾನು. (ಎಂದರೆ, ಎಲ್ಲವನ್ನೂ ಕಬಳಿಸುವ ಕಾಲವೂ ನನ್ನಲ್ಲಿ ಒಂದಂಶನಾಗಿರುವುದು.) ಆಭಾಸ ಮಾತ್ರನಾಗಿ ಹುಟ್ಟಿರುವವನು ನಾನು. ಮತ್ತೆ ಮತ್ತೆ ಹುಟ್ಟುವುದು ಎಂಬುದು ಇಲ್ಲದವನು ನಾನು.

೨೨. ಕೇವಲ ಪ್ರಕಾಶರೂಪವಾಗಿ ಸ್ವರೂಪಾವಗತನಾಗಿರುವ ನನಗೆ ಜಯವು.

೨೩. (ಎರಡನೆಯದೊಂದು ಇಲ್ಲವಾದುದರಿಂದ) ಚೈತ್ಯ ರಂಜನವೆಂಬ ವ್ಯಾಪಾರವಿಲ್ಲದೆ, ವಿಮುಕ್ತನಾಗಿರುವ ಮಹಾತ್ಮನಾಗಿ ಎಲ್ಲದಕ್ಕಿಂತ ವಿಲಕ್ಷಣವಾದ ಚೇತನವೇ ರೂಪವಾಗಿ, ಸ್ವಭಾವ ಸ್ವರೂಪನಾಗಿರುವ ನಿನಗೆ ನಮಸ್ಕಾರವು.

ಚಿತಯೇ ಚೇತ್ಯಮುಕ್ತಾಯ ಯುಕ್ತ್ಯಾ ಯುಕ್ತಾಯ ಯೋಗ್ಯಯಾ ।
ಸರ್ವಾವಭಾಸದೀಪಾಯ ಮಹ್ಯಮೇವ ನಮೋಸ್ತು ತೇ ॥ ೨೪ ॥

ಚೇತ್ಯನಿರ್ಮುಕ್ತಚಿದ್ರೂಪಂ ವಿಶ್ವಗ್ವಿಶ್ವಾವಪೂರತಂ ।
ಸಂಶಾಂತಸರ್ವಸಂವೇದ್ಯ ಸಚಿನ್ಮಾತ್ರಮಹಂ ಮಹತ್ ॥ ೨೫ ॥

ಆಕಾಶವದನಂತೋಽಹಮಪ್ಯಣೋರಣುರಾತತಃ ।
ನಾಸಾದಯಂತಿ ಮಾಮೇತಾಃ ಸುಖದುಃಖದಶಾ ದೃಶಃ ॥ ೨೬ ॥

ಸಂವೇದನಮಸಂವೇದ್ಯಮಚೇತ್ಯಂ ಚೇತನಂ ತತಂ ।
ನ ಶಕ್ತಾ ಮಾಂ ಪರಿಚ್ಛೇತ್ತುಂ ಭಾವಾಭಾವಾ ಜಗದ್ಗತಾಃ ॥ ೨೭ ॥

(ಲೋಕವೆಲ್ಲ ಅಸ್ಮತ್-ಯುಷ್ಮತ್ ಎಂಬ ಎರಡು ರೂಪವಾಗಿರುವುದು. ಹಿಂದಿನ ಶ್ಲೋಕದಲ್ಲಿ ಅಸ್ಮದ್ರೂಪನಿಗೆ ವಂದನವನ್ನು ಹೇಳಿ ಈಗ ಯುಷ್ಮದ್ರೂಪನಿಗೆ ವಂದನವನ್ನು ಹೇಳಿದೆ.)

೨೪. ಚೇತ್ಯ (ದೃಶ್ಯ)ವೇ ಇಲ್ಲದ ಚಿತ್ (ದೃಕ್) ಸ್ವರೂಪನಿಗೆ, ಮೋಕ್ಷವೇ ತಾನಾಗಿರುವವನಿಗೆ, ಎಲ್ಲವನ್ನೂ ಬೆಳಗುವ ಸ್ವಯಂಪ್ರಕಾಶನಾದ ದೀಪಸ್ವರೂಪನಿಗೆ, ನನ್ನ ರೂಪನಾಗಿರುವ ನಿನಗೆ ನಮಸ್ಕಾರವು.

(ಇಲ್ಲಿ ಅಸ್ಮತ್ ಯುಷ್ಮತ್ ಎರಡು ಶಬ್ದಗಳಿಗೂ ವಾಚ್ಯವೊಂದೇ ಎಂಬುದನ್ನು ಸ್ಪಷ್ಟವಾಗಿ ಹೇಳಿದೆ.)

೨೫. ಚೇತ್ಯ (ದೃಶ್ಯ) ವಿಲ್ಲದ ಚಿದ್ರೂಪನಾಗಿ, ಈ ವಿಶ್ವವನ್ನೆಲ್ಲ ಸುತ್ತಮುತ್ತಲೂ ತುಂಬಿರುವವನಾಗಿ, ವೇದ್ಯವಾದುದು ಇನ್ನೊಂದು ಇಲ್ಲದೆ ತಾನೇ ತಾನಾಗಿರುವ ಸಚ್ಚಿನ್ಮಾತ್ರನೂ ಮಹತ್ತೂ ನಾನೇ !

೨೬. ಆಕಾಶದಂತೆ ಅನಂತನು ನಾನು ಅಣುವಿಗಿಂತ ಅಣುವಾಗಿರುವೆನು. ಆದರೂ ಬೇಕಾದ ಹಾಗೆ ಹರಡಿರುವೆನು. ಸುಖದುಃಖಗಳೆಂಬ ಜ್ಞಾನವೇ ನನಗೆ ಇಲ್ಲ.

೨೭. ಸಕಲವನ್ನೂ ತಿಳಿಯುವ 'ಸಂವಿತ್' ಸ್ವರೂಪನಾಗಿರುವ ನನ್ನನ್ನು ಯಾರೂ ತಿಳಿಯಲಾರರು. ದೃಶ್ಯಕ್ಕಿಂತ ಬೇರೆಯಾಗಿ, ಚೇತನ ಸ್ವರೂಪನಾಗಿ,

ಅಥ ಚ್ಛಿತೇ ಜಗದ್ಭಾವಾಃ ಪರಿಚ್ಛಿದಂತು ಮಾಮಿಮಂ ।
ಯಥಾಭಿಮತಮೇವೈತೇ ಮತ್ತೋ ನ ವ್ಯತಿರೇಕಿಣಃ ॥ ೨೮ ॥

ಮಯಿ ಸ್ವಭಾವಭೂತೇನ ವಸ್ತುನಾ ವಸ್ತು ನೀಯತೇ ।
ಹ್ರಿಯತೇ ದೀಯತೇ ವಾಪಿ ತತ್ಕಿಂ ಕಸ್ಯ ಕಿಲ ಕ್ಷತಂ ॥ ೨೯ ॥

ಸರ್ವದಾ ಸರ್ವಮೇವಾಹಂ ಸರ್ವಕೃತ್ಸರ್ವಸಂಗತಃ ।
ಚೇತ್ಯಮಸ್ಮ್ಯಹಮೇವೈತನ್ನ ಕಿಂಚಿದಪಿ ಚೋದಿತಂ ॥ ೩೦ ॥

ನಾನೇ ನಾನಾಗಿ ಹರಡಿರುವ ನನ್ನನ್ನು, ಜಗತ್ತಿನಲ್ಲಿ ತುಂಬಿರುವ ಸದ್ಭಾವ, ಅಸದ್ಭಾವಗಳು ಯಾವ ರೀತಿಯಲ್ಲೂ ಪರಿಚ್ಛಿನ್ನನನ್ನು ಮಾಡಲಾರವು.

(ಅಖಂಡವು ಖಂಡವಾಗುವುದು ದೇಶ ಕಾಲಗಳ ಪ್ರಭಾವದಿಂದ ಈ ಅಂಶವನ್ನು ಹಿಂದೆ ಉತ್ಪತ್ತಿ ಪ್ರಕರಣ ಆಕಾಶ ಜೋಪಾಖ್ಯಾನದಲ್ಲಿ ವಿವರಿಸಲಾಗಿದೆ.)

೨೮. ಹಾಗಲ್ಲದೇ, ಒಂದು ವೇಳೆ, ಈ ಜಗದ್ಭಾವಗಳು ನನ್ನನ್ನು ಪರಿಚ್ಛೇದ ಮಾಡುವುದಾದರೆ ಮಾಡಿಕೊಳ್ಳಲಿ. ಅವು ಹೇಗೆ ಹೇಗೆ ಖಂಡ ತುಂಡು ಮಾಡಿದರೂ, ನನ್ನ ಹೊರತು, ಬೇರೊಂದು ವಸ್ತುವೇ ಇಲ್ಲದಿರಲು, ಆ ಖಂಡಗಳು ತಾನೇ ನನ್ನಿಂದ ಬೇರೆ ಹೇಗಾದಾವು ?

(ಅಖಂಡವು ಖಂಡವಾಗುವುದನ್ನು ಕುರಿತು, ದಕ್ಷಿಣಾಮೂರ್ತಿ ಸ್ತೋತ್ರದಲ್ಲಿ ಶ್ರೀ ಭಗವತ್ಪಾದರು ಹೇಳಿರುವುದನ್ನು ಚಿಂತಿಸಿ—

"ನಾನಾಛಿದ್ರ ಘಟೋದರ ಸ್ಥಿತ ದೀಪ ಪ್ರಭಾ" ಇತ್ಯಾದಿ.

೨೯. (ಒಂದೇ ಒಂದಾದ) ವಸ್ತುವನ್ನು ತನ್ನ ಸ್ವಭಾವವೇ ಆಗಿ (ಸ್ವರೂಪ ಬೇರೆಯಾದಂತೆ ತೋರುವ) ಇನ್ನೊಂದು ವಸ್ತುವು ಕೊಂಡುಹೋದರೆ, ಕದ್ದು ಒಯ್ದರೆ, ಅಥವಾ ಇನ್ನೊಬ್ಬರಿಗೆ ಕೊಟ್ಟದ್ದೇ ಆದರೆ, ಅದರಿಂದ ಯಾರಿಗೆ ಏನು ಹಾನಿಯಾಯಿತು ?

(ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ —ಶಾಂತಿ ಮಂತ್ರ.]

೩೦. ಸರ್ವದಾ ಸರ್ವವೂ ನಾನೇ ! ಸರ್ವವನ್ನು ಮಾಡುವವನೂ ಎಲ್ಲದ

ಕಿಂ ಸಂಕಲ್ಪವಿಕಲ್ಪಾಭ್ಯಾಂ ಚಿತಂ ಚಿದಿಯಮೇಕಿಕಾ ।
ಸಂಕ್ಷೋಭಯಾಮ್ಯಹಂ ತಾವಚ್ಛಾಮ್ಯಾಮ್ಯಾತ್ಮಸಿ ಪಾವನೇ ॥ ೩೧ ॥

ಇತಿ ಸಂಚಿಂತಯನ್ನೇವ ಬಲಿಃ ಪರಮಕೋವಿದಃ ।
ಓಂಕಾರಾದರ್ಧಮಾತ್ರಾರ್ಥಂ ಭಾವಯನ್ಮೌನಮಾಸ್ಥಿತಃ ॥ ೩೨ ॥

ಸಂಶಾಂತಸರ್ವಸಂಕಲ್ಪಃ ಪ್ರಶಾಂತಕಲನಾಗಣಃ ।
ನಿಃಶಂಕಮಪಿ ದೂರಾಸ್ತಚೇತ್ಯಜಂತಕಚಿಂತನಃ ॥ ೩೩ ॥

(ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ಶಾಂತಿ ಮಂತ್ರ.)

೩೦. ಸರ್ವದಾ ಸರ್ವವೂ ನಾನೇ! ಸರ್ವವನ್ನು ಮಾಡುವವನೂ ಎಲ್ಲದರಲ್ಲಿಯೂ ಬೆರೆದಿರುವವನೂ ನಾನೇ! ನಾನೇ ಚೇತ್ಯನು. ಹೀಗಿರಲು, ಚೋದಿತವಾದುದು ಇನ್ನೊಂದು ಯಾವುದೇ ತಾನೇ ಇರುವುದು ?

೩೧. ಇನ್ನು ಸಂಕಲ್ಪ ವಿಕಲ್ಪಗಳಿಂದ ನನಗೆ ಆಗಬೇಕಾದುದು ಏನು ?—ಚಿತ್ ಎನ್ನುವುದು ತಾನೇ ತಾನಾಗಿ ಏಕಾಕಿಯಾಗಿರುವುದು. ನಾನು ಎಂಬುದು ಪ್ರತ್ಯೇಕವಾಗಿದೆಯೆಂದುಕೊಂಡು ನನಗೆ ನಾನೇ ಕ್ಷೋಭಪಟ್ಟುಕೊಳ್ಳುತ್ತಿರುವೆನು. ಆದರಿಂದ, ಇನ್ನು ಪಾವನವಾದ ಆತ್ಮಪದದಲ್ಲಿ ವಿಶ್ರಾಂತನಾಗುವೆನು.

೩೨. ಹೀಗೆ ಚಿಂತಿಸುತ್ತಾ, ಪರಮ ನಿಪುಣನಾದ ಬಲಿಚಕ್ರವರ್ತಿಯು ಓಂಕಾರ(ಗತವಾದ ಅಕಾರ, ಉಕಾರ, ಮಕಾರಗಳನ್ನು ಬಿಟ್ಟು) ತುರೀಯ ಭಾವವಾದ ಅರ್ಧಮಾತ್ರೆಯ ಅರ್ಥವನ್ನು ಭಾವಿಸುತ್ತ ಮೌನವಾಗಿ ಕುಳಿತುಬಿಟ್ಟನು.

(ಅಕಾರ, ಉಕಾರ, ಮಕಾರಗಳು ಕ್ರಮವಾಗಿ ಸ್ಥೂಲ ಸೂಕ್ಷ್ಮ ಕಾರಣ ದೇಹಗಳು ಮತ್ತು ಆಯಾ ಅಭಿಮಾನಿಗಳಾದ ವಿಶ್ವ ತೈಜಸ ಪ್ರಾಜ್ಞರು. ತುರೀಯ ಭಾಗವು ವಿರಾಟ್. ಇವೆಲ್ಲಕ್ಕೂ ಅಧಿಷ್ಠಾನ ಸ್ವರೂಪವದು. ಈ ವಿಷಯವನ್ನು ವಿವರವಾಗಿ ನೋಡಬೇಕೆಂದಿರುವವರು ಪಂಚದಶಿಯ ಧ್ಯಾನದೀಪದ ಶ್ಲೋಕ ೬೩-೬೪ರ ಮೇಲಿನ ವ್ಯಾಖ್ಯಾನವನ್ನು ನೋಡಿ)

ಧ್ಯಾತೃಧ್ಯೇಯಧ್ಯಾನಹೀನೋ ನಿರ್ಮಲಃ ಶಾಂತವಾಸನಃ ।
ಬಭೂವಾವಾತದೀಪಾಭೋ ಬಲಿಃ ಸ್ಸ್ರಾಪ್ತಮಹಾಪದಃ ॥ ೩೪ ॥

ಉಪಶಾಂತಮನಾಸ್ತತ್ರ ರತ್ನವಾತಾಯನೇ ಬಲಿಃ ।
ಅವಸದ್ಬಹುಕಾಲಂ ಸ ಸಮುತ್ಕೀರ್ಣ ಇವೋಪಲೇ ॥ ೩೫ ॥

ಪ್ರಶಮಿತೈಷಣಯಾ ಪರಿಪೂರ್ಣಯಾ ।
ಮನನದೋಷದಶೋಜ್ಝಿತಯೈತಯಾ ॥
ಬಲಿರರಾಜತ ನಿರ್ಮಲಸತ್ತ್ವಯಾ ।
ವಿಘನಮುಚ್ಛತಯೇವ ಶರನ್ನಭಃ ॥ ೩೬ ॥

ಇತ್ಯಾರ್ಷೇ ವಾಸಿಷ್ಠಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ಉಪಶಮ ಪ್ರಕರಣೇ "ಬಲಿವಿಶ್ರಾಂತಿ" ನಾಮ ಸಪ್ತವಿಂಶಃ ಸರ್ಗಃ

---

೩೩. ಎಲ್ಲ ಸಂಕಲ್ಪಗಳನ್ನೂ ತ್ಯಾಗಮಾಡಿ, ಯಾವುದೊಂದು ಚಿಂತೆಯನ್ನೂ ವಹಿಸದೆ, ಚೇತ್ಯ, ಚಿಂತಕ, ಚಿಂತನ ಎಂಬ ತ್ರಿಪುಟಿಯನ್ನು ನಿಶ್ಶಂಕೆಯಿಂದ ಬಿಟ್ಟು.

೩೪. ಧ್ಯಾತೃ, ಧ್ಯೇಯ, ಧ್ಯಾನಗಳೆಂಬ ತ್ರಿಪುಟಿಯೂ ಇಲ್ಲದವನಾಗಿ, ಯಾವ ದೊಂದು ಮಲವೂ ಇಲ್ಲದಂತೆ ನಿರ್ಮಲನಾಗಿ, ವಾಸನೆಗಳೆಲ್ಲವೂ ಶಾಂತವಾಗಿರಲು, ಗಾಳಿಯಿಲ್ಲದ ಕಡೆ ನಿಶ್ಚಲವಾಗಿ ಬೆಳಗುವ ದೀಪದಂತೆ, ಮಹಾ ಸಮಾಧಿಯಲ್ಲಿ ಆ ಬಲಿ ಚಕ್ರವರ್ತಿಯು ನಿಂತುಬಿಟ್ಟನು.

(ಮಲವು ಆಣವ, ಮಾಯಿಕ, ಕಾರ್ಮಿಕ ಎಂದು ಮೂರು ವಿಧವು. ಆಣವ ಮಲವಿರುವವರೆಗೂ ಜೀವನು ತಾನು ಸಣ್ಣವನೆಂಬ ಭಾವನೆಗೆ ಸಿಕ್ಕಿರುವನು. ಮಾಯಿಕಮಲವು ಇರುವವರೆಗೂ ಜೀವನು ತಾನು ಅಜ್ಞಾನಿಯೆಂದು ಕೊಳ್ಳುವನು. ಕಾರ್ಮಿಕಮಲವು ಇರುವವರೆಗೂ ತಾನು ಆನಂದಮಯನಾಗಿದ್ದರೂ ದುಃಖಿಯೆಂದುಕೊಳ್ಳುವನು. —ಶ್ರೀ ವಿದ್ಯಾಸಂಪ್ರದಾಯ.)

೩೫. ಅಲ್ಲಿಯೇ ಆ ರತ್ನವಾತಾಯನದಲ್ಲಿಯೇ, ಕಲ್ಲಿನಲ್ಲಿ ಕೆತ್ತಿದ ಪ್ರತಿಮೆಯಂತೆ, ಬಲಿಚಕ್ರವರ್ತಿಯು, ಅಮನಸ್ಕನಾಗಿ ಬಹುಕಾಲ ಕುಳಿತುಬಿಟ್ಟನು.

ಈಷಣತ್ರಯ ಶೂನ್ಯವಾಗಿ, ಪರಿಪೂರ್ಣವಾಗಿ, (ಮನಸ್ಸಿನಲ್ಲಿ ಏನೂ ಇಲ್ಲವಾಗಿ) ಮನನದೋಷ ಶೂನ್ಯನಾಗಿ, ಶರತ್ಕಾಲದ ಅತರಿಕ್ಷವು ಮೋಡವಿಲ್ಲದೆ ನಿರ್ಮಲವಾಗಿ ಪ್ರಕಾಶಿಸುವಂತೆ, ನಿರ್ಮಲಸತ್ತಾ ಮಾತ್ರನಾಗಿ ಆ ಬಲಿಯು ವಿರಾಜಿಸುತ್ತಿದ್ದನು.

(ಋಣತ್ರಯ ನಿವಾರಣವಾಗುವವರೆಗೂ ಈಷಣತ್ರಯಗಳು ಬಿಡುವುದಿಲ್ಲ. ಬಹಿಶ್ಚಿಂತನವಿರುವವರೆಗೆ ಪೂರ್ಣತ್ವದ ಬೋಧವಾಗುವುದಿಲ್ಲ. ಮನಸ್ಸಿನಲ್ಲಿ ಏನಾದರೊಂದು ಇದ್ದಿತೆಂದರೆ ಮನಸ್ಸು ತದಾಕಾರವಾಗಿ ತದ್ಧ್ಯಾನದಲ್ಲಿ ತನ್ಮಗ್ನ ವಾಗುವುದು. ಅಂತಹುದು ಯಾವುದೂ ಇಲ್ಲವಾಗುವವರೆಗೂ ಮನನ ದೋಷವಿಲ್ಲ ವಾಗುವುದಿಲ್ಲ. ಪಿಂಡಗ್ರಹ ವಿಚ್ಛೇದವಾಗುವವರೆಗೂ ನಿರ್ಮಲಸತ್ತಾಸ್ವರೂಪ ಸಂಸ್ಥಿತಿಯು ದೊರೆಯುವುದಿಲ್ಲ. ಇದಿಷ್ಟನ್ನೂ "ಶರನ್ನಭಃ ವಿಘನಂ ಅಚ್ಛತಯೇವ" ಎಂಬುದರಿಂದ ಎಷ್ಟು ಮುದ್ದಾಗಿ ಹೇಳಿದೆ, ನೋಡಿ!)

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ಬಲಿವಿಶ್ರಾಂತಿ" ಎಂಬ ಇಪತ್ತೇಳನೆಯ ಸರ್ಗವು.

ಅಷ್ಟಾವಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಅಥ ತೇ ದಾನವಾಸ್ತತ್ರ ಬಲೇರನುಚರಾಸ್ತದಾ ।
ತದ್ಗೇಹಂ ಸ್ಫಾಟಿಕಂ ಸೌಧಮುಚ್ಚೈರಾರುರುಹುಃ ಕ್ಷಣಾತ್ ॥ ೧ ॥

ಡಿಂಬಾದ್ಯಾ ಮಂತ್ರಿಣೋ ಧೀರಾಃ ಸಾಮಂತಾಃ ಕುಮುದಾದಯಃ ।
ಸುರಾದ್ಯಾಶ್ಚೈವ ರಾಜಾನೋ ವೃತ್ರಾದ್ಯಾ ಬಲಿಹಾರಿಣಃ ॥ ೨ ॥

ಹಯಗ್ರೀವಾದಯಃ ಸೈನ್ಯಾಶ್ಚಾಕ್ರಾಜಾದ್ಯಾಶ್ಚ ಬಾಂಧವಾಃ ।
ಲಡುಕಾದ್ಯಾಶ್ಚ ಸುಹೃದೋ ವಲ್ಲೂಕಾದ್ಯಾಶ್ಚ ಲಾಲಕಾಃ ॥ ೩ ॥

ಕುಬೇರಯಮಶಕ್ರಾದ್ಯಾ ಉಪಾಯನಕರಾಃ ಸುರಾಃ ।
ಯಕ್ಷವಿದ್ಯಾಧರಾ ನಾಗಾಃ ಸೇವಾವಸರಕಾಂಕ್ಷಿಣಃ ॥ ೪ ॥

ರಂಭಾತಿಲೋತ್ತಮಾದ್ಯಾಶ್ಚ ಚಾಮರಿಣ್ಯೋ ವರಾಂಗನಾಃ ।
ಸಾಗರಾಃ ಸರಿತಃ ಶೈಲಾ ದಿಶಶ್ಚ ವಿದಿಶಸ್ತಥಾ ॥ ೫ ॥

ಸೇವಾರ್ಥಮಾಯಯುಸ್ತಸ್ಯ ತಂ ಪ್ರದೇಶಂ ತದಾ ಬಲೇಃ ।
ಅನ್ಯೇಚ ಬಹವಃ ಸಿದ್ಧಾಸ್ತ್ರೈಲೋಕ್ಯೋದರವಾಸಿನಃ ॥ ೬ ॥

ಇಪ್ಪತ್ತೆಂಟನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು:—ಅನಂತರದಲ್ಲಿ ಬಲಿಯ ಅನುಚರರಾದ ದಾನವರೆಲ್ಲರೂ, ಆಸ್ಫಟಿಕದ ಮಹಲನ್ನು ಒಂದುಗಳಿಗೆಯೊಳಗಾಗಿ ಏರಿಬಂದರು.

೨-೬. ಡಿಂಭಾದಿ ಮಂತ್ರಿಗಳು, ಕುಮುದಾದಿ ಸಾಮಂತರು, ಸುರ ಮೊದಲಾದ ರಾಜರು, ವೃತ್ರ ಮೊದಲಾದ ಸೇನಾನಿಗಳು, ಹಯಗ್ರೀವಾದಿ ಸೈನಿಕರೂ, ಚಾಕ್ರಾಣಾದಿ ಬಾಂಧವರು, ಲಡುಕಾದಿ ಸ್ನೇಹಿತರು, ವಲ್ಲೂಕಾದಿ ಆಟಗಾರರೂ, ಕಾಣಿಕೆಯನ್ನು ತೆಗೆದುಕೊಂಡು ಬಂದಿರುವ ಕುಬೇರ ಯಮ

ಧ್ಯಾನಮೌನಸಮಾಧಿಸ್ಥಂ ಚಿತ್ರಾರ್ಪಿತಮಿವಾಚಲಂ ।
ನಮತ್ಕಿರೀಟಾವಲಯೋ ದದೃಶುರ್ಬಲಿಮಾದೃತಾಃ ॥ ೭ ॥

ತಂ ದೃಷ್ಟ್ವಾ ಕೃತಕರ್ತವ್ಯಪ್ರಣಾಮಾಸ್ತೇ ಮಹಾಸುರಾಃ ।
ವಿಷಾದವಿಸ್ಮಯಾನಂದಭಯಮಂಥರತಾಂ ಯಯುಃ ॥ ೮ ॥

ಮಂತ್ರಿಣಃ ಪ್ರವಿಚಾರ್ಯಾತ್ರ ಕಿಂ ಪ್ರಾಪ್ತಮಿತಿ ದಾನವಾಃ
ಭಾರ್ಗವಂ ಚಿಂತಯಾಮಾಸುರ್ಗುರುಂ ಸರ್ವವಿದಾಂವರಂ ॥ ೯ ॥

ಚಿಂತನಾನಂತರಂ ದೈತ್ಯಾ ಭಾರ್ಗವಂ ಭಾಸ್ವರಂ ವಪುಃ ।
ದದೃಶುಃ ಕಲ್ಪಿತಂ ಪ್ರಾಪ್ತಂ ಗಂಧರ್ವನಗರಂ ಯಥಾ ॥ ೧೦ ॥

ಶಕ್ರಾದಿಗಳು, ಸೇವೆ ಮಾಡಲು ಸಿದ್ಧರಾಗಿರುವ ಯಕ್ಷವಿದ್ಯಾಧರನಾಗರು, ಚಾಮರ ಹಸ್ತೆಯರಾಗಿ ಬಂದಿರುವ ರಂಭೆ, ತಿಲೋತ್ತಮೆ, ಮೊದಲಾದ ಅಂಗನಾಮಣಿಯರು, ಸಾಗರಗಳು, ನದಿಗಳು, ಪರ್ವತಗಳು, ದಿಕ್ಕುಗಳು, ವಿದಿಕ್ಕುಗಳು, ಇನ್ನೂ ಜಗತ್ತ್ರಯದಲ್ಲಿರುವ ಇತರ ಸಿದ್ಧರೂ ಕೂಡ ಸೇವಾಕಾಂಕ್ಷಿಗಳಾಗಿ ಬಲಿಚಕ್ರವರ್ತಿಯಿರುವ ಕಡೆಗೆ ಬಂದರು.

೭. ಧ್ಯಾನಮಗ್ನನಾಗಿ, ಮೌನವಾಗಿ, ಸಮಾಧಿಯಲ್ಲಿ, ಚಿತ್ರದ ಬೊಂಬೆಯೋ ಎಂಬಂತೆ ನಿಶ್ಚಲವಾಗಿ ಕುಳಿತಿರುವ ಬಲೀಂದ್ರನನ್ನು ಕಂಡು, ಕಿರೀಟಗಳನ್ನು ಬೊಗ್ಗಿಸಿ ನಮಸ್ಕಾರಮಾಡಿ ಆತನನ್ನು ಆದರಿಸಿದರು.

೮. ಆತನನ್ನು ಕಂಡು ಮಾಡಬೇಕಾದ ಪ್ರಣಾಮಾದಿಗಳನ್ನು ಮಾಡಿ ಆ ಮಹಾ ಸುರಾಸುರರು ವಿಷಾದ, ವಿಸ್ಮಯ, ಆನಂದ, ಭಯಗಳಿಂದ ಪೂರ್ಣರಾದರು.

೯. ಆ ದಾನವ ಮಂತ್ರಿಗಳೆಲ್ಲರೂ "ಆಹಾ, ಎಂತಹ ಗತಿ ಬಂತು ?" ಎಂದು ಚಿಂತೆಪಟ್ಟು, ಎಲ್ಲವನ್ನೂ ಎಲ್ಲ ಸರ್ವಜ್ಞರಲ್ಲೂ ಶ್ರೇಷ್ಠನಾದ, ತಮ್ಮ ಕುಲಗುರುವಾದ ಶುಕ್ರಾಚಾರ್ಯನನ್ನು ಸ್ಮರಿಸಿದರು.

೧೦. ಚಿಂತಿಸುತ್ತಿದ್ದ ಹಾಗೆಯೇ, ಮನಸ್ಸು ಕಲ್ಪಿಸಿದ ಗಂಧರ್ವನಗರವನ್ನು

ಪೂಜ್ಯಮಾನೋಽಸುರಗಣೈರ್ನಿವಿಷ್ಟೋ ಗುರುವಿಷ್ಟರೇ ।
ದದರ್ಶ ಧ್ಯಾನಮೌನಸ್ಥಂ ಭಾರ್ಗವೋ ದಾನವೇಶ್ವರಂ　　　॥ ೧೧ ॥

ವಿಶ್ರಮ್ಯ ಸ ಕ್ಷಣಮಿವ ಪ್ರೇಮವಾನಲೋಕ್ಯ ಚ ।
ಬಲಂ ವಿಚಾರಯನ್ದೃಷ್ಟ್ವಾ ಪರಿಕ್ಷೀಣಭವಭ್ರಮಂ　　　॥ ೧೨ ॥

ದೇಹರಶ್ಮಿಶತೈರ್ದತ್ತದೀಪ್ತಿಭಿಃ ಕ್ಷೀರಸಾಗರಂ ।
ಕ್ಷಪನ್ನಿನ ಸಭಾಮಾಹ ಹಸನ್ವಾಕ್ಯಮಿದಂ ಗುರುಃ　　　॥ ೧೩ ॥

ಅತಿಮಾತ್ರಮಿದಂ ದೈತ್ಯಾಃ ಸ್ವವಿಚಾರಣಯೈವ ಯತ್ ।
ಸಂಪ್ರಾಪ್ತವಿಮಲಾವಾಸಃ ಸಿದ್ಧೋಽಯಂ ಭಗವಾನ್ಬಲಿಃ　　　॥ ೧೪ ॥

ಕಣ್ಣು ಕಾಣುವಂತೆ, ಶುಕ್ರಾಚಾರ್ಯನ ದೇಹವು ತಮ್ಮ ಎದುರಿಗೇ ನಿಂತಿರುವುದನ್ನು ಕಂಡರು:

೧೧. ಆರಾಕ್ಷಸ ಸಮೂಹಗಳಿಂದ ಪೂಜೆಯನ್ನು ಕೈಗೊಂಡು, ಅವರಿತ್ತ ಉಚ್ಚಾಸನದಲ್ಲಿ ಕುಳಿತುಕೊಂಡು, ಧ್ಯಾನದಲ್ಲಿ ಮೌನವಾಗಿ ಕುಳಿತಿರುವ ದಾನವೇಂದ್ರನನ್ನು ನೋಡಿದನು.

೧೨. ದಾನವ ಗುರುವು ತಾನು ಒಂದು ಗಳಿಗೆ ವಿಶ್ರಮಿಸಿಕೊಂಡು, ಪ್ರೇಮದಿಂದ ಬಲಿಯ ಕಡೆ ನೋಡಿ, ವಿಚಾರ ಮಾಡಿ ಸಂಸಾರ ಭ್ರಾಂತಿಯನ್ನೆಲ್ಲ ನೀಗಿಕೊಂಡು ಆತನು ಆಮುಸ್ಕನಾಗಿ ಕುಳಿತಿರುವುದನ್ನು ಕಂಡು,

೧೩. ತನ್ನ ದೇಹ ಕಾಂತಿಯಿಂದ ಕ್ಷೀರ ಸಮುದ್ರವನ್ನೂ ಧಿಕ್ಕರಿಸುವನೋ ಎಂಬಂತಿರುವ ಶುಕ್ರಾಚಾರ್ಯನು ನಗುತ್ತಾ ಆ ದೈತ್ಯ ಸಭೆಗೆ ಹೀಗೆ ಹೇಳಿದನು.

೧೪. ಎಲೈ ದೈತ್ಯರಿರಾ ! ಈ ಬಲೀಂದ್ರನು ತನ್ನ ಮನಸ್ಸಿನಲ್ಲಿಯೇ ವಿಚಾರ

ಅಯಂ ತದೇವಮೇವೇಹ ತಿಷ್ಠತ್ವಾದನವಸತ್ತ್ವಮಾಃ ।
ಸ್ವಾತ್ಮನಿ ಸ್ಥಿತಿಮಾಪ್ನೋತು ಪದಂ ಪಶ್ಯತ್ವನಾಮಯಂ ॥ ೧೫ ॥

ಶ್ರಾಂತೋ ವಿಶ್ರಾಮಮಾಯಾತಃ ಕ್ಷೀಣಚಿತ್ತಭವಭ್ರಮಃ ।
ಶಾಂತಸಂಸಾರನೀಹಾರೋ ವಾಚನೀಯೋ ನ ದಾನವಾಃ ॥ ೧೬ ॥

ಸ್ವ ಏವಲೋಕ ಏತೇನ ಸಂಪ್ರಾಪ್ತೋಽಜ್ಞಾನಸಂಕೇತೇ ।
ಶಾಂತೇಽತ್ರ ಸಂಭ್ರಮೋ ಸಾರೋ ದಿನೇನೇವ ಕರೋತ್ಕರಂ ॥ ೧೭ ॥

ಮಾಡ ಮಾಡುತ್ತ ಹೀಗೆ ನಿರ್ಮಲವಾದ ಜೀವನ್ಮುಕ್ತ ಪದವಿಯನ್ನು ಪಡೆದವನೆಂಬುದು ನಿಜವಾಗಿಯೂ ಅತಿಶಯವು. ಈಗ ಬಲೀಂದ್ರನು ಸಿದ್ಧನಾದನು. ಭಗವಚ್ಛಬ್ದಕ್ಕೆ ಯೋಗ್ಯನಾದನು.

೧೫. ಅದರಿಂದ, ಎಲೈ ದಾನವೇಂದ್ರರೆ, ಈತನು ಹೀಗೆಯೇ, ಇಲ್ಲಿಯೇ, ಕುಳಿತು, ಆತ್ಮನಿಸ್ಥಿತಿಯನ್ನು ಹೊಂದಲಿ. ಆ ನಿರುಪಾಧಿಕ ಮುಕ್ತಿ ಪದವನ್ನು ಅನುಭವಿಸಲಿ (ಗೋಚರ ಮಾಡಿಕೊಳ್ಳಲಿ.)

೧೬. ಇದುವರೆಗೆ ಸಂಸಾರ ಮಾರ್ಗದಲ್ಲಿ ಬೇಕಾದ ಹಾಗೆ ದುಡಿದು ಕಷ್ಟಪಟ್ಟಿದ್ದವನು ಈಗ ವಿಶ್ರಾಂತಿಯನ್ನು ಪಡೆದಿರುವನು. ಚಿತ್ತವನ್ನು ಕ್ಷಯಿಸಿ ಭವಭ್ರಾಂತಿಯಿಂದ ತಪ್ಪಿಸಿಕೊಂಡಿರುವನು. ಸಂಸಾರವೆಂಬ ಮಂಜು ಅಡಗಿಹೋಗಿರುವುದು. ಅದರಿಂದ ಇವನನ್ನು ಯಾರೂ (ಈಗ) ಮಾತನಾಡಿಸಬಾರದು.

೧೭. ಕತ್ತಲೆಯು ಅಡಗಿದಮೇಲೆ ದಿವಸವು ಸೂರ್ಯನ ಪ್ರಕಾಶವನ್ನು ಸಂಪೂರ್ಣವಾಗಿ ಹೊಂದುವಂತೆ, ಸಂಕಟಕರವಾದ ಅಜ್ಞಾನವೆಲ್ಲವೂ ತೊಲಗಿ, ಇವನು ಈಗ ತಾನೇ ಆತ್ಮ ಜ್ಞಾನವನ್ನು ಪಡೆದಿರುವನು.

ಸ್ವಯಮೇವ ಹಿ ಕಾಲೇನ ಪ್ರಬೋಧಮಯಮೇಷ್ಯತಿ ।
ಬೀಜಕೋಶಾತ್ಸ್ವಸಂವಿತ್ತ್ಯಾ ಸುಪ್ತಮೂರ್ತಿರಿವಾಂಕುರಃ ॥ ೧೮ ॥

ಕುರುಧ್ವಂ ಸ್ವಾಮಿಕಾರ್ಯಾಣಿ ಸರ್ವೇ ದಾನವನಾಯಕಾಃ ।
ಬಲಿರ್ವರ್ಷಸಹಸ್ರೇಣ ಸಮಾಧೇರ್ಬೋಧಮೇಷ್ಯತಿ ॥ ೧೯ ॥

ಇತ್ಯುಕ್ತ್ವಾ ಗುರುಣಾ ತತ್ರ ಹರ್ಷಾಮರ್ಷವಿಷಾದಜಾಂ ।
ದೈತ್ಯಾಶ್ಚಿಂತಾಂ ಜಹುಃ ಶುಷ್ಕಾಂ ಮಂಜರೀಮಿವ ಪಾದಪಾಃ ॥ ೨೦ ॥

ವೈರೋಚನಿಸಭಾಸಂಸ್ಥಾಂ ವಿಧಾಯ ಪ್ರಾಗ್ವ್ಯವಸ್ಥಯಾ ।
ಸ್ವವ್ಯಾಪಾರಪರಾಸ್ತಸ್ಥುಃ ಸರ್ವ ಏವಾಸುರಾಸ್ತತಃ ॥ ೨೧ ॥

---

೧೮. ಬೀಜಕೋಶದಲ್ಲಿ ಅಡಗಿರುವ ಅಂಕುರವು ಕಾಲವಶವಾಗಿ ತಾನಾಗಿಯೇ ಪ್ರಬೋಧವನ್ನು ಹೊಂದುವಂತೆ, ಈತನೂ ಕೆಲವು ಕಾಲವಾದ ಬಳಿಕ ಸ್ವಸಂವಿದ್ಬಲದಿಂದಲೇ ಪ್ರಬುದ್ಧನಾಗುವನು.

೧೯. ದಾನವ ನಾಯಕರೇ, ನೀವೆಲ್ಲರೂ ಸ್ವಾಮಿ ಕಾರ್ಯಗಳನ್ನು ಯಥಾವತ್ತಾಗಿ ಮಾಡುತ್ತಿರಿ. ಇನ್ನೊಂದು ಸಾವಿರ ವರ್ಷ ಸಮಾಧಿಯಲ್ಲಿದ್ದು ಈತನು ಬಹಿರ್ಮುಖನಾಗುವನು.

೨೦. ಹೀಗೆ ಶುಕ್ರಾಚಾರ್ಯನು ಅಪ್ಪಣೆಮಾಡಲು, ಹರ್ಷ, ದೈತ್ಯೇಂದ್ರರು ಅಮರ್ಷ, ವಿಷಾದಗಳಿಂದ ತಮಗೆ ಉಂಟಾಗಿದ್ದ ಚಿಂತೆಯನ್ನು, ಒಣಗಿದ ಹೂಗಳ ತೊಟ್ಟುಗಳನ್ನು ಮರಗಳು ಬಿಟ್ಟುಬಿಡುವಂತೆ ಬಿಟ್ಟುಬಿಟ್ಟರು.

೨೧. ಆ ಅಸುರ ನಾಯಕರೆಲ್ಲರೂ ಬಲೀಂದ್ರನ ರಾಜ ಸಭೆಯಲ್ಲಿ ನಡೆಯಬೇಕಾದ ಕಾರ್ಯಗಳೆಲ್ಲವೂ ಮೊದಲಿನಂತೆಯೇ ಸುವ್ಯವಸ್ಥಿತವಾಗಿ ನಡೆಯುವಂತೆ ಗೊತ್ತುಮಾಡಿ, ತಮ್ಮ ತಮ್ಮ ಕಾರ್ಯಗಳಲ್ಲಿ ತಾವು ನಿರತರಾದರು.

ನರಾ ಮಹೀಮಹಿಪತಯೋ ರಸಾತಲಂ |
ಗ್ರಹಾ ನಭಸ್ತ್ರಿದಶಗಣಾಸ್ತ್ರಿವಿಷ್ಟಪಂ ||
ದಿಶೋಽದ್ರಯೋ ದಿಕ್ಪತಯಶ್ಚ ಕಂದರಾ
ನ್ವನೇಚರಾ ಗಗನಚರಾಶ್ಚ ಸ್ವಂ ಯಯುಃ || ೨೨ ||

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು
ಉಪಶಮ ಪ್ರಕರಣೇ "ಬಲಿಸಮಾಧಾನವರ್ಣನಂ" ನಾಮ ಅಷ್ಟಾವಿಂಶಃ ಸರ್ಗಃ

---

೨೨. (ಅಲ್ಲಿಗೆ ಬಂದಿದ್ದ) ಮನುಷ್ಯರು ಭೂಮಿಗೂ, ಸರ್ಪಗಳು ಪಾತಾಳಕ್ಕೂ ಗ್ರಹಗಳು ಅಂತರಿಕ್ಷಕ್ಕೂ, ದೇವಗಣಗಳು ಸ್ವರ್ಗಕ್ಕೂ, ದಿಕ್ಕುಗಳು, ಪರ್ವತಗಳು, ಪಿತೃತಿಗಳು (ತಮ್ಮ ತಮ್ಮ) ಕಂದರಗಳಿಗೂ, ವನೇಚರ ಗಗನಚರರು ಆಕಾಶಕ್ಕೂ ಹೋದರು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಉಪಶಮ ಪ್ರಕರಣದಲ್ಲಿ "ಬಲಿಸಮಾಧಿ" ಎಂಬ ಇಪ್ಪತ್ತೆಂಟನೆಯ ಸರ್ಗವು.

ಏಕೋನತ್ರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಅಥ ವರ್ಷಸಹಸ್ರೇಣ ದಿವ್ಯೇನಾಸುರಪುಂಗವಃ ।
ದೇವದುಂದುಭಿನಿರ್ಘೋಷೈರ್ಬುಬುಧೇ ಭವನಾನ್ತ್ವಲಿಃ ॥ ೧ ॥

ಬಲೌ ಪ್ರಬುದ್ಧೇ ತದ್ಬಾಲಂ ವಿರೇಜೇ ನಗರಂ ತದಾ ।
ವೈರಿಂಚ ಇವ ಸೂರ್ಯಾಘ ಉದಿತೇ ಕಮಾಲಾಕರಃ ॥ ೨ ॥

ಬಲಿಃ ಪ್ರಬುದ್ಧ ಏವಾಸೌ ಯಾವನ್ನಾಯಾಂತಿ ದಾನವಾಃ ।
ತಾವತ್ಸಂಚಿಂತಯಾಮಾಸ ಸಮಾಧಿಸದನೇ ಕ್ಷಣಂ ॥ ೩ ॥

ಇಪ್ಪತ್ತೊಂಭತ್ತನೆ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು—ಹೀಗೆ ಒಂದು ಸಾವಿರ ದಿವ್ಯ ವರ್ಷಗಳು ಸಮಾಧಿಯಲ್ಲಿದ್ದ ಅಸುರೇಂದ್ರನಾದ ಆ ಬಲಿ ಭಗವಂತನು ದೇವದುಂದುಭಿಗಳ ಶಬ್ದದಿಂದ ಎಚ್ಚರಗೊಂಡನು.

೨. ಬಲಿ ಭಗವಂತನು ಬಹಿರ್ಮುಖನಾಗಲು. ಬಲೀಂದ್ರ ನಗರವು, ಸೂರ್ಯನು ಉದಯಿಸುತ್ತಲೂ ಕಮಲಾಕರವು ಸಂತೋಷದಿಂದ ಅರಳುವಂತೆ, ಸಂತೋಷದಿಂದ ವಿರಾಜಿಸಿತು.

೩. ಪ್ರಬುದ್ಧನಾದ ಬಲಿಯು, ತನ್ನ ಬಳಿಗೆ ದಾನವ ನಾಯಕರು ಬರುವುದಕ್ಕಿಂತ ಮುಂಚೆ, ಆ ಸಮಾಧಿ ಮಂದಿರದಲ್ಲಿಯೇ ಹಾಗೆಯೇ ಕುಳಿತು ಹೀಗೆ ಯೋಚಿಸಿದನು—

ಅಹೋ ನು ರಮ್ಯಾ ಪದವೀ ಶೀತಲಾ ಪಾರಮಾರ್ಥಿಕೀ ।
ಅಹಮಸ್ಯಾಂ ಕ್ಷಣಂ ಸ್ಥಿತ್ವಾ ಪರಾಂ ವಿಶ್ರಾಂತಿಮಾಗತಃ ॥ ೪ ॥

ತದೇತಾಮೇವ ಪದವೀಮವಲಂಬ್ಯ ಕರೋಮ್ಯಹಂ ।
ಭವತೀಹೋಪಭುಕ್ತಾಭಿಃ ಕಿಂ ಮೇ ಬಾಹ್ಯವಿಭೂತಿಭಿಃ ॥ ೫ ॥

ಐಂದವೇಷ್ವಪಿ ಬಿಂಬೇಷು ನ ತಥಾನಂದವೀಚಯಃ ।
ತೋಷಯಂತಿ ಯಥಾಂತರ್ಮೇ ಸಂಸಿದ್ಧಿಭವಭೂತಯಃ ॥ ೬ ॥

ಇತಿ ಭೂಯೋಽಪಿ ವಿಶ್ರಾಂತ್ಯೈ ಕುರ್ವಾಣಂ ಗಲಿತಂ ಮನಃ ।
ಬಲಿಮಾವಾರಯಾಮಾಸುರ್ದೈತ್ಯಾಶ್ಚಂದ್ರಮಿವಾಂಬುದಾಃ ॥ ೭ ॥

---

೪ ಆಹಾ ! ಈ ಪದವಿಯು ಎಷ್ಟು ರಮ್ಯವಾದುದು ! ಎಷ್ಟು ಶೀತಲವಾದುದು ! ಇದಕ್ಕಿಂತ ಪರಮಾರ್ಥವು ಇನ್ನೇನು ತಾನೇ ಇರುವುದು ! ನಾನು ಈ ಪದವಿಯಲ್ಲಿ ಒಂದು ಗಳಿಗೆ ಮಾತ್ರವೇ ಇದ್ದರೂ ಎಂತಹ ವಿಶ್ರಾಂತಿಯನ್ನು ಪಡೆದನು!

(ಬಲಿಯು ಸಮಾಧಿಯಲ್ಲಿ ದಿವ್ಯ ಸಹಸ್ರ ವರ್ಷಗಳು ಇದ್ದನು. ಕಾಲ ಪರಿಚ್ಛೇದದ ಆತಂಕವಿಲ್ಲದಾಗ ಕ್ಷಣಕ್ಕೂ ಯುಗಕ್ಕೂ ಏನು ವ್ಯತ್ಯಾಸ ?)

೫. ಆದರಿಂದ, ನಾನು ಈ ಸಮಾಧಿಯಲ್ಲಿಯೇ ಇದ್ದುಕೊಂಡು ಸುಖವಾಗಿರುವೆನು. ಈ ಬಾಹ್ಯ ವೈಭವಗಳನ್ನೆಲ್ಲ ಅನುಭವಿಸಿ ನನಗೆ ಆಗಬೇಕಾದುದೇನು ?

೬. ಈ ಸಮಾಧಿಯಲ್ಲಿ ನನಗೆ ಲಭಿಸಿದ ಆನಂದಾತಿಶಯವನ್ನು ಚಂದ್ರಮಂಡಲದಲ್ಲಿರುವ ಅಮೃತ ತರಂಗಿಣಿಗಳೂ ಕೂಡ ಕೊಡಬಲ್ಲವೇ ?

೭. ಹೀಗೆಂದು ಯೋಚಿಸುತ್ತ ಶಿಥಿಲವಾಗಿದ್ದ ಸಮಾಧಿಯತ್ತ ತಿರುಗುತ್ತಿದ್ದ ಬಲಿ ಭಗವಂತನನ್ನು, ದೈತ್ಯೇಶ್ವರನು, ಚಂದ್ರನನ್ನು ಮೋಡಗಳು ಮುಚ್ಚಿಕೊಳ್ಳುವಂತೆ ಮುಚ್ಚಿಕೊಂಡು ಬಹಿರ್ಮುಖನನ್ನು ಮಾಡಿದರು.

ತಾನಾಲೋಕ್ಯ ಪುನರ್ದಧ್ಯೌ ತತ್ರೃಥಾಮಾಕುಲೇಕ್ಷಣಃ ।
ತೈಃ ಕುಲಾಚಲಸಂಕಾಶೈಃ ಪರಿವೀತವಪುಸ್ತ್ವಿದಂ　　　　॥ ೮ ॥

ಚಿತಃ ಕ್ಷೀಣವಿಕಲ್ಪಸ್ಯ ಕಿಮುಪಾದೇಯಮಸ್ತಿ ಮೇ ।
ಮನಸ್ತದಭಿಪಾತಿತ್ವಾದ್ಯಾತಿ ತದ್ರಸತಾಮಲಂ　　　　॥ ೯ ॥

ಮೋಕ್ಷಮಿಚ್ಛಾಮ್ಯಹಂ ಕಸ್ಮಾದ್ಬದ್ಧಃ ಕೇನಾಸ್ಮಿ ವೈ ಪುರಾ ।
ಅಬದ್ಧೋ ಮೋಕ್ಷಮಿಚ್ಛಾಮಿ ಕೇಯಂ ಬಾಲವಿಡಂಬನಾ　　　　॥ ೧೦ ॥

ನ ಬಂಧೋಽಸ್ತಿ ನ ಮೋಕ್ಷೋಽಸ್ತಿ ಮೌಢ್ಯಂ ಮೇ ಕ್ಷಯಮಾಗತಂ ।
ಕಿಂ ಮೇ ಧ್ಯಾನವಿಲಾಸೇನ ಕಿಂ ವಾ ಧ್ಯಾನೇನ ಮೇ ಭವೇತ್　　　　॥ ೧೧ ॥

---

೮. ಕುಲಪರ್ವತಗಳೋ ಎಂಬಂತಿರುವ ಆ ದಾನವೇಂದ್ರರನ್ನು ನೋಡಿ ಅವನ ಪ್ರಣಾಮಗಳಿಂದ ವ್ಯಾಕುಲಪಟ್ಟು, ತನ್ನ ಸುತ್ತಲೂ ಅವರು ನಿಂತಿರಲು, ಆತನು ಹೀಗೆ ಯೋಚಿಸಿದನು.

೯. ಸಮಸ್ತ ವಿಕಲ್ಪಗಳೂ ನಾಶವಾಗಿ ಚಿತ್ಸ್ವರೂಪನಾಗಿರುವ ನನಗೆ, ಈ ಜಗತ್ತಿನಲ್ಲಿ ಗ್ರಾಹ್ಯವಾದುದು ಯಾವುದು ತಾನೇ ಇರುವುದು ? ಮನಸ್ಸು ಜಗತ್ತಿನ ಕಡೆಗೆ ತಿರುಗಿದರೆ ಅದರಲ್ಲಿ ಆಸಕ್ತಿಯಲ್ಲಿ ವಹಿಸಿ, ಮಲಿನವಾಗುವದು.

(ಹಿಂದೆ ೨೭ನೇ ಸರ್ಗದಲ್ಲಿ ಹೇಳಿರುವ ಮನನ ದೋಷ ಎಂಬುದನ್ನೂ ಚಿಂತಿಸಿ, ಮನಸ್ಸು ಯಾವುದನ್ನು ಕಂಡರೆ ಅದರಂತಾಗಿ, ಅದರಲ್ಲಿ ಆಸಕ್ತವಾಗು. ಹೀಗೆ ಆಸಕ್ತವಾಗುವುದೇ ಮನಸ್ಸಿನ ಮಾಲಿನ್ಯವು.)

೧೦. (ಆಯಿತು) ನಾನು ಮೋಕ್ಷವಾಗಲೆಂದು ಬಯಸುವುದರಿಂದರೂ ಏಕೆ ? ನನ್ನನ್ನು ಕಟ್ಟಿಹಾಕಿರುವವರು ಯಾರು ? ನಾನು ಬಂಧನದಲ್ಲಿ ಇಲ್ಲವಾದರೂ ಮೋಕ್ಷವನ್ನು ಅಪೇಕ್ಷಿಸುತ್ತಿರುವೆನಲ್ಲ ? ಇದೇ ಬಾಲ ಲೀಲೆಯು !

೧೧. (ವಿಚಾರ ಮಾಡಿನೋಡಿದರೆ) ಬಂಧನವೂ ಇಲ್ಲ, ಮೋಕ್ಷವೂ ಇಲ್ಲ, ನನ್ನ ಮೂರ್ಖತನವು ಕ್ಷಯಿಸಿಹೋಯಿತು. ಇಂತಹ ನನಗೆ ಈಗ ಧ್ಯಾನಮಗ್ನನಾಗಿದ್ದರೆ ಏನು ಲಾಭ ? ಧ್ಯಾನವನ್ನು ಬಿಟ್ಟರೆ ಏನು ನಷ್ಟ ?

ಧ್ಯಾನಾಧ್ಯಾನಭ್ರಮೌ ತ್ಯಕ್ತ್ವಾ ಪುಂಸ್ತ್ವಂ ಸ್ವಮವಲೋಕಯತ್ ।
ಯದಾಯಾತಿ ತದಾಯಾತು ನ ಮೇ ವೃದ್ಧಿರ್ನ ವಾ ಕ್ಷಯಃ ॥ ೧೨ ॥

ನ ಧ್ಯಾನಂ ನಾಪಿ ವಾಽಧ್ಯಾನಂ ನ ಭೋಗಾನ್ನಾಪ್ಯಭೋಗಿತಾಂ ।
ಅಭಿವಾಂಛಾಮಿ ತಿಷ್ಠಾಮಿ ಸಮಮೇವ ಗತಜ್ವರಃ ॥ ೧೩ ॥

ನ ಮೇ ವಾಂಛಾ ಪರೇ ತತ್ತ್ವೇ ನ ಮೇ ವಾಂಛಾ ಜಗತ್ಸ್ಥಿತಾ ।
ನ ಮೇ ಧ್ಯಾನದಶಾಕಾರ್ಯಂ ನ ಕಾರ್ಯಂ ವಿಭವೇನ ಮೇ ॥ ೧೪ ॥

ನಾಹಂ ಮೃತೋ ನ ಜೀವಾಮಿ ನ ಸನ್ನಾಸನ್ನ ಸನ್ಮಯಃ ।
ನೇದಂ ಮೇ ನೈವ ವಾನ್ಯನ್ಮೇ ನಮೋ ಮಹ್ಯಮಹಂ ಬೃಹತ್ ॥ ೧೫ ॥

---

೧೨. ಧ್ಯಾನದಲ್ಲಿದ್ದೇನೆ, ಧ್ಯಾನದಲ್ಲಿಲ್ಲ ಎಂಬ ಭ್ರಾಂತಿಯನ್ನು ಬಿಟ್ಟು, ಸ್ವರೂಪದರ್ಶನದಲ್ಲಿರುತ್ತ, ನನ್ನ ಪಾಡಿಗೆ ನಾನಿರುವೆನು. ಬರುವುದು ಬರಲಿ, ಅದರಿಂದ ನನಗೆ ವೃದ್ಧಿಯೂ ಇಲ್ಲ; ಕ್ಷಯವೂ ಇಲ್ಲ.

೧೩. ಧ್ಯಾನವನ್ನಾಗಲಿ, ಅಧ್ಯಾನವನ್ನಾಗಲಿ: ಭೋಗಗಳನ್ನಾಗಲಿ, ಭೋಗರಾಹಿತ್ಯವನ್ನಾಗಲಿ, ನಾನು ಅಪೇಕ್ಷಿಸುವುದಿಲ್ಲ. ಯಾವುದೊಂದೂ ಬಯಸದೆ ವಿಗತಜ್ವರನಾಗಿ ಸ್ವಸ್ಥನಾಗಿ ಕುಳಿತಿರುವೆನು.

೧೪. ಪರತತ್ವವನ್ನು ನಾನು ಕೋರುವುದಿಲ್ಲ; ಬದುಕಿದವನೂ ಅಲ್ಲ. ನಾನು ಸತ್ತಾಸ್ವರೂಪನೂ ಅಲ್ಲ; ಅಸತ್ತಾಸ್ವರೂಪನೂ ಅಲ್ಲ. ಸದ್ಮಾತ್ರನೂ ಅಲ್ಲ. ಇದು ನನ್ನದು ಅಲ್ಲ. ನನ್ನದು ಎಂಬುದೂ ಇನ್ನು ಯಾವುದೂ ಇಲ್ಲ. ಇಂತಹ ನನಗೆ ನಮಸ್ಕಾರವು. ನಾನು ಬ್ರಹ್ಮನು.

(ಇಲ್ಲಿ "ಇಂಥದು ಎಂದು ನಿರ್ದೇಶಮಾಡುವುದರಿಂದ, ಅದಲ್ಲದ ಇನ್ನೊಂದರ ತತ್ಪ್ರತಿಭೋಗಿ–ಪ್ರಸ್ತಾಪವೂ ಪ್ರಸಕ್ತವಾಗಿ, ದ್ವೈತವು ಸಂಭವಿಸುವುದು. ಅಂತಹ ದ್ವೈತಭಾನವಿಲ್ಲದ ಅದ್ವೈತವನ್ನು ಪ್ರತಿಪಾದಿಸಲು ಹೀಗೆ ಹೇಳಿದೆ. ಇದೇ ಅಂಶವನ್ನು ಶ್ರುತಿಯೂ ನೇತಿವಾದದಿಂದ ಸೂಚಿಸುತ್ತದೆ.)

ಇದಮಸ್ತು ಜಗದ್ರಾಜ್ಯಂ ತಿಷ್ಠಾಮ್ಯತ್ರ ತು ಸಂಸ್ಥಿತಃ ।
ನೇಹ ವಾಽಸ್ತು ಜಗದ್ರಾಜ್ಯಂ ತಿಷ್ಠಾಮ್ಯಾತ್ಮನಿ ಶೀತಲಃ ॥ ೧೬ ॥

ಕಿಂ ಮೇ ಧ್ಯಾನದೃಶಾ ಕಾರ್ಯಂ ಕಿಂ ರಾಜ್ಯವಿಭವಶ್ರಿಯಾ ।
ಯದಾಯಾತಿ ತದಾಯಾತು ನಾಹಂ ಕಿಂಚಿನ ಮೇ ಕ್ವಚಿತ್ ॥ ೧೭ ॥

ನ ಕಿಂಚಿದಪಿ ಕರ್ತವ್ಯಂ ಯದಿ ನಾಮ ಮಯಾಧುನಾ ।
ತತ್ ಕಸ್ಮಾನ್ನ ಕರೋಮೀದಂ ಕಿಂಚಿತ್ ಪ್ರಕೃತಕರ್ಮವೈ ॥ ೧೮ ॥

ಇತಿ ನಿರ್ಣೀಯ ಪೂರ್ಣಾತ್ಮಾ ಬಲಿರ್ಜ್ಞಾನವತಾಂ ವರಃ ।
ದೈತ್ಯಾನಾಲೋಕಯಾಮಾಸ ಪದ್ಮಾನೀವ ದಿವಾಕರಃ ॥ ೧೯ ॥

---

೧೬. ಈ ಲೋಕಾಧಿಪತ್ಯವು ಇರುವುದಾದರೆ, ಇರಲಿ ಬೇಕಾದರೆ, ನಾನು ಇದರಲ್ಲಿಯೇ ಸ್ಥಿರವಾಗಿಯೇ ಇರುವೆನು. ಅಥವಾ ಜಗದ್ರಾಜ್ಯವು ಹೋಗುವುದಾದರೆ ಹೋಗಲಿ, ಆಗ ನಾನು ಶಾಂತನಾಗಿ ಆತ್ಮನಲ್ಲಿ ನಿಲ್ಲುವೆನು.

೧೭. ಧ್ಯಾನಾಸಕ್ತನಾಗಿ ಕುಳಿತು ನನಗೆ ಆಗಬೇಕಾದುದೇನು? ಅಥವಾ ಈ ರಾಜ್ಯಸಂಪತ್ತಿನಿಂದ ಆಗುವ ಲಾಭವಾದರೂ ಏನು? ಬರುವುದು ಬರಲಿ. ನಾನೂ ಯಾವುದೂ ಇಲ್ಲ; ನನ್ನದು ಯಾವುದೂ ಎಲ್ಲಿಯೂ ಇಲ್ಲ.

೧೮. ಹೀಗೆ, ನನಗೆ ಆವಶ್ಯವಾಗಿ ಮಾಡಲೇಬೇಕಾದ ಕಾರ್ಯವು ಇಲ್ಲವಾದ್ದರಿಂದ, ಈಗ ನಾನು ಮಾಡುತ್ತಿರುವ ಕೆಲಸವನ್ನೇ ಏಕೆ ಮಾಡಿಕೊಂಡು ಹೋಗಬಾರದು?

೧೯. ಜ್ಞಾನಿಗಳಲ್ಲಿ ಶ್ರೇಷ್ಠನಾದ ಬಲಿಯು ಹೀಗೆ ನಿರ್ಣಯಿಸಿಕೊಂಡು, ಪದ್ಮಗಳನ್ನು ಸೂರ್ಯನು ನೋಡುವಂತೆ, ಆ ದೈತ್ಯರನ್ನು (ಅನುಗ್ರಹ ಬುದ್ಧಿಯಿಂದ) ನೋಡಿದನು.

ದೃಷ್ಟಿಪಾತವಿಭಾಗೇನ ಸರ್ವೇಷಾಂ ದನುಜನ್ಮನಾಂ ।
ಶಿರಃಪ್ರಣಾಮಾನ್ ಜಗ್ರಾಹ ಪುಷ್ಪಾಮೋದಾನಿವಾನಿಲಃ ॥ ೨೦ ॥

ಅಥ ವೈರೋಚನಿಸ್ತತ್ರ ಧ್ಯೇಯತ್ಯಾಗಮಯಾತ್ಮನಾ ।
ಮನಸಾ ಸಕಲಾನ್ಯೇವ ರಾಜಕಾರ್ಯಾಣಿ ಸ ವ್ಯಧಾತ್ ॥ ೨೧ ॥

ದ್ವಿಜಾನ್ದೇವಾನ್ಗುರೂಂಶ್ಚೈವ ಪೂಜಯಾಮಾಸ ಪೂಜಯಾ ।
ಸಂಮಾನಯಾಮಾಸ ಸುಹೃದ್ಬಂಧುಸಾಮಂತಸಜ್ಜನಾನ್ ॥ ೨೨ ॥

ಅರ್ಥೇನಾಪೂರಯಾಮಾಸ ಭೃತ್ಯಾನರ್ಥಿಗಣಾಂಸ್ತಥಾ ।
ಲಲನಾ ಲಾಲಯಾಮಾಸ ವಿಚಿತ್ರವಿಭವಾರ್ಪಣೈಃ ॥ ೨೩ ॥

ಇತ್ಯಸೌ ವವೃಧೇ ತಸ್ಮಿನ್ರಾಜ್ಯೇ ಸಕಲಶಾಸನೇ ।
ಯಜ್ಞಂ ಪ್ರತಿ ಬಭೂವಾಥ ಮತಿರಸ್ಯ ಕದಾಚನ ॥ ೨೪ ॥

---

೨೦. ಹಾಗೆಯೇ, ನೋಡುನೋಡುತ್ತಲೇ, ಕೇವಲ ದೃಷ್ಟಿಯಿಂದಲೇ, ಗಾಳಿಯು ಹೂವಿನ ಆಮೋದವನ್ನು ಗ್ರಹಿಸುವಂತೆ, ಆ ದೈತ್ಯೇಂದ್ರರೆಲ್ಲರ ನಮಸ್ಕಾರಗಳನ್ನೂ ಗ್ರಹಿಸಿದನು.

೨೧. ಹಾಗೆಯೇ ಮುಂದಕ್ಕೆ ಆ ಬಲೀಂದ್ರನು (ಹಿಂದೆ ಹೇಳಿದಂತೆ) ಧ್ಯೇಯ ವಾಸನಾತ್ಯಾಗಸಂಪನ್ನವಾದ ಮನಸ್ಸುಳ್ಳವನಾಗಿ, ಸಕಲವಾದ ರಾಜಕಾರ್ಯಗಳನ್ನೂ ಮಾಡುವನಾದನು.

೨೨. ದ್ವಿಜರನ್ನೂ ದೇವತೆಗಳನ್ನೂ ಗುರುಗಳನ್ನೂ (ಯಥೋಚಿತವಾಗಿ) ಪೂಜೆಯಿಂದ ಸತ್ಕರಿಸಿದನು. ಹಾಗೆಯೇ ಸ್ನೇಹಿತರನ್ನೂ ಬಂಧುಗಳನ್ನೂ ಸಾಮಂತರನ್ನೂ ಸಜ್ಜನರನ್ನೂ ಸನ್ಮಾನಿಸಿದನು.

೨೩. ಭೃತ್ಯರನ್ನೂ ಯಾಚಕರನ್ನೂ ಅವರು ಕೇಳಿದುದನ್ನು ಕೊಟ್ಟು ತೃಪ್ತಿಪಡಿಸಿದನು. ತನ್ನ ಸ್ತ್ರೀ ಜನವನ್ನು ಚಿತ್ರ ವಿಚಿತ್ರಗಳಾದ ವಿಭವಗಳನ್ನು ಕೊಟ್ಟು ತೃಪ್ತಿಪಡಿಸಿದನು.

೨೪. ಹೀಗೆ, ಆ ಬಲೀಂದ್ರನು ದೇವದಾನವ ಮರ್ತ್ಯರನ್ನೆಲ್ಲ ಶಾಸನ ಮಾಡುತ್ತ ಆಳುತ್ತಿರಲು, ಆತನಿಗೆ ಒಂದು ಕಾಲದಲ್ಲಿ ಯಜ್ಞಮಾಡಬೇಕು ಎನ್ನಿಸಿತು.

ತರ್ಪಿತಾಶೇಷಭುವನಂ ದೇವರ್ಷಿಗಣಪೂಜಿತಂ ।
ಸಹ ಶುಕ್ರಾದಿಭಿರ್ಮುಖ್ಯೈಃ ಸ ಚಕಾರ ಮಹಾಮಖಂ ॥ ೨೫ ॥

ಬಲಿರ್ಭೋಗಭರಸ್ಯಾರ್ಥೀ ನೇತಿ ನಿರ್ಣೀಯ ಮಾಧವಃ ।
ಬಲೇರೀಹಿತಸಿದ್ಧ್ಯರ್ಥಂ ಸಿದ್ಧಿದಸ್ತನ್ಮಖಂ ಯಯೌ ॥ ೨೬ ॥

ಭೋಗೈಕಕೃಪಣಾಯೇದಂ ಜಗಜ್ಜಂಗಲಖಂಡಕಂ ।
ದಾತುಂ ಶೋಚ್ಯಾಯ ಶಕ್ರಾಯ ವಯೋಜ್ಯೇಷ್ಠಾಯ ಕಾರ್ಯವಿತ್ ॥ ೨೭ ॥

ಕ್ರಮಮಾಣೋ ಬಲೇನಾತ್ರ ವಂಚಯಿತ್ವಾ ಬಲಿಂ ಹರಿಃ ।
ಬಬಂಧ ಪಾತಾಲತಲೇ ಭೋಗೇಹ ಇವ ವಾನರಂ ॥ ೨೮ ॥

---

೨೫. ಭುವನಗಳಿಗೆಲ್ಲ ತೃಪ್ತಿಯಾಗುವಂತೆಯೂ, ದೇವರುಷಿಗಣಗಳೆಲ್ಲ ಹೊಗಳುವಂತೆಯೂ, ಶುಕ್ರಾಚಾರ್ಯನೇ ಮೊದಲಾದವರನ್ನೆಲ್ಲ ಸೇರಿಸಿಕೊಂಡು ಮಹಾಯಜ್ಞವೊಂದನ್ನು ಮಾಡಿದನು.

(ಮಹಾಮಖಂ-ಅಶ್ವಮೇಧಂ (ತಾ. ಪ್ರ,)

೨೬. ಆಗ (ಯಜ್ಞಸ್ವರೂಪನಾದ) ಮಹಾವಿಷ್ಣುವು. "ಬಲಿಯು ಈ ಯಜ್ಞವನ್ನು ಯಾವ ಭೋಗಗಳಿಗಾಗಿಯೂ ಮಾಡುತ್ತಿಲ್ಲ ಎಂದು ನಿರ್ಣಯಿಸಿಕೊಂಡು, ಬಲಿಯ ಇಷ್ಟಾರ್ಥಸಿದ್ಧಿಯನ್ನು ಮಾಡಿಕೊಡಲು, ವರಪ್ರದಾನ ಮಾಡಲು ಸಿದ್ಧನಾಗಿ, ಆ ಯಜ್ಞಕ್ಕೆ ಬಂದನು.

೨೭. ಭೋಗಗಳನ್ನು ಮಾತ್ರ ಅಪೇಕ್ಷಿಸುವ ಕೃಪಣನೂ, ಶೋಚ್ಯನೂ, ಆದ ಇಂದ್ರನಿಗೆ ತನ್ನ ಅಣ್ಣನೆಂಬ ಕನಿಕರದಿಂದ ಜಗತ್ತಿನ ಒಂದು ಭಾಗವಾದ ರಾಜ್ಯವನ್ನು ಕೊಡಬೇಕೆಂದು ಆ ಮಹಾವಿಷ್ಣುವು ನಿಶ್ಚಯಿಸಿದ್ದನು.

೨೮. ಆ ಶ್ರೀಹರಿಯು ನೆಲವನ್ನು ಅಳೆದುಕೊಳ್ಳುವ ನೆಪದಿಂದ ಬಲಿಯನ್ನು ವಂಚಿಸಿ, ಕಪಿಯನ್ನು ನೆಲಮಾಳಿಗೆಯಲ್ಲಿ ಕಟ್ಟಿಹಾಕುವಂತೆ, ಬಲಾತ್ಕಾರದಿಂದ ಆತನನ್ನು ಪಾತಾಳಲೋಕದಲ್ಲಿ ಬಂಧನದಲ್ಲಿಟ್ಟನು.

ಅದ್ಯಾಸೌ ಸಂಸ್ಥಿತೋ ರಾಮ ಪುನರಿಂದ್ರತ್ವಹೇತುನಾ |
ಜೀವನ್ಮುಕ್ತವಪುಃ ಸ್ವಸ್ಥೋ ನಿತ್ಯಂ ಧ್ಯಾನನಿಷಣ್ಣಧೀಃ || ೨೯ ||

ಪಾತಾಲಕುಹರೇ ತಸ್ಮಿನ್ ಜೀವನ್ಮುಕ್ತಗತಿರ್ಬಲಿಃ |
ಆಪದಂ ಸಂಪದಂ ದೃಷ್ಟ್ವಾ ಸಮಯೈವ ಸ ಪಶ್ಯತಿ || ೩೦ ||

ನಾಸ್ತಮೇತಿ ನ ಚೋದೇತಿ ತತ್ಪ್ರಜ್ಞಾ ಸುಖದುಃಖಯೋಃ |
ಸಮಾ ಸ್ಥಿರಕರಾ ಚಿತ್ರಲೇಖ್ಯಾ ಸೂರ್ಯಾವಳಿರ್ಯಥಾ || ೩೧ ||

ಆವಿರ್ಭಾವತಿರೋಭಾವಸಹಸ್ರಾಣೀಹ ಜೀವತಾಂ |
ತನ್ಮನಶ್ಚಿರಮಾಲೋಕ್ಯ ಭೋಗೇಷು ವಿರತಿಂ ಗತಂ || ೩೨ ||

ದಶಕೋಟೀಶ್ಚ ವರ್ಷಾಣಾಮನುಶಾಸ್ಯ ಜಗತ್ತ್ರಯಂ |
ಅನ್ತೇ ವಿರಕ್ತತಾಂ ಪ್ರಾಪ್ತಮುಪಶಾಂತಂ ಬಲೇರ್ಮನಃ || ೩೩ ||

೨೯. ಈಗಲೂ ಬಲಿಯು ಅಲ್ಲಿಯೇ ಇರುವನು. ರಾಮ, ಮುಂದೆ ಇಂದ್ರನಾಗುವವನು. ಆ ಬಲೀಂದ್ರನು ಸದೇಹ ಜೀವನ್ಮುಕ್ತನು. ಆತ್ಮನಿಷ್ಠನಾಗಿ, ಯಾವಾಗಲೂ ಧ್ಯಾನಸ್ಥನಾಗಿಯೇ ಇರುವನು.

೩೦. ಪಾತಾಳಲೋಕದಲ್ಲಿ ಇರುವ ಆ ಬಲಿಚಕ್ರವರ್ತಿಯು, ಆಪತ್ತು ಬರಲಿ ಸಂಪತ್ತು ಬರಲಿ, ಒಂದೇ ದೃಷ್ಟಿಯಿಂದ ನೋಡುತ್ತಾ. ಚಿತ್ತ ವಿಕ್ಷೋಭವಿಲ್ಲದೆ ಸುಖವಾಗಿರುವನು.

೩೧. ಚಿತ್ರದಲ್ಲಿ ಬರೆದಿರುವ ಸೂರ್ಯಮಂಡಲವು ಒಂದೇ ತೆರವಾದ ಕಿರಣಗಳುಳ್ಳದಾಗಿ ಸಮವಾಗಿರುವಂತೆ ಸುಖವಾಗಲಿ, ದುಃಖವಾಗಲಿ, ಆತನ ಪ್ರಜ್ಞೆಯು ಅಸ್ತವಾಗುವುದಿಲ್ಲ; ಉದಯವಾಗುವುದಿಲ್ಲ.

೩೨. ಆತನ ಮನಸ್ಸು ಪ್ರಾಣಿಗಳ ಆವಿರ್ಭಾವ ತಿರೋಭಾವಗಳನ್ನು ಸಾವಿರಗಟ್ಟಲೆಯಾಗಿ ಮನಸ್ಸಿಟ್ಟು ನೋಡಿ ಅವುಗಳ ಮರ್ಮವನ್ನು ಭೇದಿಸಿದೆಯಾಗಿ, ಭೋಗಗಳಲ್ಲಿ ವಿರತಿಯನ್ನು ಹೊಂದಿರುವುದು.

೩೩. ಹತ್ತು ಕೋಟಿ ವರ್ಷಗಳು ಈ ಜಗತ್ತ್ರಯವನ್ನೂ ಆಳಿ, ಕೊನೆಗೆ ವೈರಾಗ್ಯವನ್ನು ಹೊಂದಿರುವ ಆ ಬಲೀಂದ್ರನ ಮನಸ್ಸು ಉಪಶಾಂತವಾಗಿರುವುದು.

ಊಹಾಪೋಹಸಹಸ್ರಾಣಿ ಭಾವಾಭಾವಶತಾನಿ ಚ ।
ಬಲಿನಾ ಪರಿದೃಷ್ಟಾನಿ ಕ್ವ ಸಮಾಶ್ವಾಸಮೇತ್ಯಸೌ || ೩೪ ||

ಭೋಗಾಭಿಲಾಷಂ ಸಂತ್ಯಜ್ಯ ಬಲಿಃ ಸಂಪೂರ್ಣಮಾನಸಃ ।
ಆತ್ಮಾರಾಮಸ್ಥಿತೋ ನಿತ್ಯಂ ಮಧ್ಯೇ ಪಾತಾಲಕೋಟರೇ || ೩೫ ||

ಪುನರೇತೇನ ಬಲಿನಾ ಜಗದಿಂದ್ರತಯಾಖಿಲಂ ।
ಅನುಶಾಸ್ಯಮಿದಂ ರಾಮ ಬಹೂನ್ವರ್ಷಗಣಾನಿಹ || ೩೬ ||

ನ ತಸ್ಯೇಂದ್ರಪದಪ್ರಾಪ್ತ್ಯಾ ತುಷ್ಟಿಃ ಸಮುಪಜಾಯತೇ ।
ನ ತಸ್ಯ ಸ್ವಪದಭ್ರಂಶಾದುದ್ವೇಗ ಉಪಜಾಯತೇ || ೩೭ ||

ಸಮಃ ಸರ್ವೇಷು ಭಾವೇಷು ಸರ್ವದೈವೋದಿತಾಶಯಃ ।
ಸಂಪ್ರಾಪ್ತಮಾಹರನ್ಸ್ವಸ್ಥ ಅಕಾಶ ಇವ ತಿಷ್ಠತಿ || ೩೮ ||

೩೪. ಆತನು ಸುಖದುಃಖಗಳ ಆಗುಹೋಗುಗಳನ್ನೂ ಸಂಪತ್ತು ವಿಪತ್ತುಗಳ ಪ್ರಾಪ್ತಿನಾಶಗಳನ್ನೂ ಸಾವಿರಾರುಗಟ್ಟಲೆ ಚೆನ್ನಾಗಿ ನೋಡಿರುವನು (ಅವುಗಳ ಅಸತ್ಯತೆಯನ್ನು ಕಂಡಿರುವನು.) ಈತನ ಮನಸ್ಸು ಇನ್ನು ಯಾವ ವಿಷಯವನ್ನು ಸುಖಾಭಿಲಾಷೆಯಿಂದ ಆಶ್ರಯಿಸೀತು ?

೩೫. ಆ ಬಲಿಯು ಸಂಪೂರ್ಣ ಮಾನಸನಾಗಿ (ಕಾಮಗಳನ್ನು ಬಯಸದೆ ಇರುವ ಸ್ಥಿತಿಗೆ ಮನಸ್ಸು ಬಂದಿರುವುದರಿಂದ) ಭೋಗಾಭಿಲಾಷೆಯನ್ನು ಸಂಪೂರ್ಣವಾಗಿ ಬಿಟ್ಟು ನಿತ್ಯವೂ ಆತ್ಮಾರಾಮನಾಗಿ ಪಾತಾಳಲೋಕದಲ್ಲಿ ಇರುವನು.

೩೬. ರಾಮ, ಮತ್ತೆ ಈ ಬಲಿಚಕ್ರವರ್ತಿಯು ಇಂದ್ರಪದವಿಯನ್ನು ಪಡೆದು ಅನೇಕ ವರ್ಷಗಳು ಈ ಮೂರು ಲೋಕಗಳನ್ನೂ ಪಾಲಿಸಬೇಕಾಗಿರುವುದು.

೩೭. ಆದರೆ ಆಗ ಆತನು ಇಂದ್ರಪದವಿಯನ್ನೇ ಹೊಂದಿದರೂ, ಅದರಿಂದ ಆತನಿಗೆ (ಈಗ ಇಲ್ಲದಿರುವ ಹೊಸ) ಸಂತೋಷವೇನೂ ಲಭಿಸುವುದಿಲ್ಲ. ಒಂದು ವೇಳೆ ಆತನೂ (ಈಗಿನ ಇಂದ್ರನಿಗಾಗಿರುವಂತೆ,) ಪದವೀಭ್ರಷ್ಟನಾದರೂ ಅದರಿಂದ ದುಃಖವನ್ನು ಪಡೆಯುವುದಿಲ್ಲ.

೩೮. ಆತನು ಸಂಪದ್ವಿಪದ್ದಶೆಗಳಲ್ಲೆಲ್ಲಾ ಒಂದೇ ಸಮನಾಗಿ ತೃಪ್ತನಾಗಿದ್ದು

ಬಲೇರ್ವಿಜ್ಞಾನಸಂಪ್ರಾಪ್ತಿರೇಷಾತೇ ಕಥಿತಾ ಮಯಾ ।
ಏತಾಂ ದೃಷ್ಟಿಮವಷ್ಟಭ್ಯ ತ್ವಮಪ್ಯಭ್ಯುದಿತೋ ಭವ ॥ ೩೯ ॥

ಬಲಿವತ್ತ್ವವಿವೇಕೇನ ನಿತ್ಯೋಽಹಮಿತಿ ನಿಶ್ಚಯಾತ್ ।
ಪದಮಾಸಾದಯಾದ್ವೈತಂ ಪೌರುಷೇಣೈವ ರಾಘವ ॥ ೪೦ ॥

ದ್ವೇ ಚಾಷ್ಟೌ ಚೈವ ವರ್ಷಾಣಾಂ ಕೋಟೀರ್ಭುಕ್ತ್ವಾ ಜಗತ್ತ್ರಯಂ ।
ಅಂತೇ ವೈರಸ್ಯಮಾಪನ್ನೋ ಬಲಿರಪ್ಯಸುರೋತ್ತಮಃ ॥ ೪೧ ॥

ತಸ್ಮಾದವಶ್ಯವೈರಸ್ಯಂ ಭೋಗಭಾರಮರಿಂದಮ ।
ಸಂತ್ಯಜ್ಯ ಸತ್ಯಮಾನಂದಮವೈರಸ್ಯಂ ಪದಂ ವ್ರಜ ॥ ೪೨ ॥

ಕೊಂಡು, ಬಂದುದನ್ನು ಸ್ವೀಕರಿಸುತ್ತ, ಸ್ವ-ಸ್ಥನಾಗಿ ಆಕಾಶದಂತೆ (ನಿರ್ಲಿಪ್ತನಾಗಿ) ಇರುವನು.

೩೯. ಬಲಿಗೆ ವಿಜ್ಞಾನವು ಪ್ರಾಪ್ತಿಯಾದ ಕ್ರಮವನ್ನು ನಾನು ನಿನಗೆ ಹೇಳಿದೆನು. ನೀನೂ ಈ ದೃಷ್ಟಿಯನ್ನೇ ಅವಲಂಬಿಸಿ ಸಂತೃಪ್ತಿಯನ್ನು ಪಡೆ.

೪೦. ರಾಘವ, ನೀನೂ ಪ್ರಯತ್ನಮಾಡು. ಬಲಿಯಂತೆ ನಿನ್ನ ವಿವೇಕ ಬಲದಿಂದಲೇ (ಕಾಲದೇಶ ಪರಿಮಿತಿಗಳಿಗೆ ಒಳಪಡದ) ನಿತ್ಯನು ನಾನು, ಎಂಬ ನಿಶ್ಚಯವನ್ನು ಸಾಧಿಸಿಕೊಂಡು ಅದ್ವೈತ ಪದವಿಯನ್ನು ಹೊಂದು.

೪೧. ಅಸುರ ಚಕ್ರವರ್ತಿಯಾದ ಬಲಿಯೂ ಕೂಡ, ಹತ್ತು ಕೋಟಿ ವರ್ಷ ಕಾಲ ಜಗತ್ತ್ರಯ ಸಾಮ್ರಾಜ್ಯವನ್ನು ಅನುಭವಿಸಿ, ಕೊನೆಗೆ ಭೋಗಗಳಲ್ಲಿ ಇದ್ದ ಆಸೆಯನ್ನು ಬಿಟ್ಟು ವೈರಾಗ್ಯವನ್ನು ಪಡೆದನು.

೪೨. ಎಲೈ ಶತ್ರುಸಂಹಾರಕನೆ, ಎಂದಿಗಾದರೂ ಒಂದು ದಿನ ತಪ್ಪದೆ ಬೇಸರವಾಗುವ ಈ ಭೋಗಜಾಲಗಳನ್ನು ಈಗಲೇ ಪರಿತ್ಯಾಗಮಾಡಿ, ಸತ್ಯವೂ ಆನಂದವೂ ಎಂದಿಗೂ ಬೇಸರವಾಗದುದೂ ಆದ ಪದವಿಯನ್ನು ಹೊಂದು.

ಇಮಾ ದೃಶ್ಯದೃಶೋ ರಾಮ ನಾನಾಕಾರವಿಕಾರದಾಃ |
ನೇಹ ಕಾಂತತಯಾ ಜ್ಞೇಯಾ ದೂರಾಚ್ಛೈಲಶಿಲಾ ಇವ || ೪೩ ||

ಧಾವಮಾನಮಿಹಾಮುತ್ರ ಲುಠಿತಂ ಲೋಕವೃತ್ತಿಷು |
ಸಂಸ್ಥಾಪಯ ನಿಬಧ್ಯೈತಚ್ಚೇತೋ ಹೃದಯಕೋಟರೇ || ೪೪ ||

ಚಿದಾದಿತ್ಯೋ ಭವಾನೇವ ಸರ್ವತ್ರ ಜಗತಿ ಸ್ಥಿತಃ |
ಕಃ ಪರಸ್ತೇ ಕ ಆತ್ಮೀಯಃ ಪರಿಸ್ಖಲಸಿ ಕಿಂ ಮುಧಾ || ೪೫ ||

ತ್ವಮನಂತೋ ಮಹಾಬಾಹೋ ತ್ವಮಾದ್ಯಃ ಪುರುಷೋತ್ತಮಃ |
ತ್ವಂ ಪದಾರ್ಥಶತಾಕಾರೈಃ ಪರಿಸ್ಫೂರ್ಜಸಿ ಚಿದ್ವಪುಃ || ೪೬ ||

---

೪೩. ರಾಮ, ಈ ದೃಶ್ಯವಿಲಾಸಗಳೆಲ್ಲವೂ ನಾನಾರೂಪವಾದ ವಿಕಾರಗಳನ್ನು ಹುಟ್ಟಿಸುವುವು. ದೂರದಿಂದ ನೋಡಿದರೆ ಬೆಟ್ಟವು ನುಣ್ಣಗೆ ಎಂಬಂತೆ, ಇವು ಅವಿಚಾರ ರಮಣೀಯಗಳೇ ಹೊರತು ಎಂದಿಗೂ ಸಹಜ ಸುಂದರಗಳಲ್ಲ.

೪೪. ಇಲ್ಲಿ ಅಲ್ಲಿ, ಲೋಕ ವಾಸನಾ ಪ್ರೇರಿತವಾಗಿ, ಲೋಕ ವ್ಯಾಪಾರಗಳನ್ನೇ ಧ್ಯಾನಿಸುತ್ತ ಒದ್ದಾಡುವ ಮನಸ್ಸನ್ನು ಕಟ್ಟಿ ಹಾಕಿ ಹೃದಯದಲ್ಲಿ ಭದ್ರವಾಗಿ ನಿಲ್ಲಿಸು.

೪೫. ನೀನೇ ಚಿದಾದಿತ್ಯನು ನೀನೇ ಸರ್ವ ಜಗತ್ತಿನಲ್ಲಿಯೂ ವ್ಯಾಪಕನಾಗಿ ರುವನು. ಹೀಗಿರಲು ನಿನಗೆ ಪರನಾರು ಆತ್ಮೀಯನಾರು ? ಬರಿ ಬರಿದೆ ನೀನೇಕೆ ಒದ್ದಾಡುವೆ ?

(ಆದಿತ್ಯ ಇವ ಸರ್ವಾವಭಾಸಿಕಾ ಚಿತ್ ಚಿದಾದಿತ್ಯಃ | ತಥಾಚ ತ್ವಮೇವ ಶತ್ರುದೇಹಾದಾವಪಿ ಪ್ರಕಾಶಕ ಆತ್ಮಾ ಇತಿ ನವೈಷಮ್ಯೇ ಹೇತುರಸ್ತಿ ಇತಿ ಭಾವಃ–ತಾ. ಪ್ರ.)

೪೬. ಮಹಾ ಬಾಹುವೆ, ನೀನು ಅನಂತನು, ನೀನು ಆದಿಯಲ್ಲಿದ್ದ ಪುರುಷೋತ್ತಮನು. ನೀನು ಚಿದ್ದೇಹಿಯು, ನೀನೇ ನೂರಾರು ಪದಾರ್ಥಗಳ ರೂಪನಾಗಿ ಎಲ್ಲೆಲ್ಲೂ ಕಾಣುತ್ತಿರುವವನು.

(ನನು ಜೀವಸ್ಯಮಮ ಕಥಂ ಈಶ್ವರಾತ್ಮಸಮದರ್ಶನಂ ತತ್ರಾಹ–ಜಡ ಸ್ಯೈಷಮ್ಯ ಮಪಿ ಅನಂತ್ಮೇಸ್ಯೈವ ನಾಶಂಕ್ಯ ಮಿತ್ಯಾಶಯೇನಾಹ—ತಾ. ಪ್ರ.)

ತ್ವಯಿ ಸರ್ವಮಿದಂ ಪ್ರೋತಂ ಜಗತ್ ಸ್ಥಾವರಜಂಗಮಮ್ ।
ಬೋಧೇ ನಿತ್ಯೋದಿತೇ ಶುದ್ಧೇ ಸೂತ್ರೇ ಮಣಿಗಣಾಯಥಾ ॥ ೪೭ ॥

ನ ಜಾಯಸೇ ನ ಮ್ರಿಯಸೇ ತ್ವಮಜಃ ಪುರುಷೋ ವಿರಾಟ್ ।
ಚಿಚ್ಛುದ್ಧಾ ಜನ್ಮಮರಣಭ್ರಾಂತಯೋ ಮಾ ಭವಂತು ತೇ ॥ ೪೮ ॥

ಸಮಸ್ತಜನ್ಮರೋಗಾಣಾಂ ಪ್ರವಿಚಾರ್ಯ ಬಲಾಬಲಂ ।
ತೃಷ್ಣಾಮುತ್ಸೃಜ್ಯ ಭೋಗಾನಾಂ ಭೋಕ್ತ್ರೈವ ಭವ ಕೇವಲಂ ॥ ೪೯ ॥

ತ್ವಯಿ ಸ್ಥಿತೇ ಜಗನ್ನಾಥೇ ಚಿದಾದಿತ್ಯೇ ಸದೋದಿತೇ ।
ಇದಮಾಭಾಸತೇ ಸರ್ವಂ ಸಂಸಾರಸ್ವಪ್ನಮಂಡನಂ ॥ ೫೦ ॥

---

೪೭. ನಿನ್ನಲ್ಲಿ ಸ್ಥಾವರ ಜಂಗಮಾತ್ಮಕವಾದ ಜಗತ್ತೆಲ್ಲವೂ ಹೆಣೆದುಕೊಂಡಿರುವುದು. ಬೋಧ ಸ್ವರೂಪನಾಗಿ ನಿತ್ಯ ಪ್ರಕಾಶನಾಗಿ ಶುದ್ಧನಾದ ನಿರ್ವಿಕಾರನಾದ ನಿನ್ನಲ್ಲಿ ಇವೆಲ್ಲವೂ ಸೂತ್ರದಲ್ಲಿ ಮಣಿಗಣಗಳು ಸೇರಿಕೊಂಡಂತೆ ಸೇರಿಕೊಂಡಿರುವವು.

೪೮. ನೀನು ಹುಟ್ಟುವುದೂ ಇಲ್ಲ. ಸಾಯುವುದೂ ಇಲ್ಲ. ನೀನು ಅಜನು, ವಿರಾಟ್ಪುರುಷನು (ಎಲ್ಲವೂ ನಿನ್ನೊಳಗೇ ಇರುವುದು.) ಶುದ್ಧವಾದ ಚಿತ್ ಸ್ವರೂಪನು ನೀನು. ನಿನಗೆ ಜನ್ಮ ಮರಣ ಭ್ರಾಂತಿಗಳು ಎಂದಿಗೂ ಬರದಿರಲಿ.

೪೯. ಬಲಾಬಲ ವಿಚಾರಪೂರ್ವಕವಾಗಿ ಜನ್ಮಗಳೆಂಬ ರೋಗಗಳಿಗೆಲ್ಲಾ ಕಾರಣವಾದ ತೃಷ್ಣೆಯನ್ನು ಕಿತ್ತೆಸೆದು, ಭೋಗಗಳಿಗೆ ಕೇವಲ ಸಾಕ್ಷಿಯಾಗಿ ಅನುಭವಿಸು.

(ತೃಷ್ಣಾವೃದ್ಧ್ಯಾ ಜನ್ಮಾದಿ ರೋಗಾಣಾಂ ಪ್ರಾಬಲ್ಯಂ ತೃಷ್ಣಾಪಕ್ಷಯೇ ಚ ತೇಷಾಂ ದೌರ್ಬಲ್ಯ ಮಿತ್ಯನ್ವಯ ವ್ಯತಿರೇಕಾಭ್ಯಾಂ ಪರೀಕ್ಷ್ಯೇತ್ಯರ್ಥಃ। ಭೋಗಾನಾಂ ತೃಷ್ಣಾಂ ಉತ್ಸೃಜ್ಯ ಭೋಕ್ತಾ ಭೋಗಸಾಕ್ಷೀ ಚಿನ್ಮಾತ್ರಮೇವಭವ—ತಾ. ಪ್ರ.).

೫೦. ನೀನು ಜಗನ್ನಾಥನೂ ಚಿದಾದಿತ್ಯನೂ ಸದೋದಿತನೂ ಆಗಿ ಇರಲಾಗಿ, ಸಂಸಾರವೆಂಬ ಒಂದು ಭಾರಿಯ ಕನಸಾದ ಈ ದೃಶ್ಯವೆಲ್ಲವೂ ಪ್ರಕಟವಾಗಿ ತೋರುವುದು.

ಮಾ ವಿಷಾದಂ ಕೃಥಾವ್ಯರ್ಥಂ ಸುಖದುಃಖೈಷಣಾ ನ ತೇ ।
ಶುದ್ಧ ಚಿತ್ತೋಽಸಿ ಸರ್ವಾತ್ಮಾ ಸರ್ವವಸ್ತ್ವವಭಾಸಕಃ ॥ ೫೧ ॥

ಪೂರ್ವಮಿಷ್ಟಮನಿಷ್ಟಂ ತ್ವಂ ಅನಿಷ್ಟಂ ಚೇಷ್ಟಮಿತ್ಯಪಿ ।
ಪರಿಕಲ್ಪ್ಯ ತದಭ್ಯಾಸಾತ್ ತತ್ ತತೋಽಪಿ ಪರಿತ್ಯಜ ॥ ೫೨ ॥

ಇಷ್ಟಾನಿಷ್ಟದೃಶೋಸ್ತ್ಯಾಗೇ ಸಮತೋದೇತಿ ಶಾಶ್ವತೀ ।
ತಯಾ ಹೃದಯವರ್ತಿನ್ಯಾ ಪುನರ್ಜನ್ತುರ್ನ ಜಾಯತೇ ॥ ೫೩ ॥

---

೫೧. ನೀನು ವ್ಯರ್ಥವಾಗಿ ವಿಷಾದ ಪಡಬೇಡ. ಸುಖದುಃಖಗಳ ಈಷಣವು ನಿನಗಿಲ್ಲ. ನೀನು ಶುದ್ಧ ಚಿತ್ತನು: ಸರ್ವಾತ್ಮನು: ಸರ್ವ ವಸ್ತು ಪ್ರಕಾಶಕನು.

೫೨. ಇಷ್ಟವಾಗಿದ್ದುದನ್ನು ಅನಿಷ್ಟವೆಂದೂ (ದುಃಖಪ್ರದವೆಂದೂ), ಅನಿಷ್ಟವಾದುದನ್ನು ಇಷ್ಟವಾದುದೆಂದೂ (ಪ್ರಿಯಕರವೆಂದೂ) ಭಾವಿಸುತ್ತ ಬಂದರೆ, ಆ ಅಭ್ಯಾಸವೇ ಬಲವಾಗಿ ಇಷ್ಟಾನಿಷ್ಟಗಳಲ್ಲಿ ಪ್ರಿಯಾಪ್ರಿಯ ಭಾವವು ತಪ್ಪಿ ಹೋಗಿ ಎರಡೂ ಒಂದೇ ಒಂದಾಗುವುದು. ಅಭ್ಯಾಸಬಲದಿಂದ ಇಷ್ಟಾನಿಷ್ಟ ದ್ವೈತ ಭಾವನೆಯನ್ನೂ ಕೊನೆಗೆ ಬಿಟ್ಟು ಬಿಡು.

(ಯದ್ಯ ಶುದ್ಧ ಚಿತ್ತೋಽಸಿ ತಥಾಪಿ ತಚ್ಛುದ್ಧಯೇ ಕ್ರಮಾದುಪಾಯಂ ಶೃಣ್ವಿತ್ಯಾಹ-ಯದ್ಯದಿಷ್ಟಂ ಮನಃಪ್ರಿಯಂ ತದ ನಿಷ್ಟಮನರ್ಥಸಾಧನಂ, ಯಚ್ಚಾನಿಷ್ಟಮಪ್ರಿಯಂ ಮನಸ ಕ್ಲೇಶೇಂದ್ರಿಯ ಸಂಯಮ ಪ್ರಾಣಾಯಾಮಾದಿ ತತ್ಸರ್ವಮಿಷ್ಟಮಾವಶ್ಯಕಂ ಮಮೇತಿ ಪ್ರಥಮಂ ಪರಿಕಲ್ಪ್ಯ ಸಪ್ತಮಭೂಮಿಕಾ ಪರಿಪಾಕಪರ್ಯಂತಂ ತದಭ್ಯಾಸಾತ್ ತಜ್ಜಯೇ ಸತಿ ತತ್ ತಾಂ ಕಲ್ಪನಾಮಪಿ ತತಃ ಪರಿತ್ಯಜ-ಇತ್ಯರ್ಥಃ-ತಾ. ಪ್ರ.)

೫೩. ಇಷ್ಟ-ಅನಿಷ್ಟ, ಎಂಬ ದೃಷ್ಟಿಗಳನ್ನು ತ್ಯಾಗ ಮಾಡಿದ್ದೇ ಆದರೆ, ಶಾಶ್ವತವಾದ ಸಮತೆಯು ಉದಿಸುವುದು. ಆ ಸಮತೆಯು ಹೃದಯದಲ್ಲಿ ನೆಲಸಿದರೆ, ಜೀವನು ಮತ್ತೆ ಜನ್ಮವೆತ್ತುವುದಿಲ್ಲ.

ಯೇಷುಯೇಷು ಪ್ರದೇಶೇಷು ಮನೋ ಮಜ್ಜತಿ ಬಾಲವತ್ ।
ತೇಭ್ಯಸ್ತೇಭ್ಯಃ ಸಮಾಹೃತ್ಯ ತದ್ಧಿ ತತ್ತ್ವೇ ನಿಯೋಜಯೇತ್ ॥ ೫೪ ॥

ಏವಮಭ್ಯಾಗತಾಭ್ಯಾಸಂ ಮನೋಮತ್ತಮತಙ್ಗಜಮ್ ।
ನಿಬಧ್ಯ ಸರ್ವಭಾವೇನ ಪರಂ ಶ್ರೇಯೋಽಧಿಗಮ್ಯತೇ ॥ ೫೫ ॥

ಮಾ ಶರೀರಯಥಾರ್ಥಜ್ಞೈಃ ಮಿಥ್ಯಾದೃಷ್ಟಿಹತಾಶಯೈಃ ।
ಧೂರ್ತೈಃ ಸಂಕಲ್ಪವಿಕ್ರೀತೈಃ ವಿಮೂಢೈಃ ಸಮತಾಂ ವ್ರಜ ॥ ೫೬ ॥

ಅಕಿಂಚನಾತ್ ಸ್ವನಿರ್ಣೀತೌ ಲಭ್ಯಮಾನಾತ್ ಪರೋಕ್ತಿಷು ।
ಸಮೌರ್ಖ್ಯಾದಧಿಕೋ ಲೋಕೇ ಕಶ್ಚಿದಸ್ತೀಹ ದುಃಖದಃ ॥ ೫೭ ॥

---

೫೪. ಯಾವ ಯಾವ ಪ್ರದೇಶ (ವಿಷಯ) ಗಳಲ್ಲಿ ಮನಸ್ಸು ಮಕ್ಕಳಂತೆ ಹೋಗಿ ಹೋಗಿ ಲಗ್ನವಾಗುವುದೋ, ಆಯಾ ವಿಷಯಗಳಿಂದ ಮನಸ್ಸನ್ನು ಮತ್ತೆ ಬ್ರಹ್ಮತತ್ತ್ವದಲ್ಲಿ ಸೇರಿಸಬೇಕು.

(ಯತೋ ಯತೋ ನಿಶ್ಚರತಿ ಮನಶ್ಚಂಚಲ ಮಸ್ಥಿರಂ ॥ ತತಸ್ತತೋನಿಯ ಮ್ಯೈತದಾತ್ಮನ್ಯೇವ ವಶಂ ನಯೇತ್ ॥ ಗೀತಾ-೬ ಶ್ಲೋಕ ೨೬.)

೫೫. ಹೀಗೆ ಸದೇ ಸದೇ ಅಭ್ಯಾಸ ಮಾಡಿಮಾಡಿ, ದೃಢಪಸಿಕೊಂಡು ಮನಸ್ಸೆಂಬ ಮದ್ದಾನೆಯನ್ನು ಸರ್ವ ವಿಧದಿಂದಲೂ ಕಟ್ಟಿಹಾಕಿ ಉತ್ತಮವಾದ ಶ್ರೇಯಸ್ಸನ್ನು ಪಡೆಯಬೇಕು.

[ಸರ್ವಭಾವೇನ = ಸರ್ವ ಪ್ರಯತ್ನೇನ, ಸರ್ವಾತ್ಮಭಾವೇನಚ. ತಾ.ಪ್ರ.]

೫೬. ಶರೀರವನ್ನೇ ಆತ್ಮವೆಂದುಕೊಂಡು, ಮಿಥ್ಯಾಜ್ಞಾನದಿಂದ ಕೆಟ್ಟುಹೋಗಿ ಸಂಕಲ್ಪದಾಸರಾಗಿ, ಸಂಸಾರದಲ್ಲಿ ಸಿಕ್ಕಿಕೊಂಡಿರುವ ಮೂಢರಂತೆಯೂ ಧೂರ್ತ ರಂತೆಯೂ ನೀನು ಆಗಬೇಡ.

೫೭. ಆತ್ಮಸ್ವರೂಪವನ್ನು ನಿರ್ಣಯಿಸುವುದರಲ್ಲಿ ಎಳ್ಳಷ್ಟೂ ಪ್ರಯೋಜನ ವಿಲ್ಲದೆ, ಬ್ರಹ್ಮಕ್ಕಿಂತ ಬೇರೆಯಾದ ಮಿಥ್ಯಾ ಪ್ರಸಂಗಗಳಲ್ಲಿ ತಾನೇ ತಾನಾಗಿ ಬೆಳೆ ಯುವ ಮೌರ್ಖ್ಯಕ್ಕಿಂತಲೂ ದುಃಖಕರವಾದುದು ಲೋಕದಲ್ಲಿ ಇನ್ನು ಯಾವುದು ಉಂಟು ?

ತ್ವಮೇತದವಿವೇಕಾಭ್ರಂ ಉದಿತಂ ಹೃದಯಾಮ್ಬರೇ ।
ವಿವೇಕಪವನೇನಾಶು ದೂರಂ ನಯ ಮಹಾಮತೇ ॥ ೫೮ ॥

ಆತ್ಮನೈವ ಪ್ರಯತ್ನೇನ ಯಾವದಾತ್ಮಾವಲೋಕನೇ ।
ನ ಕೃತೋನುಗ್ರಹಸ್ತಾವತ್ ನ ವಿಚಾರೋದಯೋ ಭವೇತ್ ॥ ೫೯ ॥

ವೇದವೇದಾನ್ತಶಾಸ್ತ್ರಾರ್ಥತರ್ಕದೃಷ್ಟಿಭಿರಪ್ಯಯಂ ।
ನಾತ್ಮಾ ಪ್ರಕಟತಾಮೇತಿ ಯಾವನ್ನ ಸ್ವಮವೇಕ್ಷಿತಂ ॥ ೬೦ ॥

ತ್ವಮಾತ್ಮನ್ಯಾತ್ಮನಾ ರಾಮ ಪ್ರಸಾದೇ ಸಮವಸ್ಥಿತಃ ।
ಪ್ರಾಪ್ತೋಸಿ ವಿತತಂ ಬೋಧಂ ಮದ್ವಚಸ್ಯೇವ ಬುಧ್ಯಸೇ ॥ ೬೧ ॥

(ಸ್ವಸ್ಯ ಆತ್ಮತತ್ತ್ವಸ್ಯ ನಿರ್ಣೀತೌ ನಿರ್ಣಯ ವಿಷಯೇ. ಅಕಿಂಚನಾತ್ ವಿವೇಕ ವೈರಾಗ್ಯಾದಿ ಉಪಾಯದರಿದ್ರಾತ್, ಪರೇಷಾಂ ಪ್ರತಾರಕಾಣಾಂ ಮೂರ್ಖಾಣಾಂ ಚ ಉಕ್ತಿಷು ಅವಲಂಬಮಾನಾತ್—ತಾ. ಪ್ರ.

ಇಲ್ಲಿ ಪರೋಕ್ತಿಷು ಎಂಬುದನ್ನು ಮಿಥ್ಯಾಪ್ರಸಂಗಗಳಲ್ಲಿ ಎಂದು ಅರ್ಥ ಮಾಡಿದೆ.)

೫೮. (ಆದರಿಂದ) ಮಹಾಮತಿಯಾದ ರಾಮನೆ, ನೀನು ಹೃದಯದಲ್ಲಿ ತೋರಿಬರುವ ಅವಿವೇಕವೆಂಬ ಮೋಡವನ್ನು ವಿವೇಕವೆಂಬ ಗಾಳಿಯಿಂದ ದೂರವಾಗಿ ಓಡಿಸಿಬಿಡು.

೫೯. ಪ್ರಯತ್ನ ಪುರಸ್ಸರವಾಗಿ ಪುರುಷನು ಆತ್ಮ ದರ್ಶನಾರ್ಥವಾಗಿ ವ್ಯವಸಾಯ ಮಾಡುವುದೆಂಬ ಅನುಗ್ರಹವನ್ನು ಮಾಡಿಕೊಳ್ಳದಿದ್ದರೆ, ವಿಚಾರವು ಉದಯಿಸುವುದೇ ಇಲ್ಲ.

೬೦. ವೇದ, ವೇದಾಂತ, ಶಾಸ್ತ್ರಾರ್ಥ, ತರ್ಕ, ಮೊದಲಾದವುಗಳನ್ನು ಎಷ್ಟು ಪಾಠ ಮಾಡಿದರೂ, ಆತ್ಮದರ್ಶನವಾದಲ್ಲದೆ ಆತ್ಮನು ಪ್ರಕಟನಾಗುವುದಿಲ್ಲ.

೬೧. ಎಲೈ ರಾಮನೇ, ನೀನು ನಿನ್ನ ಸ್ವಪ್ರಯತ್ನದಿಂದ, ನಿನ್ನಲ್ಲಿಯೇ, ಪ್ರಸಾದವನ್ನು ಪಡೆದು ಸ್ಥಿರನಾಗಿರುವೆ. ಉತ್ತಮವಾದ ಆತ್ಮಬೋಧವನ್ನೂ ಪಡೆ

ವಿಕಲ್ಪಾಂಶವಿಹೀನಸ್ಯ ತ್ವಯೈಷಾ ಚಿದ್ವಿವಸ್ವತಃ ।
ಗೃಹೀತಾ ವಿತತಾ ವ್ಯಾಪ್ತಿಃ ಮುಮುಕ್ತ್ಯಾ ಪರಮಾತ್ಮನಃ । ॥ ೬೨ ॥

ವಿಲೀನಸರ್ವಸಙ್ಕಲ್ಪಃ ಶಾಸ್ತ್ರಸನ್ದೇಹವಿಭ್ರಮಃ ।
ಕ್ಷೀಣಕೌತುಕನೀಹಾರೋ ಜಾತೋಽಸಿ ವಿಗತಜ್ವರಃ ॥ ೬೩ ॥

ದಿರುವೆ. ಆದ್ದರಿಂದ ನನ್ನ ಮಾತಿನಲ್ಲಿರುವ ಸತ್ಯಾಸತ್ಯತೆಯನ್ನು ನೀನು ತಿಳಿಯಬಲ್ಲೆ.

("ಬಲವದಪಿ ಶಿಕ್ಷಿತಾನಾಂ ಆತ್ಮನ್ಯಪ್ರತ್ಯಯಂ ಚೇತಃ" ಇತಿ ನ್ಯಾಯಾದ್ಗುರುಶಾಸ್ತ್ರೋಕ್ತಿಸಂವಾದೇ ಸತ್ಯೇವ ಸ್ವಪ್ರತ್ಯಯೇ ವಿಶ್ವಾಸಾದ ಸಂದಿಗ್ಧಬೋಧಸಿದ್ಧಿರಿತಿ ದ್ಯೋತನಾಯ ಏವಕಾರಃ—ತಾ. ಪ್ರ.)

೬೨. (ಆದರಿಂದ) ಸಂಕಲ್ಪ ವಿಕಲ್ಪಗಳೂ ಅಂಶ ಅಂಶೀಭಾವಗಳೂ ಇಲ್ಲದ ಚಿದಾದಿತ್ಯ ಸ್ವರೂಪನಾದ ಪರಮಾತ್ಮನು (ಕಾಲದೇಶಗಳೆಂಬ ಪರಿಚ್ಛೇದಗಳಿಲ್ಲದೆ) ತಾನೇ ತಾನಾಗಿ ಸರ್ವಥಾ ವ್ಯಾಪ್ತನಾಗಿರುವನೆಂಬ ನನ್ನ ಮಾತು ನಿನಗೆ ಅರ್ಥವಾಯಿತೆ?

೬೩. ನಿನ್ನ ಹೃದಯದಲ್ಲಿರುವ ಸಂಕಲ್ಪಗಳೆಲ್ಲವೂ ಶಾಂತವಾದುವೆ? ಸಂದೇಹವಿಲಾಸಗಳೆಲ್ಲವೂ ಲಯವಾದುವೆ? ಪ್ರಾಪಂಚಿಕ ಪದಾರ್ಥ ದರ್ಶನಾನುಭವಾಸಕ್ತಿಯು ಕ್ಷಯವಾಯಿತೆ? ನೀನು ಯಾವ ರೀತಿಯಾದ ಸಂತಾಪವೂ ಇಲ್ಲದವನಾದೆಯಾ?

(ಕೌತುಕಂ ಬಾಹ್ಯಾರ್ಥಚಮತ್ಕಾರ ಕುತೂಹಲಂ ಆತ್ಮತತ್ತ್ವಜಿಜ್ಞಾಸಾತ ಕುತೂಹಲಂ ಚ—ತಾ. ಪ್ರ.)

ಯದುಪಗಚ್ಛಸಿ ಪಾಸಿ ನಿಹಂಸಿ ವಾ ಪಿಬಸಿ ವಿಸ್ಮಯಸೇ ಚ ವಿವರ್ಧಸೇ ।
ತದಪಿ ತೇ ನ ತದಾಸ್ತು ಯದಾ ಮುನೇ ವಿಗತಬೇಧಕಳಂಕವಿಶಂಙ್ಕಿತಃ ॥ ೬೪ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ "ಬಲೇರ್ವಿಜ್ಞಾನಪ್ರಾಪ್ತಿ"ನಾಮ ಏಕೋನತ್ರಿಂಶಃ ಸರ್ಗಃ

---

೬೪. ಮನನಶೀಲನಾದ ರಾಮನೆ, ನೀನು ಪ್ರಾಪಂಚಿಕವಾದ ವಸ್ತುಗಳನ್ನು ಬಯಸುವುದೂ, ಇದ್ದುದನ್ನು ಕಾಪಾಡಿಕೊಳ್ಳುವುದೂ, ಬೇಡವಾದುದನ್ನು ನಾಶಪಡಿಸುವುದೂ, ಅನ್ನಪಾನಾದಿಗಳನ್ನು ಸ್ವೀಕರಿಸುವುದೂ, ಪ್ರಾಪಂಚಿಕ ಪದಾರ್ಥಗಳನ್ನು ನೋಡಿ ಆಶ್ಚರ್ಯಪಡುವುದೂ, ಅವುಗಳನ್ನು ವೃದ್ಧಿಹೊಂದಿಸುವುದೂ, ಇವೆಲ್ಲವೂ ಜ್ಞಾನಕ್ಕೆ ಇರುವ ಕಳಂಕ (ಆವರಣ) ವಿಶಂಕಾ (ವಿಕ್ಷೇಪ) ಎಂಬ ಎರಡು ದೋಷಗಳಿಂದಲೇ ಆಗುವುದು. ಆ ಎರಡು ದೋಷಗಳೂ ನಾಶವಾದಮೇಲೆ ನಿನಗೆ ಇದೊಂದೂ ಇರುವುದಿಲ್ಲ.

(ಹೇ ಮುನೇ, ಮನನಶೀಲರಾಮ, ತ್ವಂ ಯದಾ ವಿಗತೋಬೋಧಸ್ಯ ಬೋಧೈಕರಸಸ್ಯ ಆತ್ಮತತ್ವಸ್ಯ ಕಲಂಕ ಆವರಣಂ ವಿಶಂಕಿತಂ ವಿಕ್ಷೇಪಶ್ಚ ಯಸ್ಯ ತಥಾ ವಿಧೋ ಭವಿಷ್ಯಸಿ, ತದಾ ತೇ ಯದಪ್ರಾಪ್ತಂ ಜ್ಞಾನಂ ತತ್ಸಾಧನಂ ಚ ವಿಚಾರಗುರು ಶಾಸ್ತ್ರೋಪದೇಶಾದಿ ಉಪಗಚ್ಛಸಿ ಮೋಕ್ಷಾರ್ಥಂ ಸ್ವೀಕರೋಷಿ,ಯಚ್ಚ ವಿವೇಕ ವೈರಾಗ್ಯಾದಿ ಪಾಸಿ. ಯತ್ನೇನ ರಕ್ಷಸಿ, ಯಚ್ಚ ಆಲಸ್ಯ ಪ್ರಮಾದಾದಿ ದೋಷಜಾತಂ ನಿಹಂಸಿ ಯತ್ನೇನ ಜಯಸಿ, ಯಚ್ಚ ಸಮಾಧಿಸುಖಾಮೃತಂ ಪಿಬಸಿ, ಯಚ್ಚ ಉತ್ತರೋತ್ತರಭೂಮಿಕಾಧಿರೋಹಣೇನ ವಿಸ್ಮಯಸೇ,ಯಚ್ಚ ಸಪ್ತಭೂಮಿಕಾವಿಶ್ರಾಂತ್ಯಾ ಪೂರ್ವಪೂರ್ವಾವಸ್ಥಾಧಿಕ ಸುಖೋತ್ಕರ್ಷಾದ್ವರ್ಧಸೇ, ತದಾಪಿ ನಾಸ್ತು-ಕಿಂತು ಬ್ರಹ್ಮೈವ ಯಥಾಸ್ಥಿತಂ ತಿಷ್ಠ ಇತ್ಯರ್ಥಃ.)

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ಬಲಿವಿಜ್ಞಾನಪ್ರಾಪ್ತಿ" ಎಂಬ ಇಪ್ಪತ್ತೊಂಬತ್ತನೆಯ ಸರ್ಗವು.

ತ್ರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಅಥೇಮಂ ಪರಮಂ ರಾಮ ವಿಜ್ಞಾನಾಭಿಗಮೇ ಕ್ರಮಂ ।
ಶೃಣು ದೈತ್ಯೇಶ್ವರಃ ಸಿದ್ಧಃ ಪ್ರಹ್ಲಾದಃ ಸಾತ್ಮನಾ ಯಥಾ ॥ ೧ ॥

ಆಸೀತ್ಪಾತಾಲಕುಹರೇ ವಿದ್ರಾವಿತಸುರಾಸುರಃ ।
ಹಿರಣ್ಯಕಶಿಪುರ್ನಾಮ ನಾರಾಯಣಪರಾಕ್ರಮಃ ॥ ೨ ॥

ಮೂವತ್ತನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು;—ಆತ್ಮಜ್ಞಾನಪ್ರಾಪ್ತಿಯಾಗುವ, ಶ್ರೇಷ್ಠನಾದ, ಇನ್ನು ಒಂದು ಕ್ರಮವಿರುವುದು. ಅದನ್ನೂ ಹೇಳುವೆನು ಕೇಳು. ದೈತ್ಯೇಶ್ವರನಾದ ಪ್ರಹ್ಲಾದನು ತನ್ನ ಪ್ರಯತ್ನದಿಂದಲೇ ಸಿದ್ಧನಾದನು. ಆತನ ಕಥೆಯನ್ನು ಕೇಳು,

["ಕೇವಲ ಕಾಕತಾಳೀಯ ಯೋಗದಿಂದ (ಬಲಿಗೆ) ವಿಜ್ಞಾನಪ್ರಾಪ್ತಿಯುಂಟಾದುದನ್ನು ಕೇಳಿದೆ. ಈಗ ಕ್ರಮವಾಗಿ ಗುರೂಪಸನಾದಿ ಬಲದಿಂದ ವಿಜ್ಞಾನ ಲಾಭನಾಗುವ ಬಗೆಯನ್ನು ಹೇಳುವೆನು." ಎಂದು ತಾತ್ಪರ್ಯಪ್ರಕಾಶವು ಅಭಿಪ್ರಾಯಪಡುತ್ತದೆ. ಆದರೆ ತಂದೆಯಾದ ವಿರೋಚನನು ಬಲಿಗೆ ಹಿಂದೆ ಆತ್ಮ ವಿಷಯವನ್ನು ಹೇಳಿದ್ದನು; ಮತ್ತೆ. ಶುಕ್ರಾಚಾರ್ಯರು ಬಂದು ಸೂಕ್ಷ್ಮವಾಗಿ ಹೇಳಿದರು. ಎಂಬುದರಿಂದ ಬಲಿಗೆ ವಿಜ್ಞಾನಪ್ರಾಪ್ತಿಯಾದುದು ಕಾಕತಾಳೀಯವಾಗಿ ಎಂದು ಹೇಳಲಾಗುವುದಿಲ್ಲ.]

೨. ಪೂರ್ವದಲ್ಲಿ, ಪಾತಾಳಲೋಕದಲ್ಲಿ ಹಿರಣ್ಯಕಶಿಪುವೆಂಬ ಅಸುರೇಂದ್ರನಿದ್ದನು. ಆತನು ಮಹಾವಿಷ್ಣುವಿನಷ್ಟು ಪರಾಕ್ರಮಶಾಲಿಯು. ಆತನು ದೇವದಾನವರನ್ನೆಲ್ಲ ಹೊಡೆದೋಡಿಸಬಲ್ಲವನು.

ಆಕ್ರಾಂತಭುವನಾಭೋಗಃ ಸ ಜಹಾರ ಪರೇರ್ಜಗತ್ ।
ಷಟ್ಪದಸ್ಯ ಬೃಹತ್ಪತ್ರಂ ರಾಜಹಂಸ ಇವಾಂಬುಜಂ ॥ ೩ ॥

ಚಕಾರ ಜಗತಾಂ ರಾಜ್ಯಂ ಸಮಾಕ್ರಾಂತಸುರಾಸುರಃ ।
ದಂತೀ ನಿರಸ್ತಹಂಸೌಘೋ ನಲಿನ್ಯಾಮಲಿನಾಮಿವ ॥ ೪ ॥

ಅಥಾಸಾವಸುರಾಧೀಶಃ ಕುರ್ವಂಸ್ತ್ರಿಭುವನೇಶತಾಂ ।
ಕಾಲೇನ ಸುಷುವೇ ಪುತ್ರಾನಂಕುರಾನಿವ ಮಾಧವಃ ॥ ೫ ॥

ತೇ ವರ್ಧಂತಾಜಿರೇಣ್ಯೈವ ತೇಜಸ್ಯೂರ್ಜಿತಬಾಲಕಾಃ ।
ದಶಾರ್ಕಾಂಶುಶತಾನೀವ ವ್ಯೋಮಾಕ್ರಾಂತಿವಿಲಾಸಿನಃ ॥ ೬ ॥

ಪ್ರಹ್ಲಾದನಾಮಾ ಬಲವಾನ್ಪ್ರಧಾನಾತ್ಮಾ ಬಭೂವತು ।
ತೇಷಾಂ ಮಧ್ಯೇ ಮಹಾರ್ಘಾಣಾಂ ಮಣೀನಾಮಿವ ಕೌಸ್ತುಭಃ ॥ ೭ ॥

---

೩. ಅವನು ಲೋಕಲೋಕಗಳನ್ನೆಲ್ಲ ಆಕ್ರಮಿಸಿಕೊಂಡು. ದುಂಬಿಯು ಕುಳಿತಿದ್ದ ವಿಶಾಲಪತ್ರಗಳ ಕಮಲವನ್ನು ರಾಜಹಂಸವು ಆಕ್ರಮಿಸುವಂತೆ, ಇಂದ್ರನ ಪದವಿಯನ್ನು ಹಾರಿಸಿಬಿಟ್ಟನು.

೪. ಆನೆಯು ಸರೋವರವನ್ನು ಪ್ರವೇಶಿಸಿ ಅಲ್ಲಿರುವ ಹಂಸಗಳನ್ನೆಲ್ಲ ಓಡಿಸಿಬಿಟ್ಟು ದುಂಬಿಗಳನ್ನೆಲ್ಲ ಆಟವಾಡಿಸುವಂತೆ, ಸುರ ಅಸುರರನ್ನೆಲ್ಲ ವಶಪಡಿಸಿಕೊಂಡು ತ್ರಿಲೋಕರಾಜ್ಯವನ್ನು ಆಳಿದನು.

೫. ಆ ಅಸುರೇಂದ್ರನು ಹೀಗೆ ಮೂರು ಲೋಕಗಳನ್ನು ಆಳುತ್ತಿರುವಾಗ, ವಸಂತಋತುವು ಚಿಗುರುಗಳನ್ನು ಪಡೆಯುವಂತೆ, ಕಾಲಕ್ರಮದಲ್ಲಿ ಮಕ್ಕಳ ಪಡೆದನು.

೬. ತೇಜಸ್ವಿಗಳಾದ ಆ ಅಸುರ ರಾಜಪುತ್ರರು ಸೂರ್ಯನ ನೂರಾರು ಕಿರಣಗಳು ದಿಕ್ಕುಗಳನ್ನೆಲ್ಲ ಆಕ್ರಮಿಸುವಂತೆ, ಆಕಾಶವನ್ನೆಲ್ಲ ಆಕ್ರಮಿಸಿಕೊಳ್ಳುವ ವಿಲಾಸಗಳಿಂದ ವರ್ಧಿಸಿದರು.

೭. ಮಹಾರತ್ನಗಳಲ್ಲಿ ಕೌಸ್ತುಭವು ಹೇಗೋ ಹಾಗೆ, ಆ ಬಲಿಷ್ಠರಾದ ಅರಸುಮಕ್ಕಳಲ್ಲಿ ಪ್ರಹ್ಲಾದನು ಮಹಾಬಲಿಯಾಗಿ ಪ್ರಧಾನನಾಗಿ ವಿರಾಜಿಸಿದನು.

ತೇನಾರಾಜತ ಪುತ್ರೇಣ ಹಿರಣ್ಯಕಶಿಪುರ್ಭೃಶಂ ।
ಸರ್ವಸೌಂದರ್ಯಯುಕ್ತೇನ ವಸಂತೇನೇವ ವತ್ಸರಃ ॥ ೮ ॥

ಅಥ ಪುತ್ರಸಹಾಯೋಽಸೌ ಬಲಕೋಶಸಮನ್ವಿತಃ ।
ಆಜಗಾಮ ಮದಂ ದೈತ್ಯಸ್ತ್ರಿಗಂಡಗಲಿತೇಭವತ್ ॥ ೯ ॥

ತತ್ಪ್ರತಾಪಾಕ್ರಾಂತಿತಾಪೇನ ತ್ರಿಜಗಂತಿ ವಿಕಾಸಿನಾ ।
ಕಲ್ಪಾಂತಸೂರ್ಯಗಣವನ್ನವಯೈವ ಕರಶ್ರಿಯಾ ॥ ೧೦ ॥

ಅಖಿದ್ಯಂತಾಸ್ಯ ತೇನಾಥ ಸೂರ್ಯೇಂದುಪ್ರಮುಖಾಃ ಸುರಾಃ ।
ದುರ್ವಿಲಾಸವಿಲೋಲಸ್ಯ ಬಾಲಸ್ಯೇವ ಸ್ವಬಂಧವಃ ॥ ೧೧ ॥

---

೮. ಸರ್ವಸೌಂದರ್ಯಯುಕ್ತವಾದ ವಸಂತರುತುವಿನಿಂದ ಮೆರೆಯುವ ವರ್ಷದಂತೆ, ಆ ಅಸುರೇಂದ್ರನು ಆ ಮಗನಿಂದ ಶೋಭಿಸಿದನು.

೯. ಸೈನ್ಯವೂ ಕೋಶವೂ ಸಮೃದ್ಧಿಯಾಗಿರಲು, ಆ ತಂದೆಯು ಮಗನ ಸಹಾಯದಿಂದ, ಮೂರು ಸ್ಥಲಗಳಿಂದ ಮದೋದಕವನ್ನು ಬಿಡುವ ಆನೆಯು ಮದಿಸುವಂತೆ, ಆ ದೈತ್ಯನು ಪರಾಕ್ರಮದಿಂದ ಮದಿಸಿದನು.

(ಆನೆಗೆ ಮದೋದಕವು ಪ್ರವಿಸುವ ಮದಸ್ಥಾನಗಳು ಏಳು: ಆದರೂ ಪ್ರಧಾನವಾದವು ಮೂರು ಎಂದು ಪ್ರಸಿದ್ಧವು: ಅಥವಾ ಅರವತ್ತು ವರ್ಷದ ಆನೆಗೆ ತ್ರಿಗಂಡಗಳಿತ ಎಂದು ಹೇಳುವುದೂ ಉಂಟು. ತಾ. ಪ್ರ.)

೧೦. ಕಲ್ಪಾಂತದಲ್ಲಿ ಸೂರ್ಯನು ವಹಿಸುವ ಹೊಸ ಪ್ರಲಯಕಿರಣಗಳ ಪ್ರಭಾವದಿಂದ ಆಗುವಂತೆ, ಆ ದೈತ್ಯೇಂದ್ರನ ಪ್ರತಾಪವು ಮೂರು ಲೊಕವನ್ನೂ ಆಕ್ರಮಿಸಲು, ಲೋಕಲೋಕಗಳೆಲ್ಲವೂ ಸಂತಾಪಪಟ್ಟುವು.

೧೧. ಕೆಟ್ಟ ಆಟಗಳನ್ನಾಡುವ ದುಷ್ಟಬಾಲಕನಿಂದ ಬಂಧುಗಳೆಲ್ಲರೂ ಆಯಾಸಪಡುವಂತೆ, ಅವನ ದುರ್ಮದ ವಿಲಾಸಗಳಿಂದ, ಸೂರ್ಯ ಚಂದ್ರರಾದಿಯಾಗಿ ದೇವತೆಗಳೆಲ್ಲರೂ ಖೇದಪಟ್ಟರು.

ಪ್ರಾರ್ಥಯಾಂಚಕ್ರಿರೇಽಥಾಜಂ ದೈತ್ಯೇಂದ್ರೇಭಪತೇರ್ವಧೇ ।
ನ ಕ್ಷಮಂತೇ ಮಹಾಂತೋಽಪಿ ಪೌನಃಪುನ್ಯೇನ ದುಷ್ಕ್ರಿಯಾಂ ॥ ೧೨ ॥

ತತಃ ಪ್ರಲಯಪರ್ಯಸ್ತಜಗದ್ಘರ್ಘರಜೃಂಭಿತಂ ।
ದಿಗ್ದಂತಿದಶನಪ್ರಖ್ಯನಖವಜ್ರಾದಿಜೃಂಭಿತಂ ॥ ೧೩ ॥

ಸ್ಥಿರವಿದ್ಯುಲ್ಲತಾಜಾಲಭಾಸುರದ್ವಿಜಮಂಡಲಂ ।
ದಶದಿಕ್ಕೋಟರೋದ್ಭ್ರಾಂತಜ್ವಲಜ್ಜ್ವಲನಕುಂಡಲಂ ॥ ೧೪ ॥

ಸಮಸ್ತಕುಲಶೈಲೇಂದ್ರಪಿಂಡಪೀಠೋದ್ಧತೋದರಂ ।
ದೋರ್ದ್ರುಮಾಧೂತನಿರ್ಧೂತ ಸ್ಫುರದ್ಬ್ರಹ್ಮಾಂಡ ಖರ್ಪರಂ ॥ ೧೫ ॥

---

೧೨. ಕೊನೆಗೆ ಆ ದೈತ್ಯೇಂದ್ರನೆಂಬ ಗಜರಾಜನ ವಧೆಗಾಗಿ ಅವರೆಲ್ಲರೂ ಶ್ರೀ ಮಹಾವಿಷ್ಣುವನ್ನು ಪ್ರಾರ್ಥಿಸಿಕೊಂಡರು. ಮಹಾತ್ಮರೂ ಕೂಡ ಪದೇಪದೇ ನಡೆಯುವ ದೌರ್ಜನ್ಯವನ್ನು ಕ್ಷಮಿಸುವುದಿಲ್ಲ.

೧೩-೧೪-೧೫. (ಆಗ ಸ್ವಾಮಿಯು ಆ ದೈತ್ಯವಧೆಗಾಗಿ ನೃಸಿಂಹನಾದನು. ಆತನು ಆ ರೂಪದಲ್ಲಿ ಬರಲು) ಪ್ರಲಯಕಾಲದಲ್ಲಿ ಜಗತ್ತುಗಳೆಲ್ಲವೂ ಬಿರಿಯುವಾಗ ಆಗುವಂತಹ ಮಹಾಶಬ್ದವು ಆಯಿತು. ದಿಗ್ಗಜಗಳ ಕೊಂಬುಗಳಂತಿರುವ ಕೈಯುಗುರುಗಳು ವಜ್ರಾಯುಧದಂತೆ ವಿಜೃಂಭಿಸಿದುವು. ಒಂದೇ ಸಮನಾಗಿ ಮೆರೆಯುತ್ತಿರುವ ಮಿಂಚಿನ ಮರಿಗಳೋ ಎಂಬಂತೆ ಹಲ್ಲುಗಳು ಮೆರೆದುವು. ಆತನ ಕಿವಿಯ ಕುಂಡಲಗಳು ಹತ್ತು ದಿಕ್ಕುಗಳನ್ನೂ ಉಜ್ಜಲವಾಗಿ ಬೆಳಗಿದವು. ಆತನ ಮಹೋದರವು ಕುಲಪರ್ವತಗಳನ್ನೆಲ್ಲ ಸೇರಿಸಿಟ್ಟ ಮಹಾಭಾಂಡವೋ ಎಂಬಂತಿದ್ದಿತು. ಆ ಮಹಾಬಾಹುಗಳು ಮಹಾವೃಕ್ಷಗಳಂತೆ ಇದ್ದು ಬ್ರಹ್ಮಾಂಡ ಕಟಾಹವನ್ನೇ ಭೇದಿಸಲು ಹೊರಟಿವೆಯೋ ಎಂಬತಿದ್ದುವು.

ವದನೋದರನಿಷ್ಕ್ರಾಂತ ವಾತೋತ್ಸಾರಿತ ಪರ್ವತಂ ।
ತ್ರಿಜಗದ್ದಹನೋದ್ವ್ಯಕ್ತ ಕೋಪಕಲ್ಪಾಗ್ನಿಗರ್ವಿತಂ ॥ ೧೬ ॥

ಸಟಾವಿಕಟಪೀನಾಂಸಸ್ಪಂದ ಪ್ರೇರಿತ ಭಾಸ್ಕರಂ ।
ರೋಮಕೂಪಲಸದ್ವಹ್ನಿ ಪುಂಜಾಪಿಂಜರ ಪರ್ವತಂ ॥ ೧೭ ॥

ಕುಲಾಚಲ ಮಹಾಕುಡ್ಯ ಘಟನೋದ್ಭಟ ದಿಕ್ತಟಂ ।
ಸರ್ವಾವಯವನಿಷ್ಕ್ರಾಂತ ಪಟ್ಟಿಶಪ್ರಾಸತೋಮರಂ ॥ ೧೮ ॥

ನಾರಸಿಂಹಂ ವಪುಃ ಕೃತ್ವಾ ಮಾಧವೋಽಹನ್ಮಹಾಸುರಂ ।
ಲಸತ್ಕಟಕಟಾರಾವಂ ತುರಂಗಮಿವ ದ್ವಿಪಃ ॥ ೧೯ ॥

೧೬-೧೯. ಆತನ ಮುಖದಿಂದ ಹೊರಟ ಫೂತ್ಕಾರವಾಯುವು ಸಮಸ ಪರ್ವತಗಳನ್ನೂ ತೂರಿಬಿಡುವುದು. ಆತನು ಕೋಪಗೊಂಡರೆ ಆ ಕೋಪವು ಪ್ರಲಯಾಗ್ನಿಗಿಂತ ಭಯಂಕರವಾಗಿ ಮೂರು ಲೋಕಗಳನ್ನೂ ಸುಟ್ಟುಬಿಡುವುದು. ಕೇಸರಗಳಿಂದ ಮುಚ್ಚಿಹೋಗಿದ್ದ ಆ ಕತ್ತೂ ಹೆಗಲುಗಳೂ ಕೊಂಚ ಅಲುಗಾಡಿದರೆ ಸಾಕು, ಅವುಗಳ ಪೆಟ್ಟಿಗೆ ಸೂರ್ಯನು ದೂರವಾಗಿ ಓಡಿಹೋಗುವನು. ಆ ಮಹಾಮಹಿಮನ ರೋಮಕೂಪಗಳಿಂದ ಹೊರಡುವ ಅಗ್ನಿಕಣಗಳು ಪರ್ವತ ಪರ್ವತಗಳನ್ನೇ ಸುಡುವುವು. ಆತನು ಆರ್ಭಟಿಸಿದರೆ ಸಾಕು, ಆ ಶಬ್ದಕ್ಕೇ ಕುಲಾಚಲಗಳು ಹಾರಿಹೋಗಿ ಎಲ್ಲೆಲ್ಲಿಯೋ ಬಿದ್ದುಹೋಗಿ ದಿಙ್ಮಂಡಲಗಳೆಂಬ ಮಹಾಭಿತ್ತಿಗಳ ಬಿರುಕುಗಳನ್ನು ಮುಚ್ಚಲು ಮೆತ್ತಿದ ಮಣ್ಣಿನ ಉಂಡೆಗಳಂತೆ ಕಾಣುವುವು. ಆತನ ಸಮಸ್ತವಾದ ಅಂಗೋಪಾಂಗಗಳಿಂದಲೂ ಪಟ್ಟಿಶಪ್ರಾಸತೋಮರಾದಿ ಮಹಾಯುಧಗಳು ಪುಂಖಾನುಪುಂಖವಾಗಿ ಹೊರಡುತ್ತಿದ್ದುವು. ಇಂತಹ ಘೋರವಾದ ನರಸಿಂಹ ರೂಪವನ್ನು ಸ್ವೀಕರಿಸಿ ಶ್ರೀ ಮಹಾವಿಷ್ಣುವು, ಆನೆಯು ಕುದುರೆಯನ್ನು ಹಿಡಿದು ಮುರಿದುಹಾಕುವಂತೆ, ಆ ಮಹಾದೈತ್ಯನನ್ನು ಹಿಡಿದು, ಮೂಳೆಗಳೆಲ್ಲ ಕಟಕಟ ಎನ್ನುವಂತೆ ಮುರಿದು ಕೊಂದುಹಾಕಿದನು.

ಪೌರಮಾಸುರಮುದ್ಧಾಂತೈರ್ದದಾಹೇಕ್ಷಣ ವಹ್ನಿಭಿಃ ।
ಸ ಸರ್ವಭೂತಕಲ್ಪಾಂತೇ ಜಗಜ್ಜ್ವಾಲಮಿವಾನಲಃ ॥ ೨೦ ॥

ನೃಸಿಂಹಮಾರುತೇ ತಸ್ಮಿನ್ಭೃಶಂ ಕ್ಷೋಭಮುಪಾಗತೇ ।
ವಿಸ್ಫೂರ್ಜಿತ ಘಟಾಸ್ಫೋಟೈರೇಕಾರ್ಣವ ಇವಾಕುಲೇ ॥ ೨೧ ॥

ದುದ್ರುವುರ್ದಾನವೌಘಾಸ್ತೇ ದಿಗ್ಜ್ವಲನ್ಮಶಕಾ ಇವ ।
ಉಪಾಯಯುರದೃಶ್ಯತ್ವಂ ದೀಪಾ ಇವ ಗತತ್ವಿಷಃ ॥ ೨೨ ॥

ಅಥ ವಿದ್ರುತದೈತ್ಯೇಂದ್ರಂ ದಗ್ಧಾಂತಃಪುರಮಂಡಲಂ ।
ಬಭೂವ ಪಾತಾಲತಲಂ ಕಲ್ಪಕ್ಷುಣ್ಣ ಜಗತ್ಸಮಂ ॥ ೨೩ ॥

---

೨೦. ಕಲ್ಪಾಂತದಲ್ಲಿ ಪ್ರಲಯಾಗ್ನಿಯು ಬ್ರಹ್ಮಾಂಡವನ್ನು ದಹಿಸುವಂತೆ, ಆತನು ಸುತ್ತಲೂ ನೋಡಿದಾಗ ಹೊರಟ ನೇತ್ರಾಗ್ನಿ ಜ್ವಾಲೆಗಳಿಂದಲೇ, ಆ ಹಿರಣ್ಯಕಶಿಪುವಿನ ರಾಜಧಾನಿಯಲ್ಲಿದ್ದ ಅಸುರಪೌರ ಜನರನ್ನೆಲ್ಲ ದಹಿಸಿಬಿಟ್ಟನು.

೨೧–೨. ಪ್ರಲಯ ಕಾಲದಲ್ಲಿ ಮಹಾ ಮಾರುತವು ಬೀಸಲಾಗಿ ಮೋಡ ಮೋಡಗಳೆಲ್ಲವೂ ಪಟ ಪಟನೆ ಒಡೆದು ನೀರು ಕಾರಿ ಜಗತ್ತೆಲ್ಲವೂ ಏಕಾರ್ಣವವಾಗುವಂತೆ, ಈ ನೃಸಿಂಹ ಮಾರುತನು ವಿಜೃಂಭಿಸಲಾಗಿ ದಾನವರ ಗಣ ಗಣಗಳೂ ಚೆಲ್ಲಾಪಿಲ್ಲಿಯಾಗಿ ಓಡಿಹೋದುವು. ಉರಿಗೆ ಸಿಕ್ಕಿ ಹೆದರಿದ ಸೊಳ್ಳೆಗಳಂತೆ ದಿಕ್ಕಾಪಾಲಾದುವು. ಆರಿಹೋದ ದೀಪಗಳ ಬೆಳಕಿನಂತೆ ಅವರು ಅದೃಶ್ಯರಾದರು.

೨೩. ಹೀಗೆ ದೈತ್ಯನಾಯಕರುಗಳೆಲ್ಲ ದಿಕ್ಕೆಟ್ಟು ಓಡಿಹೋಗಿ, ಅಂತಃಪುರಗಳು ದಗ್ಧವಾಗಿ ಹೋಗಿರಲು, ಆ ಪಾತಾಳಲೋಕವು ಕಲ್ಪಕಾಲದಲ್ಲಿ ಮಹಾ ಕ್ಷೋಭೆಗೊಂಡ ಜಗತ್ತಿನಂತೆ ಬಿಕೋ ಎನ್ನುತ್ತಿದ್ದಿತು.

ಅಕಾಲಕಲ್ಪಾಂತವಿಧೌ ಹತ್ವಾ ದೈತ್ಯಂ ಶನೈರ್ವಿಭೌ ।
ಕ್ವಾಪಿ ಯಾತೇ ಸಮಾಶ್ವಸ್ತಸುರಸಂರಂಭ ಪೂಜಿತೇ ॥ ೨೪ ॥

ಮೃತಶಿಷ್ಟಾಃ ದನುಸುತಾಃ ಪ್ರಹ್ಲಾದ ಪರಿಪಾಲಿತಾಃ ।
ದಗ್ಧಂ ತಂ ದೇಶಮಾಜಗ್ಮುಃ ಸರಃ ಶುಷ್ಕಮಿವಾಂಡಜಾಃ ॥ ೨೫ ॥

ತತ್ರ ಕಾಲೋಚಿತಾಂ ಕೃತ್ವಾ ಸ್ವನಾಶಾ ಪರಿದೇವನಾಂ ।
ಔರ್ಧ್ವದೇಹಿಕ ಸತ್ಕಾರಂ ಚಕ್ರುಃ ಪ್ರೇತೇಷು ಬಂಧುಷು ॥ ೨೬ ॥

ಹತಬಂಧುಜನಂ ಪ್ಲುಷ್ಟಬಂಧುಬಾಂಧವ ಮಂಡಲಂ ।
ಶನೈರಾಶ್ವಾಸಯಾಮಾಸುರ್ಮೃತ ಶಿಷ್ಟಂ ಸ್ವಕಂ ಜನಂ ॥ ೨೭ ॥

---

೨೪. ಅಕಾಲ ಪ್ರಲಯ ಕಾಲನಂತೆ ಬಂದ ಶ್ರೀಮನ್ಮಹಾ ವಿಷ್ಣುವು ಆ ಹಿರಣ್ಯ ಕಶಿಪುವನ್ನು ಸಂಹಾರಮಾಡಿ, ಕ್ರಮ ಕ್ರಮವಾಗಿ ಶಾಂತನಾದನು. ದೇವತೆಗಳೆಲ್ಲರೂ ಒಪ್ಪಿಸಿದ ಪೂಜೆಯನ್ನು ಸ್ವೀಕರಿಸಿ ಅಂತರ್ಧಾನವನ್ನು ಹೊಂದಿದನು.

೨೫. ಆಗ, ಸತ್ತು ಕೆಟ್ಟು ಉಳಿದ ರಾಕ್ಷಸರು ಪ್ರಹ್ಲಾದನನ್ನು ಮುಂದೆಮಾಡಿ ಕೊಂಡು, ಒಣಗಿಹೋದ ಸರೋವರಕ್ಕೆ ಹಕ್ಕಿಗಳು ಬರುವಂತೆ, ಆ ದಗ್ಧಾವಶೇಷ ವಾಗಿದ್ದ ರಾಜಧಾನಿಗೆ ಬಂದನು.

೨೬. ಆಗ, ಅವರು ತಮ್ಮ ಕುಲವೆಲ್ಲವೂ ನಾಶವಾಯಿತಲ್ಲಾ ಎಂದು ಕಾಲೋ ಚಿತವಾಗಿ ವ್ಯಥೆ ಪಟ್ಟುಕೊಳ್ಳುತ್ತ, ಸತ್ತ ಬಂಧು ಬಾಂಧವರಿಗೆ ಮರಣಾಂತರ ಮಾಡಬೇಕಾದ ಅಂತ್ಯೇಷ್ಟಿಗಳನ್ನು ನೆರವೇರಿಸಿದರು.

೨೭. ಬಂಧು ಬಳಗಗಳನ್ನು ನೀಗಿಕೊಂಡು, ಸಜೀವರಾಗಿಯೇ ದಗ್ಧರಾಗಿ ಹೋದ ನೆಂಟರಿಷ್ಟರಿಗಾಗಿ ಶೋಕ ಪಡುತ್ತಾ ಇರುವ ಉಳಿದಿದ್ದ ಸ್ವಜನರನ್ನು (ಆ ದೈತ್ಯದಾನವನಾಯಕರು) ಮೆಲ್ಲ ಮೆಲ್ಲಗೆ ಸಮಾಧಾನ ಪಡಿಸಿದರು.

ಚಿತ್ರಾರ್ಪಿತೋಪಮ ದುರಾಕೃತಯೋನಿರೀಹಾ ।
ದೀನಾಶಯಾ ಹಿ ಮಹತಾಂಬುರುಹೋಪಮಾನಾಃ ॥
ಶೋಕೋಪತಪ್ತಮನಸೋ ऽ ಸುರನಾಯಕಾಸ್ತೇ ।
ದಗ್ಧದ್ರುಮಾ ಇವ ನಿರಸ್ತವಿಕಾರಮಾಸನ್ ॥ ೨೮ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷೂಪಶಮ ಪ್ರಕರಣೇ "ಹಿರಣ್ಯಕಶಿಪುವಧೋ" ನಾಮ ತ್ರಿಂಶಃ ಸರ್ಗಃ

---

೨೮. ಬಣ್ಣವನ್ನು ಕಳೆದುಕೊಂಡು ನಿಶ್ಚೇಷ್ಟವಾಗಿ ನೋಡುವುದಕ್ಕೆ ವಿಕಾರವಾಗಿ ಕಾಣುವ ಚಿತ್ರಗಳಂತೆಯೂ, ಹಿಮದಿಂದ ಕಂಗೆಟ್ಟಿರುವ ಕಮಲಗಳಂತೆಯೂ ದೀನ ಹೃದಯರಾಗಿ ಶೋಕದಿಂದ ಸುಟ್ಟು ಬಸವಳಿದಿರುವ ಮನಸ್ಸುಳ್ಳ ಆ ಅಸುರನಾಯಕರು, ಸುಟ್ಟುಹೋದ ಮರಗಳಂತೆ ವಿಕಾರವಾಗಿ ಹೋಗಿದ್ದರು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ "ಹಿರಣ್ಯಕಶಿಪುವಧ"ವೆಂಬ ಮೂವತ್ತನೆಯ ಸರ್ಗವು.

ಏಕ ತ್ರಿಂಶಃ ಸರ್ಗಃ

ಶ್ರೀ ವಶಿಷ್ಠ ಉವಾಚ :—

ಅಥ ದುಃಖಪರೀತಾತ್ಮಾ ಹರಿಣಾ ಹತದಾನವೇ ।
ಪ್ರಹ್ಲಾದಶ್ಚಿಂತಯಾಮಾಸ ಮೌನೀ ಪಾತಾಲಕೋಟರೇ ॥ ೧ ॥

ಕೋಽನ್ವಸ್ಮಾಕಮುಪಾಯಃ ಸ್ಯಾದ್ಯ ಏವೇಹಾಸುರಾಂಕುರಃ ।
ತೀಕ್ಷ್ಣಾಗ್ರೋ ಜಾಯತೇ ತಂ ತಂ ಭುಂಕ್ತೇ ಶಾಖಾಮೃಗೋ ಹರಿಃ ॥ ೨ ॥

ನ ಕದಾಚನ ಪಾತಾಲೇ ದೈತ್ಯಾ ದೋರ್ದಂಡಶಾಲಿನಃ ।
ಸ್ಥಿರಾ ಬಭೂವುರುದ್ಭಿನ್ನಾಃ ಪದ್ಮಾ ಇವ ಹಿಮಾಚಲೇ ॥ ೩ ॥

---

೧. ಶ್ರೀ ವಸಿಷ್ಠನು ಹೇಳಿದನು:—ಹೀಗೆ ಶ್ರೀ ಮಹಾವಿಷ್ಣುವು ಹಿರಣ್ಯಕಶಿಪುವನ್ನು ಸಂಹರಿಸಿದಮೇಲೆ, ಅವನ ಮಗನಾದ ಪ್ರಹ್ಲಾದನು ದುಃಖದಲ್ಲಿ ಮುಳುಗಿಹೋದವನಾಗಿ ಪಾತಾಳ ಲೋಕದಲ್ಲಿಯೇ ಇದ್ದುಕೊಂಡು, ಯಾರೊಡನೆಯೂ ಮಾತನಾಡದೆ ಹೀಗೆ ಚಿಂತಿಸಿದನು.

೨. ನಾವು ಈಗ ಏನು ಮಾಡಬೇಕು? ಅಸುರ ವಂಶದ ಯಾವುದಾದರೊಂದು ಮೊಳಕೆಯು ಚೆನ್ನಾಗಿ ಮೊಳೆಯಿತು ಎನ್ನುವುದರೊಳಗಾಗಿಯೇ, ವಿಷ್ಣುವೆಂಬ ಕಪಿಯು ಅದನ್ನು ತಿಂದುಹಾಕಿ ಬಿಡುವುದಲ್ಲಾ !

೩. ಹಿಮವತ್ಪರ್ವತದಲ್ಲಿ ಕಮಲಗಳು ಹೇಗೆ ಸ್ಥಿರವಾಗಿ ಇರಲಾರವೋ ಹಾಗೆಯೇ ಈ ನಮ್ಮ ಪಾತಾಳಲೋಕದಲ್ಲಿಯೂ ಕೂಡ, ಬಾಹು ಬಲ ಸಂಪನ್ನರಾದ ದೈತ್ಯರು ಹುಟ್ಟಿ ಬಾಳುವಂತಿಲ್ಲವಲ್ಲಾ.?

ಉತ್ಪತ್ತ್ಯೋತ್ಪತ್ತ್ಯ ನಶ್ಯಂತಿ ಭಾಸುರಾಕಾರ ಘರ್ಘರಾಃ ।
ಕ್ಷೀಣ ಪ್ರಸ್ಫುರಿತಾರಂಭಾಸ್ತರಂಗಾ ಇವ ವಾರಿಧೇಃ ॥ ೪ ॥

ಸಬಾಹ್ಯಾಭ್ಯಂತರಂ ಕಷ್ಟಂ ಸಮಗ್ರಾಲೋಕಹಾರಿಣಃ ।
ರಿಪವಃ ಪ್ರೌಢಿಮಾಯಾತಾ ಅಪೂರ್ವತಿಮಿರಭ್ರಮಾಃ ॥ ೫ ॥

ತಮಃ ಪ್ರಪೂರ್ಣ ಹೃದಯಾಃ ಸಂಕುಚತ್ಪತ್ರ ಸಂಪದಃ ।
ಸುಹೃದಃ ಖೇದಮಾಯಾಂತಿ ನಿಶೀಥ ಕಮಲಾಕರಾಃ ॥ ೬ ॥

ತಾತಸ್ಯ ಮಲಿನೈರ್ನೂನಂ ಪಾದಪೀಠೋಪಮರ್ದಕೈಃ ।
ಸುರೈರ್ವಿಷಯ ಆಕ್ರಾಂತೋ ಮೃಗೈರಿವ ಮಹಾವನಂ ॥ ೭ ॥

---

೪. ಸಮುದ್ರದಲ್ಲಿ ತರಂಗಗಳು ಹುಟ್ಟುವಾಗ ದೊಡ್ಡದಾಗಿ ಹುಟ್ಟಿದರೂ, ಕೊನೆಗೆ ಹೇಳ ಹೆಸರಿಲ್ಲದೆ ಹೋಗುವಂತೆ ಮಹಾ ತೇಜಸ್ವಿಗಳಾಗಿಯೂ, ಅನೇಕ ಮಹಾ ಕಾರ್ಯಗಳನ್ನು ಮಾಡಬಲ್ಲವರಾಗಿಯೂ, ಹುಟ್ಟಿದ ರಾಕ್ಷಸ ವೀರರೆಲ್ಲಾ ನಿರ್ನಾಮವಾಗುತ್ತಿರುವರಲ್ಲ ?

೫. ಹಾ ! ಕಷ್ಟ ಕಷ್ಟ ! ಬಾಹ್ಯವಾದ ರಾಜ್ಯ ಐಶ್ವರ್ಯ ಮೊದಲಾದವುಗಳನ್ನೂ ಆಂತರಿಕವಾದ ಸಂತೋಷ ಸಮಾಧಾನಗಳನ್ನೂ ಸಂಪೂರ್ಣವಾಗಿ ಅಪಹಾರ ಮಾಡಿ ಈ ನಮ್ಮ ಶತ್ರುಗಳಾದ ದೇವತೆಗಳು ಹೊರಗೆ ಕಣ್ಣಾ ಕಾಣಿಸದೆ ಒಳಗೆ ಭೀತಿಯೂ ಹುಟ್ಟುವಂತೆ ಮಾಡುವ ಕತ್ತಲಿನಂತೆ ಬಲಿತು ಹೋಗಿರುವರಲ್ಲಾ?

೬. ನಮ್ಮ ಮಿತ್ರರಾದರೋ ದಳಗಳೆಲ್ಲಾ ಮುಚ್ಚಿಕೊಂಡು, ಗರ್ಭವೆಲ್ಲಾ ತಮಃ ಪೂರ್ಣವಾಗಿರಲು ಖೇದ ಪಡುವ ರಾತ್ರಿಕಮಲಗಳಂತೆ ಅಪಾರವಾದ ತಮ್ಮ ಐಶ್ವರ್ಯ ಗಳನ್ನೆಲ್ಲಾ ಕಳೆದುಕೊಂಡು ಅಪಾರವಾದ ದುಃಖವು ಮನಸ್ಸಿನಲ್ಲಿ ತುಂಬಿರಲು ಬಹು ವಾಗಿ ಖೇದ ಪಡುತ್ತಿರುವರು.

೭. ಕ್ಷುದ್ರ ಮೃಗಗಳು ಮಹಾ ವನವನ್ನು ಆಕ್ರಮಿಸುವಂತೆ ಅಲ್ಪರೂ ನಮ್ಮ ತಂದೆಯ ಕಾಲೊತ್ತುತ್ತಿದ್ದವರೂ ಆದ ಈ ದೇವತೆಗಳು ನಮ್ಮ ರಾಜ್ಯವನ್ನೆಲ್ಲಾ ಆಕ್ರ ಮಿಸಿಕೊಂಡಿರುವರಲ್ಲಾ ?

ನಿರುದ್ಯಮಾ ಗತಶ್ರೀಕಾ ದೀನಾಃ ಪ್ರಕಟಿತಾಶಯಾಃ ।
ಬಾಂಧವಾ ನ ವಿರಾಜಂತೇ ಪದ್ಮಾಃ ಪ್ಲುಷ್ಟದಲಾ ಇವ ॥ ೮ ॥

ಸ್ಫುರಂತ್ಯಸುರವೀರಾಣಾಂ ಗೃಹೇಷ್ವವಿರತಾನಿಲೈಃ ।
ಧೂಸರಾ ಭಸ್ಮನೀಹಾರಾ ಧೂಪಧೂಮಭರಾ ಇವ ॥ ೯ ॥

ಹೃತದ್ವಾರಕಪಾಟಾಸು ದೈತ್ಯಾಂತಃ ಪುರಭಿತ್ತಿಷು ।
ಪ್ರಭಾ ಮರಕತಸ್ಯೇವ ಜಾತಾ ನವಯವಾಂಕುರಾಃ ॥ ೧೦ ॥

ತ್ರಿಲೋಕೀನಾಭಿನಲಿನೀ ಮತ್ತೇಭಾ ದಾನವಾ ಅಪಿ ।
ದೇವವದ್ದೈನ್ಯಮಾಯಾತಾಃ ಕಿಮಸಾಧ್ಯಮಹೋ ವಿಧೇಃ ॥ ೧೧ ॥

---

೮. ನಮ್ಮ ದೈತ್ಯ ಬಾಂಧವರು ಮಾಡುವುದಕ್ಕೆ ಕೆಲಸವಿಲ್ಲದೆ ಇದ್ದ ಬದ್ದ ಸಂಪತ್ತನ್ನೆಲ್ಲಾ ಕಳೆದುಕೊಂಡು ಕಂಡ ಕಂಡವರೊಡನೆ ತಮ್ಮ ದುಃಖವನ್ನು ಹೇಳಿಕೊಳ್ಳುವಷ್ಟು ದೀನರಾಗಿ ಬೆಂಕಿಗೆ ಸಿಕ್ಕಿ ದಳಗಳನ್ನೆಲ್ಲಾ ಸುಟ್ಟು ಕೊಂಡಿರುವ ಕಮಲದಂತೆ ತೇಜೋ ಹೀನರಾಗಿರುವರು.

೯. ರಾಕ್ಷಸನಾಯಕರ ಮನೆಗಳನ್ನು ಮುಚ್ಚಿರುವ ಭಸ್ಮರಾಶಿಗಳನ್ನು ಆ ಗಾಳಿಯು ಬೀಸಿದಾಗಲೆಲ್ಲಾ ಮಂಜಿನಂತೆ ತೂರುತ್ತಿರಲು ಹಿಂದೆ ಅವರು ಚೆನ್ನಾಗಿ ಬದುಕುತ್ತಿದ್ದ ಕಾಲದಲ್ಲಿ ಅವರ ಮನೆಗಳಿಂದ ಹೊರಡುತ್ತಿದ್ದ ಧೂಪ ಧೂಮಗಳ ಹೊಗೆಯಿದ್ದಂತೆಯೇ ಇರುವುದು.

೧೦. ದೈತ್ಯ ನಾಯಕರ ಅಂತಃಪುರದ ಗೋಡೆಗಳು ಒಡೆದು ಬಾಗಿಲುಗಳೆಲ್ಲಾ ಬಿದ್ದುಹೋಗಿ, ಅಲ್ಲೆಲ್ಲಾ ಗರಿಕೆಯು ಬೆಳೆದಿರಲು ಮರಕತ ರತ್ನಗಳ ಛಾಯೆಯು ಹಬ್ಬಿದಂತಿರುವುದು.

೧೧. ತ್ರಿಲೋಕಗಳಿಗೆ ನಾಭಿಸ್ಥಾನವಾದ ಮೇರು ಪರ್ವತವೆಂಬ ಕಮಲವನ್ನು ಕಿತ್ತೆಸೆಯುವ ಮದ್ದಾನೆಗಳಾಗಿದ್ದ ದಾನವರು ಹಿಂದೆ ಸೋತು ಅಳುತ್ತಿದ್ದ ದೇವತೆಗಳಂತೆ ಇಂದು ಅಳುತ್ತಿರುವರಲ್ಲಾ ! ಅಹಹಾ ! ವಿಧಿಯು ಏನನ್ನು ತಾನೇ ಮಾಡಲಾರದು !

ಮನಾಕ್ಚಲತಿ ಪರ್ಣೇಽಪಿ ದೃಷ್ಟ್ವಾರಿಭಯಭೀತಯಃ ।
ಪಥ್ಯಸ್ತ್ರಸ್ಯಂತಿ ವಿಧ್ಯಸ್ತಾ ಮೃಗ್ಯೋ ಗ್ರಾಮಗತಾ ಇವ ॥ ೧೨ ॥

ಆಸುರೀಕರ್ಣಪೂರಾರ್ಥಂ ಫುಲ್ಲಾ ರತ್ನಾಗುಲುಚ್ಛಕಾಃ ।
ನರಸಿಂಹಕರಾಲೂನಾಃ ಸ್ಥಾಣುತಾಮಾಗತಾ ದ್ರುಮಾಃ ॥ ೧೩ ॥

ದಿವ್ಯಾಂಬರಲತಾ ಪತ್ರಾ ರತ್ನಸ್ತಬಕದಂತುರಾಃ ।
ಪುನರಾರೋಪಿತಾಸ್ತತ್ರ ನಂದನೇ ಕಲ್ಪಪಾದಪಾಃ ॥ ೧೪ ॥

ಪುರಾ ತ್ವಮರಬಂದೀನಾಮಸುರೈಃ ಸಂಸ್ತುತಂ ಮುಖಂ ।
ಅದ್ಯ ತ್ವಸುರಬಂದೀನಾಂ ಸುರೈರಾಲೋಕಿತಂ ಮುಖಂ ॥ ೧೫ ॥

ಮನ್ಯೇ ದಾನಮಹಾನದ್ಯಃ ಸುರೇಭಕಟಭಿತ್ತಿಷು ।
ಪ್ರವೃತ್ತಾಸ್ತಾ ಭವಿಷ್ಯಂತಿ ಶೈಲಸಾನುಷ್ವಿವಾಪಗಾಃ ॥ ೧೬ ॥

---

೧೨. ದೈತ್ಯ ದಾನವ ಸ್ತ್ರೀಯರು ಊರಿಗೆ ಹಿಡಿದು ತಂದಿರುವ ಹೆಣ್ಣು ಜಿಂಕೆಗಳಂತೆ ಒಂದು ಎಲೆಯು ಅಲ್ಲಾಡಿದರೂ ಕೂಡ ಎಲ್ಲಿ ಶತ್ರುಗಳು ಬಂದರೋ ಎಂದು ಹೆದರಿ ನಡುಗುತ್ತಿರುವರಲ್ಲಾ !

೧೩, ಹಿಂದೆ ದೈತ್ಯದಾನವ ಕಾಂತೆಯರು ಬೇಕೆಂದಾಗ ತಮ್ಮ ಕರ್ಣಾಭರಣಾರ್ಥವಾಗಿ ರತ್ನಮಯವಾದ ಪುಷ್ಪಗುಚ್ಛಗಳನ್ನು ಆರಿಸಿಕೊಳ್ಳುತ್ತಿದ್ದ ಮಹಾ ಕಲ್ಪವೃಕ್ಷಗಳು ಆ ನರಸಿಂಹನ ಕೈಗೆ ಸಿಕ್ಕಿ ಧ್ವಂಸವಾಗಿ ಈಗ ಮೋಟು ಮರಗಳಂತೆ ನಿಂತಿರುವವಲ್ಲಾ !

೧೪. ದಿವ್ಯವಾದ ವಸ್ತ್ರಗಳೆಂಬ ಪತ್ರಗಳು, ರತ್ನದ ಹೂಗಳೂ ಇದ್ದ ಆ ಮಹಾ ಕಲ್ಪ ವೃಕ್ಷಗಳು ಮತ್ತೆ ನಂದನದ ಪಾಲಾದವಲ್ಲಾ !

೧೫. ಪೂರ್ವದಲ್ಲಿ ನಮ್ಮ ದೈತ್ಯ ನಾಯಕರು ದೇವತಾ ಸ್ತ್ರೀಯರನ್ನು ಹಿಡಿದುತಂದು ಅನುಭವಿಸುತ್ತಿದ್ದರು. ಈಗ ದೇವತೆಗಳು ಅಸುರ ಸ್ತ್ರೀಯರನ್ನು ಸೆರೆಹಿಡಿದುಕೊಂಡು ಹೋಗಿ ಭೋಗಿಸುತ್ತಿರುವರು.

೧೬. ದೇವ ಗಜಗಳ ಗಂಡಸ್ಥಲಗಳಲ್ಲಿ ಮದೋದಕ ಮಹಾನದಿಗಳೂ; ಬೆಟ್ಟಗಳಿಂದ ಝರಿಗಳಿಳಿಯುವಂತೆ ಮತ್ತೆ ಹರಿಯುತ್ತಿರಬೇಕು ಎನ್ನಿಸುವುದು.

ಅಸ್ಮಾಕಮಿಭಗಂಡೇಷು ದಾನದಾಹವಿಭೂತಯಃ ।
ಲಸಂತಿ ಮರುಖಂಡೇಷು ಸಂಶುಷ್ಕೇಷ್ವಿವ ಧೂಲಯಃ ॥ ೧೭ ॥

ವಿಕಾಸಿ ಸಿತಮಂದಾರ ಮಕರಂದಾರುಣಾನಿಲಾಃ ।
ತೇ ಮೇರುಶಿಖರೈಸ್ತುಲ್ಯಾ ದೈತ್ಯಾ ದುರ್ಲಭತಾಂ ಗತಾಃ ॥ ೧೮ ॥

ಸುರಗಂಧರ್ವಸುಂದರ್ಯೋ ದಾನವಾಂತಃ ಪುರೋಚಿತಾಃ ।
ಅದ್ಯ ಮೇರೌ ಸ್ಥಿತಿಂ ಯಾತಾ ಮಂಜರ್ಯ ಇವ ಪಾದಪೇ ॥ ೧೯ ॥

ಕಷ್ಟಂ ತಾತಪುರಂಧ್ರೀಣಾಂ ಶುಷ್ಕಾಂಬುರುಹನೀರಸಾಃ ।
ವಿಲಾಸಾಃ ಸುರನಾರೀಭಿರ್ಭರ್ತ್ಸ್ಯಂತೇ ಲಾಸ್ಯಲೀಲಯಾ ॥ ೨೦ ॥

ಪೂರ್ವಂ ಯೈರೇವ ಮತ್ತಾತಶ್ಚಾಮರೈರುಪವೀಜಿತಃ ।
ಸಹಸ್ರನಯನಃ ಸ್ವರ್ಗೇ ಕಷ್ಟಂ ತೈರೇವ ವೀಜ್ಯತೇ ॥ ೨೧ ॥

---

೧೭. ಅದೇ ನಮ್ಮ ಗಜಗಳ ಮುಖದಲ್ಲಿ ಸುತರಾಂ ನೀರಸವಾದ ಮರುಭೂಮಿಗಳಲ್ಲಿ ಧೂಳಿಯು ಹಾರಾಡುವಂತೆ ಒಣಗಿಹೋಗಿರುವ ದಾನೋದಕದ ಭಸ್ಮವು ಹಾರಾಡುವುದು.

೧೮. ಅರಳಿದ ಮಂದಾರ ಪುಷ್ಪಗಳನ್ನು ಧರಿಸಿಕೊಂಡು ಅವುಗಳ ಮಕರಂದದಿಂದ ಸುತ್ತಲಿನ ಗಾಳಿಗಳನ್ನು ಕೆಂಪಗೆ ಮಾಡುತ್ತಾ ಮೇರು ಶಿಖರಗಳಂತಿದ್ದ ದೈತ್ಯೇಂದ್ರರು ಇಂದು ಅದೃಶ್ಯರಾದರಲ್ಲ !

೧೯. ದಾನವೇಂದ್ರರ ಅಂತಃಪುರಗಳಲ್ಲಿ ಸಿಕ್ಕಿ ಹೋಗಿದ್ದ ಸುರ ಗಂಧರ್ವ ಸುಂದರಿಯರೆಲ್ಲಾ ಇಂದು ಮತ್ತೆ ಗಿಡದಲ್ಲಿರುವ ಹೂಗಳಂತೆ ಮೇರು ಪರ್ವತವನ್ನು ಸೇರಿರುವರಲ್ಲಾ !

೨೦. ಅಹಹಾ ! ನಮ್ಮ ತಂದೆಯ ಅಂತಃಪುರ ಸ್ತ್ರೀಯರ ವಿಲಾಸಗಳೆಲ್ಲಾ ಒಣಗಿದ ತಾವರೆಯಂತಾದವಲ್ಲಾ ! ದೇವಸ್ತ್ರೀಯರು ಲೀಲಾಜಾಲಗಳಿಂದ ಅವರನ್ನೆಲ್ಲಾ ಉಪಹಾಸ್ಯ ಮಾಡುತ್ತಿರುವರಲ್ಲಾ !

೨೧. ಪೂರ್ವದಲ್ಲಿ ಚಾಮರಧಾರಿಣಿಯರಾಗಿ ನಮ್ಮ ತಂದೆಯನ್ನು ಸೇವಿಸುತ್ತಿದ್ದ ದೇವ ಸ್ತ್ರೀಯರಿಂದು ಸ್ವರ್ಗದಲ್ಲಿ ಇಂದ್ರನನ್ನು ಸೇವಿಸುತ್ತಿರುವರಲ್ಲಾ !

ಇಯಮಸ್ಮಾಕಮಪ್ಯಾಪದಾಗತಾ ದೈನ್ಯದಾಯಿನೀ ।
ತಸ್ಯೈಕಸ್ಯ ಪ್ರಸಾದೇನ ದುಷ್ಪೌರುಷ ಗತೇರ್ಹರೇಃ ॥ ೨೨ ॥

ತದ್ದೋರ್ವನ ಘನಚ್ಛಾಯಾ ಲಬ್ಧವಿಶ್ರಾಂತಯಃ ಸುರಾಃ ।
ನ ಕದಾಚನ ತಪ್ಯಂತೇ ಹಿಮಾದ್ರೇರಿವ ಸಾನವಃ ॥ ೨೩ ॥

ಶೌರಿಶೌರ್ಯಾಗ್ರ ಶಿಖರ ಸಂಶ್ರಯೇಣಾಶ್ರಿತಶ್ರಿಯಃ ।
ಅಸ್ಮಾನ್ಸಮುಪರುಂಧಂತಿ ಶುನಃ ಶಾಖಾಮೃಗಾ ಇವ ॥ ೨೪ ॥

ತೇನಾಸುರಪುರಂಧ್ರೀಣಾಂ ನಿತ್ಯಂ ಮಂಡನಮಂಡನೇ ।
ಮುಖಪದ್ಮೇ ಸ್ಥಿತಂ ಬಾಷ್ಪಮಬ್ಜಿನೀನಾಂ ಹಿಮಂ ಯಥಾ ॥ ೨೫ ॥

ಶೀರ್ಣಭಿನ್ನಲುಠದ್ಭಿತ್ತಿರ್ಜಗಜ್ಜರಠ ಮಂಡಪಃ ।
ಅಯಂ ನೀಲಮಣಿಸ್ತಂಭೈಸ್ತದ್ಭುಜೈರೇವ ಧಾರ್ಯತೇ ॥ ೨೬ ॥

---

೨೨. ಅಸಾಧ್ಯಪರಾಕ್ರಮನಾದ ಆ ಹರಿಯ ಪ್ರಸಾದವಾಗಿ ನಮ್ಮಂತಹ ದೈತ್ಯ ವೀರರಿಗೂ ದೈನ್ಯವನ್ನುಂಟು ಮಾಡುವ ಈ ಆಪತ್ತು ಒದಗಿತಲ್ಲಾ !

೨೩. ಆ ಹರಿಯ ಬಾಹುವನಚ್ಛಾಯೆಯಲ್ಲಿ ಸುಖವಾಗಿ ನೆಲೆಸಿ ದೇವತೆಗಳು ಯಾವಾಗಲೂ ಸಂತಾಪಕ್ಕೆ ಗುರಿಯಾಗದಿರುವ ಹಿಮವತ್ಪರ್ವತದ ಕಿಬ್ಬರಿಗಳಂತೆ ಸುಖವಾಗಿರುವರು.

೨೪. ಬೆಟ್ಟದ ಕೋಡುಗಲ್ಲುಗಳಲ್ಲಿರುವ ಕಪಿಗಳು ಬೇಟೆ ನಾಯಿಗಳನ್ನು ತಿರಸ್ಕರಿಸುವಂತೆ ಆ ವಿಷ್ಣುವಿನ ಶೌರ್ಯವೆಂಬ ಪರ್ವತ ಶಿಖರವನ್ನಾಶ್ರಯಿಸಿ ಸಂಪತ್ತನ್ನು ಅನುಭವಿಸುತ್ತಿರುವ ದೇವತೆಗಳು ನಮ್ಮನ್ನು ತಿರಸ್ಕರಿಸುತ್ತಿರುವರು.

೨೫. ಅದರಿಂದಲೇ ನಮ್ಮ ದೈತ್ಯ ಸ್ತ್ರೀಯರ ಅಲಂಕಾರಗಳಿಗೆಲ್ಲಾ ಅಲಂಕಾರವಾಗಿರುವ ಮುಖ ಪದ್ಮಗಳಲ್ಲಿ ಹಿಮ ಹಿಡಿದಿರುವ ಕಮಲಗಳಂತೆ ನಿತ್ಯವೂ ಕಣ್ಣೀರು ತುಂಬಿರುವುದು.

೨೬. ಅಸುರರು ತಮ್ಮ ಪರಾಕ್ರಮದಿಂದ ಈ ಜಗತ್ತೆಲ್ಲವನ್ನೂ ಗೋಡೆಗಳು ಉರುಳಿದ ಜೀರ್ಣ ಮಂಟಪವನ್ನು ಮಾಡಿದರೂ ಆ ಹರಿಯ ಭುಜಗಳೆಂಬ ಇಂದ್ರನೀಲಮಣಿ ಸ್ತಂಭಗಳು ಈ ಜಗತ್ತನ್ನೂ ಇನ್ನೂ ನಿಲ್ಲಿಸಿರುವವಲ್ಲಾ !

ಸ ಧರ್ತಾ ಸುರಸೈನ್ಯಸ್ಯ ಮಜ್ಜತೋ ವಿಪದರ್ಣವೇ ।
ಕ್ಷೀರೋದೋದರಮಗ್ನಸ್ಯ ಮಂದರಸ್ಯೇವ ಕಚ್ಛಪಃ ॥ ೨೭ ॥

ಏತೇ ತಾತಾದಯಃ ಸರ್ವೇ ತೇನೈವಾಸುರಸತ್ತಮಾಃ ।
ಪಾತಿತಾಃ ಕ್ಷುಬ್ಧಕಲ್ಪಾಂತವಾತೇನೇವ ಕುಲಾಚಲಾಃ ॥ ೨೮ ॥

ಸ ಏಕ ಏವ ಸಂಹಾರ ಕರ್ಮಕ್ಷಮಭುಜಾನಿಲಃ ।
ಸುರಸಾರ್ಥಗುರುಃ ಶ್ರೀಮಾನ್ವಿಷಮೋ ಮಧುಸೂಧನಃ ॥ ೨೯ ॥

ದೈತ್ಯದೋರ್ದಂಡ ಪರಶೋಸ್ತಸ್ಯ ವೀರ್ಯೇಣ ವೀರ್ಯವಾನ್ ।
ದಾನವಾನ್ಬಾಧತೇ ಶಕ್ರೋ ಬಾಲಕಾನಿವ ಮರ್ಕಟಃ ॥ ೩೦ ॥

ದುರ್ಜಯಃ ಪುಂಡರೀಕಾಕ್ಷಃ ಪ್ರವಿಮುಕ್ತಾಯುಧೋಽಪಿ ಸನ್ ।
ನಾಸೌ ಶಸ್ತ್ರಾಸ್ತ್ರವಿಚ್ಛೇದೈರ್ವಜ್ರಸಾರೋ ವಿದೀರ್ಯತೇ ॥ ೩೧ ॥

---

೨೭. (ಹಿಂದೆ ಅಮೃತ ಮಂಥನಕಾಲದಲ್ಲಿ) ಕ್ಷೀರ ಸಮುದ್ರದಲ್ಲಿ ಮುಳುಗಿ ಹೋದ ಮಂದರವನ್ನು ಕೂರ್ಮನು ಮೆಲಕ್ಕೆತ್ತಿದಂತೆ, ದೇವ ಸೈನ್ಯವು ವಿಪತ್ ಸಮುದ್ರದಲ್ಲಿ ಮುಳುಗಿದಾಗೆಲ್ಲ ಆ ಹರಿಯು ಅವರನ್ನು ಮೇಲಕ್ಕೆತ್ತುವನಲ್ಲ !

೨೮. ಅಸುರೇಂದ್ರರಾದ ನಮ್ಮ ತಂದೆಯಂತಹವರನ್ನೆಲ್ಲ ಕುಲಾಚಲಗಳನ್ನು ಹಾರಿಸಿ ಬಿಡುವ ಪ್ರಲಯ ಮಾರುತದಂತೆ ಆ ಹರಿಯು ನಾಶಮಾಡಿ ಬಿಟ್ಟನಲ್ಲ !

೨೯. ಆ ಮಧುಸೂದನನೊಬ್ಬನೇ ನಿಂತು ತನ್ನ ಭುಜಗಳನ್ನು ಅಲ್ಲಾಡಿಸಿದರೆ ಸಾಕು, ಆ ಚಲನದಿಂದ ಹುಟ್ಟಿದ ವಾಯುವು ಶತ್ರುಗಳನ್ನೆಲ್ಲ ಸಂಹಾರಮಾಡಿ ಬಿಡುವುದು. ದೇವಗಣಗಳಿಗೆಲ್ಲ ನಾಥನಾದ ಶ್ರೀಪತಿಯು ನಮಗೆ ಅಸಾಧ್ಯನಾಗಿರುವನು.

೩೦. ದೈತ್ಯರ ಭುಜದಂಡಗಳನ್ನು ಛೇದಿಸುವ ಗಂಡು ಕೊಡಲಿಯಾಗಿರುವ ಆ ವಿಷ್ಣುವಿನ ವೀರ್ಯದಿಂದ ವೀರನಾಗಿರುವ ಶಕ್ರನು ಕೆಟ್ಟ ಕಪಿಯು ಮಕ್ಕಳನ್ನು ಗೋಳಾಡಿಸುವಹಾಗೆ ನಮ್ಮನ್ನು ಗೋಳಾಡಿಸುವನು.

೩೧. ಆ ವಿಷ್ಣುವು ಅಸ್ತ್ರ ಸಂನ್ಯಾಸ ಮಾಡಿದ್ದರೂ ನಾವು ಅವನನ್ನು ಗೆಲ್ಲಲಾರೆವು. ವಜ್ರಸಾರನಾದ ಅವನನ್ನು ಶಸ್ತ್ರಾಸ್ತ್ರಗಳ ಹೊಡೆತದಿಂದ ಕಡಿಯಲು ಆಗುವುದಿಲ್ಲ.

ಅಭ್ಯಸ್ತಾ ಬಹವಸ್ತೇನ ಮಿಥಃ ಪ್ರೇರಿತ ಪರ್ವತಾಃ ।
ಭೀಮಾಃ ಸಮರಸಂರಂಭಾಃ ಸಮಮಸ್ಮತ್ಪಿತಾಮಹೈಃ ॥ ೩೨ ॥

ತಾಸು ತಾಸ್ವತಿಘೋರಾಸು ವಿತತಾಸ್ವತಿರಾಜಿಷು ।
ಯೋ ನ ಭೀತ ಇದಾನೀಂ ಸ ಭಯಮೇಷ್ಯತಿ ಕಾ ಕಥಾ ॥ ೩೩ ॥

ಉಪಾಯಮೇಕಮೇವೇಮಂ ಹರೇರಾಕ್ರಮಣೇ ಸ್ಫುಟಂ ।
ಮನ್ಯೇ ತದ್ವ್ಯತಿರೇಕೇಣ ವಿದ್ಯತೇ ನ ಪ್ರತಿಕ್ರಿಯಾ ॥ ೩೪ ॥

ಸರ್ವಾತ್ಮನಾ ಸರ್ವವಿದಾ ಸರ್ವಸಂರಂಭರಂಹಸಾ ।
ಸ ಏವ ಶರಣಂ ದೇವೋ ಗತಿರಸ್ತೀಹ ನಾನ್ಯಥಾ ॥ ೩೫ ॥

ನ ತಸ್ಮಾದಧಿಕಃ ಕಶ್ಚಿದಸ್ತಿ ಲೋಕತ್ರಯಾಂತರೇ ।
ಪ್ರಲಯ ಸ್ಥಿತಿ ಸರ್ಗಾಣಾಂ ಹರಿಃ ಕಾರಣತಾಂ ಗತಃ ॥ ೩೬ ॥

---

೩೨. ಅವನು ನಮ್ಮ ತಾತ ಮುತ್ತಾತರೊಡನೆಲ್ಲ ಹೋರಾಡಿರುವನು; ಬೆಟ್ಟ ಗುಡ್ಡಗಳನ್ನು ಎತ್ತಿ ಹೊಡೆಯುವುದನ್ನು ಚೆನ್ನಾಗಿ ಅಭ್ಯಾಸ ಮಾಡಿರುವನು. ಭಯಂಕರವಾದ ಯುದ್ಧ ಮಾಡುವುದರಲ್ಲಿ ಅತಿ ಚತುರನಾಗಿರುವನು.

೩೩. ಅಂತಂತಹ ಮಹಾಘೋರವಾದ, ಅನಂತವಾದ, ಶತ್ರು ಪರಂಪರೆಗಳಲ್ಲಿಯೇ ಧೈರ್ಯಗೆಡದ ಅವನಿಗೆ ಈಗ ಭೀತಿಯೆಲ್ಲಿಯದು ?

೩೪, ಆದರಿಂದ ಆ ಹರಿಯನ್ನು ಹಿಡಿಯಲು ಒಂದೇ ಒಂದು ಉಪಾಯವು ಇರುವುದು. ಅದನ್ನು ಬಿಟ್ಟರೆ ಬೇರೆ ಯಾವರೀತಿಯಿಂದಲೂ ನಾವು ಅವನಿಗೆ ಪ್ರತಿಕ್ರಿಯೆಯನ್ನು ಮಾಡಲಾರೆವು.

೩೫. ಸರ್ವಾತ್ಮನಾ ಎಷ್ಟು ಯೋಚಿಸಿದರೂ ಏನೇನು ಮಾಡಿದರೂ ದೇವದೇವನಾದ ಆ ನಾರಾಯಣನನ್ನೇ ಶರಣು ಹೊಂದುವುದೇ ಗತಿಯಿಲ್ಲದೆ ಬೇರೆ ಇನ್ನಾವ ಗತಿಯೂ ಇಲ್ಲ.

೩೬. ಈ ಲೋಕತ್ರಯಗಳಲ್ಲಿಯೂ ಅವನಿಗಿಂತ ದೊಡ್ಡವರು ಯಾರೂ ಇಲ್ಲ. ಪ್ರಲಯ ಸ್ಥಿತಿ, ಉತ್ಪತ್ತಿಗಳಿಗೆಲ್ಲ ಆ ಹರಿಯೇ ಕಾರಣನು.

ಅಸ್ಮಾನ್ನಿಮೇಷಾದಾರಭ್ಯ ನಾರಾಯಣಮಜಂ ಸದಾ ।
ಸಂಪ್ರಪನ್ನೋಽಸ್ಮಿ ಸರ್ವತ್ರ ನಾರಾಯಣಮಯೋ ಹ್ಯಹಂ ॥ ೩೭ ॥

ನಮೋ ನಾರಾಯಣಾಯೇತಿ ಮಂತ್ರಃ ಸರ್ವಾರ್ಥಸಾಧಕಃ ।
ನಾಪೈತಿ ಮಮ ಹೃತ್ಕೋಶಾದಾಕಾಶಾದಿವ ಮಾರುತಃ ॥ ೩೮ ॥

ಹರಿರಾಶಾ ಹರಿರ್ವ್ಯೋಮ ಹರಿರುರ್ವೀ ಹರಿರ್ಜಗತ್ ।
ಅಹಂ ಹರಿರಮೇಯಾತ್ಮಾ ಜಾತೋ ವಿಷ್ಣುಮಯೋ ಹ್ಯಹಂ ॥ ೩೯ ॥

ಅವಿಷ್ಣುಃ ಪೂಜಯನ್ವಿಷ್ಣುಂ ನ ಪೂಜಾಫಲಭಾಗ್ಭವೇತ್ ।
ವಿಷ್ಣುರ್ಭೂತ್ವಾ ಯಜೇದ್ವಿಷ್ಣುಮಯಂ ವಿಷ್ಣುರಹಂ ಸ್ಥಿತಃ ॥ ೪೦ ॥

ಹರಿಃ ಪ್ರಹ್ಲಾದನಾಮಾ ಯೋ ಮತ್ತೋ ನಾನ್ಯೋ ಹರಿಃ ಪೃಥಕ್ ।
ಇತಿ ನಿಶ್ಚಯವಾನಂತವ್ಯಾಪಕೋಽಹಂ ಚ ಸರ್ವತಃ ॥ ೪೧ ॥

---

೩೭. (ಅದರಿಂದ) ಈ ಗಳಿಗೆಯಿಂದಲೇ ನಾನು ನಾರಾಯಣನನ್ನು ಆಶ್ರಯಿಸುವೆನು. ನಾನು ಈಗ ಸರ್ವತ್ರ-ದೇಹಾದ್ಯಂತವೂ-ನಾರಾಯಣಮಯನಾಗಿರುವೆನು.

೩೮. "ನಮೋ ನಾರಾಯಣಾಯ" ಎಂಬ ಸರ್ವಾರ್ಥಸಾಧಕವಾದ ಮಂತ್ರವನ್ನು ನನ್ನ ಹೃದಯದಲ್ಲಿ ಆಧರಿಸುವೆನು. ಇನ್ನು ಅದು ಆಕಾಶದಲ್ಲಿ ಇದ್ದೇ ಇರುವ ಮಾರುತನಂತೆ, ಎಂದಿಗೂ ನನ್ನ ಹೃದಯವನ್ನು ಬಿಟ್ಟು ಕದಲದಿರುವುದು.

೩೯. ಈಗ ನನಗೆ ದಿಕ್ಕುದಿಕ್ಕುಗಳೂ ಶ್ರೀಹರಿಯೇ! ಆಕಾಶವೂ ಶ್ರೀ ಹರಿಯೇ! ಭೂಮಿಯೂ ಶ್ರೀ ಹರಿಯೇ! ಜಗತ್ತೆಲ್ಲವೂ ಶ್ರೀಹರಿಯೇ! ನಾನೂ ಅಪ್ರಮೇಯನಾದ ಶ್ರೀ ಹರಿಯೇ! ನಾನು ನಿಜವಾಗಿಯೇ ವಿಷ್ಣುಮಯನೇ ಆಗಿಹೋದೆನು.

೪೦. ವಿಷ್ಣುವಾಗದವನು ಎಷ್ಟು ಪೂಜೆಯನ್ನು ಮಾಡಿದರೂ ಆ ಫಲವನ್ನು ಅವನೆಂತು ಪಡೆಯುವನು? ವಿಷ್ಣುವಾಗಿಯೇ ವಿಷ್ಣುವನ್ನು ಪೂಜಿಸಬೇಕು. ಅದರಿಂದ ನಾನು ವಿಷ್ಣುವೇ ಆಗಿರುವೆನು.

೪೧. ಪ್ರಹ್ಲಾದನೆಂಬ ನಾನೇ ಹರಿಯು. ನನಗಿಂತ ಬೇರೆಯಾದ ಹರಿಯಿಲ್ಲ ಹೀಗೆಂದು ನಾನು ಸಿದ್ಧಾಂತ (ಅಂತರ್ನಿಶ್ಚಯ) ಮಾಡಿಕೊಂಡಿರುವೆನು. ನಾನು ಈಗ ಸರ್ವವ್ಯಾಪಕನಾಗಿರುವೆನು.

ಅನಂತಮಿದಮಾಕಾಶಮಾಪೂರ್ಯ ವಿನತಾಸುತಃ ।
ಕನಕಾಂಗೋ ಮಮಾಂಗಾನಾಮಯಮಾಸನತಾಂ ಗತಃ ॥ ೪೨ ॥

ಕರಶಾಖೈಕವಿಶ್ರಾಂತಸರ್ವಹೇತಿವಿಹಂಗಮಾಃ ।
ನಖಾಂಶುಮಂಜರೀಕೀರ್ಣಾ ಮಹಾಮರಕತದ್ರುಮಾಃ ॥ ೪೩ ॥

ಇಮೇ ತೇ ಮೃದುಮಂದಾರದಾಮ ದಿಗ್ಧಾಂಸ ಮಂಡಲಾಃ ।
ಮಂದರಾಘೃಷ್ಟಕೇಯೂರಾಶ್ಚತ್ವಾರೋ ಮಮ ಬಾಹವಃ ॥ ೪೪ ॥

ಚಲಚ್ಛಶಿಕಲಾಪೂರಚಾರು ಚಾಮರಧಾರಿಣೀ ।
ಇಯಂ ಮೇ ಪಾರ್ಶ್ವಗಾ ಲಕ್ಷ್ಮೀಃ ಕ್ಷೀರೋದಕುಹರೋತ್ಥಿತಾ ॥ ೪೫ ॥

ಹೇಲಾವಿಲುಬ್ಧಭುವನಾ ತ್ರೈಲೋಕ್ಯತರುಮಂಜರೀ ।
ಇಯಂ ಮೇ ಪಾರ್ಶ್ವಗಾ ಕೀರ್ತಿರಚಲಾಮಲಭಾಸಿನೀ ॥ ೪೬ ॥

---

೪೨. ಅನಂತವಾಗಿರುವ ಈ ಆಕಾಶವನ್ನೆಲ್ಲ ವ್ಯಾಪಿಸಿಕೊಂಡಿರುವ ಕನಕಾಂಗನಾದ ಗರುಡನು ನನಗೆ ಈಗ ಆಸನನಾಗಿರುವನು.

೪೩. ಈ ನನ್ನ ಒಂದು ಬೆರಳಿನ ತುದಿಯಲ್ಲಿ ಸರ್ವಾಯುಧಗಳೂ ಬಂದು ಹಕ್ಕಿಗಳಂತೆ ಕುಳಿತಿರಲು, ಉಗುರಿನ ಕಾಂತಿಯು ಅವುಗಳನ್ನೆಲ್ಲ ವ್ಯಾಪಿಸಿಕೊಂಡಿರಲು (ದೂರದಿಂದ ನೋಡುವರಿಗೆ) ಮಹಾ ಮರಕತ ವೃಕ್ಷಗಳಂತೆ ಕಾಣುತ್ತಿರುವುವು.

೪೪. ಮೃದುವಾದ ಮಂದಾರ ಕುಸುಮ ಮಾಲೆಗಳಿಂದ ಮುಚ್ಚಿ ಹೋಗಿರುವ ಹೆಗಲುಳ್ಳ ನಾಲ್ಕು ಭುಜಗಳೂ ಶೋಭಿಸುತ್ತಿರುವುವು ಹಿಂದೆ ಮಂದರ ಪರ್ವತಕ್ಕೆ ತಗುಲಿ ಶಿಥಿಲವಾದ ಕೇಯೂರಗಳೂ ಕೂಡ ಈ ಭುಜಗಳಲ್ಲಿರುವುವು.

೪೫. ಕ್ಷೀರ ಸಮುದ್ರದಿಂದ ಹುಟ್ಟಿಬಂದು ಶಶಿಕಿರಣಗಳಿಂದ ತುಂಬಿ ಮನೋಹರವಾಗಿ ಚಲಿಸುತ್ತಿರುವ ಚಾಮರಗಳನ್ನು ಹಿಡಿದು ಮಹಾ ಲಕ್ಷ್ಮಿಯು ನನ್ನ ಪಾರ್ಶ್ವದಲ್ಲಿ ನಿಂತಿರುವಳು.

೪೬. ತನ್ನ ಕಾಂತಿಯಿಂದ ಸಮಸ್ತ ಭುವನಗಳನ್ನೂ ಸಮ್ಮೋಹಗೊಳಿಸುತ್ತಾ ಲೋಕತ್ರಯವೆಂಬ ಮಹಾವೃಕ್ಷಕ್ಕೆ ಹೂಗೊಂಚಲಂತಿರುವ ಕೀರ್ತಿ ಕಾಮಿನಿಯು ಸ್ಥಿರಳಾಗಿ ನಿರ್ಮಲಳಾಗಿ ನನ್ನ ಪಾರ್ಶ್ವದಲ್ಲಿ ನಿಂತಿರುವಳು

ಅನಾರತ ಜಗಜ್ಜಾಲ ನವನಿರ್ಮಾಣ ಕಾರಿಣೀ ।
ಇಯಂ ಮೇ ಪಾರ್ಶ್ವಗಾ ಮಾಯಾ ಸ್ವೇಂದ್ರಜಾಲವಿಲಾಸಿನೀ ॥ ೪೭ ॥

ಇಯಂ ಸಾ ಹೇಲಯಾಕ್ರಾಂತ ತ್ರೈಲೋಕ್ಯತರು ಖಂಡಿಕಾ ।
ಜಯಾ ಸ್ಫುರತಿ ಮೇ ಪಾರ್ಶ್ವೇ ಲತಾ ಕಲ್ಪತರೋರಿವ ॥ ೪೮ ॥

ಇಮೌ ಮೇ ನಿತ್ಯಶೀತೋಷ್ಣೌ ದೇವೌ ಶೀತಾಂಶುಭಾಸ್ಕರೌ ।
ಪ್ರಕಟೀಕೃತಸಂಸಾರೌ ಮುಖಮಧ್ಯೇ ವಿಲೋಚನೇ ॥ ೪೯ ॥

ಮಮೇಯಮುತ್ಪಲಶ್ಯಾಮಾ ಪೀನಾಂಭೋಧರ ಸುಂದರೀ ।
ಶ್ಯಾಮೀಕೃತಕಕುಪ್ಚಕ್ರಾ ದೇಹದೀಪ್ತಿರ್ವಿಸರ್ಪಿಣೀ ॥ ೫೦ ॥

ಅಯಂ ಮಮ ಕರೇ ಶಂಖಃ ಪಾಂಚಜನ್ಯಃ ಸ್ಫುರದ್ಧ್ವನಿಃ ।
ಮೂರ್ತಂ ಖಮಿವ ಶಬ್ದಾತ್ಮಾ ಕ್ಷೀರೋದ ಇವ ಸಂಸ್ಥಿತಃ ॥ ೫೧ ॥

---

೪೭. ಸಂತತವಾಗಿ ಜಗಜ್ಜಾಲಗಳನ್ನು ಹೊಸ ಹೊಸದಾಗಿ ನಿರ್ಮಾಣ ಮಾಡುತ್ತ ತನ್ನ ಇಂದ್ರಜಾಲದ ಆಟವನ್ನಾಡುತ್ತಿರುವ ಈ ಮಾಯಾದೇವಿಯು ನನ್ನ ಪಾರ್ಶ್ವದಲ್ಲಿ ನಿಂತಿರುವಳು.

೪೮. ಲೀಲಾ ವಿಲಾಸದಿಂದಲೇ ತ್ರೈಲೋಕ್ಯವೆಂಬ ವೃಕ್ಷ ಖಂಡವನ್ನು ಆಕ್ರಮಿಸಬಲ್ಲ ಜಯಾ ದೇವಿಯು ಕಲ್ಪವೃಕ್ಷದಲತೆಯಂತೆ ನನ್ನ ಮಗ್ಗುಲಲ್ಲಿ ನಿಂತಿರುವಳು.

೪೯. ಯಾವಾಗಲೂ ಶೀತವನ್ನೂ ಉಷ್ಣವನ್ನೂ ಕೊಡುತ್ತಲೇ ಇದ್ದು (ಸಂಸಾರವನ್ನೂ ನಡೆಯಿಸಿಕೊಂಡು ಹೋಗುವ) ಚಂದ್ರ ಸೂರ್ಯರು ನನ್ನ ಮುಖ ಮಧ್ಯದಲ್ಲಿ ಕಣ್ಣುಗಳಾಗಿರುವರು.

೫೦. ನೀಲೋತ್ಪಲದಂತೆ ಶ್ಯಾಮಲವಾಗಿ, ವಿಸ್ತಾರವಾದ ನೀರುತುಂಬಿದ ಮೋಡಗಳಂತೆ ಸುಂದರವಾಗಿ ದಿಕ್ಚಕ್ರವಾಳಗಳನ್ನೆಲ್ಲ ಶ್ಯಾಮಲವನ್ನಾಗಿ ಮಾಡುತ್ತಿರುವ ನನ್ನ ದೇಹ ಕಾಂತಿಯು ಹೊರಹೊಮ್ಮುತ್ತಿರುವುದು.

೫೧. ಇದೋ ಗಂಭೀರವಾಗಿ ಧ್ವನಿಮಾಡುತ್ತಿರುವ ಶಬ್ದ ಗುಣವಾದ ಆಕಾಶವೇ ಮೂರ್ತಿಮಂತವಾಗಿದೆಯೋ ಕ್ಷೀರ ಸಮುದ್ರವೇ ಶಬ್ದಮಯ ದೇಹವಾಗಿ ಅವತರಿಸಿತೋ ಎಂಬಂತಿರುವ ಪಾಂಚ ಜನ್ಯ ಶಂಖವು ನನ್ನ ಕೈಯಲ್ಲಿರುವುದು.

ಅಯಂ ಮೇ ಕರ್ಣಿಕಾಕೋಶನಿಲೀನ ಬ್ರಹ್ಮಷಟ್ಪದಃ ।
ಪದ್ಮಃ ಕರತಲೇ ಶ್ರೀಮಾನ್ಸ್ವನಾಡೀಕುಹರೋದ್ಭವಃ　　॥ ೫೨ ॥

ಇಯಂ ಮೇ ರತ್ನ ಚಿತ್ರಾಂಗೀ ಸುಮೇರುಶಿಖರೋಪಮಾ ।
ಹೇಮಾಂಗದಾ ಗದಾ ಗುರ್ವೀ ದೈತ್ಯದಾನವಮರ್ದಿನೀ　　॥ ೫೩ ॥

ಅಯಂ ಮೇ ಭಾಸ್ಕರಾಕಾರ ಉದ್ಯದಂಶುಃ ಸುದರ್ಶನಃ ।
ಜ್ವಾಲಾ ಜಟಿಲಪರ್ಯಂತ ಪರಿಪಾಟಲದಿಕ್ತಟಃ　　॥ ೫೪ ॥

ಅಯಂ ಮೇ ಕೇತುಮದ್ವಹ್ನಿ ಸುಂದರೋ ಜ್ವಲಿತೋಽಸಿತಃ ।
ಕುಠಾರೋ ದೈತ್ಯವೃಕ್ಷಾಣಾಂ ನಂದಯನ್ನಂದಕಃ ಸ್ಥಿತಃ　　॥ ೫೫ ॥

ಇದಂ ಮೇ ಶರಧಾರಾಣಾಂ ಪುಷ್ಕರಾವರ್ತಕೋಪಮಂ ।
ಶಾರ್ಙ್ಗಂ ಧನುರಹೀಂದ್ರಾಭಮಿಂದ್ರ ಕಾರ್ಮುಕ ಸುಂದರಂ　　॥ ೫೬ ॥

---

೫೨. ಕರ್ಣಿಕೆಯಲ್ಲಿ ಬ್ರಹ್ಮನೆಂಬ ದುಂಬಿಯನ್ನು ಅಡಗಿಸಿಕೊಂಡಿರುವ ನಾಭಿ ಕಮಲವು ಇದೋ ನನ್ನ ಕೈಯಲ್ಲಿ ಮೆರೆಯುತ್ತಿರುವುದು.

೫೩. ರತ್ನ ಚಿತ್ರಿತವಾಗಿ ಮೇರು ಶಿಖರವೋ ಎಂಬಂತೆ ಇರುವ ಗುರುವೂ ಚಿನ್ನದ ಪಟ್ಟಿಗಳುಳ್ಳದೂ ಆಗಿ ದೈತ್ಯ ದಾನವರನ್ನು ಮರ್ದಿಸುವ ಗದೆಯು ನನ್ನ ಕೈಯಲ್ಲಿರುವುದು.

೫೪. ದಿಕ್ಕುವಿದಿಕ್ಕುಗಳ ಕೊನೆ ಕೊನೆಗಳವರೆಗೂ ಹಬ್ಬಿರುವ ಜ್ವಾಲಾ ಕಲಾಪ ಗಳಿಂದ ಎಲ್ಲವನ್ನೂ ಪಾಟಲವಾಗಿ ಮಾಡುತ್ತ ಕಿರಣಗಳನ್ನು ಚೆಲ್ಲುತ್ತ ಸೂರ್ಯನಂತೆ ದೇದೀಪ್ಯಮಾನವಾಗಿರುವ ಸುದರ್ಶನವು ನನ್ನ ಕೈಯಲ್ಲಿರುವುದು.

೫೫. ಧೂಮ ಧ್ವಜನಾದ ಅಗ್ನಿದೇವನಂತೆ ಸುಂದರವಾಗಿ, ಜ್ವಲಜ್ಜ್ವಾಲಾ ಮಯವಾಗಿದ್ದರೂ ಕೃಷ್ಣವರ್ಣವಾಗಿರುವ ದೈತ್ಯ ಮಹಾ ವೃಕ್ಷ ಕುಠಾರವಾದ ಈ ನಂದಕವು ನನಗೆ ಸಂತೋಷವನ್ನುಂಟು ಮಾಡುತ್ತ ಪಾರ್ಶ್ವದಲ್ಲಿರುವುದು.

೫೬. ಶರವರ್ಷಗಳನ್ನು ಕರೆಯುವ ಪ್ರಲಯ ಕಾಲದ ಮೇಘವೋ ಎಂಬಂತೆಯೂ, ಆದಿಶೇಷನಂತೆಯೂ ಇರುವ ಕಾಮನ ಬಿಲ್ಲಿನಂತೆ ವರ್ಣರಂಜಿತವಾಗಿ ಸುಂದರವಾಗಿರುವ ಶಾರ್ಙ್ಗಧನಸ್ಸೂ ಇಲ್ಲಿಯೇ ಇರುವುದು.

ಇಮಾನ್ಯಹಮನಂತಾನಿ ಜಗಂತಿ ಜಠರೇ ಚಿರಂ ।
ಬಿಭರ್ಮಿ ಜಾತನಷ್ಟಾನಿ ವರ್ತಮಾನಾನ್ಯನೇಕಶಃ ॥ ೫೭ ॥

ಇಮೌ ಮಹೀ ಮೇ ಚರಣಾವಿದಂ ಮೇ ಗಗನಂ ಶಿರಃ ।
ಇದಂ ವಪುರ್ಮೇ ತ್ರಿಜಗದಿಮೇ ಮೇ ಕುಕ್ಷಯೋ ದಿಶಃ ॥ ೫೮ ॥

ಸಾಕ್ಷಾದಯಂ ಽಹಂ ವಿಷ್ಣುರ್ನೀಲ ಮೇಘೋದರದ್ಯುತಿಃ ।
ಸುಪರ್ಣ ಪರ್ವತಾರೂಢಃ ಶಂಖಚಕ್ರಗದಾಧರಃ ॥ ೫೯ ॥

ಏತೇ ಮತ್ತಃ ಪಲಾಯಂತೇ ಸಮಗ್ರಾ ದುಷ್ಟಚೇತಸಃ ।
ತಾರ್ಣಾಸ್ತರಲ ಸಂಚಾರಾಃ ಪವನಾದಿವ ರಾಶಯಃ ॥ ೬೦ ॥

ಅಯಂ ನೀಲೋತ್ಪಲಶ್ಯಾಮಃ ಪೀತವಾಸಾ ಗದಾಧರಃ ।
ಲಕ್ಷ್ಮೀವಾನ್ಗರುಡಾರೂಢಃ ಸ್ವಯಮೇವಾಹಮಚ್ಯುತಃ ॥ ೬೧ ॥

---

೫೭. ನಾನು ನನ್ನ ಜಠರದಲ್ಲಿ ಗತವೂ ಆಗಾಮಿಯೂ ವರ್ತಮಾನವೂ ಆದ ಅನೇಕಾನೇಕ ಜಗತ್ತುಗಳನ್ನೂ ಧರಿಸಿರುವೆನು.

೫೮. ಈ ಜಗತ್ತೂ ನನ್ನ ಚರಣಗಳಾಗಿರುವುದು ಈ ಗಗನವು ಶಿರಸ್ಸಾಗಿರುವುದು. ಮೂರು ಲೋಕಗಳೂ ದೇಹವಾಗಿರುವುದು. ಈ ದಿಕ್ಕುಗಳೇ ನನ್ನ ಕುಕ್ಷಿಗಳಾಗಿರುವುವು.

೫೯. ನೀಲಮೇಘದ ಒಳಗಿರುವ ಸುಂದರವಾದ ಶ್ಯಾಮವರ್ಣವನ್ನುಳ್ಳ ಮಹಾವಿಷ್ಣುವೇ ನಾನಾಗಿರುವೆನು. ನಾನು ಸುಪರ್ಣನೆಂಬ ಪರ್ವತವನ್ನೇರಿರುವೆನು. ಶಂಖಚಕ್ರ ಗದಾಧರನಾಗಿರುವೆನು.

೬೦. ಬಿರುಗಾಳಿಯ ಮುಂದೆ ನಿಲ್ಲಲಾರದೆ ಹಾರಿಹೋಗುವ ಹುಲ್ಲಿನ ಬಣಬೆಗಳಂತೆ, ಸಮಸ್ತ ದುಷ್ಟ ಚೇತನಗಳೂ ನನ್ನನ್ನು ನೋಡಿಯೇ ಓಡಿಹೋಗುತ್ತಿರುವುವು.

೬೧. ನೀಲೋತ್ಪಲಶ್ಯಾಮನಾಗಿ, ಪೀತವಸ್ತ್ರನಾಗಿ, ಗದಾಧರನಾಗಿ, ಲಕ್ಷ್ಮೀವಂತನಾಗಿ ಗರುಡಾರೂಢನಾದ ಮಹಾವಿಷ್ಣುವೇ ನಾನಾಗಿರ.ವೆನು.

ಕೋ ಮಾಮೇತಿ ವಿರುದ್ಧಾತ್ಮಾ ತ್ರೈಲೋಕ್ಯದಹನಕ್ಷಮಂ ।
ಸ್ವನಾಶಾಯ ತತಃ ಕ್ಷುಬ್ಧಂ ಕಾಲಾಗ್ನಿಂ ಶಲಭೋ ಯಥಾ ॥ ೬೨ ॥

ಇಮೇ ಮೇ ತೈಜಸೀಂ ಸೃಷ್ಟಿಂ ಮಮಾಗ್ರಸ್ಥಾಃ ಸುರಾಸುರಾಃ ।
ನ ಶಕ್ನುವಂತಿ ಸಂರೋದ್ಧುಂ ಚಕ್ಷುರ್ಮಂದಾಃ ಪ್ರಭಾ ಇವ ॥ ೬೩ ॥

ಇಮಂ ಮಾಮೀಶ್ವರಂ ವಿಷ್ಣುಂ ಬ್ರಹ್ಮೇಂದ್ರಾಗ್ನಿಹರಾದಯಃ ।
ಸ್ತುವಂತ್ಯನಂತಯಾ ವಾಚಾ ಬಹುವಕ್ತ್ರ ಸಮುತ್ಥಯಾ ॥ ೬೪ ॥

ಅಯಂ ವಿಜೃಂಭಿತೈಶ್ವರ್ಯೋ ಜಾತೋಽಹಮಜಿತಾ ಕೃತಿಃ ।
ಸರ್ವದ್ವಂದ್ವಪದಾತೀತೋ ಮಹಿಮ್ನಾ ಪರಮೇಣ ಹಿ ॥ ೬೫ ॥

---

೬೨. ರೇಗಿರುವ ಕಾಲಾಗ್ನಿಯನ್ನು ಎದುರಿಸಿದ ಶಲಭವು ತಪ್ಪದೆ ನಾಶವಾಗುವಂತೆ, ತ್ರೈಲೋಕ್ಯಗಳನ್ನು ದಹಿಸಬಲ್ಲ ನನ್ನನ್ನು ವಿರೋಧಿಸಿದ ಯಾವನು ತಾನೇ ಧ್ವಂಸವಾಗಿ ಹೋಗದಿರುವನು ?

೬೩. ನೇತ್ರ ರೋಗಿಗಳು ಬೆಳಕನ್ನು ಹೇಗೆ ಸಹಿಸಲಾರರೋ, ಹಾಗೆಯೇ ನನ್ನ ಎದುರು ನಿಂತ ಸುರಾಸುರರೂ ಸಹ ನನ್ನ ತೇಜೋವಿಭವವನ್ನು ಸಹಿಸಲಾರರು.

೬೪. ಹೀಗೆ ವಿಷ್ಣುವಾಗಿ ಸರ್ವ ಭೂತ ಮಹೇಶ್ವರನಾಗಿರುವ ನನ್ನನ್ನು ಬ್ರಹ್ಮ, ಇಂದ್ರ, ಅಗ್ನಿ, ಹರಾದಿಗಳು, ನಾನಾ ಮುಖಗಳಿಂದ, ವೇದ ವಾಕ್ಯಗಳಿಂದ ಸ್ತೋತ್ರ ಮಾಡುತ್ತಿರುವರು.

(ಅನಂತಯಾ ವಾಚಾ= ವೇದವಾಗ್ಭಿಃ)

೬೫. ಹೀಗೆ ನಾನು ವಿಜೃಂಭಿತವಾದ ಈಶ್ವರ ಭಾವವುಳ್ಳನಾದೆನು. ಎಲ್ಲರಿಗೂ ದುರ್ಜಯನಾದೆನು : ಸಮಸ್ತ ದ್ವಂದ್ವಗಳನ್ನೂ ಮೀರಿದವನಾದೆನು : ಇದಿಷ್ಟೂ ನನ್ನ ಅಪಾರವಾದ ಮಹಿಮೆಯಿಂದಲೇ ಆಗಿರುವುದು.

ತ್ರಿಭುವನ ಭವನೋದರೈಕ ಮೂರ್ತಿ
ಪ್ರಸಭವಿಭಿನ್ನ ಸಮಸ್ತ ದುಷ್ಟ ಸತ್ವಂ ||
ಘನಗಿರಿತೃಣಕಾನನಾಂತರಸ್ಥಂ
ಸಕಲ ಭಯಾಪಹರಂ ವಪುಃ ಪ್ರಣಾಮಿ || ೬೬ ||

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ "ಪ್ರಹ್ಲಾದ ನಿರ್ವಾಣೋ"ನಾಮೈಕ ತ್ರಿಂಶಃ ಸರ್ಗಃ

---

೬೬. ಹೀಗೆ ಜಗತ್ರಯವನ್ನೂ ಒಳಗೊಂಡು; ದುಷ್ಟ ಸತ್ತ್ವಗಳನ್ನೆಲ್ಲ ತಟ್ಟನೆ ಮರ್ದಿಸುತ್ತ, ಪರ್ವತ, ವನಗಳಲ್ಲೆಲ್ಲಾ ವ್ಯಾಪಿಸಿ, ಭಯಗಳನ್ನೂ ಪರಿಹರಿಸಿ, ವಿರಾಡ್ರೂಪವನ್ನು ಸರ್ವದಾ ನಮಿಸುವೆನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ಮಹಾರಾಮಾಯಣದ ಉಪಶಮ ಪ್ರಕರಣದಲ್ಲಿ "ಪ್ರಹ್ಲಾದ ನಿರ್ವಾಣ" ಎಂಬ ಮೂವತ್ತೊಂದನೆಯ ಸರ್ಗವು.

ದ್ವಾತ್ರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಪ್ರಹ್ಲಾದ ಇತಿ ಸಂಚಿಂತ್ಯ ಕೃತ್ವಾ ನಾರಾಯಣೀಂ ತನು ।
ಪುನಃ ಸಂಚಿಂತಯಾಮಾಸ ಪೂಜಾರ್ಥಮಸುರದ್ವಿಷಃ ॥ ೧ ॥

ವಪುಷೋ ವೈಷ್ಣವಾದಸ್ಮಾನ್ಮಾಭೂನ್ಮೂರ್ತಿಃ ಪರಾವರಾ ।
ಅಯಂ ಪ್ರಾಣಪ್ರವಾಹೇಣ ಬಹಿರ್ವಿಷ್ಣುಃ ಸ್ಥಿತೋಽಪರಃ ॥ ೨ ॥

ವೈನತೇಯ ಸಮಾರೂಢಃ ಸ್ಫುರಚ್ಛಕ್ತಿಚತುಷ್ಟಯಃ ।
ಶಂಖಚಕ್ರ ಗದಾಪಾಣಿಃ ಶ್ಯಾಮಲಾಂಗಶ್ಚತುರ್ಭುಜಃ ॥ ೩ ॥

ಮೂವತ್ತೆರಡನೆಯ ಸರ್ಗ

ಶ್ರೀ ವಸಿಷ್ಠನು ಹೇಳಿದನು:—

೧. ಪ್ರಹ್ಲಾದನು ಹೀಗೆ ಯೋಚಿಸಿ ನಾರಾಯಣ ದೇಹವನ್ನು ಮಾಡಿಕೊಂಡು ದಾನವಾರಿಯಾದ ಶ್ರೀಮನ್ನಾರಾಯಣನನ್ನು ಪೂಜಿಸಲು ನಿಶ್ಚಯಿಸಿದನು.

೨. ಈ ವೈಷ್ಣವ ಮೂರ್ತಿಯನ್ನು ಬಿಟ್ಟು ಇದಕ್ಕಿಂತ ಹೆಚ್ಚಾಗಲಿ ಕಡಿಮೆಯಾಗಲಿ, ಮತ್ತೊಂದು ಮೂರ್ತಿಯು ನನಗೆ ಬೇಡ. ಹೃದಯ ಸ್ಥಿತನಾಗಿರುವ ವಿಷ್ಣುವೇ ಶ್ವಾಸ ಮಾರ್ಗವಾಗಿ ಹೊರಗೆ ಬಂದು ಮತ್ತೊಬ್ಬ ವಿಷ್ಣುವಿನಂತೆ ನಿಂತಿರುವನು.

೩. ಈತನು ಗರುಡಾರೂಢನಾಗಿಯೂ ಇಚ್ಛಾ ಜ್ಞಾನ ಕ್ರಿಯಾ ಅನುಗ್ರಹಗಳೆಂಬ ಶಕ್ತಿ ಚತುಷ್ಟಯ ಸಮನ್ವಿತನಾಗಿಯೂ ಶಂಖಚಕ್ರಗದಾಪಾಣಿಯಾಗಿಯೂ ಶ್ಯಾಮ ಸುಂದರಾಂಗನಾಗಿಯೂ ಚತುರ್ಭುಜನಾಗಿಯೂ ಇರುವನು.

ಚಂದ್ರಾರ್ಕನಯನಃ ಶ್ರೀಮಾನ್ನಾಂತನಂದಕ ನಂದನಃ ।
ಪದ್ಮಪಾಣಿ ರ್ವಿಶಾಲಾಕ್ಷಃ ಶಾಙ್ಗರ್ನಧನ್ವಾ ಮಹಾದ್ಯುತಿಃ ॥ ೪ ॥

ತದೇನಂ ಪೂಜಯಾಮ್ಯಾಶು ಪರಿವಾರಸಮನ್ವಿತಂ ।
ಸಪರ್ಯಯಾ ಮನೋಮಯ್ಯಾ ಸರ್ವಸಂಭಾರರಮ್ಯಯಾ ॥ ೫ ॥

ತತ ಏನಂ ಮಹಾದೇವಂ ಪೂಜಯಿಷ್ಯಾಮ್ಯಹಂ ಪುನಃ ।
ಪೂಜಯಾ ಬಾಹ್ಯಸಂಭೋಗಮಹತ್ಯಾ ಬಹುರತ್ನಯಾ ॥ ೬ ॥

ಪ್ರಹ್ಲಾದ ಇತಿ ಸಂಚಿಂತ್ಯ ಸಂಭಾರಭರ ಭಾರಿಣಾ ।
ಮನಸಾ ಪೂಜಯಾಮಾಸ ಮಾಧವಂ ಕಮಲಾಧವಂ ॥ ೭ ॥

ರತ್ನೌಘಪಾತ್ರಪಟಲೈಶ್ಚಂದನಾದಿ ವಿಲೇಪನೈಃ ।
ಧೂಪೈರ್ದೀಪೈರ್ವಿಚಿತ್ರೈಶ್ಚ ನಾನಾ ವಿಭವ ಭೂಷಣೈಃ ॥ ೮ ॥

ಮಂದಾರಮಾಲಾವಲನೈರ್ಹೇಮಾಬ್ಜ ಪಟಲೋತ್ಕರೈಃ ।
ಕಲ್ಪವೃಕ್ಷಲತಾಗುಚ್ಛೈ ರತ್ನಸ್ತಬಕ ಮಂಡಲೈಃ ॥ ೯ ॥

---

೪. ಸೂರ್ಯಚಂದ್ರರೇ ಇವನಿಗೆ ನೇತ್ರಗಳಾಗಿರುವರು ಶ್ರೀಮಂತನಾದ ಈತನಿಗೆ ಸುಂದರವಾದ ನಂದಕವೆಂಬ ಖಡ್ಗವಿರುವುದು. ಪದ್ಮಪಾಣಿಯೂ ವಿಶಾಲಾಕ್ಷನೂ ಶಾರ್ಙ್ಗಧನ್ವವೂ ಮಹಾ ತೇಜಸ್ವಿಯೂ ಆಗಿರುವನು.

೫. ಹೀಗಿರುವ ಸಪರಿವಾರನಾದ ಈ ಮಹಾವಿಷ್ಣುವನ್ನು ಸರ್ವ ಸಂಭಾರಗಳನ್ನೂ ಕಲ್ಪಿಸಿಕೊಂಡು ಮಾನಸ ಪೂಜೆಯಿಂದ ಅರ್ಚಿಸುವೆನು.

೬. ಅನಂತರ, ಬಹುರತ್ನಗಳುಳ್ಳ ಬಹು ವಸ್ತುಮಯವಾದ ಬಾಹ್ಯ ಪೂಜೆಯಿಂದ ಈ ದೇವ ದೇವನಾದ ಮಹಾವಿಷ್ಣುವನ್ನು ಪೂಜಿಸುವೆನು.

೭. ಹೀಗೆಂದು ನಿಶ್ಚಯಿಸಿಕೊಂಡು ಮನಸ್ಸಿನಿಂದಲೇ ಸರ್ವ ಪದಾರ್ಥಗಳ ಸಂಚಯಮಾಡಿ ಮನಸ್ಸಿನಿಂದಲೇ ಪೂಜೆಮಾಡಿದನು.

೮-೯ ರತ್ನಮಯವಾದ ಪಾತ್ರಗಳನ್ನೂ ಚಂದನಾದಿ ವಿಲೇಪನಗಳನ್ನೂ ಧೂಪಗಳನ್ನೂ ವಿಚಿತ್ರವಾದ ದೀಪಗಳನ್ನೂ ಅನರ್ಘವಾದ ರತ್ನ ಭೂಷಣಗಳನ್ನೂ

ಪಲ್ಲವೈರ್ದಿವ್ಯ ವೃಕ್ಷಾಣಾಂ ನಾನಾಕುಸುಮದಾಮಭಿಃ ।
ಕಿಂಕಿರಾತೈರ್ಬಕೈಃ ಕುಂದೈಶ್ಚಂಪಕೈರಸಿತೋತ್ಪಲೈಃ ॥ ೧೦ ॥

ಕಹ್ಲಾರೈಃ ಕುಮುದೈಃ ಕಾಶೈಃ ಖರ್ಜೂರೈಶ್ಚೂತ ಕಿಂಶುಕೈಃ ।
ಅಶೋಕೈರ್ಮದನೈರ್ಬಿಲ್ವೈಃ ಕರ್ಣಿಕಾರೈಃ ಕಿರಾತಕೈಃ ॥ ೧೧ ॥

ಕದಂಬೈರ್ಬಕುಲೈರ್ನಿಂಬೈಃ ಸಿಂಧುವಾರೈಃ ಸಯೂಥಕೈಃ ।
ಪಾರಿಭದ್ರೈರ್ಗುಗ್ಗುಲಾಭಿರ್ಬಿಂದುಕೈಃ ಪುಷ್ಪಕೋತ್ಕರೈಃ ॥ ೧೨ ॥

ಪ್ರಿಯಂಗುಪಟಲೈಃ ಪಾಟೈಃ ಪಾಟಲೈರ್ಧಾತುಪಾಟಲೈಃ ।
ಆಮ್ರೈರಾಮ್ರಾತಕೈರ್ಗವ್ಯೈರ್ಹರೀತಕ ಬಿಭೀತಕೈಃ ॥ ೧೩ ॥

ಶಾಲತಾಲತಮಾಲಾನಾಂ ಲತಾಕುಸುಮ ಪಲ್ಲವೈಃ ।
ಕೋಮಲೈಃ ಕಲಿಕಾಜಾಲೈಃ ಸಹಕಾರೈಃ ಸಕುಂಕುಮೈಃ ॥ ೧೪ ॥

ಕೇತಕೈಃ ಶತಪತ್ರೈಶ್ಚ ತಥೈಲಾಮಂಜರೀಗಣೈಃ ।
ಸರ್ವ ಸೌಂದರ್ಯಸಮಾನ್ಯೈಃ ಸ್ವಯಮಾತ್ಮಾರ್ಪಣೈರಪಿ ॥ ೧೫ ॥

ಹರಿಂ ಪರಮಯಾ ಭಕ್ತ್ಯಾ ಜಗದ್ವಿಭವಭವ್ಯಯಾ ।
ಮನಸಾ ಪೂಜಯಾಮಾಸ ಪ್ರಹ್ಲಾದೋಽತಃ ಪುರೇ ಪತಿಂ ॥ ೧೬ ॥

ಕಲ್ಪಿಸಿಕೊಂಡು ಮಂದಾರ ಪುಷ್ಪಮಾಲೆಗಳನ್ನು ಧರಿಸಿ ಸುವರ್ಣ ಕಮಲಗಳಿಂದ ಪೂಜಿಸಿ ಕಲ್ಪ ವೃಕ್ಷಗಳ ಲತಾ ಗುಚ್ಛಗಳಿಂದಲೂ, ರತ್ನ ಸ್ತಬಕಗಳ ಮಾಲೆಗಳಿಂದಲೂ ಅರ್ಚಿಸಿದನು.

೧೦–೧೬. ದಿವ್ಯ ವೃಕ್ಷಗಳ ಚಿಗುರುಗಳಿಂದಲೂ, ನಾನಾ ಕುಸುಮ ಮಾಲೆಗಳಿಂದಲೂ ಪೂಜಿಸಿದನು. ಕಿಂಕಿರಾತ ಬಕ, ಕುಂದ, ಚಂಪಕ, ಕನ್ನೈದಿಲೆ, ಕಲ್ಹಾರ ಕುಮುದ, ಕಾಶ, ಖರ್ಜೂರ, ಚೂತ, ಕಿಂಶುಕ, ಅಶೋಕ, ಮದನ, ಬಿಲ್ವ, ಕರ್ಣಿಕಾರ, ಕಿರಾತಕ, ಕದಂಬ, ಬಕುಳ, ನಿಂಬ, ಸಿಂಧುವಾರ, ಯೂಥಕ, ಪಾರಿಭದ್ರ, ಗುಗ್ಗುಲ, ಬಿಂದುಕ, ಉತ್ಕರ, ಪ್ರಿಯಂಗು, ಪಟಲ, ಪಾಟ, ಪಾಟಲ, ಧಾತುಪಾಟಲ ಆಮ್ರ, ಆಮ್ರಾತಕ, ಗವ್ಯ, ಹರೀತಕ, ಬಿಭೀತಕ, ಮೊದಲಾದ ಪುಷ್ಪಗಳಿಂದಲೂ, ಸಾಲ, ತಾಲ, ತಮಾಲಗಳ ಲತಾ, ಕುಸುಮ ಪಲ್ಲವಗಳಿಂದಲೂ ಕೋಮಲವಾದ ಮೊಗ್ಗೆಗಳಿಂದಲೂ ಕೇಸರಗಳೊಡನೆ ಕೂಡಿರುವ ಸಹಕಾರಗಳಿಂದಲೂ ಕೇತಕೀಶತ

ಅಥ ದೇವಗೃಹೇ ತಸ್ಮಿನ್ಬಾಹ್ಯಾರ್ಥೈಃ ಪರಿಪೂರ್ಣಯಾ ।
ಪೂಜಯಾ ಪೂಜಯಾಮಾಸ ದಾನವೇಶೋ ಜನಾರ್ದನಂ ॥ ೧೭ ॥

ಬಹಿ ದ್ರ್ಯವ್ಯೈರನೇಕೈರೇವ ಕ್ರಮೇಣ ಪರಮೇಶ್ವರಂ ।
ಪುನಃ ಪುನಃ ಪೂಜಯಿತ್ವಾ ತುಷ್ಟಿಮಾರ್ದಾನವೋಽ ಭವತ್ ॥ ೧೮ ॥

ತತಸ್ತತಃ ಪ್ರಭೃತ್ಯೇವ ಪ್ರಹ್ಲಾದಃ ಪರಮೇಶ್ವರಂ ।
ತಥೈವ ಪ್ರತ್ಯಹಂ ಭಕ್ತ್ಯಾ ಪೂಜಯಾಮಾಸ ಪೂರ್ಣಯಾ ॥ ೧೯ ॥

ಅಥ ತಸ್ಮಿನ್ಪುರೇ ದೈತ್ಯಾಸ್ತತಃ ಪ್ರಭೃತಿ ವೈಷ್ಣವಾಃ ।
ಸರ್ವ ಏವಾಭವನ್ಭವ್ಯಾ ರಾಜಾ ಹ್ಯಾಚಾರಕಾರಣಂ ॥ ೨೦ ॥

ಪತ್ರಗಳಿಂದಲೂ, ಏಲಾ ಮಂಜರೀ ಗಣಗಳಿಂದಲೂ, ಸರ್ವವಿಧವಾದ ಸುಂದರೋಪಚಾರಗಳಿಂದಲೂ, ಆತ್ಮಾರ್ಪಣಗಳಿಂದಲೂ, ಶ್ರೀ ಹರಿಯನ್ನು ಪರಮಭಕ್ತಿಯಿಂದಲೂ, ಲೋಕೋತ್ತರವಾದ ವೈಭವದಿಂದಲೂ. ತನ್ನ ಅಂತಃಪುರದಲ್ಲಿಯೇ ಕುಳಿತು ಮಾನಸ ಪೂಜೆಯಿಂದಲೇ ಪೂಜಿಸಿದನು.

೧೭. ಅನಂತರ ದೇವರ ಮನೆಯಲ್ಲಿ ಕುಳಿತು ಬಾಹ್ಯಾರ್ಥ ಪರಿಪೂರ್ಣವಾದ ಪೂಜೆಯಿಂದ ಆ ದಾನವೇಂದ್ರನು ಜನಾರ್ದನನನ್ನು ಪೂಜಿಸಿದನು.

೧೮. ಬಾಹ್ಯಾರ್ಥಗಳಿಂದಲೂ ಮಾನಸ ಪೂಜೆಯನ್ನು ಮಾಡಿದ ಕ್ರಮದಿಂದಲೇ ಪರಮೇಶ್ವರನಾದ ಶ್ರೀಮಹಾ ವಿಷ್ಣುವನ್ನು ಮತ್ತೆ ಮತ್ತೆ ಪೂಜೆ ಮಾಡಿ ದಾನವೇಂದ್ರನು ತೃಪ್ತನಾದನು.

೧೯. ಆಮೊದಲುಗೊಂಡು ನಿತ್ಯವೂ ಆ ಪ್ರಹ್ಲಾದನು ಪರಮೇಶ್ವರನನ್ನು ಅದೇ ರೀತಿಯಲ್ಲಿಯೇ ನಿತ್ಯ ನಿತ್ಯವೂ ಪೂರ್ಣ ಭಕ್ತಿಯಿಂದ ಪೂಜೆಮಾಡಿ ಸಂತೋಷಪಟ್ಟನು.

೨೦. ಆ ಮೊದಲು, ಆ ಪಾತಾಳದಲ್ಲಿದ್ದ ದೈತ್ಯರೆಲ್ಲರೂ ವೈಷ್ಣವರಾಗಿ ಸರ್ವರೂ ಸದಾಚಾರ ಸಂಪನ್ನರಾದರು. ರಾಜನೇ ಆಚಾರ ಕಾರಣನಲ್ಲವೇ?

ಜಗಾಮ ವಾರ್ತಾ ಗಗನಂ ದೇವಲೋಕಂ ಮಥಾರಿಹನ್ ।
ವಿಷ್ಣೋರ್ದ್ವೇಷಂ ಪರಿತ್ಯಜ್ಯ ಭಕ್ತಾ ದೈತ್ಯಾಃ ಸ್ಥಿತಾ ಇತಿ ॥ ೨೧ ॥

ದೇವಾ ವಿಸ್ಮಯಮಾಜಗ್ಮುಃ ಶಕ್ರಾದ್ಯಾಃ ಸಮರುದ್ಗಣಾಃ ।
ಗೃಹೀತಾ ವೈಷ್ಣವೀ ಭಕ್ತಿರ್ದೈತ್ಯೈಃ ಕಿಮಿತಿ ರಾಘವ ॥ ೨೨ ॥

ಕ್ಷೀರೋದೇ ಭೋಗಭೋಗಸ್ಥಂ ವಿಬುಧಾ ವಿಸ್ಮಯಾಕುಲಾಃ ।
ಜಗ್ಮುರಂಬರ ಮುತ್ಸೃಜ್ಯ ಹರಿಮಾಹವಶಾಲಿನಂ ॥ ೨೩ ॥

ತತ್ರೈನಂ ದೈತ್ಯವೃತ್ತಾಂತಂ ಕಥಯಾಮಾಸುರಸ್ಯ ತೇ ।
ಪಪ್ರಚ್ಛುಶ್ಚೈನ ಮಾಸೀನಮಪೂರ್ವಾಶ್ಚರ್ಯವಿಸ್ಮಯಂ ॥ ೨೪ ॥

ವಿಬುಧಾ ಊಚುಃ ॥

ಕಿಮೇತದ್ಭಗವನ್ದೈತ್ಯಾ ವಿರುದ್ಧಾ ಯೇ ಸದೈವ ತೇ ।
ತೇ ಹಿ ತನ್ಮಯತಾಂ ಯಾತಾ ಮಾಯೇಯಮಿತಿ ಭಾವ್ಯತೇ ॥ ೨೫ ॥

---

೨೧. ವಿಷ್ಣುವಿನಲ್ಲಿದ್ದ ದ್ವೇಷವನ್ನು ಬಿಟ್ಟು ದೈತ್ಯರೆಲ್ಲರೂ ವಿಷ್ಣುಭಕ್ತರಾದ ರೆಂಬ ಸುದ್ದಿಯು ಸ್ವರ್ಗಕ್ಕೆ ಮುಟ್ಟಿತು.

೨೨. ರಾಘವ, ಇದೇನು, ದೈತ್ಯರು ವಿಷ್ಣು ಭಕ್ತಿಯನ್ನು ಅಂಗೀಕರಿಸಿದರಲ್ಲಾ ಎಂದು ಇಂದ್ರಾದಿ ದೇವತೆಗಳೆಲ್ಲರೂ ವಿಸ್ಮಯಪಟ್ಟರು.

೨೩. ಹೀಗೆ ವಿಸ್ಮಯ ಪಟ್ಟ ದೇವತೆಗಳೆಲ್ಲರೂ ಸ್ವರ್ಗದಿಂದ ಹೊರಟು ಕ್ಷೀರ ಸಮುದ್ರದಲ್ಲಿ ಶೇಷ ಶಾಯಿಯಾಗಿ ಮಲಗಿದ್ದ ದೈತ್ಯ ಯುದ್ಧ ಪ್ರಿಯನಾದ ನಾರಾ ಯಣನ ಬಳಿಗೆ ಹೋದರು.

೨೪. ಅಲ್ಲಿ ಆತನಿಗೆ ದೈತ್ಯ ವೃತ್ತಾಂತವನ್ನು ಹೇಳಿ ಅಪೂರ್ವವಾದ ಆಶ್ಚರ್ಯ ದಿಂದ ವಿಸ್ಮಯ ಪಡುತ್ತಿರುವ ಆತನನ್ನು ಕೇಳಿದರು.

೨೫. ದೇವತೆಗಳು ಹೇಳಿದರು "ಎಲೈ ಭಗವಂತನೇ ಸರ್ವಕಾಲವೂ ನಿನಗೆ ವಿರೋಧಿಗಳೇ ಆದ ದೈತ್ಯರು ನಿನ್ನಲ್ಲಿ ಭಕ್ತಿ ಭಾವವನ್ನು ಆಚರಿಸುತ್ತಿರುವರು ಎಂ ದರೆ, ಇದೇನಿದು ? ನಿನ್ನ ಮಾಯೆಯೆ ಇರಬೇಕು.

ಕ್ವ ಕಿಲಾತ್ಯಂತದುರ್ವೃತ್ತಾ ದಾನವಾ ದಲಿತಾದ್ರಯಃ ।
ಕ್ವ ಪಾಶ್ಚಾತ್ಯ ಮಹಾಜನ್ಮಲಭ್ಯಾ ಭಕ್ತಿರ್ಜನಾರ್ದನೇ ॥ ೨೬ ॥

ಪ್ರಾಕೃತೋ ಗುಣವಾನ್ಜಾತ ಇತ್ಯೇಷಾ ಭಗವನ್ಕಥಾ ।
ಅಕಾಲಪುಷ್ಪಮಾಲೇವ ಸುಖಾಯೋದ್ವೇಜನಾಯ ಚ ॥ ೨೭ ॥

ನೋಪಪನ್ನಂ ಹಿ ಯದ್ಯತ್ರ ತತ್ರ ತನ್ನ ವಿರಾಜತೇ ।
ಮಧ್ಯೇ ಕಾಚಕಲಾಪಸ್ಯ ಮಹಾಮೂಲ್ಯೋ ಮಣಿರ್ಯಥಾ ॥ ೨೮ ॥

ಯೋ ಯೋ ಯಾದೃಗ್ಗುಣೋ ಜಂತುಃ ಸ ತಾಮೇವೈತಿ ಸಂಸ್ಥಿತಿಂ ।
ಸದೃಶೇಷ್ವಪ್ಯಜೇಷು ಶ್ವಾ ನಮಧ್ಯೇ ರಮತೇ ಕ್ವಚಿತ್ ॥ ೨೯ ॥

ನ ತಥಾ ದುಃಖಯಂತ್ಯಂಗೇ ಮಜ್ಜಂತ್ಯೋ ವಜ್ರಸೂಚಯಃ ।
ವೈಸಾದೃಶ್ಯೇನ ಸಂಬದ್ಧಾ ತಥೈತಾ ವಸ್ತುದೃಷ್ಟಯಃ ॥ ೩೦ ॥

---

೨೬. ಪರ್ವತಗಳನ್ನೂ ಪುಡಿ ಪುಡಿ ಮಾಡುವಷ್ಟು ದುರ್ವೃತ್ತರಾದ ದಾನವರು ಎಲ್ಲಿ? ಅಂತಿಮ ಜನ್ಮ ಮಾತ್ರ ಲಭ್ಯವಾದ ವಿಷ್ಣು ಭಕ್ತಿಯೆಲ್ಲಿ?

೨೭. ಕೇವಲ ಪಾಮರನಾಗಿದ್ದವನೂ ಮಹಾ ಸದ್ಗುಣಶಾಲಿಯಾದನು ಎಂದರೆ ಅಕಾಲದಲ್ಲಿ ಕಾಣಿಸಿಕೊಂಡ ಪುಷ್ಪಗಳಂತೆ, ಸುಖವಾಗಿದ್ದರೂ ಉದ್ವೇಗಕ್ಕೆ ಕಾರಣವು.

೨೮. ಯಾವುದು ಎಲ್ಲಿ ಇರಕೂಡದೋ ಅದು ಅಲ್ಲಿ ಸೊಗಸುವುದಿಲ್ಲ. ಕಾಚ ಮಣಿಗಳ ಮಧ್ಯೇ ಮಹಾ ಮೂಲ್ಯವಾದ ಮಣಿಯು ಶೋಭಿಸುವುದೇ?

೨೯. ಪ್ರತಿಯೊಂದು ಪ್ರಾಣಿಯೂ ತನ್ನ ತನ್ನ ಗುಣಗಳಿಗನುಸಾರವಾಗಿ ಸಂಸ್ಥಿತಿಯನ್ನು ಪಡೆಯುವುದು. ಬಹು ರೀತಿಯಾಗಿ ಸಾದೃಶ್ಯವಿದ್ದರೂ ನಾಯಿಯು ಮೇಕೆಗಳ ನಡುವೆ ಬಾಳುವುದೆಂತು?

೩೦. ಪರಸ್ಪರ ಸದೃಶಗಳಲ್ಲದ ಪದಾರ್ಥಗಳು ಒಟ್ಟಿಗಿರುವುದನ್ನು ಕಂಡಾಗ ಆಗುವಷ್ಟು ದುಃಖವು ವಜ್ರ ಸೂಚಿಗಳನ್ನು ಮೈಯಲ್ಲಿ ಚುಚ್ಚಿದರೂ ಆಗುವುದಿಲ್ಲ ವಲ್ಲವೆ?

ಯದ್ಯತ್ರ ಕ್ರಮಸಂಪ್ರಾಪ್ತಮುಪಪನ್ನಮನಿಂದಿತಂ ।
ತದೇವ ರಾಜತೇ ತತ್ರ ಜಲೇಽಂ ಭೋಜಂ ನತು ಸ್ಥಲೇ ॥ ೩೧ ॥

ಕ್ವಾಧಮಃ ಪ್ರಾಕೃತಾರಮ್ಭೋ ಹೀನಕರ್ಮರತಿಃ ಸದಾ ।
ವಕಾರೋ ದಾನವೋ ಹೀನಜಾತಿರ್ಭಕ್ತಿಃ ಕ್ವ ವೈಷ್ಣವೀ ॥ ೩೨ ॥

ಕಮಲಿನೀ ಪರುಷೋಷರಭೂಗತಾ
ಸುಖಯತೀಹ ಯಥಾ ನ ದುರಾಶ್ರಯಾ ॥
ದಿತಿ ಸುತೋಽ ಪಿ ಹಿ ಮಾಧವ ಭಕ್ತಿಮಾ-
ನಿತಿ ಕಥಾ ನ ತಥೇಶ ಸುಖಾಯ ನಃ ॥ ೩೩ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ಉಪಶಮ ಪ್ರಕರಣೇ "ವಿಬುಧವಾಕ್ಯಂ"ನಾಮ ದ್ವಾಂತ್ರಿಂಶಃ ಸರ್ಗಃ

---

೩೧. ಯಾವುದು ನಿಯತಿಕ್ರಮಾನುಸಾರವಾಗಿ ಎಲ್ಲಿ ಇದ್ದರೆ ಯುಕ್ತವೋ ಎಲ್ಲಿ ಇರಬೇಕೋ, ಎಲ್ಲಿ ಇದ್ದರೆ ನಿಂದೆಗೆ ಪಾತ್ರವಾಗುವುದಿಲ್ಲವೋ ಅಲ್ಲಿ ಇರಬೇಕು ಹಾಗಿದ್ದರೇನೇ ಶೋಭಿಸುವುದು. ಕಮಲವು ನೀರಿನಲ್ಲಿದ್ದರೆ ಚೆನ್ನ ನೆಲದ ಮೇಲಿದ್ದರೆ ಚೆನ್ನೇ?

೩೨. ಅಧಮನೂ, ಉತ್ತಮ ಕಾರ್ಯಗಳನ್ನೂ ಮಾಡದವನೂ ಯಾವಾಗಲೂ ಹೀನಕಾರ್ಯಗಳಲ್ಲೇ ಅಭಿರುಚಿಯುಳ್ಳವನೂ ಕೇವಲ ತಾಮಸಿಕನೂ ಹೀನಜಾತಿಯೂ ಆದ ದಾನವನೆಲ್ಲಿ? ವಿಷ್ಣುಭಕ್ತಿಯೆಲ್ಲಿ?

೩೩. ಎಲೈ ಪರಮೇಶ್ವರನೆ, ಅತಿ ಕಠಿನವಾದ ಊಷರ ಭೂಮಿಯಲ್ಲಿ ಜನಿಸಿದ ಕಮಲಲತೆಯನ್ನು ಕಂಡು ದುರಾಶ್ರಯವಾಯಿತೆಂದು ಸಂಕಟವಾಗುವುದಲ್ಲವೆ? ಹಾಗೆಯೇ ದೈತ್ಯನು ವಿಷ್ಣುಭಕ್ತನಾಗಿರುವನು ಎಂಬ ಕಥೆಯನ್ನು ಕೇಳಿ ನಾವೂ ದುಃಖ ಪಡುತ್ತಿರುವೆವು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಉಪಶಮ ಪ್ರಕರಣದಲ್ಲಿ ವಿಬುಧವಾಕ್ಯ ಎಂಬ ಮುವತ್ತೆರಡನೆಯ ಸರ್ಗವು.

ತ್ರಯಸ್ತ್ರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ–

ಗರ್ಜಂತಮತಿ ಸಂರಬ್ಧಂ ಸುರಲೋಕ ಮಥಾರಿಹಾ ।
ಉವಾಚ ಮಾಧವೋ ವಾಕ್ಯಂ ಶಿಖವೃಂದಮಿವಾಂಬುದಃ ॥ ೧ ॥

ಶ್ರೀ ಭಗವಾನ್ ಉವಾಚ–
ವಿಬುಧಾ ಮಾ ವಿಷಣ್ಣಾಃ ಸ್ಥ ಪ್ರಹ್ಲಾದೋ ಭಕ್ತಿಮಾನಿತಿ ।
ಪಶ್ಚಾತ್ಯಂ ಜನ್ಮ ತಸ್ಯೇದಂ ಮೋಕ್ಷಾರ್ಹೋಽಸಾವರಿಂದಮಃ ॥ ೨ ॥

ಅತ ಉತ್ತರಮೇತೇನ ಗರ್ಭತಾ ದನುಜನ್ಮನಾ ।
ನ ಕರ್ತವ್ಯಾ ಪ್ರದಗ್ಧೇನ ಬೀಜೇನೇವಾಂಕುರ ಕ್ರಿಯಾ ॥ ೩ ॥

ಗುಣವಾನ್ನಿರ್ಗುಣೋ ಜಾತ ಇತ್ಯನರ್ಥಕ್ರಮಂ ವಿದುಃ ।
ನಿರ್ಗುಣೋ ಗುಣವಾನ್ಜಾತ ಇತ್ಯಾಹುಃ ಸಿದ್ಧಿದಂ ಕ್ರಮಂ ॥ ೪ ॥

---

೧. ಹೀಗೆ ಅತಿ ಸಂಭ್ರಮದಿಂದ ಗರ್ಜಿಸುತ್ತಿರುವ ದೇವ ಸಮೂಹವನ್ನು ಕುರಿತು, ಮಯೂರ ಸಮೂಹವನ್ನು ತನ್ನ ಗರ್ಜನೆಯಿಂದ ಆನಂದ ಪಡಿಸುವ ಮೇಘದಂತೆ, ಶತ್ರು ವಿನಾಶಕನಾದ ಮಾಧವನು ಈ ಮಾತನ್ನು ಹೇಳಿದನು.

ಶ್ರೀ ಭಗವಂತನು ಹೇಳಿದನು :–

೨. ದೇವತೆಗಳೇ, ಪ್ರಹ್ಲಾದನು ಭಕ್ತನಾದನೆಂದು ವಿಷಾದಪಡಬೇಡಿ. ಆತನಿಗೆ ಇದು ಅಂತಿಮ ಜನ್ಮವು. ಆತನು ಕಾಮಕ್ರೋಧಾದಿ ಷಡ್ರಿಪುಗಳನ್ನು ಜಯಿಸಿದವನು ಮೋಕ್ಷಕ್ಕೆ ಅರ್ಹನಾಗಿರುವನು.

೩. ಹುರಿದ ಬೀಜವು ಹೇಗೆ ಮೊಳೆಯುವುದಿಲ್ಲವೋ ಹಾಗೆಯೇ ಈ ದೈತ್ಯೇಂದ್ರನು ಮತ್ತೆ ಜನ್ಮವೆತ್ತಬೇಕಾಗಿಲ್ಲ.

೪. ಗುಣವಂತನು ಗುಣ ಹೀನನಾದನು ಎಂದರೆ ಅನರ್ಥವೇ ಹೊರತು ಗುಣ ಹೀನನು ಗುಣವಂತನಾದರೆ ಅದು ಕ್ರಮವೇ! ಹಾಗಾದರೇನೆ ಸಿದ್ಧಿಯು ಲಭಿಸುವುದು

ಆತ್ಮೀಯಾನಿ ವಿಚಿತ್ರಾಣಿ ಭುವನಾನ್ಯಮರೋತ್ತಮಾಃ ।
ಪ್ರಯಾತ ನಾಸುಖಾಯೈಷಾ ಪ್ರಾಹ್ಲಾದೀ ಗುಣಿತೇಹ ವಃ ॥ ೫ ॥

ಶ್ರೀ ವಸಿಷ್ಠ ಉವಾಚ--

ಇತ್ಯುಕ್ತ್ವಾ ವಿಬುಧಾಂಸ್ತತ್ರ ಕ್ಷೀರೋದಾರ್ಣವ ವೀಚಿಷು ।
ಅಂತರ್ಧಾನಂ ಯಯೌ ದೇವಸ್ತಟತಾ ಪಿಚ್ಛಗುಚ್ಛವತ್ ॥ ೬ ॥

ಸೋಽಪಿ ಸಂಪೂಜಿತಹರಿಃ ಸುರೌಘೋಽ ವ್ರಜದಂಬರಂ ।
ಪುನರ್ಮಂದರ ನಿರ್ಧೂತಾತ್ಕಣಜಾಲ ಮಿವಾರ್ಣವಾತ್ ॥ ೭ ॥

ಪ್ರಹ್ಲಾದಂ ಪ್ರತಿ ಗೀರ್ವಾಣಾಸ್ತತಃ ಸ್ನಿಗ್ಧತ್ವಮಾಯಯುಃ ।
ಮಹಾಂತೋ ಯತ್ರ ನೋದ್ವಿಗ್ನಾ ಸ್ತತ್ರ ವಿಶ್ವಾಸವನ್ಮನಃ ॥ ೮ ॥

---

೫. ಹೀಗೆ ಪ್ರಹ್ಲಾದನು ಗುಣವಂತನಾದನಲ್ಲಾ ಇನ್ನೇನು ಅನರ್ಥವೋ ಎಂಬ ಚಿಂತೆಯನ್ನು ಬಿಟ್ಟು ನೀವೆಲ್ಲರೂ ನಿಮ್ಮ ನಿಮ್ಮ ವಿಚಿತ್ರ ವಾಸಸ್ಥಾನಗಳಿಗೆ ತೆರಳಿರಿ ಈ ವ್ಯತ್ಯಾಸದಿಂದ ನಿಮಗೆ ದುಃಖವೇನೂ ಇಲ್ಲ.

೬. ಶ್ರೀ ವಸಿಷ್ಠನು ಹೇಳಿದನು:- ದೇವತೆಗಳನ್ನು ಕುರಿತು ಹೀಗೆ ಹೇಳಿ ಸಮುದ್ರ ತೀರದಲ್ಲಿರುವ ಹೊಂಗೆಯ ಗಿಡಗಳ ಚಿಗುರುಗಳಂತಿರುವ ಸಮುದ್ರದ ತರಂಗಗಳಲ್ಲಿ ಸ್ವಾಮಿಯು ಮರೆಯಾದನು.

೭. ಆ ದೇವಗಣವೂ ಶ್ರೀ ಹರಿಯನ್ನು ಪೂಜೆಮಾಡಿ ಮಂದರ ಪರ್ವತವು ಕಡೆಯುತ್ತಿರುವ ಸಮುದ್ರದಿಂದ ಮೇಲೆ ಹಾರುವ ಜಲಕಣಗಳಂತೆ ಆಕಾಶವನ್ನು ಸೇರಿದರು.

೮. ಅಂದಿನಿಂದ ದೇವತೆಗಳೆಲ್ಲರೂ ಪ್ರಹ್ಲಾದನಲ್ಲಿ ಸ್ನೇಹವುಳ್ಳವರಾದರು. ಮಹಾತ್ಮರ ಮನಸ್ಸು ಎಲ್ಲಿ ಆತಂಕ ಪಡುವುದಿಲ್ಲವೋ ಅಲ್ಲಿ ವಿಶ್ವಾಸವನ್ನು ಮಾಡುವುದು.

ಪ್ರತ್ಯಹಂ ಪೂಜಯಾಮಾಸ ದೇವದೇವಂ ಜನಾರ್ದನಂ ।
ಮನಸಾ ಕರ್ಮಣಾ ವಾಚಾ ಪ್ರಹ್ಲಾದೋ ಭಕ್ತಿಮಾನಿತಿ ॥ ೯ ॥

ಅಥ ಪೂಜಾ ಪರಸ್ಯಾಸ್ಯ ಸಮವರ್ಧತ ಕಾಲಶಃ ।
ವಿವೇಕಾನಂದ ವೈರಾಗ್ಯವಿಭವ ಪ್ರಮುಖಾ ಗುಣಾಃ ॥ ೧೦ ॥

ನಾಭ್ಯನಂದದಸೌ ಭೋಗಪೂಗಂ ಶುಷ್ಕಮಿವ ದ್ರುಮಂ ।
ನ ಚಾರಮತ ಕಾಂತಾಸು ಮೃಗೋ ಲೋಕ ಮಹೀಷ್ವಿವ ॥ ೧೧ ॥

ನ ರೇಮೇ ಲೋಕಚರ್ಯಾಸು ಶಾಸ್ತ್ರಾರ್ಥ ಕಥನಾದೃತೇ ।
ನ ಜಾಯತೇ ರತಿಸ್ತಸ್ಯ ದೃಶ್ಯೇ ಸ್ಥಲ ಇವಾಬ್ಜಿನೀ ॥ ೧೨ ॥

ನ ವಿಶಶ್ರಾಮ ಚೇತೋಽಸ್ಯ ಭೋಗರೋಗಾನುರಂಜನೇ ।
ಮುಕ್ತಾಫಲಮಸಂಶ್ಲಿಷ್ಟಂ ಮುಕ್ತಾಫಲ ಇವಾಮಲೇ ॥ ೧೩ ॥

---

೯. ಪ್ರಹ್ಲಾದನೂ ದಿನ ದಿನವೂ ದೇವ ದೇವನಾದ ಜನಾರ್ದನನನ್ನು ಮನಸ್ಸಿನಿಂದಲೂ ಕರ್ಮದಿಂದಲೂ ವಾಕ್ಕಿನಿಂದಲೂ ಪರಮ ಭಕ್ತಿಯುಕ್ತನಾಗಿ ಪೂಜಿಸುತ್ತಿದ್ದನು.

೧೦. ಹೀಗೆ ಪೂಜಾ ಪರನಾಗಿರುವ ಆತನಿಗೆ ಕಾಲಕ್ರಮದಲ್ಲಿ ವಿವೇಕ ಆನಂದ ವೈರಾಗ್ಯ ವಿಭವ ಮೊದಲಾದ ಗುಣಗಳೆಲ್ಲವೂ ಲಭಿಸಿದುವು.

೧೧. ಆತನು ಒಣಗಿದ ಮರದಂತೆ ಭೋಗ ವಸ್ತುಗಳನ್ನು ಶುಷ್ಕವಾಗಿ ಕಾಣುತ್ತ ಕಾಂತಾರತಿಯನ್ನೂ ಬಿಟ್ಟು ಊರಿನಲ್ಲಿರುವ ಜಿಂಕೆಯಂತೆ ಇದ್ದನು.

೧೨. ಆತನಿಗೆ ಶಾಸ್ತ್ರಾರ್ಥ ವಿಚಾರದಲ್ಲಿ ಮಾತ್ರ ರತಿಯೇ ಹೊರತು ಲೋಕ ವ್ಯಾಪಾರಗಳಲ್ಲಿ ಇರಲಿಲ್ಲ. ಸ್ಥಳದಲ್ಲಿ ಹುಟ್ಟಿದ ಕಮಲಲತೆಯಂತೆ ಆತನಿಗೆ ಜಗತ್ತಿನಲ್ಲಿ ಆಸಕ್ತಿಯು ಹುಟ್ಟಲಿಲ್ಲ.

೧೩. ಕೊರೆಯದಿರುವ ಮುತ್ತು ಮುತ್ತೊಂದು ಮುತ್ತಿನೊಡನೆ ಸೇರದಿರುವಂತೆ ಆತನ ಮನಸ್ಸು ಭೋಗಗಳೆಂಬ ರೋಗಗಳಲ್ಲಿ ಆನಂದವನ್ನು ಪಡೆಯಲಿಲ್ಲ.

ತ್ಯಕ್ತಭೋಗಾದಿಕಲನಂ ವಿಶ್ರಾಂತಿಮನುಪಾಗತಂ ।
ಚೇತಃ ಕೇವಲಮಸ್ಯಾಸೀದ್ದೋಲಾಯಾಮಿವ ಯೋಜಿತಂ ॥ ೧೪ ॥

ಪ್ರಾಹ್ಲಾದೀಂ ತಾಂ ಸ್ಥಿತಿಂ ವಿಷ್ಣುರ್ದೇವಃ ಕ್ಷೀರೋದಮಂದಿರಾತ್ ।
ವಿವೇದ ಸರ್ವಗತಯಾ ಧಿಯಾ ಪರಮ ಕಾಂತಯಾ ॥ ೧೫ ॥

ಅಥ ಪಾತಾಲಮಾರ್ಗೇಣ ವಿಷ್ಣುರಾಹ್ಲಾದಿತಾಗ್ರತಃ ।
ಪೂಜಾ ದೇವಗೃಹಂ ತಸ್ಯ ಪ್ರಹ್ಲಾದಸ್ಯ ಸಮಾಯಯೌ ॥ ೧೬ ॥

ವಿಜ್ಞಾಯಾಭ್ಯಾಗತಂ ದೇವಂ ಪೂಜಯಾ ದ್ವಿಗುಣೇದ್ಧಯಾ ।
ದೈತ್ಯೇಂದ್ರಃ ಪುಂಡರೀಕಾಕ್ಷಮಾದರಾತ್ಪರ್ಯ ಪೂಜಯತ್ ॥ ೧೭ ॥

ಪೂಜಾ ಗೃಹಗತಂ ದೇವಂ ಪ್ರತ್ಯಕ್ಷಾವಸ್ಥಿತಂ ಹರಿಂ ।
ಪ್ರಹ್ಲಾದಃ ಪರಮಪ್ರೀತೋ ಗಿರಾ ತುಷ್ಟಾವ ಪುಷ್ಟಯಾ ॥ ೧೮ ॥

---

೧೪. ಹೀಗೆ ಆತನ ಮನಸ್ಸು ಭೋಗ ಜಾತವನ್ನು ಬಿಟ್ಟಿದ್ದರೂ ಇನ್ನೂ ಪರಮ ವಿಶ್ರಾಂತಿಯನ್ನು ಪಡೆದಿರಲಿಲ್ಲವಾಗಿ ಉಯ್ಯಾಲೆಯಲ್ಲಿರುವಂತೆ ತೂಗುತ್ತಿತ್ತು.

೧೫. ಪ್ರಹ್ಲಾದನ ಆ ಸ್ಥಿತಿಯನ್ನು ಮಹಾವಿಷ್ಣುವು ಕ್ಷೀರ ಸಮುದ್ರದಲ್ಲಿಯೇ ಇದ್ದುಕೊಂಡು ಸರ್ವಗತವೂ ಶುದ್ಧ ಸಾತ್ವಿಕವೂ ಆದ ತನ್ನ ಬುದ್ಧಿಯಿಂದ ತಿಳಿದು ಕೊಂಡನು.

೧೬. ಜಗದಾಹ್ಲಾದ ಕರನಾದ ಮಹಾ ವಿಷ್ಣುವು ಪಾತಾಳ ಮಾರ್ಗದಿಂದ ಆ ಪ್ರಹ್ಲಾದನ ದೇವ ಪೂಜಾ ಮಂದಿರಕ್ಕೆ ಬಂದನು.

೧೭. ದೇವದೇವನು ಬಂದಿರುವುದನ್ನು ತಿಳಿದು ದೈತ್ಯೇಂದ್ರನು ಪುಂಡರೀ ಕಾಕ್ಷನಿಗೆ ಒಂದಕ್ಕೆರಡರಷ್ಟು ಪೂಜೆಯನ್ನು ಆದರದಿಂದ ಒಪ್ಪಿಸಿದನು.

೧೮. ತನ್ನ ಪೂಜಾ ಮಂದಿರದಲ್ಲಿ ಎದುರಿಗೆ ನಿಂತಿರುವ ಶ್ರೀ ಹರಿಯನ್ನು ಪ್ರಹ್ಲಾದನು ಪರಮ ಪ್ರೀತಿಯಿಂದ ಗಂಭೀರ ವಚನಗಳಿಂದ ಸ್ತುತಿಸಿದನು.

ಪ್ರಹಾದ ಉವಾಚ—

ತ್ರಿಭುವನ ಭವನಾಭಿರಾಮ ಕೋಶಂ ।
ಸಕಲ ಕಲಂಕಹರಂ ಪರಂ ಪ್ರಕಾಶಂ ॥
ಅಶರಣಶರಣಂ ಶರಣ್ಯಮೀಶಂ ।
ಹರಿಮಜಮಚ್ಯುತಮೀಶ್ವರಂ ಪ್ರಪದ್ಯೇ ॥ ೧೯ ॥

ಕುವಲಯದಲ ನೀಲ ಸನ್ನಿಕಾಶಂ
ಶರದಮಲಾಂಬರ ಕೋಟರೋಪಮಾನಂ ॥
ಭ್ರಮರ ತಿಮಿರ ಕಜ್ಜಲಾಂಜನಾಭಂ ।
ಸರಸಿಜ ಚಕ್ರಗದಾಧರಂ ಪ್ರಪದ್ಯೇ ॥ ೨೦ ॥

ವಿಮಲಮಲಿಕಲಾಪ ಕೋಮಲಾಂಗಂ
ಸಿತಜಲ ಪಂಕಜ ಕುಡ್ಮಲಾಭಶಂಖಂ !
ಶ್ರುತಿ ರಣಿತ ವಿರಂಚಿಚಂಚರೀಕಂ ।
ಸ್ವಹೃದಯ ಪದ್ಮದಲಾಶ್ರಯಂ ಪ್ರಪದ್ಯೇ ॥ ೨೧ ॥

---

೧೯. ಪ್ರಹ್ಲಾದನು ಹೇಳಿದನು:- ತ್ರಿಭುವನಗಳೂ ಇರುವ ಸುಂದರ ಮಂದಿರ ನಾದವನೇ, ಸಮಸ್ತ ದೋಷಗಳನ್ನೂ ನಿವಾರಿಸತಕ್ಕವನೇ, ಪರಾತ್ಪರನೇ, ಸ್ವಯಂ ಪ್ರಕಾಶನೇ, ಅಶರಣ ಶರಣನೇ, ಶರಣರನ್ನ ಕಾಪಾಡುವವನೇ, ಪ್ರಭುವೇ, ಹರಿಯೇ, ಅಜನೇ, ಅಚ್ಯುತನೇ, ಈಶ್ವರನೇ ನಿನ್ನನ್ನು ಆಶ್ರಯಿಸುವೆನು.

೨೦. ಕುವಲಯದಳದಂತೆ ನೀಲಿಯ ಮನೋಹರ ಕಾಂತಿಯುಳ್ಳವನೇ, ಶರದೃತುವಿನ ನಿರ್ಮಲವಾದ ಆಕಾಶದಂತೆ ಬಣ್ಣವುಳ್ಳವನೇ, ಭ್ರಮರ ತಿಮಿರ ಕಜ್ಜಲಗಳಂತೆ ಕಪ್ಪಾದವನೇ, ಕಮಲ ಚಕ್ರಗದೆಗಳನ್ನು ಧರಿಸಿದವನೇ, ನಿನ್ನನ್ನು ಆಶ್ರಯಿಸುವೆನು.

೨೧. ಗುಣತ್ರಯ ಸಂಬಂಧವಿಲ್ಲದವನೇ, ದುಂಬಿಗಳ ಗುಂಪಿನಂತಿರುವ ಕೋಮಲ ದೇಹವುಳ್ಳವನೇ, ಬಿಳಿದಾವರೆಯ ಮೊಗ್ಗಿನಂತಿರುವ ಶಂಖವನ್ನು ಧರಿಸಿದವನೇ, ವೇದ ಘೋಷವೆಂಬ ಝುಂಕಾರವನ್ನು ಮಾಡುವ ಬ್ರಹ್ಮನೆಂಬ ದುಂಬಿಯನ್ನು ನಿನ್ನ ನಾಭಿ ಕಮಲದಲ್ಲಿ ಇಟ್ಟುಕೊಂಡಿರುವವನೇ, ನನ್ನ ಹೃದಯ ಕಮಲದಲ್ಲಿ ನೆಲಸಿರುವವನೇ, ನಿನ್ನನ್ನು ಆಶ್ರಯಿಸುವೆನು.

ಸಿತನಖ ಗಣತಾರಕಾವ ಕೀರ್ಣಂ ।
　　ಸ್ಮಿತಧವಲಾನನ ಪೀವರೇಂದು ಬಿಂಬಂ ॥
ಹೃದಯಮಣಿ ಮರೀಚಿ ಜಾಲಗಂಗಂ ।
　　ಹರಿಶರದಂಬರಮಾತತಂ ಪ್ರಪದ್ಯೇ　　॥ ೨೨ ॥

ಅವಿರಲಕೃತ ಸೃಷ್ಟಿ ಸರ್ವಲೀನಂ ।
　　ಸತತಮಜಾತಮವರ್ಧನಂ ವಿಶಾಲಂ ॥
ಗುಣಶತ ಜರಠಾಭಿಜಾತ ದೇಹಂ ।
　　ತರುದಲಶಾಯಿ ನಮರ್ಭಕಂ ಪ್ರಪದ್ಯೇ　　॥ ೨೩ ॥

ನವ ವಿಕಸಿತ ಪದ್ಮರೇಣುಗೌರಂ
　　ಸ್ಫುಟ ಕಮಲಾವಪುಷಾ ವಿಭೂಷಿತಾಂಗಂ ।
ದಿನಶಮ ಸಮಯಾರುಣಾಂಗ ರಾಗಂ ।
　　ಕನಕನಿಭಾಂಬರ ಸುಂದರಂ ಪ್ರಪದ್ಯೇ　　॥ ೨೪ ॥

---

೨೨. ಶುಭ್ರವಾದ ನಖಗಳೆಂಬ ನಕ್ಷತ್ರಗಳಿಂದ ವ್ಯಾಪ್ತವಾಗಿ ನಗೆಯೆಂಬ ಬೆಳುದಿಂಗಳು ಚೆಲ್ಲುವ ಪೂರ್ಣ ಚಂದ್ರ ಬಿಂಬವುಳ್ಳದಾಗಿ ಪಕ್ಷದಲ್ಲಿರುವ ಕೌಸ್ತುಭ ಮಣಿಯ ಕಾಂತಿಯೆಂಬ ಗಂಗಾನದಿಯಿಂದ ಕೂಡಿರುವ ಹರಿ ಎಂಬ ವಿಸ್ತಾರವಾದ ಶರದಾಕಾಶವನ್ನು ಆಶ್ರಯಿಸುವೆನು.

೨೩. ನಿರಂತರವಾಗಿ ಆಗುತ್ತಿರುವ ಸೃಷ್ಟಿಗಳನ್ನೆಲ್ಲ ತನ್ನಲ್ಲಿಯೇ ವಲೀನ ಮಾಡಿ ಕೊಳ್ಳುತ್ತಿದ್ದರೂ ತಾನು ಯಾವಾಗಲೂ ಅಜನಾಗಿಯೇ ಇರುವವನನ್ನು, ವೃದ್ಧಿಯನ್ನು ಹೊಂದದವನಾದರೂ ವಿಶಾಲನಾಗಿರುವವನನ್ನು, ಸ್ವಮಾಯೆಯನ್ನು ಆಶ್ರಯಿಸಿ ಗುಣ ಸಂಬಂಧ ದೇಹಗಳನ್ನು ಅನೇಕವಾಗಿ ಪಡೆದ ಪುರಾಣನನ್ನು, ಕಲ್ಪಾಂತದಲ್ಲಿ ವಟ ಪತ್ರಶಾಯಿಯಾಗುವ ಬಾಲ ಮುಕುಂದನನ್ನು ಆಶ್ರಯಿಸುವೆನು.

(ಸತ್ತ್ವಾದಿ ಮಾಯಾಗುಣ ಪ್ರಯುಕ್ತೈಃ ಗುಣಶತೈಃ ಅನಂತ ಕಲ್ಯಾಣಗುಣೈಃ ಜರಠೋ ಅತಿಚಿರಂತನೋ ಅಭಿಜಾತಃ ಸುಂದರೋದೇಹೋಯಸ್ಯ ತಥಾ ವಿಧಂ.)

ದಿತಿಸುತನಲಿನೀ ತುಷಾರಪಾತಂ
ಸುರನಲಿನೀ ಸತತೋದಿತಾರ್ಕ ಬಿಂಬಂ ।
ಕಮಲಜ ನಲಿನೀ ಜಲಾವ ಪೂರಂ ।
ಹೃದಿ ನಲಿನೀನಿಲಯಂ ವಿಭುಂ ಪ್ರಪದ್ಯೇ ॥ ೨೫ ॥

ತ್ರಿಭುವನ ನಲಿನೀಸಿತಾರವಿಂದಂ ।
ತಿಮಿರಸಮಾನ ವಿಮೋಹದೀಪ ಮಗ್ರ್ಯಂ ।
ಸ್ಫುಟತರಮಜಡಂ ಚಿದಾತ್ಮತತ್ವಂ
ಜಗದಖಿಲಾರ್ತಿಹರಂ ಹರಿಂ ಪ್ರಪದ್ಯೇ ॥ ೨೬ ॥

---

೨೪. ಹೊಸದಾಗಿ ಅರಳುತ್ತಿರುವ ಪದ್ಮದಿಂದ ಉದುರುವ ರೇಣುಗಳಿಂದ ಗೌರವರ್ಣನಾಗಿರುವವನನ್ನು, ಹೃದಯದಲ್ಲಿರುವ ಮಹಾಲಕ್ಷ್ಮಿಯ ಅರುಣ ಕಾಂತಿಯಿಂದ ಸುಂದರವಾಗಿರುವ ದೇಹವುಳ್ಳವನನ್ನು, ಸಂಧ್ಯಾರಾಗದಂತೆ ಸುಂದರವಾದ ಅಂಗರಾಗವುಳ್ಳವನನ್ನು, ಸುವರ್ಣದಂತಿರುವ ಪೀತಾಂಬರದಿಂದ ಸುಂದರನಾಗಿರುವನನ್ನು ಆಶ್ರಯಿಸುವೆನು.

೨೫. ದೈತ್ಯ ಕಮಲಗಳಿಗೆ ಹಿಮ ವರ್ಷನಾದವನೇ, ಸುರ ಕಮಲಗಳಿಗೆ ಉದಯಾರ್ಕ ಬಿಂಬನಾದವನೇ, ಬ್ರಹ್ಮನನ್ನು ಪಡೆದ ಕಮಲಕ್ಕೆ ಸರೋವರನಾದವನೇ, ಹೃದಯ ಕಮಲದಲ್ಲಿ ನೆಲಸಿರುವನೇ, ವಿಭುವೇ, ನಿನ್ನನ್ನು ಆಶ್ರಯಿಸುವೆನು.

೨೬. ತ್ರಿಭುವನವೆಂಬ ಕಮಲವನಕ್ಕೆ ಸೂರ್ಯನಂತಿರುವವನೇ, ತಿಮಿರ ಸಮಾನವಾದ ಮಹಾಮೋಹಕ್ಕೆ ದೀಪನಾದವನೇ, ಸರ್ವ ಶ್ರೇಷ್ಠನಾದವನೇ, ಪ್ರಕಾಶರೂಪನಾದವನೇ, ಚೇತನಸ್ವರೂಪನಾದವನೇ, ಚಿದಾಕಾರನಾದ ಪರಮಾತ್ಮನೇ, ಜಗತ್ತಿನ ಆರ್ತಿಗಳನ್ನೆಲ್ಲ ಪರಿಹರಿಸುವವನೇ, ಶ್ರೀಹರಿಯೇ, ನಿನ್ನನ್ನು ಆಶ್ರಯಿಸುವೆನು.

(ತ್ರಿಭುವನ ನಲಿನ್ಯಾಃ ಸಿತೇ ಅರವಿಂದೇ ಕರೇಯಸ್ಯ ಸೂರ್ಯಸ್ತಥಾಭೂತಂ - - ಸ್ಫುಟತರು ನಿತ್ಯಸ್ವ ಪ್ರಕಾಶಂ ತಾ. ಪ್ರ.)

ಶ್ರೀ ವಸಿಷ್ಠ ಉವಾಚ--

ಇತಿಗುಣ ಬಹುಲಾಬಿ ರ್ವಾಗ್ಭಿರಭ್ಯರ್ಚಿತೋಽ ಸೌ ।
ಹರಿರಸುರ ವಿನಾಶಃ ಶ್ರೀನಿಷಣ್ಣಾಂಸದೇಶಃ ॥
ಜಲದ ಇವ ಮಯೂರಂ ಪ್ರೀತಿಮಾನ್ ಪ್ರೀಯಮಾಣಂ
ಕುವಲಯದಲನೀಲಃ ಪ್ರತ್ಯುವಾಚಾಸುರೇಂದ್ರಂ ॥ ೨೭ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ಉಪಶಮ ಪ್ರಕರಣೇ "ನಾರಾಯಣಾಗಮನಂ" ನಾಮ ತ್ರಯಸ್ತ್ರಿಂಶಃ ಸರ್ಗಃ

---

೨೭. ಶ್ರೀ ವಸಿಷ್ಠನು ಹೇಳಿದನು:- ಹೀಗೆ ಬಹುಗಣ ಯುಕ್ತವಾದ ವಾಕ್ಕುಗಳಿಂದ ಸ್ತೋತ್ರಮಾಡಿಸಿಕೊಂಡು ಅಸುರ ವಿನಾಶಕನೂ ಲಕ್ಷ್ಮೀ ಸಮಾಲಿಂಗಿತ ದೇಹನೂ ಆದ ಶ್ರೀಹರಿಯು ಮಯೂರವನ್ನು ಸಂತೋಷಗೊಳಿಸುವ ಮೇಘದಂತೆ ಪ್ರಹ್ಲಾದನನ್ನು ಸಂತೋಷಗೊಳಿಸುತ್ತ ಕುವಲಯದಳ ಶ್ಯಾಮನಾದ ಮಹಾ ವಿಷ್ಣುವು ಆದೈತ್ಯೇಂದ್ರನಿಗೆ ಹೀಗೆ ಹೇಳಿದನು :

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಉಪಶಮ ಪ್ರಕರಣದಲ್ಲಿ ನಾರಾಯಣಾಗಮನ ಎಂಬ ಮೂವತ್ತ ಮೂರನೆಯ ಸರ್ಗವು.

ಚತುಸ್ತ್ರಿಂಶಃ ಸರ್ಗಃ

ಶ್ರೀ ಭಗವಾನುವಾಚ:—

ವರಂ ಗುಣನಿಧೇ ದೈತ್ಯಕುಲ ಚೂಡಾಮುಹಾಮಣೇ ।
ಗೃಹಾಣಾಭಿಮತಂ ಭೂಯೋ ಜನ್ಮ ದುಃಖೋಪಶಾಂತಯೇ ॥ ೧ ॥

ಪ್ರಹ್ಲಾದ ಉವಾಚ:—

ಸರ್ವಸಂಕಲ್ಪಫಲದ ಸರ್ವಲೋಕಾಂತರಸ್ಥಿತ ।
ಯದುದಾರತಮಂ ವೇತ್ಸಿ ತದೇವಾದಿಶ ಮೇ ವಿಭೋ ॥ ೨ ॥

ಶ್ರೀ ಭಗವಾನುವಾಚ:—

ಸರ್ವ ಸಂಭ್ರಮ ಸಂಶಾಂತ್ಯೈ ಪರಮಾಯ ಫಲಾಯ ಚ ।
ಬ್ರಹ್ಮ ವಿಶ್ರಾಂತಿ ಪರ್ಯಂತೋ ವಿಚಾರೋಽಸ್ತು ತವಾನಘ ॥ ೩ ॥

ಮೂವತ್ತ ನಾಲ್ಕನೆಯ ಸರ್ಗ

೧. ಶ್ರೀ ಭಗವಂತನು ಹೇಳಿದನು:- ದೈತ್ಯ ಕುಲ ಶಿರೋಮಣಿಯಾದ ಪ್ರಹ್ಲಾದನೆ, ಸಕಲ ಸದ್ಗುಣ ನಿಧಿಯೇ, ಮತ್ತೆ ಜನ್ಮವೆತ್ತುವ ದುಃಖವು ಉಪಶಾಂತಿಯಾಗುವಂತೆ ವರವನ್ನು ತೆಗೆದುಕೋ.

೨. ಶ್ರೀ ಪ್ರಹ್ಲಾದನು ಹೇಳಿದನು:- ಎಲೈ ವಿಭುವೆ, ಸರ್ವ ಸಂಕಲ್ಪಗಳ ಫಲವನ್ನು ಕೊಡತಕ್ಕವನೆ, ಸರ್ವಲೋಕಗಳಿಗೂ ಅಂತರ್ಯಾಮಿಯಾದವನೆ, ಯಾವುದು ಬಹಳ ಸರಿಯೆಂದು ನಿನಗೆ ತೋರುವುದೋ ಅದನ್ನು ಅಪ್ಪಣೆಕೊಡು.

೩. ಶ್ರೀ ಭಗವಂತನು ಹೇಳಿದನು:- ಎಲೈ ಪುಣ್ಯವಂತನೆ, ಸಮಸ್ತವಾದ ಸಂಸಾರಾಡಂಬರವೆಲ್ಲವೂ ಶಾಂತವಾಗಿ ಉತ್ತಮೋತ್ತಮವಾದ ಫಲವಾಗಲೆಂದು ನೀನು ನಿನ್ನ ವಿಚಾರವನ್ನು ಬ್ರಹ್ಮಣಿಸ್ಥಿತನಾಗುವವರೆಗೂ ನಡೆಸು.

ಶ್ರೀ ವಸಿಷ್ಠ ಉವಾಚ:—

ಇತ್ಯುಕ್ತ್ವಾ ದಿತಿಪುತ್ರೇಂದ್ರಂ ವಿಷ್ಣುರಂತರಧೀಯತ ।
ಕೃತ ಘರ್ಘರನಿರ್ಹ್ರಾದಸ್ತರಂಗ ಸ್ತೋಯ ಧೇರಿವ ॥ ೪ ॥

ವಿಷ್ಣಾವಂತರ್ಹಿತೇ ದೇವೇ ಪೂಜಾಯಾಂ ಕುಸುಮಾಂಜಲಿಂ ।
ಪಾಶ್ಚಾತ್ಯಂ ದಾನವಸ್ತ್ಯಕ್ತ್ವಾ ಮಣಿ ರತ್ನ ಪರಿಷ್ಕೃತಂ ॥ ೫ ॥

ಪದ್ಮಾಸನಸ್ಥೋऽತಿಮುದಾ ಹ್ಯುಪವಿಶ್ಯ ವರಾಸನೇ ।
ಸ್ತೋತ್ರ ಪಾಠ ವಿಧಾವಂತಶ್ಚಿಂತಯಾಮಾಸ ಚೇತಸಾ ॥ ೬ ॥

ವಿಚಾರವಾನೇವ ಭವಾನ್ಭವತ್ವಿತಿ ಭವಾರಿಣಾ ।
ದೇವೇನೋಕ್ತೋऽಸ್ಮಿ ತೇನಾಂತಃ ಕರೋಮ್ಯಾತ್ಮ ವಿಚಾರಣಂ ॥ ೭ ॥

ಕಿಮಹಂ ನಾಮ ತಾವತ್ಸ್ಯಾಂ ಯೋऽಸ್ಮಿನ್ಭುವನಡಂಬರೇ ।
ವಚ್ಮಿ ಗಚ್ಛಾಮಿ ತಿಷ್ಠಾಮಿ ಪ್ರಯತ್ನೇನಾಹರಾಮಿ ಚ ॥ ೮ ॥

---

೪. ಶ್ರೀ ವಸಿಷ್ಠನು ಹೇಳಿದನು:- ಪ್ರಹ್ಲಾದನಿಗೆ ಹೀಗೆ ಹೇಳಿ, ಗುಡುಗಿನಂತೆ ಶಬ್ದಮಾಡಿ ತರಂಗವು ಸಮುದ್ರದಲ್ಲಿಯೇ ಲೀನವಾಗುವಂತೆ ಮಹಾವಿಷ್ಣುವು ಅಂತರ್ಧಾನವನ್ನು ಹೊಂದಿದನು.

೫. ಹೀಗೆ ಮಹಾವಿಷ್ಣುವು ಅಂತರ್ಧಾನಹೊಂದಲು, ಆ ದಾನವೇಂದ್ರನು, ದಿವ್ಯರತ್ನ ಸಹಿತವಾದ ಪುಷ್ಪಾಂಜಲಿಯನ್ನು ಒಪ್ಪಿಸಿ ಪೂಜೆಯನ್ನು ಮುಗಿಸಿದನು.

೬. ಅತಿ ಸಂತೋಷದಿಂದ ಉತ್ತಮವಾದ ಪೀಠದಲ್ಲಿ ಪದ್ಮಾಸನ ಹಾಕಿಕೊಂಡು ಕುಳಿತು, ಸ್ತೋತ್ರ ಪಾಠಗಳನ್ನೆಲ್ಲ ಮುಗಿಸಿ, ಮನಸ್ಸಿನಲ್ಲಿಯೇ ಹೀಗೆ ಯೋಚಿಸಿದನು:-

೭. ಭವನಾಶಕನಾದ ಭಗವಂತನು ನೀನು ವಿಚಾರಮಾಡುತ್ತಿರು ಎಂದು ಅಪ್ಪಣೆ ಕೊಡಿಸಿರುವನು. ಆದ್ದರಿಂದ ನಾನು ಮನಸ್ಸಿನಲ್ಲಿಯೇ ಆತ್ಮವಿಚಾರಪರನಾಗುವೆನು.

೮. ನಾನು ಎನ್ನುವುದಾದರೂ ಏನು ? ಈ ಜಗತ್ತಿನ ಆಡಂಬರದೊಳಗೆ ಸಿಕ್ಕಿಕೊಂಡಿರುವ ನಾನು ಮಾತನಾಡುತ್ತಿರುವೆನು : ಓಡಾಡುತ್ತಿರುವೆನು. ಸ್ಥಿರವಾಗಿರುವೆನೆಂದುಕೊಂಡಿರುವೆನು. ಬೇಕಾದುದನ್ನು ಪ್ರಯತ್ನಪಟ್ಟು ತರುತ್ತಿರುವೆನು.

ಜಗತ್ತಾವದಿದಂ ನಾಹಂ ಸವೃಕ್ಷತೃಣ ಪರ್ವತಂ ।
ಯದ್ಬಾಹ್ಯಮುಲವುತ್ಯಂತಂ ತತ್ಸ್ಯಾಂ ಕಥಮುಹಂ ಕಿಲ ॥ ೯ ॥

ಅಸನ್ನಭ್ಯುದಿತೋ ಮೂಕಃ ಪವನೈಃ ಸ್ಫುರಿತಃ ಕ್ಷಣಂ ।
ಕಾಲೇನಾಲ್ಪೇನ ವಿಲಯೀ ದೇಹೋ ನಾಹಮಚೇತನಃ ॥ ೧೦ ॥

ಜಡಯಾ ಕರ್ಣಶಷ್ಕುಲ್ಯಾ ಕಲ್ಪ್ಯಮಾನಃ ಕ್ಷಣಕ್ಷಯೀ ।
ಶೂನ್ಯಾಕೃತಿಃ ಶೂನ್ಯಭವಃ ಶಬ್ದೋ ನಾಹಮಚೇತನಃ ॥ ೧೧ ॥

ತ್ವಚಾ ಕ್ಷಣವಿನಾಶಿನ್ಯಾ ಪ್ರಾಪ್ಯಮಪ್ರಾಪ್ಯಮಪ್ಯಥ ।
ಚಿತ್ಪ್ರಸಾದೋಪಲಬ್ಧಾತ್ಮಸ್ಪರ್ಶನಂ ನಾಸ್ಮ್ಯಚೇತನಂ ॥ ೧೨ ॥

---

೯. ವೃಕ್ಷಗಳು, ತೃಣಗಳು, ಪರ್ವತಗಳು ಎಲ್ಲವೂ ಕೂಡಿರುವ ಈ ಜಗತ್ತು ನಾನಲ್ಲ. ಇದು ಕೇವಲ ಬಾಹ್ಯವು ಅತ್ಯಂತವಾಗಿ ಜಡವಾಗಿರುವುದರಿಂದ ಮಲ ಸ್ವರೂಪವು ಇಂತಹ ಈ ಜಗತ್ತು ನಾನೆಂತಾದೇನು?

೧೦. ದೇಹವೂ ನಾನಲ್ಲ. ದೇಹವು ಯಾವಾಗಲೂ ಇರುವ ಪದಾರ್ಥವಲ್ಲ. ಹುಟ್ಟಿ ಬಂದಿರುವುದು (ಅದರಿಂದ ಸಾಯಲೂ ಬೇಕಾಗಿರುವುದು) ಮೂಕವಾಗಿ ಮಾತನ್ನೂ ಆಡಲಾರದು. ಕೊಂಚ ಹೊತ್ತು ಪ್ರಾಣಾದಿವಾಯುಗಳಿಂದ ಪ್ರೇರಿತ ವಾಗಿ ಚೇಷ್ಟಿಸುವುದು. ಕೊಂಚಕಾಲವಿದ್ದು ನಾಶವಾಗುವುದು. (ಇಂತಹ) ದೇಹವು ನಾನೆಂತಾಗುವೆನು ?

೧೧. ಅಚೇತವಾದ ಶಬ್ದವೂ ನಾನಲ್ಲ. ಶಬ್ದವು ಜಡವಾದ ಶ್ರೋತ್ರ-ಇಂದ್ರಿಯ ದಿಂದ ಗೃಹೀತವಾಗಿ ಕ್ಷಣ ಕಾಲವಿದ್ದು ನಾಶವಾಗುವುದು. ಅದು ಆಕಾರ ಶೂನ್ಯವು, ಶೂನ್ಯವಾದ ಆಕಾಶದಲ್ಲಿ ಹುಟ್ಟುವುದು. ಇಂತಹ ಶಬ್ದವು ನಾನೆಂತಾಗುವೆನು ?

೧೨. ಸ್ಪರ್ಶವೂ ನಾನಲ್ಲ. ಕ್ಷಣ ವಿನಾಶಿಯಾದ ತ್ವಗಿಂದ್ರಿಯದಿಂದ ತೋರುವ ಈ ಸ್ಪರ್ಶವು ಒಂದು ಕಾಲದಲ್ಲಿ ಪ್ರಾಪ್ಯವಾಗಿಯೂ ಇನ್ನೊಂದು ಕಾಲದಲ್ಲಿ ಅಪ್ರಾಪ್ಯ ವಾಗಿಯೂ ಇರುವುದು. ಜ್ಞಾನವು ಪ್ರಸನ್ನವಾಗಿರುವಾಗ ಮಾತ್ರ ಇದು ಗೃಹೀತ ವಾಗುವುದು. ಆದರಿಂದ, ಅಚೇತನವಾದ ಈ ಸ್ಪರ್ಶವೆಂತು ನಾನಾಗುವೆನು ?

ಬದ್ಧಾತ್ಮಾ ಜಿಹ್ವಯಾ ತುಚ್ಛೋ ಲೋಲಯಾ ಲೋಲಸತ್ತಯಾ ।
ಸ್ವಲ್ಪಸ್ಪಂದೋ ದ್ರವ್ಯನಿಷ್ಠೋ ರಸೋ ನಾಹಮಚೇತನಃ ॥ ೧೩ ॥

ದೃಶ್ಯದರ್ಶನಯೋರ್ಲೀನಂ ಕ್ಷಯಿಕ್ಷಣ ವಿನಾಶಿನೋಃ ।
ಕೇವಲೇ ದ್ರಷ್ಟರಿ ಕ್ಷೀಣಂ ರೂಪಂ ನಾಹಮಚೇತನಂ ॥ ೧೪ ॥

ನಾಸಯಾಪ್ಯಂಧ ಜಡಯಾ ಕ್ಷಯಿಣ್ಯಾ ಪರಿಕಲ್ಪಿತಃ ।
ಪೇಲವೋಽನಿಯತಾಕಾರೋ ಗಂಧೋ ನಾಹಮಚೇತನಃ ॥ ೧೫ ॥

ನಿರ್ಮಮೋಽಮನನಃ ಶಾಂತೋ ಗತಪಂಚೇಂದ್ರಿಯಭ್ರಮಃ ।
ಶುದ್ಧಚೇತನ ಏವಾಹಂ ಕಲಾಕಲನವರ್ಜಿತಃ ॥ ೧೬ ॥

---

೧೩. ರಸವೂ ನಾನಲ್ಲ. ಈ ರಸವೂ ಅಚೇತನವು. ಅನಿತ್ಯವಾಗಿಯೂ ಚಪಲವಾಗಿಯೂ ಇರುವ ನಾಲಗೆಯಿಂದ ಮಾತ್ರ ಗೊತ್ತಾಗುವ ಈ ರಸವು ದ್ರವ್ಯ ನಿಷ್ಠವಾಗುವುದರಿಂದ ಸ್ವತಂತ್ರವೂ ಅಲ್ಲ ಇದು ದೀರ್ಘಕಾಲ ವ್ಯಾಪಾರ ಮಾಡಲೂ ಆರದು ಇಂತಹ ಅಚೇತನವಾದ ರಸವೆಂತು ನಾನಾಗುವೆನು?

(ನಾಲಗೆಯ ಕೊನೆಯಿಂದ ಗಂಟಲುವರೆಗೆ ಹೋಗುವವರೆಗೆ ಮಾತ್ರ ಗೊತ್ತಾಗುವುದರಿಂದ ಇದು ಸ್ವಲ್ಪ ಸ್ಪಂದವು)

೧೪, ರೂಪವೂ ನಾನಲ್ಲ. ಕ್ಷಣ ಕಾಲದಲ್ಲಿ ವಿನಾಶವಾಗಿ ಹೋಗುವ ದೃಶ್ಯ ದರ್ಶನಗಳೆರಡನ್ನೂ ಆಶ್ರಯಿಸಿರುವ, ಶಾಶ್ವತವಲ್ಲದ ಈ ರೂಪವು ದ್ರಷ್ಟೃವೊಬ್ಬನೇ ಇದ್ದಾಗ ಇಲ್ಲದೆಯೇ ಹೋಗುವುದು. ಇಂತಹ ಅಚೇತನವಾದ ರೂಪವೆಂತು ನಾನಾಗುವೆನು ?

೧೫. ಗಂಧವೂ ನಾನಲ್ಲ. ಈ ಗಂಧವು ಅಂಧವೂ ಜಡವೂ ಅನಿತ್ಯವೂ ಶುದ್ಧವಾಗಿ ತುಚ್ಛವಾದುದು. ಅನಿಯತಾಕಾರವುಳ್ಳದು. ಇಂತಹ ಅಚೇತನ ಗಂಧವೆಂತು ನಾನಾಗುವೆನು?

೧೬. ಆದರಿಂದ ನಾನು ಈ ಪಂಚೇಂದ್ರಿಯಗಳೊಂದೂ ಅಲ್ಲ. ಮಮಕಾರ, ಅಹಂಕಾರವು ನಾನಲ್ಲ. ಮನಸ್ಸು ನಾನಲ್ಲ. ಶಾಂತನೂ ಸಂಕಲ್ಪ ವರ್ಜಿತನೂ ಆದ ಶುದ್ಧ ಚೇತನನು ನಾನು.

ಚೇತ್ಯ ವರ್ಜಿತ ಚಿನ್ಮಾತ್ರಮಹಮೇಷೋಽ ವಭಾಸಕಃ ।
ಸಬಾಹ್ಯಾಂಭ್ಯಂತರವ್ಯಾಪೀ ನಿಷ್ಕಲಾಮಲಸನ್ಮಯಃ ॥ ೧೭ ॥

ಅನೇನ ಚೇತನೇನೇಮೇ ಸರ್ವೇ ಘಟಪಟಾದಯಃ ।
ಸೂರ್ಯ್ಯಾಂತಾ ಅವಭಾಸಂತೇ ದೀಪೇನೋತ್ತಮ ತೇಜಸಾ ॥ ೧೮ ॥

ಆ ಇದಾನೀಂ ಸ್ಮೃತಂ ಸತ್ಯಮೇತತ್ತದಖಿಲಂ ಮಯಾ ।
ನಿರ್ವಿಕಲ್ಪ ಚಿದಾಭಾಸ ಏಷ ಆತ್ಮಾಸಿ ಸರ್ವಗಃ ॥ ೧೯ ॥

ಅನೇನೈತಾ ಸ್ಫುರಂತೀಹ ವಿಚಿತೇಂದ್ರಿಯ ವೃತ್ತಯಃ ।
ತೇಜಸಾಂತಃ ಪ್ರಕಾಶೇನ ಯಥಾಗ್ನಿ ಕಣಪಂಕ್ತಯಃ ॥ ೨೦ ॥

ಅನೇನೈತಾಃ ಸ್ಫುರಂತೀಹ ವಿಜಿತೇಂದ್ರಿಯ ಪಂಕ್ತಯಃ ।
ಸರ್ವಗೇನ ನಿದಾಘೇನ ಯಥಾ ಮಹಮರೀಚಿತಾಃ ॥ ೨೧ ॥

---

೧೭. ಚೇತ್ಯ (ದೃಶ್ಯ) ವರ್ಜಿತವಾಗಿರುವ ಚಿನ್ಮಾತ್ರ ಸ್ವರೂಪನು ನಾನು. ವಚೇತ್ಯವನ್ನೆಲ್ಲ ಪ್ರಕಾಶಗೊಳಿಸುವವನು ನಾನು. ಬಾಹ್ಯ, ಅಂತರಗಳಲ್ಲೆಲ್ಲ ತುಂಬಿರುವನು ನಾನು. ನಿಷ್ಕಲನೂ, ನಿರ್ಮಲನೂ, ಸನ್ಮಾತ್ರ ಸ್ವರೂಪನೂ ಆದವನು ನಾನು.

೧೮. ಚೆನ್ನಾಗಿ ಬೆಳಗುತ್ತಿರುವ ಚೇತನವೆಂಬ ಈ ದೀಪದಿಂದಲೇ ಘಟ ಪಟ ಮೊದಲಾಗಿ, ಸೂರ್ಯನವರೆಗೆ ಇರುವ ಸರ್ವ ಪದಾರ್ಥಗಳೂ ಬೆಳಗುತ್ತಿರುವುವು.

೧೯. ಆಹ ! ಯಥಾರ್ಥವಾದ ಅಂಶವು ಎಲ್ಲಾ ಈಗ ನೆನಪಿಗೆ ಬಂತು. ನಿರ್ವಿಕಲ್ಪನೂ ಚಿತ್ರಕಾಶ ಸ್ವರೂಪನೂ ಸರ್ವಗತನೂ ಆಗಿರುವ ಆತ್ಮನೇ ನಾನು !

೨೦. ಅಂತಃ ಪ್ರಕಾಶವುಳ್ಳ ಬೆಂಕಿಯಿಂದ ಕಿಡಿಗಳು ಗುಂಪು ಗುಂಪಾಗಿ ಹಾರಿ ಬರುವಂತೆ, ಈ ಆತ್ಮನಿಂದಲೇ ಚಿತ್ರ ವಿಚಿತ್ರಗಳಾದ ಇಂದ್ರಿಯ ವೃತ್ತಿಗಳೆಲ್ಲವೂ ಸ್ಫುರಿಸುವುವು.

೨೧. ಎಲ್ಲೆಲ್ಲಿಯೂ ವ್ಯಾಪಿಸಿರುವ ಗ್ರೀಷ್ಮದಿಂದ, ಮರುಮರೀಚಿಕೆಗಳು ತೋರುವಂತೆ, ಈ ಆತ್ಮನಿಂದಲೇ ಚಿತ್ರ ವಿಚಿತ್ರಗಳಾದ ಇಂದ್ರಿಯ ವೃತ್ತಿಗಳೆಲ್ಲವೂ ಸ್ಫುರಿಸುವುವು.

ಅನೇನೈತತ್ಪದಾರ್ಥಾನಾಂ ವಸ್ತುತ್ವಂ ಪ್ರತಿಪಾದ್ಯತೇ ।
ಶುಕ್ಲಾದಿ ಗುಣವತ್ತ್ವಂ ಸ್ವಂ ಪ್ರದೀಪೇನೇವ ವಾಸಸಾಂ ॥ ೨೨ ॥

ಅಸಾವೇವ ಹಿ ಭೂತನಾಂ ಸರ್ವೇಷಾಮೇವ ಜಾಗ್ರತಾಂ ।
ಸರ್ವಾನುಭವಿತಾ ಭೂಮಿರಾತ್ಮಾ ಮುಕುರವತ್ ಸ್ಥಿತಃ ॥ ೨೩ ॥

ತಸ್ಯೈಕಸ್ಯಾ ವಿಕಲ್ಪಸ್ಯ ಚಿದ್ದೀಪಸ್ಯ ಪ್ರಸಾದತಃ ।
ಉಷ್ಣೋಽರ್ಕಃ ಶಿಶಿರಶ್ಚಂದ್ರೋ ಘನೋಽದ್ರಿರ್ವಿದ್ರುತಂ ಪಯಃ ॥ ೨೪ ॥

ಸಾತತ್ಯೇನಾನು ಭೂತನಾಂ ಸರ್ವೇಷಾಂ ಚ ಜಗತ್ ಸ್ಥಿತೌ ।
ಏತತ್ಕಾರಣ ಮಾದ್ಯಂ ತತ್ಕಾರಣಂ ನಾಸ್ಯ ವಿದ್ಯತೇ ॥ ೨೫ ॥

---

೨೨. ಬಟ್ಟೆಗಳಲ್ಲಿರುವ ಬಿಳುಪು ಮೊದಲಾದ ಬಣ್ಣಗಳು ಬೆಳಕಿನಿಂದ ಕಣ್ಣಿಗೆ ಕಾಣುವಂತೆ, ಪ್ರಪಂಚಕವಾದ ಪದಾರ್ಥಗಳೆಲ್ಲದರ ವಸ್ತುತ್ವವು (ಅಸ್ತಿತ್ವವು) ಈ ಚೈತನ್ಯದಿಂದಲೇ ಪ್ರತಿಪಾದ್ಯವಾಗುವುದು.

೨೩. ಚೇತನಗಳಾದ ಸರ್ವ ಪ್ರಾಣಿಗಳಿಗೂ ಆಗುವ ಅನುಭವಗಳಿಗೆಲ್ಲಾ ಆತ್ಮನೇ ಆಶ್ರಯನು. ಆದರೂ ಸರ್ವ ಪ್ರತಿಬಿಂಬಗಳಿಗೂ ಆಶ್ರಯವಾಗಿದ್ದರೂ ಮುಕುರವು ಹೇಗೆ ನಿರಂಜನವಾಗಿರುವುದೋ ಹಾಗೆಯೇ ಆತ್ಮನೂ (ಸರ್ವಾನುಭವಾಶ್ರಯವಾಗಿದ್ದರೂ) ನಿರಂಜನನಾಗಿರುವನು.

೨೪. ನಿರ್ವಿಕಲ್ಪವಾಗಿ, ದೀಪದಂತೆ ಸ್ವಯಂ ಪ್ರಕಾಶವಾಗಿ ಬೆಳಗುತ್ತಿರುವ ಆ ಚಿತ್ತಿನ ಪ್ರಸಾರದಿಂದ, ಸೂರ್ಯನು ಬಿಸಿಯಾಗಿಯೂ ಚಂದ್ರನು ತಂಪಾಗಿಯೂ ಬೆಟ್ಟವು ಗಟ್ಟಿಯಾಗಿಯೂ ನೀರು ದ್ರವವಾಗಿಯೂ ಇರುವುದು.

೨೫. ಆಕಾಶ, ವಾಯು, ಅಗ್ನಿ, ಜಲ, ಪೃಥಿವ್ಯಾದಿ ಭೂತಗಳು ಒಂದರಿಂದ ಒಂದು ಕ್ರಮವಾಗಿ ಹುಟ್ಟುವುದಕ್ಕೂ, ಈ ಪಂಚ ಭೂತಗಳ ಸಂಘಾತವಾಗಿ ಮಿಕ್ಕ ಎಲ್ಲ ದೇಹಗಳೂ ಹುಟ್ಟುವುದಕ್ಕೂ ಆ ಚಿತ್ತೇ ಮೊದಲನೆಯ ಕಾರಣವು. ಇದಕ್ಕೆ ಕಾರಣವಾದುದು ಇನ್ನೊಂದು ಇಲ್ಲ.

ಸಾತತ್ಯೇನಾನು ಭೂತಾನಾಂ ಪದಾರ್ಥನಾಮನೇನ ತತ್ ।
ಪದಾರ್ಥತ್ವಮುದೇತ್ಯಜ್ಚೈಃ ಪ್ರತಾಪೇನೇವ ತಪ್ತತಾ ॥ ೨೬ ॥

ಅನಾಕಾರಾತ್ಕಾರಣಾಚ್ಚ ಸರ್ವ ಕಾರಣ ಕಾರಣಾತ್ ।
ಏತಸ್ಮಾದಿದಮುತ್ಪನ್ನಂ ಜಗಚ್ಛೈತ್ಯಂ ಹಿಮಾದಿವ ॥ ೨೭ ॥

ಬ್ರಹ್ಮ ವಿಷ್ಣ್ವಿಂದ್ರ ರುದ್ರಾಣಾಂ ಕಾರಣಾನಾಂ ಜಗತ್ ಸ್ಥಿತೌ ।
ಏತತ್ಕಾರಣಮಾದ್ಯಂ ತತ್ಕಾರಣಂ ನಾಸ್ಯ ವಿದ್ಯತೇ ॥ ೨೮ ॥

ಚಿಚ್ಚೇತ್ಯದ್ರವ ದೃಶ್ಯಾದಿ ನಾಮಭಿರ್ವರ್ಜಿತಾತ್ಮನೇ ।
ಸ್ವಯಂ ಸಕೃದ್ವಿಭಾತಾಯ ಮಹ್ಯಮಸ್ಮೈ ನಮೋನಮಃ ॥ ೨೯ ॥

---

೨೬. ಶಾಖವೆಲ್ಲವೂ ಸೂರ್ಯ ಕಿರಣಗಳಿಂದಲೇ ಬರುವಂತೆ, ಹಿಂದೆ ಹೇಳಿದಂತೆ ಪಂಚಭೂತಗಳು ಅವುಗಳ ಸಂಘಾತದಿಂದ ಹುಟ್ಟುವ ಇತರ ಪದಾರ್ಥಗಳೆಲ್ಲವೂ ಪದಾರ್ಥಗಳಾಗಿರುವುದೇ ಈ ಆತ್ಮನಿ ದ!

೨೭. ಈ ಆತ್ಮವು ಯಾವ ಆಕಾರವೂ ಇಲ್ಲದ ಮೂಲವಸ್ತುವು. ಇದಕ್ಕೆ ಅವಿದ್ಯಾಸಂಬಂಧವುಂಟಾದಾಗ ಪರಮಾಣುವೇ ಮುಂತಾದ ಕಾರಣ ವಸ್ತುಗಳಿಲ್ಲಾ ಕಾರಣವಾಗುವುದು. ಹಿಮದಿಂದ ಶೈತ್ಯವು ಹುಟ್ಟುವಂತೆ, ಈ ಆತ್ಮನಿಂದಲೇ ಈ ಜಗತ್ತು ಉದಯಿಸುವುದು.

೨೮. ಜಗತ್ತಿನ ಸ್ಥಿತ್ಯಾದಿಗಳಿಗೆ ಕಾರಣರಾದ ಬ್ರಹ್ಮ, ವಿಷ್ಣು, ಇಂದ್ರ, ರುದ್ರ, ಮೊದಲಾದವರಿಗೆಲ್ಲ ಇದೇ ಮೊದಲನೆಯ ಕಾರಣವು. ಇದಕ್ಕೆ ಕಾರಣವಾದುದು ಇನ್ನು ಯಾವುದೂ ಇಲ್ಲ.

೨೯. ಚಿತ್, ಚೇತ್ಯ, ದ್ರಷ್ಟ (ದೃಕ್) ದೃಶ್ಯ, ಮುಂತಾದಿ ನಾಮಗಳು ಯಾವುದೂ ಇಲ್ಲದ ಆ ಆತ್ಮನಿಗೆ ತಾನೇ ತಾನಾಗಿ ನಿತ್ಯ ಪ್ರಕಾಶನಾಗಿರುವವನಿಗೆ, "ಅಹಂ" ಪದ ವಾಚ್ಯನಾದ ಈ ಆತ್ಮನಿಗೆ ನಮಸ್ಕಾರವು.

ಏತಸ್ಮಿನ್ಸರ್ವ ಭೂತಾನಿ ನಿರ್ವಿಕಲ್ಪ ಚಿದಾತ್ಮನಿ ।
ಗುಣ ಭೂತಾನಿ ಭೂತೇಶೇ ತಿಷ್ಠಂತಿ ವಿವಿಶಂತಿ ಚ　　॥ ೩೦ ॥

ಯತ್ಕಿಲಾನೇನ ಕಲಿತಂ ಚೇತನೇನಾಂತರಾತ್ಮನಾ ।
ತತ್ತದ್ಭವತಿ ಸರ್ವತ್ರ ನೇತರತ್ಸದಪಿ ಸ್ಥಿತಂ　　॥ ೩೧ ॥

ಯಚ್ಚಿತಾ ಕಲಿತಂ ಕಿಂಚಿತ್ತದಾಪ್ನೋತಿ ನಿಜಂ ಪದಂ ।
ಯಚ್ಚಿತಾಕಲಿತಂ ನೇಹ ತತ್ಸದಪ್ಯಂತಮಾಗತಂ　　॥ ೩೨ ॥

ಇಮೇ ಘಟಪಟಾಕಾರಾಃ ಪದಾರ್ಥ ಶತಪಂಕ್ತಯಃ ।
ಜಾಗತ್ಯೋ ವಿಪುಲಾದರ್ಶೇ ಹ್ಯಸ್ಮಿನ್ವ್ಯೋಮನಿ ಬಿಂಬಿತಾಃ　　॥ ೩೩ ॥

ಏತದ್ವೃದ್ಧಂ ವೃದ್ಧತರೇ ಕ್ಷಯಿ ಕ್ಷಯಿಣಿ ಜಾಯತೇ ।
ಪದಾರ್ಥೇ ಸದಸಚ್ಚಾಪಿ ಪ್ರತಿಬಿಂಬಾರ್ಕವಸ್ಥಿತಂ　　॥ ೩೪ ॥

---

೩೦. ನಿರ್ವಿಕಲ್ಪವಾದ ಈ ಚಿದಾತ್ಮನಲ್ಲಿ ಸರ್ವ ಪ್ರಾಣಿಗಳೂ ಗುಣಭೂತಗಳಾಗಿ ಎಂದರೆ ಅಪ್ರಧಾನಗಳಾಗಿ ಇರುವುವು ಲಯವನ್ನು ಹೊಂದುವುವು. ಆ ಚಿದಾತ್ಮವು ಭೂತ ಭವಿಷ್ಯದ್ವರ್ತಮಾನ ಭೂತ ಸಂಘಗಳಿಗೆಲ್ಲ ಈಶ್ವರನು.

೩೧. ಈ ಚಿದಾತ್ಮವು ಸರ್ವಕ್ಕೂ ಅಂತರಾತ್ಮವಾಗಿರುವುದು. ಇದು ಏನೇನು ಆಗಬೇಕೆಂದು ಸಂಕಲ್ಪಿಸುವುದೋ ಅದದು ಆಗುವುದು. ಇದು ಸಂಕಲ್ಪಿಸದಿದ್ದರೆ ಏನೂ ಎಲ್ಲಿಯೂ ಆಗುವುದೇ ಇಲ್ಲ.

೩೨. ಯಾವುದು ಈ ಚಿಚ್ಛಕ್ತಿಯಿಂದ ಸೇರಿರುವುದೋ ಅದು ತನ್ನ ಸ್ವರೂಪವಸ್ಥಿತಿಯನ್ನು ಪಡೆಯುವುದು. ಚಿಚ್ಛಕ್ತಿಯು ಸೇರದಿದ್ದರೆ ಇದ್ದುದೂ ಇಲ್ಲವಾಗುವುದು.

೩೩. ಜಗತ್ತಿನಲ್ಲಿ ಘಟ, ಪಟ, ಮೊದಲಾದ ಆಕಾರಗಳಿಂದ ಕಾಣುವ ನೂರಾರು ಪದಾರ್ಥ ಸಮೂಹಗಳೆಲ್ಲವೂ ಆ ಚಿದಾಕಾಶವೆಂಬ ದೊಡ್ಡ ಕನ್ನಡಿಯಲ್ಲಿ ಕಾಣುವ (ಚಿತ್ತಿನ) ಪ್ರತಿಬಿಂಬಗಳು.

೩೪. ನೀರು, ಕನ್ನಡಿ, ಮೊದಲಾದ ಉಪಾಧಿಗಳಲ್ಲಿ ಪ್ರತಿಬಿಂಬಿಸಿದ ಸೂರ್ಯಮಂಡಲವು ದೊಡ್ಡದಾಯಿತು ಚಿಕ್ಕದಾಯಿತು (ಎಂದು ಹೇಳುತ್ತಾ ಪ್ರತಿಬಿಂಬದ

ಅದೃಶ್ಯಂ ಸರ್ವ ಭೂತಾನಾಂ ಪ್ರಾಪ್ಯಂ ಗಲಿತಚೇತಸಾಂ ।
ಏತತ್ತದ್ದೃಶ್ಯತೇ ಸದ್ಭಿಃ ಪರಂ ವ್ಯೋಮಾತಿ ನಿರ್ಮಲಂ ॥ ೩೫ ॥

ಇಯಮಭ್ಯುದಯಂ ಯಾತಿ ನಾನಾ ದೃಶ್ಯ ಸುಮಂಜರೀ ।
ಆಚಾರ ಚಂಚರೀಕಾಢ್ಯಾ ಏತಸ್ಮಾತ್ಕಾರಣದ್ರುಮಾತ್ ॥ ೩೬ ॥

ಅಸ್ಮಾದಿಯ ಮುದೇತ್ಯುಚ್ಚೈಃ ಸಂಸಾರ ರಚನಾಚಲಾ ।
ವಿಚಿತ್ರತರುಗುಲ್ಮಾಢ್ಯಾ ಶೈಲಾದಿವ ವನಾವಲೀ ॥ ೩೭ ॥

ಸರ್ವೇಷಾಮವಿಭಿನ್ನೋಽಸೌ ತ್ರೈಲೋಕ್ಯೋದರವರ್ತಿನಾಂ ।
ಬ್ರಹ್ಮಾದೀನಾಂ ತೃಣಾಂತಾನಾಂ ಚಿದಾತ್ಮಾ ಸಂಪ್ರಕಾಶಕಃ ॥ ೩೮ ॥

ವೃದ್ಧಿ ಕ್ಷಯಗಳನ್ನು ಬಿಂಬದಲ್ಲಿ ಆರೋಪಿಸುವಂತೆ) ಈ ಚಿತ್ತೂ ಕೂಡ ಪದಾರ್ಥಗಳು ಹೆಚ್ಚಿದರೆ ಹೆಚ್ಚಿತು ಎಂದೂ ಕ್ಷಯವಾದರೆ ಕಡಿಮೆಯಾಯಿತು ಎಂದೂ ಹೇಳಿಸಿಕೊಂಡರೂ ಚಿತ್ತು ಮಾತ್ರ ಸತ್ ಅಸತ್ ಎರಡೂ ಅಲ್ಲದೆ ಏಕ ಸ್ಥಿತಿಯಲ್ಲಿಯೇ ಇರುವುದು.

೩೫. ಸರ್ವ ಭೂತಗಳಿಗೂ ಅದೃಶ್ಯವಾಗಿ ಈ ಚಿತ್ತು ಮನೋಲಯ ಮಾಡಿದವರಿಗೆ ಲಭಿಸುವುದು. ಈ ಸರ್ವಶ್ರೇಷ್ಠವೂ ಅತಿ ನಿರ್ಮಲವೂ ಆದ ಚಿದಾಕಾಶವು ಸಾಧುಗಳಿಗೆ ಮಾತ್ರ ಗೋಚರವಾಗುವುದು.

೩೬. ಆದಿಕಾರಣವಾದ ಈ ಚಿದ್ವೃಕ್ಷದಿಂದ ನಾನಾ ಪ್ರಕಾರವಾದ ದೃಶ್ಯಗಳೆಂಬ ಕುಸುಮ ಮಂಜರಿಗಳು ಹುಟ್ಟುವುವು. ಒಂದೊಂದು ದೃಶ್ಯದಲ್ಲಿ ಒಂದೊಂದು ವಿಧವಾದ ಆಚಾರವೆಂಬ ದುಂಬಿಯು ಸೇರಿಕೊಂಡಿರುವುದು.

೩೭. ಒಂದು ಪರ್ವತದಿಂದ ಚಿತ್ರವಿಚಿತ್ರ ತರು ಗುಲ್ಮಾದಿಗಳಿಂದ ಪರಿಪೂರ್ಣವಾಗಿರುವ ವನ ವನಗಳು ಉದಯಿಸುವಂತೆ, ಅಸ್ಥಿರವಾದ ಸಂಸಾರವೆಲ್ಲವೂ ಈ ಚಿತ್ತಿನಿಂದಲೇ ಉದಯಿಸುವುದು.

೩೮. ಈ ಜಗತ್ತ್ರಯದಲ್ಲಿರುವ ಭೂತ ಭೂತಕ್ಕೂ ಈ ಚಿದಾತ್ಮವು ಅವಿಭಿನ್ನವು. ಹಾಗೆಯೇ ಬ್ರಹ್ಮಾದಿಯಾಗಿ ತೃಣಾಂತವಾಗಿರುವ ಸಮಸ್ತವನ್ನೂ ಈ ಚಿತ್ತೇ ಪ್ರಕಾಶಪಡಿಸುವುದು.

ಏಕೋಽಸಾವಹ ಮಾದ್ಯಂತರಹಿತಃ ಸರ್ವಗಾಕೃತಿಃ ।
ಚರಾಚರಾಣಾಂ ಭೂತಾನಾಮಂತಃ ಸ್ವಾನುಭವಃ ಸ್ಥಿತಃ ॥ ೩೯ ॥

ಅಸ್ಯ ತಸ್ಯ ಮಮೇಮಾನಿ ಸ್ಥಾವರಾಣಿ ಚರಾಣಿ ಚ ।
ಪರಿಸಂಖ್ಯಾದಿ ಹೀನಾನಿ ಶರೀರಾಣಿ ಬಹೂನಿ ಚ ॥ ೪೦ ॥

ಏಕೋಽ ಸಾವನುಭೂತ್ಯಾತ್ಮಾ ಸ್ವಾನುಭೂತಿ ವಶಾತ್ಸ್ವಯಂ ।
ಸರ್ವದೃಗ್ದೃಷ್ಟೃದೃಶ್ಯತ್ವಾತ್ಸಹಸ್ರ ಕರಲೋಚನಃ ॥ ೪೧ ॥

ಏಷೋಽ ಸಾವಹಮಾಕಾಶೇ ಸೂರ್ಯದೇಹೇನ ಚಾರುಣಾ ।
ವಿಹರಾಮೀತರೇಣಾಪಿ ವಾಯು ದೇಹೇನ ವಾಯುನಾ ॥ ೪೨ ॥

ಮಮೈತದ್ವಪುರಾನೀಲಂ ಶಂಖಚಕ್ರ ಗದಾಧರಂ ।
ಸರ್ವ ಸೌಭಾಗ್ಯಸೀಮಾಂತಂ ಹ್ಯಸ್ಮಿನ್ಜಗತಿ ವಲ್ಗತಿ ॥ ೪೩ ॥

---

೩೯. ಆದ್ಯಂತರಹಿತವಾಗಿ, ಸರ್ವಭೂತಗಳ ಅಂತರಾತ್ಮನಾಗಿರುವ, ಚರಾಚರ ಭೂತಗಳೆಲ್ಲದರ ಹೃದಯದಲ್ಲಿ ಅನುಭವರೂಪನಾಗಿ ಕುಳಿತಿರುವ ಒಂದೇ ಒಂದಾದ ಚಿತ್ತು ಯಾವುದೋ ಅದೇ ನಾನು.

೪೦-೪೧. ಇವನದು, ಅವನದು, ನನ್ನದು ಎಂಬ ಆ ಸ್ಥಾವರಜಂಗಮ ಶರೀರಗಳು ಲೆಕ್ಕವಿಲ್ಲದೆ ಇರುವುವು. ಆದರೂ ಇವುಗಳಲ್ಲೆಲ್ಲಾ ಅನುಭೂತಿ ಸ್ವರೂಪನಾಗಿ ಒಬ್ಬನೇ ಒಬ್ಬನಾದ ಆತ್ಮನು, ತಾನೇ ದೃಕ್ಕಾಗಿ ತಾನೇ ದೃಶ್ಯವಾಗಿ ಇರುವುದರಿಂದ ಸಹಸ್ರ ಕರಗಳೂ, ಸಹಸ್ರ ಲೋಚನಗಳೂ ಉಳ್ಳವನಾಗಿ ಇರುವನು.

೪೨. ನಾನೇ ಸುಂದರವಾದ ಸೂರ್ಯರೂಪದಿಂದ ಆಕಾಶದಲ್ಲಿ ವಿಹರಿಸುತ್ತಿರುವೆನು. ಬೇರೆಯಾಗಿ ವಾಯು ದೇಹವನ್ನು ಪಡೆದು ವಾಯುವಾಗಿ ವಿಹರಿಸುತ್ತಿರುವೆನು.

೪೩. ನನ್ನ ದೇಹವು ನೀಲವರ್ಣವಾಗಿ, ಶಂಖಚಕ್ರ ಗದಾಧಾರಿಯಾಗಿ, ಸರ್ವ ಸೌಭಾಗ್ಯಗಳಿಗೂ ಸೀಮಾಸ್ಥಾನವಾಗಿ ಈ ಜಗತ್ತಿನಲ್ಲಿ ಶೋಭಿಸುತ್ತಿರುವುದು.

ಅಹಮಸ್ಮಿನ್ನಸಮುದ್ಭೂತಃ ಪದ್ಮಾಸನಗತಃ ಸದಾ ।
ನಿರ್ವಿಕಲ್ಪ ಸಮಾಧಿಸ್ಥಃ ಪರಾಂ ನಿರ್ವೃತಿಮಾಗತಃ ॥ ೪೪ ॥

ಅಹಂ ತ್ರಿನೇತ್ರಯಾ ಕೃತ್ಯಾ ಗೌರೀ ವಕ್ತ್ರಾಬ್ಜಷಟ್ಪದಃ ।
ಸರ್ಗಾಂತೇ ಸಂಹರಾಮೀದಂ ಕೂರ್ಮೋಽಂಗಪಟಲಂ ಯಥಾ ॥ ೪೫ ॥

ಅಹಮಿಂದ್ರೇಣ ರೂಪೇಣ ತ್ರಿಲೋಕೀಮಖಿಲಾಮಿಮಾಂ ।
ಪಾಲಯಾಮಿ ಕ್ರಮಪ್ರಾಪ್ತಾಂ ಮಠಿಕಾಮಿವ ತಾಪಸಃ ॥ ೪೬ ॥

ಸ್ತ್ರೀಪುಮಾನಹಮೇವೈತತ್ಕುಮಾರೋ ಹ್ಯಹಮಿತ್ಯಪಿ ।
ಜೀರ್ಣೋಽಹಂ ದೇಹಧಾರಿತ್ವಾಬ್ಜಾತೋಽಹಂ ವಿಶ್ವತೋಮುಖಃ ॥ ೪೭ ॥

ಅಹಂ ತೃಣಲತಾಗುಲ್ಮಜಾಲಂ ರಸತಯಾ ಸ್ಥಿತಃ ।
ಉತ್ಥಾಪಯಾಮಿ ಚಿದ್ಭೂಮೇಃ ಕೂಪೋಽಂತರಲತಾಮಿವ ॥ ೪೮ ॥

---

೪೪. ಈ ಜಗತ್ತಿನಲ್ಲಿ ನಾನೇ ಪದ್ಮಾಸನನಾದ ಬ್ರಹ್ಮನಾಗಿ, ನಿರ್ವಿಕಲ್ಪ ಸಮಾಧಿಸ್ಥನಾಗಿ, ಪರಮ ಶಾಂತಿಯನ್ನು ಹೊಂದಿರುವೆನು.

೪೫. ನಾನೇ ತ್ರಿನೇತ್ರನಾಗಿ, ಗೌರೀವಲ್ಲಭನಾಗಿ, ಪ್ರಲಯ ಕಾಲವು ಬಂದಾಗ, ಆಮೆಯು ತನ್ನ ಅಂಗಗಳನ್ನು ಚಿಪ್ಪಿನೊಳಕ್ಕೆ ಎಳೆದುಕೊಳ್ಳುವಂತೆ, ಈ ಜಗತ್ತೆಲ್ಲವನ್ನು ಉಪಸಂಹಾರ ಮಾಡುವೆನು.

೪೬. ನಾನೇ ಇಂದ್ರರೂಪನಾಗಿ ಕ್ರಮಪ್ರಾಪ್ತವಾದ ತ್ರೈಲೋಕ್ಯ ಶ್ರೀಯನ್ನು ಅಖಂಡವಾಗಿ, ತಾಪಸನು ತನ್ನ ಗುಡಿಸಲನ್ನು ನೋಡಿಕೊಳ್ಳುವಂತೆ, ಪಾಲಿಸುವೆನು.

(ಕ್ರಮ ಪ್ರಾಪ್ತಾಂ ಮನ್ವಂತರ ಕ್ರಮ ಪ್ರಾಪ್ತಾಂ–ತಾ. ಪ್ರ)

೪೭. ಹೆಣ್ಣೂ ನಾನೇ! ಗಂಡೂ ನಾನೇ! ಮಗುವೂ ನಾನೇ! ವೃದ್ಧನೂ ನಾನೇ! ನಾನು ವಿಶ್ವತೋಮುಖನಾದರೂ, ಅಜಾತನಾದರೂ, ದೇಹಧಾರಿಯಾದೆನೆಂಬ ಕಾರಣದಿಂದ ಜಾತನಾಗಿರುವೆನು.

("ತ್ವಂ ಸ್ತ್ರೀ ತ್ವಂಪುಮಾನಸಿ ತ್ವಂ ಕುಮಾರ ಉತ ವಾ ಕುಮಾರೀ । ತ್ವಂ ಜೀರ್ಣೋ ದಂಡೇನ ವಂಚಸಿ ತ್ವಂ ಜಾತೋ ಭವಸಿ ವಿಶ್ವತೋ ಮುಖಃ" ಇತಿ ಶ್ರುತಿಂ ಸ್ವಾತ್ಮನಿ ಸ್ವಾನುಭವೇನ ಸಂವಾದಯತಿ.—ತಾ. ಪ್ರ.)

೪೮. ನಾನು ರಸ ಸ್ವರೂಪನಾಗಿ ಚಿತ್ತೆಂಬ ಭೂಮಿಯಿಂದ ತೃಣ, ಲತಾ,

ಸ್ವಲೀಲಾರ್ಥಮಿದಂ ಚಾರು ಜಗದಾಡಂಬರಂ ತತಂ ।
ಮಯಾಭಿಜಾತಬಾಲೇನ ಪಂಕಕ್ರೀಡನಕಂ ಯಥಾ ॥ ೨೯ ॥

ಮಯೀದಮಾಪ್ಯತೇ ಸರ್ವಂ ಸತ್ತಾ ಮಾಂ ಪ್ರಾಪ್ಯ ಗಚ್ಛತಿ ।
ಮತ್ಪರಿತ್ಯಕ್ತಮೇತಚ್ಚ ತದಪ್ಯೇವ ನ ಕಿಂಚನ ॥ ೩೦ ॥

ಮಯಿ ಸ್ಫಾರೇ ಚಿದಾದರ್ಶೇ ಪ್ರತಿಬಿಂಬಂ ಯದಾಗತಂ ।
ತದಸ್ತಿ ನೇತರದ್ಯಸ್ಮಾನ್ಮತ್ತೋಽನ್ಯನ್ನೇಹ ವಿದ್ಯತೇ ॥ ೩೧ ॥

ಕುಸುಮೇಷ್ವಹಮಾಮೋದಃ ಪುಷ್ಪಪತ್ರೇಷ್ವಹಂ ಛವಿಃ ।
ಛವಿಷ್ವಹಂ ರೂಪಕಲಾ ರೂಪೇಷ್ವನುಭವೋಽಪ್ಯಹಂ ॥ ೩೨ ॥

ಗುಲ್ಮಾದಿಗಳನ್ನೂ, ಕೂಪವು ಪಾಚಿಯನ್ನೂ (?) ಹುಟ್ಟಿಸುವ ಹಾಗೆ, ಹುಟ್ಟಿಸುವೆನು.

೨೯. ಕ್ರೀಡಾ ಪಟುವಾದ ಬಾಲನು ತನ್ನ ಕ್ರೀಡೆಗಾಗಿ ಕೆಸರಿನಲ್ಲಿ ಆಡುವಂತೆ, ಲೀಲಾ ವಿನೋದಾರ್ಥವಾಗಿ ನಾನೇ ಈ ಜಗದಾಡಂಬರವನ್ನು ಹರಡಿರುವೆನು.

೩೦. ನಾನು (ಕಾರಣ ಭಾವದಿಂದ) ಇದೆಲ್ಲವನ್ನೂ ವ್ಯಾಪಿಸಿಕೊಂಡಿರುವೆನು. (ಕಾರ್ಯ ಭಾವದಿಂದ ಕಾಣಿಸುವ) ಸತ್ತೆಯು ಪ್ರಲಯ ಕಾಲದಲ್ಲಿ ನನ್ನನ್ನೇ ಸೇರುವುದು. ನಾನು ಇಲ್ಲದ ವಸ್ತುವು ಯಾವುದೂ ಈ ಜಗತ್ತಿನಲ್ಲಿ ಇಲ್ಲ.

(ಮಯಾಸ್ವತತ್ವದರ್ಶನೇನ ಪರಿತ್ಯಕ್ತಂ ವಾ ಏತತ್ ಜಗತ್ ಜೀವನ್ಮುಕ್ತ ವ್ಯವಹಾರೇ ಸದಪಿ।ನ ಕಿಂಚನ.—ತಾ. ಪ್ರ.)

೩೧. ನಾನು ಎಂಬ ವಿಸ್ತಾರ ಚಿದಾದರ್ಶದಲ್ಲಿ ಯಾವುದು ಪ್ರತಿಬಿಂಬವಾಗಿ ಇರುವುದೋ ಅದು ಮಾತ್ರ ಇರುವುದು, ಇತರವು ಯಾವುದೂ ಇಲ್ಲ. ಆದರಿಂದ, ನನಗಿಂತ ಬೇರೆಯಾದ ಇನ್ನು ಯಾವುದೂ ಇಲ್ಲವೇ ಇಲ್ಲ.

೩೨. ಕುಸುಮಗಳಲ್ಲಿ ಆಮೋದವಾಗಿರುವವನು ನಾನು. ಕುಸುಮದಳಗಳಲ್ಲಿ ಇರುವ ಬಣ್ಣವು ನಾನು, ಆ ಬಣ್ಣಗಳಲ್ಲಿ ಇರುವ ತೇಜೋ ಧಾತುವಿನ ಗುಣವಾದ ರೂಪಾಂಶವೂ ನಾನೇ ! ರೂಪಗಳಲ್ಲಿರುವ ಅನುಭವವೂ ನಾನೇ !

ಯದ್ಯತ್ಕಿಂಚಿದಿದಂ ದೃಶ್ಯಂ ಜಗತ್ಸ್ಥಾವರಜಂಗಮಂ ।
ಸರ್ವಸಂಕಲ್ಪರಹಿತಂ ತಚ್ಚಿತ್ತತ್ತ್ವಮಹಂ ಪರಂ ॥ ೫೩ ॥

ಆದ್ಯಾ ರಸಮಯೀ ಶಕ್ತಿೀ ರಸೌಘೋ ವಿಸ್ಮೃತೋ ಯಥಾ ।
ಸಾ ಯಥಾ ದಾರುಕುಡ್ಯೇಷು ತಥಾಹಂ ಸರ್ವವಸ್ತುಷು ॥ ೫೮ ॥

ಪರಮಾಂ ತಾಮಹಂ ಸರ್ವಪದಾರ್ಥಾಂತರವರ್ಜಿತಾಂ ।
ಉಪೇತ್ಯ ಸಂವಿದ್ವೈಚಿತ್ರ್ಯಂ ಪ್ರತನೋಮಿ ಸ್ವಯೇಚ್ಛಯಾ ॥ ೫೫ ॥

(ಇದಾನೀಂ ಈಶ್ವರ ಭೂತಸ್ಯ ಸ್ವಸ್ಯ ವಿಭೂತಿ ವಿಸ್ತರಮುಪಭೋಗೇ ಅನುಭವಾಂತರಮಾಹ— ತಾ. ಪ್ರ.)

೫೩. ದೃಶ್ಯ ರೂಪವಾಗಿ, ಸ್ಥಾವರ ಜಂಗಮಾತ್ಮಕವಾದ ಈ ಜಗತ್ತೆಲ್ಲವೂ ನಾನೇ ಆದರೂ ಸರ್ವ ಸಂಕಲ್ಪ ರಹಿತನಾಗಿ ಚಿತ್ ತತ್ವವಾಗಿ, ಎಲ್ಲದಕ್ಕೂ ಅತೀತ ನಾಗಿ ಇರುವೆನು.

೫೮. ಎಲ್ಲ ಸೃಷ್ಟಿಗೂ ಮೊದಲಾದ ರಸಮಯೀ ಶಕ್ತಿಯು ಯಾವುದೋ, ಯಾವುದು ಸಾಗರ, ನದಿ, ಸರೋವರಾದಿಗಳನ್ನೆಲ್ಲ ಹರಡಿತೋ ಅದೇ ಹೇಗೆ ಮರ, ಗೋಡೆ ಮೊದಲಾದವುಗಳಿಗೆಲ್ಲ ಆಧಾರ ಭೂತವಾಗಿದೆಯೋ ಹಾಗೆಯೇ ನಾನು ಎಲ್ಲವನ್ನೂ ಹರಡಿ, ಎಲ್ಲಕ್ಕೂ ಆಧಾರನಾಗಿರುವೆನು.

(ರಸಮಯೀ ಆದ್ಯಾಶಕ್ತಿಃ ರಸತನ್ಮಾತ್ರಾ ಯಥಾ ಸಾಗರ ನದೀ ಸರಃ ಕೂಪಾದಿ ರಸೌ ಘೋ ಜಲೌಘಃ ಸರ್ವ ವಿಸ್ತೃತಃ ಸೈವ ಜಲಭೂತಾ ಶಕ್ತಿಃ ದಾರುಷು ವೃಕ್ಷೇಷು ಶಾಖಾಪಲ್ಲವಾದಿ ಉದ್ಭವ ನಿಮಿತ್ತತಯಾ ಕುಡ್ಯೇಷು ಚ, ತೃಣಯು ವಾಂಕುರಾಗಿ ಉದ್ಭವ ನಿಮಿತ್ತತಯಾ ಪ್ರಸೃತಾ ತಥಾಹಂ ಸರ್ವ ವಸ್ತುಷು ತತ್ತತ್ಕಾರ್ಯೋದ್ಭವ ನಿಮಿತ್ತತಯಾ ಪ್ರಸೃತ ಇತ್ಯರ್ಥಃ.—ತಾ. ಪ್ರ.)

(ಆದ್ಯಾ ರಸಮಯೀ ಶಕ್ತಿಃ ಎಂಬಲ್ಲಿ ರಸತನ್ಮಾತ್ರವೆಂದು ಹೇಳುವುದಕ್ಕಿಂತ ವೇದಗಳಲ್ಲಿ ಹೇಳುವ ಸರ್ವ ಸೃಷ್ಟಿಗೂ ಆದ್ಯವಾದ ಅಪ್ಪೋಭೂತವೆಂದು ಹೇಳು ವುದು ಸರಿ.)

೫೫. ಸರ್ವ ಪದಾರ್ಥಗಳ ಹೃದಯದಲ್ಲಿ ಇರುವ ಪರಮ ಸೂಕ್ಷ್ಮವಾದ ಆ ರಸ ಶಕ್ತಿಯನ್ನು ಸೇರಿ, ಜೀವಸಂವಿತ್ತಾಗಿ ನನ್ನ ಇಚ್ಛಾನುಸಾರವಾಗಿ ಈ ಚಿತ್ರ ವಿಚಿತ್ರ ಸೃಷ್ಟಿಯನ್ನೆಲ್ಲಾ ಹರಡುವೆನು.

ಘೃತಂ ಯಥಾಂತಃ ಪಯಸೋ ರಸಶಕ್ತಿರ್ಯಥಾ ಜಲೇ ।
ಚಿಚ್ಛಕ್ತಿಃ ಸರ್ವಭಾವೇಷು ಯಥಾಂತರಹಮಾಸ್ಥಿತಃ ॥ ೫೬ ॥

ಇದಂ ಜಗತ್ತ್ರಿಕಾಲಸ್ಥಂ ಚಿತಿಮಧ್ಯೇ ಚ ಸಂಸ್ಥಿತಂ ।
ಚೇತ್ಯೋಪಚಾರರಹಿತಂ ವಸ್ತುಜಾತಮಿವಾವನೌ ॥ ೫೭ ॥

ಭರಿತಾಶೇಷದಿಕ್ಕುಕ್ಷಿ ಸ್ತ್ಯಕ್ತಸಂಕೋಚವಿಭ್ರಮಃ ।
ಸರ್ವಸ್ಥಃ ಸರ್ವಕರ್ತಾ ಚ ವಿರಾಟ್ ಸಮ್ರಾಡಹಂ ಸ್ಥಿತಃ ॥ ೫೮ ॥

ಅಪೂರ್ವ ಮನಿಬದ್ಧೇಂದ್ರಮಜಸ್ರಮಲಿತಾಮರಂ ।
ಅಪ್ರಾರ್ಥಿತಂ ಮೇ ಸಂಪ್ರಾಪ್ತಂ ಜಗದ್ರಾಜ್ಯಮಿದಂ ತತಂ ॥ ೫೯ ॥

---

೫೬. ಹಾಲಿನಲ್ಲಿ ತುಪ್ಪವಿರುವಂತೆ, ಜಲದಲ್ಲಿ ರಸ ಶಕ್ತಿಯು ಇರುವಂತೆ, ಸರ್ವ ಭಾವಗಳಲ್ಲಿಯೂ ಚಿಚ್ಛಕ್ತಿಯಾಗಿ ನಾನೇ ಆಧಾರನಾಗಿರುವೆನು.

೫೭. ಭೂಮಿಯಲ್ಲಿ (ತೃಣಕಾಷ್ಠಾದಿ) ವಸ್ತುಗಳೆಲ್ಲವೂ ಸೂಕ್ಷ್ಮವಾಗಿ ಇರುವಂತೆ, ಚಿತ್ತಾದ ನನ್ನಲ್ಲಿ ಒಂದೆಡೆ ಕಾಲತ್ರಯದಲ್ಲೂ ಇರುವ ಈ ಜಗತ್ತು ಚೇತ್ಯವಾಗುವ ಬೀಜರೂಪವಾಗಿ ಅಡಗಿ ಕುಳಿತಿರುವುದು.

(ಚೈತ್ಯೋಪಚಾರಃ ಚೇತ್ಯ ಪ್ರಥಾ ತದ್ರಹಿತಂ ಜಡಮಿತಿ ಯಾವತ್ ತ್ರಿಕಾಲಸ್ಥಂ ಅತೀತಂ ವರ್ತಮಾನಂ ಭವಿಷ್ಯಚ್ಚೇದಂ ಜಗತ್ ಚಿತಿ ಚಿದ್ರೂಪೇ ಮಯಿ ಮಧ್ಯೇ ಏಕಾಂಶೇ ವ್ಯವಸ್ಥಿತಂ । ಯಥಾ ತೃಣಕಾಷ್ಠ ಲೋಷ್ಠಾದಿ ವಸ್ತು ಜಾತ ಮವನೌ ತದ್ವತ್ ॥ ತಾ. ಪ್ರ.)

೫೮. ದಿಕ್ಕು ವಿದಿಕ್ಕುಗಳಲ್ಲೆಲ್ಲಾ ತುಂಬಿ, ಯಾವುದೊಂದು ಸಂಕೋಚವೂ ಇಲ್ಲದೆ (ಪರಿಚ್ಛೇದಕ್ಕೆ ಒಳಗಾಗದೆ) ಎಲ್ಲದರಲ್ಲಿಯೂ ಇರುವ, ಎಲ್ಲವನ್ನೂ ಮಾಡುವ, ವಿರಾಟ ಸ್ವರೂಪನೂ, ಸಮ್ರಾಟ್ ಸ್ವರೂಪನೂ ನಾನೇ!

(ವಿವಿಧ ವ್ಯಷ್ಟಿ ಭೇದೇನ ರಾಜತ ಇತಿ ವಿರಾಟ್ । ಸಮ್ಯಕ್ಸಮಷ್ಟಿ ಭಾವೇನ ರಾಜತ ಇತಿ ಸಮ್ರಾಡ್ ॥ ತಾ. ಪ್ರ.)

೫೯. (ಇದುವರೆಗೂ ಇಲ್ಲದ ರೀತಿಯಲ್ಲಿ) ಅಪೂರ್ವವಾಗಿ ಇಂದ್ರ (ಮೊದಲಾದವರನ್ನು) ಕಟ್ಟಬೇಕಾದ ಶ್ರಮವಿಲ್ಲದೆ, ದೇವತೆಗಳನ್ನು ಶಸ್ತ್ರಗಳಿಂದ ಘಾತಿಸದೆ.

ಅಹೋ ನು ವಿತತಾತ್ಮಾಸ್ಮಿ ನ ಮಾಮ್ಯಪ್ಯಾತ್ಮನಾತ್ಮನಿ ।
ಕಲ್ಪಾನ್ತಪವನಾಧೂತ ಏಕಾರ್ಣವ ಇವಾರ್ಣವೇ ॥ ೬೦ ॥

ನಾತ್ಮನ್ಯನ್ತ ಮವಾಪ್ನೋಮಿ ಸ್ವಸ್ಥೇನ್ತಃ ಸ್ವದಿತೇ ಸ್ವಯಂ ।
ಕ್ಷೀರವಾರಿನಿಧೌ ಪಂಗುಃ ಸರೀಸೃಪ ಇವ ಸ್ಫುರನ್ ॥ ೬೧ ॥

ಸ್ವಲ್ಪೇಯಂ ಮಠಿಕಾ ಬ್ರಾಹ್ಮೀ ಜಗನ್ನಾಮ್ನೀ ಸುಸಂಕಟಾ ।
ಗಜೋ ಬಿಲ್ವ ಇವ ಸ್ವಾಂಗೇ ನ ಮಾತಿ ವಿಪುಲಂ ವಪುಃ ॥ ೬೨ ॥

ಅಪ್ರಾರ್ಥಿತವಾಗಿ ಈ ವಿಸ್ತಾರವಾದ ಜಗದ್ರಾಜ್ಯವು ಈಗ ನನಗೆ ಸಂಪ್ರಾಪ್ತವಾಗಿರುವುದು.

೬೦. ಅಹಹಾ ! ನಾನು ವಿತತಾತ್ಮನಾಗಿರುವೆನು : ಆದರಿಂದಲೇ, ದೇಹದಲ್ಲಿ ನಾನು ಅಡಗಿ ಕುಳಿತಿರಲು ಸಾಧ್ಯವಿಲ್ಲ. ಪ್ರಲಯಕಾಲದ ಮಾರುತನಿಂದ ಸಂಕ್ಷುಭ್ಧವಾಗಿ ಲೋಕ ಲೋಕಗಳನ್ನು ಆವರಿಸಿದ ಪ್ರಲಯ ಸಾಗರವು ಮೊದಲಿದ್ದ ಸಾಗರದಲ್ಲಿ ಹೇಗೆ ಅಡಗುವುದಿಲ್ಲವೋ ಹಾಗೆಯೇ ನಾನೂ ಆಗಿರುವೆನು.

(ನಮಾಮಿ ಕುಸೂಲೇ ಧಾನ್ಯಮಿವ ಸಮಾವೇಶಂನ ಪ್ರಾಪ್ನೋಮಿ. ತಾ. ಪ್ರ.)

೬೧. ಕ್ಷೀರ ಸಮುದ್ರವನ್ನು ಹೊಕ್ಕು ಸಂಚರಿಸಲಾರದೆ ಮುಗ್ಗರಿಸುವ ಹಾವಿನಹಾಗೆ, ನಾನು ಆತ್ಮನಲ್ಲಿ ನಾಶವಾಗಿ ಹೋಗುವುದಿಲ್ಲ, ಸ್ವಸ್ಥನಲ್ಲಿ ಸ್ವಯಂ ಸ್ವದಿತನಾಗಿರುವ ನಾನೆಂತು ನನ್ನಲ್ಲಿ ನಾಶವಾಗುವೆನು.

(ಅಂತಃ ಸ್ವಯಂ ಸ್ವದಿತೇ ಸ್ವೇನೈವ ನಿರತಿಶಯಾನಂದಾತ್ಮನಾ ಸ್ವದಮಾನೇ ತಾ. ಪ್ರ.) ಸ್ವದಿತ ಎಂದರೆ ತಿನ್ನುವುದು. ಅನುಭವದಿಂದ ಸರ್ವವಸ್ತುಗಳೂ ಕರಗುವಂತೆ ಆತ್ಮನು ನಿರತಿಶಯಾನಂದಾನುಭವದಿಂದ ಕರಗಿ ಹೋಗುವನೋ ಎಂದರೆ ಇಲ್ಲ. ಆನಂದವೇ ತಾನಾಗಿರುವಾಗ ಅದೆಂತು ಕರಗುವುದು ?)

೬೨. ಬ್ರಹ್ಮಾಂಡವೆಂಬ ಈ ಗುಡಿಸಲು ಬಲು ಚಿಕ್ಕದು. ಆನೆಯು ಬಿಲ್ವ ಫಲದಲ್ಲಿ ಹೇಗೆ ಅಡಗಲಾರದೋ ಹಾಗೆಯೇ ಆತ್ಮನಾದ ನನ್ನ ಸ್ವರೂಪವು ಈ ಬ್ರಹ್ಮಾಂಡದಲ್ಲಿ ಅಡಗಲಾರದು.

ವಿರಂಚಿ ಭವನಾತ್ಪಾರೇ ತತ್ತ್ವಾನ್ತೇಪ್ಯಾಹರತ್ಪದಂ ।
ಪ್ರಸರತ್ಯೇವ ಮೇ ರೂಪಮದ್ಯಾಪಿ ನ ನಿವರ್ತತೇ ॥ ೬೩ ॥

ಅಯಂ ನಾಮಾಹಮಿತ್ಯನ್ತಃ ಕುತೋ ನಿರವಲಮ್ಬನಾ ।
ಅಪರ್ಯನ್ತಾಕೃತೇರೇಷಾ ಕಿಲಾಸೀತ್ಸ್ವಲ್ಪತಾ ಮಮ ॥ ೬೪ ॥

ಭವಾನಯಮಯಂ ಚಾಹಮಿತಿ ಮಿಥ್ಯೈವ ವಿಭ್ರಮಃ ।
ಕೋ ದೇಹಃ ಕೋಽಪ್ಯದೇಹೋ ವಾ ಕೋ ಮೃತಃ ಕಶ್ಚ ಜೀವತಿ ॥ ೬೫ ॥

ವರಾಕಃ ಪೇಲವಧಿಯೋ ಬಭೂವುರ್ಮೇ ಪಿತಾಮಹಾಃ ।
ಯೇ ಸಾಮ್ರಾಜ್ಯಮಿದಂ ತ್ಯಕ್ತ್ವಾ ರೇಮಿರೇ ಭವಭೂಮಿಷು ॥ ೬೬ ॥

---

೬೩. ಬ್ರಹ್ಮಾಂಡವನ್ನೂ ಭೇದಿಸಿಕೊಂಡು ಆಕಾಶಾದಿ ತತ್ವಗಳ ಹೊರಕ್ಕೆ ನುಗ್ಗಿ ಹೊರಟು ಹೋಗುತ್ತಿರುವ, ನನ್ನ ರೂಪವು ಇನ್ನೂ ಮುಂದೆ ಮುಂದೆಯೇ ಹೋಗುತ್ತಿರುವುದೇ ಹೊರತು ಇನ್ನೂ ಹಿಂದಿರುಗುತ್ತಿಲ್ಲ.

(ಉತ್ತರೋತ್ತರ ದಶಗುಣ ಪಾರ್ಥಿವಾದ್ಯಾವರಣಾ ವೃತಾತ್ ಬ್ರಹ್ಮಾಂಡ ಲಕ್ಷಣಾತ್ ವಿರಿಂಚಿ ಭವನಾತ್ ಪಾರೇ ಪರತಾ, ಚತುರ್ವಿಂಶತಿ ಸಂಖ್ಯಾನಾಂ ಸಾಂಖ್ಯ ವೈಷ್ಣವಾದಿ ತಂತ್ರ ಪ್ರಸಿದ್ಧಾನಾಂ ಷಟ್ ತ್ರಿಂಶತ್ ಸಂಖ್ಯಾನಾಂ ಶೈವ ಪಾಶುಪತಾಭಿಮತಾನಾಂ ವಾ ತತ್ತ್ವಾನಾಮಂತೇಽಪಿ ಪದಮಾಹರತ್ ಕ್ರಮಮಾಣ ಮಿತಿಯಾವತ್ ಮೇರೂಪಂ ಪ್ರಸರತ್ಯೇವೇತಿ ವಾಸ್ತವಸ್ಯೈವ ವಿಸ್ತಾರಸ್ಯ ಕಲ್ಪನಾ ತಾ. ಪ್ರ.)

೬೪. ಈ ದೇಹವೇ ನಾನೆಂಬ ಈ ನಿರಾಧಾರವಾದ ಅಲ್ಪ ಕಲ್ಪನೆಯು, ಕೊನೆಗಾಣದ ಸ್ವರೂಪವುಳ್ಳ ನನಗೆ, ಇದುವರೆಗೆ ಹೇಗೆ ಇತ್ತು ?

೬೫. ನೀನು, ಇವನು, ನಾನು ಎಂಬ ಈ ಭ್ರಾಂತಿಯು ಕೇವಲ ಮಿಥ್ಯೆಯು ದೇಹವು ಯಾವುದು ? ಅದೇಹವು ಯಾವುದು, ? ಸತ್ತವನು ಯಾರು ? ಬದುಕಿರುವವನು ಯಾರು ?

೬೬. ಇಂತಹ ಅಪಾರವಾದ ಆತ್ಮ ಸ್ವರೂಪ ಸಾಮ್ರಾಜ್ಯವನ್ನು ತೊರೆದು, ಈ ಭವರೂಪ ಸಾಮ್ರಾಜ್ಯವನ್ನು ಅಪೇಕ್ಷಿಸಿದ ನಮ್ಮ ಪೂರ್ವ ಪುರುಷರು ನಿಜವಾಗಿಯೂ ಎಂತಹ ಕ್ಷುದ್ರ ಬುದ್ಧಿಗಳು !

ಕ್ವೇಯಂ ಕಿಲ ಮಹಾದೃಷ್ಟಿರ್ಭರಿತಾ ಬ್ರಹ್ಮಬೃಂಹಿತಾ ।
ಕ್ವ ಸರೀಸೃಪಭೀಮಾಶಾ ಭೀಮಾ ರಾಜ್ಯವಿಭೂತಯಃ ॥ ೬೭ ॥

ಅನಂತಾನಂದಸಂಭೋಗಾ ಪರೋಪಶಮಶಾಲಿನೀ ।
ಶುದ್ಧೇಯಂ ಚಿನ್ಮಯೀ ದೃಷ್ಟಿರ್ಜಯತ್ಯಖಿಲದೃಷ್ಟಿಷು ॥ ೬೮ ॥

ಸರ್ವಭಾವಾಂತರಸ್ಥಾಯ ಚೇತ್ಯಮುಕ್ತಚಿದಾತ್ಮನೇ ।
ಪ್ರತ್ಯಕ್ಚೇತನರೂಪಾಯ ಮಹ್ಯಮೇವ ನಮೋನಮಃ ॥ ೬೯ ॥

ಜಯಾಮ್ಯಹಮಜೋ ಜಾತೋ ಜೀರ್ಣಸಂಸಾರಸಂಸೃತಿಃ ।
ಪ್ರಾಪ್ತಪ್ರಾಪ್ಯೋ ಮಹಾತ್ಮಾಯಂ ಜೀವಾಮಿ ಚ ಜಯಾಮಿ ಚ ॥ ೭೦ ॥

---

೬೭. ಬ್ರಹ್ಮದಷ್ಟೇ ದೊಡ್ಡದಾಗಿರುವ, ಈ ಪೂರ್ಣ ದೃಷ್ಟಿಯೆಲ್ಲಿ? ಮಹಾ ಸರ್ಪಗಳಂತೆ ಭಯಂಕರಗಳಾದ ಆಶೆಗಳಿಂದ ಕೂಡಿ ಭಯಂಕರಗಳಾಗಿರುವ ರಾಜ್ಯೈಶ್ವರ್ಯಾದಿ ಸಂಪತ್ತುಗಳೆಲ್ಲಿ?

೬೮. ಅನಂತವಾದ ಆನಂದವನ್ನು ಕೊಡುವುದೂ, ಉತ್ಕೃಷ್ಟವಾದ ಉಪಶಮವುಳ್ಳದೂ ಆಗಿ ಶುದ್ಧವಾದ ಈ ಚಿನ್ಮಯ ದೃಷ್ಟಿಯು, ಉಳಿದ ಎಲ್ಲಾ ದೃಷ್ಟಿಗಳಿಗಿಂತ ಶ್ರೇಷ್ಠವಾದುದು.

೬೯. ಸರ್ವ ಪದಾರ್ಥಗಳ ಅಂತಸ್ಥನಾದ, ಚೇತ್ಯ (ದೃಶ್ಯ) ವಿಲ್ಲದ ಶುದ್ಧ ಚಿತ್ಸ್ವರೂಪನಾದ, ಪ್ರತ್ಯಕ್ ಚೇತನ ರೂಪನಾದ, ನನಗೇ ನಮಸ್ಕಾರವು.

೭೦. ನನಗೆ ಜಯ ಜಯ ಕಾರವು. ಅಜನು ನಾನು. ಸಂಸಾರವೆಂಬ ಪ್ರವಾಹವು ನನಗೆ ಜೀರ್ಣವಾಗಿ ಹೋಯಿತು. ಯಾವುದು ಪ್ರಾಪ್ಯವೋ ಅದು ಪ್ರಾಪ್ತವಾಯಿತು. ನಾನು ಮಹಾತ್ಮನಾದೆನು. ಜೀವನವು ಸಫಲವಾಯಿತು.

ಇದಮುತ್ತಮಸಾಮ್ರಾಜ್ಯಂ ಬೋಧಂ ಸಂತ್ಯಜ್ಯ ಶಾಶ್ವತಂ ।
ನ ರಮೇಽಹಮರಮ್ಯಾಸು ರಾಜ್ಯದುಃಖವಿಭೂತಿಷು ॥ ೭೧ ॥

ದಾರುಪಾರಿ ದೃಷನ್ಮಾತ್ರೇ ಲುಲಿತೋ ಯೋ ಧರಾತಲೇ ।
ಧಿಗ್ವರಾಕಮನಾತ್ಮಜ್ಞಂ ತಂ ಕುದಾನವ ಕೀಲಕಂ ॥ ೭೨ ॥

ಅವಿದ್ಯೈಕಾತ್ಮಭಿರ್ದ್ರವ್ಯೈರವಿದ್ಯಾಮಯ ಮಂಗಕಂ ।
ಅಜ್ಞೇನ ಸಂತರ್ಪಯತಾ ಕಿಂ ನಾಮ ಗುರುಣಾ ಕೃತಂ ॥ ೭೩ ॥

ವರ್ಷಾಣಿ ಕತಿಚಿತ್ಪ್ರಾಪ್ಯ ಜಗಚ್ಛ್ರೀಮಠಿಕಾಮಿಮಾಂ ।
ಕಿಂನಾಮ ಪ್ರಾಪದುಚಿತಂ ಹಿರಣ್ಯ ಕಶಿಪುಃ ಕಿಲ ॥ ೭೪ ॥

---

೭೧. ಈ ಜ್ಞಾನಸ್ವರೂಪವೂ, ಶಾಶ್ವತವೂ ಆದ ಆತ್ಮ ಸಂಸ್ಥನಾಗುವುದೆಂಬ ಇದು ನಿಜವಾಗಿಯೂ ಉತ್ತಮವಾದ ಸಾಮ್ರಾಜ್ಯವು. ರಮಣೀಯಗಳಾದ ದುಃಖ ಬಹುಳವಾದ ರಾಜ್ಯ ಭಾರಗಳಲ್ಲಿ ನನಗೆ ರುಚಿಯಿಲ್ಲ.

೭೨. ಮರ, ನೀರು, ಕಲ್ಲು ಮಾತ್ರವಲ್ಲದೆ ಇನ್ನೇನೂ ಅಲ್ಲದ ಈ ಧರಾತಲ ಸಾಮ್ರಾಜ್ಯಕ್ಕಾಗಿ ಒದ್ದಾಡಿದ ಅನಾತ್ಮಜ್ಞನಾದ, ಹೀನವಾದ, ದಾನವ ಕೀಟಕ್ಕೆ ಧಿಕ್ಕಾರವಿರಲಿ.

೭೩. ಅವಿದ್ಯಾಮಯಗಳಾದ ಪದಾರ್ಥಗಳಿಂದ, ಅವಿದ್ಯಾಮಯವಾದ ದೇಹ ವನ್ನು ಸಂತೋಷಗೊಳಿಸುತ್ತಿದ್ದ ಅಜ್ಞನಾದ ನಮ್ಮ ತಂದೆಯು ಎಂತಹ ಕಾರ್ಯ ಮಾಡಿದನು?

೭೪. ಈ ಬ್ರಹ್ಮಾಂಡವೆಂಬ ಗುಡಿಸಲನ್ನು ಕೆಲವು ವರ್ಷಗಳು ಒಡೆಯನೆಂದು ಕೊಂಡು ಆಳಿದ ಮಾತ್ರಕ್ಕೆ ಹಿರಣ್ಯಕಶಿಪುವು ಏನನ್ನು ಪಡೆದಂತೆ ಆಯಿತು? (ಉಚಿತಂ ಕಾಶ್ಯಪೇ ಕುಲೇ ಜನ್ಮನೋಽನುರೂಪಂ ಪರಮ ಪುರುಷಾರ್ಥಂ ತಾ. ಪ್ರ.)

ಅನಾಸ್ವಾದ್ಯೈದಮಾನಂದಂ ಜಗದ್ರಾಜ್ಯಶತಾನ್ಯಪಿ ।
ಸಮಾಸ್ವಾದಯತಾ ನೇಹ ಕಿಂಚಿದಾಸ್ವಾದಿತಂ ಭವೇತ್ || ೭೫ ||

ನ ಕಿಂಚಿದ್ಯೇನ ಸಂಪ್ರಾಪ್ತಂ ತೇನೇದಂ ಪರಮಾಮೃತಂ ।
ಸಂಪ್ರಾಪ್ಯಾಂತಃ ಪ್ರಪೂರ್ಣೇನ ಸರ್ವಂ ಪ್ರಾಪ್ತಮಖಂಡಿತಂ || ೭೬ ||

ತ್ಯಕ್ತ್ವಾ ಪದಮಿದಂ ಮೂರ್ಖೋ ಮಿತಮೇತಿ ನ ಪಂಡಿತಃ ।
ಉಷ್ಟ್ರೋ ಹಿ ತ್ಯಕ್ತಸುಲತಃ ಕಂಟಕಂ ಯಾತಿ ನೇತರಃ || ೭೭ ||

ಪರಾಂ ದೃಷ್ಟಿಮಿಮಾಂ ತ್ಯಕ್ತ್ವಾ ದಗ್ಧರಾಜ್ಯೇ ರಮೇತ ಕಃ ।
ಕಸ್ತ್ಯಕ್ತ್ವೇಕ್ಷುರಸಂ ಪ್ರಾಜ್ಞಃ ಕಟುನಿಂಬಪಯಃ ಪಿಬೇತ್ || ೭೮ ||

---

೭೫. ಈ ಬ್ರಹ್ಮಾನಂದವನ್ನು ಅನುಭವಿಸದೆ, ಜಗತ್ತಿನ ಸಾಮ್ರಾಜ್ಯಗಳು ನೂರಾರನ್ನು ಅನುಭವಿಸಿದರೂ ಏನೂ ಅನುಭವಿಸಿದಂತೆಯೇ ಆಗಲಿಲ್ಲ.

೭೬. ಶ್ರೇಷ್ಠವಾದ ಈ ಅಮೃತವನ್ನು ಕೊಂಚವಾದರೂ ಪಡೆಯದವನು, ಇನ್ನು ಏನು ಪಡೆದರೂ ಪ್ರಯೋಜನವೇನು? ತನ್ನೊಳಗೇ ಇದ್ದು ಯಾವಾಗಲೂ ಪ್ರಪೂರ್ಣವಾಗಿರುವ ಈ ಆನಂದವನ್ನು ಪಡೆದವನಿಗೆ ನಿರಂತರವಾದ ಸರ್ವಾನಂದವೂ ಪ್ರಾಪ್ತವಾದಂತೆಯೇ!

೭೭. ಒಂಟೆಯು ಒಳ್ಳೊಳ್ಳೆಯ ಬಳ್ಳಿಗಳನ್ನೆಲ್ಲ ಬಿಟ್ಟು ಮುಳ್ಳುಗಳನ್ನೇ ಆರಿಸಿಕೊಂಡು ತಿನ್ನುವಂತೆ, ಮೂರ್ಖನಾದವನು ಈ ಆತ್ಮಪದವನ್ನು ಬಿಟ್ಟು ಅಲ್ಪವಾದ ಲೋಕವನ್ನು ಹಿಡಿಯುವನು. ಪಂಡಿತನಾದವನು ಎಂದಿಗೂ ಹಾಗೆ ಮಾಡುವುದಿಲ್ಲ.

೭೮. ಇಂತಹ ಉತ್ತಮವಾದ ಆತ್ಮದೃಷ್ಟಿಯನ್ನು ಬಿಟ್ಟು ಯಾವನು ತಾನೇ ಸುಟ್ಟ ರಾಜ್ಯದಲ್ಲಿ ರಮಿಸುವನು? ಯಾವನು ತಾನೇ ಸಿಹಿಯಾದ ಕಬ್ಬಿನ ರಸವನ್ನು ಬಿಟ್ಟು ಕಹಿಯಾದ ಬೇವಿನ ರಸವನ್ನು ಕುಡಿದಾನು?

ಮೂರ್ಖಾ ಏವ ಹಿ ತೇ ಸರ್ವೇ ಬಭೂವುರ್ಮೇ ಪಿತಾಮಹಾಃ ।
ಇಮಾಂ ದೃಷ್ಟಿಂ ಪರಿತ್ಯಜ್ಯ ರೇಮಿರೇ ರಾಜ್ಯಸಂಕಟೇ ॥ ೭೯ ॥

ಕ್ವ ಫುಲ್ಲಾನನ್ದನಸ್ಥಲ್ಯ: ಕ್ವ ದಗ್ಧಮರುಭೂಮಯಃ ।
ಕ್ವೇಮಾ ಬೋಧದೃಶಃ ಶಾನ್ತಾ: ಕ್ವ ಭೋಗೇಷ್ವಾತ್ಮಬುದ್ಧಯಃ ॥ ೮೦ ॥

ನ ಕಿಂಚಿದಪಿ ತ್ರೈಲೋಕ್ಯೇ ಯದ್ರಾಜ್ಯಮಪಿ ವಾಂಛತೇ ।
ಸರ್ವಮಸ್ತ್ಯೇವ ಚಿತ್ತತ್ತ್ವೇ ತತ್ಕಸ್ಮಾನ್ನಾನುಭೂಯತೇ ॥ ೮೧ ॥

ಚಿತಾ ಸರ್ವಸ್ಥಯಾ ಸ್ವಸ್ಥಸಮಯಾ ನಿರ್ವಿಕಾರಯಾ ।
ಸರ್ವಯಾ ಸರ್ವದಾ ಸರ್ವಂ ಸರ್ವತಃ ಸಾಧು ಲಭ್ಯತೇ ॥ ೮೨ ॥

---

೭೯. ಇಂತಹ ಆನಂದಮಯವಾದ ದೃಷ್ಟಿಯನ್ನು ಬಿಟ್ಟು, ರಾಜ್ಯ ಸಂಕಟದಲ್ಲಿಯೇ ರಮಿಸಿದ ನಮ್ಮ ಪಿತಾಮಹರೆಲ್ಲರೂ ನಿಜವಾಗಿಯೂ ಮೂರ್ಖರೇ!

೮೦. ಹೂಬಿಟ್ಟು ಮೆರೆಯುವ ನಂದನವನದ ಪುಷ್ಪ ಭೂಮಿಗಳೆಲ್ಲಿ? ಸುಟ್ಟು ಹೋಗಿರುವ ನೆಲವುಳ್ಳ ಮರುಭೂಮಿಗಳೆಲ್ಲಿ? ಜ್ಞಾನ ಪೂರ್ಣಗಳಾಗಿ ಶಾಂತಗಳಾದ ಈ ದೃಷ್ಟಿಗಳೆಲ್ಲಿ? ಭೋಗಾಯತನವಾದ ದೇಹಗಳೇ ತಾವೆಂದುಕೊಳ್ಳುವ ದುರ್ಬುದ್ಧಿಗಳೆಲ್ಲಿ?

೮೧. ಏನು ಸುಖವೆಂದು ಜಗತ್ತ್ರಯದಲ್ಲಿ ರಾಜ್ಯಾದಿಗಳನ್ನು ಅಪೇಕ್ಷಿಸುವರೋ? ಏನೇನು ಬೇಕೆಂದರೆ ಅದದೆಲ್ಲವನ್ನೂ ಕೊಡುವ ಚಿತ್ ತತ್ವವಿರಲು ಅದನ್ನು ಏಕೆ ಅನುಭವಿಸುವುದಿಲ್ಲ?

೮೨. ಸರ್ವಸ್ಥವೂ, ಸ್ವ-ಸ್ಥವೂ, ಸಮವೂ, ನಿರ್ವಿಕಾರವೂ ಆಗಿ ಸರ್ವವೂ ತಾನೇ ಆಗಿರುವ ಚಿತ್ತಿನಿಂದ ಸರ್ವದಾ ಸರ್ವವೂ ಸರ್ವ ವಿಧದಿಂದಲೂ ಸಾಧುವೇ ಆಗಿ ಲಭ್ಯವಾಗಿರುವುದಲ್ಲಾ!

ಭಾಸಿನೀ ತೈಜಸೀ ಶಕ್ತಿರಮೃತಪ್ರಾಪ್ತಿರೈಂದವೀ ।
ಬ್ರಾಹ್ಮೀ ಮಹತ್ತಾ ಮಹತೀ ಶಕ್ತೀ ತ್ರೈಲೋಕ್ಯರಾಜತಾ ॥ ೮೩ ॥

ಪರಮಾಪೂರ್ಣತಾ ಶಾರ್ವೀ ಜಯಲಕ್ಷ್ಮೀಶ್ಚ ವೈಷ್ಣವೀ ।
ಮಾನಸೀ ಶೀಘ್ರಗತಿತಾ ಬಲವತ್ತಾ ಚ ವಾಯವೀ ॥ ೮೪ ॥

ಆಗ್ನೇಯೀ ದಾಹಕಲನಾ ಪಾಯಸೀ ರಸನಿರ್ವೃತಿಃ ।
ಮೌನೀ ಮಹಾತಪಃ ಸಿದ್ಧಿರ್ವಿದ್ಯಾ ಬಾರ್ಹಸ್ಪತೀ ತಥಾ ॥ ೮೫ ॥

ವೈಮಾನಿಕೀ ವ್ಯೋಮಗತಿಃ ಸ್ಥಿರತಾ ಚಾಪಿ ಪಾರ್ವತೀ ।
ಗಂಭೀರತಾಥ ಸಾಮುದ್ರೀ ಮೈರವೀ ಚ ಮಹೋನ್ನತಿಃ ॥ ೮೬ ॥

ಶಮಶ್ರೀಃ ಸೌಗತೀ ಸೌಮ್ಯಾ ಮಾದರೀ ಮದಲೋಲತಾ ।
ಮಾಧವೀ ಪುಷ್ಪಮಯತಾ ವಾರ್ಷಕೀ ಘನಶಬ್ದಿತಾ ॥ ೮೭ ॥

ಯಾಕ್ಷೀ ಚ ಮಾಯಾಮಯತಾ ನಾಭಸೀ ನಿಷ್ಕಲಂಕತಾ।
ಶೀತತಾಪಿ ಚ ತೌಷಾರೀ ನೈದಾಘೀ ತಾಪತಪ್ತತಾ ॥ ೮೮ ॥

ಏತಾಶ್ಚಾನ್ಯಾಸ್ತಥಾ ಬಹ್ವ್ಯೋ ದೇಶಕಾಲಕ್ರಿಯಾತ್ಮಿಕಾಃ ।
ನಾನಾಕಾರವಿಕಾರೋತ್ಥಾಸ್ತ್ರಿಕಾಲೋದರಸಂಸ್ಥಿತಾಃ ॥ ೮೯ ॥

ವಿಚಿತ್ರಾಃ ಶಕ್ತಯಃ ಸ್ವಸ್ಥಸಮಯಾ ನಿರ್ವಿಕಾರಯಾ ।
ಚಿತಾ ಕ್ರಿಯನ್ತೇ ಪರಯಾ ಕಲಾಕಲನಯುಕ್ತಯಾ ॥ ೯೦ ॥

೮೩-೯೦. ತೇಜಸ್ಸಂಬಂಧವಾದ ಭಾಸಿನೀ ಶಕ್ತಿಯು, ಚಂದ್ರ ಸಂಬಂಧವಾದ ಅಮೃತ ಪ್ರಾಪ್ತಿ ಶಕ್ತಿಯು, ಬ್ರಾಹ್ಮ ಸಂಬಂಧವಾದ, ಸರ್ವೋತ್ಕೃಷ್ಟವಾದ ಮಹತ್ತಾ ಶಕ್ತಿಯು, ಇಂದ್ರ ಸಂಬಂಧವಾದ ತ್ರೈಲೋಕ್ಯ ರಾಜತಾ ಶಕ್ತಿಯು, ಸರ್ವ ಸಂಬಂಧವೂ ಶ್ರೇಷ್ಠವೂ ಆದ ಪೂರ್ಣತಾ ಶಕ್ತಿಯೂ, ವಿಷ್ಣು ಸಂಬಂಧಿನಿಯಾದ ಜಯಲಕ್ಷ್ಮೀ ಶಕ್ತಿಯೂ, ಮನಸ್ಸಂಬಂಧವಾದ ಶೀಘ್ರ ಗತಿಕಾ ಶಕ್ತಿಯೂ, ವಾಯು ಸಂಬಂಧವಾದ ಬಲವತ್ತಾ ಶಕ್ತಿಯೂ, ಅಗ್ನಿ ಸಂಬಂಧವಾದ ದಾಹಕ ಶಕ್ತಿಯೂ, ಜಲ ಸಂಬಂಧವಾದ ರಸ ಶಕ್ತಿಯೂ, ಮುನಿ ಸಂಬಂಧವಾದ ಮಹಾ ತಪಸ್ಸಿದ್ಧಿ ಶಕ್ತಿಯೂ, ಬೃಹಸ್ಪತಿ ಸಂಬಂಧವಾದ ವಿದ್ಯಾ ಶಕ್ತಿಯೂ, ವೈಮಾನಿಕ ಸಂಬಂಧವಾದ ವ್ಯೋಮಗತಿ ಶಕ್ತಿಯೂ, ಪರ್ವತ ಸಂಬಂಧವಾದ ಸ್ಥಿರತಾಶಕ್ತಿಯೂ, ಸಮುದ್ರ ಸಂಬಂಧಿನಿಯಾದ ಗಂಭೀರತೆಯೂ, ಮೇರು ಸಂಬಂಧವಾದ ಮಹೋ

ವಿಕಲ್ಪಹೀನಾ ಚಿತ್ಸರ್ವಾ ಪದಾರ್ಥಶತದೃಷ್ಟಿಷು ।
ಸಮಮೇವಾಭಿಪತತಿ ಪ್ರಭಾ ಪ್ರಾಭಾಕರೀ ಯಥಾ ॥ ೯೧ ॥

ಸರ್ವಾಶಾಕೋಶವಿಶ್ರಾನ್ತಾಂ ಪದಾರ್ಥಪಟಲೀಂ ಮಹೀಂ ।
ಕಾಲತ್ರಯೇಹಾಕಲಿತಾಂ ಯಥಾನುಭವತಿ ಕ್ಷಣಾತ್ ॥ ೯೨ ॥

ತಥಾ ಸಮಸ್ತಸಂಸಾರಬೃಹದ್ದೃಶ್ಯದಶಾಶ್ರಿಯಂ ।
ಕಾಲತ್ರಯಸ್ಥಾಮಮಲಾ ಚಿಚ್ಚೇತತಿ ತದಾತ್ಮಿಕಾ ॥ ೯೩ ॥

ನ್ನತಿ ಶಕ್ತಿಯೂ, ಸುಗತ ಸಂಬಂಧವಾದ ಸೌಮ್ಯವಾದ ಶಮ ಶ್ರೀ ಶಕ್ತಿಯೂ, ಮದಿರಾದೇವಿಯ ಸಂಬಂಧವಾದ ಮದಲೋಲತಾ ಶಕ್ತಿಯೂ, ಮಾಧವ ಸಂಬಂಧ ವಾದ ಪುಷ್ಪಮಯತಾ ಶಕ್ತಿಯೂ, ವರ್ಷ ಸಂಬಂಧವಾದ ಘನ ಶಬ್ದತಾ ಶಕ್ತಿಯೂ, ಯಕ್ಷ ಸಂಬಂಧಿನಿಯಾದ ಮಾಯಾಮಯತಾ ಶಕ್ತಿಯೂ, ನಭಸ್ಸಂಬಂಧಿನಿಯಾದ ನಿಷ್ಕಲಂಕತಾ ಶಕ್ತಿಯೂ, ತುಷಾರ ಸಂಬಂಧಿನಿಯಾದ ಶೀತತಾ ಶಕ್ತಿಯೂ, ನಿದಾಘ ಸಂಬಂಧಿನಿಯಾದ ತಾಪತಪ್ತತಾ ಶಕ್ತಿಯೂ, ಇವೆಲ್ಲದರ ಜೊತೆಗೆ ಇನ್ನೂ ದೇಶಕಾಲ ಕ್ರಿಯಾತ್ಮಕಗಳಾಗಿರುವ ಎಷ್ಟೋ ಶಕ್ತಿಗಳು ನಾನಾ ಆಕಾರ ವಿಕಾರಗಳಿಂದ ಜನಿಸಿ ರುವ ಇತರ ಶಕ್ತಿಗಳು, ಕಾಲತ್ರಯದ ಗರ್ಭದಲ್ಲಿರುವ ಅನ್ಯ ಶಕ್ತಿಗಳು, ಚಿತ್ರವಿಚಿತ್ರ ಗಳಾದ ಇನ್ನೂ ಎಷ್ಟೋ ಶಕ್ತಿಗಳು, ಸ್ವಸ್ಥವಾಗಿ, ಸಮವಾಗಿ, ನಿರ್ವಿಕಾರ ವಾಗಿ, ಸರ್ವೋತ್ಕೃಷ್ಟವಾಗಿ, ಸೃಷ್ಟಿಯನ್ನು ಮಾಡಲು ಹೊರಟಿರುವ ಚಿತ್ತಿನಿಂದ ಆಗುವುವು.

೯೧. ಸೂರ್ಯನ ಪ್ರಭೆಯು ಒಂದೇ ಕಾಲದಲ್ಲಿ ಎಲ್ಲಾ ಪದಾರ್ಥಗಳ ಮೇಲೂ ಬೀಳುವಂತೆ, ವಿಕಲ್ಪರಹಿತವಾದ ಚಿಚ್ಛಕ್ತಿಯು ನೂರಾರು ಪದಾರ್ಥಗಳ ಮೇಲೆಲ್ಲಾ ಏಕ ಕಾಲದಲ್ಲಿಯೇ ಪ್ರಕಾಶಿಸುವುದು.

೯೨-೯೩ ದಿಕ್ಕುದಿಕ್ಕುಗಳಲ್ಲೆಲ್ಲಾ ಪದಾರ್ಥ ಪದಾರ್ಥಗಳನ್ನುಳ್ಳ ಈ ಮಹೀ ಮಂಡಲವೆಲ್ಲವೂ ಭೂತ ಭವಿಷ್ಯದ್ವರ್ತಮಾನಗಳೆಂಬ ಮೂರು ಕಾಲಗಳಲ್ಲಿಯೂ ಯಾವ ಯಾವ ರೂಪದಲ್ಲಿ ಗೋಚರವಾಗುತ್ತದೆಯೋ, ಅದೆಲ್ಲವೂ ಹಾಗೆ ಹಾಗೆಯೇ ಹಾಗೆ ಹಾಗೆಯೇ ತೋರುವಂತೆ, ಇದೇ ಅಮಲವಾದ ಚಿತ್ತು ತಾನೇ ಅದದೇ ರೂಪವಾಗಿ ಅದದೇ ಕಾಲದಲ್ಲಿ ಕಾಣುವುದು.

(ಭೂಮಂಡಲ ಮಂಡಲಗಳನ್ನೂ (ಎಂದರೆ ಸರ್ವ ದೇಶಗಳನ್ನೂ) ಭೂತ ಭವಿಷ್ಯದ್ವರ್ತಮಾನ ಕಾಲಗಳನ್ನೂ ಒಂದೇ ಕ್ಷಣದಲ್ಲಿಯೇ ಈ ಚಿತ್ತು ಅನುಭವ ಮಾಡುವುದು (ಕಾಲ ದೇಶಗಳ ಪರಿಚ್ಛೇದವನ್ನು ಮೀರಿ ಅನುಭವವನ್ನು ಪಡೆಯುವಂತೆ) ಆ ಚಿತ್ತು ಕಾಲತ್ರಯ ದೇಶಗಳಿಗೆ ಒಳಪಟ್ಟು ಇರುವ ಸಂಸಾರ ರೂಪವಾದ ಈ ದೃಶ್ಯ ಪ್ರಪಂಚವೆಲ್ಲವೂ ತಾನೇ ಆಗಿಯೂ ತೋರುವುದು.)

(ದೇಹೋಽಹಂ ಬುದ್ಧಿಯು ಇಲ್ಲದ ಆತ್ಮವು ಜೀವಭಾವ ಸಂಪನ್ನವಾಗಿದ್ದರೂ ದೇಶಕಾಲ ಪರಿಚ್ಛೇದಗಳನ್ನು ಮೀರಬಲ್ಲುದು. ಉದಾಹರಣೆಗಾಗಿ ಸರ್ ಆಕ್‌ಲೆಂಡ್ ಗೆಡ್ಡಿಸ್ ಎಂಬುವರು ೨೬-೨-೧೯೩೭ರಲ್ಲಿ ರಾಯಲ್ ಮೆಡಿಕಲ್ ಸೊಸೈಟಿಯಲ್ಲಿ A voice from the grand stand ಎಂಬ ಒಂದು ಲೇಖನವನ್ನು ಓದಿದರು. ಆ ಲೇಖನದಿಂದ ಈ ಭಾಗವನ್ನು ಉದ್ಧರಿಸಲಾಗಿದೆ:—

I suddenly realised that my consiousness was separating from another consciousness which was also me. These, for purposes of description, we could call the A- and B-consciousnesses, and throughout what follows the ego attached itself to the A-consciousness. The B-personality I recognised as belonging to the body, and as my physical condition grew worse and the heart was fibrillating rather than beating I realised that the B-consciousness belonging to the body was beginning to show signs of being composite, that is built up of ‘consciousness’ from the head, the heart and the viscera. These components became more individual and the B-consciousness began to disintegrate, while the A-consciousness, which was now me, seemed to be altogether outside my body, which it could see. Gradually I realised that I could see, not only my body and the bed in which it was, but everything in the whole house and garden, and then I realised that I was seeing, not only ‘things’ at home

ತುಲ್ಯಕಾಲಪರಾಮೃಷ್ಟಾ ತ್ರಿಕಾಲಕಲನಾಶತಾ ।
ಅನನ್ತಭುವನಾಭೋಗಾ ಪರಿಪೂರ್ಣೈವ ಶುದ್ಧಚಿತ್ ॥ ೯೪ ॥

ಪರಾಮೃಷ್ಟತ್ರಿಕಾಲಾಯಾ ದೃಷ್ಟಾನನ್ತದೃಶಶ್ಚಿತಃ ।
ಸಮತಾಪರಪರ್ಯಾಯಾ ಪೂರ್ಣತೈವಾವಶಿಷ್ಯತೇ ॥ ೯೫ ॥

ತುಲ್ಯಕಾಲಾವಬುದ್ಧೇನ ಸಾಧುನಾ ಕಟುನಾಪಿ ಚಿತ್ ।
ಸಮೇನ ಸಮತಾಮೇತಿ ಮಧುನಿಮ್ಬಾನುಭೂತಿವತ್ ॥ ೯೬ ॥

---

but in London and in Scotland, in fact wherever my attention was directed, it seemed to me: and the explanation which I received, from what source I do not know, but which I found myself calling to myself my mentor, was that I was free in a time dimension of space, wherein ' now ' was in some way equivalent to ' here in the ordinary three-dimensional space of everyday life. "

೯೪. ಏಕಕಾಲದಲ್ಲಿಯೇ ನಾನಾ ರೂಪವಾಗಿ ಕಂಡರೂ, ಕಾಲತ್ರಯದಲ್ಲಿ ನಾನಾ ಕಲ್ಪನೆಗಳಿಗೆ ಒಳಗಾಗಿರುವಂತೆ ಕಂಡರೂ, ಲೆಕ್ಕವಿಲ್ಲದಷ್ಟು ಭುವನಗಳಾಗಿ ಹರಡಿದ್ದರೂ ಈ ಚಿತ್ತು ಪರಿಪೂರ್ಣವಾಗಿ, ಶುದ್ಧವಾಗಿ ಯಾವುದೊಂದು ಪರಿಚ್ಛೇದಕ್ಕೂ ಒಳಗಾಗದೆ ಇರುವುದು.

೯೫. ತ್ರಿಕಾಲಗಳಲ್ಲಿಯೂ ತೋರಿಸಿಕೊಳ್ಳುತ್ತ, ಅನಂತಾನಂತ ದೃಶ್ಯರೂಪವಾಗಿ ಕಾಣುತ್ತಿದ್ದರೂ ಈ ಚಿತ್ತು ತಾನು ಮಾತ್ರ ಪೂರ್ಣವಾಗಿಯೇ ಇರುವುದು. ಆ ಪೂರ್ಣತೆಯನ್ನೇ ಸಮತೆಯೆಂದೂ ಕರೆಯುವರು.

(ಗೀತೆಯಲ್ಲಿ "ಸಮ" ಎಂಬುದನ್ನು ಬ್ರಹ್ಮ ಎಂಬ ಅರ್ಥದಲ್ಲಿ ಉಪಯೋಗಿಸಿರುವುದನ್ನು ಸ್ಮರಿಸಿ)

೯೬. ಹೀಗೆ ಪರಿಚ್ಛೇದರಹಿತವಾಗಿರುವುದರಿಂದಲೇ ಜೇನಿನಲ್ಲಿ ಸಿಹಿಯೂ, ಬೇವಿನಲ್ಲಿ ಕಹಿಯೂ ಆಗಿ ಚಿತ್ತೇ ಇರುವುದು, ಹಾಗಿರುವುದರಿಂದ ಜೇನು ಕುಡಿದವರು

ತ್ಯಕ್ತಸಂಕಲ್ಪಕಲಯಾ ಸೂಕ್ಷ್ಮಯಾ ಚಿದ್ವ್ಯವಸ್ಥಯಾ ।
ಸರ್ವಭಾವಾನುಗತಯಾ ಸತ್ತಾದ್ವೈತೈಕರೂಪಯಾ ॥ ೯೭ ॥

ವಿಚಿತ್ರಾಪಿ ಪದಾರ್ಥಶ್ರೀರನ್ಯೋನ್ಯವಲಿತಾಂತರಾ ।
ತುಲ್ಯಕಾಲಾನುಭವನಾ ಸಾಮ್ಯೇನೈವಾನುಭೂಯತೇ ॥ ೯೮ ॥

ಭಾವೇನಾಭಾವಮಾಶ್ರಿತ್ಯಾ ಭಾವಸ್ತ್ಯಜತಿ ದುಃಖತಾಂ ।
ಪ್ರೇಕ್ಷ್ಯ ಭಾವಮಭಾವೇನ ಭಾವಸ್ತ್ಯಜತಿ ದುಷ್ಟತಾಂ ॥ ೯೯ ॥

ಸಿಹಿಯನ್ನೂ, ಬೇವು ತಿಂದವರು ಕಹಿಯನ್ನೂ, ಏಕ ಕಾಲದಲ್ಲಿಯೇ ಅನುಭವಿಸುವರು. (ವಿಷಯ ಭೇದವಾದರೂ ಅನುಭವ ಭೇದವಿಲ್ಲದಿರುವುದು ಚಿತ್ತಿನ ಏಕ ರೂಪತೆಯಿಂದ.)

(ಏಕಕಾಲದಲ್ಲಿಯೇ ಒಬ್ಬರಿಗೆ ಸಿಹಿಯಾಗಿಯೂ, ಇನ್ನೊಬ್ಬರಿಗೆ ಕಹಿಯಾಗಿಯೂ ಅನುಭವಕ್ಕೆ ಬರುವುದು ಈ ಚಿತ್ತೇ ಆದರೂ, ತಾನು ಸಮನಾಗಿದ್ದು ಸಮತ್ವವನ್ನೇ ಹೊಂದುವುದು. ಮಧುವಾಗಲಿ ನಿಂಬವಾಗಲಿ, ಅದರಿಂದ ಬರುವ ಅನುಭವವು (ಅನುಭವ ಸಾಮಾನ್ಯತ್ವೇನ) ಒಂದೇ ಹೇಗೋ ಹಾಗೆಯೇ ಈ ಚಿತ್ತೂ ಕೂಡ ಸ್ವಾದು ಕಟುಗಳಾಗಿ ಅನುಭವ ಗೋಚರವಾದರೂ ತಾನಃ ಆ ಅನುಭವದ ಆಚೆ ಇದ್ದುಕೊಂಡು ಒಂದೇ ಆಗಿರುವುದು.)

೯೭-೯೮. ಹೀಗೆಯೇ ಸಂಕಲ್ಪರಹಿತವಾಗಿ ಸೂಕ್ಷ್ಮವಾಗಿರುವ ಚಿತ್ತಿನ ಪ್ರಭಾವದಿಂದಲೇ, ಪರಸ್ಪರ ಸದೃಶಗಳೂ, ಭಿನ್ನಗಳೂ ಆಗಿರುವ ನಾನಾ ವಿಧವಾದ ದೃಶ್ಯ ಪದಾರ್ಥವೆಲ್ಲವೂ ತನ್ನಲ್ಲಿಯೇ ಇದ್ದು, ತನ್ನ ಬಲದಿಂದಲೇ ಏಕಕಾಲದಲ್ಲಿಯೇ ಅನುಭವಕ್ಕೆ ಬರುವುದಾದರೂ ಚಿತ್ತು ತಾನು ಮಾತ್ರ ಏಕವಾಗಿ ಅದ್ವೈತವಾಗಿ ಯಾವ ಹಾನಿಯೂ ಇಲ್ಲದೆ ಇರುವುದು.

೯೯. (ತ್ರಿಕಾಲಾಬಾಧಿತವಾಗಿರುವ ಬ್ರಹ್ಮಭಾವವನ್ನು ಹಿಡಿದು, ಈ ದೃಶ್ಯ ಜಾತವೆಲ್ಲವೂ ಅಭಾವವೆಂಬುದನ್ನು ಮನಗಂಡರೆ, ಮನಸ್ಸು ದುಃಖತೆಯನ್ನು ಬಿಟ್ಟು ವಾಸನಾ ಶೂನ್ಯವಾಗಿ ಶುದ್ಧವಾಗುವುದು. ದೃಶ್ಯವೆಲ್ಲವೂ ಅಸತ್ತು, ಆದ ರಿಂದ ಅಭಾವವೇ! ಇದರ ಹಿಂದಿರುವ ಬ್ರಹ್ಮವೇ ಸತ್ತು! ಅದೇ ಭಾವ ಎಂಬು ದನ್ನು ಕಂಡರೆ, ಮನಸ್ಸು ತನ್ನ (ವಾಸನಾ) ದುಷ್ಟತೆಯನ್ನು ಬಿಡುವುದು.

ಕಾಲತ್ರಯಮಪಶ್ಯಂತ್ಯಾ ಹೀನಾಯಾಶ್ಚೇತ್ಯಬಂಧನೈಃ ।
ಚಿತಶ್ಚೇತ್ಯಮುಪೇಕ್ಷಿಣ್ಯಾಃ ಸಮತೈವಾವಶಿಷ್ಯತೇ ॥ ೧೦೦ ॥

ಯಾತಿ ವಾಚಾಮಗಮ್ಯತ್ವಾದಸತಾಮಿವ ಶಾಶ್ವತೀಂ ।
ನೈರಾತ್ಮ್ಯಸಿದ್ಧಾಂತದಶಾಮುಪಯಾತೇವ ತಿಷ್ಠತಿ ॥ ೧೦೧ ॥

(. ಭಾವವು (ಸತ್ತಾ ಸ್ವರೂಪವಾಗಿರುವ ಚಿತ್ತು) ತನ್ನ ಸದ್ಭಾವವನ್ನು ಗಮನಿಸಿ, ಅದರ ಜೊತೆಯಲ್ಲಿಯೇ (ಅವಿಚಾರ ದಶೆಯಲ್ಲಿ ಇದ್ದರೂ ವಿಚಾರ ದಶೆ ಯಲ್ಲಿ ಇಲ್ಲದ) ಈ ಪ್ರಪಂಚದ ಅಭಾವವನ್ನು ಚಿಂತಿಸಿ; (ದೃಶ್ಯ ಭೇದದಿಂದ ಮನಸ್ಸಿನಲ್ಲಿ ತೋರುವ ಸುಖದುಃಖಗಳು ತನ್ಮಾತ್ರಾ ಸಂಸರ್ಗದಿಂದ ಆದವು ಎಂಬು ದನ್ನು ಅರಿತು) ದುಃಖವನ್ನು ಬಿಡುವುದು. ಹಾಗೆಯೇ ಸತ್ಸ್ವರೂಪವಾಗಿ ಕಾಣು ತ್ತಿರುವ ಭಾವವು ವಸ್ತುತಃ ಅಭಾವವೆಂಬುದನ್ನು ತಿಳಿದು ಭೇದವೆಂಬ ದುಷ್ಟತಿ ಯನ್ನು ಬಿಡುವುದು.)

೧೦೦. ಕಾಲತ್ರಯಗಳನ್ನೂ ಕಾಣದಿರುವ, (ಎಂದರೆ ಭೂತ ಭವಿಷ್ಯದ್ವರ್ತ ಮಾನಗಳೆಂಬ ಕಾಲದ ಪರಿಚ್ಛೇದಗಳಿಗೆ ಸಿಕ್ಕದೆ), ದೃಶ್ಯವೆಂಬ ಬಂಧನಗಳಿಲ್ಲದೆ, (ದೃಶ್ಯ ಜಾತಕ್ಕೆ ಕಾರಣವಾಗಿದ್ದರೂ ತಾನು ದೃಶ್ಯದ ಹಾಗೆ ಪರಿಚ್ಛಿನ್ನವಲ್ಲದ), ದೃಶ್ಯವನ್ನು ಮೀರಿ ಮುಂದೆ ಹೋಗುವ ಚಿತ್ತು ಯಾವಾಗಲೂ ಸಮವಾಗಿಯೇ ಇರುವುದು. ಅದರ ಸಮತೆಯು ಎಂದಿಗೂ ಅಳಿಯುವುದಿಲ್ಲ.

(ಕಾಲತ್ರಯ ಭೇದವನ್ನು ಗಮನಿಸದೆ ಹೋದರೆ, ಚೇತ್ಯವನ್ನು ಸತ್ಸ್ವರೂಪವೆನ್ನದೆ ಉಪೇಕ್ಷಿಸಿದ್ದೇ ಆದರೆ, ದೃಶ್ಯಬಂಧವು ಚಿತ್ತಿಗೆ ತಪ್ಪುವುದು! ಮತ್ತು ಚಿತ್ತು ಸಮವಾಗಿ ಪೂರ್ಣವಾಗಿಯೇ ಉಳಿಯುವುದು.)

೧೦೧. ಚಿತ್ತು ಸಕಲವಾಕ್ಕುಗಳಿಗೂ ಅಗೋಚರವಾದುದು. ಅದುಕಾರಣ, ಇದು ಶಾಶ್ವತವಾದ ಅಸತ್ತೆಯನ್ನೂ (ಅಸದ್ಭಾವವನ್ನೂ-ಅಸತ್ಯತ್ವವನ್ನೂ) ಹೊಂದಿ ರುವಂತೆ ತೋರುವುದು. ಆದುದರಿಂದಲೇ ಇದು ನಾಸ್ತಿಕ ಮತದ ಸಿದ್ಧಾಂತಕ್ಕೆ ವಿಷ ಯವಾಗಿರುವಂತೆಯೂ ಕಾಣುವುದು. ಆದರೆ ಇದು ಎಂದಿಗೂ (ವಂಧ್ಯಾ ಪುತ್ರಾದಿ ಗಳಂತೆ) ಅಸತ್ತಾದುದಲ್ಲವು. ಏಕೆಂದರೆ ಇದು ಸರ್ವದಾ (ಕಾಲತ್ರಯದಲ್ಲಿಯೂ) ಅಬಾಧಿತವಾಗಿ ಸದ್ರೂಪವಾಗಿಯೇ ಇರುವುದು.

ಭವತ್ಯಾತ್ಮಾ ತಥಾ ಬ್ರಹ್ಮ ನ ಕಿಂಚಿಚ್ಚಾಖಿಲಂ ಚ ವಾ ।
ಪರಮೋಪಶಮೇಽಲೀನಾ ಮೋಕ್ಷನಾಮ್ನಾ ಪರೋಚ್ಯತೇ ॥ ೧೦೨ ॥

ಸಂಕಲ್ಪಕಲಿತಾ ತ್ವೇಷಾ ಮಂದಾಭಾಸತಯಾ ಜಗತ್ ।
ನ ಸಮ್ಯಕ್ಪಶ್ಯತೀದಂ ಚಿದ್ದೃಷ್ಟಿಃ ಪಟಲಿನೀ ಯಥಾ ॥ ೧೦೩ ॥

---

೧೦೨. ಯಾವುದು ಸರ್ವಕಾಲಗಳಲ್ಲಿಯೂ ಅಬಾಧಿತವಾಗಿ ಇರತಕ್ಕುದೋ ಅದಕ್ಕೇ ಶಾಸ್ತ್ರೀಯ ವ್ಯವಹಾರದಲ್ಲಿ ಪ್ರತ್ಯಗಾತ್ಮನೆಂದೂ ಬ್ರಹ್ಮವೆಂದೂ ಸಂಜ್ಞೆಯು. ಪರಮಾರ್ಥದೃಷ್ಟಿಯಿಂದಲಾದರೋ-ವಾಕ್ಕುಗಳ ಪ್ರವೃತ್ತಿಗೇ ಅವಕಾಶವಿಲ್ಲದಿರುವ ಕಾರಣ. ಆ ಚಿತ್ತನ್ನು ಯಾವ ಶಬ್ದದಿಂದಲೂ ವ್ಯವಹರಿಸುವುದಕ್ಕಾಗುವುದಿಲ್ಲ. (ಇಂಥದುದೆಂದು ಹೇಳುವುದಕ್ಕಾಗುವುದಿಲ್ಲ.) ಅಥವಾ ಯಾವುದಾದರೊಂದು ವಿಧವಾದ ಪ್ರವೃತ್ತಿ ನಿಮಿತ್ತ ಕಲ್ಪನೆಯಿಂದ. ಶಬ್ದ ಪ್ರವೃತ್ತಿಯನ್ನೂ ಹೇಳುವುದಾದರೆ, ಆಗ ಈ ಶಬ್ದವು ಪ್ರವರ್ತಿಸುವುದಿಲ್ಲ. (ಪರಿಮಿತಿಯನ್ನು) ಕಲ್ಪಿಸುವುದಕ್ಕೆ ತಕ್ಕ ಕಾರಣವು ಇಲ್ಲದ ಕಾರಣ ಸಕಲ ಶಬ್ದಗಳೂ ಪ್ರವರ್ತಿಸುವುವೆಂದೇ ಹೇಳಬೇಕಾಗಿರುವುದು. ಹೀಗಿರುವ ಕಾರಣ ಆ ಚಿದ್ರೂಪವು ಸಮಸ್ತ ಶಬ್ದಗಳಿಂದಲೂ ವಾಚ್ಯವಾದರೂ ಆಗಬಹುದು (ಅಖಿಲವೂ ಆಗಬಹುದು.) ಹೀಗೆ ಸರ್ವ ದೃಶ್ಯಗಳೂ ಅತ್ಯಂತಿಕವಾಗಿ ಉಪಶಾಂತವಾದಾಗಲೂ ಕೂಡ ಪೂರ್ವೋಕ್ತ ಸರ್ವೋತ್ಕೃಷ್ಟವಾದ ಸಮತೆಯು ಮಾತ್ರ ಸರ್ವ ದೃಶ್ಯ ವಿಕಾರಗಳಿಗೂ ಪರಮಾವಧಿಯಾಗಿರುವ ಕಾರಣ-ಲೀನವಾಗದೆಯೇ ಸರ್ವದಾ ನಿರುಪಪ್ಲವವಾಗಿ ಭಾಸಿಸುತ್ತಲೇ ಇರುವುದು. ಅದನ್ನೇ ಮೋಕ್ಷವೆಂಬ ಹೆಸರಿನಿಂದ ಶಾಸ್ತ್ರಜ್ಞರು ವ್ಯವಹರಿಸುವರು.

(ಯತೋವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಃ ಎಂಬ ತೈತ್ತಿರೀಯ ಶ್ರುತಿಯು-ಸಚ್ಚಿದಾನಂದ ರೂಪನಾದ ಆತ್ಮನು ಮನಸ್ಸಿಗೂ-ವಾಕ್ಕುಗಳಿಗೂ ಸರ್ವಥಾ ಅಗೋಚರನೆಂದು ಪರಮಾರ್ಥ ದೃಷ್ಟಿಯಿಂದ ಸಾರುವುವು. ತಸ್ಮಾತ್ ತತ್ ಸರ್ವಮಭವತ್ (ಬೃಹದಾರಣ್ಯಕ) ಇತ್ಯಾದಿ ಶ್ರುತಿಗಳು ವ್ಯಾವಹಾರಿಕ ದೃಷ್ಟಿಯನ್ನೂ ಅವಲಂಬಿಸಿ, ಸಮಸ್ತವೂ ಆ ಬ್ರಹ್ಮವೇ (ಬ್ರಹ್ಮವು ಸರ್ವಶಬ್ದಗೋಚರ) ಎಂದೂ ಎರಡು ವಿಧವಾಗಿಯೂ ಹೇಳುವುವು.)

೧೦೩. ಈ ಚಿತ್ತು ಸ್ವತಃ ಸಕಲಾವಭಾಸಕ ಸ್ವಪ್ರಕಾಶ ಸ್ವರೂಪವಾದುದಾಗಿದ್ದರೂ ಕೂಡ, ಯಾವಾಗ ಸಂಕಲ್ಪ ಕಲ್ಪನಾಯುಕ್ತವಾಗುವುದೋ-ಆಗ ಇದರ ಪ್ರಕಾಶವೇ ಮಂದವಾಗಿ ಬಿಡುವುದು. ಹೀಗಾದ ಬಳಿಕ, ಪೊರೆಯಿಂದ ಕೂಡಿದ

ಈಪ್ಸಾನೀಹಾಮಯೈರನ್ತರ್ಯಾ ಚಿದಾವಲಿತಾ ಮಲೈಃ ।
ಸಾ ಹಿ ನೋಡ್ಡಯಿತುಂ ಶಕ್ತಾ ಪಾಶಬದ್ಧೇವ ಪಕ್ಷಿಣೀ ॥ ೧೦೪ ॥

ಸಂಕಲ್ಪಕಲನೇನೈವ ಯೇ ಕೇಚನ ಜನಾ ಇಮೇ ।
ಪತಿತಾ ಮೋಹಜಾಲೇಷು ವಿನೇತ್ರಾ ಇವ ಪಕ್ಷಿಣಃ ॥ ೧೦೫ ॥

ಸಂಕಲ್ಪಜಾಲವಲಿತೈರ್ವಿಷಯಾವಟಪಾತಿಭಿಃ ।
ಪದವೀ ಗತಬಾಧೇಯಂ ನ ದೃಷ್ಟಾ ಮತ್ಪಿತಾಮಹೈಃ ॥ ೧೦೬ ॥

ಕಣ್ಣು ಎದುರಿಗೆ ಹತ್ತಿರದಲ್ಲಿರುವ ಪದಾರ್ಥಗಳನ್ನೂ ಕೂಡ ಹೇಗೆ ಚೆನ್ನಾಗಿ ನೋಡಲಾರದೋ ಹಾಗೆಯೇ, ಈ ಚಿತ್ತು ಕೂಡ ಈ ಜಗತ್ತನ್ನೂ ಸರಿಯಾಗಿ ಪಾರಮಾರ್ಥಿಕ ರೂಪದಿಂದ ಕಂಡು ತಿಳಿದುಕೊಳ್ಳಲಾರದೆ ವಿಪರೀತವಾಗಿ ಗ್ರಹಿಸುವುದು.

೧೦೪. ಏಕೆಂದರೆ- ಈಚಿತ್ತು ಇಷ್ಟಾನಿಷ್ಟ ಸಂಕಲ್ಪ ರೂಪಗಳಾದ ಮಲಗಳಿಂದ ತನ್ನೊಳಗೆ ಯಾವಾಗ ಆವರಿಸಲ್ಪಡುವುದೋ ಆಗಲೇ ಅದು ಬಲೆಯೊಳಗೆ ಸಿಕ್ಕಿ ಬಿದ್ದಿರುವ ಒಂದು ಹೆಣ್ಣು ಹಕ್ಕಿಯು ಮೊದಲಿನಂತೆ ಮೇಲಕ್ಕೆ ಹಾರಿ ಆಕಾಶ ಮಾರ್ಗವನ್ನೆಲ್ಲಾ ವ್ಯಾಪಿಸಿಕೊಂಡು ಹಾರಾಡುವುದಕ್ಕೆ ಅಸಮರ್ಥವಾಗುವಂತೆ ಸಂಕಲ್ಪದಿಂದ ಆಚೆಗೆ ಹೋಗಲು ಸರ್ವಥಾ ಅಸಮರ್ಥವಾಗುವುದು.

೧೦೫. ನಮ್ಮೆದುರಿನಲ್ಲಿ ಸಾಧಾರಣವಾಗಿ ವ್ಯವಹರಿಸುತ್ತಿರುವ ಈ ಜನರು ಎಲ್ಲರೂ ತತ್ತ್ವ ದೃಷ್ಟಿ ವಿರಹಿತರಾಗಿರುವ ಕಾರಣ- ಕಣ್ಣು ಕಾಣದ ಹಕ್ಕಿಗಳು ತಾವಾಗಿ ಬಲೆಯೊಳಗೆ ಬಂದು ಸಿಕ್ಕಿ ಬೀಳುವಂತೆ ಸಂಕಲ್ಪಕಲ್ಪನಾವಶದಿಂದಲೇ ಮಹಾ ಮೋಹಮಯಗಳಾದ ಲೋಕ ವ್ಯವಹಾರಗಳೆಂಬ ದುರ್ಭೇದ್ಯವಾದ ಬಲೆಗಳೊಳಗೆ ಬಿದ್ದು ಸಿಕ್ಕಿಹಾಕಿಕೊಂಡಿರುವರು.

೧೦೬. ಹೀಗೆ ಬಹು ಪ್ರಕಾರಗಳಾದ ಸಂಕಲ್ಪಕಲ್ಪನಾ ಜಾಲಗಳಿಂದ ಬಂಧಿತರಾಗಿ ಶಬ್ದ ಸ್ಪರ್ಶಾದಿ ವಿಷಯ ಸುಖಗಳೆಂಬ ಬಹು ಆಳವಾದ ದೊಡ್ಡ ಹಳ್ಳಗಳಲ್ಲಿ ನಿಶ್ಚಲರಾಗಿ ಬಿದ್ದುಕೊಂಡಿದ್ದ ಕಾರಣವೇ ನಮ್ಮ ಪೂರ್ವಿಕರಾದ ಅಜ್ಜ, ಮುತ್ತಜ್ಜ ಮುಂತಾದವರು ಅಪರಿಚ್ಛಿನ್ನವೂ, ನಿರ್ದುಃಖವೂ ಆದ ಆತ್ಮ ಜ್ಞಾನ ಮಾರ್ಗವನ್ನು ಕಾಣಲಾರದವರಾಗಿದ್ದರು.

ದಿನೈಃ ಕತಿಪಯೈರೇವ ಸ್ಫುರಿತಾ ಧರಣೀತಲೇ ।
ಪರಾಕಾಷ್ಠೇನ ತೇ ನಷ್ಟಾ ಮಶಕಾಃ ಕುಹರೇಷ್ವಿವ ॥ ೧೦೭ ॥

ಯದ್ಯಜ್ಞಾಸ್ಯನ್ನಿಮೇ ತತ್ತ್ವಂ ಭೋಗದುಃಖಾರ್ಥಿನಸ್ತದಾ ।
ಭಾವಾಭಾವಾಂಧಕೂಪೇಷು ನಾಪತಿಷ್ಯನ್ಹತಾಶಯಾಃ ॥ ೧೦೮ ॥

ಇಚ್ಛಾದ್ವೇಷಸಮುತ್ಥೇನ ದ್ವಂದ್ವಮೋಹೇನ ಜನ್ತವಃ ।
ಧರಾವಿವರಮಗ್ನಾನಾಂ ಕೀಟಾನಾಂ ಸಮತಾಂ ಗತಾಃ ॥ ೧೦೯ ॥

---

೧೦೭. ಅಯ್ಯೋ! ಆ ನಮ್ಮ ಪೂರ್ವಿಕರಾದ ಹಿರಿಯರು ನಿಜವಾಗಿಯೂ ಶೋಚ್ಯರೇ ಸರಿ. ಏಕೆಂದರೆ, ಪಾಳು ಬಿದ್ದಿರುವ ಆಳವಾದ ಹಳ್ಳಗಳೊಳಗೆ ಲಕ್ಷೋಪಲಕ್ಷಗಳಾಗಿ ಸೊಳ್ಳೆಗಳು ಹುಟ್ಟಿ ಸ್ವಲ್ಪಕಾಲದೊಳಗಾಗಿ ಅಲ್ಲಿಯೇ ನಿರರ್ಥಕವಾಗಿ ಸತ್ತುಹೋಗುವಂತೆ ಅವರೂ ಈ ಪ್ರಪಂಚದಲ್ಲಿ ಹುಟ್ಟಿ ಅತ್ಯಲ್ಪಕಾಲಮಾತ್ರವೇ ಈ ಲೋಕದಲ್ಲಿ ವ್ಯವಹರಿಸಿಕೊಂಡಿದ್ದು ಆತ್ಮಜ್ಞಾನ ಮಾರ್ಗವನ್ನು ಕಾಣದವರಾಗಿಯೇ ವ್ಯರ್ಥವಾಗಿ ನಾಶ ಹೊಂದಿದರು.

೧೦೮. ಅವರು ಸರ್ವೋತ್ತಮವಾದ ಈ ಆತ್ಮತತ್ತ್ವವನ್ನು ತಿಳಿದುಕೊಂಡಿದ್ದ ಪಕ್ಷದಲ್ಲಿ ಆಗ ಅವರು ಹೀಗೆ ದುಷ್ಟ ಬುದ್ಧಿಗಳಾಗಿ ವಸ್ತುತಃ ದುಃಖಮಯಗಳೇ ಆಗಿ ಸುಖಗಳಂತೆ ಆಭಾಸಮಾನಗಳಾದ ಪ್ರಾಪಂಚಿಕ ಭೋಗಗಳನ್ನು ಪ್ರಾರ್ಥಿಸುತ್ತ ಭಾವಾಭಾವಗಳೆಂಬ ಪಾಳು ಭಾವಿಗಳಲ್ಲಿ ಎಂದಿಗೂ ಬಿದ್ದು ಹಾಳಾಗುತ್ತಿರಲಿಲ್ಲ.

೧೦೯. ರಾಗ ದ್ವೇಷಗಳಿಂದ ಉದ್ಭವಿಸತಕ್ಕ ದ್ವಂದ್ವ ಮೋಹದಿಂದ ಮೋಹಿತರಾಗಿ ಪಶುಪ್ರಾಯರಾದ ಈ ಸಮಸ್ತ ಅಜ್ಞ ಜನರು ಪಾಳು ಬಿದ್ದಿರುವ ಹಳ್ಳದೊಳಗೆ ಹುಟ್ಟಿ ಮುಳುಗಿರುವ ಸಣ್ಣ ಹುಳುಗಳಿಗೆ ಸಮನಾದ ದುರ್ದಶೆಯನ್ನು ಹೊಂದಿ ಜ್ಞಾನಿಗಳ ಮರುಕಕ್ಕೆ ಪಾತ್ರರಾಗಿರುವರು.

(ಸುಖ ದುಃಖ, ಶೀತ ಉಷ್ಣಾದಿಗಳು ದ್ವಂದ್ವಗಳು ಇಷ್ಟವಾದ ಸುಖಾದಿಗಳನ್ನು ಸಂಪಾದಿಸುವ ಮತ್ತು ಅನಿಷ್ಟವಾದ ದುಃಖಾದಿಗಳನ್ನು ಪ್ರತೀಕಾರದಿಂದ ಪರಿಹರಿಸುವ ಪ್ರಯತ್ನ ಅಥವಾ ಆಸಕ್ತಿ, ಇದಕ್ಕೆ ದ್ವಂದ್ವ ಮೋಹವೆಂದು ಸಂಜ್ಞೆ.)

ಈಹಿತಾನೀಹಿತಾಕಾರಾಃ ಕಲನಾಮೃಗತೃಷ್ಣಿಕಾಃ ।
ಸತ್ಯಾವಭೋಧಮೇಘೇನ ಯಸ್ಯ ಶಾಂತಾಃ ಸ ಜೀವತಿ ॥ ೧೧೦ ॥

ಕುತಃ ಕಿಲಾಸ್ಯಾಃ ಶುದ್ಧಾಯಾ ಅವಿಚ್ಛಿನ್ನಾಮಲಾಕೃತೇಃ
ಚಂದ್ರಿಕಾಯಾ ರುಚಃ ಕೋಷ್ಣಾಃ ಕಲಂಕಾಃ ಕಲನಾಶ್ರಿತಃ ॥ ೧೧೧ ॥

ಆತ್ಮನೇಽಸ್ತು ನಮೋ ಮಹ್ಯಮವಿಚ್ಛಿನ್ನಚಿದಾತ್ಮನೇ ।
ಲೋಕಾಲೋಕಮಣೇ ದೇವ ಚಿರೇಣಾಧಿಗತೋಽಸ್ಯಹೋ ॥ ೧೧೨ ॥

ಪರಾಮೃಷ್ಟೋಽಸಿ ಲಬ್ಧೋಽಸಿ ಪ್ರೋದಿತೋಽಸಿ ಚಿರಾಯ ಚ ।
ಉದ್ಧೃತೋಽಸಿ ವಿಕಲ್ಪೇಭ್ಯೋ ಯೋಽಸಿ ಸೋಽಸಿ ನಮೋಽಸ್ತು ತೇ ॥ ೧೧೩ ॥

---

೧೧೦. ಈ ಬಗೆಗಳಾದ ಇಷ್ಟಾನಿಷ್ಟ ಕಲ್ಪನಾ ರೂಪ ಮೃಗ ತೃಷ್ಣಿಕಾ (ಬಿಸಿಲು ಗುದುರೆ) ಭ್ರಾಂತಿಗಳು, ಯಾವ ಮಹಾತ್ಮನಿಗೆ, ಪಾರಮಾರ್ಥಿಕವಾದ ಸ್ವಾತ್ಮತತ್ತ್ವ ಜ್ಞಾನವೆಂಬ ಮೇಘದ ಆವಿರ್ಭಾವದಿಂದ ದ್ವಂದ್ವತಾಪೋಪಶಮನದ ಮೂಲಕ ವಾಗಿ ಸಂಪೂರ್ಣವಾಗಿ ಶಾಂತವಾಗುವುವೋ. ಅಂತಹ ಮಹಾನುಭಾವನ ಜೀವನವು ಮಾತ್ರವೇ ನಿಜವಾಗಿಯೂ ಸಾರ್ಥಕವಾದುದು.

೧೧೧. ಸ್ವಭಾವತಃ ನಿತ್ಯ ಶುದ್ಧವಾಗಿಯೂ, ಅಖಂಡವಾಗಿಯೂ (ಪರಿಪೂರ್ಣ ಅಥವಾ ಅಪರಿಚ್ಛಿನ್ನ) ಅವಿದ್ಯಾದಿ ಮಲರಹಿತವಾಗಿಯೂ ಇರುವ ಈ ಚಿತ್ ಎಂಬ ಚಂದ್ರಿಕೆಗೆ (ಬೆಳದಿಂಗಳು) ಮಂದೋಷ್ಣಗಳಾದ ಕಿರಣಗಳಾಗಲೀ, ಸಂಕಲ್ಪ ಕಲ್ಪನೆ ಗಳೆಂಬ ಕಳಂಕಗಳಾಗಲೀ ಹೇಗೆ ತಾನೇ, ಎಲ್ಲಿಂದ, ಬಂದಾವು ?

(ಎಂದಿಗೂ, ಹೇಗೂ, ಎಲ್ಲಿಂದಲೂ, ಸರ್ವಥಾ ಬರುವುದೇ ಇಲ್ಲವೆಂದರ್ಥ.)

೧೧೨. ಇಂತಹ ಅಖಂಡ (ಸರ್ವತ್ರ ಪರಿಪೂರ್ಣ) ಚಿದ್ರೂಪನಾದ ಆತ್ಮ ಸ್ವರೂಪನಾಗಿರುವ ನನಗೆ ನಮಸ್ಕಾರವು. (ಲೋಕಾಲೋಕ) ಜ್ಞಾನ ಪ್ರಕಾಶಕ್ಕೆ ನಿಮಿತ್ತ ಭೂತ ರತ್ನವೇ, ಮಹಾದೇವನೇ, ಅಹೋ ನಾನೇ ಪರಮ ಧನ್ಯನು. ಏಕೆಂದರೆ, ಬಹುಕಾಲದ ಮೇಲೆ ನೀನು ನನಗೆ ಈಗ ಗೋಚರನಾಗಿರುವೆ.

೧೧೩. ಪರಮಾತ್ಮನೇ, ನೀನು ಈಗ ನನ್ನಿಂದ ತತ್ತ್ವತಃ ಚೆನ್ನಾಗಿ ಪರಾ ಮರ್ಶಿಸಲ್ಪಟ್ಟವನಾಗಿರುವೆ. ಈಗ ನನಗೆ ನಿಜವಾಗಿ ನಿನ್ನ ಲಾಭವಾಗಿರುವುದು. ಬಹುಕಾಲಾ ನಂತರ ಈಗ ನೀನು ಸ್ವಕೀಯ ಪಾರಮಾರ್ಥ ರೂಪದಿಂದ ಅಭಿವ್ಯಕ್ತ

ಮಹ್ಯಂ ತುಭ್ಯಮನನ್ತಾಯ ಮಹ್ಯಂ ತುಭ್ಯಂ ಶಿವಾತ್ಮನೇ ।
ನಮೋ ದೇವಾಧಿದೇವಾಯ ಪರಾಯ ಪರಮಾತ್ಮನೇ ॥ ೧೧೪ ॥

ಗತಘನಪರಿಪೂರ್ಣಮಿಂದುಬಿಂಬಂ ।
ಗತಕಲನಾವರಣಂ ಸ್ವಮೇವ ರೂಪಂ ॥
ಸ್ವವಪುಷಿ ಮುದಿತೇ ಸ್ವಯಂ ಸ್ವಸಂಸ್ಥಂ
ಸ್ವಯಮುದಿತಂ ಸ್ವವಶಂ ಸ್ವಯಂ ನಮಾಮಿ ॥ ೧೧೫ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ "ಪ್ರಹ್ಲಾದಾತ್ಮೋಪದೇಶಯೋಗೋ"ನಾಮೈಕ ತ್ರಿಂಶಃ ಸರ್ಗಃ

ನಾಗಿರುವೆ. ಈಗಲೇ ನಾನು ನಿನ್ನನ್ನು ನಾನಾ ವಿಕಲ್ಪಗಳಿಂದ ಪ್ರತ್ಯೇಕಿಸಿ ನಿರ್ವಿಕಲ್ಪನೆಂದು ತಿಳಿದುಕೊಂಡೆನು. ನೀನು ಸ್ವರೂಪತಃ ನಿತ್ಯ ಶುದ್ಧ ಬುದ್ಧ ಮುಕ್ತಾತ್ಮನಾಗಿ ಸರ್ವದಾ ಏಕ ರೂಪನಾಗಿಯೇ ಇರುವೆ. ಇಂತಹ ನಿನಗೆ ನಮಸ್ಕಾರವು.

೧೧೪. ನಾನೇ ನೀನಾಗಿರುವೆನು. ಇಂತಹ ಅನಂತನಾದ ನಿನಗೆ ನಮಸ್ಕಾರವು. ನೀನೇ ನಾನಾಗಿರುವೆ. ಅದು ಕಾರಣ. ಇಂತಹ ನಿತ್ಯ ಕಲ್ಯಾಣ ಸ್ವರೂಪನೂ, ಬ್ರಹ್ಮಾದಿ ದೇವತಾ ಸಮೂಹಗಳಿಗೂ, ಸರ್ವೇಂದ್ರಿಯ ಮನಸ್ಸುಗಳಿಗೂ, ಅಧಿಷ್ಠಾನವಾಗಿಯೂ, ಪ್ರಕಾಶಕನಾಗಿಯೂ ಇರುವವನೂ, ಸರ್ವೋತ್ತಮನೂ ಆದ ಸಚ್ಚಿದಾನಂದ ರೂಪ ಪರಮಾತ್ಮನಿಗೆ (ನಿನಗೆ) ನಮಸ್ಕಾರವು.

೧೧೫ ಪಾರಮಾರ್ಥಿಕವಾದ ನನ್ನ ಸ್ವರೂಪವು ಈಗ ವಿಕಲ್ಪ ಕಲ್ಪನೆಗಳೆಂಬ ಆವರಣ ರಹಿತವಾಗಿ, ಮೇಘಾವರಣ ಶೂನ್ಯವಾದ ಸರ್ವ ಕಲಾ ಸಂಪೂರ್ಣವಾದ ಚಂದ್ರ ಬಿಂಬದಂತೆ ಇರುವುದು. ಇದು ಆನಂದೈಕ ರಸವಾದ ಸ್ವಾತ್ಮನಲ್ಲಿಯೇ ಸ್ವಯಂ (ಬೇರೊಂದರ ಆಧಾರವಿಲ್ಲದೆಯೇ) ಸ್ವಕೀಯ ಪಾರಮಾರ್ಥಿಕ ರೂಪದಿಂದ ವಿಶ್ರಾಂತವಾಗಿರುವುದು. ಸ್ವತಃ ಉದಿತವಾಗಿಯೂ (ಸ್ವಪ್ರಕಾಶವಾಗಿಯೂ) ಸರ್ವದಾ ಸ್ವಾಧೀನವಾದ ಸ್ವಾನಂದರೂಪವಾಗಿಯೂ ಇರುವ ಸ್ವರೂಪವನ್ನೇ ನಾನೇ (ಅನನ್ಯನಾಗಿ) ನಮಸ್ಕರಿಸುವೆನು. ಸರ್ವೋತ್ಕರ್ಷವೆಂದು ಅನುಸಂಧಾನ ಮಾಡುವೆನು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ ಪ್ರಹ್ಲಾದಾತ್ಮೋಪದೇಶಯೋಗವೆಂಬ ಎಂಬ ಮೂವತ್ತ ನಾಲ್ಕನೇ ಸರ್ಗವು.

ಪಂಚತ್ರಿಂಶಃ ಸರ್ಗಃ

ಪ್ರಹಾದ ಉವಾಚ--

ಓಮಿತ್ಯೇಕಕ್ಷಿತಾಕಾರೋ ವಿಕಾರ ಪರಿವರ್ಜಿತಃ ।
ಆತ್ಮೈವಾಯಮಿದಂ ಸರ್ವಂ ಯತ್ಕಿಂಚಿಜ್ಜಗತೀಗತಂ ॥ ೧ ॥

ಮೇದೋಽಸ್ಥಿಮಾಂಸಮಜ್ಜಾಸೃಗತೀತೋಽ ಪ್ಯೇಷ ಚೇತನಃ ।
ಅಂತರಸ್ಥೋ ಹಿ ಸೂರ್ಯಾದೀನ್ ಪ್ರಕಾಶಯತಿ ದೀಪಕಃ ॥ ೨ ॥

ಮೂವತ್ತೈದನೆಯ ಸರ್ಗ

ಪ್ರಹ್ಲಾದನು ಹೇಳಿಹನು:--(ತತ್ತ್ವ ವಿಚಾರ ಮಾಡತೊಡಗಿದನು.)

೧. ("ಓಮಿತಿ ಬ್ರಹ್ಮ'' ಓಮಿತೀದಗ್ಂಸರ್ವಂ". "ಏತದ್ವೈ ಸತ್ಯ ಕಾಮ, ಪರಂಚಾ ಪರಂಚ ಬ್ರಹ್ಮ ಯದೋಂಕಾರಃ." ಇತ್ಯಾದಿ ಸಾವಿರಾರು ಶ್ರುತಿಗಳು. (ಪರಾಪರ) ಬ್ರಹ್ಮವನ್ನು ನಿರ್ದೇಶಿಸಿ ಬೋಧಿಸುವ ಶಬ್ದವು.) "ಓಮ್'' ಕಾರವು ಒಂದೇ ಎಂದು ಸ್ಪಷ್ಟವಾಗಿ ಉದ್ಘೋಷಿಸುತ್ತಿರುವುವು. ಈ "ಓಂ'' ಕಾರವೆ ಆತ್ಮನ (ಬ್ರಹ್ಮನ) ಒಂದೇ ಒಂದಾದ ಸ್ವಾನುರೂಪ ಅಭಿಧಾನಾಕಾರವಾಗಿರುವುದು ಈ ಆತ್ಮನಲ್ಲಿ ಯಾವ ಬಗೆಯ ವಿಕಾರವೂ ಸುತರಾಂ ಇಲ್ಲವು. ಈ ಪ್ರಪಂಚಗತ ವಾದುದು ಯಾವುದುಂಟೋ ಅವೆಲ್ಲವೂ ಅನುಭೂಯಮಾನನಾದ ಈ ಆತ್ಮನೇ ಹೊರತು ಬೇರೆಯಿಲ್ಲವು.

["ಓಮಿತ್ಯೇತದ ಕ್ಷರಮಿದಗ್ಂ ಸರ್ವಂತಸ್ಯೋಪವ್ಯಾಖ್ಯಾನಂ. ಭೂತಂ ಭವದ್ಭವಿಷ್ಯದಿತಿ ಸರ್ವಮೋಂಕಾರ ಏವ. ಯಚ್ಚಾನ್ಯತ್ತ್ರಿಕಾಲಾತೀತಂ ತದಪ್ಯೋಂ-ಕಾರ ಏವ ಮಾಂಡೂಕ್ಯೋಪನಿಷತ್. ೧ನೆಯ ಮಂತ್ರ.) (ಕಾಲತ್ರಯ ಪರಿಚ್ಛೇದ್ಯವಾದುದೂ ಮತ್ತು ಕಾಲಾ ಪರಿಚ್ಛೇದ್ಯವಾದ ಅವ್ಯಾಕೃತಾದಿಗಳೂ (ಅಭಿಧೇಯ ಭೂತವಾದ ಸಕಲ ಅರ್ಥಜಾತವೂ) ಎಲ್ಲವೂ ಓಂಕಾರವೇ.]

೨. ಈ ಆತ್ಮನು, ಮೇದಸ್ಸು. ಅಸ್ಥಿ (ಎಲುಬು) ಮಾಂಸ, ಮಜ್ಜಾ, ಅಸೃಕ್ (ರಕ್ತ) ಮೊದಲಾದ ಶರೀರಾಂತರ್ಗತವಾದ ವಸ್ತುಗಳನ್ನೂ ಅತಿಕ್ರಮಿಸಿರುವೆನು.

ಉಷ್ಣೀಕರೋತಿ ದಹನಂ ರಸಯತ್ಯಮೃತಂ ರಸಂ ।
ಇಂದ್ರಿಯಾನುಭವಾನ್ಭುಂಕ್ತೇ ಭೋಗಾನಿವ ಮಹೀಪತಿಃ ॥ ೩ ॥

ತಿಷ್ಠನ್ನಪಿ ಹಿ ನಾಸೀನೋ ಗಚ್ಛನ್ನಪಿ ನ ಗಚ್ಛತಿ ।
ಶಾಂತೋಽಪಿ ವ್ಯವಹಾರಸ್ಥಃ ಕುರ್ವನ್ನಪಿ ನ ಲಿಪ್ಯತೇ ॥ ೪ ॥

(ಅಂದರೆ ಮೇದೋಸ್ಥ್ಯಾದಿರೂಪ ದೇಹ ಪರಿಮಿತವಲ್ಲವು. ಎಂದರೆ ದೇಹಾತೀತನು.) ಏಕೆಂದರೆ ದೇಹಾದಿಗಳು ನಶ್ವರ ಜಡಗಳು. ಆತ್ಮನಾದರೋ ಅವಿನಾಶಿ ಮತ್ತು ಚೇತನನು. ಈ ಆತ್ಮನು ಸರ್ವಾಂತರ್ಯಾಮಿಯಾದ ಕಾರಣ, ಸೂರ್ಯಚಂದ್ರಾದಿ ತೇಜಸ್ಸುಗಳ ಅಂತರ್ಗತನಾಗಿಯೂ ಇರುವ ಸೂರ್ಯಾದಿಗಳಿಗೂ ತೇಜಃಪ್ರದನಾಗಿ ಪ್ರಕಾಶಗೊಳಿಸತಕ್ಕ ಮಹಾ ಪ್ರದೀಪವಾಗಿರುವನು.

("ನ ತತ್ರ ಸೂರ್ಯೋ ಭಾತಿ. ನ ಚಂದ್ರ ತಾರಕಂ. ನೇಮಾ ವಿದ್ಯುತೋ ಭಾಂತಿ ಕುತೋ ಯಮಗ್ನಿಃ? ತಮೇವ ಭಾನ್ತಮನು ಭಾತಿ ಸರ್ವಂ-ತಸ್ಯ ಭಾಸಾ ಸರ್ವಮಿದಂ ವಿಭೂತಿ.")

೩. ಈ ಚಿದಾತ್ಮನೇ-ಆತ್ಮ ಸತ್ತೆಯಿಂದ ಅಗ್ನಿಯಲ್ಲಿ ಉಷ್ಣತ್ವವನ್ನು ಉಂಟುಮಾಡುವನು. ಹೀಗೆಯೇ ತನ್ನ ಸತ್ತೆಯಿಂದಲೇ ಸತ್ತೆಯನ್ನು ಪಡೆದ ಜಲದಲ್ಲಿ ಶಾಶ್ವತವಾಗಿ ದ್ರವತ್ವವನ್ನು ಉಂಟುಮಾಡಿರುವನು. ಒಬ್ಬ ರಾಜನು ನಾನಾ ಭೋಗಗಳನ್ನು ಸಂಪಾದಿಸಿಕೊಂಡು ಯಥೇಚ್ಛವಾಗಿ ಅನುಭವಿಸುವಂತೆ ಈ ಆತ್ಮನೇ ಸ್ವಸಕ್ತಿಯಿಂದಲೇ ಶಬ್ದ ಸ್ಪರ್ಶಾದಿ ಇತರ ಸಕಲ ಇಂದ್ರಿಯಾರ್ಥಗಳನ್ನೂ ಕೂಡ ಸಂಪಾದಿಸಿಕೊಂಡು ಅನುಭವಿಸುತ್ತಿರುವನು.

೪. ಆತ್ಮನು ಸರ್ವದಾ ನಿಷ್ಕ್ರಿಯನಾಗಿ (ನಿಶ್ಚಲನಾಗಿ)ದ್ದರೂ ಕೂಡ (ಒಂದೇ ಕಡೆಯಲ್ಲಿ ಕುಳಿತಿರುವ ಮನುಷ್ಯನಂತೆ) ಧಾವನಾದಿ ವ್ಯವಹಾರವನ್ನು ಬಿಟ್ಟು ಇಲ್ಲ. (ವಾಯು-ಸೂರ್ಯಾದಿ ರೂಪದಿಂದ ಸದಾ ಗತಿಯಾಗಿರುವನು.) (ಹೀಗೆಯೇ ಕಾಲಾದಿ ರೂಪದಿಂದ) ಸರ್ವದಾ ಸಂಚರಿಸುತ್ತಿದ್ದರೂ ಕೂಡ, ಕುಲ ಪರ್ವತದಂತೆ ಎಳ್ಳಷ್ಟೂ ಕದಲದೆ ನಿಶ್ಚಲನಾಗಿಯೇ ಇರುವನು. ಸರ್ವ ವ್ಯವಹಾರ ಶೂನ್ಯ (ಶಾಂತ) ನಾಗಿದ್ದರೂ ಎಲ್ಲ ಪ್ರಾಪಂಚಿಕ ವ್ಯವಹಾರಗಳಲ್ಲಿಯೂ ನಿರತನಾಗಿರುವನು. ಹೀಗೆ ಸರ್ವ ವ್ಯವಹಾರಗಳನ್ನು ನಡೆಯಿಸುತ್ತಿದ್ದರೂ, ಸ್ವಲ್ಪವೂ ಅದರ ಲೇಪವನ್ನು ಹೊಂದದೆ (ನಿರ್ಲಿಪ್ತನಾಗಿ)ಯೇ ಇರುವನು.

ಪೂರ್ವಮದ್ಯ ತಥೇದಾನೀ ಮಿಹಾಮುತ್ರೋ ಭಯತ್ರ ಚ ।
ವಿಹಿತೋಽ ವಿಹಿತೋ ಪ್ಯೇಷ ಸಮಃ ಸರ್ವಾಸು ವೃತ್ತಿಷು ॥ ೫ ॥

ಉದ್ಭವತ್ಯಭಯೋ(ವೊ) ಭಾವಂ ಭುವನಾನಿ ತತಸ್ತತಃ ।
ಬ್ರಹ್ಮಾದಿ ತೃಣ ಪರ್ಯಂತಂ ಜಗದಾವರ್ತಯರ್ಸ್ಥಿತಃ ॥ ೬ ॥

---

೫. ಹಿಂದಿನ ಕಾಲದಲ್ಲಿಯೂ, ಈಗಲೂ, ಮುಂದೆಯೂ, ಈ ಲೋಕದಲ್ಲಿಯೂ, ಪರ ಲೋಕದಲ್ಲಿಯೂ ಮತ್ತು ಹಾಗೆಯೇ ಎಲ್ಲೆಲ್ಲಿಯೂ ಶಾಸ್ತ್ರ ವಿಹಿತವಾದ ಪುಣ್ಯ ಕರ್ಮಗಳ ಶುಭ ಫಲಗಳನ್ನು ಅನುಭವಿಸುವವನಾದರೂ, ಅಥವಾ ಶಾಸ್ತ್ರ ನಿಷಿದ್ಧ ಪಾಪ ಕರ್ಮಗಳ ಫಲಾನುಭವಿಯಾಗಿದ್ದರೂ ಕೂಡ ಈ ಆತ್ಮನು ಸಕಲ ಭೋಗ ವೃತ್ತಿಗಳಲ್ಲಿಯೂ (ಸಮ) ಏಕ ರೂಪನಾಗಿ ನಿರ್ಲಿಪ್ತನಾಗಿಯೇ ಇದ್ದುಕೊಂಡಿರುವನು.

(ದೃಶ್ಯಗಳಾದ ಭೋಗಗಳು ದೃಗ್ರೂಪನಾದ ಆತ್ಮನಿಗೆ ಲೇಶ ಮಾತ್ರವೂ ಯಾವ ವಿಕಾರವನ್ನೂ ಉಂಟುಮಾಡಲಾರವು. ಎಂದು ತಾತ್ಪರ್ಯ.)

(ಯಸ್ಸರ್ವತ್ರಾನಭಿಸ್ನೇಹಃ ತತ್ತತ್ ಪ್ರಾಪ್ಯ ಶುಭಾ ಶುಭಂ । ನಾಭಿನಂದತಿ ನ ದ್ವೇಷ್ಟಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥. ಗೀತಾ– ೨-೫೭ ಮತ್ತು ಯೋಗಯುಕ್ತೋ ವಿಶುದ್ಧಾತ್ಮಾ ವಿಜಿತಾತ್ಮಾ ಜಿತೇಂದ್ರಿಯಃ । ಸರ್ವ ಭೂತಾತ್ಮ ಭೂತಾತ್ಮಾ ಕುರ್ವನ್ನಪಿ ನಲಿಪ್ಯತೇ. ಗೀತಾ ೫–೭ ಇತ್ಯಾದಿ ವಚನಗಳು. ಜ್ಞಾನಿಯು ಎಂದಿಗೂ ಸ್ವಲ್ಪವೂ ಯಾವ ವ್ಯವಹಾರದಿಂದಲೂ ಲಿಪ್ತನಾಗದೆ ನಿರ್ವಿಕಾರಿಯಾಗಿರುವನು ಎಂಬುದಗಲ್ಲಿ ಪ್ರಮಾಣಗಳಾಗಿವೆ. ಹೀಗಿರುವಾಗ ನಿತ್ಯ ಶುದ್ಧ ಬುದ್ಧ ಮುಕ್ತನಾದ ಆತ್ಮನು ವ್ಯವಹಾರದಿಂದ ಲಿಪ್ತನಾಗುವುದೆಂತು? ಸರ್ವಥಾ ಅಸಂಭವವು. ಅವಶ್ಯ ಮನುಭೋಕ್ತವ್ಯಂ ಕೃತಂ ಕರ್ಮ ಶುಭಾ ಶುಭಂ" ಎಂಬ ವಚನವು ಅನಾತ್ಮಜ್ಞ ಪರವೆಂದು ತಿಳಿಯಬೇಕು.

೬. ಈ ಆತ್ಮನು ವಸ್ತುತಃ ಜನ್ಮರಹಿತನು (ಅಜನು) ಆಗಿದ್ದರೂ ಕೂಡ ಆಯಾಕರ್ಮಾನು ರೂಪವಾಗಿ ಸ್ವಯಂ ಉದ್ಭವಿಸುವನು. ಮತ್ತು ಹೀಗೆ ಕರ್ಮ ಫಲ ರೂಪವಾಗಿ ಉದ್ಭವಿಸಿದ ಚತುರ್ಮುಖ ಬ್ರಹ್ಮ ಮೊದಲು ತೃಣ (ಹುಲ್ಲು ಕಡ್ಡಿ) ಪರ್ಯಂತವಾದ ಭೋಕ್ತೃ ಭೋಗ್ಯ ಭಾವವನ್ನೂ ಅವುಗಳ ಅಧಿಕರಣಗಳಾದ ಚತುರ್ದಶ (ಹದಿನಾಲ್ಕು) ಭುವನಗಳನ್ನೂ, (ಹೀಗೆಂಬ ಈ ಜಗತ್ತೆಲ್ಲವನ್ನೂ) ತನ್ನ

ನಿತ್ಯಸ್ಪನ್ದಮಯೋ ನಿತ್ಯಮಪಿ ದೇವಾದಾಗತೇಃ ।
ಸ್ಥಾಣೋರಪ್ಯಕ್ರಿಯೋ ನಿತ್ಯಮಾಕಾಶಾದಪ್ಯಲೇಪಕಃ ॥ ೭ ॥

ಮನಾಂಸಿ ಕ್ಷೋಭಯತ್ಯೇಷ ಪಲ್ಲವಾನಿವ ಮಾರುತಃ ।
ವಾಹಯತ್ಯಕ್ಷಪಂಕ್ತಿಂ ಸ್ವಾಮಶ್ವಾಲೀಮಿವ ಸಾರಥಿಃ ॥ ೮ ॥

ಅತಿದುರ್ವಿಧವದ್ದೇಹಗೇಹೇ ಕರ್ಮರತಃ ಸದಾ ।
ಸಮ್ರಾಡಿವಾತ್ಮನಿ ಸ್ವಸ್ಥಃ ಸಂಸ್ಥಿತೋ ಭೋಗಭುಗ್ವಿಭುಃ ॥ ೯ ॥

ಸಾನ್ನಿಧ್ಯ ಮಾತ್ರದಿಂದಲೇ. ಆತ್ಮನೂ ಸರ್ವದಾ ಚಕ್ರದಂತೆ ಸುತ್ತಿಸುತ್ತಾ ಇರುವನು. ಅದೇ ಇವನ ಕರ್ಮ ಫಲವು

(ಮೂಲದಲ್ಲಿ ಅಭಯಃ ಎಂದಿದೆ. ಅದನ್ನು ಅಭವಃ ಎಂದು ತಿದ್ದಿಕೊಂಡು ಅರ್ಥ ಬರೆದಿದೆ. ಹೀಗೆ ತಿದ್ದಿದ ಪಾಠವೇ ಸುರಸವಾಗಿರುವಂತೆ ಕಾಣುತ್ತದೆ.)

೭. ಆತ್ಮನು (ವಸ್ತುತಃ ನಿಷ್ಕ್ರಿಯನೂ, ನಿಸ್ಸ್ಪಂದನೂ ಆಗಿದ್ದರೂ ಕೂಡ) ಸರ್ವದಾ ಸಂಚರಿಸತಕ್ಕ ವಾಯುವಿಗಿಂತಲೂ ಹೆಚ್ಚಾಗಿ ನಿತ್ಯ ಸ್ಪಂದಮಯವಾಗಿಯೂ ಅಚಲವಾದ ಸ್ಥಾಣುವಿಗಿಂತ ಹೆಚ್ಚಾಗಿ ನಿತ್ಯ ನಿಷ್ಕ್ರಿಯನಾಗಿಯೂ ಮತ್ತು ಆಕಾಶಕ್ಕಿಂತಲೂ ಹೆಚ್ಚಾಗಿ ನಿತ್ಯ ನಿರ್ಲೇಪನಾಗಿಯೂ ಇರುವನು.

೮. ವಾಯುವು ಪಲ್ಲವ (ಚಿಗುರೆಲೆ)ಗಳನ್ನು ಬಲವಾಗಿ ಅಲುಗಾಡಿಸುವಂತೆ, ಈ ಆತ್ಮನು ಎಲ್ಲರ ಮನಸ್ಸುಗಳನ್ನೂ ಕ್ಷೋಭೆಗೊಳಿಸುವನು. (ಕಲಕಿ ಬಿಡುವನು, ಚಂಚಲಪಡಿಸುವನು.) ಮತ್ತು ಸಾರಥಿಯು ತನ್ನ ಅಶ್ವಗಳನ್ನೂ ನಡೆಯಿಸುವಂತೆ, ಈ ಆತ್ಮನು ತನ್ನ ಇಂದ್ರಿಯ ಸಮುದಾಯವನ್ನು ಮನ ಬಂದಂತೆ ನಡೆಯಿಸುವನು.

೯. ಈ ಆತ್ಮನು ಮಿಥ್ಯೆಯಾಗಿ ಅತ್ಯಂತ ದುರ್ದಶೆಗೆ ಸಿಕ್ಕಿ ಬಿದ್ದಿರುವ ದರಿದ್ರನಂತೆ ತನ್ನ ದೇಹವೆಂಬ ಮನೆಯಲ್ಲಿ ಸರ್ವದಾ ಕಾರ್ಯಾಸಕ್ತನಾಗಿರುವನು. ಮತ್ತು ಇವನು ಸರ್ವವ್ಯಾಪಿಯಾಗಿದ್ದುಕೊಂಡು, ಒಬ್ಬ ಚಕ್ರವರ್ತಿಯಂತೆ ಸಕಲ ವಿಧ ಭೋಗಗಳನ್ನು ಅನುಭವಿಸುತ್ತ, ತನ್ನಲ್ಲಿಯೇ ತಾನು ಸ್ವಸ್ಥನಾಗಿದ್ದುಕೊಂಡಿರುವನು.

ಏಷ ಏವ ಸದಾನ್ವಿಷ್ಯಃ ಸ್ತುತ್ಯೋ ಧ್ಯಾತವ್ಯ ಏವ ತು ।
ಜರಾಮರಣ ಸಂಮೋಹಾದ್ಯನೇನೋತ್ತೀರ್ಯ ಗಮ್ಯತೇ ॥ ೧೦ ॥

ಸುಲಭಶ್ಚಾಯಮತ್ಯಂತಂ ಸುಜ್ಞೇಯಶ್ಚಾಪ್ತ ಬಂಧುವತ್ ।
ಶರೀರ ಪದ್ಮಕುಹರೇ ಸರ್ವೇಷಾಮೇವ ಷಟ್ಪದಃ ॥ ೧೧ ॥

ಅನಾಕೃಷ್ಟೋಽ ಪ್ಯನಾಹೂತಃ ಸ್ವದೇಹಾದೇವ ಲಭ್ಯತೇ ।
ಮನಾಗೇವೋ ಪಹೂತೋಽ ಪಿ ಕ್ಷಣಾದ್ಭವತಿ ಸನ್ಮುಖಃ ॥ ೧೨ ॥

---

೧೦. ಅದು ಕಾರಣ ಸರ್ವದಾ ಈ ಆತ್ಮನನ್ನೇ ಹುಡುಕಿ ಕಂಡು ಹಿಡಿಯ ಬೇಕು. ಈ ಆತ್ಮನನ್ನೇ ಸ್ತುತಿಸಬೇಕು. ಮತ್ತು ಧ್ಯಾನ ಮಾಡಲೂ ಬೇಕು. ಹೇಗಾದರೂ ಈ ಆತ್ಮನನ್ನು ಹುಡುಕಿ ಕಂಡುಹಿಡಿದದ್ದೇ ಆದರೆ, (ಸಾಕ್ಷಾತ್ಕಾರ ಮಾಡಿಕೊಂಡರೆ) ಈ ಜರಾ (ಮುಪ್ಪು) ಮರಣ ಸಂಮೋಹಾತ್ಮಕವಾದ ಸಂಸಾರ ದೆಸೆಯಿಂದ ಉತ್ತೀರ್ಣವಾಗಿ ಸರ್ವರೂ ಪರಮ ಪದವನ್ನು ಪಡೆಯಬಹುದು.

೧೧. ಅವಾಙ್ಮಾನಸಗೋಚರನಾದ ಈ ಆತ್ಮನು ದುರ್ಲಭನೆಂದು ಎಂದಿಗೂ ಚಿಂತಿಸಬಾರದು. ಈ ಆತ್ಮನಾದರೋ ಕೇವಲ ಜ್ಞಾನ ಮಾತ್ರದಿಂದಲೇ ಅತ್ಯಂತ ಸುಲಭನಾಗಿರುವನು. ಮತ್ತು ಕೇವಲ ಸ್ಮರಣೆಯಿಂದಲೇ ಆತ್ಮನನ್ನು ಆಪ್ತ ಬಂಧುವನ್ನು ಹೇಗೋ ಹಾಗೆ ಸುಖವಾಗಿ ವಶಪಡಿಸಿಕೊಳ್ಳಬಹುದು. ಭ್ರಮರವು ಕಮಲಗಳೊಳಗೆಯೇ ವಿಹರಿಸುತ್ತಿರುವಂತೆ, ಆತ್ಮನು ಸಕಲ ಜೀವ ರಾಶಿಗಳ ಶರೀರಗಳೊಳಗೆ ಕ್ರೀಡಿಸುತ್ತಿರುವನು.

೧೨. ದೂರದಲ್ಲಿರುವ ಆಪ್ತರನ್ನು ಗಟ್ಟಿಯಾಗಿ (ಉಚ್ಚ-ಧ್ವನಿಯಿಂದ ಕೂಗಿ ಕರೆದು ಬರಮಾಡಿಕೊಳ್ಳುವಂತೆ, ಈ ಆತ್ಮನನ್ನು ಪಡೆಯುವ ಸಲುವಾಗಿ ಕೂಗಿ ಕರೆಯಬೇಕಾದ ಅವಶ್ಯಕತೆಯಿಲ್ಲ. ಹತ್ತಿರದಲ್ಲಿರುವವರನ್ನು ಮೆಲ್ಲಗೆ ಕೂಗಿ ಕರೆ ಯುವಂತೆ, ಇವನ ಲಾಭಕ್ಕಾಗಿ ಸಣ್ಣ ಧ್ವನಿಯಿಂದ ಕರೆಯಬೇಕಾಗಿಯೂ ಇಲ್ಲ. ಇವನು ಸರ್ವದಾ ಸರ್ವರ ದೇಹಗಳಲ್ಲಿಯೂ ಸನ್ನಿಹಿತನಾಗಿಯೇ ಇರುವ ಕಾರಣ. ಪ್ರಣವೋ (ಓಂಕಾರ)ಚ್ಚಾರಣ ಮಾತ್ರದಿಂದ ಇವನನ್ನು ಧ್ಯಾನಿಸಿದರೂ ಕೂಡ ತತ್ ಕ್ಷಣ ಇವನು ಸಂಮುಖನಾಗಿಬಿಡುವನು. [ಓಮ್ ಇತಿ ಬ್ರಾಹ್ಮಣಃ ಪ್ರವಕ್ಷನ್ನಾಹ ಬ್ರಹ್ಮೋಪಾಪ್ನವಾನೀತಿ. ಬ್ರಹ್ಮೈವೋಪಾಪ್ನೋತಿ." ತೈತ್ತಿರೀಯ. ಶಿಕ್ಷಾವಲ್ಲಿ.)

ನಾನ್ಯ ಸಂಸೇವ್ಯಮಾನಸ್ಯ ಸರ್ವ ಸಂಪತ್ತಿಶಾಲಿನಃ ।
ಧನಾನಾಮೀಶ್ವರಸ್ಯೇವ ಸ್ಮಯೋ ಗರ್ವೋ ಯಥಾ ಭವೇತ್ ॥ ೧೩ ॥

ಆಮೋದ ಇವ ಪುಷ್ಪೇಷು ತೈಲಂ ತಿಲಕಣೇಷ್ವಿವ ।
ರಸಜಾತಿಷ್ವಿವಾಸ್ವಾದೋ ದೇವೋ ದೇಹೇಷು ಸಂಸ್ಥಿತಃ ॥ ೧೪ ॥

ಅವಿಚಾರವಶಾದೇಷ ಹೃದಯಸ್ಥೋಽ ಪಿ ಚೇತನಃ ।
ನ ಜ್ಞಾಯತೇ ಚಿರಾದೃಷ್ಟೋ ದೃಷ್ಟಬಂಧುರಿವಾಗ್ರತಃ ॥ ೧೫ ॥

---

೧೩. ಸರ್ವರಿಂದಲೂ ಸರ್ವದಾ ಸೇವಿಸಲ್ಪಡುತ್ತಿರುವವನೂ, ಸರ್ವಸಂಪತ್ಸಮನ್ವಿತನಾಗಿ ಪರಿಪೂರ್ಣನೂ (ಆಪ್ತಕಾಮನೂ) ಆಗಿರುವನಾದರೂ ಕೂಡ. ಈ ಆತ್ಮನಿಗೆ ಲೋಕದಲ್ಲ ಒಬ್ಬ ಸಾಧಾರಣ ಧನಿಕನಿಗುಂಟಾಗುವಂತೆ, ತನ್ನಲ್ಲಿ ಗರ್ವವಾಗಲೀ, ಪರಾವಹೇಲನವಾಗಲೀ (ಇವರನ್ನು ತುಚ್ಛವಾಗಿ ಎಣಿಸಿ ಧಿಕ್ಕರಿಸುವುದು) ಉಂಟಾಗುವುದೇ ಇಲ್ಲ. ಆದುದರಿಂದಲೇ ಈ ಆತ್ಮನು ಸರ್ವ ಸುಲಭನು. (ಯತ್ ಸಾಕ್ಷಾದಪರೋಕ್ಷಾದ್ಬ್ರಹ್ಮ. ಅಯಮಾತ್ಮಾ ಬ್ರಹ್ಮ ಸರ್ವಾನುಭೂಃ)

೧೪. ಪುಷ್ಪಗಳಲ್ಲಿ ಸುಗಂಧದಂತೆಯೂ (ಪರಿಮಳ) ಎಳ್ಳುಗಳಲ್ಲಿ ಎಣ್ಣೆಯಂತೆಯೂ, ಮಧುರ ರಸಯುತವಾದ ವಸ್ತುಗಳಲ್ಲಿ ಮಾಧುರ್ಯದಂತೆಯೂ, ಸ್ವತಃ ಪ್ರಕಾಶ ರೂಪನಾದ ಆತ್ಮನು ಜಡವಾದ ಶರೀರಗಳಲ್ಲಿ ವ್ಯಾಪಿಸಿಕೊಂಡಿರುವನು. (ಅಂತವಂತ ಇಮೇದೇಹಾ ನಿತ್ಯಸ್ಯೋಕ್ತಾಃ ಶರೀರಿಣಃ । ಅನಾಶಿನೋಽಪ್ರಮೇಯಸ್ಯ । ನಿತ್ಯ ಸ್ಸರ್ವಗತಃ ಸ್ಥಾಣು ರಚಲೋಽಯಂ ಸನಾತನಃ ಇತ್ಯಾದಿ ಗೀತಾ ೨.)

೧೫. ಬಹು ಕಾಲದಿಂದ ನೋಡದೆಯೇ ಇರತಕ್ಕ ಒಬ್ಬ ಆಪ್ತ ಬಂಧುವು ಈಗ ನಮ್ಮೆದುರಿಗೆ ಬಂದರೂ, ಇವನು ನಮ್ಮ ಬಂಧುವೆಂದು ಹೇಗೆ (ಅವಿಚಾರ ಕಾಲದಲ್ಲಿ) ತಿಳಿಯುವುದಿಲ್ಲವೋ ಹಾಗೆ ಚೈತನ್ಯ ರೂಪನಾದ ಈ ಆತ್ಮನು ಸಕಲ ಪ್ರಾಣಿಗಳ ಹೃದಯದಲ್ಲಿ ಸದಾ ಸನ್ನಿಹಿತನಾಗಿದ್ದರೂ ಕೂಡ ತತ್ತ್ವವಿಚಾರಾಭಾವದ ದೆಸೆಯಿಂದ (ವಿಚಾರ ಮಾಡದೆ ಇರುವಾಗ) ಯಥಾರ್ಥವಾಗಿ ತಿಳಿಯಲ್ಪಡದಿರುವನು.

ವಿಚಾರಣಾ ಪರಿಜ್ಞಾತ ಏತಸ್ಮಿನ್ಪರಮೇಶ್ವರೇ ।
ಅಭ್ಯುದೇತಿ ಪರಾನಂದೋ ಲಬ್ಧೇ ಪ್ರಿಯಜನೇ ಯಥಾ ॥ ೧೬ ॥

ಅಸ್ಮಿಂದೃಷ್ಟೇ ಪರೇ ಬನ್ಧಾವುದ್ದಾಮಾನಂದದಾಯಿನೀ ।
ಆಯಾಂತಿ ದೃಷ್ಟಯಸ್ತಾಸ್ತಾ ಯಾಭಿರ್ಭಂಗೋ ವಿಲೀಯತೇ ॥ ೧೭ ॥

ತ್ರುಟ್ಯಂತೇ ಸರ್ವತಃ ಪಾಶಾಃ ಕ್ಷೀಯಂತೇ ಸರ್ವಶತ್ರವಃ ।
ನ ಕೃನ್ತನ್ತಿ ತನಾಂಸ್ಯಾಶಾ ಗೃಹಾಣೀವ ದುರಾಖವಃ ॥ ೧೮ ॥

---

೧೬. ಆಚಾರ್ಯ ಮುಖದಿಂದ ಸತ್ಸಂಪ್ರದಾಯಾನುಸಾರವಾಗಿ ಶಾಸ್ತ್ರಾರ್ಥ ವಿಚಾರವನ್ನು ಮಾಡಿ ಯಥಾರ್ಥವಾಗಿ ಪರಮೇಶ್ವರನಾದ ಈ ಆತ್ಮನನ್ನು ಸ್ವಾನುಭವದಿಂದ ತಿಳಿದುಕೊಂಡುಬಿಟ್ಟರೆ, ಆಗ ಪೂರ್ವ ನಷ್ಟರಾದ ಬಂಧು ಜನಗಳು ಪುನಃ ಲಬ್ಧರಾದಾಗ ಉಂಟಾಗುವಂತೆ, ನಿತ್ಯ ನಿರತಿಶಯಾನಂದ ಲಾಭವು ಉಂಟಾಗುವುದು.

೧೭. ಹೀಗೆ ನಿತ್ಯ ನಿರವದ್ಯ ನಿರತಿಶಯಾನಂದ ರೂಪ ಮೋಕ್ಷ ಪ್ರದನಾದ ಪರಮಾಪ್ತ ಬಂಧುವಾದ ಈ ಪರಮಾತ್ಮನು, ತತ್ತ್ವತಃ ಸಾಕ್ಷಾತ್ಕರಿಸಲ್ಪಟ್ಟದ್ದೇ ಆದರೆ, ಮರಣಾದಿ ವಿಚ್ಛೇದನವನ್ನು ಲಯಗೊಳಿಸತಕ್ಕ ಆಯಾ ದೃಷ್ಟಿಗಳು ಸ್ವತಃ ಆವಿರ್ಭವಿಸುವುವು.

೧೮. ಪರಮಾತ್ಮ ಸಾಕ್ಷಾತ್ಕಾರದಿಂದ ಸ್ನೇಹಾದಿ ಪಾಶಗಳು ಸರ್ವತಃ (ನಮ್ಮ ಅಭಿಮಾನಕ್ಕೆ ಪಾತ್ರವಾದ ಸಕಲ ವಸ್ತುಗಳಿಂದಲೂ, ಪ್ರಾಣಿಗಳಿಂದಲೂ) ಸಂಪೂರ್ಣವಾಗಿ ಕತ್ತರಿಸಲ್ಪಟ್ಟು ನಿರ್ನಾಮವಾಗುವುವು. ಕಾಮ ಕ್ರೋಧಾದಿ ಸಕಲ ಶತ್ರುಗಳೂ ನಾಶ ಹೊಂದುವರು. ಹೆಗ್ಗಣಗಳು (ಇಲಿಗಳು) ಮನೆಗಳಲ್ಲಿಯೇ ಸೇರಿಕೊಂಡು ರಂಧ್ರಗಳನ್ನು ಕೊರೆದು ಧ್ವಂಸ ಮಾಡುವಂತೆ, ನಮ್ಮ ಮನಸ್ಸುಗಳಲ್ಲಿಯೇ ನೆಲೆಸಿ ಸರ್ವದಾ ಕೊರೆಯುತ್ತಲಿದ್ದ ದುರಾಶೆ (ತೃಷ್ಣೆ)ಗಳೆಲ್ಲವೂ ಪ್ರಶಾಂತವಾಗಿ ಪುನಃ ತಲೆದೋರದೆ ಹೋಗಿಬಿಡುವುವು. (ಭಿದ್ಯತೇ ಹೃದಯ ಗ್ರಂಥಿಃ ಛಿದ್ಯಂತೇ ಸರ್ವ ಸಂಶಯಾಃ-। ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ–ಮುಂಡಕ.)

ಅಸ್ಮಿನ್ದೃಷ್ಟೇ ಜಗದ್ದೃಷ್ಟಂ ಶ್ರುತೇಽಸ್ಮಿನ್ಸಕಲಂ ಶ್ರುತಂ ।
ಸ್ಪೃಷ್ಟೇ ಚಾಸ್ಮಿನ್ ಜಗತ್ಸ್ಪೃಷ್ಟಂ ಸ್ಥಿತೇಽಸ್ಮಿನ್ಸಂಸ್ಥಿತಂ ಜಗತ್ ॥ ೧೯ ॥

---

೧೯. ಈ ಆತ್ಮನು (ಒಬ್ಬನು) ಸಾಕ್ಷಾತ್ಕರಿಸಲ್ಪಡುವುದರಿಂದ ಜಗತ್ತೆಲ್ಲವೂ ಸಾಕ್ಷಾತ್ಕೃತವಾಗುವುದು. ಇವನು ಶ್ರುತನಾದರೆ ಪ್ರಪಂಚವೆಲ್ಲವೂ ಶ್ರುತವಾಗುವುದು. ಆತ್ಮನೊಬ್ಬನನ್ನು ಸ್ಪರ್ಶ ಮಾಡಿದರೆ ಜಗತ್ತೆಲ್ಲ ಸ್ಪೃಷ್ಟವಾಗುವುದು. ಇವನೊಬ್ಬನ ಸತ್ತಾಮಾತ್ರದಿಂದಲೇ, (ಇರುವಿಕೆಯಿಂದ) ಈ ಜಗತ್ತೆಲ್ಲವೂ ಸತ್ತೆಯನ್ನು ಪಡೆದಿರುವುದು. (ಜಗತ್ತು ಆತ್ಮ ಸತ್ತೆಯನ್ನು ಅವಲಂಬಿಸಿ, ತದಧೀನ ಸತ್ತೆಯುಳ್ಳದಾಗಿರುವುದು. ಈ ವಿಚಾರವು ಛಾಂದೋಗ್ಯೋಪನಿಷತ್ತಿನ ೬ನೆಯ ಪ್ರಪಾಠಕದಲ್ಲಿ ಸವಿಸ್ತರವಾಗಿಯೂ, ನಿಸ್ಸಂದೇಹವಾಗಿಯೂ ಪ್ರತಿಪಾದಿತವಾಗಿರುವುದು. ಶ್ವೇತಕೇತುವೆಂಬ ವಟುವು ಗುರುಕುಲವಾಸ ಮಾಡಿ, ಸಕಲ ವೇದಗಳನ್ನೂ ಅಧ್ಯಯನ ಮಾಡಿ, ಮಹಾ ಗರ್ವಿಷ್ಠನಾಗಿ ತನ್ನ ತಂದೆಯ ಬಳಿಗೆ ಬಂದನು. ಆಗ ಇವನ ತಂದೆಯು ಇವನ ಅಹಂಕಾರವನ್ನು ಖಂಡಿಸುವ ಸಲುವಾಗಿ, ಎಲೈ ಶ್ವೇತಕೇತುವೇ, ಯಾವುದರಿಂದ ಅಶ್ರುತವಾದುದು ಶ್ರುತವಾಗುವುದೋ, ಅಮತವೂ ಮತವಾಗುವುದೋ, ಅವಿಜ್ಞಾತವೂ ವಿಜ್ಞಾತವಾಗುವುದೋ ಅಂತಹ ಉಪದೇಶ (ಆದೇಶ)ವನ್ನು ನೀನು ನಿನ್ನ ಗುರುಗಳನ್ನು ಕೇಳಿ ತಿಳಿದುಕೊಂಡಿರುವೆಯಾ ಏನು? ಎಂದು ಕೇಳಿದನು. ಅದಕ್ಕೆ ಪ್ರತ್ಯುತ್ತರವಾಗಿ "ಶ್ವೇತಕೇತುವು, ಪೂಜ್ಯರೇ, ಆ ಆದೇಶವು ಹೇಗೆ? ಎಂತಹುದು? ತಾವೇ ನನಗೆ ವಿವರಿಸಬೇಕು"ಎಂದು ಪ್ರಾರ್ಥಿಸಲು, ಆಗ ಆತನು "ಯಥಾ ಸೋಮ್ಯ ಏಕೇನ ಮೃತ್ಪಿಂಡೇನ ಸರ್ವಂ ಮೃನ್ಮಯಂ ವಿಜ್ಞಾತಂ ಸ್ಯಾತ್" ಇತ್ಯಾದಿ ದೃಷ್ಟಾಂತಗಳಿಂದ ಏಕ ವಿಜ್ಞಾನದಿಂದ ಸರ್ವ ವಿಜ್ಞಾನವನ್ನು ಪ್ರತಿಜ್ಞೆ ಮಾಡಿ, "ವಾಚಾರಂಭಣಾ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಂ." ಇತ್ಯಾದಿ ವಿವಿಧೋಪನ್ಯಾಸಗಳನ್ನು ಮಾಡಿ ಅವನ ಮನಸ್ಸಿನಲ್ಲಿ ತತ್ತ್ವಜ್ಞಾನವು ದೃಢವಾಗಿ ನಿಲ್ಲುವ ಪರಿವಿಗೂ ಪುನಃ ಪುನಃ "ತತ್ತ್ವಮಸಿ (ತತ್ ತ್ವಂ ಅಸಿ) ಶ್ವೇತಕೇತೋ" ಎಂಬುದಾಗಿ ಅಧ್ಯಾಯ ಪರಿಸಮಾಪ್ತಿ ಪರ್ಯಂತವೂ ಅತ್ಯಂತ ವಿವರವಾಗಿ ಉಪದೇಶಿಸಿರುವನು. ಆಕಾಶಾದಿ ಬಹು ಪ್ರಪಂಚಾತ್ಮಕವಾದ ಜಗತ್ತೆಲ್ಲವೂ ಕಾರ್ಯವು. ಪರಬ್ರಹ್ಮವು ಕಾರಣ. ಅದು ಪರಮಾರ್ಥವು. ಈ ಕಾರಣಕ್ಕಿಂತಲೂ ಬೇರೆಯಾಗಿ ಕಾರ್ಯವೆಂಬುದು ಸುತರಾಂ ಇಲ್ಲವು. ಕಾರ್ಯವು ಕಾರಣಕ್ಕಿಂತ ಅನನ್ಯವಾದುದು. ಒಂದು ಮೃತ್ಪಿಂಡವನ್ನು ಪರಮಾರ್ಥತಃ "ಇದು ಮೃತ್ತು (ಮಣ್ಣು) ಎಂಬುದಾಗಿ ಮೃದ್ರೂಪನಾಗಿ ತಿಳಿದುಕೊಳ್ಳುವುದರಿಂದ ಘಟಶರಾವಾದಿ ಸಕಲ ಮೃನ್ಮಯಿಗಳೂ,

ಏಷ ಜಾಗರ್ತಿ ಸುಪ್ತಾನಾಂ ಪ್ರಹರತ್ಯ ವಿವೇಕಿನಾಂ ।
ಹರತ್ಯಾಪದಮಾರ್ತಾನಾಂ ವಿತರತ್ಯ ಮಹಾತ್ಮನಾಂ　　॥ ೨೦ ॥

ನಿರ್ವಿಶೇಷವಾದ ಮೃದಾತ್ಮಕತ್ವದ ದೆಸೆಯಿಂದ ವಿಜ್ಞಾತವೇ ಆಗುವುದು. ವಿಕಾರ ವೆಂಬುದು ಯಾವುದೂ ವಸ್ತುತಃ ಸದಾತ್ಮಕವಾಗಿ ಇಲ್ಲವೇ ಇಲ್ಲ. ಅದು ಕೇವಲ ಮಾತಿನಿಂದಲೇ. ಅಸ್ತಿ (ಇದೆ) ಎಂದು ವ್ಯವಹರಿಸಲ್ಪಡುವುದು. ಘಟ ಶರಾವಾದಿಗಳು ಮೃದ್ವಿಕಾರಗಳು, ಇವು ನಾಮಧೇಯ ಮಾತ್ರಗಳೇ, ಇವು ಕೇವಲ ಮಿಥ್ಯೆಯು (ಅನೃತ). ಕಾರಣವಾದ ಮೃತ್ತಿಕೆಯು ಮಾತ್ರವೇ ಸತ್ಯವು." ಎಂದು ಮುಂತಾಗಿ ಬೋಧಿಸಿರುವನು. ಈ ದೃಷ್ಟಾಂತದಲ್ಲಿ ಉಪದಿಷ್ಟವಾಗಿರು ವಂತೆ, ವಿಕಾರಗಳಾದ ಆಕಾಶಾದಿ ಜಗತ್ತು (ಕಾರ್ಯವು) ಭ್ರಾಂತಿ ಕಲ್ಪಿತಗಳಾದ ನಾಮ ರೂಪಗಳಿಂದ ಮಾತ್ರವೇ ಕೇವಲ ಮಿಥ್ಯಾಭೂತವಾಗಿಯೇ ವ್ಯವಹಾರ ಗೋಚರವಾಗಿರುವುದು. ಕಾರಣವಾದ ಪರ ಬ್ರಹ್ಮವು ಒಂದೇ ಪರಮಾರ್ಥ ಸತ್ಯವು. ನಿರ್ವಿಕಾರಿಯು. ಈ ಆತ್ಮ ಸತ್ತೆಯಿಂದಲೇ ಆಕಾಶಾದಿ ಜಗತ್ತು ಸತ್ತೆಯನ್ನು ಪಡೆದಿರುವುದೇ ಹೊರತು, ಅದಕ್ಕೆ ಬೇರೆ ಸತ್ತೆಯೇ ಇಲ್ಲ. ಹೀಗೆ ಕಾರ್ಯವು ಕಾರಣಾನನ್ಯವಾದುದರಿಂದಲೇ ಕಾರಣವೊಂದರ ವಿಜ್ಞಾನದಿಂದ ಮಾತ್ರವೇ. ವಿಕಾರಗಳಾದ ತತ್ಕಾರ್ಯಗಳೆಲ್ಲ ವಿಜ್ಞಾತವಾಗುವುವು, ಎಂಬ ಸಿದ್ಧಾಂತವು ನಿಷ್ಪನ್ನ ವಾಗುವುದು. ಅನ್ಯಥಾ ಏಕ ವಿಜ್ಞಾನದಿಂದ ಸರ್ವ ವಿಜ್ಞಾನವು ಸಂಪನ್ನವಾಗದೇ ಹೋಗಿ, ಸ್ವಪ್ರತಿಜ್ಞಾ ಭಂಗವಾಗಿ ಬಿಡುವುದು. "ಐತದಾತ್ಮ್ಯ ಮಿದಂ ಸರ್ವಂ-ತತ್-ಸತ್ಯಂ-ಸ ಆತ್ಮಾ-ತತ್ತ್ವಮಸಿ ಶ್ವೇತಕೇತೋ- ಎಂಬ ಈ ನಿಗಮನ ವಾಕ್ಯವು ಸಮಂಜಸವಾಗದೆ ಹೋಗುವುದು. ಇದಂ ಸರ್ವಂ ಯದಯಮಾತ್ಮಾ ಬೃಹದಾರಣ್ಯಕ ೨-೪-೬. 'ಬ್ರಹ್ಮೈವೇದಂ ಸರ್ವಂ' ಮುಂಡಕ ೨-೨-೧೧. 'ಆತ್ಮೈವೇದಂ ಸರ್ವಂ" ಛಾಂದೋಗ್ಯ ೭-೫-೨. 'ನೇಹ ನಾನಾಸ್ತಿ ಕಿಂಚನ' ಬೃಹ. ೪-೪-೧೯. ಇವೇ ಮುಂತಾದ ಶ್ರುತಿಗಳೂ ಕೂಡ, ಆತ್ಮೈಕತ್ವವನ್ನು ಪ್ರತಿಪಾದಿಸಿ, ಕಾರಣವ್ಯ ವಿವೇಕದಿಂದ ಸಕಲ ಕಾರ್ಯಾಭಾವವನ್ನು (ಕಾರ್ಯಗಳ ಕಾರಣಾನನ್ಯತ್ವ ವನ್ನು) ಸ್ಪಷ್ಟವಾಗಿ ಸಮರ್ಥಿಸಿ ಸಿದ್ಧಾಂತ ಮಾಡುವುವು. ಈ ಛಾಂದೋಗ್ಯ ಆರನೇ ಪ್ರಪಾಠಕದ, ಉಪಕ್ರಮ, ಉಪಸಂಹಾರ, ಅಭ್ಯಾಸ (ಆವೃತ್ತಿ) ಇತ್ಯಾದಿ ತಾತ್ಪರ್ಯ ನಿರ್ಣಾಯಕ ಲಿಂಗಗಳಿಂದಲೂ ಇದೇ ಅರ್ಥವೇ ಸ್ಪಷ್ಟವಾಗಿರುವುದು. ಹೆಚ್ಚಿನ ವಿವರಗಳನ್ನು, ತದನನ್ಯತ್ವಮಾರಂ ಭಣ ಶಬ್ದಾ ದಿಭ್ಯಃ ಬ್ರಹ್ಮ ಸೂತ್ರ. ೨-೧-೧೪. (ಆರಂಭಣಾಧಿ ಕಾರಣ-೬). ಇದರ ಶ್ರೀ ಶಾಂಕರ ಭಾಷ್ಯದಿಂದ ಗ್ರಹಿಸಬಹುದು.

೨೦. ಸಕಲ ಭೂತಗಳೂ ಅಜ್ಞಾನ ನಿದ್ರಾವೃತರಾಗಿ ಮಲಗಿರುವಾಗ ಈ

ವಿಚರತ್ಯೇಷ ಲೋಕೇಷು ಜೀವ ಏಷ ಜಗತ್‌ಸ್ಥಿತೌ ।
ವಿಲಸತ್ಯೇವ ಭೋಗೇಷು ಪ್ರಸ್ಫುರತ್ಯೇವ ವಸ್ತುಷು ॥ ೨೧ ॥

ಆತ್ಮನಾತ್ಮಾನಮೇವಾತಃ ಶಾಂತೇನಾನುಭವನ್ಸ್ವಯೀ ।
ಸ್ಥಿತಃ ಸರ್ವೇಷು ದೇಹೇಷು ತೀಕ್ಷ್ಣತ್ವಂ ಮರಿಚೇಷ್ವಿವ ॥ ೨೨ ॥

ಚೇತನಾಕಲನಾರೂಪೀ ಸಬಾಹ್ಯಾಭ್ಯಾಂತರಾಶ್ರಿತಃ ।
ಜಗತ್ಪದಾರ್ಥ ಸಂಭಾರೇ ಸತ್ತಾಸಾಮಾನ್ಯಮಾಸ್ಥಿತಃ ॥ ೨೩ ॥

ಆತ್ಮನು ಜಾಗೃತನಾಗಿಯೇ ಇರುವನು. ವಿವೇಕ ಶೂನ್ಯರಾದ ಅಜ್ಞಾನಿಗಳ ವಿಷಯದಲ್ಲಿ ತನ್ನ ನಿಯಮನ ಶಕ್ತಿಯನ್ನು ತೋರಿ ಪ್ರಹರಿಸುವನು. ಸಾಂಸಾರಿಕ ಕ್ಲೇಶಗಳಿಂದ ನಿರ್ವಿಣ್ಣರಾಗಿ ತನಗೆ ಶರಣಾಗತರಾದ ಆರ್ತರ ಸಕಲಾನರ್ಥ ನಿದಾನವಾದ ಅಜ್ಞಾನವೆಂಬ ವಿಪತ್ತನ್ನು ಪರಿಹರಿಸುವನು. ಅಲ್ಪ ಭೋಗಾಪೇಕ್ಷೆಯಿಂದ ಧನಿಕರು, ರಾಜರು, ಕುದೇವತೆಗಳು ಮುಂತಾದ ಪರಿಚ್ಛಿನ್ನಾತ್ಮಕರನ್ನು ಸೇರಿಸಿಕೊಂಡಿರುವ ಪಶುಪ್ರಾಯರಾದ ನರಾಧಮರಿಗೆ, ಅವರವರಿಗೆ ಅಭಿಮತಗಳಾದ ಕ್ಷುದ್ರ ಫಲಗಳನ್ನೇ ಕೊಡುವನು.

[ಯಾನಿಶಾ ಸರ್ವ ಭೂತಾನಾಂ ವಸ್ಯಾಂ ಜಾಗರ್ತಿ ಸಂಯಮೀ । ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾಪಶ್ಯತೋ ಮುನೇಃ ॥ ಗೀತಾ ೨-೬೯. ಆರ್ತೋ ಜಿಜ್ಞಾಸು ರರ್ಥಾರ್ಥೀ ಜ್ಞಾನೀಚ ಭರತರ್ಷಭ । ಚತುರ್ವಿಧಾ ಭಜಂತೇ ಮಾಂ। ಜನಾಸ್ಸುಕೃತಿನೋಽರ್ಜುನ ॥ ಗೀತಾ ೭-೧೬. ಈ ಶ್ಲೋಕಾರ್ಥಗಳನ್ನು ಪರಾಮರ್ಶಿಸಿ.

೨೧. ಈ ಆತ್ಮನೇ ಜಗತ್ತಿನ ಸ್ಥಿತಿಯಲ್ಲಿ ಜೀವನಾಗಿ ಲೋಕಗಳಲ್ಲೆಲ್ಲ ವಿಹರಿಸುವನು (ಸಂಚರಿಸುವನು.) ಇವನೇ ಭೋಗಗಳಲ್ಲಿ ವಿಲಾಸ ಪಡುವನು. ವಸ್ತ್ರಾಲಂಕಾರಾದಿ ಸಕಲ ವಸ್ತುಗಳಲ್ಲಿ ಶೋಭಿಸುತ್ತಿರುವವನೂ ಈ ಆತ್ಮನೇ.

೨೨. ಅದು ಕಾರಣವೇ, ಜೀವನು, ಪ್ರಶಾಂತವಾದ ತನ್ನಿಂದ (ಆತ್ಮನಿಂದ ತನ್ನನ್ನೇ (ಆತ್ಮನನ್ನೇ) ಅನುಭವಿಸುತ್ತಾ ಮೆಣಸಿನ ಕಾಳುಗಳಲ್ಲಿ ಖಾರದಂತೆ, ಸಕಲ ದೇಹಗಳಲ್ಲಿಯೂ ಅಭಿನ್ನನಾಗಿ ವ್ಯಾಪಿಸಿಕೊಂಡಿರುವನು. ಇದರಿಂದ ಅಸಾಧಾರಣ ಜೀವ ಭೇದ ಭ್ರಮ ದಶೆಯಲ್ಲಿಯೂ ಕೂಡ ಈ ಆತ್ಮನಿಗೆ ಸಾಧಾರಣವಾದ ಏಕಾತ್ಮತ್ವ ಸ್ಫೂರ್ತಿಯು ಕ್ಷಯಿಸುವುದಿಲ್ಲ ಎಂದು ತಿಳಿಯಬೇಕು.

ಏಷ ಶೂನ್ಯತ್ವಮಾಕಾಶೇ ಸ್ಪಂದ ಏಷ ಸದಾಗತೌ ।
ಪ್ರಕಾಶಶ್ಚೈವ ತೇಜಸ್ತು ಪಯಸ್ಯೇಷ ರಸಃ ಪದಃ ॥ ೩೪ ॥

ಕಾಠಿಣ್ಯಮವನಾವೇಷಮೌಷ್ಣ್ಯಮೇವ ಹುತಾಶನೇ ।
ಶೈತ್ಯಮೇಷ ನಿಶಾನಾಥೇ ಸತ್ತಾ ಚೈಷ ಜಗದ್ಗಣೇ ॥ ೩೫ ॥

ಮಷೀಪಿಂಡೇ ಯಥಾ ಕಾರ್ಷ್ಣ್ಯಂ ಶೈತ್ಯಂ ಹಿಮಕಣೇ ಯಥಾ ।
ಯಥಾ ಪುಷ್ಪೇಷು ಸೌಗಂಧ್ಯಂ ದೇಹೇ ದೇಹಪತಿಸ್ತಥಾ ॥ ೩೬ ॥

---

೩೩. ಈ ಆತ್ಮನು, ಬಾಹ್ಯಾಭ್ಯಂತರಗಳಾದ ಚೇತನೋಪಾಧಿಗಳಲ್ಲಿ ಪೂರ್ವೋತ್ತರಾನು ಸಂಧಾನ ರೂಪಿಯಾಗಿಯೂ ಕೂಡ ಆಶ್ರಿತನಾಗಿರುವನು. ಜಗತ್ತಿನ ಸಕಲ ಪದಾರ್ಥಗಳ ಸಂಭಾರದಲ್ಲಿಯಾದರೋ ಸರ್ವಾನುಗತವಾದ ಅಧಿಷ್ಠಾನ ಸತ್ತಾ ಸಾಮಾನ್ಯ ಮಾತ್ರ ಸ್ವಭಾವವನ್ನು ಅವಲಂಬಿಸಿ ಅವಸ್ಥಿತ ನಾಗಿರುವನು.

(ಚೇತನಾ= ಪೂರ್ವೋತ್ತರಾನು ಸಂಧಾನ, ಕಲನಾ= ವರ್ತಮಾನ ದರ್ಶನ. ಎಂದು ತಾತ್ಪರ್ಯ ಪ್ರಕಾಶದಲ್ಲಿ ಹೇಳಿದೆ.)

೩೪. ಆಕಾಶದಲ್ಲಿರುವ ಶೂನ್ಯತ್ವವೂ ಇವನೇ! ವಾಯುವಿನಲ್ಲಿರುವ ಸ್ಪಂದ (ಚಲನ)ವೂ ಇವನೇ! ತೇಜಸ್ಸುಗಳಲ್ಲಿರುವ ಪ್ರಕಾಶವೂ ಇವನೇ! ಜಲದಲ್ಲಿರುವ ಉತ್ತಮವಾದ ರಸವೂ ಕೂಡ ಈ ಆತ್ಮನೇ (ಹೊರತು ಬೇರೆಯಲ್ಲ.)

೩೫. ಅಂತೆಯೇ ಭೂಮಿಯಲ್ಲಿರುವ ಕಾಠಿಣ್ಯವೂ, ಅಗ್ನಿಯಲ್ಲಿರುವ ಉಷ್ಣವೂ, ಚಂದ್ರನಲ್ಲಿರುವ ಶೈತ್ಯವೂ, ಜಗತ್ಸಮುದಾಯದಲ್ಲಿರುವ ಅಸ್ತಿತ್ವವೂ, (ಸತ್ತೆಯೂ) ಕೂಡ ಈ ಆತ್ಮನೇ ಆಗಿರುವನು.

೩೬. ಒಂದು ಮಸಿಯ ಉಂಡೆಯಲ್ಲಿ ಕಪ್ಪು ಬಣ್ಣದಂತೆಯೂ, ಹಿಮ ಜಲದ (ಮಂಜಿನ) ಬಿಂದುವಿನಲ್ಲಿ ಶೈತ್ಯದಂತೆಯೂ, ಹೂವುಗಳಲ್ಲಿ ಸುಗಂಧ (ಪರಿಮಳ ದಂತೆಯೂ ಈ ಆತ್ಮನೇ ದೇಹ ಪತಿಯಾಗಿ ದೇಹದೊಳಗೆ ಪ್ರಕಾಶಿಸುತ್ತಿರುವನು.

ಯಥಾ ಸರ್ವಗತಾ ಸತ್ತಾ ಕಾಲಃ ಸರ್ವಗತೋ ಯಥಾ ।
ಪ್ರಭುಶಕ್ತಿರ್ಮಯೀ ಯಸ್ಯ ಸರ್ವದೇಶಗತಾ ಯಥಾ ॥ ೨೭ ॥

ರೂಪಾಲೋಕಮನಸ್ಕಾರಯುಕ್ತಂ ಸತ್ತ್ವಂ ತಥಾತ್ಮನಃ ।
ನಿತ್ಯಃ ಸೋಽಯಂ ಮಹಾದೇವೋ ದೇವಾನಾಮೇವ ಬೋಧಕಃ ।
ಅಹಮೇವಾಸ್ಮಿ ಮೇ ನಾಸ್ತಿ ಕಲನಾಪಿ ಕಿಲೇತರಾ ॥ ೨೮ ॥

ರೇಣುನೇವಾಣುನಾ ವ್ಯೋಮ್ನಿ ಪದ್ಮಪತ್ರಮಿವಾಂಭಸಾ ।
ಸಂಭ್ರಮೇಣೇವ ಪಾಷಾಣೇ ಸಂಬಂಧೋ ಮಯಿ ನೇತರೈಃ । ॥ ೨೯ ॥

೨೭-೨೮. ಸತ್ತೆಯೂ, (ಅಸ್ತಿತ್ವವೂ) ಮತ್ತು ಕಾಲವೂ ಕೂಡ ಹೇಗೆ ಸರ್ವ ಗತವಾಗಿರುವುವೋ ಒಬ್ಬ ರಾಜನ ಪ್ರಭು ಶಕ್ತಿಯು ಅವನ ಆಳ್ವಿಕೆಗೆ ಒಳಪಟ್ಟಿರುವ ಸಕಲ ದೇಶಗಳಲ್ಲಿಯೂ ಹೇಗೆ ವ್ಯಾಪಿಸುವುದೋ, ಹಾಗೆಯೇ ಆತ್ಮನ ಸತ್ತೆಯು, ಚಕ್ಷುರಾದಿ ಬಾಹೇಂದ್ರಿಯ ವ್ಯಾಪಾರಗಳೊಡನೆಯೂ, ಮಾನಸಿಕ ಅಂದರೆ ಅಂತ ರೇಂದ್ರಿಯ ವ್ಯಾಪಾರಗಳೊಡನೆಯೂ, ಯುಕ್ತವಾಗಿ ಸರ್ವಗತವಾಗಿರುವುದು. (ಬಾಹ್ಯಾಭ್ಯಂತರ ಪ್ರಕಾಶನವೆಂಬುದೆಲ್ಲವೂ ಆತ್ಮನ ಕೃತ್ಯವಾಗಿರುವ ಕಾರಣ, ಈ ಆತ್ಮನು ಪ್ರಕಾಶೈಕ ಸ್ವಭಾವನು ಎಂದರ್ಥವು.) ಹೀಗೆಯೇ (ಅಧಿದೈವವಾಗಿಯೂ ಕೂಡ) ಸೂರ್ಯ ಚಂದ್ರಾದಿ ಸರ್ವ ದೇವತೆಗಳಿಗೂ ಪ್ರಕಾಶಕನಾಗಿ (ಬೋಧಕ) ರುವ, ಸತ್ಯ ರೂಪನಾದ, ಸರ್ವ ಲೋಕ ಪ್ರಸಿದ್ಧನಾದ ಆ ಮಹಾದೇವನು ನಾನೇ ಆಗಿರುವೆನು. ನನಗೆ ಇತರವಾದ ಯಾವುದೊಂದು ಕಲ್ಪನೆಯೂ ಸುತರಾಂ ಸರ್ವಥಾ ಇಲ್ಲವೇ ಇಲ್ಲವು.

೨೯. ಆಕಾಶದಲ್ಲಿ ಅತಿ ಸೂಕ್ಷ್ಮತರುವಾದ ಪರಾಗ (ರೇಣು-ಧೂಳು) ದೊಡ ನೆಯೂ, ತಾವರೆ ಎಲೆ (ಪದ್ಮ ಪತ್ರ) ಯ ಮೇಲೆ ನೀರಿನೊಡನೆಯೂ, ಒಂದು ಕಲ್ಲು ಗುಂಡಿನಲ್ಲಿ ಭಯಕಂಪಾದಿ ಸಂಭ್ರಮ (ಗಾಬರಿ) ಗಳೊಡನೆಯೂ ಹೇಗೆ ಸಂಪರ್ಕ (ಲೋಪ) ಗಳು ಸಂಭವಿಸುವುದೇ ಇಲ್ಲವೋ, ಹಾಗೆಯೇ (ಆತ್ಮನಾದ) ನನ್ನಲ್ಲಿ, ಇತರ ಅನಾತ್ಮ ವಸ್ತುಗಳೊಡನೆ ಹೇಗೂ, ಲೇಶ ಮಾತ್ರವೂ ಸಂಬಂಧವು ಉಂಟಾಗುವುದೇ ಇಲ್ಲ.

೩೦. ಒಂದು ಸೋರೇ ಬುರುಡೆಯ ಮೇಲೆ (ತುಂಬಕ= ಅಲಾಬೂಃ) ಯಥೇಚ್ಛವಾಗಿ ಜಲಧಾರೆಗಳು ಸಂತತವಾಗಿ ವರ್ಷಿಸಲಿ, ಆದರೂ ಆ ಜಲಧಾರೆ

ಸುಖದುಃಖಶ್ರಿಯೋ ದೇಹೇ ಮಾ ಪತಂತು ಪತಂತು ವಾ ।
ತುಂಬಕೋಪರಿ ಧಾರಾಶ್ಚ ಕಾ ನಃ ಕ್ಷಿತಿರುಪಸ್ಥಿತಾ । ॥ ೩೦ ॥

ದೀಪಾಂಗಾತಿಗತೋ ರಜ್ಜ್ವಾ ನಾಲೋಕೋ ಬಧ್ಯತೇ ಯಥಾ ।
ತಥಾ ನಾಯಮಹಂ ಬದ್ಧಃ ಸರ್ವಭಾವಗಣಾತಿಗಃ ॥ ೩೧ ॥

ಸಂಬಂಧಃ ಕೋಽಸ್ತು ನಃ ಕಾಮ್ಯೈರ್ಭಾವಾಭಾವೈರಥೇಂದ್ರಿಯೈಃ ।
ಕೇನ ಸಂಬಂಧ್ಯತೇ ವ್ಯೋಮ ಕೇನ ಸಂಬಾಧ್ಯತೇ ಮನಃ ॥ ೩೨ ॥

ಗಳಿಂದ ಆ ಬುರುಡೆಯೊಳಗಣ ಆಕಾಶಕ್ಕೆ ಸ್ವಲ್ಪವೂ ಜಲಸಂಪರ್ಕವೇ ಸಂಭವಿಸುವುದಿಲ್ಲ. ಇದರಂತೆಯೇ ಈ ದೇಹದಲ್ಲಿ ಸುಖಗಳೂ, ದುಃಖಗಳೂ, ಪರಂಪರೆಯಾಗಿ (ಯಥೇಚ್ಛವಾಗಿ) ಪ್ರಾಪ್ತವಾಗಲಿ ಅಥವಾ ಬರದೆಯೇ ಇರಲಿ. ಇದರಿಂದ ಸದಾ ನಿರ್ಲಿಪ್ತನಾಗಿ ಸತ್ಯ ಜ್ಞಾನಾನಂದ ರೂಪನಾದ ನನಗೆ ಯಾವ ಹಾನಿಯು ತಾನೇ ಇರುವುದು? (ಯಾವ ಹಾನಿಯೂ ಇಲ್ಲವು ಎಂದು ತಾತ್ಪರ್ಯ.) (ಧಾರಾಶ್ಚ=ಧಾರಾ ಇವ. ಇವ ಎಂಬ ಅರ್ಥದಲ್ಲಿ ಚ)

೩೧. ಒಂದು ದೀಪವು ಉರಿಯಬೇಕಾದರೆ ಎಣ್ಣೆ, ಬತ್ತಿ, ಸ್ತಂಭ (ಪಾತ್ರೆ) ಮುಂತಾದ ಅಂಗಗಳು ಬೇಕಾಗಿವೆ. ಈ ಅಂಗಗಳನ್ನೆಲ್ಲ ಅತಿಕ್ರಮಿಸಿ ಹೊರಗೆ ಸುತ್ತಲೂ ಪ್ರಸರಿಸಿರುವ ದೀಪ ಪ್ರಕಾಶವನ್ನು ಎಷ್ಟೇ ಪ್ರಯತ್ನಪಟ್ಟರೂ ಒಂದು ಹಗ್ಗದಿಂದ ಕಟ್ಟಿಹಾಕುವುದು (ಬಂಧಿಸು) ಹೇಗೆ ಅಸಾಧ್ಯವೋ ಹಾಗೆ ಸಕಲ ಪ್ರಾಪಂಚಿಕ ಪದಾರ್ಥಗಳ ಸಂಘಾತವನ್ನೂ ಅತಿಕ್ರಮಿಸಿ ನಿರಾತಂಕನಾಗಿರುವ ಆತ್ಮ ಸ್ವರೂಪನಾದ ಈ ನಾನು ಯಾವುದರಿಂದಲೂ, ಎಂದಿಗೂ, ಹೇಗೂ, ಸ್ವಲ್ಪವೂ, ಬದ್ಧನಾಗಿಲ್ಲವು.

೩೨. ಶಬ್ದಾದಿ ವಿಷಯ ಸುಖಾಭಿಲಾಷೆಗಳಿಂದಾಗಲೀ, ಭಾವಾ ಭಾವಾತ್ಮಕಗಳಾದ ಪ್ರಾಪಂಚಿಕ ವಸ್ತು ಜಾಲಗಳಿಂದಾಗಲೀ, ಅಥವಾ ಇಂದ್ರಿಯಗಳಿಂದಲಾಗಲೀ, ಸರ್ವ ಸಾಕ್ಷಿಯಾಗಿ ದೃಗ್ರೂಪನಾದ ನನಗೆ ಯಾವ ಸಂಬಂಧವು ತಾನೇ ಇರಲಾಗುವುದು.? (ಇಲ್ಲವೇ ಇಲ್ಲವು) ಶೂನ್ಯವಾದ ಆಕಾಶವನ್ನು ಯಾವುದರಿಂದ ಬಂಧಿಸಬಹುದು? ಅಮೂರ್ತವಾದ (ನಿರಾಕಾರ) ಮನಸ್ಸು ಯಾವುದರಿಂದ ತಾನೇ ಹೊಡೆಯಲ್ಪಡಲು ಸಾಧ್ಯವಾದೀತು? (ಸರ್ವಥಾ ಸಾಧ್ಯವೇ ಅಲ್ಲವೆಂದರ್ಥ.)

ಶರೀರೇ ಶತಧಾ ಯಾತೇ ಖಂಡನಾ ಕಾ ಶರೀರಿಣಃ ।
ಕುಂಭೇ ಭಗ್ನೇ ಕ್ಷತೇ ಕ್ಷೀಣೇ ಕುಂಭಕಾಶಸ್ಯ ಕಾ ಕ್ಷತಿಃ ॥ ೩೩ ॥

ಪಿಶಾಚಕ ಇವಾದೃಶ್ಯೋ ಮನೋ ನಾಮೋದಿತಂ ಮುಧಾ ।
ಜಡೇ ತಸ್ಮಿನ್ಕ್ಷತೇ ಬೋಧಾತ್ಮಾ ನಃ ಕ್ಷತಿರುಪಸ್ಥಿತಾ ॥ ೩೪ ॥

ಸುಖದುಃಖಮಯೀ ಯಸ್ಯ ವಾಸನಾ ತನ್ಮನೋ ಮಮ ।
ಅಭವತ್ಪೂರ್ವ ಮದ್ಯೈಕ್ಯಾ ಸಂಪನ್ನಾ ಽ ತನುನಿರ್ವೃತಿಃ ॥ ೩೫ ॥

---

೩೩. ಈ ಶರೀರವು ನೂರಾರು ಭಾಗಗಳಾಗಿ ಖಂಡಿಸಲ್ಪಟ್ಟರೂ ಕೂಡ, ದೇಹಿಯಾದ ಈ ಆತ್ಮನು ನಿರವಯವಿಯಾಗಿರುವ ಕಾರಣ, ಇವನಿಗೆ ಏನು ಖಂಡಿಸಿದಂತಾಯಿತು ? ಒಂದು ಮೃಣ್ಮಯವಾದ ಘಟವು ಚೂರು ಚೂರಾಗಿ ಒಡೆಯಲ್ಪಟ್ಟರೂ, ತೂತು ಕೊರೆಯಲ್ಪಟ್ಟರೂ ಅಥವಾ ಇನ್ನೂ ಯಾವುದಾದರೊಂದು ವಿಧದಿಂದ ನಾಶ ಹೊಂದಿದರೂ ಕೂಡ, ಅದರೊಳಗಣ ಘಟಾಕಾಶಕ್ಕೆ ಯಾವ ಅಪಾಯವು ಸಂಭವಿಸೀತು ? ಯಾವ ಅಪಾಯವೂ ಇಲ್ಲದೆ ಸರ್ವದಾ ಅಕ್ಷತವಾಗಿಯೇ ಇರುವುದು. (ದೇಹೀ ನಿತ್ಯಮವಧ್ಯೋಽಯಂ ದೇಹೇ ಸರ್ವಸ್ಯ ಭಾರತ ॥ ಗೀತಾ ೨-೩೦. ಅಚ್ಛೇದ್ಯೋಽಯ ಮದಾಹ್ಯೋಽಯಮಕ್ಲೇದ್ಯೋಽಶೋಷ್ಯ ಏವ ಚ । ನಿತ್ಯಃ ಸರ್ವಗತಃ ಸ್ಥಾಣುರಚಲೋಽಯಂ ಸನಾತನಃ ॥ ಗೀತಾ ೨-೨೪. ಏಕಸ್ತಥಾ ಸರ್ವಭೂತಾಂತರಾತ್ಮಾ ನಲಿಪ್ಯತೇ ಲೋಕ ದುಃಖೇನ ಬಾಹ್ಯಃ ॥ ಕಠ. ೨-೫-೧೧. ಇವುಗಳನ್ನು ಗಮನಿಸಿ.)

೩೪. ಮನಸ್ಸೆಂಬುದು ಕಣ್ಣುಗಳಿಗೆ ಕಾಣಿಸದ (ಅದೃಶ್ಯವಾದ) ಒಂದು ಪಿಶಾಚದಂತೆ ನಿರರ್ಥಕವಾಗಿಯೇ ಅಜ್ಞಾನ ವಶದಿಂದ ಉತ್ಪನ್ನವಾಗಿರುವುದು. ಇಂತಹ ಜಡವಾದ ಮನಸ್ಸು, ದೇಹೇಂದ್ರಿಯ ಮನ ಆದಿಗಳಿಂದ ವ್ಯತಿರಿಕ್ತವಾದ ಚೈತನ್ಯ ಸ್ವರೂಪನಾದ ಆತ್ಮನ ತತ್ತ್ವ ಸಾಕ್ಷಾತ್ಕಾರದಿಂದ ನಾಶ ಹೊಂದಿಬಿಡಲಾಗಿ, ಇದರಿಂದ ನಮಗೆ ಯಾವ ಕ್ಷತಿಯುಂಟಾಗುವುದು ? (ಅವ್ಯಕ್ತಾದೀನಿ ಭೂತಾನಿ ವ್ಯಕ್ತ ಮಧ್ಯಾನಿ ಭಾರತ । ಅವ್ಯಕ್ತ ನಿಧನಾನ್ಯೇವ ತತ್ರ ಕಾ ಪರಿದೇವನಾ ॥ ಗೀತಾ. ೨-೨೮.)

೩೫. ಹಿಂದೆ ಅಜ್ಞವಾದ ದಶೆಯಲ್ಲಿ ನನ್ನ ಮನಸ್ಸು, ಸುಖ ದುಃಖ ಬಾಹುಳ್ಯ ಮಯವಾದ ವಾಸನೆಯಿಂದ ಪ್ರಚುರವಾಗಿತ್ತು. ಅಂತಹ ಮನಸ್ಸು ಈಗ ನನಗಿಲ್ಲ.

ಅನ್ಯೋ ಭುಂಕ್ತೇ ಽಸ್ಯ ಆದತ್ತೇ ಽಪ್ಯನ್ಯಸ್ಯಾನರ್ಥ ಸಂಕಟಃ ।
ಅನ್ಯಃ ಪಶ್ಯತ್ಯಹೋ ಮೌರ್ಖ್ಯಂ ಕಸ್ಯೇಯಂ ಖಲು ಚಕ್ರಿಕಾ || ೩೬ ||

ಭುಂಕ್ತೇ ಪ್ರಕೃತಿರಾದತ್ತೇ ಮನೋದೇಹಸ್ಯ ಸಂಕಟಃ ।
ದುಷ್ಟಾತ್ಮಾ ಮೌರ್ಖ್ಯಮಸ್ತೀಹ ನ ಕಿಂಚಿತ್ಕೇವಲೇ ಕ್ಷತಿಃ || ೩೭ ||

ಈಗಲಾದರೋ, ನಿರತಿಶಯವೂ, ಅಖಂಡವೂ, (ಅಪರಿಚ್ಛಿನ್ನವೂ) ಆದ ಸುಖ ವಿಶ್ರಾಂತಿಯೊಂದು ಮಾತ್ರವೇ (ಆನಂದ) ಉಂಟಾಗಿರುವುದು.

೩೬. ಅನುಭವಿಸತಕ್ಕವನು ಒಬ್ಬನು, ತೆಗೆದುಕೊಳ್ಳುವವನು ಮತ್ತೊಬ್ಬನು. ಇದರಿಂದ ಅನರ್ಥ ಸಂಕಟ ಪ್ರಾಪ್ತಿಯಾಗುವುದು ಯಾವನೋ ಮಗದೊಬ್ಬನಿಗೆ, ಇದೇ ಮೊದಲಾದ ಸಕಲ ವ್ಯವಹಾರಗಳನ್ನು ನೋಡುತ್ತಿರುವವನು ಬೇರೆ ಇನ್ನೊಬ್ಬನು. ಇದೆಲ್ಲಾ ಎಂತಹ ಮೂರ್ಖತನ? ಅಹಹ !!! ಹೀಗೆಲ್ಲ ವಿಚಿತ್ರಗಳಾದ ಜಗದ್ವ್ಯವಹಾರಗಳನ್ನು ನಡೆಯಿಸುತ್ತಾ ಚಕ್ರದಂತೆ ಪರಿವರ್ತನ ಮಾಡಿಸುವ (ಸುತ್ತಿಸುವ) ಚಾತುರ್ಯವನ್ನು ಪಡೆದಿರುವ ಇಂದ್ರಜಾಲಿಕನು ಯಾರಿರಬಹುದು? ಇದನ್ನೆಲ್ಲ ನಂಬುವುದೆಂತು?

೩೭. "ಪ್ರಕೃತಿಯು (ಪ್ರಧಾನ-ಅವಿದ್ಯಾ-ಮಾಯಾ) ಭೋಕ್ತೃವು. ಸ್ವೀಕರಿಸ ತಕ್ಕುದಾದರೋ ಮನಸ್ಸು. ಆದರೆ ಸಂಕಟವುಂಟಾಗುವುದು ದೇಹಕ್ಕೆ. ಮತ್ತು 'ಆತ್ಮನು ಪ್ರಕೃತಾದಿ ದೋಷಗಳಿಂದ ದುಷ್ಟನಾಗುವನು" ಎಂದೂ ಪ್ರಾಕೃತ ಜನರು ಹೀಗೆ ಅಜ್ಞಾನದಿಂದ ನಾನಾ ಪ್ರಕಾರವಾಗಿ ಹೇಳುವರು. ಈ ವಿಚಾರ ವನ್ನು ವಿಮರ್ಶೆ ಮಾಡಿದರೆ ಮೂರ್ಖತ್ವವು ಇದಕ್ಕೆಲ್ಲ ಮೂಲಕಾರಣವಾಗಿದೆಯೇ ಹೊರತು ಮತ್ತೇನೂ ಇಲ್ಲ. ಕೇವಲನಾದ ಆತ್ಮನಲ್ಲಿ ವಸ್ತುತಃ ಯಾವುದೊಂದು ಕ್ಷತಿಯೂ ಇಲ್ಲ.

(ಅಶರೀರಂ ವಾವಸನ್ತಂ ನಪ್ರಿಯಾ ಪ್ರಿಯೇ ಸ್ಪೃಶತಃ. ತತ್ತ್ವತಃ ಅಶರೀರ ನಾಗಿಯೇ ಇರುವ ಆತ್ಮನಿಗೆ ವೈಷಯಿಕವಾದ ಸುಖ ದುಃಖಗಳು ಲೇಶ ಮಾತ್ರವೂ ಸೋಕು (ಮುಟ್ಟು)ವುದಿಲ್ಲ. ಛಾಂದೋಗ್ಯ ೮-೧೨-೧. ಅಸಂಗೋಹ್ಯಯಂ ಪುರುಷಃ. ಈ ಪುರುಷನು ಅಸಂಗನು. ಬೃಹದಾರಣ್ಯಕ. ೪-೭-೧೫. ಏಕೋ ದೇವಃ ಸರ್ವ ಭೂತೇಷು ಗೂಢಃ ಸರ್ವ ವ್ಯಾಪೀ ಸರ್ವ ಭೂತಾಂತರಾತ್ಮಾ।

ನ ಮೇ ಭೋಗಸ್ಥಿತೌ ವಾಂಛಾ ನ ಚ ಭೋಗವಿವರ್ಜನೇ ।
ಯದಾಯಾತಿ ತದಾಯಾತು ಯತ್ಪ್ರಯಾತಿ ಪ್ರಯಾತು ತತ್ ॥ ೩೮ ॥

ಸುಖೇಷು ಮಮ ನಾಪೇಕ್ಷಾ ನೋಪೇಕ್ಷಾ ದುಃಖವೃತ್ತಿಷು ।
ಸುಖದುಃಖಾನ್ಯುಪಾಯಾಂತು ಯಾಂತು ವಾಸ್ಯಹಮೇಷು ಕಃ ॥ ೩೯ ॥

ವಾಸನಾ ವಿವಿಧಾ ದೇಹೇ ತ್ವಸ್ತಂ ಚೋದಯಮೇವ ವಾ ।
ಪ್ರಯಾಂತು ನಾಹಮೇತಾಸು ನ ಚೈತಾ ಮಮ ಕಾಶ್ಚನ ॥ ೪೦ ॥

ಏತಾವಂತಮಹಂ ಕಾಲಮಜ್ಞಾನರಿಪುಣಾ ಹತಃ ।
ಹೃತ್ವಾ ವಿವೇಕ ಸರ್ವಸ್ವಮೇಕಾಂತ ಮನುಪ್ರೋಥಿತಂ ॥ ೪೧ ॥

ಕರ್ಮಾಧ್ಯಕ್ಷಃ ಸರ್ವ ಭೂತಾಧಿವಾಸಃ ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥ ಶ್ವೇತಾಶ್ವತರ ೬-೧೧. ಈ ಮಂತ್ರವನ್ನು ಸ್ಮರಿಸಿರಿ.)

೩೮. ಪ್ರಾಪಂಚಿಕ ಭೋಗಗಳು ನನಗೆ ಇರಬೇಕೆಂಬ ಅಭಿಲಾಷೆಯು ಇಲ್ಲವು. ಅಥವಾ ಅವುಗಳನ್ನು ಪರಿಹರಿಸಬೇಕೆಂಬ ಸಂಕಲ್ಪವೂ ಇಲ್ಲ. ಯಾವುದು ತಾನಾಗಿಯೇ (ಯಾದೃಚ್ಛಿಕವಾಗಿ) ಬರುವುದೋ ಅದು ಬರಲಿ, ಮತ್ತು ಯಾವುದು ತಾನಾಗಿ ಹೋಗುವುದೋ ಅದು ಹೋಗಲಿ. ಇಂತಹ ಆಗಮಾಪಾಯಗಳಿಂದ ನನಗೆ ಯಾವ ಬಗೆಯ ವಿಕಾರವೂ ಇಲ್ಲ.

೩೯. ನನಗೆ ಸುಖಗಳಲ್ಲಿ ಅಪೇಕ್ಷೆಯೂ ಇಲ್ಲ, ದುಃಖ ವೃತ್ತಿಗಳಲ್ಲಿ ಉಪೇಕ್ಷೆಯೂ ಇಲ್ಲ, ಸುಖಗಳೂ, ದುಃಖಗಳೂ, ಬೇಕಾದ ಹಾಗೆ ಬರಲಿ, ಅಥವಾ ತೊಲಗಲಿ, ಇದರಿಂದ ನನಗೆ ಯಾವ ಹಾನಿ ವೃದ್ಧಿಗಳೂ ಇಲ್ಲ. (ನಾನು ಸರ್ವದಾ ಅವಿಕಾರಿಯು.) ನನಗೂ ಇವುಗಳಿಗೂ ಯಾವ ವಿಧವಾದ ಸಂಬಂಧವೂ ಇಲ್ಲವು.

೪೦. ಹೀಗೆಯೇ ನನ್ನ ದೇಹದಲ್ಲಿಯೂ ಕೂಡ, ಬಗೆಬಗೆಯಾದ ವಾಸನೆಗಳು (ಕರ್ಮ ಫಲಾದಿಗಳ ಪೂರ್ವ ಸಂಸ್ಕಾರಗಳು) ಉದಯಿಸಲಿ ಅಥವಾ ಅಸ್ತಂಗತ ವಾಗಲಿ, ಈ ವಾಸನೆಗಳಲ್ಲಿ ನನಗಾಗಲಿ ಮತ್ತು ನನ್ನಲ್ಲಿ ಇವುಗಳಿಗಾಗಲೀ ಸ್ವಲ್ಪ ಮಾತ್ರವೂ ಯಾವ ಸಂಪರ್ಕವೂ ಇಲ್ಲವೇ ಇಲ್ಲ.

೪೧. ಇದುವರೆವಿಗೂ ಅಜ್ಞಾನವೆಂಬ ಶತ್ರುವು ಕ್ರಮೇಣ ಬಲಗೊಂಡವನಾಗಿ, ನನ್ನನ್ನು ಸಂತತವೂ ಅತಿಯಾಗಿ ಹೊಡೆದು ಹಿಂಸಿಸಿಬಿಟ್ಟನು. ನನ್ನ ಸ್ವಾಭಾವಿಕ

ವೈಷ್ಣವೇನ ಪ್ರಸಾದೇನ ಸ್ವಸಮುತ್ಥೇನ ಚಾರುಣಾ ।
ಇದಾನೀಂ ಸಂಪರಿಜ್ಞಾಯ ಮಯೈಷ ಪರಿಮೋಷಿತಃ ॥ ೪೨ ॥

ಅಹಂಕಾರ ಪಿಶಾಚೋಽಯಂ ಶರೀರತರುಕೋಟರಾತ್ ।
ಪರಾವಬೋಧ ಮಂತ್ರೇಣ ಮಯೇದಾನೀಮುಪಾಕೃತಃ ॥ ೪೩ ॥

ನಿರಹಂಕಾರ ಯಕ್ಷೋಽಯಂ ಮಚ್ಛರೀರ ಮಹಾದ್ರುಮಃ ।
ಪುಣ್ಯತಾಮಲಮಾಯಾತಃ ಪ್ರಫುಲ್ಲ ಇವ ರಾಜತೇ ॥ ೪೪ ॥

ಪ್ರಶಾಂತ ಮೋಹದಾರಿದ್ರ್ಯೇ ದುರಾಶಾ ದೋಷ ಸಂಕ್ಷಯೇ ।
ವಿವೇಕ ಧನ ಸಂಭಾರಾಸ್ಥಿತೋಽಸ್ಮಿ ಪರಮೇಶ್ವರಃ ॥ ೪೫ ॥

ವಾದ ವಿವೇಕವೆಂಬ ಸರ್ವಸ್ವವನ್ನೂ ಅಪಹರಿಸಿಬಿಟ್ಟು ಏಕಾಂತದಲ್ಲಿ ಅತ್ಯಂತವಾಗಿ ನಾನಾ ಕಷ್ಟಗಳಿಗೆ ಸಿಕ್ಕಿಸಿ ತೊಂದರೆಪಡಿಸಿದನು.

೪೨. ಈಗಲಾದರೋ ನನ್ನಲ್ಲಿ ಸ್ವತಃ ಉತ್ಪನ್ನವಾಗಿರುವ ಪರಮ ನಿಶ್ಶ್ರೇಯಸ ಹೇತುವಾದ (ಮನೋಜ್ಞ) ಶ್ರೀಮನ್ನಾರಾಯಣನ ಪ್ರಸಾದದಿಂದ, ನಾನು ನನ್ನ ಶತ್ರುವಾದ ಅಜ್ಞಾನದ ರಹಸ್ಯವನ್ನು ಭೇದಿಸಿ ಅದರ ಸ್ವರೂಪವನ್ನು ಚೆನ್ನಾಗಿ ತಿಳಿದುಕೊಂಡು ಅದು ಪುನಃ ತಲೆದೋರದಂತೆ ಆತ್ಯಂತಿಕವಾಗಿ ನಾಶಮಾಡಿಬಿಟ್ಟೆನು.

೪೩. ಇದುವರೆವಿಗೂ ಅಹಂಕಾರವೆಂಬ ಪಿಶಾಚವು (ದೇಹೇಂದ್ರಿಯಾದಿ ಅನಾತ್ಮ ವಸ್ತುಗಳಲ್ಲಿ ಆತ್ಮತ್ವಾಭಿಮಾನವೇ-ಅಹಂಕಾರವು) ನನ್ನ ದೇಹವೆಂಬ ವೃಕ್ಷದ ಒಂದು ತೋಟದೊಳಗೆ ರಹಸ್ಯವಾಗಿ ಸೇರಿಕೊಂಡು ನನ್ನನ್ನು ಬಹು ಭಂಗಗೊಳಿಸಿತು. ಈಗಲಾದರೋ ನಾನು ಪರತತ್ತ್ವ ಸಾಕ್ಷಾತ್ಕಾರವೆಂಬ ಮಂತ್ರ ಪುರಶ್ಚರಣೆಯಿಂದ ಆ ಪಿಶಾಚವನ್ನು ಅತಿ ದೂರವಾಗಿ ಹೊರಕ್ಕೆ ಓಡಿಸಿಬಿಟ್ಟಿರುವೆನು.

೪೪. ಈಗ ನನ್ನ ಈ ದೇಹವೆಂಬ ಮಹಾ ವೃಕ್ಷವು ಅಹಂಕಾರವೆಂಬ ಪಿಶಾಚದ ಪರತಂತ್ರತೆಯಿಂದ ಸಂಪೂರ್ಣವಾಗಿ ತಪ್ಪಿಸಿಕೊಂಡು (ಪೂರ್ವದಂತೆ) ಅತ್ಯಂತ ಪವಿತ್ರವಾಗಿ (ಪುಣ್ಯತೆಯನ್ನು ಪಡೆದು) ಪುನಃ ವಿಕಸಿತವಾದಂತೆ ಬಹುವಾಗಿ ವಿರಾಜಿಸುತ್ತಿರುವುದು.

೪೫. ನನ್ನ ಮನಸ್ಸನ್ನು ಆವರಿಸಿಕೊಂಡಿದ್ದ ದುರಾಶೆಗಳೆಂಬ ಸಕಲ ದೋಷ ಗಳೂ ಕಳೆದುಹೋಗಿವೆ. ಮಹಾ ಮೋಹವೆಂಬ ದಾರಿದ್ರ್ಯವು ಅತ್ಯಂತಿಕವಾಗಿ

ಜ್ಞಾತಂ ಜ್ಞಾತವ್ಯಮಖಿಲಂ ದೃಷ್ಟಾ ದ್ರಷ್ಟವ್ಯದೃಷ್ಟಯಃ ।
ತತ್ಪ್ರಾಪ್ತಮಧುನಾ ಯೇನ ನಾಪ್ರಾಪ್ತಮವಶಿಷ್ಯತೇ ॥ ೪೬ ॥

ದಿಷ್ಟ್ಯಾ ದೂರೋಜ್ಝಿತಾನರ್ಥಾನು ಪೇತ ವಿಷಯೋರಗಾಂ ।
ಸಂಶಾಂತ ಮೋಹನೀಹಾರಾಂ ಶಾಂತಾಶಾಮೃಗ ತೃಷ್ಣಿಕಾಂ ॥ ೪೭ ॥

ರಜೋರಹಿತ ಸರ್ವಾಶಾಂ ಶೀತಲೋಪಶಮದ್ರುಮಾಂ ।
ಪ್ರಾಪ್ತೋಽಸ್ಮಿ ವಿತತಾಂ ಭೂಮಿಮುನ್ನತಾಂ ಪಾರಮಾರ್ಥಿಕೀಂ ॥ ೪೮ ॥

ನೀಗಿ ಹೋಗಿರುವುದು. ವಿವೇಕವೆಂಬ ಅಪಾರವಾದ ಧನರಾಶಿಗಳು ಹೇರಳವಾಗಿ ನನಗೆ ದೊರೆತಿವೆ. ಹೀಗೆ ಈಗ ನಾನು ಸಕಲ ಜಗದೀಶನಾದ ಸಾಕ್ಷಾತ್ಪರಮೇಶ್ವರನೇ ಆಗಿರುವೆನು.

೪೬. ತಿಳಿಯಲ್ಪಡಬೇಕಾದುದನ್ನೆಲ್ಲ ಈಗ ನಾನು ತಿಳಿದುಕೊಂಡದ್ದಾಯಿತು. ಕೊಡಬೇಕಾದುದನ್ನೆಲ್ಲ ನೋಡಿದ್ದೂ ಆಯಿತು. ಯಾವ ಪರಮ ಪದ ಪ್ರಾಪ್ತಿಯಾದ ಮೇಲೆ ಅಪ್ರಾಪ್ತವಾದುದು (ಈಗ ಇಲ್ಲದೆ ಇನ್ನುಮೇಲೆ ಪ್ರಯತ್ನಪಟ್ಟು ಸಂಪಾದಿಸಬೇಕಾದುದು) ಯಾವುದೊಂದು ಅವಶಿಷ್ಟವಾಗುವುದಿಲ್ಲವೋ ಅಂತಹ ಪರಮಪದ ಸಾಮ್ರಾಜ್ಯಾಧಿಪತ್ಯವು ಈಗ ನನಗೆ ಪ್ರಾಪ್ತವಾಗಿರುವುದು. (ಪುರುಷಾನ್ನ ಪರಂ ಕಿಂಚಿತ್ ಸಾ ಕಾಷ್ಠಾ ಸಾ ಪರಾಗತಿಃ. ಕಠ. ೧-೩-೧೧).

೪೭-೪೮. ಆಹಾ! ಈಗ ನಾನು ನನ್ನ ಭಾಗ್ಯ ಪರಿಪಾಕದಿಂದ ಇಂತಹ ಉತ್ತಮೋತ್ತಮವೂ, ಅಪಾರವೂ ಆದ ಪಾರಮಾರ್ಥಿಕ (ಜ್ಞಾನ) ಭೂಮಿಕೆಯನ್ನು ಹೊಂದಿ ಸುಸ್ಥಿರನಾಗಿರುವೆನು. ಈ ಭೂಮಿಕೆಯಲ್ಲಿಯಾದರೋ ಸಕಲಾನರ್ಥ ವ್ರಾತಗಳೂ ಸುತರಾಂ ಅತ್ಯಂತ ದೂರದಲ್ಲಿ ಪರಿಹೃತವಾಗಿರುವುವು. ವಿಷಯೋಪ ಭೋಗಗಳೆಂಬ ವಿಷಮಯ ಸರ್ಪಗಳು ಒಂದೂ ಉಳಿಯದೆ ತೊಲಗಿ ಹೋಗಿರುವುವು. ಮೋಹವೆಂಬ ಹಿಮವು ಪೂರ್ತಿಯಾಗಿ ಶಾಂತವಾಗಿರುವುದು. ಆಶೆ (ಕಾಮ) ಗಳೆಂಬ ಮರುಮರೀಚಿಕೆಗಳು ನಿಶ್ಶೇಷವಾಗಿ ತಲೆದೋರದೆ ಕಳೆದುಹೋಗಿರುವುವು. ಎಲ್ಲಿಯೂ ಲೇಶಮಾತ್ರನಾದರೂ ರಜಸ್ಸು, (ಎಂದರೆ ರಜೋಗುಣವು ಮತ್ತು ಧೂಳಿಯು) ಕವಿಯದೆ ಸುತ್ತಲೂ, ಸಕಲದಿಕ್ಕುಗಳೂ, ಪ್ರಕಾಶಮಾನವಾಗಿರುವುವು. ಉಪಶಮ (ಇಂದ್ರಿಯ ನಿಗ್ರಹದಿಂದುಂಟಾದ ಶಾಂತಿ) ವೆಂಬ ಮಹಾ ವೃಕ್ಷವು ತನ್ನ ಛಾಯೆಯಿಂದ ಸಂತಾಪ ಪರಿಹಾರಕವಾಗಿ ಅತ್ಯಂತ ಶೀತಲವಾಗಿರುವುದು.

ಸ್ತುತ್ಯಾ ಪ್ರಣತ್ಯಾ ವಿಜ್ಞಪ್ತ್ಯಾ ಶಮೇನ ನಿಯಮೇನ ಚ ।
ಲಬ್ಧೋಽಯಂ ಭಗವಾನಾತ್ಮಾ ದೃಷ್ಟಶ್ಚಾಧಿಗತಃ ಸ್ಫುಟಂ ॥ ೪೯ ॥

ಅಹಂಕಾರ ಪದಾತೀತಶ್ಚಿರಾತ್ಸಂಸ್ಮೃತಿಮಾಗತಃ ।
ಸ್ವಭಾವಾದ್ಭಗವಾನಾತ್ಮಾ ವಿಷ್ಣೋರ್ಬ್ರಹ್ಮ ಸನಾತನಂ ॥ ೫೦ ॥

ಇಂದ್ರಿಯೋರಗ ಗರ್ತೇಷು ಮರಣಶ್ವಭ್ರಭೂಮಿಷು ।
ತೃಷ್ಣಾ ಕರಂಜಕುಂಜೇಷು ಕಾಮಕೋಲಾಹಲೇಷು ಚ ॥ ೫೧ ॥

ವಾಸನಾವನಜಾಲೇಷು ಜನ್ಮ ಕೂಪಾಂತರೇಷು ಚ ।
ದುಃಖದಾವಾಗ್ನಿದಾಹೇಷು ದುಃಖದಾವಾಗ್ನಿಹಾರಿಷು ॥ ೫೨ ॥

ಪಾತೋತ್ಪಾತದಶಾಲಕ್ಷ್ಯೈರ್ಮಜ್ಜನೋನ್ಮಜ್ಜನ ಭ್ರಮೈಃ ।
ಆವಿರ್ಭಾವತಿರೋಭಾವೈರಾಶಾ ಪಾಶವಿಜೇಷ್ಟನೈಃ ॥ ೫೩ ॥

ಅಹಂ ಚಿರಮಹಂಕಾರದ್ವಿಷಾ ಸಮುಪಮೋಷಿತಃ ।
ನಿಶಾಯಾಮಲ್ಪ ವೀರ್ಯಾತ್ಮಾ ಪಿಶಾಚೇನೇವ ಜಂಗಲೇ ॥ ೫೪ ॥

---

೪೯. ನಾನು ಮಾಡಿದ ಸರ್ವಾಂತರ್ಯಾಮಿಯಾದ ವಿಷ್ಣುವಿನ ಸ್ತೋತ್ರದಿಂದಲೂ, ಪ್ರಣಾಮಗಳಿಂದಲೂ, ಪ್ರಾರ್ಥನೆಯಿಂದಲೂ, ಉಪಶಾಂತಿಯಿಂದಲೂ, ನಿಯಮಗಳಿಂದಲೂ ಈಗ ನನಗೆ ಭಗವಂತನಾದ ಈ ಪರಮಾತ್ಮನು ಲಬ್ಧನಾಗಿರುವನು. ಅಲ್ಲದೆ ಆಮೇಲೆಯೂ ಸ್ಪಷ್ಟವಾಗಿ (ನಿಸ್ಸಂದೇಹವಾಗಿ) ಸಾಕ್ಷಾತ್ಕರಿಸಿಕೊಂಡು ಆ ಪರಮಾತ್ಮನನ್ನು ಪಡೆದಿರುವೆನು.

೫೦. ಭಗವಂತನಾದ ಆತ್ಮನು ಸ್ವಭಾವತಃ ಅಹಂಕಾರಾಸ್ಪದವಾದ ಸಕಲ ಜಗತ್ತಿಗೂ ಅತೀತನಾಗಿರುವ ಪರಬ್ರಹ್ಮವು, ಅವನು ಸನಾತನನು, (ಶಾಶ್ವತನು) ಅಂತಹ ಪರಬ್ರಹ್ಮವು ನಾನೇ ಎಂಬುದು ಈಗ ಬಹುಕಾಲದ ಮೇಲೆ ವಿಷ್ಣುವಿನ ಪ್ರಸಾದದಿಂದ ನನ್ನ ಸ್ಮರಣೆಗೆ ಬಂದಿತು.

೫೧-೫೪. ಈ ದೇಹವೆಂಬ ಜಗತ್ತಿನಲ್ಲಿ ಕ್ರಿಯಾಕಾರಕಾದಿ ಭೇದ ವಾಸನೆಗಳೆಂಬ ಅತ್ಯಂತ ದುರ್ಗಮವಾದ ಮಹಾರಣ್ಯಗಳು ಸಾಲಾಗಿರುವುವು. ಈ ವಾಸನಾವನಗಳಲ್ಲಿ ಇಂದ್ರಿಯಗಳೆಂಬ ಹಾವಿನ ಹುತ್ತ (ಸರ್ಪ ಬಿಲ)ಗಳು ಅಸಂಖ್ಯಾಕವಾಗಿ ಬೆಳೆದುಕೊಂಡಿವೆ. ಎಲ್ಲೆಲ್ಲಿಯೂ ಮರಣಗಳೆಂಬ ಬಹು ಗಭೀರವಾದ ಗರ್ತಗಳು (ಭೂರಂಧ್ರ) ಕಾಣುತ್ತಿವೆ. ತೃಷ್ಣೆಗಳೆಂಬ ಮುಳ್ಳು ಗಿಡಗಳ ಪೊದೆಗಳು ಆವರಿಸಿ

ಸ್ವಯೆಮೇವ ತ್ವಥೇದಾನೀಂ ಕ್ರಿಯಾಶಕ್ತ್ಯಾ ಸ್ವಯೈವ ಹಿ ।
ಶೌರಿಣಾ ವ್ಯಪದೇಶೇನ ವಿವೇಕಶ್ರೀ ರ್ವಿಬೋಧಿತಾ ॥ ೫೫ ॥

ಪ್ರಬುದ್ಧೇ ಭವತೀಶಾನೇ ತಮಹಂಕಾರ ರಾಕ್ಷಸಂ ।
ನ ಪಶ್ಯಾಮಿ ನಭೋದೀಪೇ ಜ್ವಲಿತೇ ತಿಮಿರಂ ಯಥಾ ॥ ೫೬ ॥

ಕೊಂಡಿವೆ. ಕಾಮುಗಳೆಂಬ (ಪ್ರಾಣಿ) ಕೋಲಾಹಲಗಳು ಭಯಂಕರವಾಗಿ ಕೇಳ ಬರುತ್ತಿವೆ. ಜನ್ಮ ಪರಂಪರೆಗಳೆಂಬ ಹಾಳು ಭಾವಿಗಳು ಅಗಾಧವಾಗಿವೆ. ಸಾಂಸಾರಿಕ ಕ್ಲೇಶಗಳೆಂಬ ಕಾಡುಗಿಚ್ಚುಗಳು ಬಹು ಬೇಗನೆ ಸುತ್ತಲೂ ಆವರಿಸಿಕೊಂಡು ಸುಡುತ್ತಲಿವೆ. ದಾವಾಗ್ನಿಗಳಂತೆ ಮುತ್ತಿಕೊಂಡು ಇತರರ ಧನ ಪ್ರಾಣಾದಿ ಸರ್ವಸ್ವವನ್ನೂ ಅಪಹರಿಸಿ, ಅತಿ ಹಿಂಸಾಪ್ರದರಾದ (ದುಃಖಾವಹರಾದ) ಕಳ್ಳರು ಸದಾ ಸನ್ನಿಹಿತರಾಗಿ ಕಾದುಕೊಂಡಿರುವರು. ಅಹಂಕಾರವೆಂಬ ಶತ್ರುವು ನನ್ನನ್ನು ಬಲಾತ್ಕಾರದಿಂದ ಅಪಹರಿಸಿ, ಇಂತಹ ಘೋರವಾದ ವನಮಾಲೆಗಳಲ್ಲಿ ಎಲ್ಲಿಯೋ ಒಂದುಕಡೆ ಬಂಧಿಸಿ, ಬಹು ದೀರ್ಘ ಕಾಲದಿಂದಲೂ, ಒಂದುಸಲ ನನ್ನನ್ನು ಲಕ್ಷೋಪಲಕ್ಷ ವಿಪತ್ತುಗಳೆಂಬ ಹಳ್ಳಗಳಲ್ಲಿ ತಳ್ಳುತ್ತಲೂ ಪುನಃ ಅಲ್ಲಿ ದ ಸಂಪತ್ತುಗಳೆಂಬ (ಉಚ್ಛ್ರಾಯ ಸ್ಥಿತಿ) ಉನ್ನತ ಸ್ಥಾನಕ್ಕೆ ಒಯ್ಯುತ್ತಲೂ, ಮಜ್ಜನ (ಮುಳುಗುವಿಕೆ) ಪ್ರಾಯಗಳಾದ ಅಧೋಗತಿಗಳಿಗೆ ಇಳಿಸುತ್ತಲೂ, ಉನ್ಮಜ್ಜನ ಪ್ರಾಯಗಳಾದ ಸದ್ಗತಿಗಳಿಗೆ ಏರಿಸುತ್ತಲೂ, ಜನನ ಮರಣ ಪ್ರವಾಹಗಳಲ್ಲಿ ಸಿಲುಕಿಸಿ, ಆವಿರ್ಭಾವ ತಿರೋಭಾವಗಳನ್ನುಂಟುಮಾಡುತ್ತಲೂ, ಆಶಾಪಾಶ ಶತಗಳಿಂದ ಬಲವಾಗಿ ಬಿಗಿದು ಹಾಕುತ್ತಲೂ, ಹೀಗೆಯೇ ನಾನಾ ಪ್ರಕಾರಗಳಾದ ಹಿಂಸಾಕೃತ ಗಳಿಂದ ರಾತ್ರಿ ವೇಳೆಯಲ್ಲಿ ಒಂದು ಕಾಡಿನೊಳಗೆ ಸಿಕ್ಕಿಬಿದ್ದ ಅಲ್ಪ ವೀರ್ಯನಾದ ಒಬ್ಬ ಭೀರುವನ್ನು ಒಂದು ಪಿಶಾಚವು ನಾನಾ ಪ್ರಕಾರಗಳಲ್ಲಿ ಹಿಂಸಿಸಿ ನಾಶಪಡಿಸುವಂತೆಯೇ ಆತ್ಮ ಪ್ರಮೋಷದಿಂದ (ಸ್ವಸ್ವರೂಪ ಜ್ಞಾನವೇ ಇಲ್ಲದಂತೆ ಮಾಡಿ) ಬಹುವಾಗಿ ಪೀಡಿಸಿದನು.

೫೫. ಅನಂತರ ಈಗಲಾದರೋ, ನನ್ನ ಸ್ವಕೀಯವಾದ ಕ್ರಿಯಾ ಶಕ್ತಿಯಿಂದಲೇ, ಶ್ರೀಮನ್ನಾರಾಯಣನ ನೆಪದಿಂದ (ವ್ಯಾಜದಿಂದ) ತಾನಾಗಿಯೇ ನನ್ನ ವಿವೇಕ ಸಂಪತ್ತಿಯು ಪ್ರಬೋಧಗೊಳಿಸಲ್ಪಟ್ಟಿರುವುದು (ಉದ್ದೀಪಿತವಾಗಿರುವುದು.)

೫೬. ಈಗ ಆ ವಿವೇಕ ಸಂಪತ್ತಿಯಿಂದ ಪರಮೇಶ್ವರನಾದ ಈ ನನ್ನ ಆತ್ಮನು ಪ್ರಬುದ್ಧನಾಗಲಾಗಿ, (ಆಕಾಶದ ದೀಪ ಪ್ರಾಯನಾದ) ಸೂರ್ಯನು ಉದಯಿಸಿ

ತಸ್ಯಾಹಂಕಾರ ಯಕ್ಷಸ್ಯ ಮನೋವಿವರ ವಾಸಿನಃ ।
ದೀಪಸ್ಯೇವ ಪ್ರಶಾಂತಸ್ಯ ನ ವೇದ್ಮಿ ಗತಿಮೀಶ್ವರ ॥ ೫೭ ॥

ದೃಷ್ಟ ಏವ ತ್ವಯೀಶಾನೇ ಪಲಾಯನ ಪರಾಯಣಃ ।
ಸಂಪನ್ನೋ ಮದಹಂಕಾರಶ್ಚೋರಃ ಸೂರ್ಯೋದಯೇ ಯಥಾ ॥ ೫೮ ॥

ಅಸದಭ್ಯುತ್ಥಿತೇ ತಸ್ಮಿನ್ನಹಂಕಾರೇ ಪಿಶಾಚವತ್ ।
ಗತೇ ತಿಷ್ಠಾಮ್ಯಹಂ ಸ್ವಸ್ಥೋ ನಿರ್ಗೋನಸ ಇವ ದ್ರುಮಃ ॥ ೫೯ ॥

ಶಾಮ್ಯಾಮಿ ಪರಿನಿರ್ವಾಮಿ ಜಗತ್ಯಸ್ಮಿನ್ಪ್ರಬೋಧವಾನ್ ।
ತಸ್ಕರೇಣೋಜ್ಝಿತೋಽಸ್ಮೀತಿ ನಿರ್ವೃತೋಽಸ್ಮಿ ಚಿರೋದಯಂ ॥ ೬೦ ॥

ಪ್ರಜ್ವಲಿಸುತ್ತಿರುವಾಗ ಕತ್ತಲೆಯು ಎಲ್ಲಿಯೋ ಹೊರಟು ಹೋಗುವಂತೆ, ಆ ಅಹಂಕಾರವೆಂಬ ರಾಕ್ಷಸನು ಎಲ್ಲಿಗೆ ಹೊರಟು ಹೋದನೋ ಅದನ್ನು ನಾನು ಕಾಣಲೇ ಕಾಣೆನು

೫೭. ಪರಮೇಶ್ವರ, ಮೊದಲಿನಿಂದಲೂ ನನ್ನ ಹೃದಯಾಂತರಾಳವೆಂಬ ಗುಪ್ತ ಸ್ಥಾನದಲ್ಲಿ ಅಡಗಿಕೊಂಡು ವಾಸವಾಗಿದ್ದ ಅಹಂಕಾರವೆಂಬ ಪಿಶಾಚವು ಆರಿಹೋದ ದೀಪದ ಹಾಗೆ ಎಲ್ಲಿ ಹೋಯಿತೆಂಬುದು ನನಗೆ ಗೊತ್ತೇ ಆಗಲಿಲ್ಲ.

೫೮. ಸೂರ್ಯೋದಯವಾದ ಕೂಡಲೇ ಕಳ್ಳನು ಇದ್ದಕ್ಕಿದ್ದಂತೆಯೇ ಓಡಿ ಹೋಗುವ ಹಾಗೆ ಪರಮೇಶ್ವರನಾದ ನಿನ್ನ ಸಂದರ್ಶನ [ತತ್ತ್ವ ಸಾಕ್ಷಾತ್ಕಾರ] ವಾದೊಡನೆಯೇ ನನ್ನ ಅಹಂಕಾರವು ಅತಿ ವೇಗವಾಗಿ ಓಡಿಹೋಗಿ ಎಲ್ಲಿಯೋ ಸೇರಿಕೊಂಡುಬಿಟ್ಟಿತು.

೫೯. ಅಜ್ಞಾನದಿಂದ ಮಿಥ್ಯೆಯಾಗಿಯೇ ಮೊದಲು ಪಿಶಾಚದಂತೆ ಉದಯ ಹೊಂದಿದ್ದ ಆ ಅಹಂಕಾರವು ಈಗ ನಿಶ್ಶೇಷವಾಗಿ ಕಳೆದು ಹೋಗಲಾಗಿ, ಹೆಬ್ಬಾವು [ಅಜಗರ]ಗಳ ಸುಳಿವಿಲ್ಲದ ಮರಗಳಿಂದ ರಂಜಿಸುವ ಉಪವನದಂತೆ ನಾನು ಸ್ವಸ್ಥನಾಗಿರುವೆನು.

೬೦. ಆತ್ಮೈಕತ್ವ ಸಾಕ್ಷಾತ್ಕಾರವನ್ನು ಪಡೆದ ನಾನು ಈಗ ಶಾಂತವಾಗಿ ನಿರಾತಂಕನಾಗಿರುವೆನು. ನನಗೆ ಜಗತ್ತಿನಲ್ಲೆಲ್ಲಿಯೂ ನಿರತಿಶಯಾನಂದವೇ ಸ್ಫುರಿಸು

ಶೈತ್ಯಮಭ್ಯಾಗತೋಽಸ್ಮ್ಯಂತಃ ಶಾಂತಾಶಾ ಮೃಗ ತೃಷ್ಣಿಕಃ ।
ಪ್ರಾವೃಡಂಬುಭರಸ್ನಾತಃ ಶಾಂತದಾವ ಇವಾಚಲಃ ॥ ೬೧ ॥

ಪ್ರಮಾರ್ಜಿತೋಽಹ ಮಿತ್ಯಸ್ಮಿನ್ಪದೇ ಸ್ವಾರ್ಥ ವಿಚಾರತಃ ।
ಕೋ ಮೋಹಃ ಕಾನಿ ದುಃಖಾನಿ ಕಾಃ ಕದಾಶಾಃ ಕ ಆಧಯಃ ॥ ೬೨ ॥

ನರಕ ಸ್ವರ್ಗ ಮೋಕ್ಷಾದಿ ಭ್ರಮಾಃ ಸತ್ಯಾಮಹಂಕೃತೌ ।
ಭಿತ್ತಾವೇವ ಪ್ರವರ್ತಂತೇ ಚಿತ್ರೇಹಾ ನ ನಭಸ್ತಲೇ ॥ ೬೩ ॥

ತ್ತಿರುವುದು. ನಾನು ಬಹುಕಾಲ ಅಹಂಕಾರವೆಂಬ ಆತ್ಮಾಪಹಾರಕನಾದ ಕಳ್ಳನ ವಶ ವರ್ತಿಯಾಗಿದ್ದು ಈಗ ಅವನ ಹಿಂಸೆಯಿಂದ ಬಿಡಲ್ಪಟ್ಟಿರುವೆನೆಂದು ಪ್ರಮೋದ ಭರಿತನಾಗಿರುವೆನು.

೬೧. ನನ್ನ ಅಂತರಂಗವೆಂಬ ಮರಳು ಗಾಡಿನಲ್ಲಿ ತಲೆದೋರಿದ್ದ ಆಶೆಯೆಂಬ ಬಿಸಲ್ಗುದುರೆಯ ಭ್ರಾಂತಿಯು ತತ್ತ್ವ ಜ್ಞಾನದಿಂದ ಶಾಂತಿ ಹೊಂದಿರುವ ಕಾರಣ, ವರ್ಷಾಕಾಲದಲ್ಲಿ ಹೆಚ್ಚಾದ ಜಲ ಪ್ರವಾಹದಲ್ಲಿ ನೆನೆದು ಪೂರ್ತಿಯಾಗಿ ಆರಿಹೋದ ಕಾಡು ಕಿಚ್ಚುಳ್ಳ ಒಂದು ಪರ್ವತದಂತೆ ಈಗ ನಾನು ಸಂತಾಪರಹಿತನಾಗಿ ಶೈತ್ಯ ವನ್ನು ಪಡೆದಿರುವೆನು,

೬೨. ತಾತ್ತ್ವಿಕವಾದ ಅರ್ಥ ವಿಚಾರ ಪೂರ್ವಕವಾಗಿ "ಅಹಂ" ಎಂಬ ಈ ಒಂದು ಪದವು ಚೆನ್ನಾಗಿ ಶೋಧಿಸಲ್ಪಟ್ಟರೆ ಆಮೇಲೆ ಮೋಹವಾವುದು? ದುಃಖಗಳಾವುವು? ದುರಾಶೆಗಳೆಲ್ಲಿರುವುವು? ಮಾನಸಿಕ ವ್ಯಥೆಗಳು ಹೇಗೆ ಸಂಭ ವಿಸುವುವು?

[ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾ ಭೂದ್ವಿಜಾನತಃ। ತತ್ರ ಕೋ ಮೋಹಃ ಕಃ ಶೋಕಃ ಏಕತ್ವಮನುಪಶ್ಯತಃ. ಈಶಾವಾಸ್ಯ. ೭].

೬೩. ಈ ಅಹಂಕಾರವು ಇರುವಾಗಲೇ ನರಕ-ಸ್ವರ್ಗ, ಮೋಕ್ಷ ಮುಂತಾದ ಭ್ರಾಂತಿಗಳೂ ಕಲ್ಪಿತವಾಗಿರುವುವು. ಅಹಂಕಾರವು ನಿವೃತ್ತಿಯಾದೊಡನೆಯೇ ಮೇಲ್ಕಂಡ ಭ್ರಾಂತಿಗಳೊಂದೂ ಇರುವುದಿಲ್ಲ. ಗೋಡೆಯೆಂಬುದೊಂದು ಇದ್ದರೆ ಅದರ ಮೇಲೆ ಚಿತ್ರಗಾರನು ತನ್ನ ಚಿತ್ರಕಲಾ ಕೌಶಲಾದಿಗಳನ್ನು ಪ್ರದರ್ಶಿಸಲು ಪ್ರವರ್ತಿಸುವನು. ಗೋಡೆಯೇ ಇಲ್ಲದೇ ಹೋಗಲು ಆಕಾಶದಲ್ಲಿ ಎಲ್ಲಿಯಾದರೂ ಚಿತ್ರ ಕರ್ಮ ವ್ಯಾಪಾರವನ್ನು ಪ್ರವರ್ತಿಸಲಾಗುವುದೇ?

ಅಹಂಕಾರ ಕಲಾಪಿತ್ತೇ ಚಿತ್ತೇ ಜ್ಞಾನಚಲತ್ಕೃತಿಃ ।
ನ ರಾಜತ್ಯೇಂ ಶುಕೇ ಮ್ಲಾನೇ ಯಥಾ ಕುಂಕುಮರಂಜನಾ ॥ ೬೪ ॥

ನಿರಹಂಕಾರ ಜಲದೇ ಕೃಷ್ಣಾಸಾರ ವಿವರ್ಜಿತೇ ।
ಭಾತಿ ಚಿತ್ತಶರದ್ವ್ಯೋಮ್ನಿ ಸ್ವಚ್ಛತಾ ಕಾಂತಿಶಾಲಿನೀ ॥ ೬೫ ॥

ನಿರಹಂಕಾರ ಪಂಕಾಯ ಸಂಪ್ರಸನ್ನಾಂತರಾಯ ಚ ।
ಮಹ್ಯಮಾನಂದ ಸರಸೇ ತುಭ್ಯಮಾತ್ಮನ್ನಮೋನಮಃ ॥ ೬೬ ॥

ಶಾಂತೇಂದ್ರಿಯೋಗ್ರ ಗ್ರಾಹಾಯ ಕ್ಷೀಣಚಿತ್ತೌರ್ವವಹ್ನಯೇ ।
ಆನಂದಾಂಬುಧಯೇ ತುಭ್ಯಂ ಮಹ್ಯಮಾತ್ಮನ್ನಮೋನಮಃ ॥ ೬೭ ॥

---

೬೪. ಅತಿ ಮಲಿನವಾದ ಬಟ್ಟೆಯ ಮೇಲೆ ಕುಂಕುಮ ಬಣ್ಣವು [ಕೆಂಪು] ಹೇಗೆ ಚೆನ್ನಾಗಿ ಅಂಟಿಕೊಂಡು ವಿರಾಜಿಸುವುದಿಲ್ಲವೋ, ಹಾಗೆಯೇ ಸ್ವಲ್ಪವಾದರೂ ಅಹಂಕಾರವೆಂಬ ಪಿತ್ತವು ಕಾಣಿಸಿಕೊಂಡರೆ ಕೂಡಲೆ ಚಿತ್ತವು ಉನ್ಮಾದವನ್ನು ಹೊಂದುವುದು. ಇಂತಹ ಉನ್ಮತ್ತವಾದ ಚಿತ್ತದಲ್ಲಿ ಮೋಹಾದಿ ಮಾಲಿನ್ಯ ಗಳನ್ನು ಪ್ರಶಮನಗೊಳಿಸುವ ಜ್ಞಾನ ಚಮತ್ಕೃತಿಯು ಶೋಭಿಸುವುದಿಲ್ಲ.

೬೫. ಚಿತ್ತವೆಂಬ ಶರತ್ಕಾಲಿಕವಾದ ಆಕಾಶದಲ್ಲಿ ಅಹಂಕಾರವೆಂಬ ಮೇಘ ಮಾಲೆಯು ಚದುರಿ ಹೋಗಿ ತೃಷ್ಣೆಯೆಂಬ ಧಾರಾಕಾರವಾದ ವೃಷ್ಟಿಯು ನಿಂತು ಹೋಗಲಾಗಿ, ಬಳಿಕ ಆತ್ಮನೆಂಬ ಪೂರ್ಣ ಚಂದ್ರನ, ಬೋಧವೆಂಬ ಬೆಳದಿಂಗಳಿಂದ ವಿರಾಜಿಸುವ ಲೋಕೋತ್ತರವಾದ ನೈರ್ಮಲ್ಯವು ಕಂಗೊಳಿಸುವುದು.

೬೬. ಎಲೈ ಆತ್ಮವೇ, ಅಹಂಕಾರವೆಂಬ ಕೆಸರು ಸ್ವಲ್ಪವೂ ಉಳಿಯದಂತೆ ಕಳೆದು ಹೋಗಿರುವ ಮತ್ತು ಅತ್ಯಂತವಾದ ಪ್ರಸನ್ನವಾದ ಒಳಭಾಗವುಳ್ಳಂಥ ಆನಂದ ಸರೋವರ ಪ್ರಾಯನಾದ, ಪ್ರತ್ಯಗಾತ್ಮ ಭೂತನಾಗಿ ಅಸ್ಮಚ್ಛಬ್ದ ಗೋಚರವಾಗಿರುವ ಪರಬ್ರಹ್ಮ ರೂಪನಾದ ನಿನಗೆ ನಮಸ್ಕಾರವು.

೬೭. ಇಂದ್ರಿಯಗಳೆಂಬ ಭೀಕರವಾದ ಮೊಸಳೆಗಳು ನಿಶ್ಶೇಷವಾಗಿ ನಾಶ ಹೊಂದಿಯೂ, ಚಿತ್ತವೆಂಬ ಬಡಬಾಗ್ನಿಯು ಸುತರಾಂ [ಕಾರ್ಯಾಕ್ಷಮವಾದಷ್ಟು ಮಟ್ಟಿಗೆ] ಕ್ಷೀಣವಾಗಿಯೂ ಇರುವ [ಅದು ಕಾರಣ ಭಯ ಶಂಕೆಗೂ ಆಸ್ಪದ

ಗತಾಹಂಕಾರ ಮೇಘಾಯ ಶಾಂತಾಶಾದಾಹವಹ್ನಯೇ ।
ಮಹ್ಯಮಾನಂದ ಶೈಲಾಯ ವಿಶ್ರಾಂತಾಯ ನಮೋನಮಃ ॥ ೬೮ ॥

ಪ್ರಫುಲ್ಲಾನಂದ ಪದ್ಮಾಯ ಶಾಂತಚಿಂತಾ ಮಯೋರ್ಮಯೇ ।
ಮಹ್ಯಂ ಸನ್ಮಾನಸಾಯಾತ್ಮ ಸ್ತುಭ್ಯಮಂತರ್ನಮೋನಮಃ ॥ ೬೯ ॥

ಸಂವಿದಾಭಾಸ ಪಕ್ಷಾಯ ಪದ್ಮಕೋಟರವಾಸಿನೇ ।
ಸರ್ವಮಾನಸಹಂಸಾಯ ಸ್ವಾತ್ಮನೇಽಂತರ್ನಮೋನಮಃ ॥ ೭೦ ॥

ಕಲಾಕಲಿತ ರೂಪಾಯ ನಿಷ್ಕಲಾಯಾಮೃತಾತ್ಮನೇ ।
ಸದೋದಿತಾಯ ಪೂರ್ಣಾತ್ಮನ್ ಶಶಿನೇ ತೇ ನಮೋನಮಃ ॥ ೭೧ ॥

ವಿಲ್ಲದ ಆನಂದ ಸಮುದ್ರನಾದ ಅಸ್ಮತ್ಪ್ರತ್ಯಯಗೋಚರನಾದ ನನಗೂ, ಯುಷ್ಮತ್ ಪ್ರತ್ಯಯ ಗೋಚರನಾದ ನಿನಗೂ ಅನಂತ ವಂದನೆಗಳು.

೬೮. ಅಹಂಕಾರವೆಂಬ ಮೇಘ ಜಾಲದಿಂದ ಸ್ವಲ್ಪವೂ ಆಚ್ಛಾದಿಸಲ್ಪಡದೆ ಶೋಭಿಸುತ್ತಿರುವ ಆಶೆಗಳೆಂಬ ಕಾಡುಗಿಚ್ಚುಗಳು ಪೂರ್ತಿಯಾಗಿ ತಣ್ಣಗೆ ಆರಿಹೋಗಿರುವ ಆನಂದ ಪರ್ವತಪ್ರಾಯನಾಗಿ [ಸಕಲ ದುಃಖ ಸಂಪರ್ಕ ಶಂಕೆಗೂ ಒಳಗಾಗದೆ] ಸದಾ ವಿಶ್ರಾಂತನಾಗಿರುವ [ಅಚಲನಾದ] ನನಗೆ ನಮಸ್ಕಾರವು.

೬೯. ಎಲೈ ಆತ್ಮನೇ, ಸ್ಫುಟವಾಗಿ ವಿಕಸಿತವಾದ ಆನಂದವೆಂಬ ಕಮಲಗಳನ್ನು ಒಳಗೊಂಡಿರುವ ಮಾನಸಿಕ ಮತ್ತು ದೈಹಿಕ ರೋಗ ಬಾಧೆಗಳೆಂಬ ಅಲೆಗಳ ಹೊಡೆತವಿಲ್ಲದೆ ಪ್ರಶಾಂತವಾಗಿರುವ ಬ್ರಹ್ಮವೆಂಬ ಮಾನಸ ಸರೋವರಪ್ರಾಯನಾದ ನನಗೆ [ನಿನಗೆ] ಮನಸ್ಸಿನಿಂದಲೇ ಅನಂತ ವಂದನೆಗಳು.

೭೦. ಬುದ್ಧಿ ಮತ್ತು ಬುದ್ಧಿ ವೃತ್ತಿಗಳ ಪ್ರತಿಬಿಂಬ ಚೈತನ್ಯಗಳೆಂಬ ಎರಡು ರೆಕ್ಕೆಗಳುಳ್ಳ, ಹೃದಯ ಕಮಲ ಮಧ್ಯವಾಸಿಯಾದ, ಸಕಲ ಪ್ರಾಣಿಗಳ ಮನಸ್ಸುಗಳೆಂಬ ಮಾನಸ ಸರಸ್ಸುಗಳಲ್ಲಿ ಸಂಚರಿಸುವ ಹಂಸರೂಪಿಯಾದ ಈ ನನ್ನ ಆತ್ಮನಿಗೆ ನಮಸ್ಕಾರವು.

೭೧. "ಏಕಸ್ಮಾತ್ ಜಾಯತೇ ಪ್ರಾಣೋ ಮನಃ ಸರ್ವೇಂದ್ರಿಯಾಣಿಚ." "ಷೋಡಶಕಲಃ ಸೌಮ್ಯ ಪುರುಷಃ." ಎಂಬ ಶ್ರುತ್ಯನುಸಾರವಾಗಿ, ಸಕಲಕಲಾ ಪರಿಪೂರ್ಣವಾದ ರೂಪವುಳ್ಳವನಾಗಿ ನಿರವಯವನಾಗಿ [ನಿಷ್ಕಳಂಕನಾಗಿ] ಅಮೃತಮಯ

ಸದೋದಿತಾಯ ಶಾಂತಾಯ ಮಹಾಹೃದ್ಧ್ವಾಂತಹಾರಿಣೇ ।
ಸರ್ವಗಾಯಾಪ್ಯದೃಶ್ಯಾಯ ಚಿತ್ಸೂರ್ಯಾಯ ನಮೋನಮಃ ॥ ೭೨ ॥

ಅಸ್ನೇಹ ಸ್ನೇಹ ದೀಪಾಯ ವೃತ್ತಿ ನಿಷ್ಕ್ರಾಂತವರ್ತಿನೇ ।
ಸ್ವಭಾವಾಧಾರಧೀರಾಯ ಚಿದ್ದೀಪಾಯ ನಮೋನಮಃ ॥ ೭೩ ॥

ಸ್ವರೂಪನಾಗಿ, [ಅಸ್ತಂಗತನಾಗದೆಯೇ] ಸರ್ವದಾ ಉದಿತನಾಗಿರುವ, ಸರ್ವತ್ರ ಪರಿಪೂರ್ಣಾತ್ಮನಾದ ವಿಶಿಷ್ಟ ಚಂದ್ರನಾದ ನಿನಗೆ ವಂದನೆಯು.

[ಪ್ರಸಿದ್ಧ ಚಂದ್ರನಾದರೋ ದಿನೇ ದಿನೇ ಕ್ಷಯಿಸುವನು. ಸಕಳಂಕನು, ಕಲಾ ವ್ಯತಿರಿಕ್ತ ದೇವತಾತ್ಮನು. ಆಕಾಶದ ಯಾವುದೋ ಒಂದು ಅಲ್ಪ ಪ್ರದೇಶ ದಲ್ಲಿ ಕಾಣಿಸುವನು. ಒಂದು ಸಲ ಉದಯಿಸುತ್ತಲೂ, ಸ್ವಲ್ಪ ಕಾಲಾನಂತರ ಅಸ್ತಂಗತನಾಗುತ್ತಲೂ ಇರುವನು. ಈ ಆತ್ಮ ಚಂದ್ರನ ವಿಶೇಷ ಲಕ್ಷಣಗಳನ್ನು ಈಗ ಗಮನಿಸಿ ನೋಡಿರಿ.]

೭೨. ಸರ್ವದಾ ಉದಿತನಾಗಿಯೂ, (ತಾಪರಹಿತನಾಗಿ) ಶಾಂತವಾಗಿಯೂ, ಸಕಲರ ಹೃದಯಾಂತರಾಳಗಳಲ್ಲಿ ಬಹು ಕಾಲದಿಂದ ಅಡಗಿರುವ ಮಹಾ ಅಜ್ಞಾನ ವೆಂಬ ಗಾಢಾಂಧಕಾರವನ್ನು ಅಪಹರಿಸತಕ್ಕವನಾಗಿಯೂ, ಸರ್ವಗತನಾಗಿದ್ದರೂ, (ಸ್ಥೂಲ ದೃಷ್ಟಿಗಳಿಗೆ) ಅಗೋಚರನಾಗಿಯೂ ಇರುವ ಚೈತನ್ಯ ಸೂರ್ಯನಿಗೆ ನಮ ಸ್ಕಾರವು. [ಅದೃಶ್ಯಾಯ= ದೃಶ್ಯವಿಲಕ್ಷಣಾಯ. ತಾತ್ಪರ್ಯ ಪ್ರಕಾಶ.]

೭೩. ತಾನು ಸ್ವತಃ ಅಸ್ನೇಹವಾಗಿದ್ದರೂ, (ಅಸ್ನೇಹ= ಸ್ನೇಹ ಅಥವಾ ಪ್ರೀತಿಯಿಲ್ಲದವನು.) ಆತನು (ಅಸ್ನೇಹ= ಎಣ್ಣೆಯಿಲ್ಲದುದು= ನಿಸ್ನೇಹ ದೀಪ) ಸ್ನೇಹವನ್ನು (ಪರಮ ಪ್ರೇಮವನ್ನು) ಉದ್ದೀಪನೆ ಮಾಡುವದಾಗಿಯೂ, ಸಕ ಲೇಂದ್ರಿಯ ವೃತ್ತಿಗಳನ್ನೂ, ಅತಿಕ್ರಮಿಸಿ ಇರುವುದಾಗಿಯೂ, ಸರ್ವ ವಸ್ತು ಸ್ವಭಾವ ಗಳಿಗೆ ಆಧಾರವಾಗಿಯೂ, ಸರ್ವರಿಗೂ ಜ್ಞಾನ ಪ್ರಕಾಶಕವಾಗಿಯೂ ಇರುವ ಚಿತ್ತೆಂಬ ದೀಪಕ್ಕೆ ಅನಂತ ನಮಸ್ಕಾರಗಳು.

[ಅಸ್ನೇಹಾಃ– ಪುತ್ರ ಮಿತ್ರ ಕಳತ್ರಾದಿಗಳಲ್ಲಿ ಸರ್ವತ್ರ ಅಭಿಮಾನ (ಮಮತೆ) ಶೂನ್ಯರಾದ ಯತಿಗಳು. ಅವರ ಪರಮ ಪ್ರೇಮದಿಂದ ಉದ್ದೀಪಿತವಾದುದು ಈ ಚಿದ್ದೀಪವು ಎಂಬ ಮತ್ತೊಂದು ಅರ್ಥವೂ ತಾತ್ಪರ್ಯ ಪ್ರಕಾಶದಲ್ಲಿ ವರ್ಣಿತವಾಗಿದೆ]

ಮದನಾನಲಸಂತಪ್ತೋ ಶೀತೇನ ಮನಸಾ ಮನಃ ।
ಭಗ್ನಮಂತರ್ಮಯಾ ತಪ್ತಮಯಸೇವ ಬಲಾದಯಃ ॥ ೭೪ ॥

ಇಂದ್ರಿಯೇಣೇಂದ್ರಿಯಂ ಜಿತ್ವಾ ಛಿತ್ತ್ವಾ ಚ ಮನಸಾ ಮನಃ ।
ಅಹಂಕೃತಿ ಮಹಂಕೃತ್ಯಾ ಭಿತ್ತ್ವಾ ಶೇಷೋ ಜಯಾಮ್ಯಹಂ ॥ ೭೫ ॥

ಭಾವೇನಾಭಾವ ಮಾಚ್ಛಿದ್ಯ ಹಿತ್ವಾ ತೃಷ್ಣಾಮತೃಷ್ಣಯಾ ।
ನಿಷ್ಪಿಷ್ಯ ಪ್ರಜ್ಞಯಾಽಪ್ರಜ್ಞಾಂ ಜ್ಞೋಽಜ್ಞಃ ಸತ್ಯೋಽಸಿ ತೇ ನಮಃ ॥ ೭೬ ॥

---

೭೪. ನಾನು ಇದುವರೆವಿಗೆ ಮಾಡಿದ ಪ್ರಯತ್ನವೆಲ್ಲವೂ, ವಿಧಿ ವಶದಿಂದ ಈಗ ಸಫಲವಾಯಿತು. ಹೇಗೆಂದರೆ, ಕೊಲಿಮೆಯಲ್ಲಿ ಕೆಂಪಗೆ ಚೆನ್ನಾಗಿ ಸಂತಪ್ತವಾದ ಕಬ್ಬಿಣದ ತುಂಡನ್ನು ಕಾಯಿಸಲ್ಪಡದೆ ಶೀತಲವಾಗಿರುವ ಸುತ್ತಿಗೆ ಮುಂತಾದ ಕಬ್ಬಿಣದ ಗಟ್ಟಿಯಿಂದ ಬಲವಾಗಿ ಹೊಡೆದು ಜಜ್ಜಿ ಮುರಿದು ನಮಗೆ ಬೇಕಾದ ರೀತಿಯಲ್ಲಿ ಬಗ್ಗಿಸಿಕೊಳ್ಳುವಂತೆ ನಾನು ಈ ದೇಹದೊಳಗೆ ಮದನಾಗ್ನಿ ಸಂತಪ್ತವಾದ ಮನಸ್ಸನ್ನು ಶಮದಮಾದಿಯುಕ್ತವಾಗಿ ಶೀತಲ (ಶಾಂತ) ವಾದ ಮನಸ್ಸಿನ್ನ ಸಹಾಯದಿಂದಲೇ ಬಡಿದು ಭಂಗಪಡಿಸಿ ವಶಪಡಿಸಿಕೊಂಡಿರುವೆನು.

೭೫. ಚಕ್ಷುರಾದೀಂದ್ರಿಯುಗಳನ್ನು ಪ್ರತ್ಯಗಾತ್ಮನ ಕಡೆಗೆ (ಅಂತರ್ಮುಖವಾಗಿ ಪ್ರವಹಿಸುವಂತೆ ಮಾಡಿ, ಆ ಇಂದ್ರಿಯುಗಳಿಂದಲೇ ಬಹಿರ್ಮುಖವಾಗಿ ಪ್ರವಹಿಸುತ್ತಿರುವ ಆ ಇಂದ್ರಿಯುಗಳನ್ನೂ, ಹೀಗೆಯೇ ಅಂತರ್ಮುಖಿಯಾದ ಮನಸ್ಸಿನಿಂದ ಬಹಿರ್ಮುಖಿಯಾದ ಮನಸ್ಸನ್ನೂ, ಅಹಂಕಾರದಿಂದಲೇ ಅಹಂಕಾರವನ್ನೂ ಛೇದಿಸಿ (ಕತ್ತರಿಸಿ) ಈಗ ನಾನು ಚೈತನ್ಯ ರೂಪದಿಂದ ಅವಶಿಷ್ಟನಾಗಿ ಸರ್ವೋತ್ಕೃಷ್ಟನಾಗಿರುವೆನು.

೭೬. ಎಲೈ ಆತ್ಮನೇ, ಈಶ್ವರಾಸ್ತಿತ್ವ ಬುದ್ಧಿ (ಶ್ರದ್ಧೆ)ಯಿಂದ ನಾಸ್ತಿಕ್ಯವನ್ನು (ಅಶ್ರದ್ಧೆಯನ್ನು) ಖಂಡಿಸಿ, ಅತೃಷ್ಣೆಯಿಂದ (ವೈರಾಗ್ಯದಿಂದ) ತೃಷ್ಣೆಯನ್ನು ಪರಿತ್ಯಜಿಸಿ, ಊಹಾಪೋಹ ಶಕ್ತಿಯುಳ್ಳ ಬುದ್ಧಿ (ಪ್ರಜ್ಞೆ) ಯಿಂದ ಅವಿಚಾರ ಸಂದೇಹ, ಮಿಥ್ಯಾ ಭ್ರಾಂತ್ಯಾದಿ ರೂಪ ಅಪ್ರಜ್ಞೆಯನ್ನು (ಅಜ್ಞಾನವನ್ನು) ಮರ್ದನ ಮಾಡಿ, ನೀನು ಈಗ ಜ್ಞಾತೃತ್ವಾಭಿಮಾನದಿಂದಲೂ ವಿನಿರ್ಮುಕ್ತನಾಗಿ, ಕೇವಲ ಜ್ಞಪ್ತಿಮಾತ್ರ ಸ್ವಭಾವನಾಗಿಯೇ, (ತ್ರಿಕಾಲಾಬಾಧ್ಯ) ಸತ್ಯ ಸ್ವರೂಪನಾಗಿರುವೆ. ನಿನಗೆ ನಮಸ್ಕಾರ.

ಮನಸಾ ಮನಸಿ ಚ್ಛಿನ್ನೇ ನಿರಹಂಕಾರತಾಂ ಗತೇ ।
ಭಾವೇನ ಗಲಿತೇ ಭಾವೇ ಸ್ವಚ್ಛಸ್ತಿಷ್ಠಾಮಿ ಕೇವಲಃ ॥ ೭೭ ॥

ನಿರ್ಭಾವಂ ನಿರಹಂಕಾರಂ ನಿರ್ಮನಸ್ಕಮನೀಹಿತಂ ।
ಕೇವಲಂ ಸ್ಪಂದ ಶುದ್ಧಾತ್ಮನ್ಯೇನ ತಿಷ್ಠತಿ ಮೇ ವಪುಃ ॥ ೭೮ ॥

ಹೇಲಾನು ಕಂಪಿತಾನಂತ ವಿಶ್ವೇಶಾದತಿ ಶಾಯಿನೀ ।
ಪರಮೋಪಶಮೋಪೇತಾ ಜಾತೇಯಂ ಮಮ ನಿರ್ವೃತಿಃ ॥ ೭೯ ॥

---

೭೭. ನನ್ನ ಮನಸ್ಸಿನಿಂದಲೇ, ನನ್ನ ಮನಸ್ಸು ವಿಚ್ಛಿನ್ನವಾಗಿ, ಅಹಂಕಾರ ಶೂನ್ಯತೆಯಿಂದ ಈಗ ರಾಗರಹಿತನಾಗಿ ಬಿಟ್ಟಿರುವುದು. ಮತ್ತು ಬ್ರಹ್ಮಾಹಂಭಾವ ದಿಂದ ದೇಹಾದ್ಯಹಂಭಾವವು ನಿರ್ಮೂಲವಾಗಿ ನಾಶಹೊಂದಿತು. ಆದುಕಾರಣ ನಾನು ನಿತ್ಯ ಶುದ್ಧನೂ, ಬುದ್ಧನೂ, ಮುಕ್ತನೂ, ಅದ್ವಿತೀಯನೂ ಆಗಿರುವೆನು.

೭೮. ಭಾವನಾ ಹೇತು ಬುದ್ಧಿ ಶೂನ್ಯವಾಗಿಯೂ (ನಿರ್ಭಾವ) ಅಹಂಕಾರ ಶೂನ್ಯವಾಗಿಯೂ, ಮನಶ್ಶೂನ್ಯವಾಗಿಯೂ, ಇಚ್ಛಾ ಹೇತುವಾದ ಚಿತ್ತದಿಂದ ಶೂನ್ಯವಾಗಿಯೂ ಇರುವ ಈ ನನ್ನ ದೇಹವು ಈಗ ಕೇವಲವಾಗಿ ಪ್ರಾಣನ ಕ್ರಿಯಾ ಮಾತ್ರದಿಂದ ಶುದ್ಧನಾದ ಜೀವನ್ಮುಕ್ತಾತ್ಮ ಸ್ಥಿತಿಯಲ್ಲಿರುವುದು.

೭೯. ಲೀಲಾ ಮಾತ್ರದಿಂದ ಅಸಂಖ್ಯಾಕರಾದ ಭಕ್ತರಿಗೆ ಈಪ್ಸಿತತಮವಾದ ವರಗಳನ್ನೂ, ಐಶ್ವರ್ಯಾದಿಗಳನ್ನೂ ಕೊಟ್ಟು ಅನುಗ್ರಹಿಸಿರತಕ್ಕ ಬ್ರಹ್ಮ, ವಿಷ್ಣು, ಮಹೇಶ್ವರಾದಿ ತ್ರಿಮೂರ್ತಿಗಳ ಆನಂದಕ್ಕಿಂತಲೂ ಮಿಗಿಲಾದ (ಉತ್ಕೃಷ್ಟವಾದ) ಮಹಾ ಶಾಂತಿಯುತವಾದ ನಿತ್ಯ ನಿರತಿಶಯಾನಂದ ವಿಶ್ರಾಂತಿಯು ಈಗ ನನಗೆ ಲಭಿಸಿರುವುದು.

(ತೈತ್ತಿರೀಯೋಪನಿಷತ್ತಿನ ಆನಂದವಲ್ಲಿಯಲ್ಲಿ ಮಾನುಷ-ಮನುಷ್ಯ ಗಂಧರ್ವ, ದೇವ ಗಂಧರ್ವ ಇತ್ಯಾದಿ ಕ್ರಮದಿಂದ ಬ್ರಹ್ಮಾನಂದ ಪರ್ಯಂತವಾಗಿ ಪೂರ್ವ ಪೂರ್ವಾಪೇಕ್ಷೆಯಿಂದ ಉತ್ತರೋತ್ತರ ಆನಂದದಲ್ಲಿ ಶತಗುಣಾಧಿಕ್ಯವನ್ನು ಹೇಳಿ, ಅಂತದಲ್ಲಿ- ತೇ ಯೇ ಶತಂ ಪ್ರಜಾಪತೇರಾನಂದಾಃ ಸ ಏಕೋ ಬ್ರಹ್ಮಣ ಆನಂದಃ। ಸ ಯಶ್ಚಾಯಂ ಪುರುಷೇ, ಯಶ್ಚಾಸಾವಾದಿತ್ಯೇ, ಸ ಏಕಃ ಸ ಯ ಏವಂವಿತ್॥ ಎಂಬುದಾಗಿ "ಬ್ರಹ್ಮಾನಂದವು ನಿರತಿಶಯವಾದುದು, ನಿತ್ಯವು, ಸ್ವರೂಪವು" ಎಂದು

ಪ್ರಶಾಂತ ಮೋಹವೇತಾಲೋ ಗತಾಹಂಕಾರ ರಾಕ್ಷಸಃ ।
ಕದಾಶಾರೂಪಿಕೋನ್ಮುಕ್ತೋ ಜಾತೋಽಸ್ಮಿ ವಿಗತಜ್ವರಃ ॥ ೮೦ ॥

ತೃಷ್ಣಾರಜ್ಜುಗುಣಂ ಛಿತ್ವಾ ಮಚ್ಛರೀರಕ ಪಂಜರಾತ್ ।
ನ ಜಾನೇ ಕ್ವ ಗತೋಡ್ಡೀಯ ದುರಹಂಕೃತಿ ಪಕ್ಷಿಣೀ ॥ ೮೧ ॥

ವಿಧ್ಯೂಲಿತೇ ಘನಾಜ್ಞಾನ ಕುಲಾಯೇ ಕಾಯ ಪಾದಪಾತ್ ।
ನ ಜಾನೇ ಗತ ಉಡ್ಡೀಯ ಕ್ವಾಹಂಭಾವ ವಿಹಂಗಮಃ ॥ ೮೨ ॥

ದುರಾಶಾ ದೀರ್ಘ ದೌರಾತ್ಮ್ಯ ದೂಸರಾ ಭೋಗ ಭಸ್ಮನಾ ।
ಭಯ ಭೋಗಿಹಿತಾ ದಿಷ್ಟ್ಯಾ ಭೂಯಸ್ಯೋ ವಾಸನಾಃ ಕ್ಷತಾಃ ॥ ೮೩ ॥

ಪ್ರತಿಪಾದಿತವಾಗಿರುವುದು. ಸತ್ಯಂ ಜ್ಞಾನಮನಂತಂ ಬ್ರಹ್ಮ ‘ ವಿಜ್ಞಾನಮಾನಂದಂ ಬ್ರಹ್ಮ-’ ಎಂಬೀ ಮೊದಲಾದ ಸಾವಿರಾರು ಶ್ರುತಿಗಳೂ ಇದೇ ಅರ್ಥವನ್ನು ಉದ್ಘೋಷಿಸುವುವು.)

೮೦. ನನ್ನ ದೇಹದಲ್ಲಿ ಮನೆ ಮಾಡಿಕೊಂಡಿದ್ದ ಮೋಹವೆಂಬ ಬೇತಾಳನು ಈಗ ನಾಶ ಹೊಂದಿದನು. ಅಹಂಕಾರವೆಂಬ ರಾಕ್ಷಸನು ಬಿಟ್ಟು ಹೊರಟು ಹೋದನು. ದುರಾಶೆಯೆಂಬ ಹೆಣ್ಣು ಪಿಶಾಚಿಯೂ ಬಿಟ್ಟು ತೊಲಗಿತು. ಅದು ಕಾರಣ. ನಾನು ಸಂತಾಪರಹಿತನಾದೆನು.

೮೧. ನನ್ನ ಕುತ್ಸಿತವಾದ ದೇಹವೆಂಬ ಪಂಜರದೊಳಗೆ ಬದ್ಧವಾಗಿದ್ದ ದುರಹಂಕೃತಿಯೆಂಬ ಹೆಣ್ಣು ಹಕ್ಕಿಯು ತೃಷ್ಣೆಯೆಂಬ ಹಗ್ಗಗಳನ್ನು ಕಡಿದು ಹಾಕಿ, ಪಂಜರದಿಂದ ತಪ್ಪಿಸಿಕೊಂಡು ಎಲ್ಲಿಗೆ ಹಾರಿ ಹೋಯಿತೋ ನನಗೆ ಗೊತ್ತಿಲ್ಲ.

೮೨. ಅಹಂಕಾರವೆಂಬ ಗಂಡು ಹಕ್ಕಿಯು ಅತಿ ಸಾಂದ್ರವಾದ (ಘನವಾದ) ಅಜ್ಞಾನವೆಂಬ ತನ್ನ ಗೂಡು, ಜ್ಞಾನಾಭ್ಯಾಸವೆಂಬ ಕಲ್ಲು ಗುಂಡಿನಿಂದ ಪುಡಿ ಪುಡಿ ಮಾಡಲ್ಪಟ್ಟು ಗಾಳಿಗೆ ಹಾರಿ ಹೋಗಲಾಗಿ, ನನ್ನ ದೇಹವೆಂಬ ಮರದ ದೆಸೆಯಿಂದ ಹಾರಿ ಎಲ್ಲಿಗೆ ಹೋಯಿತೋ ಗೊತ್ತಿಲ್ಲ.

೮೩. ದುರಾಶೆಗಳಿಂದಲೂ ಅತಿ ದೀರ್ಘಕಾಲದಿಂದ ಅನುಸರಿಸಿಕೊಂಡು ಬಂದಿರುವ ದುಷ್ಟ ದೇಹಾದ್ಯಾತ್ಮತ್ವಾಭಿಮಾನಗಳಿಂದಲೂ, (ದುಷ್ಟವಾದ ದೇಹೇಂದ್ರಿಯಾದಿಗಳಲ್ಲಿ ಬಹು ಕಾಲದಿಂದ ನೆಲೆಸಿರುವ ಆತ್ಮತ್ವಾಭಿಮಾನ) ಅತಿ ಮಲಿನ

ಏತಾವಂತ ಮಹಂ ಕಾಲಂ ಕೋಽಭೂವಂ ಚಿತ್ರಮೀದೃಶಂ ।
ಏನಾಹಮೇಷ ಮಿಥ್ಯೈವ ದೃಢಾಹಂಕಾರತಾಂ ಗತಃ ॥ ೮೪ ॥

ಅದ್ಯಾಹಮಸ್ಮಿ ಜಾತೋಽಯ ಮಹಮದ್ಯ ಮಹಾಮತಿಃ ।
ಅಹಂಕಾರ ಮಹಾಭ್ರೇಣ ಯತ್ಕೃಷ್ಣೇನಾಲ ಮುಜ್ಝಿತಃ ॥ ೮೫ ॥

ದೃಷ್ಟೋಽಯಮಾತ್ಮಾ ಭಗವಾಂಸ್ತಥೈವಾಧಿಗತೋ ಮಯಾ ।
ಅಲಬ್ಧಶ್ಚಾನುಭೂತೋಽಂಗಂ ಸ್ವಾನುಭೂತೌ ನಿಯೋಜಿತಃ ॥ ೮೬ ॥

ಗಳಾದ, ಸಂಸಾರ ಭಯಗಳೆಂಬ ಸರ್ಪಗಳಿಗೆ ಹಿತಕರಗಳಾದ. ಅಸಂಖ್ಯಾಕವಾದ ದುರ್ವಾಸನೆಗಳು, ಭೋಗಗಳನ್ನು ಸುಟ್ಟು ಭಸ್ಮ ಮಾಡತಕ್ಕ ಸಮಾಧಿಯಿಂದ ಈಗ ಉಚ್ಛಿನ್ನವಾದುವು. ಅಹಹ! ನಾನೆಂತಹ ಅದೃಷ್ಟಶಾಲಿ!

೮೪. ಇದುವರೆವಿಗೆ ಇಷ್ಟೊಂದು ದೀರ್ಘ ಕಾಲವೂ ನಾನು ಏನಾಗಿದ್ದೆನು? ಅಹಾ, ಇದೆಂತಹ ಆಶ್ಚರ್ಯ!!! ಇಂತಹ ಅಸಂಗ ನಿರ್ವಿಕಾರಾತ್ಮ ರೂಪ ನಾದ ನಾನು ಮಿಥ್ಯೆಯಾಗಿಯೇ ದೃಢವಾದ ಅಹಂಕಾರ ಭಾವವನ್ನು ಹೊಂದಿ ಬಿಟ್ಟಿದ್ದೆನಲ್ಲ!!!

೮೫. ನಾನು ಈಗ ಸ್ವಾಭಾವಿಕವಾದ ನಿರತಿಶಯಾನಂದ ಸ್ವರೂಪವನ್ನು ಅನು ಭವಿಸುತ್ತಿರುವೆನು. ಈಗಲೇ ನಾನು ಮಹಾ ಪ್ರಾಜ್ಞನಾಗಿಬಿಟ್ಟೆನು. ಏಕೆಂದರೆ, ನನ್ನನ್ನು ಇದುವರೆವಿಗೆ ಕವಿದುಕೊಂಡಿದ್ದ ಅಹಂಕಾರವೆಂಬ ದೊಡ್ಡ ಕೃಷ್ಣಮೇಘ ಪಟಲವು, ಈಗ ನನ್ನನ್ನು ಪೂರ್ತಿಯಾಗಿ ಬಿಟ್ಟುಬಿಟ್ಟಿರುವುದು.

೮೬. ಈಗ ನಾನು ಭಗವಂತನಾದ ಈ ಆತ್ಮನನ್ನು "ತತ್ತ್ವಮಸಿ" "ಅಹಂ ಬ್ರಹ್ಮಾಸ್ಮಿ." "ವಿಜ್ಞಾನಮಾನಂದಂ ಬ್ರಹ್ಮ" ಇತ್ಯಾದಿ ಪರಸ್ಸಹಸ್ರ ಶ್ರುತಿ ವಾಕ್ಯ ಪ್ರಮಾಣದಿಂದ ಕಂಡುಹಿಡಿದೆನು. ಹಾಗೆಯೇ ಮನನದಿಂದ ದೊರಕಿಸಿ ಕೊಂಡೆನು. ಸಮಾಧಿಯಲ್ಲಿ ಮನಸ್ಸಿನಿಂದ ಚಿರಕಾಲ ಅಪ್ಪಿಕೊಂಡು ಚೆನ್ನಾಗಿ ಅನುಭವಿಸಿದೆನು. ಬಳಿಕ ಈಗ ನನ್ನ ದೇಹದಂತೆ ಆತ್ಮನನ್ನು ಸರ್ವದಾ ನನ್ನ ಅನುಭವದಲ್ಲಿ ವಿನಿಯೋಗಿಸಿಕೊಂಡಿರುವೆನು.

["ದೇಹಾತ್ಮ ಜ್ಞಾನವತ್ ಜ್ಞಾನಂ ದೇಹಾತ್ಮ ಜ್ಞಾನ ಬಾಧಕಂ । ಆತ್ಮನ್ಯೇವ ಭವೇದ್ಯಸ್ಯ ಸಃ ನೇಚ್ಛನ್ನಪಿ ಮುಚ್ಯತೇ." ದೇಹಾದಿಗಳಲ್ಲಿ ಆತ್ಮ ಜ್ಞಾನವು

ಗತಾಸ್ಪದಂ ಗತಮನನಂ ಗತೈಷಣಂ ।
ತಿರಸ್ಕೃತಂ ನಿಪುಣ ಮಹಂಕೃತಿ ಭ್ರಮೈಃ ॥
ನಿರೀಹಿತಂ ವ್ಯಪಗತರಾಗರಂಜನಂ ।
ವಿಕೌತುಕಂ ಪ್ರಶಮಮಿದಂ ಗತಂ ಮನಃ ॥ ೮೭ ॥

ದುರುತ್ತರಾಃ ಸಮವಿಷಮಾ ಮಹಾಪದಃ ।
ಸುದುಃಸಹಾಃ ಪ್ರಭವನ ದೀರ್ಘದೋಷದಾಃ ॥
ಗತಾಃ ಕ್ಷಯಂ ಸಮಧಿಗತೋ ಮಹೇಶ್ವರ ।
ಶ್ಚಿದದ್ವಯೋಪಗತಮಚಿತ್ವ್ತಮಂತರೇ ॥ ೮೮ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ "ಬ್ರಹ್ಮಾತ್ಮಲಾಭಚಿಂತಾನುವರ್ಣನಂ" ನಾಮ ಪಂಚತ್ರಿಂಶಃ ಸರ್ಗಃ

ಉದಯಿಸುವಂತೆಯೇ, ದೇಹಾದಿಗಳಲ್ಲಿ ಆತ್ಮ ಬುದ್ಧಿಯೆಂಬ ಮಿಥ್ಯಾ ಭೂತ ಅಜ್ಞಾನವನ್ನು ನಿವೃತ್ತಿ ಮಾಡತಕ್ಕ ಆತ್ಮೈಕತ್ವ ಜ್ಞಾನವು ಯಾವನಿಗೆ ಮನಸ್ಸಿನಲ್ಲಿ ದೃಢವಾಗಿ ಉದಯಿಸುವುದೋ ಅಂತಹ ಸುಕೃತಿಯು ಇಚ್ಛಿಸದಿದ್ದರೂ ಸರ್ವಥಾ ಸ್ವತ ಏವ ನಿಸ್ಸಂಶಯವಾಗಿಯೇ ಮುಕ್ತನಾಗುವನು.]

೮೭. ನನ್ನ ಮನಸ್ಸು ಈಗ ನಿರ್ವಿಷಯವಾಗಿರುವುದು. ಅದು ನಿರ್ವಿಷಯ ವಾದ ಕಾರಣದಿಂದಲೇ ಮನನವೂ, ಏಷಣೆಯೂ (ಇಚ್ಛೆಯೂ, ಇಲ್ಲವಾದವು. ಅಹಂಕಾರ ಭ್ರಮಗಳೆಲ್ಲ ನನ್ನ ಮನಸ್ಸನ್ನು ಸಂಪೂರ್ಣವಾಗಿ ಬಿಟ್ಟು ತೊಲಗಿ ಹೋಗಿರುವುವು. ಅದು ಕಾರಣ ಇದು ನಿಶ್ಚೇಷ್ಟವಾಯಿತು. ಅನುರಾಗ ಶೂನ್ಯವೂ ಆಯಿತು. ಸಕಲ ವಿಧ ಭೋಗೋತ್ಕಂಠಾ ರಹಿತವಾಯಿತು. ಹೀಗೆ ನನ್ನ ಮನಸ್ಸು-ನಿರಿಂಧನಾಗ್ನಿಯಂತೆ (ಸೌದೆಯಿಲ್ಲದ ಬೆಂಕಿಯಂತೆ) ಸ್ವತ ಏವ ಪ್ರಶಾಂತಿಯನ್ನು ಹೊಂದಿಬಿಟ್ಟಿತು.

೮೮. ಮನಶ್ಶಾಂತಿಯಿಂದಲೇ ಸಕಲಾಪತ್ತುಗಳೂ ನಿವೃತ್ತಿಯಾಗುವುವು. ಮತ್ತು ನಿರತಿಶಯಾನಂದ ಆತ್ಮ ಲಾಭವೂ ಪ್ರಾಪ್ತವಾಗುವುದು. ಸುತರಾಂ ದಾಟಲು ಅಶಕ್ಯಗಳಾಗಿಯೂ, ಚಿರಕಾಲದಿಂದಲೂ ಏಕ ರೂಪವಾದ ದುಃಖ ಮಯಗಳಾಗಿಯೂ, ಪ್ರತಿ ಕ್ಷಣವೂ ಚಿತ್ರ ವಿಚಿತ್ರಗಳಾದ ದುಃಖಗಳನ್ನು ಕೊಡತಕ್ಕವುಗಳಾಗಿಯೂ, ಸುತರಾಂ ಸಹಿಸಲು ಅಶಕ್ಯಗಳಾಗಿಯೂ, ನಾನಾ ಯೋನಿ ಜನ್ಮ ಪರಂಪರೆಗಳನ್ನೂ, ಕಾಮ, ಲೋಭ, ಮೋಹಾದಿ ದೀರ್ಘ ದೋಷ

ಗಳನ್ನೂ ಕೊಡತಕ್ಕವುಗಳಾಗಿಯೂ ಇದ್ದ ಮಹಾ ವಿಪತ್ತುಗಳೆಲ್ಲ ಈಗ ಕ್ಷಯ ಹೊಂದಿಬಿಟ್ಟುವು. ಪ್ರತ್ಯಗಾತ್ಮ ವಿಷಯಕವಾದ ಅಜ್ಞಾನವೆಂಬ ಜಾಡ್ಯವು ಆತ್ಮೈಕತ್ವ ಜ್ಞಾನದಿಂದ ಸಮೂಲವಾಗಿ ತೊಲಗಿ ಹೋಯಿತು. ಆದುದರಿಂದ ಅದ್ವಿತೀಯ ಚೈತನ್ಯಾತ್ಮಕನಾದ ಪರಮೇಶ್ವರನು ನನಗೆ ಈಗ ಲಬ್ಧನಾದನು.

[ಈ ಸಂದರ್ಭದಲ್ಲಿ ಈ ಗೀತಾ ವಾಕ್ಯಗಳನ್ನು ಅನುಸಂಧಾನ ಮಾಡಿರಿ:—

ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ ||
ಸಂಗಾತ್ ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಽಭಿಜಾಯತೇ || ೨-೬೨
ಕ್ರೋಧಾತ್ ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿ ವಿಭ್ರಮಃ |
ಸ್ಮೃತಿ ಭ್ರಂಶಾತ್ ಬುದ್ಧಿ ನಾಶಃ ಬುದ್ಧಿ ನಾಶಾತ್ ಪ್ರಣಶ್ಯತಿ || ೨-೬೩.
ರಾಗ ದ್ವೇಷ ವಿಯುಕ್ತೈಸ್ತು ವಿಷಯಾನ್ ಇಂದ್ರಿಯೈಶ್ಚರನ್ |
ಆತ್ಮವಶ್ಯೈಃ ವಿಧೇಯಾತ್ಮಾ ಪ್ರಸಾದಮಧಿ ಗಚ್ಛತಿ || ೨-೬೪.
ಪ್ರಸಾದೇ ಸರ್ವ ದುಃಖಾನಾಂ ಹಾನಿರಸ್ಯೋಪಜಾಯತೇ |
ಪ್ರಸನ್ನ ಚೇತಸೋಹ್ಯಾಶು ಬುದ್ಧಿಃ ಪರ್ಯವತಿಷ್ಠತೇ || ೨-೬೫.
ನಾಸ್ತಿ ಬುದ್ಧಿ ರಯುಕ್ತಸ್ಯ ನ ಚಾಯುಕ್ತಸ್ಯ ಭಾವನಾ.
ನಚಾ ಭಾವಯತಃ ಶಾಂತಿಃ-ಅಶಾಂತಸ್ಯ ಕುತಃ ಸುಖಂ ? || ೨-೬೬.

ಬುದ್ಧಿ ಪ್ರಸಾದವೆಂದರೆ-ಬುದ್ಧಿ ಸ್ಥೈರ್ಯ. ಪರ್ಯವತಿಷ್ಠತೇ-ಆತ್ಮ ಸ್ವರೂಪದಿಂದಲೇ ನಿಶ್ಚಲವಾಗಿಬಿಡುವುದು.

ಅಯುಕ್ತಸ್ಯ-ಅಸಮಾಹಿತನಿಗೆ. ಭಾವನಾ-ಆತ್ಮ ಜ್ಞಾನದಲ್ಲಿ ಅಭಿ ನಿವೇಶ.]

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ಬ್ರಹ್ಮಾತ್ಮಲಾಭ ಚಿಂತಾನು ವರ್ಣನೆ" ಎಂಬ ಮೂವತ್ತೈದನೆಯ ಸರ್ಗವು.

ಷಟ್ತ್ರಿಂಶಃ ಸರ್ಗಃ

ಪ್ರಹ್ಲಾದ ಉವಾಚ—

ಆತ್ಮಾ ಸರ್ವ ಪದಾತೀತಶ್ಚಿರಾತ್ಸಂಸ್ಮೃತಿ ಮಾಗತಃ ।
ದೃಷ್ಟ್ಯಾ ಲಬ್ಧೋಽಸಿ ಭಗವನ್ನಮಸ್ತೇಽಸ್ತು ಮಹಾತ್ಮನೇ ॥ ೧ ॥

ಅಭಿವಂದ್ಯಾಥ ಚಾಲೋಕ್ಯ ಚಿರಮಾಲಿಂಗ್ಯಸೇ ಮಯಾ ।
ಕೋಽನ್ಯಃ ಸ್ವಾತ್ತ್ವದೃತೇ ಬಂಧುರ್ಭಗವನ್ಭುವನತ್ರಯೇ ॥ ೨ ॥

ಹಂಸಿ ಪಾಸಿ ದದಾಸಿ ತ್ವಂ ಸ್ತೌಷಿ ಯಾಸಿ ವಿವಲ್ಗಸಿ ।
ಅಯಂ ಪ್ರಾಪ್ತೋಽಸಿ ದೃಷ್ಟೋಽಸಿ ಕಿಂ ಕರೋಷಿ ಕ್ವ ಗಚ್ಛಸಿ ॥ ೩ ॥

ಮೂವತ್ತಾರನೆಯ ಸರ್ಗ

ಪುನಃ ಪ್ರಹ್ಲಾದನು ಹೇಳಿಹನು:—

೧. ಮಾನುಷಾನಂದವನ್ನು ಮೊದಲುಗೊಂಡು ಹೈರಣ್ಯ ಗರ್ಭಾನಂದ ಪರ್ಯಂತಗಳಾದ ಸಕಲ ಶುಭೋತ್ಕರ್ಷ ಸ್ಥಾನಗಳಿಗಿಂತಲೂ ಅತೀತನಾಗಿ, ನಿರತಿಶಯ ನಿತ್ಯಾನಂದ ರೂಪನಾದ ಈ ಪ್ರತ್ಯಗಾತ್ಮನು ಈಗ ಬಹು ಕಾಲಾನಂತರ ನನ್ನ ಸ್ಮರಣ ಗೋಚರನಾದನು. ಆಹಾ! ಎಲೈ ಭಗವಂತನೇ, ನನ್ನ ಅದೃಷ್ಟ ವಶದಿಂದ ನನಗೆ ನಿನ್ನ ಲಾಭವುಂಟಾಯಿತು. ದಿಕ್ಕಾಲಾದಿಗಳಿಂದ ಅಪರಿಚ್ಛಿನ್ನ ಸ್ವರೂಪನಾದ ನಿನಗೆ ಇದೋ ನಮಸ್ಕಾರ ಮಾಡುವೆನು.

೨. ಎಲೈ ಷಡ್ಗುಣೈಶ್ವರ್ಯ ಸಂಪನ್ನನಾದ ಭಗವಂತನೇ, ನಾನು ಮೊದಲು ನಿನ್ನನ್ನು ನಮಸ್ಕರಿಸಿ, ಬಳಿಕ ನಿನ್ನ ದರ್ಶನ (ಸಾಕ್ಷಾತ್ಕಾರ) ಪಡೆದು ದೃಢವಾಗಿ ಚಿರಕಾಲ ಸಮರಸ ವೃತ್ತಿಯಿಂದ ಸಮಾಧಿಯಲ್ಲಿ ಅನುಭವಿಸಲ್ಪಡುವೆ. ನಿನ್ನ ಹೊರತು ಈ ಲೋಕತ್ರಯದೊಳಗಾಗಿ ನನಗೆ ಪರಮ ಪ್ರೇಮಾಸ್ಪದನಾದ ಬೇರೆ ಯಾವ ಬಂಧುವೂ ಇಲ್ಲವು.

೩. ಎಂದಿನ ವರೆಗೆ ನಿನ್ನ ದರ್ಶನವೂ, ಲಾಭವೂ ಇಲ್ಲದೆ ಹೋಗುವುದೋ ಅಂದಿನ ವರೆವಿಗೂ ನೀನೇ ಮೃತ್ಯುವಾಗಿ ನಿನ್ನ ಅಭಕ್ತರಾದ ಅಜ್ಞಾನಿಗಳನ್ನು ನಾಶ

ಸ್ವಸತ್ತಾ ಪೂರಿತಾಶೇಷ ವಿಶ್ವ ವಿಶ್ವಜನೀನ ಭೋಃ ।
ಸರ್ವತ್ರ ಲಕ್ಷ್ಯಸೇ ನಿತ್ಯಮಧುನಾ ಕ್ವ ಪಲಾಯಸೇ ॥ ೪ ॥

ಆವಯೋರಂತರಂ ಭೂರಿ ಜನ್ಮ ವ್ಯವಹಿತಾಂತರಂ ।
ಅದೂರಮದ್ಯ ಸಂಪನ್ನಂ ದಿಷ್ಟ್ಯಾ ದೃಷ್ಟೋಽಸಿ ಬಾಂಧವ ॥ ೫ ॥

ನಮಸ್ತೇ ಕೃತಕೃತ್ಯಾಯ ಕರ್ತ್ರೇ ಭರ್ತ್ರೇ ನಮೋಽಸ್ತು ತೇ ।
ನಮಃ ಸಂಸಾರ ವೃಂತಾಯ ನಿತ್ಯಾಯ ವಿಮಲಾತ್ಮನೇ ॥ ೬ ॥

ಪಡಿಸುತ್ತೀಯೆ. ಭಕ್ತರಾದ ಜ್ಞಾನಿಗಳನ್ನು ಪಾಲಿಸುತ್ತೀಯೆ. ವಿವಿಧೋಪಾಸನೆಗಳಿಂದಲೂ, ವಿಹಿತ ಕರ್ಮಗಳಿಂದಲೂ ನಿನ್ನನ್ನು ಆರಾಧಿಸುವ ಸುಕೃತಿಗಳಿಗೆ ನೀನೇ ಅವರವರ ವಾಂಛಿತಾರ್ಥಗಳನ್ನು ಕೊಟ್ಟು ಅನುಗ್ರಹಿಸುತ್ತೀಯೆ. ಸ್ನಾನಸಾದಿ ಸ್ತೋತ್ರ ಮಾಡುತ್ತೀಯೆ. ಯಾತ್ರಿಕನ ರೂಪದಿಂದ ಪ್ರಯಾಣ ಮಾಡುತ್ತೀಯೆ. ಮತ್ತು ನೀನೇ ಸರ್ವ ರೂಪಗಳಿಂದ ಸರ್ವ ವ್ಯವಹಾರಗಳನ್ನೂ ನಿರ್ವಹಿಸುತ್ತೀಯೆ. ನಿತ್ಯಾ ಪರೋಕ್ಷ ಸ್ವಭಾವನಾದ ನೀನು ಈಗ ನನಗೆ ಸಿಕ್ಕಿರುವೆ. ನನಗೆ ನಿನ್ನ ಯಥಾರ್ಥವಾದ ಸಾಕ್ಷಾತ್ಕಾರವು ಆಗಿರುವುದು. ಈಗ ನೀನು ಇನ್ನೇನು ಮಾಡುವೆ? ಎಲ್ಲಿಗೆ ಹೋಗುವೆ.?

೪. ಚರಾಚರಾತ್ಮಕವಾದ ಸಕಲ ಜಗತ್ತನ್ನೂ, ಆತ್ಮ ಸತ್ತೆಯಿಂದ ಪೂರ್ತಿ ಮಾಡಿರತಕ್ಕವನೂ, ಸಕಲ ಲೋಕಹಿತನೂ ಆಗಿರುವ ಭಗವಂತನೇ, ನೀನು ಈಗ ನನಗೆ ಸಕಲ ಕಾಲಗಳಲ್ಲಿಯೂ, ಸಕಲ ವಸ್ತುಗಳಲ್ಲಿಯೂ, ಸಕಲ ದೇಶಗಳಲ್ಲಿಯೂ, ಗೋಚರನಾಗಿದ್ದೀಯೆ. ಈಗ ನೀನೆಲ್ಲಿಗೆ ಓಡಿಹೋಗುವೆ ?

೫. ನಮ್ಮಿಬ್ಬರಿಗೂ ಇದು ವರೆವಿಗೂ ಹೆಚ್ಚಾದ ವ್ಯವಧಾನವು (ಮಧ್ಯದಲ್ಲಿ ಮರೆಯು) ಇದ್ದಿತು. ಅನೇಕಾನೇಕ ಜನ್ಮಗಳು ಮಧ್ಯದಲ್ಲಿ ವ್ಯವಧಾನವನ್ನುಂಟು ಮಾಡಿಬಿಟ್ಟಿದ್ದುವು. ಈಗಲಾದರೋ ಅಂತರ್ಧಾಯಕವಾದ ಆ ಅಜ್ಞಾನವು ನಾಶವಾಗಿಬಿಟ್ಟಿತು. ಆದುದರಿಂದಲೇ ನಮ್ಮಿಬ್ಬರಿಗೂ ಅತ್ಯಂತಾಭೇದವೆಂಬ ಅತಿ ಸಾಮೀಪ್ಯವು ಲಬ್ಧವಾಗಿರುವುದು. ಎಲೈ ಆಪ್ತ ಬಂಧುವೇ, ನನ್ನ ಸುಕೃತ ಪರಿಪಾಕದಿಂದ ನೀನು ನನಗೆ ಗೋಚರನಾದೆ.

೬ ಕೃತಕೃತ್ಯನಾಗಿರುವ ನಿನಗೆ ನಮಸ್ಕಾರವು. ಸಕಲ ಲೋಕಗಳ ಸೃಷ್ಟಿ

ನಮಶ್ಚಕ್ರಾಬ್ಜಹಸ್ತಾಯ ನಮಶ್ಚಂದ್ರಾರ್ಧಧಾರಿಣೇ ।
ನಮೋ ವಿಬುಧ ನಾಥಾಯ ನಮಸ್ತೇ ಪದ್ಮ ಜನ್ಮನೇ ॥ ೭ ॥
ವಾಚ್ಯ ವಾಚಕ ದೃಷ್ಟ್ಯೈವ ಭೇದೋ ಯೋಯ ಮಾವಯೋಃ ।
ಅಸತ್ಯಾ ಕಲ್ಪನೈವೈಷಾ ವೀಚಿ ವೀಚ್ಯಂಭಸೋರಿವ ॥ ೮ ॥
ತ್ವಮೇವಾನಂತ ಯಾನಂತ ವಸ್ತು ವೈಚಿತ್ರ್ಯ ರೂಪಯಾ ।
ಭಾವಾಭಾವ ವಿಲಾಸಿನ್ಯಾ ನಿತ್ಯಯೈವ ವಿಜೃಂಭಸೇಃ ॥ ೯ ॥

ಕರ್ತನೂ, ಪೋಷಕನೂ ಆಗಿರುವ ನಿನಗೆ ಈ ನಮಸ್ಕಾರವು. ಸಂಸಾರವೆಂಬ ಎಲೆಗೆ ತೊಟ್ಟಿನಂತೆ ಇರುವವನೂ, ನಿತ್ಯನೂ, ನಿರ್ಮಲನೂ (ಅವಿದ್ಯಾದಿ ದೋಷ ರಹಿತನೂ) ಆದ ನಿನಗೆ ವಂದನೆಗಳು.

೭. ಕೈಗಳಲ್ಲಿ ಚಕ್ರವನ್ನೂ, ಕಮಲವನ್ನೂ ಧರಿಸಿರುವ ವಿಷ್ಣು ರೂಪನಾದ ನಿವಗೆ ನಮಸ್ಕಾರ. ಚಂದ್ರಕಲಾವತಂಸನಾಗಿ ಶಿವರೂಪನಾಗಿರುವ ನಿನಗೆ ನಮಸ್ಕಾರ. ಸಕಲ ದೇವ ಗಣಗಳಿಗೂ ಅಧಿರಾಜನಾದ, ಇಂದ್ರರೂಪನಾಗಿರುವ ನಿನಗೆ ವಂದನೆಗಳು. ಕಮಲೋದ್ಭವನಾದ ಬ್ರಹ್ಮರೂಪನಾಗಿರುವ ನಿನಗೆ ವಂದನೆಗಳು.

(ನಮೋ ವಿಶ್ವಸೃಜೇ ಪೂರ್ವಂ-ವಿಶ್ವಂ ತದನು ಬಿಭ್ರತೇ । ಅಥ ವಿಶ್ವಸ್ಯ ಸಂಹರ್ತ್ರೇ ತುಭ್ಯಂ ತ್ರೇಧಾ ಸ್ಥಿತಾತ್ಮನೇ-ಕಾಳಿದಾಸ-ರಘುವಂಶ. ೧೦ನೇ ಸರ್ಗ.)

೮. ಇದು ವಾಚ್ಯ, ಅದು ವಾಚಕ, ಎನ್ನುವ ವ್ಯವಹಾರಿಕ ದೃಷ್ಟಿಯಿಂದ ಮಾತ್ರವೇ, ನಮ್ಮಿಬ್ಬರಿಗೂ ಇಲ್ಲಿ ಭೇದವು ಕಾಣುತ್ತಿರುವುದು. ಈ ವ್ಯಾವಹಾರಿಕ ದೃಷ್ಟಿಯೂ, ಭೇದವೂ ಸಹ ನೀರಿಗೂ, ನೀರಿನ ಅಲೆಗೂ, ಅನ್ಯೋನ್ಯ ಭೇದವನ್ನು ಕಲ್ಪಿಸುವಂತೆ ಅಸತ್ಯವಾದ ಕಲ್ಪನೆಯೇ ಹೊರತು ಪಾರಮಾರ್ಥಿಕವಲ್ಲ.

೯. ಅನಂತನಾದ ವಿವಿಧ ವಸ್ತುಗಳ ವೈಚಿತ್ರ್ಯ ರೂಪವಾಗಿಯೂ ಭಾವ ಮತ್ತು ಅಭಾವಗಳೆಂಬ ಭೇದಗಳ ವಿಲಾಸಮಯವಾಗಿಯೂ, ಅನಾದಿ ಪ್ರವಾಹ ರೂಪವಾಗಿಯೂ ಇರುವ ಈ ತುದಿ ಮೊದಲಿಲ್ಲದ ಕಲ್ಪನೆಯಿಂದಲೇ ನೀನೇ ಹೀಗೆಲ್ಲಾ ಜಗತ್ತಿನಲ್ಲಿ ವಿಜೃಂಭಿಸುತ್ತಿರುವೆ.

ನಮೋ ದ್ರಷ್ಟ್ರೇ ನಮಃ ಸ್ರಷ್ಟ್ರೇ ನಮೋಽನಂತ ವಿಕಾಸಿನೇ ।
ನಮಃ ಸರ್ವ ಸ್ವಭಾವಾಯ ನಮಸ್ತೇ ಸರ್ವಗಾತ್ಮನೇ ॥ ೧೦ ॥

ಪ್ರತಿಜನ್ಮ ಚಿರಂ ಬಹ್ವ್ಯೋ ದೀರ್ಘ ದುಃಖವತಾ ಮಯಾ ।
ತ್ವಯಾ ಮಯೋಪದಿಷ್ಟೇನ ದಗ್ಧೇನಾಪಹತೌಜಸಾ ॥ ೧೧ ॥

ಆಲೋಕಿತಾ ಲೋಕದೃಶೋ ದೃಷ್ಟಾ ದೃಷ್ಟಾಂತ ದೃಷ್ಟಯಃ ।
ನ ಪ್ರಾಪ್ತಸ್ತತ್ತ್ವಯಾನೇನ ಕಿಂಚಿದಾಸಾದಿತಂ ಭವೇತ್ ॥ ೧೨ ॥

---

೧೦. (ಸೃಷ್ಟಿಗಿಂತಲೂ ಮುಂಚೆ) ಆದಿಯಲ್ಲಿ ಸೃಜ್ಯಮಾನ ಪ್ರಾಣಿ ವಸ್ತುಗಳ ಕರ್ಮಾನುಗುಣವಾಗಿ ಸೃಷ್ಟಿಸಲ್ಪಡಬೇಕಾದ ಸಕಲ ಜಗತ್ತಿನ ದ್ರಷ್ಟ್ರವಾಗಿರುವ ನಿನಗೆ ನಮಸ್ಕಾರವು. ಬಳಿಕ ಸಕಲವನ್ನೂ ಸೃಷ್ಟಿಸುವವನಾದ ನಿನಗೆ ನಮಸ್ಕಾರವು. ಆಮೇಲೆ ಅನಂತ ರೂಪಗಳಿಂದ ವಿಕಾಸ ಹೊಂದುವ ನಿನಗೆ ವಂದನೆಯು. ಹೀಗೆ ಸರ್ವ ಸ್ವಭಾವನಾಗಿರುವ ನಿನಗೆ ನಮಸ್ಕಾರವು. ಮತ್ತು ಸಕಲ ಜಗದಧಿಷ್ಠಾನ ಭೂತನಾಗಿ, ಸರ್ವಗತನಾಗಿರುವ ಆತ್ಮನಿಗೆ ನಮಸ್ಕಾರವು. [ಸದೇವ ಸೋಮ್ಯೇದ ಮಗ್ರ ಆಸೀತ್ ಏಕಾ ಮೇವಾ-ದ್ವಿತೀಯಂ. ಛಾಂದೋಗ್ಯ ೬-೨-೧. ಎಂದು ಉಪಕ್ರಮಿಸಿ-ತದೈಕ್ಷತ ಬಹುಸ್ಯಾಂ ಪ್ರಜಾಯೇ ಯೇಽತಿ ತತ್ತೇಜೋ ಸೃಜತ. ಎಂಬ ಶ್ರುತಿಯು. ಇದಂ ಶಬ್ದವಾಚ್ಯವಾದ ನಾಮರೂಪ ವ್ಯಾಕೃತವಾದ ಜಗತ್ತನ್ನು ಉತ್ಪತ್ತಿಗಿಂತಲೂ ಮುಂಚೆ, "ಸದೇವ" (ಸತ್+ಏವ) ಎಂದು ಸದ್ರೂಪದಿಂದ ಅವಧಾರಣೆ ಮಾಡಿ, ಸಚ್ಛಬ್ದ ವಾಚ್ಯವೂ, ಪ್ರಕೃತವೂ ಆದ ಅದೇ ಆತ್ಮನ ಈಕ್ಷಣ ಪೂರ್ವಕವಾಗಿ ತೇಜೋಬನ್ನಾದಿಗಳ ಸ್ರಷ್ಟೃತ್ವವನ್ನು ಸ್ಪಷ್ಟವಾಗಿ ತೋರಿಸುತ್ತದೆ. ಆತ್ಮಾವಾ ಇದಮೇಕ ಏವಾಗ್ರ ಆಸೀತ್-ನಾನ್ಯತ್ ಕಿಂಚನ ಮಿಷತ್ (ಚಲತ್) ಸ ಈಕ್ಷತ ಲೋಕಾನ್‌ನು ಸೃಜಾ ಇತಿ. ಸ ಇಮಾನ್ ಲೋಕಾನ್ ಅಸೃಜತ. ಐತ ರೇಯ ೧-೧-೧. ಸ ಈಷಾಂ ಚಕ್ರೇ-ಸ ಪ್ರಾಣಮ ಸೃಜತ ಪ್ರಶ್ನ ೬-೩. ಯಃ ಸರ್ವಜ್ಞ 'ಸ್ಸರ್ವ ವಿದ್ಯಸ್ಯ ಜ್ಞಾನಮಯಂ ತಪಃ । ತಸ್ಮಾದೇತದ್ಬ್ರಹ್ಮ ನಾಮ ರೂಪ ಮನ್ನಂಚ ಜಾಯತೇ. ಮುಂಡಕ ೧-೧೯. ಇವೇ ಮೊದಲಾದ ಸಾವಿರಾರು ಶ್ರುತಿಗಳು ಏಕ ವಾಕ್ಯತೆಯಿಂದ, ಈಕ್ಷಾ ಪೂರ್ವಕವಾದ ಸೃಷ್ಟಿಯನ್ನು ಸರ್ವಜ್ಞ ನಾದ ಈಶ್ವರನೇ ಸಕಲ ಜಗತ್ಕಾರಣನೆಂಬುದನ್ನೂ ವರ್ಣಿಸಿರುವುವು]

೧೧-೧೨. ಎಲೈ ವಿಭುವೇ, ಮದ್ಭಾವಾಪನ್ನನಾಗಿ ಜೀವ ಭೂತನಾದ ನಿನ್ನಿಂದಲೇ, ಸ್ವಕಾಮಾದಿ ದೋಷಾನುಸಾರವಾಗಿ ಉಪದಿಷ್ಟವಾದ ಅಸನ್ಮಾರ್ಗ

ದಿಂದ ನಾನು ಪ್ರವರ್ತಿಸಿದ ಕಾರಣ ಸಕಲ ಪುರುಷಾರ್ಥಗಳಿಂದ ಭ್ರಷ್ಟನಾಗಿ, ಸ್ವಾಭಾವಿಕವಾದ ಈಶ್ವರತ್ವವನ್ನೂ ಕಳೆದುಕೊಂಡು ಅತಿ ದೀರ್ಘಗಳಾದ ದುಃಖ ಪರಂಪರೆಗಳಲ್ಲಿ ಸಿಕ್ಕಿ ನರಳುತ್ತಾ, ಪ್ರತಿಯೊಂದು ಜನ್ಮದಲ್ಲಿಯೂ ಇದುವರೆವಿಗೆ ಬಹುಕಾಲದಿಂದಲೂ, ಸ್ವರ್ಗ, ಮರ್ತ್ಯ, ಪಾತಾಳಾದಿ ಲೋಕಾಂತರಗಳಲ್ಲಿ ಅನೇಕ ಸಂಚಾರ ಭ್ರಮುಗಳನ್ನು ನೋಡಿದೆನು. ಮತ್ತು ವಿವೇಕೋದಯಕ್ಕೆ ಅನುಕೂಲ ವಾಗುವಂತಹ ಅನೇಕ ದೃಷ್ಟಾಂತ ದೃಷ್ಟಿಗಳನ್ನೂ ಕಂಡದ್ದಾಯಿತು. ಆದರೂ ಕೂಡ ಆ ಬಹಿರ್ಲೋಕ ದರ್ಶನದ ದೆಸೆಯಿಂದ, ಮದ್ಭಾವಾಪನ್ನನಾಗಿದ್ದ ನಿನಗೆ ಆಗ ಇಂತಹ ನಿಸ್ನ ಸಾಕ್ಷಾತ್ಕಾರ ಲಾಭವಾಗಲಿಲ್ಲ. ಹೀಗೆ ಬಹಿಃ ಲೋಕತ್ರಯ ದರ್ಶನದಿಂದ ಸ್ವಲ್ಪವಾದರೂ ಪುರುಷಾರ್ಥ ಲಾಭವು ಆಗುವುದೇನು? ಬಾಹ್ಯ ದೃಷ್ಟಿಯಿಂದ ಆತ್ಮಾನ್ವೇಷಣ ಮಾಡುವವರಿಗೆ ಯಾರಿಗೂ, ಹಿಂದೆ ಯಾವಾಗಲೂ, ಆತ್ಮಲಾಭವಾಗಿಲ್ಲ, ಮುಂದೆ ಆಗುವುದೂ ಇಲ್ಲ ಎಂಬುದು ಮುಖ್ಯ ತಾತ್ಪರ್ಯ.

[ಏಷ ಸರ್ವೇಷು ಭೂತೇಷು ಗೂಢಃ ಆತ್ಮಾ (ಆತ್ಮಾ) ನ ಪ್ರಕಾಶತೇ। ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ ಸೂಕ್ಷ್ಮಯಾ ಸೂಕ್ಷ್ಮ ದರ್ಶಿಭಿಃ. ಕಠ. ೧-೩-೧೨. ಅನಾದಿಮಾಯಯಾಸುಪ್ತೋಯದಾ ಜೀವಃ ಪ್ರಬುಧ್ಯತೇ । ಅಜಮನಿದ್ರಂ ಅಸ್ವಪ್ನಂ ಅದ್ವೈತಂ ಬಾಧ್ಯತೇ ತದಾ ॥ ಮಾಂಡೋಕ್ಯೋಪನಿಷತ್ತಿನ ಶ್ರೀ ಗೌಡ ಪಾದೀಯಕಾರಿಕಾ. ಆಗಮ ಪ್ರಕರಣ. ೧೬.

ಈ ಸಂಸಾರಿಯಾದ ಜೀವನು ತತ್ವಾ ಪ್ರತಿಬೋಧ ರೂಪವೂ, ಬೀಜಾತ್ಮಕವೂ ಆದ ಅನ್ಯಥಾ ಗ್ರಹಣ ಮತ್ತು ಅನಾದಿಕಾಲ ಪ್ರವೃತ್ತವಾದ ಮಾಯೆ. ಎಂಬೀ ಎರಡು ಬಗೆಯಾದ ಸ್ವಪ್ನದಿಂದ "ಇವನು ನನ್ನ ತಂದೆ, ಇವನು ಮಗ, ಮೊಮ್ಮಗ, ಇದು ನನ್ನ ಹೊಲ, ಇವು ನನ್ನ ಪಶುಗಳು, ನಾನು ಇವೆಲ್ಲವುಗಳ ಸ್ವಾಮಿಯು. ನಾನು ಸುಖಿ, ದುಃಖಿ, ಈಗ ನಾನು ಕೃಶನಾದೆನು. ಇದರಿಂದ ನಾನು ಪುಷ್ಟಿ ಗೊಂಡೆನು." ಇವೇ ಮೊದಲಾದ ನಾನಾ ಪ್ರಕಾರಗಳಾದ ಸ್ವಪ್ನಗಳನ್ನು ಎಚ್ಚರ ದಲ್ಲಿಯೂ, ಕನಸಿನಲ್ಲಿಯೂ ಒಂದೇ ಸಮನಾಗಿ ಕಾಣುತ್ತಾ ಗುಪ್ತನಾಗಿರುವನು. ಯಾವಾಗ, ವೇದಾಂತಾರ್ಥತತ್ವಾಭಿಜ್ಞನಾದ ಪರಮ ಕಾರುಣಿಕನಾದ ಒಬ್ಬ ಗುರುವಿನಿಂದ "ನೀನು ಹೀಗೆ ಹೇತು ಫಲಾತ್ಮಕನಾದ ಪರಿಚ್ಛಿನ್ನಾತ್ಮನಾಗಿಲ್ಲ. ಆದರೆ ತತ್ ತ್ವಂ ಅಸಿ-ಸತ್ಯಜ್ಞಾನಾನಂದ ರೂಪ ಅದ್ವಿತೀಯಾಖಂಡ ಪರಮಾತ್ಮನೇ ಆಗಿರುವೆ." ಎಂದು ಬೋಧಿಸಲ್ಪಡಲು, ಆಗಲೇ "ತಾನು ಅಜನು. (ಬಾಹ್ಯ ಅಥವಾ ಅಭ್ಯಂತರಗಳಾದ ಜನ್ಮಾದಿ ಯಾವ ಭಾವ ವಿಕಾರವೂ ಇಲ್ಲದವನು.(ಅನಿದ್ರನು (ಜನ್ಮಾದಿಗಳಿಗೆ ಕಾರಣ ಭೂತವಾದ ಅವಿದ್ಯಾತಮೋಬೀಜ ನಿದ್ರೆಯಿಲ್ಲದವನು. ತುರೀ

ಸರ್ವಂ ಮೃತ್ಕಾಷ್ಠ ಪಾಷಾಣವಾರಿ ಮಾತ್ರ ಮಿದಂ ಜಗತ್ ।
ನೇಹಾಸ್ತಿ ತ್ವದೃತೇ ದೇವ ಯತ್ಪ್ರಾಪ್ತೌ ನಾಭಿವಾಂಛತಿ ॥ ೧೩ ॥

ದೇವಾಯಮದ್ಯ ಲಬ್ಧೋಽಸಿ ದೃಷ್ಟೋಽಸ್ಯಧಿಗತೋಽಸಿ ಚ ।
ಸಂಪ್ರಾಪ್ತೋಽಸಿ ಗೃಹಿತೋಽಸಿ ನಮಸ್ತೇಽಸ್ತು ನ ಮುಹ್ಯಸಿ ॥ ೧೪ ॥

ಯೋಽಕ್ಷ್ಣೋಃ ಕನೀನಿಕಾರಶ್ಮಿ ಜಾಲಪ್ರೋತ ವಪುಃ ಸ್ಥಿತಃ ।
ದೇವ ದರ್ಶನ ರೂಪೇಣ ಕಥಂ ಕೋಽತ್ರ ನ ದೃಶ್ಯತೇ ॥ ೧೫ ॥

ಯನು. ಅಸ್ವಪ್ನನು. (ಅನ್ಯಥಾ ಗ್ರಹಣವಿಲ್ಲದವನು) ಅದ್ವೈತನು ಎಂದು ತಾತ್ತ್ವಿಕವಾದ ದೃಢ ನಿಶ್ಚಯವುಳ್ಳವನಾಗುವನು.)

೧೩. ಎಲೈ ದೇವದೇವನೇ, ಈ ಪರಿದೃಶ್ಯಮಾನ ಸಕಲ ಜಗತ್ತೂ-ಮೃತ್ (ಮಣ್ಣು) ಕಾಷ್ಠ (ದಾರು) ಪಾಷಾಣ (ಶಿಲಾ) ಜಲ ಇದಿಷ್ಟು ಮಾತ್ರವೇ ಆಗಿದೆ. ಇಂತಹ ಈ ಜಗತ್ತಿನಲ್ಲಿ ಯಾವುದನ್ನು ಪಡೆದಮೇಲೆ ಪುರುಷಾರ್ಥಾಭಿಲಾಷೆಯು ಪೂರ್ಣವಾಗಿ ಬೇರೊಂದನ್ನು ಬಯಸುವುದಿಲ್ಲವೋ ಅಂತಹ ವಸ್ತುವು ನಿನ್ನ ಹೊರತು, ಬೇರೆ ಯಾವುದೂ ಇಲ್ಲವೇ ಇಲ್ಲ ಆತ್ಮಲಾಭಾಪೇಕ್ಷೆಯಿಂದ ತ್ರೈಲೋಕ್ಯಾಧಿಪತ್ಯವೂ, ಕೇವಲ ತುಚ್ಛವೇ ಸರಿ ("ಬ್ರಹ್ಮವಿದ್ ಆಪ್ನೋತಿ ಪರಂ" "ಆತ್ಮಲಾಭಾನ್ನ ಪರಂ (ಕಿಂಚಿತ್) ವಿದ್ಯತೇ" ಆನಂದ ಮಯಾಧಿಕರಣ ಭಾಷ್ಯ.)

೧೪. ದೇವ, ಈ ನೀನು ಈಗ ನನಗೆ ಲಬ್ಧನಾಗಿರುವೆ, ದೃಷ್ಟನಾಗಿರುವೆ, ಜ್ಞಾತನಾಗಿರುವೆ, ಪ್ರಾಪ್ತನಾಗಿರುವೆ, ಗೃಹೀತನಾಗಿರುವೆ, ನಿನಗೆ ಈ ನಮಸ್ಕಾರವು. ನೀನು ಮೋಹರಹಿತನಾಗಿರುವೆ.

೧೫. ದೇವ, ಯಾವ ಆತ್ಮನು (ನೀನು) ಸರ್ವ ಪ್ರಾಣಿಗಳ ಕಣ್ಣುಗಳಲ್ಲಿ ತಾರಕೆಗಳ (ಕಣ್ಣು ಪಾಪೆ) ಕಿರಣ ಜಾಲಗಳಿಂದ ಸಂಬದ್ಧನಾದ (ಪವಣಿಸಲ್ಪಟ್ಟ ಆಕಾರವುಳ್ಳವನಾಗಿ, ದರ್ಶನ ವೃತ್ತಿ ಪ್ರಥಾ ರೂಪವಿಂದ ಇರುವನೋ ಅಂತಹ ಆತ್ಮನು ಹೇಗೆತಾನೇ ದೃಷ್ಟಿಗೋಚರನಾಗದಿರುವನು?) (ತಾರಕಾ= ಕನೀನಿಕಾ. The pupil of the eye.) ಒಳಗೆನೆಯಲ್ಲಿರುವ ನೀರು ತೂಬುಗಳ ಮೂಲಕ ಹೊರಗೆ ಹೋಗಿ ಕ್ಷೇತ್ರಗಳನ್ನು ಹೊಕ್ಕು ಆಯಾ ಕ್ಷೇತ್ರಗಳು ಯಾವ ಯಾವ ಆಕಾಶದಲ್ಲಿರುವುದೋ ಆಯಾ ಆಕಾರಗಳಾಗಿ ಪರಿಣಮಿಸುವುದೋ, ಅದರಂತೆಯೇ ಅಂತಃಕರಣವು ಚಕ್ಷುರಾದೀಂದ್ರಿಯಗಳ ದ್ವಾರಾ ರೂಪಾದಿ ವಿಷಯಗಳಿರುವ ಸ್ಥಳಕ್ಕೆ

ಯಸ್ತ್ವಕ್ಪ್ಸರ್ಶೌ ಸ್ಪೃಶನ್ಸರ್ವಂ ಗಂಧಂ ತೈಲಂ ತಿಲೇ ಯಥಾ ।
ಸ್ಪರ್ಶಮಂತಃ ಕರೋತ್ಯೇಷ ಸ ಕಥಂ ನಾನು ಭೂಯತೇ ॥ ೧೬ ॥

ಯಃ ಶಬ್ದಶ್ರವಣಾದಂತಃ ಶಬ್ದ ಶಕ್ತಿಂ ಪರಾಮೃಶನ್ ।
ರೋಮಾಂಚಂ ಜನಯತ್ಯಂಗೇ ಸ ದೂರಸ್ಥಃ ಕಥಂ ಭವೇತ್ ॥ ೧೭ ॥

ಹೋಗಿ ಸೇರಿ ಆಯಾ ವಿಷಯಾಕಾರವಾಗಿ ಪರಿಣಮಿಸುವುದು. ಇದೇ ಅಂತಃಕರಣ ವೃತ್ತಿಯು. ಆಗಲೇ ಈ ಅಂತಃಕರಣ ವೃತ್ತ್ಯವಚ್ಛಿನ್ನ ಚೈತನ್ಯವು. ಆಯಾ ವಿಷಯಗಳನ್ನು ಪ್ರತ್ಯಕ್ಷೀಕರಿಸುವುದು." ಎಂದು ಅದ್ವೈತ ವೇದಾಂತ ಪರಿಭಾಷೆ ಯಲ್ಲಿ ವರ್ಣಿತವಾಗಿದೆ. ತಾರ್ಕಿಕರು ಮೊದಲು ಆತ್ಮನು ಮನಸ್ಸಿನೊಂದಿಗೆ ಸೇರು ವನು. ಮನಸ್ಸು ಇಂದ್ರಿಯದೊಂದಿಗೆ ಸೇರುವುದು. ಇಂದ್ರಿಯವು ಆಯಾ ತನ್ನ ವಿಷಯದೊಂದಿಗೆ ಕೂಡಿಕೊಳ್ಳುವುದು. ಆಮೇಲೆ ರೂಪಾದಿ ವಿಷಯಗಳು ಚಕ್ಷುರಾದೀಂದ್ರಿಯಗಳಿಗೆ ಗೋಚರಿಸುವುವು" ಎಂದು ಹೇಳುವರು.)

(ಅಂತರಾಧಿಕರಣ. "ಅಂತರ ಉಪಪತ್ತೇಃ" ಬ್ರಹ್ಮ ಸೂತ್ರ ೧-೨-೧೩. ಇದರಲ್ಲಿ ಅಕ್ಷಿ ಪುರುಷನು ಪರಮಾತ್ಮನೆಂದೇ ಪ್ರತಿಪಾದಿತವಾಗಿರುವುದು.)

೧೬. ಯಾವ ಆತ್ಮನು, ಎಳ್ಳಿನಲ್ಲಿ ಅಂತರ್ಗತವಾದ ಎಣ್ಣೆಯು ತಿಲ ಸಂಯು ಕ್ತವಾದ (ಎಳ್ಳಿನೊಡನೆ ಸೇರಿರುವ) ಪುಷ್ಪ ಗಂಧವನ್ನು ಸ್ವೀಕರಿಸುವಂತೆಯೇ, ತ್ವಗಿಂದ್ರಿಯವನ್ನೂ, ಶೀತೋಷ್ಣಾದಿ ಸ್ಪರ್ಶವನ್ನೂ, ತಾನೇ ಸ್ಪರ್ಶನ ವೃತ್ತಿ ಪ್ರಥಾ ರೂಪದಿಂದ ವ್ಯಾಪಿಸಿಕೊಂಡವನಾಗಿ ಆಯಾ ಶೀತೋಷ್ಣಾದಿ ಸ್ಪರ್ಶಗಳನ್ನು ಪ್ರಕಾಶ ಪಡಿಸುವನೋ, ಇಂತಹ ಆತ್ಮನು ಹೇಗೆ ಅನುಭವ ಗೋಚರನಾಗದಿರುವನು? (ಪ್ರತ್ಯಕ್ಷನಾಗದಿರುವನು ?)

೧೭. ಯಾವ ಆತ್ಮನು ಶಬ್ದವನ್ನು ಕೇಳುವುದರಿಂದ ಒಡನೆಯೇ ತನ್ನೊಳಗೆ ಆ ಶಬ್ದ ಶಕ್ತಿಯನ್ನು ಪ್ರಕಾಶಪಡಿಸುತ್ತ, ಸರ್ವಾಂಗಗಳಲ್ಲಿಯೂ ರೋಮಾಂಚ ವನ್ನುಂಟುಮಾಡುವನೋ, ಅಂತಹ ಆತ್ಮನು (ಪ್ರತ್ಯಕ್ಷನಾಗದೆ) ಹೇಗೆ ತಾನೇ ದೂರಸ್ಥಿತನಾಗುವನು.?

ಜಿಹ್ವಾ ಪಲ್ಲವ ಲಗ್ನಾನಿ ಸ್ವದಿತಸ್ಯಾಗ್ರತೋಽಪಿ ಚ ।
ಸ್ವದಂತೇ ಯಸ್ಯ ವಸ್ತೂನಿ ಸ್ವದತೇ ಸ ನ ಕಸ್ಯ ಚ ॥ ೧೮ ॥

ಪುಷ್ಪಗಂಧಾನುಪಾದಾಯ ಘ್ರಾಣ ಹಸ್ತೇನ ದೇಹಕಂ ।
ಯ ಆಲೋಕಯತಿ ಪ್ರೀತ್ಯಾ ಕಸ್ಯಾಸೌ ನ ಕರೇ ಸ್ಥಿತಃ ॥ ೧೯ ॥

ವೇದ ವೇದಾಂತ ಸಿದ್ಧಾಂತ ತರ್ಕ ಪೌರಾಣ ಗೀತಿಭಿಃ ।
ಯೋ ಗೀತಃ ಸ ಕಥಂ ಹ್ಯಾತ್ಮಾ ವಿಜ್ಞಾತೋ ಯಾತಿ ವಿಸ್ಮೃತಿಂ ॥ ೨೦ ॥

(ಶಬ್ದ ಶಕ್ತಿ= ಸಂಗೀತ ಕಾವ್ಯಾದಿಗಳ ಗುಣ ಚಮತ್ಕಾರ. ತಾತ್ಪರ್ಯ ಪ್ರಕಾಶ.)

೧೮. ಆ ಸ್ವಾದಕ್ಷಮವಾದ ಕೋಮಲವಾಗಿರುವ ಜಿಹ್ವಾಗ್ರ (ನಾಲಿಗೆಯ ತುದಿ) ದಲ್ಲಿ ಸಂಪೃಕ್ತವಾದ ಮಧುರಾಮ್ಲಾದಿ ರಸ ಭರಿತವಾದ ವಸ್ತುಗಳೆಲ್ಲವೂ, ಸ್ವಾರಸಿಕ ಪ್ರೇಮಾಸ್ಪದನಾದ ಯಾವ ಆತ್ಮನಿಗೆ ಆಸ್ವಾದ್ಯಗಳಾಗಿ ಇರುವುವೋ, ಅಂತಹ ಆತ್ಮನು, ಯಾವನಿಗೆ ಎದುರಿನಲ್ಲಿಯೇ ಸುಖ ರೂಪದಿಂದ ಸ್ಫುರಿಸುವುದಿಲ್ಲ? ಎಲ್ಲರಿಗೂ ಸ್ಫುರಿಸುವನು ಎಂದರ್ಥ.

೧೯. ಬೇಕಾದ ವಸ್ತುಗಳನ್ನೂ ಎತ್ತಿಕೊಳ್ಳುವುದಕ್ಕೆ ಕೈ (ಹಸ್ತ) ಸಾಧಕವಾಗಿರುವಂತೆ, ಗಂಧ ಗ್ರಹಣ ಕ್ಷಮರಾದ ಘ್ರಾಣೇಂದ್ರಿಯದಿಂದ (ಮೂಗಿನಿಂದ) ಯಾವ ಆತ್ಮನು, ತನ್ನ ಕಂಠದಲ್ಲಿ ಧರಿಸಿಕೊಂಡಿರುವ ಪುಷ್ಪ ಮಾಲೆಯಲ್ಲಿರುವ ಪುಷ್ಪಗಳ ಪರಿಮಳವನ್ನೂ ಆಸ್ವಾದಿಸಿ ಪುಷ್ಪ ಮಾಲಾಲಂಕೃತವಾದ ತನ್ನ ದೇಹವನ್ನೂ ನೋಡುತ್ತಾ ಸಂತೋಷದಿಂದ ನಲಿಯುವನೋ, ಅಂತಹ ಆತ್ಮನು ಯಾವನಿಗೆ ತಾನೇ, ಅಂಗೈಯಲ್ಲಿರುವಂತೆ ಸ್ಪಷ್ಟವಾಗಿ ಪ್ರತ್ಯಕ್ಷನಾಗದಿರುವನು?

೨೦. ವೇದ ವೇದಾಂತಗಳ ಸಿದ್ಧಾಂತಗಳಿಂದಲೂ, ತದನುಸಾರಿಗಳಾದ ಯುಕ್ತ್ಯನುಭವಾವಿರುದ್ಧಗಳಾದ ಸತ್ತರ್ಕಗಳಿಂದಲೂ ಇತಿಹಾಸ ಪುರಾಣಾದಿಗಳಿಂದಲೂ (ಭಗವದ್ಗೀತಾ, ಶಿವಗೀತಾ ಇತ್ಯಾದಿ) ಗೀತೆಗಳಿಂದಲೂ ಯಾವ ಆತ್ಮನು ಸುಸ್ಪಷ್ಟವಾಗಿ ಪ್ರತಿಪಾದಿತನಾಗಿರುವನೋ ಅಂತಹ ಸರ್ವಾತ್ಮಕನಾಗಿ ಸರ್ವಾನುಭವ ಸಿದ್ಧನಾಗಿರುವ ಆತ್ಮನು ಹೇಗೆ ತಾನೇ ವಿಸ್ಮೃತನಾಗುವನು ? ಎಂದಿಗೂ ವಿಸ್ಮೃತನಾಗುವುದಿಲ್ಲ.

ಸ್ವೈವೇಹ ದೇಹಭೋಗಾಲೀ ಸುಭಗಾಪೀಯಮುದ್ಯ ಮೇ ।
ಅಂತರ್ನ ಸ್ವದತೇ ಸ್ವಚ್ಛೇ ತ್ವಯಿ ನಷ್ಟೇ ಪರಾವರೇ ॥ ೨೧ ॥

ತ್ವಯಾ ವಿಮಲದೀಪೇನ ಭಾನುಃ ಪ್ರಕಟತಾಂ ಗತಃ ।
ತ್ವಯಾ ಶೀತತುಷಾರೇಣ ಚಂದ್ರಃ ಶಿಶಿರತಾಂ ಗತಃ ॥ ೨೨ ॥

ತ್ವಯೈತೇ ಗುರವಃ ಶೈಲಾಸ್ತ್ವಯೈತೇ ದ್ಯುಚರಾ ಧೃತಾಃ ।
ತ್ವಯೈವೇಯಂ ಧರಾ ಧೀರಾ ತ್ವಯೈವಾಂಬರಮಂಬರಂ ॥ ೨೩ ॥

---

೨೧. ಅವಿದ್ಯಾದಿ ಸರ್ವದೋಷ ರಹಿತನಾಗಿ ನಿತ್ಯ ಶುದ್ಧಾತ್ಮನೂ ಪರಾತ್ಪರನೂ ಆಗಿರುವ ನೀನು ಈಗ ನನ್ನಿಂದ ತತ್ತ್ವತಃ ಸ್ವಾತ್ಮ ಭಾವದಿಂದ ಸಾಕ್ಷಾತ್ಕರಿಸಲ್ಪಟ್ಟಿರುವ ಕಾರಣ ಇದುವರೆಗೆ ಚಿರಕಾಲದಿಂದಲೂ ಅತ್ಯಂತ ಸುಭಗವಾಗಿಯೂ ಪ್ರೇಮಾಸ್ಪದವಾಗಿಯೂ ತೋರುತ್ತಿದ್ದ ನನ್ನ ಪೂರ್ವದ ಅದೇ ದೇಹೇಂದ್ರಿಯಾದಿಗಳೇ ಮತ್ತು ಭೋಗ ಸಾಮಗ್ರಿಗಳೇ ಈಗಲೂ ಇರುವುವಾದರೂ ಅದೊಂದೂ ಈಗ ನನ್ನ ಮನಸ್ಸಿಗೆ ಸ್ವಲ್ಪ ಮಾತ್ರವೂ ರುಚಿಸುವುದಿಲ್ಲ. [ಆತ್ಮ ತತ್ತ್ವ ಸಾಕ್ಷಾತ್ಕಾರವಾಗುವುದಕ್ಕಿಂತ ಮೊದಲು ಸುರಸವಾಗಿ ತೋರುತ್ತಿದ್ದ ಐಹಿಕ ಭೋಗ ಸಾಮಗ್ರಿಗಳೆಲ್ಲವೂ ಈಗ ನಿತ್ಯನಿರತಿಶಯಾನಂದಾವಿರ್ಭಾವವಾಗಿರುವ ಕಾರಣ, ನೀರಸವಾಗಿಯೂ ಜುಗುಪ್ಸಾವಹವಾಗಿಯೂ ಪರಿಣಮಿಸಿರುವುವು.]

೨೨. ನಿರ್ಮಲವಾದ ಪ್ರದೀಪವು ಮನೆಯನ್ನೆಲ್ಲ ಬೆಳಗಿಸುವಂತೆ, ಶುದ್ಧ ಚೈತನ್ಯ ರೂಪನಾದ ನಿನ್ನಿಂದಲೇ ಸೂರ್ಯನೂ ಪ್ರಕಾಶಮಯನಾಗಿ ವಿರಾಜಿಸುತ್ತಿರುವನು. ("ಯೇನ ಸೂರ್ಯ ಸ್ತಪತಿ ತೇಜಸೇದ್ಧಃ" ಮತ್ತು ತಮೇವ ಭಾಂತಮನುಭಾತಿ ಸರ್ವಂ, ತಸ್ಯ ಭಾಸಾ ಸರ್ವಮಿದಂವಿಭಾತಿ ಇತ್ಯಾದಿ ಮಂತ್ರಗಳು ಮೇಲಣ ಅರ್ಥವನ್ನು ಸಮರ್ಥಿಸುವುವು) ಮತ್ತು ಶೀತಲವಾದ ಮಂಜು ಗಡ್ಡೆಗಿಂತಲೂ ಹೆಚ್ಚು ತಣ್ಣಗಿರುವ ನಿನ್ನಿಂದಲೇ ಚಂದ್ರನೂ ಶೈತ್ಯವನ್ನು ಪಡೆದು ಶೀತಾಂಶುವೆನ್ನಿಸಿಕೊಂಡಿರುವನು.

೨೩. ನಿನ್ನಿಂದಲೇ ಈ ಪರ್ವತಗಳು ಇಷ್ಟು ಹೆಚ್ಚು ಗುರು (ದೊಡ್ಡವು) ವಾಗಿರುವುವು, ಗಗನ ಮಾರ್ಗ ಸಂಚಾರಿಗಳಾದ ಗ್ರಹಗಳೂ, ಸೂರ್ಯ ಚಂದ್ರರೂ ನಕ್ಷತ್ರಗಳೂ ಮುಂತಾದುವೆಲ್ಲ ನಿನ್ನಿಂದಲೇ ಧರಿಸಲ್ಪಟ್ಟಿರುವುವು ಈ ಭೂಮಿಯು ಸ್ಥಿರವಾಗಿರುವುದೂ ನಿನ್ನಿಂದಲೇ, ಈ ಆಕಾಶವೂ ಕೂಡ ನಿನ್ನಿಂದಲೇ ಅವಕಾಶ ಪ್ರದವಾಗಿರುವುದು.

ದಿಷ್ಟ್ಯಾ ಮತ್ತ್ವಮಸಿ ಪ್ರಾಪ್ತೋ ದಿಷ್ಟ್ಯಾ ತ್ವತ್ತಾಮಹಂ ಗತಃ ।
ಅಹಂ ತ್ವಂ ತ್ವಮಹಂ ದೇವ ದಿಷ್ಟ್ಯಾ ಭೇದೋಽಸ್ತಿ ನಾವಯೋಃ ॥ ೨೪ ॥

ಅಹಂ ತ್ವಮಿತಿ ಶಬ್ದಾಭ್ಯಾಂ ಪರ್ಯಾಯಾಭ್ಯಾಂ ಮಹಾತ್ಮನಃ ।
ತವ ವಾ ಮಮ ವಾ ಶಾಖಾ ಸಂಯುಕ್ತಾಭ್ಯಾಂ ನಮೋನಮಃ ॥ ೨೫ ॥

(ಯೇನಾವೃತಂ ಖಂಚ ದಿವಂಚ ಮಹೀಂಚ ಯೇನಾದಿತ್ಯಸ್ತಪತಿ ತೇಜಸಾ ಭ್ರಾಜಸಾಚ। ಅತಃ ಸಮುದ್ರಾಃಗಿರ ಮಶ್ಚ. ಕುರ್ವೇ ಅಸ್ಮಾತ್ ಸ್ಯಂದಂತೇ ಸಿಂಧವಸ್ಸರ್ವರೂಪಾಃ । ಅತಶ್ಚ ವಿಶ್ವಾ ಓಷಧಯೋ ರಸಾಚ್ಚ॥ -ಮಹಾನಾರಾಯಣೋಪನಿಷತ್.

ಸದಾಧಾರ ಪೃಥಿವೀಂದ್ಯಾಂ, ಸೂರ್ಯಾ ಚಂದ್ರಮಸೌವಿಧೃತೌತಿಸ್ಮೃತಃ ಇತ್ಯಾದಿ ಶ್ರುತ್ಯರ್ಥವನ್ನು ಅನುಸಂಧಾನ ಮಾಡಿರಿ.)

೨೪. ದೇವೇಶ, ನನ್ನ ಅದೃಷ್ಟ ವಿಶೇಷದಿಂದ ಈಗ ನೀನು ಮದ್ಭಾವಾಪನ್ನನಾಗಿರುವೆ. ಹಾಗೆಯೇ ನಾನೂ ನಿನ್ನ ರೂಪವನ್ನು (ಭಾವವನ್ನು) ಹೊಂದಿರುವೆನು (ತ್ವದ್ಭಾವಾಪನ್ನನಾಗಿರುವೆನು) ನಾನೇ ನೀನು, ನೀನೇ ನಾನು ಎಂಬ ವ್ಯತೀಹಾರದಿಂದ ಈಗ ನಮ್ಮಿಬ್ಬರಿಗೂ ಭೇದವೇ ಇಲ್ಲದೆ ಹೋಯಿತು. [ಬ್ರಹ್ಮವಿದ್ ಬ್ರಹ್ಮೈವಭವತಿ, ಸಯ ಏಷೋಣಿಮಾ, ಐತದಾತ್ಮ್ಯಮಿದಂಸರ್ವಂ, ತತ್ ಸತ್ಯ ಸಆತ್ಮಾ, ತತ್ತ್ವಂ ಅಸಿಶ್ವೇತಕೇತೋ] ಇದು ನನ್ನ ಭಾಗ್ಯ.

೨೫. ತತ್ತ್ವಮಸ್ಯಾದಿ ಮಹಾವಾಕ್ಯಗಳಿಗೆ ಲಕ್ಷ್ಯಾರ್ಥವಾದ ಪರಮಾತ್ಮನ ಬೋಧದಲ್ಲಿ ಅಹಂ ಎಂಬುದೂ ತ್ವಂ ಎಂಬುದೂ ಪರ್ಯಾಯಪದಗಳಾಗಿರುವುವು. ಕಾರಣೋಪಾಧಿವಿಶಿಷ್ಟ ವಾಚ್ಯಾರ್ಥವಾದ ನಿನಗೋ ಅಥವಾ ಕಾರ್ಯೋಪಾಧಿ ವಿಶಿಷ್ಟವಾಚ್ಯಾರ್ಥವಾದ ನನಗೋ ಒಂದೇ ವೃಕ್ಷದ ಶಾಖಾದ್ವಯದಂತೆ ಏಕ ದೇಶಭೂತವಾದ ಉಪಾಧಿ ದ್ವಯದಿಂದ ಮಿಥ್ಯೆಯಾಗಿಯೇ ಭೇದವನ್ನೂ ಕಲ್ಪಿಸಿಕೊಂಡಿದ್ದುದರಿಂದ ಈಗ ಸಾಮಾನಾಧಿಕರಣ್ಯದಿಂದ ಒಟ್ಟಿಗೆ ಕಲೆತು ಐಕ್ಯವನ್ನೂ ಪಡೆದಂತೆ ತೋರುವ ಅಹಂ ತ್ವಂ ಎಂಬ ಶಬ್ದಗಳಿಗೆ ಆದರದಿಂದ ವಂದಿಸುವೆನು.

ನಮೋ ಮಹ್ಯಮನಂತಾಯ ನಿರಹಂಕಾರ ರೂಪಿಣೇ ।
ನಮೋ ಮಹ್ಯಮರೂಪಾಯ ನಮಃ ಸಮಸಮಾತ್ಮನೇ ॥ ೨೬ ॥

ಮಯ್ಯಾತ್ಮನಿ ಸಮೇ ಸ್ವಚ್ಛೇ ಸಾಕ್ಷಿ ಭೂತೇ ನಿರಾಕೃತೌ ।
ದಿಕ್ಕಾಲಾದ್ಯನವಚ್ಛಿನ್ನೇ ಸ್ವಾತ್ಮನ್ಯೇವೇಹ ತಿಷ್ಠಸಿ ॥ ೨೭ ॥

ನಮಃ ಪ್ರಕ್ಷೋಭಮಾಯಾತಿ ಸ್ಫುರಂತೀಂದ್ರಿಯ ವೃತ್ತಯಃ ।
ಶಕ್ತಿರುಲ್ಲಸತಿ ಸ್ಫಾರಾ ಪ್ರಾಣಾಪಾನ ಪ್ರವಾಹಿನೀ ॥ ೨೮ ॥

ವಹಂತಿ ದೇಹ ಯಂತ್ರಾಣಿ ಕೃಷ್ಟಾನ್ಯಾಶಾವರತ್ರಯಾ ।
ಚರ್ಮ ಮಾಂಸಾಸ್ಥಿದಿಗ್ಧಾನಿ ನಮಃ ಸಾರಥಿಮಂತಿ ಚ ॥ ೨೯ ॥

ಅಯಂ ಸಂವಿದ್ವಪುರಹಂ ನ ಕಾಚಿನ್ನ ಕೃತಾಸ್ಪದಃ ।
ದೇಹಃ ಪತತು ವೋದೇತು ಯಥಾಭಿಮತಯೇಚ್ಛಯಾ ॥ ೩೦ ॥

---

೨೬. ಅನನ್ತನಾದ ನನಗೆ ನಮಸ್ಕಾರವು, ನಿರಹಂಕಾರ ರೂಪನಾದ ನನಗೆ ನಮಸ್ಕಾರವು. ನಿರಾಕಾರನೂ ಸರ್ವದಾ ಸರ್ವತ್ರ ಏಕರೂಪನೂ ಆಗಿರುವ ನನಗೆ ನಮಸ್ಕಾರವು.

೨೭. ಪರಬ್ರಹ್ಮವೇ, ನೀನು, ಸರ್ವದಾ ಅವಿಕಾರಿಯಾಗಿ ಏಕರೂಪನೂ (ಸಮ)ಸ್ವಚ್ಛನೂ ಸರ್ವಸಾಕ್ಷಿಯೂ ನಿರಾಕಾರನೂ, ದಿಕ್ಕಾಲಾದಿಗಳಿಂದ ಅಪರಿಚ್ಛಿನ್ನನೂ ಸರ್ವಗತನೂ ಸ್ವಾತ್ಮಭೂತನೂ ಆದ ನನ್ನಲ್ಲಿಯೇ ಅಭೇದದಿಂದಿರುವೆ.

೨೮-೨೯. ಈಗ ನನ್ನ ಮನಸ್ಸು ಬಹುವಾಗಿ ಕ್ಷೋಭೆಗೊಳಗಾಗಿರುವುದು. ಚಕ್ಷುರಾದೀಂದ್ರಿಯ ವೃತ್ತಿಗಳೆಲ್ಲವೂ ಸ್ಫುರಿಸುತ್ತಿರುವುವು. ಪ್ರಾಣಾ ಪಾನ ಪ್ರವಾಹ ಯುಕ್ತವಾಗಿರುವ ಶಕ್ತಿಯು ಸ್ಫುರಿಸುತ್ತಾ ಉಲ್ಲಾಸಗೊಂಡಿರುವುದು. ಚರ್ಮ ಮಾಂಸ ಅಸ್ಥಿ (ಮೂಳೆ) ಇತ್ಯಾದಿ ಧಾತುಗಳಿಂದ ಪರಿಪೂರ್ಣವಾಗಿ, ಮನಸ್ಸೆಂಬ ಸಾರಥಿಯಿಂದ ಪ್ರಚೋದಿತವಾಗಿರುವ ದೇಹವೆಂಬ ಯಂತ್ರಗಳು (ರಥಸದೃಶ) ಆಶೆಗಳೆಂಬ ಚರ್ಮರಜ್ಜುಗಳಿಂದ (ಲಗಾಮು) ಸೆಳೆಯಲ್ಪಟ್ಟು ಭ್ರಮಿಸುತ್ತಿರುವುವು.

೩೦. ಈ ನಾನು ಕೇವಲ ಚಿತ್ಸ್ವರೂಪನೇ. ಸಂದೇಹವಿಲ್ಲ. ನಾನು ಪ್ರಾಣ ಧಾರಣಾದಿ ಶಕ್ತಿ ರೂಪನೂ ಅಲ್ಲ, ಮತ್ತು ದೇಹಾಶ್ರಯದಿಂದ ಅಹಂಕಾರಾದಿ ಪದಾರ್ಥರೂಪನೂ ಆಗಿಲ್ಲ. ಈ ದೇಹವು ಈಗಲೇ ಬಿದ್ದು ನಾಶಹೊಂದಿದರೂ ಹೊಂದಲಿ,

ಚಿರಾದಹಮಹಂ ಜಾತಃ ಸ್ವಾತ್ಮಲಾಭಶ್ಚಿರಾದಯಂ ।
ಚಿರಾದುಪಶಮಂ ಯಾತಿ ಕಲ್ಪಸ್ಯಾಂತೇ ಜಗದ್ಯಥಾ ॥ ೩೧ ॥

ಚಿರಾತ್ಸಂಸಾರಗಾಮಿತ್ವಾದ್ದೀರ್ಘೇ ಸಂಸಾರ ವರ್ತ್ಮನಿ ।
ವಿಶ್ರಾಂತೋಽಸ್ಮಿ ಚಿರಂ ಶ್ರಾಂತಃ ಕಲ್ಪಸ್ಯಾಂತ ಇವಾನಲಃ ॥ ೩೨ ॥

ಸರ್ವಾತೀತಾಯ ಸರ್ವಾಯ ತುಭ್ಯಂ ಮಹ್ಯಂ ನಮೋ ನಮಃ ।
ತೇಭ್ಯೋಽಪಿ ಚ ನಮಸ್ತೇಽಸ್ತು ಯೇ ಮಾಂ ತ್ವಾಂ ಪ್ರವದಂತಿ ಚ ॥ ೩೩ ॥

ಅಥವಾ ತನಗೆ ಅಭಿಮತವಾದ ರೀತಿಯಲ್ಲಿ ಯಥೇಚ್ಛವಾಗಿ ಅಭ್ಯುದಯವನ್ನಾದರೂ ಪಡೆಯಲಿ ಇದರಿಂದ ನನಗೆ ಸುಖ ದುಃಖಾದಿಗಳು ಯಾವುದೊಂದೂ ಇಲ್ಲ.

೩೧. ಈ ನಾನು, ಬಹು ಕಾಲಾನಂತರ, ಈಗ ಜನ್ಮವನ್ನು ಎತ್ತಿದೆನು. (ಹಿಂದಿನ ಜನ್ಮಾಂತರಗಳೆಲ್ಲ ನಿರರ್ಥಕ. ಈ ಜನ್ಮದಲ್ಲಿ ಈಗಲೇ ಆತ್ಮ ತತ್ತ್ವ ಸಾಕ್ಷಾತ್ಕಾರವಾದ ಕಾರಣ ಈ ಜನ್ಮವೇ ಪರಮ ಪುರುಷಾರ್ಥಪ್ರದವಾಗಿ ಸಾರ್ಥಕವಾಯಿತು ಎಂದು ತಾತ್ಪರ್ಯ) ಈಗ ನನಗೆ ಚಿರಕಾಲ ಕಳೆದಮೇಲೆ ಈ ಸ್ವಾತ್ಮ ಲಾಭವಾಯಿತು. ಪ್ರಳಯಕಾಲದಲ್ಲಿ ಜಗತ್ತಿನಂತೆ. ನನ್ನ ಪೂರ್ವದ ಭ್ರಾಂತಿಯೆಲ್ಲವೂ ನಿಶ್ಶೇಷವಾಗಿರುವುದು.

೩೨. (ಬಹು) ಅನಾದಿಕಾಲದಿಂದ ಅನೇಕಾನೇಕ ಜನ್ಮ ಮರಣ ಪ್ರವಾಹದಲ್ಲಿ ಸಿಕ್ಕಿ ಬಿದ್ದು ಘೋರವಾದ ಈ ದೀರ್ಘ ಸಂಸಾರ ಮಾರ್ಗದಲ್ಲಿ ಅನವರತವೂ ಭ್ರಮಣ ಶೀಲನಾಗಿದ್ದುದರಿಂದ (ಸುತ್ತುತ್ತಿದ್ದ ಕಾರಣ) ಇದುವರೆವಿಗೂ ಅತಿಯಾಗಿ ಆಯಾಸಗೊಂಡಿದ್ದ ನಾನು, ಕಲ್ಪಾಂತದಲ್ಲಿ ಅಗ್ನಿಯು ಶಾಂತವಾಗುವಂತೆ. ಈ ಸಂಸಾರದಲ್ಲಿ ಈಗ ವಿಶ್ರಾಂತಿ ಪಡೆದಿರುವೆನು.

೩೩. ಸರ್ವಾತೀತನಾಗಿಯೂ ಸರ್ವನಾಗಿಯೂ ಇರುವ ನಿನಗೆ ಅಥವಾ ನನಗೆ ಪುನಃಪುನಃ ನಮಸ್ಕಾರವು. ಮತ್ತು ಯಾವ ಗುರುಗಳೂ ತತ್ತ್ವಮಸ್ಯಾದಿ ವೇದಾಂತಶಾಸ್ತ್ರಗಳೂ ನನ್ನನ್ನೂ ಪರಮಾತ್ಮನಾದ ನಿನ್ನ ಸ್ವರೂಪವೆಂದೇ ಸ್ಪಷ್ಟವಾಗಿ ಉಪದೇಶಿಸುವರೋ, ಅಂತಹವರಿಗೂ ನಿನಗೂ ಈ ನಮಸ್ಕಾರವು.

ಅಖಿಲಾನಂತ ಸಂಭೋಗಾ ನ ಸ್ಪಷ್ಟಾ ದೋಷ ವೃತ್ತಿಭಿಃ ।
ಜಯತ್ಯ ಕೃತ ಸಂರಂಭಾ ಸಾಕ್ಷಿತಾ ಪರಮಾತ್ಮನಃ ॥ ೩೪ ॥

ಆತ್ಮನ್ಪುಷ್ಪ ಇವಾಮೋದೋ ಭಸ್ತ್ರಾಪಿಂಡ ಇವಾನಿಲಃ ।
ತಿಲೇ ತೈಲಮಿವಾಸ್ಮಿಂ ಸ್ತ್ವಂ ಸರ್ವತ್ರ ವಪುಸಿ ಸ್ಥಿತಃ ॥ ೩೫ ॥

ಹಂಸಿ ಪಾಸಿ ದದಾಸಿ ತ್ವಮುವಸ್ಫೂರ್ಜಸಿ ವಲ್ಗಸಿ ।
ಅನಹಂ ಕೃತಿರೂಪೋಽಪಿ ಚಿತ್ರೇಯಂ ತವ ಮಾಯಿತಾ ॥ ೩೬ ॥

(ತ್ವಮಾದಿದೇವಃ ಪುರುಷಃ ಪುರಾಣಃ ತ್ವಮಸ್ಯ ವಿಶ್ವಸ್ಯಪರಂ ನಿಧಾನಂ । ವೇತ್ತಾಸಿ ವೇದ್ಯಂಚ ಪರಂಚ ಧಾಮ ತ್ವಯಾ ತತಂ ವಿಶ್ವಮನಂತರೂಪ॥ -ಗೀತಾ ೧೧-೩೮. ಅನಂತ ವೀರ್ಯಾಮಿತ ವಿಕ್ರಮಸ್ತ್ವಂ ಸರ್ವಂಸಮಾಪ್ನೋಷಿ ತತೋಽಸಿ ಸರ್ವಃ ॥ -೧೧-೪೦)

೩೪. ಪರಮಾತ್ಮನು ಸರ್ವಸಾಕ್ಷಿಯಾಗಿರುವಿಕೆಯು ಅಹಾ ! ಎಂತಹ ಸರ್ವೋತ್ಕೃಷ್ಟವಾದುದು ಏಕೆಂದರೆ ಇದರಲ್ಲಿ ಅಖಿಲ ಸಂಭೋಗಗಳೂ ಅನಂತವಾಗಿರುವುವು. ಆದರೂ ಯಾವ ದೋಷ ವೃತ್ತಿಗಳ ಸಂಪರ್ಕವೂ ಸುತರಾಂ ಈ ಸಾಕ್ಷಿಗೆ ಇಲ್ಲವು. ಆ ಸಾಕ್ಷಿಗೂ ಯಾವುದರಲ್ಲಿಯೂ ಎಳ್ಳಷ್ಟೂ ಅಭಿನಿವೇಶವಿಲ್ಲವೆ ಇಲ್ಲ (ಉದಾಸೀನನಾಗಿಯೇ ಇರುವನು.)

೩೫. ಆತ್ಮನೇ, ಪುಷ್ಪದಲ್ಲಿ ಪರಿಮಳದಂತೆಯೂ, ಚರ್ಮಭಸ್ತ್ರಿಕೆಯಲ್ಲಿ (ತಿದಿ) ವಾಯುವಿನಂತೆಯೂ, ತಿಲದಲ್ಲಿ ತೈಲದಂತೆಯೂ, ನೀನು ಈ ದೇಹದೊಳಗೆ ಸರ್ವತ್ರ (ಶಿರಸ್ಸು ಮೊದಲು ಅಂಗುಷ್ಠ ಪರ್ಯಂತವೂ) ಒಂದೇ ಸಮನಾಗಿ ವ್ಯಾಪಿಸಿಕೊಂಡಿರುವೆ. (ಸರ್ವತ್ರ ಸಾರಭೂತನಾದವನು ಪರಮಾತ್ಮನು-ರಸೋ ವೈಸಃ

೩೬. ಪರಮಾತ್ಮನೇ, ನಾನು ವಸ್ತುತಃ ಅಹಂಕಾರ ಶೂನ್ಯನಾಗಿದ್ದರೂ ಕೂಡ ಜಗತ್ತನ್ನೆಲ್ಲಲಯಪಡಿಸುವೆ. ನೀನೇ ಸಂರಕ್ಷಣೆ ಮಾಡುವೆ, ಅವರವರ ಅಭೀಷ್ಟ ಪ್ರದಾನದಿಂದ ಸಂತೋಷ ಪಡಿಸುವೆ, ನಾನಾ ಬಗೆ ಯಾಗಿ ಗರ್ಜನೆ ಮಾಡಿ ಭಯಗೊಳಿಸುವೆ. ವಿವಿಧ ಸಂಭ್ರಮಗಳನ್ನೂ ತೋರಿ ಬೆರಗುಗೊಳಿಸುವೆ. ಅಹಾ ! ನಿನ್ನ ಮಾಯೆಯು ಅತಿ ವಿಚಿತ್ರವಾದುದು. (ಅನಿರ್ವಾಚ್ಯವಾದುದು)

ಜಯಾಮೀಶ ಜ್ವಲದ್ದೀಪ್ತಿಃ ಸರ್ವ ಮುನ್ಮೀಲಯಜ್ಜಗತ್ ।
ಜಯಾಮ್ಯಪರತಾರಂಭೋ ಜಗದ್ಭಾಯೋ ನಿಮೀಲಯನ್ ॥ ೩೭ ॥

ಪರಮಾಣೋಸ್ತ್ವವೈವಾಂತರಿದಂ ಸಂಸಾರ ಮಂಡಲಂ ।
ಜಡತ್ವಂ ಜಡಧಾನಾಯಾಂ ಬಭೂವಾಸ್ತಿ ಭವಿಷ್ಯತಿ ॥ ೩೮ ॥

---

೩೭. ಎಲೈ ಮಹೇಶನೆ, ಸೃಷ್ಟಿ ಕಾಲದಲ್ಲಿ ಚೈತನ್ಯಾತ್ಮಕವಾದ ನಿನ್ನಿಂದಲೇ ಬಾಹ್ಯಾಭ್ಯಂತರಗಳಾದ ಅರ್ಥಗಳ ಪ್ರಕಾಶನದಿಂದ ಉಜ್ವಲಿತನಾದ ನಾನು ಜೀವ ಭಾವದಿಂದ ಅನುಪ್ರವೇಶಮಾಡಿ, ನಾಮರೂಪಾತ್ಮಕವಾದ ನಿಖಿಲ ಜಗತ್ತನ್ನು ಪ್ರಕಟಪಡಿಸುತ್ತ ನಿನ್ನ ಸ್ವರೂಪದಿಂದಲೇ ಉದಾಸೀನನಾಗಿಯೂ, ವಿಶ್ವಾತೀತನಾಗಿ ಯೂ ಇರುವೆನು.

['ಸೋಽ ಕಾಮಯುತ ಬಹುಸ್ಯಾಂ ಪ್ರಜಾಯೇಯೇತಿ-ಇದಗ್ಂ ಸರ್ವಮಸೃಜಿತ ಯದಿದಂ ಕಿಂ ಚ । ತತ್ ಸೃಷ್ಟ್ವಾ ತದೇವಾನುಪ್ರಾವಿಶತ್ ತದನು ಪ್ರವಿಶ್ಯ-ಸಚ್ಚ ತ್ಯಚ್ಚಾ ಭವತ್ - ನಿರುಕ್ತಂಚಾನಿರುಕ್ತಂಚ-ನಿಲಯನಂಚಾನಿಲಯನಂಚ-ವಿಜ್ಞಾನಂಚಾವಿಜ್ಞಾನಂಚ । ಸತ್ಯಂಚಾ ನೃತಂಚ ಸತ್ಯಮಭವತ್ ಇತ್ಯಾದಿ. ತೈತ್ತಿರೀಯ ಆನಂದವಲ್ಲೀ ೬. ಮತ್ತು ಸೇಯಂ ದೇವತಾ ಐಕ್ಷತ-ಹನ್ತಾಹಮಿಮಾಸ್ತಿಸ್ರೋ ದೇವತಾ ಅನೇನ ಜೀವೇನಾತ್ಮನಾ ಅನುಪ್ರವಿಶ್ಯ ನಾಮ ರೂಪೇ ವ್ಯಾಕರವಾಣೀತಿ ಇತ್ಯಾದಿ. -ಛಾಂದೋಗ್ಯ. ೬-೩-೨.]

೩೮. ಅತಿ ಸೂಕ್ಷ್ಮವಾದ ಒಂದು ಆಲದ ಬೀಜದಲ್ಲಿ ದೊಡ್ಡ (ಶಾಖೋಪಶಾಖೆಗಳಿಂದ ಉಪಬೃಂಹಿತವಾದ) (ವಟತ್ವ ಜಾತಿ). ಒಂದು ಆಲದ ಮರವು ಅಡಗಿರುವಂತೆ ಪರಮಾಣುವಿಗಿಂತಲೂ, ಅತಿ ಸೂಕ್ಷ್ಮವಾಗಿರುವ ನಿನ್ನ ಒಳಗೆಯೇ ಅಖಂಡವಾದ ಈ ಸಂಸಾರ (ಜಗತ್ತು) ಮಂಡಲವೂ, ಕಾಲತ್ರಯದಲ್ಲಿಯೂ ನೆಲೆಸಿರುವುದು. (ಇತ್ತು-ಇದೆ-ಇರುವುದು.)

(" ಅಣೋರಣೀಯಾನ್ ಮಹತೋ ಮಹೀಯಾನಾತ್ಮಾ ಗುಹಾಯಾಂ ನಿಹಿತೋಽಸ್ಯಜನ್ತೋಃ" -ಮಹಾ ನಾರಾಯಣ ೧೨ ಅನುವಾಕ. ಆತ್ಮನು ಅಣುವಿಗಿಂತಲೂ ಅಣುವು. ಮಹತ್ತಿಗಿಂತಲೂ ಮಹತ್ತು ಎಂದು ಹೇಳಿದೆ.)

ಹಯುದ್ವಿ ಪರಥಾಕಾರ್ಯೈರ್ಯದ್ವತ್ಫೀ ದೃಶ್ಯತೇಽ ಮ್ಬುದಃ ।
ತದ್ವದಾಲೋಕ್ಯಸೇ ದೇವ ಪದಾರ್ಥ ಶತ ವಿಭ್ರಮೈಃ ॥ ೩೯ ॥

ಭಾವಾನಾಂ ಭೂರಿ ಭಂಗಾನಾಮಭವಾಯ ಭವಾಯ ಚ ।
ಭವ ಭಾವ ವಿಮುಕ್ತಾತ್ಮಾ ಭಾವಾಭಾವ ಬಹಿಷ್ಕೃತಃ ॥ ೪೦ ॥

[ಮೃತ್ತಿನೊಳಗೆ ಘಟಾದಿಗಳಂತೆಯೂ, ದಾರ್ವಾದಿಗಳೊಳಗೆ ಬೊಂಬೆಗಳಂತೆಯೂ, ಕಾರ್ಯವು ಕಾರಣದೊಳಗೆ ಅನಭಿವ್ಯಕ್ತವಾಗಿದ್ದೂ, ಈಗ ಅಭಿವ್ಯಕ್ತವಾಗಿ ಪುನಃ ಕಾರಣದೊಳಗೆಯೇ ಲಯ ಹೊಂದಿ ಕಾರಣರೂಪವಾಗಿಯೇ ಆಗುವುದು ಎಂಬುದು ಸತ್ಕಾರ್ಯವಾದಿಗಳಾದ ವೇದಾಂತಿಗಳ ಮತ. "ಸದೇವ ಸೋಮ್ಯೇದಮಗ್ರ ಆಸೀತ್ ಏಕಮೇವಾ ದ್ವಿತೀಯಂ."]

೩೯. ದೇವ, ಅಂತರಿಕ್ಷದಲ್ಲಿ ಮೇಘವು ಹೇಗೆ ಕುದುರೆ, ಆನೆ, ರಥ ಇತ್ಯಾದ್ಯಾಕಾರಗಳಿಂದ ಒಂದೊಂದು ಸಲ ಒಂದೊಂದು ರೂಪವಾಗಿ ಹೇಗೆ ಕಾಣಿಸುವುದೋ, ಅದೇ ರೀತಿಯಲ್ಲಿ ನೀನೂ ಈ ಜಗತ್ತಿನಲ್ಲಿ ಮಾಯಾ ವಿಜೃಂಭಿತಗಳಾದ ನಾನಾ ಪದಾರ್ಥ ರೂಪದಿಂದ ಬಗೆಬಗೆಯಾಗಿ ಕಾಣಿಸಿಕೊಳ್ಳುವೆ.

೪೦. (ಈಗ ಸ್ವಯಂ ಮುಕ್ತಾತ್ಮನಾದ ಪ್ರಹ್ಲಾದನು ಸ್ವಾಭಿನ್ನನಾದ ಬದ್ಧಾತ್ಮನಿಗೆ ಮೋಕ್ಷೋಪಾಯವನ್ನು ಉಪದೇಶಿಸುವನು) ಎಲೈ ಬದ್ಧಾತ್ಮನೇ, ನೀನು ಮೊದಲು ಅಸಂಗಾತ್ಮ ದರ್ಶನಕ್ಕಾಗಿ ಪ್ರಯತ್ನಿಸು. ಇದರಿಂದ ಪ್ರಾಪಂಚಿಕವಾದ ಸಕಲ ಭಾವಾಭಾವಗಳಿಂದ ನೀನು ಬಹಿಷ್ಕೃತನಾಗಿ ನಿತ್ಯಾನಿತ್ಯ ವಸ್ತು ವಿವೇಕವನ್ನು ಪಡೆಯುವೆ. ಬಳಿಕ ಚಿರಕಾಲಾಭ್ಯಸ್ತವಾದ ಆತ್ಮೈಕತ್ವ ಭಾವನಾ ದಾರ್ಢ್ಯದಿಂದಲೇ ನೀನು ಸರ್ವದಾ ವಿಮುಕ್ತಾತ್ಮನಾಗಿರು. ಪುನಃ ಬಂಧಕ್ಕೆ ಒಳಗಾಗಬೇಡ. ಆತ್ಮ ಸಾಕ್ಷಾತ್ಕಾರದಿಂದ ವಿವಿಧ ವಿಕಾರ ಸ್ವಭಾವಗಳಾದ ಸಂಸಾರ ಭ್ರಮಗಳೆಲ್ಲವೂ ಬಂಧಿತಗಳಾಗುವುವು. ನಿನಗೆ ನಿತ್ಯ ನಿರತಿಶಯಾನಂದ ಸ್ವರೂಪಾವಿರ್ಭಾವವಾಗುವುದು.

ಜಹಿ ಮಾನಂ ಮಹಾ ಕೋಪಂ ಕಾಲುಷ್ಯಂ ಕ್ರೂರತಾಂ ತಥಾ ।
ನ ಮಹಾಂತೋ ವಿಮಜ್ಜಂತಿ ಪ್ರಾಕೃತೇ ಗುಣ ಸಂಕಟೇ　　॥ ೪೧ ॥

ಪ್ರಾಕ್ತನೀಂ ದೀರ್ಘ ದೌರಾತ್ಮ್ಯದಶಾಂ ಸ್ಮೃತ್ವಾ ಪುನಃ ಪುನಃ ।
ಕೋಽಹಂ ಕಿಂ ತದ್ಬಭೂವೇತಿ ಹಸನ್ಮುಕ್ತಾಚ್ಛಟಾಸಿ ತಂ　　॥ ೪೨ ॥

ತೇ ಪ್ರಯಾತಾಃ ಸಮಾರಂಭಾ ಗತಾಸ್ತೆ ದಗ್ಧವಾಸರಾಃ ।
ಯೇಷು ಚಿಂತಾನಲ ಜ್ವಾಲಾ ಜಾಲಾಕೀರ್ಣೋ ಭವಾನಭೂತ್　　॥ ೪೩ ॥

[" ಬ್ರಹ್ಮವಿದಾ ಪ್ನೋತಿಪರಂ " ' ತರತಿ ಶೋಕ ಮಾತ್ಮವಿತ್, " ತಮೇವಂ ವಿದ್ವಾನ್ ಅಮೃತ ಇಹ ಭವತಿ-ನಾನ್ಯಃ ಪಂಥಾಃ ಅಯನಾಯ ವಿದ್ಯತೇ."]

೪೧. ಚಿರಕಾಲದಿಂದ ಬೆನ್ನಂಟಿಕೊಂಡಿರುವ ಅಭಿಮಾನವನ್ನೂ, ಮಹಾನರ್ಥ ಕಾರಿಯಾದ ಕೋಪವನ್ನೂ, ಮಾನಸಿಕವಾದ ಶೋಕ ಮೋಹಾದಿ ಮಾಲಿನ್ಯವನ್ನೂ ಮತ್ತು ಕ್ರೌರ್ಯವನ್ನೂ ನಿಶ್ಶೇಷವಾಗಿ ಸಂಹರಿಸು. (ಪರಿತ್ಯಜಿಸು). ಮಹಾತ್ಮ ರಾದವರು ಯಾರೂ ಪ್ರಕೃತಿ ಸಂಬಂಧವಾದ ಗುಣ ಸಂಕಟಗಳಲ್ಲಿ ಮುಣುಗುವುದಿಲ್ಲ.

೪೨. ಶಾಸ್ತ್ರಾಚಾರ್ಯೋಪದೇಶ ವಚನಗಳನ್ನು ಪುನಃ ಪುನಃ ಸ್ಮರಿಸುತ್ತಲೂ, " ನಾನು ಯಾರು ? ನನಗೆ ಉಂಟಾಗಿರುವ ಈ ಸಂಸಾರ ಬಂಧವು ಯಾವುದು ? ಇತ್ಯಾದಿ ವಿಚಾರಗಳನ್ನು ವಿವೇಕದಿಂದ ಪರ್ಯಾಲೋಚಿಸುತ್ತಲೂ, ಮುಕ್ತಾಫಲ ದ್ಯುತಿಯಂತೆ ಶುಭ್ರವಾದ ಮಂದಹಾಸವನ್ನು ಬೀರುತ್ತಲೂ, ಪೂರ್ವದಿಂದಲೂ ನಿನ್ನನ್ನು ಅನುಸರಿಸಿಕೊಂಡು ಬಂದಿರುವ ಅತಿ ದೀರ್ಘವಾದ ದೌರಾತ್ಮ್ಯ ದಶೆಯನ್ನು ಸರ್ವಥಾ ಸಂಹರಿಸಿ ಕೊನೆಗಾಣಿಸು.

೪೩. ನೀನು ಇಷ್ಟು ದಿವಸಗಳೂ, ಅಪಾರವಾದ ಚಿಂತಾ ಜಾಲಗಳೆಂಬ ಅಗ್ನಿ ಜ್ವಾಲಾ ಮಾಲೆಗಳಲ್ಲಿ ನಿಮಗ್ನನಾಗಿ ಅತಿಯಾಗಿ ಸಂತಪ್ತನಾಗಿದ್ದೆ. ಈಗ ಆ ಹಾಳು ದಿವಸಗಳೆಲ್ಲವೂ ತೊಲಗಿ ಹೋದವು. ಆಗಣ ಆ ಕಾರ್ಯಾರಂಭಗಳೂ ಈಗ ಬಿಟ್ಟು ಹೋದವು.

ಅದ್ಯ ತ್ವಂ ದೇಹನಗರೇ ರಾಜಾ ಸ್ಫಾರ ಮನೋರಥ ।
ನ ದುಃಖೈರ್ಗೃಹ್ಯಸೇ ನಾಪಿ ದುಃಖೈರ್ವ್ಯೋಮ ಕರೈರಿವ ॥ ೪೪ ॥

ಅದ್ಯೇಂದ್ರಿಯ ದುರುಶ್ವಾಂಶ್ಚ ಜಿತ್ವಾ ಜಿತ ಮನೋಗಜಃ ।
ಭೋಗಾರಿಮಭಿತೋ ಭಙ್ಕ್ತ್ವಾ ಸಾಮ್ರಾಜ್ಯಮಭಿತಿಷ್ಠಸಿ ॥ ೪೫ ॥

ಅಪಾರಾಂಬರ ಪಾಂಥಸ್ತ್ವಮಜಸ್ರಾಸ್ತಮಯೋದಯಃ ।
ಅವಭಾಸಕರೋ ನಿತ್ಯಂ ಬಹಿರಂತಶ್ಚ ಭಾಸ್ವರಃ ॥ ೪೬ ॥

---

೪೪. ನೀನು ಈಗ ಈ ದೇಹವೆಂಬ ರಾಜಧಾನಿಯಲ್ಲಿ ಮಹಾರಾಜನಾಗಿ ಸುಖವಾಗಿರುವೆ. ನಿನ್ನ ಮನೋರಥಗಳೆಲ್ಲವೂ ಫಲಿಸಿದುವು. ನೀನು ಆಪ್ತ ಕಾಮನಾಗಿ ಪರಿಪೂರ್ಣನಾದೆ. ಮುಷ್ಟಿಗಳಿಂದ ಆಕಾಶವು ಹಿಡಿಯಲ್ಪಡದಿರುವಂತೆಯೇ ನೀನು ಪ್ರಾಪಂಚಿಕ ದುಃಖಗಳಿಂದಲೂ, ಸುಖಾಭಾಸಗಳಿಂದಲೂ ಗ್ರಹಿಸಲ್ಪಡದೆ ಇರುವೆ. (ಬದ್ಧನಾಗದಿರುವೆ.)

೪೫. ಈಗ ನೀನು, (ಬಾಹ್ಯ) ಇಂದ್ರಿಯಗಳೆಂಬ ದುಷ್ಟಾಶ್ವಗಳನ್ನು (ದುರ್ಮಾರ್ಗಕ್ಕೆ ಸೆಳೆದುಕೊಂಡು ಹೋಗುತ್ತಿದ್ದ) ಸ್ವಾಧೀನಪಡಿಸಿಕೊಂಡು, ಬಹುವಾಗಿ ಹಾವಳಿ ಮಾಡುತ್ತಿದ್ದ ಮನಸ್ಸೆಂಬ ಮದಿಸಿದ ಆನೆಯನ್ನು ಗೆದ್ದು ಎಲ್ಲೆಲ್ಲಿಯೂ ಅಡಗಿಕೊಂಡಿದ್ದ ಭೋಗಗಳೆಂಬ ಶತ್ರುಗಳನ್ನು ತಲೆಯೆತ್ತದಂತೆ ಭಂಗಪಡಿಸಿ (ನಿಗ್ರಹಿಸಿ) ದಿವ್ಯವಾದ ಸಾಮ್ರಾಜ್ಯ ಪದವಿಯನ್ನು ಅನುಭವಿಸುತ್ತಿರುವೆ.

೪೬. ಪ್ರಸಿದ್ಧ ಸೂರ್ಯನು ಅಪಾರವಾದ ಗಗನ ಮಾರ್ಗದಲ್ಲಿ ಸಂಚರಿಸುತ್ತ ನಿತ್ಯವೂ ಅಸ್ತೋದಯಗಳನ್ನು ಅನುಭವಿಸುತ್ತಾ ತನ್ನ ತೇಜಸ್ಸಿನಿಂದ ಅಂಧಕಾರವನ್ನು ಕಳೆದು ಸಕಲಾರ್ಥಗಳನ್ನು (ಸಕಲ ಪದಾರ್ಥಗಳನ್ನು) ಪ್ರಕಾಶಗೊಳಿಸುವಂತೆ ಆಕಾಶದಂತೆ ಅಪಾರವಾದ ಈ ಸಂಸಾರ ಮಾರ್ಗದಲ್ಲಿ ನಿರ್ಲಿಪ್ತನಾಗಿಯೇ ವ್ಯವಹರಿಸುತ್ತಲೂ ಅವಿದ್ಯಕ ದೃಷ್ಟಿಯಿಂದ ಅಸ್ತಂಗತನಾಗುತ್ತಲೂ ಪಾರಮಾರ್ಥಿಕ ಸ್ವಾತ್ಮ ದೃಷ್ಟಿಯಿಂದ ಉದಯಿಸುತ್ತಲೂ (ಅಥವಾ ಸಂತತವೂ ಜಗತ್ತಿನ ಪ್ರಳಯ ಸೃಷ್ಟಿಗಳನ್ನು ನಿರ್ವಹಿಸುತ್ತಲೂ) ಸ್ವಾಭಾವಿಕವಾದ ಜ್ಞಾನ ಶಕ್ತಿಯಿಂದ ಸರ್ವದಾ ಬಾಹ್ಯಾಭ್ಯಂತರಗಳಾದ ಅಜ್ಞಾನಗಳೆಂಬ ಅಂಧಕಾರಗಳನ್ನು ಧ್ವಂಸಮಾಡುತ್ತಲೂ ಸರ್ವಾವಭಾಸಕನಾಗಿರುವ ಪರಮ ಭಾಸ್ಕರನು, (ಸತ್ಯ ಜ್ಞಾನಾತ್ಮಕನೂ) ನೀನೇ ಆಗಿರುವೆ.

ಸರ್ವ ದೈವಾಸಿ ಸಂಸುಪ್ತಃ ತಕ್ತ್ಯಾ ಸಂಬೋಧ್ಯಸೇ ವಿಭೋ ।
ಭೋಗಾಲೋಕನ ಲೀಲಾರ್ಥಂ ಕಾಮಿನ್ಯಾ ಕಾಮುಕೋ ಯಥಾ ॥ ೪೭ ॥

ದೃಕ್ಸ್ಪೃದ್ರಾಭಿರುಪಾನೀತಂ ದೂರಾದ್ರೂಪಮಧು ತ್ವಯಾ ।
ಪೀಯತೇ ಸ್ವೀಕೃತಂ ಶಕ್ತ್ಯಾ ನೇತ್ರವಾತಾಯನಸ್ಥಯಾ ॥ ೪೮ ॥

ಬ್ರಹ್ಮಾಂಡ ಕೋಟರಾಧ್ವಾಂತಾಃ ಪ್ರಾಣಾಪಾನ ಪರೈಸ್ತ್ವಯಾ ।
ಗತಾಗತೈ ರ್ಬ್ರಹ್ಮಪುರೇ ಸಂಪ್ರೇಕ್ಷ್ಯಂತೇ ಪ್ರತಿ ಕ್ಷಣಂ ॥ ೪೯ ॥

ನತಸ್ಯ ಕಾರ್ಯಂ ಕರಣಂ ಚ ವಿದ್ಯತೇ–ನತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ । ಪರಾಸ್ಯ ಶಕ್ತಿಃ ವಿವಿಧೈವಶ್ರೂಯತೇ-ಸ್ವಾಭಾವಿಕೀ ಜ್ಞಾನ ಬಲ ಕ್ರಿಯಾ ಚ ॥ ಶ್ವೇತಾಶ್ವ. ಅಥಾಯಮ ಶರೀರೋ ऽ ಮೃತಂ ಪ್ರಾಣೋಬ್ರಹ್ಮೈವತೇಜ ಏವ. ಬೃಹದಾರಣ್ಯಕ. ೪. ೪. ೭

೪೭. ಸರ್ವಗತನಾದ ವಿಭುವೇ, ಅನಾದಿಕಾಲದಿಂದಲೂ ನೀನು ಸುಪ್ತನಾಗಿಯೇ ಇರುವೆ. ಕಾಮಿನಿಯು ಮಲಗಿರುವ ಕಾಮುಕನನ್ನು ಭೋಗಾಲೋಕನ ವಿನೋದಕ್ಕಾಗಿ ನಿದ್ರೆಯಿಂದ ಎಚ್ಚರಗೊಳಿಸುವಂತೆ ಭೋಜಕಾ ದೃಷ್ಟ ಶಕ್ತಿಯು ಭೋಗಾಲೋಕನ ಲೀಲೆಗೋಸ್ಕರ (ತಾವನ್ಮಾತ್ರವೇ) ನಿನ್ನನ್ನು ಪ್ರಬೋಧಗೊಳಿಸುವುದು.

೪೮. (ಭೋಗಾಲೋಕನ ಲೀಲೆಯನ್ನೇ ವಿಶದಗೊಳಿಸುವನು.) ಚಕ್ಷುರಾದೀಂದ್ರಿಯ ವೃತ್ತಿಗಳೆಂಬ ಜೇನು ನೊಣಗಳು ರೂಪಾದಿ ವಿಷಯಗಳೆಂಬ ಮಧುವನ್ನು, ಬಹು ದೂರದಲ್ಲಿರುವ ಯಾವುದೋ ಪ್ರದೇಶದಿಂದ ಕಷ್ಟಪಟ್ಟು ಹೊತ್ತುಕೊಂಡು ಬಂದು ಒಂದು ಕಡೆ ಕೂಡಿಡುವುವು. ಅದನ್ನು ನೀನು ಚಕ್ಷುರಾದೀಂದ್ರಿಯಗಳೆಂಬ ಗವಾಕ್ಷಗಳಲ್ಲಿ ಇರುವ ಚಿಚ್ಛಕ್ತಿಯಿಂದ ತೆಗೆದುಕೊಂಡು ಪಾನ ಮಾಡುವೆ.

೪೯. ಪ್ರಾಣಾಪಾನ ವಾಯುಗಳ ನಿರೋಧಾಭ್ಯಾಸತತ್ಪರರಾದ ಯೋಗೀಶ್ವರರು ಬ್ರಹ್ಮ ಸಾಕ್ಷಾತ್ಕಾರಕ್ಕೆ ಅಧಿಷ್ಠಾನವಾದ ಈ ದೇಹದಲ್ಲಿ, ಪ್ರತಿಕ್ಷಣದಲ್ಲಿಯೂ ಚಿರಕಾಲ ಅಭ್ಯಾಸ ಮಾಡಿದ, ಹೃದಯ ಸಂಪಿಂಡಿತಗಳಾದ ಪ್ರಾಣ ವಾಯುಗಳ ಉತ್ಕ್ರಮಣ ಪರಕಾಯ ಪ್ರವೇಶ ಲೋಕಾಂತರ ಸಂಚಾರಾದಿ ಸ್ವೇಚ್ಛಾ ವಿಹಾರಾನುಕೂಲಗಳಿಂದ ನಾನಾ ನಾಡೀ ಸಂಚಾರಗಳಿಂದ ಮತ್ತೊಂದು ಬ್ರಹ್ಮಾಂಡಕ್ಕೆ ಅಥವಾ ಅರ್ಚಿರಾದಿ

ದೇಹಪುಷ್ಪೇ ತ್ವಮಾಮೋದೋ ದೇಹೇಂದೌ ತ್ವಮೃತಾಮೃತಂ ।
ರಸಸ್ತ್ವಂ ದೇಹವಿಟಪೇ ಶೈತ್ಯಂ ದೇಹಹಿಮೇ ಭವಾನ್ ॥ ೫೦ ॥

ತ್ವಯ್ಯಸ್ತಿ ವಿಸ್ಮಯ ಸ್ನೇಹಃ ಶರೀರ ಕ್ಷೀರ ಸರ್ಪಿಷಿ ।
ತ್ವಮಂತರಸ್ಯ ದೇಹಸ್ಯ ದಾರುಣ್ಯಗ್ನಿರಿವ ಸ್ಥಿತಃ ॥ ೫೧ ॥

ಮಾರ್ಗದಿಂದ ಸೂರ್ಯಮಂಡಲಕ್ಕೆ ಹೋಗುವುದಕ್ಕೋಸ್ಕರ, ಬ್ರಹ್ಮಾಂಡ ಕೋಟರದ ಮತ್ತು ಬ್ರಹ್ಮರಂಧ್ರದ ಸಂಬಂಧಿಗಳಾದ ಸುಷುಮ್ನಾದಿ ಮಾರ್ಗ ಪರ್ವಗಳನ್ನು ಸ್ವಯಂ ಜ್ಯೋತಿ ಸ್ವರೂಪನಾದ ನಿನ್ನ ಸಹಾಯದಿಂದಲೇ ಸ್ಪಷ್ಟವಾಗಿ ಕಂಡುಹಿಡಿಯುವರು.

("ಹೃದಯಸ್ಯಾಗ್ರಂ ಪ್ರದ್ಯೋತತೇ ತೇನ ಪ್ರದ್ಯೋತೇನ ಏಷಃ ಆತ್ಮಾ ನಿಷ್ಕ್ರಾಮತಿ.")

[ಎಲ್ಲರಿಗೂ ಮರಣ ಕಾಲದಲ್ಲಿ ನಾಡೀ ದ್ವಾರ ಪ್ರಕಾಶವು ಆತ್ಮ ಜ್ಯೋತಿಯ ಅಧೀನವಾದುದೇ ಆದಾಗ್ಯೂ ಯೋಗಿಗಳಲ್ಲದವರು ಕಫ ಪಿತ್ತಾದಿ ಪೀಡಾ ಪರವಶತೆ ಯಿಂದ ಅವಧಾನಾಶಕ್ತರಾಗುವರು. ಯೋಗಿಗಳಾದರೋ ಅಭ್ಯಾಸ ಕಾಲದಲ್ಲಿಯೂ, ಮರಣ ಕಾಲದಲ್ಲಿಯೂ ಕೂಡ ಸಾವಧಾನರಾಗಿರುವ ಕಾರಣ. ಇಲ್ಲಿ ಯೋಗಿಗಳೇ ಉದಾಹೃತರಾಗಿದ್ದಾರೆ.]

೫೦. ದೇವ, ದೇಹವೆಂಬ ಪುಷ್ಪದಲ್ಲಿ ಪರಿಮಳವಾಗಿರುವವನು ನೀನೇ. ನೀನೇ ದೇಹವೆಂಬ ಚಂದ್ರನಲ್ಲಿ ಪರಮಾರ್ಥ ಸತ್ಯವಾದ ಅಮೃತವಾಗಿರುವೆ. ದೇಹವೆಂಬ ವೃಕ್ಷ ಶಾಖೆಯಲ್ಲಿ ಪಲ್ಲವಾದಿಗಳು ಉದ್ಭವಿಸುವುದಕ್ಕೆ ನಿಮಿತ್ತವಾದ ರಸವೂ ನೀನೇ ಆಗಿರುವೆ. ಮತ್ತು ದೇಹವೆಂಬ ಹಿಮದಲ್ಲಿಯೂ ನೀನೇ ಶೈತ್ಯವಾಗಿರುವೆ.

೫೧. ಕ್ಷೀರಕ್ಕೆ ಘೃತವು ಹೇಗೆ ಸಾರಭೂತವಾದುದೋ ಹಾಗೆ ನೀನು ಈ ಪ್ರಾಣಿ ಶರೀರಗಳಲ್ಲಿ ಸಾರಭೂತನಾಗಿರುವೆ. ಘೃತದಲ್ಲಿ ಸ್ನೇಹ (ಜಿಡ್ಡು) ಇರುವಂತೆ ಸಕಲ ಪ್ರಾಣಿಗಳ ಶರೀರದಲ್ಲಿ ಗರ್ವಕ್ಕೆ ಹೇತುವಾದ ಸ್ನೇಹವು (ಅಭಿಮಾನವು) ನಿನ್ನಲ್ಲಿಯೇ ಇರುವುದು. ಏಕೆಂದರೆ ನೀನು ಶರೀರದಲ್ಲಿ ಅಭಿಮಾನವನ್ನು ತೊರೆದರೆ ಸ್ನೇಹವು ಕಾಣುವುದೇ ಇಲ್ಲವು. ಮತ್ತು ದಾರುವಿನೊಳಗೆ (ಕಾಷ್ಠ ವಿಶೇಷ) ಅಗ್ನಿಯಂತೆ. ನೀನು ಈ ದೇಹದೊಳಗೆ ಅಡಗಿಕೊಂಡಿರುವೆ.

ತ್ವಮೇವಾನುತ್ತಮಸ್ವಾದಃ ಪ್ರಾಕಾಶ್ಯಂ ತೇಜಸಾಮಪಿ ।
ಅವಗಂತಾ ತ್ವಮರ್ಥಾನಾಂ ತ್ವಂ ಭಾಸಾಮವಭಾಸಕಃ ॥ ೫೨ ॥

ಸ್ಪಂದಸ್ತ್ವಂ ಸರ್ವ ವಾಯೂನಾಂ ತ್ವಂ ಮನೋಹಸ್ತಿನೋ ಮದಃ ।
ಪ್ರಜ್ಞಾನಲ ಶಿಖಾಯಾಸ್ತ್ವಂ ಪ್ರಕಾಶ್ಯಂ ತೈಕ್ಷ್ಣ್ಯಮೇವ ಚ ॥ ೫೩ ॥

ತ್ವದ್ವಶಾದಿಯಮಾತ್ಮೀಯಾ ವಾಚಾ ಸಂಪ್ರವಿಲೀಯತೇ ।
ದೀಪವತ್ಪುನರನ್ಯತ್ರ ಸಮುದೇತಿ ಕುತೋಽಪಿ ಸಾ ॥ ೫೪ ॥

---

೫೨. ಲೋಕೋತ್ತರಾತ್ಯಂತ ಮಧುರವಾದ ಅಮೃತ ಸ್ವರೂಪನೂ ನೀನೇ. ಸೂರ್ಯ ಚಂದ್ರಾದಿ ತೇಜಸ್ಸುಗಳಿಗೆಲ್ಲ ಅಧಿದೈವವಾದ ಪ್ರಕಾಶ ನಿಮಿತ್ತವೂ ನೀನೇ. ಸಕಲ ವಿಷಯುಗಳನ್ನೂ (ಅರ್ಥ) ತಿಳಿಯತಕ್ಕವನೂ ನೀನೇ ಮತ್ತು ಅಧ್ಯಾತ್ಮ ಗಳಾದ ಚಕ್ಷುರಾದಿ ಕರಣಾತ್ಮಕ ತೇಜಸ್ಸುಗಳ ಅವಭಾಸಕನೂ ನೀನೇ ಆಗಿರುವೆ.

[ಸವೇತ್ತಿ ವೇದ್ಯಂ ನಚತಸ್ಯಾಸ್ತಿ ವೇತ್ತಾತಮಾ ಹುರಗ್ರ್ಯಂ ಪುರುಷಂ ಮಹಾಂತಂ– ಶ್ವೇತಾಶ್ವತರ. ೩-೧೯.]

೫೩. ಪ್ರಾಣಾದಿ ಸಕಲ ವಾಯುಗಳಲ್ಲಿಯೂ, ಚಲನ ಶಕ್ತಿ ರೂಪನಾಗಿರುವವನು ನೀನೇ. ಮದಿಸಿದ ಆನೆಗೆ ಮದದಂತೆ, ಮನಸ್ಸಿಗೆ ಭ್ರಾಂತಿ ನಿಮಿತ್ತ ಭೂತವೂ ನೀನೇ. ಪ್ರಜ್ಞೆಯೆಂಬ ಅಗ್ನಿ ಜ್ವಾಲೆಯಲ್ಲಿರುವ ಪ್ರಾಕಾಶ್ಯವೂ, ಔಷ್ಣ್ಯ ನಿಮಿತ್ತವೂ ನೀನೇ.

೫೪. ನೀನು ಉಪಸಂಹಾರ ಮಾಡುವುದರಿಂದಲೇ (ನಿನ್ನ ವಶದಿಂದ) ಮರಣ ಮೂರ್ಛಾ ಸ್ವಪ್ನ ಕಾಲಗಳಲ್ಲಿ ಆತ್ಮೀಯವಾದ ಈ ವಾಕ್ಕು ಎಲ್ಲವೂ, ದೀಪ ಆರುವಂತೆ ಉಪಶಾಂತವಾಗುವುದು. ಪುನಃ ದೇಹಾಂತರಗಳಲ್ಲಿ (ಬೇರೊಂದು ಕಡೆಯಲ್ಲಿ) ಎಲ್ಲಿಂದಲೋ ಆ ಮಾತು, ನನ್ನ ಇಚ್ಛಾವಶದಿಂದಲೇ ಉದಯವನ್ನೂ ಹೊಂದುವುದು.

(ಯದ್ವಾಚಾ ಅನಭ್ಯುದಿತಂ-ಯೇನವಾಗಭ್ಯುದ್ಯತೇ-ತದೇವ ಬ್ರಹ್ಮತ್ವಂವಿದ್ಧಿ. ಕೇನ. ೧-೪.)

ತ್ವಯಿ ಸಂಸಾರವರ್ತಿನ್ಯಃ ಪದಾರ್ಥಾ ವಲಯ ಸ್ತಥಾ ।
ಕಟಕಾಂಗದ ಕೇಯೂರಯುಕ್ತಯಃ ಕನಕೇ ಯಥಾ ॥ ೫೫ ॥

ಭವಾನಯಮಯಂ ಚಾಹಂ ತ್ವಂ ಶಬ್ದೈರೇವಮಾದಿಭಿಃ ।
ಸ್ವಯಮೇವಾತ್ಮನಾತ್ಮಾನಂ ಲೀಲಾರ್ಥಂ ಸ್ತೌಷಿ ವಕ್ಷಿ ಚ ॥ ೫೬ ॥

ಮಂದಾನಿಲವಿನುನ್ನೋಽಬ್ದೋ ಗಜಾಶ್ವನರವೃಷ್ಟಿಭಿಃ ।
ಯಥಾ ಸಂಲಕ್ಷ್ಯತೇ ವ್ಯೋಮ್ನಿ ತಥಾ ತ್ವಂ ಭೂತದೃಷ್ಟಿಭಿಃ ॥ ೫೭ ॥

ಯಥಾ ಹಯಗಜಾಕಾರೈರ್ಜ್ವಾಲಾ ಲಸತಿ ವಹ್ನಿಷು ।
ತಥೈವಾವ್ಯತಿರಿಕ್ತೈಸ್ತ್ವಂ ದೃಶ್ಯಸೇ ಭುವಿ ಸೃಷ್ಟಿಷು ॥ ೫೮ ॥

---

೫೫. ಕಟಿಕ, ಅಂಗದ, ಕೇಯೂರ ಅಂಗುಳೀಯಕಾದಿ ವಿಭಿನ್ನಗಳಾದ ಭೂಷಣಗಳು ಸುವರ್ಣದಲ್ಲಿ ಹೇಗೆ ಅನಭಿವ್ಯಕ್ತವಾಗಿದ್ದುಕೊಂಡಿವೆಯೋ ಹಾಗೆಯೇ ಈ ಪ್ರಪಂಚದೊಳಗಿರುವ ಸಕಲ ಪದಾರ್ಥ ಸಮೂಹಗಳೂ ನಿನ್ನಲ್ಲಿಯೇ ಅಡಕವಾಗಿರುವುವು.

೫೬. ನಿನ್ನನ್ನು ನೀನಾಗಿಯೇ ನಿನ್ನಿಂದಲೇ-ಕೇವಲ ವಿನೋದಾರ್ಥವಾಗಿ ನೀನು, ನಾನು, ಇವರು. [ಭವಾನ್ (ಅಯಂ) ಅಯಂ-ಅಹಂ-ತ್ವಂ] ಇತ್ಯಾದಿ ನಾನಾ ಶಬ್ದಗಳಿಂದ ಗುಣ ಕೀರ್ತನೆ ಮಾಡುತ್ತಲೂ ಕರೆಯುತ್ತಲೂ ವ್ಯವಹಾರ ಮಾಡುತ್ತಿರುವೆ. (ವಸ್ತುತಃ ನಿನಗಿಂತಲೂ ಅನ್ಯನು ಇಲ್ಲವು)

("ನಾನ್ಯೋಽತೋಽಸ್ತಿ ದ್ರಷ್ಟಾ ಶ್ರೋತಾ, ಮನ್ತಾ, ವಿಜ್ಞಾತಾ" ಇತ್ಯಾದಿ ಶ್ರುತಿ)

೫೭. ಮಂದ ಮಾರುತದಿಂದ ಸಂಚಾಲಿತ ಮೇಘವು ಗಗನದಲ್ಲಿ ಒಂದೊಂದು ಕಡೆ ಒಂದೊಂದು ರೀತಿಯಾಗಿ ಆನೆ, ಕುದುರೆ ಮನುಷ್ಯ ಮುಂತಾದ ಆಕಾರವಾಗಿ ಹೇಗೆ ಕಾಣಬರುವುದೋ ಹಾಗೆ ನೀನೂ ವಿವಿಧಾನೇಕ ಭೂತ ರೂಪಗಳಿಂದ ನಾನಾ ಕಾರಗಳಾಗಿ ಸರ್ವತ್ರ ಕಾಣಿಸಿಕೊಳ್ಳುತ್ತಿರುವೆ.

೫೮. ಪ್ರತ್ಯೇಕವಾಗಿ ಕಾಷ್ಠಗಳು ಉರಿಯುತ್ತಿರಲಿಕ್ಕಾಗಿ, ಕೆಲವು ಜ್ವಾಲೆಗಳು ಕೆಲವು ಮೇಕೆ, ಕುದುರೆ, ಆನೆ ಮುಂತಾದ ರೂಪಗಳಿಂದ ಹೇಗೆ ಕಾಣಬರುವುವೋ,

ತ್ವಂ ಬ್ರಹ್ಮಾಂಡಕಮುಕ್ತಾನಾಮಚ್ಛಿನ್ನಸ್ತಂತುರಾತತಃ ।
ಕ್ಷೇತ್ರಂ ತ್ವಂ ಭೂತಸಸ್ಯಾನಾಂ ಚಿದ್ರಸಾಯನಸೇವಿತಂ ॥ ೫೯ ॥

ಅಸತ್ತದನಭಿವ್ಯಕ್ತಂ ಪದಾರ್ಥಾನಾಂ ಪ್ರಕಾಶ್ಯತೇ ।
ತ್ವಯಾ ತತ್ತ್ವಂ ಯಥಾ ಪಕ್ತ್ರಾ ಮಾಂಸಾನಾಂ ಸ್ವಾದವೇದನಂ ॥ ೬೦ ॥

ವಿದ್ಯಮಾನಾಪಿ ವಸ್ತುಶ್ರೀರ್ನ ಸ್ಥಿತಾ ತ್ವಯಿ ನ ಸ್ಥಿತೇ ।
ವನಿತಾರೂಪಲಾವಣ್ಯಸತ್ತೇವ ಗತಚಕ್ಷುಷಃ ॥ ೬೧ ॥

ಹಾಗೆಯೇ ನೀನು ಬ್ರಹ್ಮಾಂಡದಲ್ಲಿ ಸೃಷ್ಟಿಸಲ್ಪಟ್ಟಿರುವ ಸಕಲ ದೃಶ್ಯ ವಸ್ತುಗಳಲ್ಲಿಯೂ ಅವ್ಯತಿರಿಕ್ತನಾಗಿ (ಅಭಿನ್ನನಾಗಿ) ನಾನಾ ಕಾರಣಗಳಿಂದ ಕಾಣಿಸಿಕೊಳ್ಳುತ್ತಿರುವೆ.

೫೯. ಅಸಂಖ್ಯಾಕವಾದ ಬ್ರಹ್ಮಾಂಡಗಳೆಂಬ ಮುಕ್ತಾ ಫಲ (ಮುತ್ತು) ಗಳಿಗೆ ನೀನು ಅಚ್ಛಿನ್ನವಾದ (ಕಿತ್ತು ಹೋಗದ) ಅಥವಾ ತುಂಡಾಗದ ಉದ್ದವಾದ ತಂತು (ದಾರ)ವಾಗಿರುವೆ. (ನಿನ್ನಲ್ಲಿ ಬ್ರಹ್ಮಾಂಡಗಳೆಲ್ಲ ದಾರದಲ್ಲಿ ಮುತ್ತುಗಳಂತೆ ಅನುಸ್ಯೂತ ವಾಗಿ ಪವಣಿಸಲ್ಪಟ್ಟಿರುವುವು) ಭೂತಗಳೆಂಬ ಸಸ್ಯಗಳಿಗೆ ನೀನು ಸಾರವುಳ್ಳ ಉತ್ತಮ ಕ್ಷೇತ್ರವಾಗಿರುವೆ. ಚೈತನ್ಯವೆಂಬ ರಸಾಯನದ (ದಿವ್ಯೋದಕದ) ಸೇಚನೆಯಿಂದ (ವರ್ಷಣದಿಂದ) ಆ ಭೂತ ಸಸ್ಯಗಳು, ನಿನ್ನಲ್ಲಿ ಸೊಂಪಾಗಿ ಬೆಳೆಯುವುವು.

೬೦. ವಂಚಕನು, ಸರಿಯಾದ ಪಾಕ ವಿಶೇಷದಿಂದ ಮಾಂಸಾದಿ ವಸ್ತುಗಳ ರುಚಿಕರವಾದ ಸ್ವಾದುತ್ವವನ್ನು ಹೇಗೆ ಪ್ರಕಾಶಪಡಿಸುವನೋ, ಹಾಗೆಯೇ ನೀನು ನಿನ್ನ ಸೃಷ್ಟಿ ನೈಪುಣ್ಯದಿಂದ, ಅವಿದ್ಯಾ ಬೀಜಾಂತರ್ಗತಗಳಾದ ಸೃಜ್ಯಮಾನ ಪದಾರ್ಥಗಳ, ಅನಭಿವ್ಯಕ್ತವಾಗಿ ಅಸತ್ಪ್ರಾಯವಾದ ಪ್ರಸಿದ್ಧವಾದ ಸ್ವರೂಪವನ್ನು ಪ್ರಕಟಗೊಳಿಸುವೆ.

೬೧. ಒಬ್ಬ ಯುವತಿಯಲ್ಲಿ ವಸ್ತುತಃ ರೂಪ ಲಾವಣ್ಯವು ತುಂಬಿದ್ದರೂ ಜನ್ಮಾಂಧನಿಗೆ ಎರಡು ಕಣ್ಣುಗಳೂ ಕಾಣದಿರುವ ಕಾರಣ, ಹೇಗೆ ಲಾವಣ್ಯವು ಇಲ್ಲ ವಾಗುವುದೋ ಹಾಗೆಯೇ ಪ್ರಪಂಚದಲ್ಲಿ ಸಕಲ ಪದಾರ್ಥಗಳೂ ಸಮೃದ್ಧಿಯಾಗಿ ಕಾಣುತ್ತಿದ್ದರೂ, ಚಿತ್ಸ್ವರೂಪನಾದ ನಿನ್ನ ಪ್ರಕಾಶದಿಂದ ಅನಾಕಲಿತವಾಗಿರುವ ಕಾರಣ ಅಸತ್ಕಲ್ಪಗಳಾಗಿಯೇ ಇವೆ.

ಸದಪೀಹ ನ ಸತ್ತಾಯೈ ವಸ್ತುನಾ ವರ್ಜಿತಂ ತ್ವಯಾ ।
ತೃಪ್ತಯೇ ನ ಸ್ವಲಾವಣ್ಯಂ ಮುಕುರಾತ್ಪ್ರತಿಬಿಂಬಿತಂ ॥ ೬೨ ॥

ಲಠತಿ ತ್ವಾಂ ವಿನಾ ದೇಹಃ ಕಾಷ್ಠಲೋಷ್ಟಸಮಃ ಕ್ಷಿತೌ ।
ಸನ್ನಸ್ಯಸನ್ನಗೋಚ್ಛಾಯಃ ಶ್ಯಾಮಾಸ್ವಿವ ರವಿಂ ವಿನಾ ॥ ೬೩ ॥

ಸುಖದುಃಖಕ್ರಮಃ ಪ್ರಾಪ್ಯ ಭವಂತಂ ಪರಿನಶ್ಯತಿ ।
ಪ್ರಾಕಾಶ್ಯಮಾಸಾದ್ಯ ಯಥಾ ತಪಸ್ತೇಜೋಽಥವಾ ಹಿಮಂ ॥ ೬೪ ॥

---

೬೨. ಕನ್ನಡಿಯಲ್ಲಿ ಪ್ರತಿಬಿಂಬಿತವಾದ ಸ್ವಮುಖ ಸೌಂದರ್ಯವು ಕಾಂತೋಪ ಭೋಗಾದಿ ಅರ್ಥಂ ಯಾ ಪ್ರಯುಕ್ತ ತೃಪ್ತಿಯನ್ನು (ಕಾಮೋಪ ಶಾಂತಿಯನ್ನೂ) (ಸ್ವಬಿಂಬ ಸೌಂದರ್ಯದಂತೆ) ಎಂದೆಂದಿಗೂ ಉಂಟುಮಾಡಲಾರದು. ಅದ ರಂತೆಯೇ ಈ ಲೋಕದಲ್ಲಿ ವಸ್ತುತಃ ಸಕಲ ವಸ್ತುಗಳೂ ಪ್ರತೀತವಾಗಿದ್ದರೂ ಅವು ಗಳನ್ನು ನೀನು ಅರ್ಥ ಕ್ರಿಯಾ ಶಕ್ತಿಯಿಂದ ಅನುಗ್ರಹ ಮಾಡದೇ ಹೋದರೆ, ಅವು ಎಂದಿಗೂ ಅರ್ಥ ಕ್ರಿಯಾಕಾರಿಗಳಾಗುವುದೇ ಇಲ್ಲ.

೬೩. ಗಾಢಾಂಧಕಾರಮಯಗಳಾದ ಕೃಷ್ಣಪಕ್ಷದ ರಾತ್ರಿಗಳಲ್ಲಿಯಂತೂ ಯಾವ ಆಲೋಕ (ಬೆಳಕು)ವೂ ಇಲ್ಲದಿರುವ ಕಾರಣ, ಗಿರಿ ವೃಕ್ಷಾದಿಗಳ ವಾಸ್ತವಾದ ಔನ್ನತ್ಯವು ಕಣ್ಣಿಗೆ ಗೋಚರವಾಗದೆಯೇ, ಇದ್ದರೂ ಇಲ್ಲದಂತೆ (ಅಸತ್ಪ್ರಾಯ) ಆಗುವುದು. ಏಕೆಂದರೆ ಚಕ್ಷುರಿಂದ್ರಿಯಕ್ಕೆ ಸೂರ್ಯನು ಅನುಗ್ರಾಹಕನು. ಸೂರ್ಯ ನಿಲ್ಲದೆ ಹೋಗಿ (ಯಾವ ಬೆಳಕೂ ಇಲ್ಲದಿರುವಾಗ) ಸಕಲ, ಪದಾರ್ಥಗಳೂ ಸಮ್ಮುಖ ದಲ್ಲಿದ್ದರೂ ದೃಕ್ಕಿಗೆ ಗೋಚರಿಸುವುದೇ ಇಲ್ಲ. ಇಂದ್ರಿಯಾಗ್ರಾಹ್ಯವಾದುದು (ವಸ್ತುತಃ ಎದುರಿನಲ್ಲಿಯೇ ಇರುವುದಾದರೂ ಅದು) ಅಸತ್ಪ್ರಾಯವೇ ಸರಿ. (ಕಾರ್ಯಕಾರಿಯಾಗುವುದಿಲ್ಲ ಎಂದು ತಾತ್ಪರ್ಯ) ಈ ದೃಷ್ಟಾಂತದಂತೆಯೇ, ಪರ ಮಾತ್ಮನಾದ ನಿನ್ನ ಚೈತನ್ಯ ಶಕ್ತಿಯು ಇಲ್ಲದೆ ಹೋಗಲು ಈ ದೇಹವು ಕಾಷ್ಠ ಲೋಷ್ಟ (ಕಡ್ಡಿ, ಹೆಂಟೆ) ಗಳಿಗೆ ಸದೃಶವಾಗಿ ನೆಲದ ಮೇಲೆ ಬಿದ್ದು ಹೊರಳಬೇಕಾ ಗುವುದು.

೬೪. ಸೂರ್ಯ ಪ್ರಕಾಶವು ಪ್ರಸರಿಸುವುದರಿಂದ ಕತ್ತಲೆಯು ಅದೃಶ್ಯವಾಗು ವಂತೆಯೂ, ಅಗ್ನ್ಯಾತಪಗಳ ಔಷ್ಣ್ಯದಿಂದ ಹಿಮವು ನಾಶವಾಗುವಂತೆಯೂ, ಪರ ಮಾತ್ಮನಾದ ನಿನ್ನ ತತ್ತ್ವ ಸಾಕ್ಷಾತ್ಕಾರಾನುಭವದಿಂದ ಪ್ರಾಪಂಚಿಕವಾದ ಈ ಸುಖ ದುಃಖ ಕ್ರಮಗಳೆಲ್ಲವೂ ತಾವಾಗಿಯೇ ನಾಶ ಹೊಂದುವುವು.

ತ್ವದಾಲೋಕನಯೈವೈತೇ ಸ್ಥಿತಿಂ ಯಾನ್ತಿ ಸುಖಾದಯಃ ।
ಸೂರ್ಯಾಲೋಕನಯಾ ಪ್ರಾತರ್ವರ್ಣಾಃ ಶುಕ್ಲಾದಯೋ ಯಥಾ ॥ ೬೫ ॥

ಲಬ್ಧಾತ್ಮಾನೋ ವಿನಶ್ಯನ್ತಿ ಸಂಬನ್ಧಕ್ಷಣ ಏವ ತೇ ।
ತೇ ತಮಾಂಸೀವ ದೀಪಸ್ಯ ದೃಷ್ಟಾ ಏವ ಪ್ರಜನ್ತ್ಯಲಂ ॥ ೬೬ ॥

ತಮಸ್ತಾ ತಮಸೋ ದೀಪಾಸತ್ತಾಯಾಂ ಸ್ಫುಟತಾಂ ಗತಾ ।
ದೀಪಸಂಬನ್ಧಸಮಯೇ ಸಾ ಜೋತ್ಪದ್ಯ ವಿನಶ್ಯತಿ ॥ ೬೭ ॥

ತದೇವಂ ಸುಖದುಃಖಶ್ರೀರ್ದೃಷ್ಟ್ವೈವ ತ್ವಾಮನಾಮಯಂ ।
ಜಾಯತೇ ಜಾತಮಾತ್ರೈವಂ ಸರ್ವನಾಶೇನ ನಶ್ಯತಿ ॥ ೬೮ ॥

(ತಮಃ ಪ್ರಾಕಾಶ್ಯಮಾಸಾದ್ಯ, ಅಥವಾ ಹಿಮಂತೇಜಃ ಆಸಾದ್ಯ ಯಥಾನಶ್ಯತಿ ಎಂದು ಎರಡು ಬಗೆಯಾಗಿ ಅನ್ವಯ ಮಾಡಿ ತೇಜಃ ಎನ್ನುವುದಕ್ಕೆ ಅಗ್ನ್ಯಾತಪಗಳ ತೀಕ್ಷ್ಣತೆ ಅಥವಾ ಉಷ್ಣತೆ ಎಂಬ ಅರ್ಥವನ್ನು ಹೇಳಿದೆ. ಆದರೆ ತಾತ್ಪರ್ಯ ಪ್ರಕಾಶ ದಲ್ಲಿ ಟೀಕಾಕಾರರು ತೇಜಃ ದೀಪ ನಕ್ಷತ್ರಾದಿ ಪ್ರಭಾ ಎಂದು ವ್ಯಾಖ್ಯಾನ ಮಾಡಿರು ವರು. ಇದನ್ನು ಅನುಸರಿಸಿ ಸೂರ್ಯ ಪ್ರಕಾಶದಿಂದ ಕತ್ತಲೆಯೂ, ದೀಪ ನಕ್ಷತ್ರಾ ದಿಗಳ ಅಲ್ಪಪ್ರಭೆಯೂ, ಹಿಮವೂ ಕೂಡ ನಾಶಹೊಂದುವಂತೆ, ಎಂಬ ಅರ್ಥವನ್ನು ಹೇಳಬೇಕಾಗುವುದು.)

೬೫-೬೬. ಏಕೆಂದರೆ, ಪ್ರಾತಃಕಾಲದಲ್ಲಿ ಸೂರ್ಯೋದಯವಾದ ಮೇಲೆ ಆ ತೇಜಸ್ಸಿನಿಂದಲೇ ಶುಕ್ಲತ್ವ ನೀಲತ್ವಾದಿ ವರ್ಣಗಳೆಲ್ಲವೂ ಹೇಗೆ ಸ್ಥಿತಿಯನ್ನು ಪಡೆ ಯುವುವೋ ಹಾಗೆಯೇ ಈ ಸುಖ ದುಃಖಾದಿಗಳೆಲ್ಲವೂ ನಿನ್ನ (ಚೈತನ್ಯ) ತೇಜಸ್ಸಿ ನಿಂದಲೇ ಸ್ಥಿತಿಯನ್ನು ಪಡೆದಿರುವುವು. ಅದು ಕಾರಣವೇ ದೀಪದ ಸಂಬಂಧ ವುಂಟಾದ ಕ್ಷಣದಲ್ಲಿಯೇ ಕತ್ತಲೆಯು ಕಣ್ಣಿಗೆ ಕಾಣದೆಯೇ ಸಂಪೂರ್ಣವಾಗಿ ನಾಶ ಹೊಂದುವಂತೆ, ಆ ಸುಖ ದುಃಖಗಳೂ, ತತ್ತ್ವ ಸಾಕ್ಷಾತ್ಕಾರದಿಂದ ಲಬ್ಧನಾದ ನಿನ್ನ ದರ್ಶನವಾದ ಕ್ಷಣದಲ್ಲಿಯೇ (ಸಂಬಂಧ ಕ್ಷಣ) ನಿಶ್ಶೇಷವಾಗಿ ನಾಶ ಹೊಂದುವುವು. (ಅದೃಶ್ಯವಾಗಿ ಹೋಗಿಬಿಡುವುವು).

೬೭-೬೮. ತಮಸ್ಸಿನಲ್ಲಿರುವ ತಮಸ್ತ್ವ (ಕತ್ತಲೆಯ ಭಾವ)ವು ದೀಪವಿಲ್ಲದಿರುವ

ಭಂಗುರತ್ವಾದಿಹ ಸ್ಥಾತುಂ ಕಾಲಂ ನಾಣುಮಪಿ ಕ್ಷಮಾ ।
ನಿಮೇಷಲಕ್ಷಭಾಗಾಖ್ಯಾ ತಸ್ಮಿನ್ ಕಾಲಕಲಾ ಯಥಾ ॥ ೬೯ ॥

ಗಾನ್ಧರ್ವೀ ನಗರೀ ತಸ್ಮಿನ್ ಸುಖದುಃಖಾದಿಭಾವನಾ ।
ಸ್ಫುರತಿ ತ್ವತ್ಪ್ರಸಾದೇನ ತ್ವಯಿ ದೃಷ್ಟೇ ವಿಲೀಯತೇ ॥ ೭೦ ॥

ಕಾಲದಲ್ಲಿ ಮಾತ್ರವೇ ಸ್ಫುಟವಾಗಿರುವುದು. ದೀಪ ಪ್ರಕಾಶದ ಸಂಬಂಧವುಂಟಾದ ಸಮಯದಲ್ಲಿಯಾದರೋ ಆ ತಮಸ್ತ್ವವು ಮಾತ್ರವೇ, ಅದು (ಯಾವ ಧರ್ಮಿ ಯಿಂದ ಉತ್ಪನ್ನವಾಗುವುದೋ ಅಂತಹ) ಸ್ವಧರ್ಮಿಯ ದೆಸೆಯಿಂದ ವಿಯೋಗ ವನ್ನು ಹೊಂದಿ ಆ ಕ್ಷಣವೇ ನಷ್ಟವಾಗಿಬಿಡುವುದು. (ಸನ್ಮಾತ್ರ ಸ್ವಭಾವವಾದ ಅದರ ಧರ್ಮಿಯಾದರೋ ನಾಶ ಹೊಂದುವುದಿಲ್ಲ.) ಇದರಂತೆಯೇ ಈ ಪ್ರಾಪಂ ಚಿಕ ಸುಖ ದುಃಖ ಕ್ರಮವು ನಿರುಪಾಧಿಕವಾದ ಆತ್ಮ ಪ್ರಕಾಶವಿಲ್ಲದಿರುವಾಗಲೇ ಉತ್ಪನ್ನವಾಗುವುದು. ನಿರುಪದ್ರವ ನಿರತಿಶಯಾನಂದ ಸ್ವರೂಪನಾದ ನಿನ್ನ ಸಾಕ್ಷಾತ್ಕಾರವಾದೊಡನೆಯೇ ಇದೆಲ್ಲವೂ ಜಾತ ಮಾತ್ರವಾಗಿಯೇ (ಇನ್ನೂ ಹುಟ್ಟು ತ್ತಿರುವಾಗಲೇ) ಸಮೂಲವಾಗಿ ಸರ್ವ ನಾಶವನ್ನು ಪಡೆದು ನಿರ್ನಾಮವಾಗುವುದು.

೬೯. ಒಂದು ನಿಮೇಷದಲ್ಲಿ (ಕಣ್ಣು ರೆಪ್ಪೆಯು ಒಂದು ಸಲ ಬಡಿಯುವಷ್ಟು ಕಾಲ) ಲಕ್ಷದ ಒಂದನೆಯ ಭಾಗದಷ್ಟು ಅಲ್ಪವಾದ ಕಾಲು ಭಾಗವು, ಅತ್ಯಂತ ಸೂಕ್ಷ್ಮವಾಗಿರುವ ಕಾರಣ, ಬಲು ಬೇಗ ನಮಗೆ ತಿಳಿಯದಂತೆಯೇ, ಸ್ವತಏವ-ಕಳೆದುಹೋಗಿಬಿಡುವುದು. ಅದು ಅತ್ಯಂತ ನಶ್ವರವು ಇದರಂತೆಯೇ ಈ ಪ್ರಾಪಂ ಚಿಕ ಸುಖ ದುಃಖ ಶ್ರೀಯು ಅತ್ಯಂತ ನಶ್ವರವಾಗಿರುವ ಕಾರಣ, ನಿತ್ಯ ನಿರತಿಶಯಾ ನಂದ ಪ್ರಕಾಶಾತ್ಮನಾದ ನಿನ್ನಲ್ಲಿ ಒಂದು ಕ್ಷಣಕಾಲವಾದರೂ ಇರಲೇ ಆರದು. ಇರಲು ಸಮರ್ಥವಾಗಿಲ್ಲ.

೭೦ ಎಲೈ ಪರಮಾತ್ಮನೇ, ಅತ್ಯಲ್ಪಕಾಲ ಮಾತ್ರವಿರತಕ್ಕದಾಗಿ, ಲಕ್ಷಿಸು ವುದಕ್ಕೂ ಅಶಕ್ಯವಾದಷ್ಟು ಸೂಕ್ಷ್ಮತಮವಾಗಿರುವ ಈ ಸುಖದುಃಖಾದಿ ಭಾವನೆಯು ಗಂಧರ್ವ ನಗರಿಯಂತೆ ಮಿಥ್ಯಾಭೂತವಾಗಿದ್ದರೂ, ನೀನು ಅಜ್ಞಾತನಾಗಿರುವ ದೆಸೆಯಲ್ಲಿ ನಿನ್ನ ಅನುಗ್ರಹದಿಂದಲೇ ಸತ್ತೆಯನ್ನೂ ಪಡೆದು ಸತ್ಯವಾಗಿರುವಂತೆಯೇ ಸ್ಫುರಿಸುತ್ತಿರುವುದು. ನೀನು ತಾತ್ವಿಕವಾಗಿ ಅದ್ವೈತಾತ್ಮ ಭಾವನೆಯಿಂದ ಕಾಣಲ್ಪ

ತ್ವದಾಲೋಕೆ ಕ್ಷಣೋದ್ಭೂತಾ ತ್ವದಾಲೋಕೇ ಕ್ಷಣಕ್ಷಯಾ ।
ಮೃತೇವ ಜಾತಾ ಜಾತೇವ ಮೃತಾ ಕೇನೋಪಲಕ್ಷ್ಯತೇ ॥ ೭೧ ॥

ಕ್ಷಣಮಪ್ಯಸ್ಥಿತಂ ವಸ್ತು ಕಥಂ ಕಾರ್ಯಕರಂ ಭವೇತ್ ।
ತರಂಗೈರುತ್ಪಲಾಕಾರೈರ್ಮಾಲಾ ಕಥಮಪೇಕ್ಷ್ಯತೇ ॥ ೭೨ ॥

ಯದಾ ವಾ ಜಾತನಿರ್ನಷ್ಟಂ ಕ್ರಿಯಾಂ ವಸ್ತು ಕರಿಷ್ಯತೇ ।
ತದಾ ರಮೇತ ಲೋಕೋಽಯಂ ಮಾಲಾಂ ಕೃತ್ವಾ ತಟಿದ್ಗಣೈಃ ॥ ೭೩ ॥

ಡಲಾಗಿ ಒಡನೆಯೇ ಅದೆಲ್ಲವೂ ಲಯಹೊಂದಿ ಬಿಡುವುದು. (ಎಲ್ಲಿಂದ ಹೇಗೆ ಬಂದಿತ್ತೋ ಅಲ್ಲಿಯೇ ಹಾಗೆ ಅಡಗಿ ಬಿಡುವುದು. ತನ್ನ ಕಾರಣದಲ್ಲಿ ಐಕ್ಯವಾಗಿ ಬಿಡುವುದು). ಜ್ಞಾತೇ ದ್ವೈತಂ ನವಿದ್ಯತೇ-ಮಾಂಡೂಕ್ಯಕಾರಿಕಾ ಜಗತ್ತೆಲ್ಲವೂ ಅಜ್ಞಾನ ವಿಜೃಂಭಿತವಾಗಿ ಜ್ಞಾನ ಭಾಧ್ಯವಾಗಿರುವ ಕಾರಣ ಆತ್ಮ ಸಾಕ್ಷಾತ್ಕಾರ ರಾಹಿತ್ಯವೇ, ಪ್ರಪಂಚ ಸ್ಥಿತಿಗೆ ಅನುಗ್ರಹವೆಂದು ಇಲ್ಲಿ ಹೇಳಿದೆ.)

೭೧. ನಿನ್ನ ತತ್ತ್ವ ಜ್ಞಾನವನ್ನು ಪಡೆಯದೆ ದುಷ್ಟವಾಗಿರುವ ಬಾಹ್ಯ ದೃಷ್ಟಿಯಿಂದ ಈ ಸುಖ ದುಃಖ ಸಂಪತ್ತಿಯೆಂಬುದು ಉದ್ಭವಿಸುವುದು. ನಿನ್ನ ಶುದ್ಧ ಚೈತನ್ಯ ಸ್ವರೂಪವನ್ನು ಸ್ಪಷ್ಟವಾಗಿ ತಿಳಿದುಕೊಂಡ ಪಾರಮಾರ್ಥಿಕ ದೃಷ್ಟಿಯಿಂದ ಕ್ಷಯಿಸಿ ಹೋಗುವುದು. ಆದುದರಿಂದ ಇದು ಜಾಗರದಲ್ಲಿ ಸತ್ತು ಹೋಗಿರುವುದು. ಪುನಃ ಸ್ವಪ್ನದಲ್ಲಿ ಹುಟ್ಟಿ ತಲೆದೋರುವಂತೆಯೂ, ಸ್ವಪ್ನದಲ್ಲಿ ಹುಟ್ಟಿದುದಾಗಿ ಪುನಃ ಜಾಗರದಲ್ಲಿ ಸತ್ತುಹೋಗಿರುವಂತೆಯೂ ಇರುವುದು. ಇದು ಹೀಗಿರುವ ಕಾರಣ ಯಾರಿಗೆ ಯಾವಾಗತಾನೇ ಗೋಚರಿಸುವುದು ?

೭೨. ಹೀಗೆ ಒಂದು ಕ್ಷಣಕಾಲವಾದರೂ ಸ್ಥಿರವಾಗಿರಲಾರದ ವಸ್ತುವು ಹೇಗೆ ತಾನೆ ಕಾರ್ಯಕಾರಿಯಾಗುವುದು ? ನೈದಿಲೆ ಪುಷ್ಪಗಳ ಬುದ್ಧಿಯಿಂದ ಕಲ್ಪಿತಾಕಾರಗಳಾದ ತರಂಗಗಳಿಂದ ಪುಷ್ಪ ಮಾಲೆಯನ್ನು ರಚಿಸುವುದು ಹೇಗೆ ಸಾಧ್ಯವಾಗುವುದು ? ಅಂತಹ ಮಾಲೆಯನ್ನು ಕಂಠದಲ್ಲಿ ಧರಿಸಿದ್ದನ್ನೂ ಅದರಿಂದ ಆನಂದಪಟ್ಟುದನ್ನೂ ಯಾರು ಕಂಡಿರುವರು ? ಹೀಗೆ ಮಿಥ್ಯಾ ವಸ್ತುಗಳು ಕ್ಷಣ ಸ್ಥಾಯಿಗಳೆಂದು ಹೇಳುವುದಕ್ಕೂ ಸಾಧ್ಯವಿಲ್ಲದಿರುವಾಗ ಅವುಗಳ ಅರ್ಥ ಕ್ರಿಯಾಕಾರಿತ್ವವು ಅತ್ಯಾಶ್ಚರ್ಯವೇ ಸರಿ.

೭೩. ಉತ್ಪನ್ನವಾದ ಒಡನೆಯೇ ಲಯಹೊಂದತಕ್ಕ ವಸ್ತುವು, ಯಾವು

ಇಮಾಂ ಸುಖಾದಿಕಾಂ ಲಕ್ಷ್ಮೀಂ ವಿವೇಕಜನಚೇತಸಿ ।
ಸ್ಥಿತಃ ಸನ್ನೇವ ಗೃಹ್ಣಾಸಿ ನ ಜಹಾಸಿ ಸಮಸ್ಥಿತಿಂ ॥ ೭೪ ॥

ಅವಿವೇಕಿಷು ಯೋಽಸಿ ತ್ವಂ ಸಹಜಾತ್ಮನ್ಯದೃಚ್ಛಯಾ ।
ತದ್ರೂಪಕಥನೇನಾಲಂ ಮಮಾನಲ್ಪಪದಾಸ್ಪದ ॥ ೭೫ ॥

ದಾದರೊಂದು ಕೆಲಸ ಮಾಡಲು ಸಮರ್ಥವಾಗುವ ಪಕ್ಷದಲ್ಲಿ. ಆಗ ಪ್ರಪಂಚದಲ್ಲಿ ಜನಗಳೆಲ್ಲರೂ ವಿದ್ಯುತ್ತುಗಳ ಸಮುದಾಯದಿಂದ (ಮಿಂಚು) ಒಂದು ಮಾಲೆಯನ್ನು ರಚಿಸಿ ಹೂ ಮಾಲೆಯಂತೆ ಕಂಠದಲ್ಲಿ ಧರಿಸಿ ಆನಂದ ಪಡಬಹುದು. [ಸರ್ವವೂ ಕ್ಷಣಿಕವೆಂದು ಸೌಗತರೆಂಬ ಬೌದ್ಧರು ತಮ್ಮ ಸಿದ್ಧಾಂತವನ್ನು ಹೇಳುವರು. ಅವರೂ ಕೂಡ ಕ್ಷಣಿಕಗಳಾದ ವಸ್ತುಗಳಿಂದ ಪ್ರಾಮಾಣಿಕವಾದ ಅರ್ಥ ಕ್ರಿಯೆಯನ್ನೂ ಸಾಧಿಸುವುದು ಅಶಕ್ಯವೇ ಎಂದು ಅಭಿಪ್ರಾಯ.]

೭೪. ಎಲೈ ಅಂತರ್ಯಾಮಿಯಾದ ಆತ್ಮನೇ, ಇದುವರೆವಿಗೂ ಹೇಳಿದ ರೀತಿಯಿಂದ ಅತ್ಯಂತ ದುರ್ಘಟವಾದುದಾದರೂ ಈ ಸುಖದುಃಖ ಶ್ರೀಯನ್ನು ನೀನು ಇದರ ದುರ್ಘಟತ್ವಾಭಿಜ್ಞರಾದ ವಿವೇಕಿಗಳ ಹೃದಯದಲ್ಲಿ ಇದ್ದುಕೊಂಡೇ ಸ್ವೀಕರಿಸುತ್ತಿರುವೆ. ಹೀಗೆ ವಿವೇಕಿಗಳ ಹೃದಯದಲ್ಲಿದ್ದುಕೊಂಡು ಸುಖ ದುಃಖಗಳನ್ನು ಸ್ವೀಕರಿಸುತ್ತಿರುವಾಗಲೂ, ನೀನು ಆಯಾ ಸುಖ ದುಃಖದಶೆಯಲ್ಲಿಯೂ ಕೂಡ ನಿನ್ನ ಸಹಜವಾದ ಸಮ ಸ್ಥಿತಿಯನ್ನೂ ಬಿಡದವನಾಗಿ ಏಕ ರೂಪನಾಗಿಯೇ ಇರುವೆ (ನಿರ್ದೋಷಂ ಹಿ ಸಮಂ ಬ್ರಹ್ಮ. –ಗೀತಾ.)

೭೫. ಸಹಜಾತ್ಮನಾದ ಸ್ವಾಮಿಯೇ, ಅನಭಿಜ್ಞರಾದ ಅವಿವೇಕಿಗಳ ಹೃದಯದಲ್ಲಿಯಾದರೋ ನೀನು ಎಂತಹವನಾಗಿರುವೆ (ಹೇಗಿರುವೆ) ಎಂಬುದನ್ನೂ ಹೇಳುವುದಕ್ಕೆ ನನ್ನ ಮಾತಿಗೆ ಶಕ್ತಿ ಸಾಲದು (ನಾನು ಹೇಳಲಾರೆ). ಏಕೆನ್ನುವಿಯೋ? ಆಗ ನೀನು ಆಕಸ್ಮಿಕ ನಾನಾವಾಸನೋದ್ಬೋಧದ ಮೂಲಕ, ಅನಂತಗಳಾದ ಮತ್ತು ಅನಿಯತಗಳಾದ ನಾನಾ ವಿಕಲ್ಪಗಳನ್ನು ಕಲ್ಪಿಸಿಕೊಂಡು ತದನುಸಾರವಾಗಿ ಅನಂತ ರೂಪ ಭೇದಗಳನ್ನೂ ಹೆಸರು (ನಾಮ) ಗಳನ್ನೂ ಪಡೆಯುವೆ.

ನಿರೀಹೇಣ ನಿರಂಶೇನ ನಿರಹಂಕೃತಿನಾ ತ್ವಯಾ ।
ಸತಾ ವಾಪ್ಯಸತಾ ವಾಪಿ ಕರ್ತೃತ್ವಮುರರೀಕೃತಂ ॥ ೭೬ ॥

ಜಯ ಪ್ರೌಢ್ಮಾಮರಾಕಾರ ಜಯ ಶಾಂತಿಪರಾಯಣ ।
ಜಯ ಸರ್ವಾಗಮಾತೀತ ಜಯ ಸರ್ವಾಗಮಾಸ್ಪದ ॥ ೭೭ ॥

ಜಯ ಜಾತ ಜಯಾಜಾತ ಜಯ ಕ್ಷತ ಜಯಾಕ್ಷತ ।
ಜಯ ಭಾವ ಜಯಾಭಾವ ಜಯ ಜೇಯ ಜಯಾಜಯ ॥ ೭೮ ॥

---

೭೬. ನೀನು ವಸ್ತುತಃ ನಿಸ್ಸ್ಪೃಹನೂ-ಅಖಂಡನೂ (ಅಪರಿಚ್ಛಿನ್ನ) ನಿರಹಂಕಾರನೂ ಆಗಿದ್ದರೂ ಕೂಡ, ಮೂರ್ತವಾದ (ಸಾಕಾರ) ಸ್ಥೂಲದೇಹೋಪಾಧಿಯಿಂದಲೂ, ಅಮೂರ್ತವಾದ ಸೂಕ್ಷ್ಮದೇಹೋಪಾಧಿಯಿಂದಲೂ, ಸ್ವಪ್ನದಲ್ಲಿ ಸ್ವತಂತ್ರವಾದ ಸೂಕ್ಷ್ಮ ದೇಹದಿಂದಲೂ ಜಾಗ್ರತ್ತಿನಲ್ಲಿ ಸ್ಥೂಲ ಸೂಕ್ಷ್ಮ ರೂಪದೇಹದ್ವಯಸಮುಚ್ಚಯದಿಂದಲೂ ಕರ್ತೃತ್ವವನ್ನು ಅಧ್ಯಾಸಮಾಡಿಕೊಂಡು ಕರ್ತೃವೆಂದು ಭಾವಿಸಿಕೊಳ್ಳುವೆ. (ಈ ಕರ್ತೃತ್ವಾಧ್ಯಾಸವೇ ಅನಂತ ನಾಮರೂಪಾಸ್ಪದತ್ವಮೂಲವು.)

೭೭-೭೮. ಬ್ರಹ್ಮಾಂಡಾದಿ ರೂಪ ಅತಿವಿಸ್ತಾರವಾದ ಆಕಾರವುಳ್ಳ ವಿಶ್ವ ರೂಪಿಯೇ, ನಿನಗೆ ಜಯವಾಗಲಿ. ಶಾಂತಿ ಪರಾಯಣನಾದ ಪರಮಾತ್ಮನೇ, ನಿನಗೆ ಜಯವಾಗಲಿ. ಸ್ವಾನುಭವೈಕ ವೇದ್ಯನಾಗಿ, ಪ್ರತ್ಯಕ್ಷಾದಿ ಸರ್ವ ಪ್ರಮಾಣಾಗೋಚರನಾಗಿರುವ ನಿನಗೆ ಜಯವಾಗಲಿ. ಉಪನಿಷತ್ ಎಂಬ ಸಚ್ಛಾಸ್ತ್ರಗಳಿಂದಲೂ ತದವಿರೋಧಿ ಪ್ರಮಾಣಾಂತರಗಳಿಂದಲೂ ವೇದ್ಯನಾಗಿರುವ ನಿನಗೆ ಜಯವಾಗಲಿ [ಶಾಸ್ತ್ರಯೋನಿತ್ವಾತ್-ಬ್ರಹ್ಮ ಸೂತ್ರ ೧-೧-೩ ಎಂಬ ಅಧಿಕರಣದಿಂದಲೂ, ತಂತ್ವಾ ಔಪನಿಷದಂ ಪುರುಷಂ ಪೃಚ್ಛಾಮಿ ಎಂಬೀ ಮೊದಲಾದ ಶ್ರುತಿ ವಚನದಿಂದಲೂ ಬ್ರಹ್ಮವು ಶಾಸ್ತ್ರ ಪ್ರಮಾಣಕವೆಂಬುದು ಸ್ಪಷ್ಟವು]. ಅಜ್ಞ ದೃಷ್ಟಿಯಿಂದ ಜನನ ಹೊಂದ ತಕ್ಕವನೂ, ಕ್ಷಯಿಷ್ಣುವೂ, ಭಾವರೂಪನೂ, ಜಯಿಸಲ್ಪಡುವುದಕ್ಕೆ ಯೋಗ್ಯನೂ (ಜೇಯ) ಆಗಿರುವ ಮತ್ತು ಪ್ರಾಜ್ಞ ದೃಷ್ಟಿಯಿಂದ, ಜನ್ಮರಹಿತನೂ (ಅಜನೂ) ಅಕ್ಷಯ್ಯನೂ ಭಾವರಹಿತನೂ ಅಜಯ್ಯನೂ (ಇತರರಿಂದ ಜಯಿಸಲ್ಪಡಲು ಅಶಕ್ಯನೂ) ಆಗಿರುವ ನಿನಗೆ ಜಯವಾಗಲಿ.

ಉಲ್ಲಸಾಮ್ಯುಪಶಾಮ್ಯಾಮಿ ತಿಷ್ಠಾಮ್ಯಧಿಗತೋಽಸ್ಮಿ ಚ ।
ಜಯೀ ಜಯಾಮಿ ಜೀವಾಮಿ ನಮೋ ಮಹ್ಯಂ ನಮೋಽಸ್ತು ತೇ ॥ ೭೯ ॥

ತ್ವಯಿ ಸ್ಥಿತೇ ಮಯಿ ವಿಗತಾಮಯಾತ್ಮನಿ
ಸ್ವಸಂಸ್ಥಿತೌ ವ್ಯಪಗತರಾಗರಂಜನೇ ।
ಕ್ವ ಬಂಧನಂ ಕ್ವ ಚ ವಿಪದಃ ಕ್ವ ಸಂಪದೋ
ಭವಾಭವೌ ಕ್ವ ಶಮಮುಪೈಮಿ ಶಾಶ್ವತಂ ॥ ೮೦ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ಉಪಶಮ ಪ್ರಕರಣೇ "ಆತ್ಮಸ್ತವನಂ" ನಾಮ ಷಟ್ತ್ರಿಂಶಃ ಸರ್ಗಃ

---

೭೯. ನಾನು ಈಗ ಉಲ್ಲಾಸಗೊಂಡಿರುವೆನು. ಪ್ರಶಾಂತನಾಗಿರುವೆನು. ಸ್ವಸ್ಥನಾಗಿರುವೆನು. ಆತ್ಮೈಕತ್ವ ಜ್ಞಾನವನ್ನು ಸಂಪಾದಿಸಿದವನೂ ಆಗಿರುವೆನು. ಅದು ಕಾರಣ ಅವಿದ್ಯಕ ನಾನಾ ರೂಪಗಳನ್ನು ಜಯಿಸಿದವನಾಗಿರುವೆನು. ಪ್ರಾರಬ್ಧ ಶೇಷವನ್ನೂ ಜಯಿಸುವುದಕ್ಕಾಗಿ ಜೀವಿಸಿರುವೆನು. ಇಂತಹ ಆತ್ಮರೂಪನಾದ ನನಗೆ ಅಥವಾ ನಿನಗೆ ನಮಸ್ಕಾರಗಳು.

೮೦. ಎಲೈ ಪರಬ್ರಹ್ಮವೇ, ಸರ್ವೋಪದ್ರವರಹಿತನಾಗಿಯೂ ಸ್ವಾತ್ಮ ಸ್ಥಿತಿಯಲ್ಲಿ ಸುಸ್ಥಿರನಾಗಿಯೂ ವೈಷಯಿಕರಾಗಾದಿ ಶೂನ್ಯನಾಗಿಯೂ ಇರುವ ಪರಮಾತ್ಮನಾದ ನಾನು ನಿನ್ನ ಸ್ವರೂಪದಲ್ಲಿ ಅಪ್ರಚ್ಯುತನಾಗಿರುವಾಗ, ಇನ್ನೂ ಬಂಧನವಾಗಲಿ, ವಿಪತ್ತು ಸಂಪತ್ತುಗಳಾಗಲಿ ಎಲ್ಲಿರುವುವು ? ಜನನ ಮರಣಗಳು ಎಲ್ಲಿಯವು? ಈಗ ನಾನು ಸರ್ವವಿಕಾರಾನಾಸ್ಪದನಾಗಿ ಶಾಶ್ವತವಾದ ಉಪ ಶಾಂತಿಯನ್ನು ಪಡೆದು ಸಚ್ಚಿತ್ಸುಖಾತ್ಮಕನಾಗಿರುವೆನು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ಆತ್ಮಸ್ತವನ" ಎಂಬ ಮೂವತ್ತಾರನೆಯ ಸರ್ಗವು.

ಸಪ್ತತ್ರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಇತಿ ಸಂಚಿಂತಯನ್ನೇವ ಪ್ರಹ್ಲಾದಃ ಪರವೀರಹಾ ।
ನಿರ್ವಿಕಲ್ಪ ಪರಾನಂದ ಸಮಾಧಿಂ ಸಮುಪಾಯಯೌ ॥ ೧ ॥

ನಿರ್ವಿಕಲ್ಪ ಸಮಾಧಿಸ್ಥಶ್ಚಿತ್ರಾರ್ಪಿತ ಇವಾಚಲಃ ।
ಶೈಲಾದಿವ ಸಮುತ್ಕೀರ್ಣೋ ಬಭೌ ಸ್ವಪದಮಾಸ್ಥಿತಃ ॥ ೨ ॥

ತಥಾನುತಿಷ್ಠತಸ್ತಸ್ಯ ಕಾಲೋ ಬಹುತರೋ ಯಯೌ ।
ಸ್ವಗೃಹೇ ಭುವನಸ್ಥಸ್ಯ ಮೇರೋರಿವ ಸುರದ್ವಿಷಃ ॥ ೩ ॥

ಮೂವತ್ತೇಳನೆಯ ಸರ್ಗ

ಶ್ರೀ ವಸಿಷ್ಠನು ಹೇಳಿದನು :—

೧. ವೀರರಾದ ಶತ್ರುಗಳನ್ನು ಸಂಹರಿಸತಕ್ಕವನಾದ ಪ್ರಹ್ಲಾದನು ಪೂರ್ವಾಧ್ಯಾಯದಲ್ಲಿ ವರ್ಣಿತವಾದ ಪ್ರಕಾರದಿಂದ ಆತ್ಮಸ್ವರೂಪವನ್ನು ಚೆನ್ನಾಗಿ ವಿಚಾರ ಮಾಡುವವನಾಗಿಯೇ ಪರಮಾನಂದ ರೂಪ ನಿರ್ವಿಕಲ್ಪ ಸಮಾಧಿಯಲ್ಲಿ ಪರಿನಿಷ್ಠಿತನಾಗಿಬಿಟ್ಟನು.

೨. ಹೀಗೆ ನಿರ್ವಿಕಲ್ಪ ಸಮಾಧಿನಿಷ್ಠನಾಗಿ, ಸ್ವಸ್ವರೂಪ ಸಾಮ್ರಾಜ್ಯವನ್ನು ಅನುಭವಿಸುತ್ತ ಆ ಪ್ರಹ್ಲಾದನು ಚಿತ್ರದಲ್ಲಿ ಬರೆಯಲ್ಪಟ್ಟ ಪರ್ವತದಂತೆಯೂ, ಒಂದು ದೊಡ್ಡ ಶಿಲೆಯಲ್ಲಿ ಕೆತ್ತಲ್ಪಟ್ಟಿರುವ ವಿಗ್ರಹದಂತೆಯೂ, ಸ್ವಲ್ಪವೂ ಅಲುಗಾಡದೆ ಶೋಭಿಸುತ್ತಿದ್ದನು.

೩. ಈ ಪ್ರಕಾರವಾಗಿ ಪ್ರಪಂಚದ ಮಧ್ಯದಲ್ಲಿರುವ ಮೇರು ಪರ್ವತದ ಹಾಗೆ ನಿಶ್ಚಲನಾಗಿ ತನ್ನ ಮನೆಯೊಳಗೆ ಸಮಾಧಿಲೀನನಾಗಿದ್ದ ಸುರವೈರಿಯಾದ (ಅಸುರನಾದ) ಆ ಪ್ರಹ್ಲಾದನಿಗೆ ಬಹಳ ದೀರ್ಘವಾದ ಕಾಲವು ಕಳೆದು ಹೋಯಿತು.

ಬೋಧಿತೋಽಪ್ಯಸುರಾಧೀಶೈರ್ನಬುಧ್ಯತ ಮಹಾಮತಿಃ |
ಆಕಾಶೇ ಬಹುಸೇಕೋಽಪಿ ಬೀಜ ಕೋಶಾದಿವಾಂಕುರಃ || ೪ ||

[ಪ್ರಹ್ಲಾದನು ರಾಕ್ಷಸ ಕುಲದಲ್ಲಿ ಹುಟ್ಟಿದವನು. ರಾಕ್ಷಸರೋ ಸುರದ್ವೇಷಿಗಳು (ಅಸುರರು.) ಅದು ಕಾರಣ, ತಸ್ಯ ಸುರದ್ವಿಷಃ ಎಂದು ಉಕ್ತವಾಗಿದೆ. ದೇವಾನಾಂ ಪ್ರಿಯಃ (ದೇವತೆಗಳ ಪ್ರೀತಿಪಾತ್ರನು) ಎಂದರೆ ಪಶುಪ್ರಾಯನಾದ ದಡ್ಡನೆಂದರ್ಥ (ಆತ್ಮಜ್ಞಾನ ರಹಿತನು.) ಜ್ಞಾನಿಯು (ಮುಕ್ತನು) ದೇವತೆಗಳಿಗೆ ಅಪ್ರಿಯನು. ದೇವತೆಗಳೂ ಮುಮುಕ್ಷುವಿನ ಜ್ಞಾನಾರ್ಜನೆಯ ಪ್ರಯತ್ನದಲ್ಲಿ ವಿಘ್ನಗಳನ್ನು ತಂದು ಒಡ್ಡುವರು. ಏಕೆಂದರೆ ಜ್ಞಾನಿಯು ಕ್ರಿಯಾಕಾರಕ ಫಲಾತ್ಮಕ ಭೇದ ಬುದ್ಧಿ ಶೂನ್ಯನಾಗಿರುವ ಕಾರಣ ಕರ್ತೃತ್ವ ಭೋಕ್ತೃತ್ವಾದ್ಯಭಿಮಾನವಿಲ್ಲದೆ ಯಜ್ಞಾದಿ ಕರ್ಮಗಳನ್ನು ಮಾಡದೆ ಹೋಗಬಹುದು. ಹೀಗಾಗಿ ದೇವತೆಗಳಿಗೆ ಹವಿರ್ಭಾಗವು ದೊರೆಯದೆ ಹೋಗಬಹುದು ಅಜ್ಞಾನಿಯಾದರೋ ತನ್ನಲ್ಲಿ ವರ್ಣಾಶ್ರಮ ವಯೋವಸ್ಥಾದಿ ವಿಶೇಷ ಧರ್ಮಗಳನ್ನು ಅಭ್ಯಾಸ ಮಾಡಿಕೊಂಡು ತನ್ಮೂಲಕ ನಾನು ಬ್ರಾಹ್ಮಣ, ಗೃಹಸ್ಥ, ತರುಣ, ಇದು ನನ್ನ ವಿಹಿತ ಕರ್ಮ, ಈ ಹವಿಸ್ಸನ್ನು ಕರ್ತೃವಾದ ನಾನು ಈ ವಿಧಾನದಿಂದ ಈ ಸಾಧನಗಳಿಂದ ಈ ಫಲಕ್ಕಾಗಿ ಅಗ್ನಿಯಲ್ಲಿ ಹೋಮ ಮಾಡಬೇಕು. ಇತ್ಯಾದಿ ನಾನಾ ಭೇದ ಬುದ್ಧಿಗಳನ್ನು ಕಲ್ಪಿಸಿಕೊಂಡು ಕರ್ಮಗಳಲ್ಲಿ ತೊಡಗುವನು. ಆದುದರಿಂದ ಆತ್ಮಜ್ಞಾನ ರಹಿತನು (ಕರ್ಮಿಯು) ದೇವ ಪ್ರಿಯನು, ಜ್ಞಾನಿಯು ದೇವಾಪ್ರಿಯನೂ ಎಂಬ ಅರ್ಥದಲ್ಲಿಯೂ ಪರಮ ಭಾಗವತೋತ್ತಮನಾದ ಮಹಾ ಜ್ಞಾನಿಯಾದ ಪ್ರಹ್ಲಾದನಿಗೆ ಸುರದ್ವಿಷಃ ಎಂದು ಹೇಳಿರುವುದು ಯುಕ್ತವೇ.]

೪. ಆಗ ಇತರರಾದ ಅಸುರ ನಾಯಕರು ತಮ್ಮ ರಾಜನಾದ ಪ್ರಹ್ಲಾದನನ್ನು ಸಮಾಧಿಯಿಂದ ಎಚ್ಚರಗೊಳಿಸುವುದಕ್ಕೆ ಅನೇಕ ವಿಧ ಪ್ರಯತ್ನಗಳನ್ನು ಮಾಡಿದರೂ, ಆಕಾಲದಲ್ಲಿ ಎಷ್ಟೇ ಹೆಚ್ಚಾಗಿ ನೀರು ಹೊಯ್ದರೂ, ಏನೇ ಮಾಡಿದರೂ ಬೀಜ ಗರ್ಭದಿಂದ ಒಡೆದು ಮೊಳಕೆಯು ಹೊರಗೆ ಹೊರಡದಿರುವಂತೆಯೇ, ಆ ಮಹಾ ಜ್ಞಾನಿಯಾದ ಪ್ರಹ್ಲಾದನು ಸಮಾಧಿಯನ್ನು ಬಿಟ್ಟು ಬಹಿರ್ಮುಖನಾಗಲೇ ಇಲ್ಲ.

ಏವಂ ವರ್ಷ ಸಹಸ್ರಾಣಿ ಪೀನಾತ್ಮಾsತಿಷ್ಠದೇಕದೃಕ್ ।
ಶಾಂತ ಏವಾಸುರಪುರೇ ಮಾರ್ತಾಂಡ ಇವ ಚೋಪಲೇ ॥ ೫ ॥

ಪರಾನಂದದಶೈಕಾಂತ ಪರಿಣಾಮಿತಯಾ ತಯಾ ।
ನಿರಾನಂದಂ ಪರಾಭಾಸ ಮಿವಾಭಾಸಪದಂ ಗತಃ ॥ ೬ ॥

ಏತಾವತಾಥ ಕಾಲೇನ ತದ್ರಸಾತಲ ಮಂಡಲಂ ।
ಬಭೂವಾರಾಧಕಂ ತೀಕ್ಷ್ಣಂ ಮಾತ್ಸ್ಯನ್ಯಾಯ ಕದರ್ಥಿತಂ ॥ ೭ ॥

---

೫. ಹೀಗೆ ಪ್ರಹ್ಲಾದನು ಅನೇಕ ಸಹಸ್ರವರ್ಷಗಳಕಾಲ, ಆತ್ಮವೊಂದರಲ್ಲಿಯೇ ನೆಟ್ಟ ದೃಷ್ಟಿಯುಳ್ಳವನಾಗಿ (ಬಾಹ್ಯ ದೃಷ್ಟಿ ಶೂನ್ಯನಾಗಿ) ಕಲ್ಲು ಬಂಡೆಯಲ್ಲಿ ಕೆತ್ತಲ್ಪಟ್ಟಿರುವ ಸೂರ್ಯ ಮಂಡಲದಂತೆ ನಿಶ್ಚಲನಾಗಿ (ಶಾಂತನಾಗಿ) ಆ ರಾಕ್ಷಸ ನಗರದಲ್ಲಿ ಬ್ರಹ್ಮಾತ್ಮಾನುಭವ ಮಾಡಿಕೊಳ್ಳುತ್ತಾ ನಿರ್ವಿಕಲ್ಪ ಸಮಾಧಿಸ್ಥನಾಗಿದ್ದನು.

೬. ಈ ರೀತಿಯಾಗಿ, ಭೂಮಾ ಎಂದು ಪ್ರಸಿದ್ಧವಾದ ನಿರತಿಶಯಪರಮಾನಂದ ದೆಸೆಯಲ್ಲಿ ಏಕರಸಾತ್ಮಕವಾಗಿ ಪರಣತವಾದ ಸ್ಥಿತಿಯಲ್ಲಿದ್ದುದರಿಂದ, ಆ ಪ್ರಹ್ಲಾದನು ಆನಂದ ಶೂನ್ಯವಾಗಿಯೂ ಆತ್ಮ ಪ್ರಕಾಶರಹಿತವಾಗಿಯೂ ಇರುವ ಮರಣವನ್ನು ಹೊಂದಿ ಬಿಟ್ಟಿರುವನೋ ಎಂಬ ಭ್ರಾಂತಿಯನ್ನು ಸಮೀಪದಲ್ಲಿದ್ದ ಪರಿಜನರಿಗೆ ಉಂಟುಮಾಡುವ ರೀತಿಯಲ್ಲಿ ದೇಹ ಮಾತ್ರಾವಶಿಷ್ಟನಾಗಿ ಇದ್ದನು. (ಪ್ರಾಣಾ ಪಾನ ಗತಿಯನ್ನು ನಿರೋಧ ಮಾಡಿದ್ದುದರಿಂದ ಉಸಿರಾಡುತ್ತಿರಲಿಲ್ಲ. ಇಂದ್ರಿಯವ್ಯಾಪಾರವೊಂದೂ ಇರಲಿಲ್ಲ. ಆದರಿಂದ ಎಲ್ಲರಿಗೂ ಇವನು ಮೃತನಾಗಿರುವನೇನೋ ಎಂಬ ಶಂಕೆ ಉಂಟಾಯಿತು.)

೭. ಬಳಿಕ ಹೀಗೆ ಇಷ್ಟು ದೀರ್ಘಕಾಲವೂ ಪ್ರಹ್ಲಾದರಾಜನು ಅಂತರ್ಮುಖನಾಗಿದ್ದು ಬಿಟ್ಟಕಾರಣ, ಆ ಪಾತಾಳ ಮಂಡಲವೆಲ್ಲವೂ ಅರಾಜಕವಾಗಿ ಮಾತ್ಸ್ಯನ್ಯಾಯದಿಂದ ಬಹುವಾಗಿ ಪೀಡಿಸಲ್ಪಟ್ಟು ಅತಿ ಭಯಂಕರವಾಗಿ ಬಿಟ್ಟಿತು.

[ಮಾತ್ಸ್ಯ ನ್ಯಾಯ-ಅಗಾಧ ಜಲಾಶಯಗಳಲ್ಲಿ ದೊಡ್ಡ ಮೀನುಗಳು ಸಣ್ಣ ಮೀನುಗಳನ್ನು ನುಂಗಿ ಬಿಡುವುವು. ಇದರಂತೆಯೇ ಬಲಿಷ್ಠರಿಂದ ಸಜಾತೀಯರೋ ಅಥವಾ ವಿಜಾತೀಯರೋ ನಿಷ್ಕಾರಣವಾಗಿಯೇ ದುರ್ಬಲರನ್ನೂ ವಧಾದಿ ಚಿತ್ರ ಹಿಂಸೆಗಳಿಗೆ ಗುರಿಮಾಡಿ ಅವರ ಸರ್ವಸ್ವವನ್ನೂ ಅಪಹರಿಸಿ ಜೀವಿಸುವರು. ಇದನ್ನು

ಹಿರಣ್ಯ ಕಶಿಪೌ ಕ್ಷೀಣೇ ಸಮಾಧೌ ತತ್ಸುತೇ ಸ್ಥಿತೇ ।
ನ ಬಭೂವಾಪರಃ ಕಶ್ಚಿದ್ರಾಜಾ ದನುಸುತಾಲಯೇ ॥ ೮ ॥

ಅಸುರೇಶಾರ್ಥಿನಾಂ ತೇಷಾಂ ದಾನವಾನಾಂ ಸಮಾಧಿತಃ ।
ಪರೇಣಾಪಿ ಪ್ರಯತ್ನೇನ ಪ್ರಹ್ಲಾದೋ ನ ವ್ಯಬುಧ್ಯತ ॥ ೯ ॥

ನ ಪ್ರಾಪುರ್ವಿಕಸದ್ರೂಪಂ ಪತಿಂ ತಮಸುರಾರಯಃ ।
ಲಸತ್ಪತ್ರಲತಾಜಾಲಂ ನಿಶಿ ಪದ್ಮಮಿವಾಲಯಃ ॥ ೧೦ ॥

ಮಾತ್ಸ್ಯ ನ್ಯಾಯವೆಂದು ಹೇಳುವರು. ರಾಜದಂಡ ಭಯವಿದ್ದರೆ ಈ ವಿಧವಾದ ಹಿಂಸೆಗಳು ಸಾಮಾನ್ಯವಾಗಿ ಸಂಭವಿಸುವುದಿಲ್ಲ. ಇನ್ನು ರಾಜನೇ ಇಲ್ಲದೇ ಹೋಗಿ ರಾಜ್ಯವೆಲ್ಲ ಅರಾಜಕವಾದರೆ ಹೇಳಬೇಕೇನು ?]

೮. ಆಗ ಹಿರಣ್ಯಕಶಿಪು ಕ್ಷಯ ಹೊಂದಿದ್ದನು. ಅವನ ಮಗನಾದ ಪ್ರಹ್ಲಾದನೋ ಸಮಾಧಿನಿಷ್ಠನಾಗಿದ್ದನು. ಈ ಸಮಯದಲ್ಲಿ ಆ ಪಾತಾಳ ಲೋಕಕ್ಕೆ ಬೇರೊಬ್ಬನು ಯಾವನೂ ರಾಜನಾಗಿರಲಿಲ್ಲ.

೯. ಆದುದರಿಂದ ಅಸುರ ಲೋಕಕ್ಕೆ ಒಬ್ಬ ರಾಜನಿರಬೇಕೆಂದು ಅಪೇಕ್ಷಿಸಿ, (ಹಕ್ಕುದಾರನಾದ) ಪ್ರಹ್ಲಾದನನ್ನೇ ರಾಜನನ್ನಾಗಿ ಮಾಡಿಕೊಳ್ಳುವ ಸಲುವಾಗಿ, ಆ ದಾನವರೆಲ್ಲ ಎಷ್ಟೋ ವಿಧಗಳಲ್ಲಿ ಮಹಾ ಪ್ರಯತ್ನಗಳನ್ನು ಮಾಡಿದರೂ, ಯಾವುದರಿಂದಲೂ, ಪ್ರಹ್ಲಾದನು ಸಮಾಧಿಯನ್ನು ಬಿಟ್ಟು ಬಹಿರ್ಮುಖ ನಾಗಲೇ ಇಲ್ಲ.

೧೦. ರಾತ್ರಿ ವೇಳೆಗಳಲ್ಲಿ ಕಮಲ ಪುಷ್ಪವು ಶೋಭಿಸುತ್ತಿರುವ ಪತ್ರಲತಾ ಜಾಲವುಳ್ಳದ್ದಾಗಿ ಅರಳುವುದನ್ನು (ವಿಕಸಿತವಾಗುವಿಕೆ) ಭ್ರಮರಗಳು ಹೇಗೆ ನೋಡಲೇ ಆರವೋ, ಹಾಗೆ ದಾನವರು ತಮ್ಮ ರಾಜನಾದ ಪ್ರಹ್ಲಾದನು ಸಮಾಧಿ ಯನ್ನು ಬಿಟ್ಟು ಬಹಿರ್ಮುಖನಾದುದನ್ನು ನೋಡಲೇ ಇಲ್ಲ.

(ರಾತ್ರಿಯಲ್ಲಿ ಕಮಲವು ಅರಳುವುದು ಅಸಂಭವವು. ಭ್ರಮರಗಳೇ ಏಕೆ, ಬೇರೆ ಯಾರೂ ಕಂಡಿಲ್ಲ. ಅದರಂತೆಯೇ ಪ್ರಹ್ಲಾದನು ಬಹಿರ್ಮುಖನಾದುದನ್ನು ನೋಡುವುದೂ ಅಷ್ಟೇ ಅಸಂಭವವಾಗಿತ್ತು. ಅವನ ಸ್ಥಿರತೆ ಅಷ್ಟು ದೃಢವಾಗಿತ್ತು.)

ಸಂ ವಿದ್ವಾದೋ ನ ತಸ್ಯಾಂತರಬೋಧ್ಯತ ವಿಚೇತಸಃ ।
ಭುವಶ್ಚೇಷ್ಟಾಕ್ರಮ ಇವ ಪೌರುಷೋ ಗತಭಾಸ್ವತಃ ॥ ೧೧ ॥

ಅಥೋದ್ವಿಗ್ನೇಷು ದೈತ್ಯೇಷು ಗತೇಷ್ವಭಿಮತಾಂ ದಿಶಂ ।
ವಿಚರತ್ಸು ಯಥಾ ಕಾಮಮರಾಜನಿ ಪರೇ ಪುರಾ ॥ ೧೨ ॥

ಚಿರಾಯ ಪಾತಾಲಮಭೂದಭೂಪಾಲತಯಾ ತಯಾ ।
ಮಾತ್ಸ್ಯ ನ್ಯಾಯ ವಿಪರ್ಯಸ್ತಮಸ್ತಂಗತ ಗುಣ ಕ್ರಮಂ ॥ ೧೩ ॥

ಬಲಿಮುಕ್ತಾಬಲಪುರಂ ಮರ್ಯಾದಾಕ್ರಮ ವರ್ಜಿತಂ ।
ಸರ್ವಾರ್ಥಾಶೇಷವನಿತಂ ಪರಸ್ಪರಹೃತಾಂಬರಂ ॥ ೧೪ ॥

ಪ್ರಲಾಪಾಕ್ರಂದ ಪುರುಷಂ ವಿಸಂಸ್ಥಾನ ಪುರಾಂತರಂ ।
ಲುಠದುದ್ಯಾನ ನಗರಂ ವ್ಯರ್ಥಾನರ್ಥಕದರ್ಥಿತಂ ॥ ೧೫ ॥

ಚಿಂತಾಪರಾಸುರಗಣಂ ನಿರನ್ನಫಲ ಬಾಂಧವಂ ।
ಅಕಾಂಡೋತ್ಪಾತ ವಿವಶಂ ಧ್ವಸ್ತಾಶಾಮುಖ ಮಂಡಲಂ ॥ ೧೬ ॥

---

೧೧. ಸೂರ್ಯಾಸ್ತಾನಂತರ ಸಕಲ ಪ್ರಾಣಿಗಳೂ ಮಲಗಿ ನಿದ್ರಾಸಕ್ತರಾಗಿರುವಾಗ, ಭೂಮಿಯ ಮೇಲೆ ಜನರ ಯಾವುದೊಂದು ವ್ಯಾಪಾರವೂ ಕಾಣದೆ ಸರ್ವತ್ರ ಶಾಂತಿಯೇ ವ್ಯಾಪಿಸಿರುವುದೋ, ಹಾಗೆ ನಿರ್ಮನಸ್ಕ ಸ್ಥಿತಿಯಲ್ಲಿದ್ದ ಪ್ರಹ್ಲಾದನಿಗೆ ಪರಿಜನರು ಅವನನ್ನು ಬಹಿರ್ಮುಖನನ್ನಾಗಿ ತಿರುಗಿಸಲು ಮಾಡಿದ ಪ್ರಯತ್ನವೂ, ವಾಗಾಡಂಬರವೂ, ಒಂದೂ ಒಳಗೆ ಪ್ರವೇಶಿಸಲೇ ಇಲ್ಲ. ಅವನ ಮನಸ್ಸು ಎಂದಿನಂತೆ ಪ್ರಶಾಂತವಾಗಿಯೇ ಇತ್ತು. ಅದು ಕಾರಣ, ಅವನು ಎಚ್ಚರಗೊಳ್ಳಬಹುದೆಂಬ ಸುದ್ದಿಗೂ ಅವಕಾಶವಿರಲಿಲ್ಲ.

೧೨-೧೩. ತರುವಾಯ ದೈತ್ಯರಲ್ಲಿ ದುರ್ಬಲರಾದ ಕೆಲವರು ಭಯದಿಂದ ಉದ್ವೇಗಗೊಂಡವರಾಗಿ ತಮಗೆ ಬೇಕಾದ ಕಡೆಗಳಿಗೆಲ್ಲಾ ಓಡಿಹೋಗುತ್ತಲೂ, ಪ್ರಬಲರಾದವರು ಕೆಲವರು ಅರಾಜಕವಾದ ಆ ನಗರಿಯಲ್ಲಿ ಸ್ವೇಚ್ಛೆಯಿಂದ ಕ್ರೂರಕರ್ಮಿಗಳಂತೆ ಪರಹಿಂಸಕರಾಗಿ ವ್ಯವಹರಿಸುತ್ತಲೂ ಇರಲಾಗಿ, ಆ ಪಾತಾಳಲೋಕವು ಈಬಗೆಯಾದ ಅರಾಜಕತ್ವದಿಂದ ಮೊದಲಿನಂತೆ ಬಹುಕಾಲ ಪರ್ಯಂತವೂ ಮಾತ್ಸ್ಯ ನ್ಯಾಯ ಪೀಡಿತವಾಗಿ ಇದ್ದಿತು. ಆಗ ಸದ್ಗುಣ, ಸತ್ಕಾರ್ಯಗಳೆಂಬ ಶಬ್ದಗಳೂ ಕೂಡ ಆ ಲೋಕದಲ್ಲಿ ಅಸ್ತಂಗತವಾಗಿದ್ದುವು. (ಕೇಳಬರುತ್ತಿರಲಿಲ್ಲ).

೧೪-೧೫-೧೬-೧೭. ಪ್ರಬಲರಾದವರು ದುರ್ಬಲರ ಪುರಾದಿ ಸ್ವತ್ತುಗಳನ್ನು

ಸುರಾರ್ಭಕಪರಾ ಭೂತಂ ಭೂತೈರಾಕ್ರಾಂತ ಮನ್ತ್ಯಜೈಃ ।
ಭೂತರಿಕ್ತಮಲಕ್ಷ್ಮೀಕಮುಚ್ಛಿನ್ನಪ್ರಾಯ ಕೋಟರಂ ॥ ೧೭ ॥

ಅಪಹರಿಸಿ ತಾವೇ ಅನುಭವಿಸಿದರು. ಜಗತ್ಸ್ಥಿತಿ ಪಾಲನೆಗಾಗಿ ಕ್ಲ್ಪಪ್ತವಾದ ಲೋಕ ಮರ್ಯಾದೆಯೊಂದನ್ನು ಅನುಸರಿಸಲಿಲ್ಲ. ಎಲ್ಲೆಲ್ಲಿಯೂ ಎಲ್ಲರೂ ಕಂಡ ಕಂಡ ಪರ ಸ್ತ್ರೀಯರನ್ನೆಲ್ಲ ಬಹುವಾಗಿ ಹಿಂಸಿಸಿ ಗೋಳಾಡಿಸಿದರು. ಒಬ್ಬೊಬ್ಬನೂ ಮತ್ತೊಬ್ಬರ ಮೈಮೇಲಿರುವ ಬಟ್ಟೆಯನ್ನೂ ಬಿಡದೆ ಸುಲಿಯುತ್ತಿದ್ದನು. ಅಲ್ಲಿನ ಜನರೆಲ್ಲರೂ ಪ್ರಬಲರ ಬಾಧೆಯನ್ನು ಸಹಿಸಲಾರದೆ ಪ್ರಲಪಿಸುತ್ತಾ ಘಟ್ಟಿಯಾಗಿ ರೋದಿಸಿದರು. ನಗರಗಳ ಒಳಗಡೆಯಿರುವ ಸನ್ನಿವೇಶಗಳೆಲ್ಲವೂ ಭಗ್ನವಾದವು. ಉಪ ವನಗಳಲ್ಲಿ ವೃಕ್ಷ ಲತಾದಿಗಳೂ, ನಗರಗಳಲ್ಲಿ ನಾಗರಿಕರೂ ನೆಲದ ಮೇಲೆ ಬಿದ್ದು ಹೊರಳಾಡಿದರು. ಎಲ್ಲರೂ ನಿಷ್ಕಾರಣವಾಗಿ ಅನರ್ಥ ಸಂಚಯಗಳಿಗೆ ಸಿಕ್ಕಿ ಪೀಡಿತರಾದರು. ದಾನವರೆಲ್ಲರೂ ಗುಂಪು ಕಟ್ಟಿಕೊಂಡು ಇತಿ ಕರ್ತವ್ಯತಾ ಮೂಢರಾಗಿ ಚಿಂತಾಪರವಶರಾದರು. ಪತ್ನೀಪುತ್ರಾದಿ ಆತ್ಮ ಬಂಧುಗಳಿಗೂ ಕೂಡ ಸ್ವಲ್ಪ ಅನ್ನವನ್ನಾಗಲಿ, ಹಣ್ಣು ಕಾಯಿಗಳನ್ನಾಗಲಿ ತಂದುಕೊಡಲಾಗದೆ ಕಣ್ಣು ಕಣ್ಣು ಬಿಟ್ಟರು. ಆಕಸ್ಮಿಕವಾಗಿ (ಅನಿರೀಕ್ಷಿತವಾಗಿ) ನಾನಾ ಉತ್ಪಾತಗಳು ಸಂಪ್ರಾಪ್ತವಾಗಿ ಎಲ್ಲರನ್ನೂ ಮೋಹಪರವಶರನ್ನಾಗಿ ಮಾಡಿದುವು. ದಿಗಂಗತ ಮಂಡಲಗಳೆಲ್ಲವೂ ಧೂಳಿಧೂಸರವಾದುವು. ದೇವತೆಗಳ ಸಣ್ಣ ವಯಸ್ಸಿನ (ಬಾಲಕರೂ ಅಲ್ಲಿಗೆ ಹೋಗಿ ದಾನವರ ನಾಯಕರನ್ನೂ) ಲಕ್ಷ್ಯ ಮಾಡದೆ ಹಾಸ್ಯ ಮಾಡಿದರು. ಕೇವಲ ತಾಮಸ ವೃತ್ತಿಗಳಾದ ನಾಯಿ, ನರಿ, ಪಿಶಾಚಾದಿ ಸಕಲ ಭೂತಗಳೂ ಆ ಲೋಕವನ್ನೆಲ್ಲ ಆಕ್ರಮಿಸಿಕೊಂಡವು. ಯಾವ ಯಾವ ಮನೆಯನ್ನು ನೋಡಿದರೂ, ಅದೊಂದರಲ್ಲಿಯೂ ಒಬ್ಬ ಮನುಷ್ಯನಾಗಲಿ ಅಥವಾ ಒಂದು ಪ್ರಾಣಿಯಾಗಲೀ ಕಾಣಿಸಲಿಲ್ಲ. ಸಮಸ್ತವೂ ಕಾಂತಿಹೀನವಾಗಿಯೂ, ನಷ್ಟಪ್ರಾಯವಾಗಿಯೂ ಪಾಳು ಬಿದ್ದಿದ್ದಿತು.

ಅನಿಯತ ವನಿತಾರ್ಥ ಮಂತ್ರ ಯುದ್ಧಂ
ಹೃತಧನದಾರ ವಿರಾವಿತಂ ಸಮಂತಾತ್ ||
ಕಲಿಯುಗ ಸಮಯೋದ್ಭಟೋ ತ್ಕಟಾಭಂ
ತದಸುರ ಮಂಡಲ ಮಾಕುಲಂ ಬಭೂವ || ೧೮ ||

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ "ಅಸುರ ಮಂಡಲ ವ್ಯಾಕುಲೀಭವನಂ"ನಾಮ ಸಪ್ತತ್ರಿಂಶಃ ಸರ್ಗಃ

---

೧೮. ಆಗ ಆ ಲೋಕದಲ್ಲಿ ಎಲ್ಲರೂ ಎಲ್ಲನಿಯಮಗಳನ್ನೂ ಅತಿಕ್ರಮಿಸಿ ಯಾರನ್ನೂ ಲಕ್ಷಿಸದೆ ಸ್ವೇಚ್ಛೆಯಾಗಿ ವ್ಯವಹರಿಸುತ್ತ ತಮತಮಗೆ ಸಿಕ್ಕಿದ ಹೆಂಗಸರನ್ನೂ, ದ್ರವ್ಯಗಳನ್ನೂ ಅಪಹರಿಸಿದರು. ಒಬ್ಬರನ್ನೊಬ್ಬರು ಸೌಹಾರ್ದದಿಂದ ಕಂಡು ವರ್ತಿಸಬೇಕೆಂಬ (ನಿಯಮವು) ತಪ್ಪಿಹೋಯಿತು. ಇದರಿಂದ ಪರಸ್ಪರ ಯುದ್ಧಕ್ಕೆ ಉಪಕ್ರಮವಾಯಿತು. ಸರ್ವತ್ರ ತಮ್ಮ ಪತ್ನೀ ಪುತ್ರಾದಿಗಳನ್ನೂ, ಧನ ಕನಕ ವಸ್ತ್ರಾದಿಗಳನ್ನೂ ಕಳೆದುಕೊಂಡವರ ಆರ್ತನಾದವೊಂದೇ ಕೇಳಿಸಿತು. ಹೀಗೆ ಆ ಅಸುರಲೋಕವು (ಪಾತಾಳ ಮಂಡಲವು) ಕಲಿಯುಗದ (ಕಾಲದ)ಲ್ಲಿರುವಂತೆ ಪರಸ್ವಾಪಹರಣಶೂರರಾದ ಕ್ರೂರ ಕರ್ಮಿಗಳಾದ ಘಾತುಕರಿಂದ ನಿಬಿಡವಾಗಿಯೂ, ಸರ್ವತ್ರ ಭಯೋದ್ವಿಗ್ನವಾಗಿಯೂ, ಜಗದ್ವಿಪ್ಲವ ಹೇತುವಾದ ಅಧರ್ಮ ಸಂಕಟಕ್ಕೆ ಒಳಗಾಯಿತು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ಮಹಾರಾಮಾಯಣದ ಉಪಶಮ ಪ್ರಕರಣದಲ್ಲಿ "ಅಸುರ ಮಂಡಲ ವ್ಯಾಕುಲೀಭವನ" ವೆಂಬ ಮೂವತ್ತೇಳನೆಯ ಸರ್ಗವು.

ಅಷ್ಟತ್ರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಅಥಾಖಿಲಜಗಜ್ಜಾಲಕ್ರಮಪಾಲನದೇವನಃ ।
ಕ್ಷೀರೋದನಗರೇ ಶೇಷಶಯ್ಯಾಸನಗತೋ ಹರಿಃ ॥ ೧ ॥

ಪ್ರಾವೃಣ್ನಿದ್ರಾವ್ಯಪರಮೇ ದೇವಾರ್ಥಮರಿಸೂದನಃ ।
ಧಿಯಾ ವಿಲೋಕಯಾಮಾಸ ಕದಾಚಿಜ್ಜಾಗತೀಂ ಗತಿಂ ॥ ೨ ॥

ತ್ರಿವಿಷ್ಟಪಂ ಸ್ವಮನಸಾ ಪಾರ್ಥಿವಂ ಚಾವಲೋಕ್ಯ ಸಃ ।
ಆಚಾರಮಾಜಗಾಮಾಶು ಪಾತಾಲಮರಿಪಾಲಿತಂ ॥ ೩ ॥

ಮೂವತ್ತೆಂಟನೆಯ ಸರ್ಗ

ಶ್ರೀ ವಸಿಷ್ಠನು ಹೇಳಿದನು :—

೧-೨. (ಹೀಗೆ ಆ ಪಾತಾಳ ಲೋಕವೆಲ್ಲವೂ ಅರಾಜಕವಾಗಿ ವಿಪದ್ಗ್ರಸ್ತವಾಗಿರಲು, ಜಗತ್ತಿನಲ್ಲೆಲ್ಲ ಅಧರ್ಮವು ಬಲಗೊಂಡು ನೆಲೆಸಿತು. ಧರ್ಮವು ಗ್ಲಾನಿಯನ್ನು ಹೊಂದುತ್ತಾ ಬಂದಿತು. ಬಳಿಕ ಇದನ್ನು ಅರಿತು, ಸಮಸ್ತ ಜಗತ್ಸಮುದಾಯಿಗಳ ನಿಯಮಗಳನ್ನೂ ಪಾಲಿಸುವುದೇ ಕ್ರೀಡನವಾಗುಳ್ಳ (ಸಕಲ ಲೋಕ ಮರ್ಯಾದಾ ಪಾಲನವೇ ಲೀಲೆಯಾಗುಳ್ಳ) ಕ್ಷೀರ ಸಾಗರವೆಂಬ ನಗರಿಯಲ್ಲಿ ಆದಿಶೇಷನೆಂಬ ಹಾಸುಗೆಯ ಮೇಲೆ ಮಲಗಿರುವ, ಶತ್ರು ಸಂಹಾರಕನಾದ ಶ್ರೀಹರಿಯು, ವರ್ಷರ್ತುವಿನ ಪ್ರಾರಂಭದಿಂದ ಮೊದಲುಗೊಂಡು ಕಾರ್ತೀಕಮಾಸದ ಅಂತದವರೆವಿಗೂ ನಿದ್ರೆಯು ಮುಗಿದುಹೋದ ಬಳಿಕ ದೇವತೆಗಳ ಪ್ರಯೋಜನವನ್ನು ಸಾಧಿಸುವುದಕ್ಕೋಸ್ಕರ ಅವರಿಂದಲೇ ಸಕಾಲದಲ್ಲಿ ಸ್ತೋತ್ರಾದಿಗಳಿಂದ ಎಚ್ಚರಗೊಂಡವನಾಗಿ ಪ್ರಪಂಚದಲ್ಲಿ ಆಗ ಸಂಭವಿಸಿದ್ದ ದುರ್ದೆಸೆಯನ್ನು ಒಂದು ಸಲ ತನ್ನ ಮನಸ್ಸಿನಲ್ಲಿ ಚೆನ್ನಾಗಿ ಪರ್ಯಾಲೋಚಿಸಿದನು.

೩. ಆಗ ಆ ದೇವದೇವನು, ಸ್ವರ್ಗಲೋಕದ ಸ್ಥಿತಿಗತಿಗಳನ್ನೂ, ಭೂಲೋಕದಲ್ಲಿ ಜನರು ಆಚರಿಸುತ್ತಿದ್ದ ಶುಭಾಶುಭಾಚಾರವನ್ನೂ ಪರಾಮರ್ಶಿಸಿ, ತತ್‌ಕ್ಷಣವೇ ಶತ್ರುಪಾಲಿತವಾದ ಪಾತಾಳಲೋಕದ ತಾತ್ಕಾಲಿಕ ಸ್ಥಿತಿಯನ್ನೂ ತನ್ನ ಮನಸ್ಸಿನಿಂದಲೇ ಪರ್ಯಾಲೋಚಿಸಿದನು.

ತತ್ರ ಸ್ಥಿರಸಮಾಧಾನೇ ಸ್ಥಿತೇ ಪ್ರಹ್ಲಾದದಾನವೇ ।
ದೃಷ್ಟ್ವಾ ಸಂಪದಮಿಂದ್ರಸ್ಯ ಪುರೇ ಪ್ರೌಢಿಮುಪಾಗತಾಂ ॥ ೪ ॥

ವ್ಯಾಲತಲ್ಪತಲಸ್ಥಸ್ಯ ಕ್ಷೀರೋದಾರ್ಣವಶಾಯಿನಃ ।
ಶಂಖಚಕ್ರಗದಾಪಾಣೇರ್ದೇಹಸ್ಯಾಂತರಚಾರಿಣಃ ॥ ೫ ॥

ಪದ್ಮಾಸನಸ್ಥಸ್ಯ ಮನಃಶರೀರೇಣಾತಿಭಾಸ್ವತಾ ।
ಇದಂ ಸಂಚಿಂತಯಾಮಾಸ ತ್ರೈಲೋಕ್ಯಾಬ್ಜಮಹಾಲಿನಾ ॥ ೬ ॥

ಪ್ರಹ್ಲಾದೇ ಪದವಿಶ್ರಾಂತೇ ಪಾತಾಲೇ ಗತನಾಯಕೇ ।
ಕಷ್ಟಂ ಸೃಷ್ಟಿರಿಯಂ ಪ್ರಾಯೋ ನಿರ್ದೈತ್ಯತ್ವಮುಪಾಗತಾ ॥ ೭ ॥

೪-೫-೬. ಆ ಪಾತಾಳಲೋಕದಲ್ಲಿ, ದೈತ್ಯರಾಜನಾದ ಪ್ರಹ್ಲಾದನೂ ಸ್ಥಿರ ಸಮಾಧಿಯಲ್ಲಿ ನಿಶ್ಚಲವಾಗಿರಲು, ಅಮರಾವತಿಯಲ್ಲಿ ಇಂದ್ರನ ಸಂಪತ್ತು ವೃದ್ಧಿ ಹೊಂದಿ ಸ್ಥಿರವಾಗಿ ನೆಲೆಸಿರುವುದನ್ನು ಯೋಚಿಸಿ ಮೊದಲು ಕ್ಷೀರ ಸಾಗರದ ಮೇಲೆ ಮಲಗಿದ್ದು ಎದ್ದು ಆದಿಶೇಷನೆಂಬ ಮೆತ್ತನೆಯ ಹಾಸುಗೆಯ ಮೇಲೆ ಪದ್ಮಾಸನ ಬಂಧದಿಂದ ಕುಳಿತಿದ್ದ ಕೈಗಳಲ್ಲಿ ಶಂಖ ಚಕ್ರಗದಾ ಖಡ್ಗಗಳನ್ನು ಧರಿಸಿರುವ, ಭೂತಗಳ ಹೃದ್ದೇಶದಲ್ಲಿ ಸರ್ವಾಂತರ್ಯಾಮಿಯಾಗಿ ಸಂಚರಿಸುವ ಶ್ರೀಮನ್ನಾರಾಯಣನ ಮನಸ್ಸು, ಲೋಕತ್ರಯವೆಂಬ ಕಮಲದಲ್ಲಿ ಮಹಾ ಭ್ರಮರಪ್ರಾಯವಾದ (ತ್ರೈಲೋಕ ವ್ಯಾಪಿಯಾದ) ಅತಿ ತೇಜಸ್ವಿಯಾದ ಆಗಲೇ ತನ್ನಿಂದ ಕಲ್ಪಿತವಾದ ದೇಹವನ್ನು ಸ್ವೀಕರಿಸಿ ಮುಂದೆ ಹೇಳುವ ರೀತಿಯಲ್ಲಿ ತನ್ನ ಇತಿ ಕರ್ತವ್ಯತೆಯನ್ನು ಆಲೋಚಿಸಿತು.

೭. ಆಗ ಶ್ರೀ ಹರಿಯು ಮನಸ್ಸಿನಲ್ಲಿ ಉದ್ಭವಿಸಿದ ವಿಚಾರವಾವುದೆಂದರೆ, ಈಗ ಪ್ರಹ್ಲಾದನು ನಿರ್ವಿಕಲ್ಪಕ ಸಮಾಧಿಯೆಂಬ ಸಾಮ್ರಾಜ್ಯ ಪದದಲ್ಲಿ ವಿಶ್ರಾಂತಿ ಪಡೆದಿರುವುದರಿಂದ, ಪಾತಾಳ ಲೋಕವು ಅರಾಜಕವಾಗಿ ಬಿಟ್ಟಿರುವುದು. ಇದರಿಂದ ಇನ್ನು ಮೇಲೆ ಈ ಬ್ರಹ್ಮಾಂಡದೊಳಗಾಗಿ ಪ್ರಾಯಶಃ ಒಬ್ಬ ದೈತ್ಯನೂ ಉಳಿಯದೇ ಹೋಗಿ, ನಿರ್ದೈತ್ಯವಾಗಿ ಹೋಗುವುದು. ಇದು ಮಹಾ ಕಷ್ಟಕ್ಕೆ ಇಟ್ಟುಕೊಂಡು ಅನರ್ಥಹೇತುವಾಗುವುದು.

ದೈತ್ಯಾಭಾವೇ ಸುರಶ್ರೇಣೀ ನಿರ್ಜಿಗೀಷುಪರಂ ಗತಾ ।
ಶಮಮೇಷ್ಯತ್ಯದೃಷ್ಟಾಬ್ದಪಟಲೇಷು ಸರಿದ್ಯಥಾ ॥ ೮ ॥

ಮೋಕ್ಷಾಖ್ಯಂ ನಿರ್ಗತದ್ವಂದ್ವಂ ತತೋ ಯಾಸ್ಯತಿ ತತ್ಪದಂ ।
ಕ್ಷೀಣಾಭಿಮಾನವಿರಸಾ ಲತೇವ ಪ್ರವಿಶುಷ್ಕತಾಂ ॥ ೯ ॥

ದೇವೌಘೇ ಶಾಂತಿಮಾಯಾತೇ ಭುವಿ ಯಜ್ಞತಪಃಕ್ರಿಯಾಃ ।
ಆದೇವತ್ವಫಲಾಃ ಸರ್ವಾಃ ಶಮಮೇಷ್ಯಂತ್ಯ ಸಂಶಯಂ ॥ ೧೦ ॥

---

೮. ಹೇಗೆಂದರೆ, ದೈತ್ಯರೇ ಇಲ್ಲದೆ ಹೋದ ಮೇಲೆ, ದೇವಗಣಗಳು (ಶತ್ರು ರಾಹಿತ್ಯದಿಂದ) ತಾವು ಜಯಶೀಲರಾಗಬೇಕೆಂಬ ಇಚ್ಛೆಯೇ ಇಲ್ಲದೆ, ಮೇಘವೃಂದ ಗಳ ದರ್ಶನವೇ ಇಲ್ಲದ ಅನಾವೃಷ್ಟಿ ಕಾಲಗಳಲ್ಲಿ ನದಿಗಳು ಶಾಂತವಾಗಿಬಿಡುವಂತೆ ರಾಗ ದ್ವೇಷಾದಿ ರಹಿತರಾಗಿ ಯುದ್ಧೋದ್ಯಮಗಳನ್ನು ತ್ಯಜಿಸಿ ಶಾಂತಿಯನ್ನು ಹೊಂದುವರು.

೯. ಹೀಗೆ ಶಾಂತ ಸ್ಥಿತಿಯುಂಟಾದ ಬಳಿಕ, ಅಭಿಮಾನ ಶೂನ್ಯವಾಗಿ, ಸ್ವರ್ಗ ಸುಖಗಳಲ್ಲಿಯೂ ಅಭಿರುಚಿಯಿಲ್ಲದವರಾಗಿ, ನೀರು ಕಾಣದ ಲತೆಯು ಶುಷ್ಕತ್ವವನ್ನು ಹೊಂದುವಂತೆ (ಒಣಗಿ ಹೋಗುವಂತೆ) ವೈರಾಗ್ಯವನ್ನು ಅವ ಲಂಬಿಸಿ, ಈ ದೇವಗಣಗಳು ಶೀತೋಷ್ಣ ಸುಖ ದುಃಖಾದಿ ದ್ವಂದ್ವಗಳೆಂಬ ಸರ್ವೋಪಪ್ಲವರಹಿತವಾದ (ಅಥವಾ ಅದ್ವಿತೀಯವಾದ) ಮೋಕ್ಷವೆಂಬ ಪರಮ ಪದ ವನ್ನು ಹೊಂದಿಬಿಡುವುವು.

೧೦. ದೇವಗಣಗಳೆಲ್ಲವೂ, ಪೂರ್ವೋಕ್ತ ಕ್ರಮದಿಂದ ಕ್ರಮೇಣ ಶಾಂತರಾಗಿ ಬಿಟ್ಟ ಬಳಿಕ ದೇವತೆಗಳ ಪ್ರೇರಣೆಯಿಂದಲೇ ಭೂಲೋಕದಲ್ಲಿ ಅನುಷ್ಠಿಸಲ್ಪಡ ಬೇಕಾದ ಯಜ್ಞ, ದಾನ, ತಪಸ್ಸು ಮೊದಲಾದ ಸಮಸ್ತ ಕರ್ಮಗಳಿಗೂ ಸ್ವರ್ಗದಲ್ಲಿ ದೇವತ್ವವನ್ನು ಪಡೆಯುವುದೇ ಫಲವಾಗಿರುವ ಕಾರಣ, ಈಗ ಸ್ವರ್ಗವು ನಿರ್ದೇವ ವಾಗಿ ಬಿಟ್ಟು, ಆ ದೇವತ್ವ ರೂಪ ಫಲವು ಇಲ್ಲವಾಗುವುದರಿಂದ, ಕ್ರಮೇಣ ಭೂಮಿ ಯಲ್ಲಿ ಯಜ್ಞ ದಾನಾದಿ ಸಕಲ ಕರ್ಮಗಳೂ ನಿಸ್ಸಂಶಯವಾಗಿ ಕೊನೆಗಾಣುವುವು. ಅಥವಾ ಸ್ವರ್ಗವೇ ದೇವಶೂನ್ಯವಾಗಲಾಗಿ (ನಿರ್ದೈವವಾಗಿಬಿಡಲು) ಸ್ವರ್ಗವನ್ನು ಪಡೆಯಬೇಕೆಂಬ ಅಭಿಲಾಷೆಯೇ ಇಲ್ಲದೆ ಹೋಗಿ ಲೋಕದಲ್ಲಿ ಜನರು ಇಷ್ಟಾಪೂರ್ತ ಯಜ್ಞ ದಾನಾದಿ ಕರ್ಮಗಳನ್ನು ಮಾಡದೆಯೇ ಕರ್ಮ ವಿಮುಖರಾಗಿ, ವಿವೇಕ

ಕ್ರಿಯಾಸ್ವತೋಪಶಾಂತಾಸು ಭೂರ್ಲೋಕೋsಸ್ತಮುಪೈಷ್ಯತಿ ।
ಅಸಂಸಾರಪ್ರಸಂಗೋsಥ ತಸ್ಯ ನಾಶೇ ಭವಿಷ್ಯತಿ || ೧೧ ||

ಆಕಲ್ಪಾಂತಂ ತ್ರಿಭುವನಂ ಯದಿದಂ ಕಲ್ಪಿತಂ ಮಯಾ ।
ನಾಶಮೇಷ್ಯತ್ಯಕಾಲೇನ ತಾಪೇ ಹಿಮಕಣೋ ಯಥಾ || ೧೨ ||

ಕಿಮೇವಮಸ್ಮಿನ್ನಾಭೋಗೇ ವಿಲೀಯ ಕ್ಷಯಮಾಗತೇ ।
ಕೃತಂ ಮಯೇಹ ಭವತಿ ಸ್ವಲೀಲಾಕ್ಷಯಕಾರಿಣಾ || ೧೩ ||

ವೈರಾಗ್ಯ ಶಮದಮಾದಿಗಳ ಕಡೆಗೆ ಮನಸ್ಸನ್ನು ಕೊಡಬಹುದು. ಅಂತೂ ಹೀಗೆ ಸರ್ವಥಾ, ಈಶ್ವರನಾದ ನನ್ನಿಂದ ವೇದ ಯಜ್ಞಾದಿ ಪೂರ್ವಕವಾಗಿ ಪ್ರವರ್ತಿತವಾದ ಜಗಚ್ಚಕ್ರವು ಉತ್ಸನ್ನವಾಗಿಬಿಡುವ ಪ್ರಸಂಗವೇ ಎಲ್ಲೆಲ್ಲಿಯೂ ನನಗೆ ಕಾಣುತ್ತಿದೆ.

೧೧. ಪ್ರವೃತ್ತಿ ಧರ್ಮ ರೂಪವಾದ ಇಷ್ಟಾಪೂರ್ತ ಯಜ್ಞ ದಾನ ತಪಸ್ಸು ಮೊದಲಾದ ಕರ್ಮಗಳು ಶಾಂತವಾದ ಮಾತ್ರದಿಂದಲೇ ಹಾನಿಯಾವುದು? ಎಂದರೆ, ಹೀಗೆ ಅಲ್ಪ ಕಾಲಾಂತರದಲ್ಲಿ ಕ್ರಮೇಣ ಸ್ವರ್ಗ ಫಲಗಳಾದ ಕರ್ಮಗಳೆಲ್ಲವೂ ಶಾಂತವಾಗಿಬಿಟ್ಟರೆ ಈ ಕರ್ಮಭೂಮಿಯು ಅಸ್ತವನ್ನು (ವೈಯರ್ಥ್ಯವನ್ನು) ಹೊಂದುವುದು, ಈ ಕರ್ಮ ಭೂಮಿಯೆಲ್ಲವೂ ವೈಯರ್ಥ್ಯವನ್ನು ಹೊಂದಿದರೆ ಕರ್ಮಾಧೀನವಾದ ಸಂಸಾರವೇ ಉಚ್ಛೇದವಾಗುವ ಪ್ರಸಂಗವುಂಟಾಗುವುದು.

೧೨. (ಹೀಗೂ ಆಗಲಿ, ಅದರಿಂದ ನಿನಗೇನು ನಷ್ಟ? ಎಂದರೆ) ಮಹಾ ಪ್ರಳಯ ಕಾಲದವರೆವಿಗೂ ಪ್ರವರ್ತಿತವಾಗಿರಬೇಕೆಂದು ನನ್ನಿಂದ ಯಾವ ಈ ಭುವನತ್ರಯವು ಕಲ್ಪಿತವಾಗಿರುವುದೋ, ಅದು ಈಗಲೇ ನಿಯತವಾದ ಕಾಲಕ್ಕಿಂತ ಮುಂಚೆಯೇ, ಬಿಸಿಲಿನ ತಾಪದಿಂದ ಹಿಮ ಜಲ ಬಿಂದುವು ನಾಶ ಹೊಂದುವಂತೆ, (ಅಕಾಲದಲ್ಲಿ) ನಷ್ಟವಾಗಿಬಿಡುವುದು.

೧೩. ಈ ಪ್ರಪಂಚದ ಸಂಸ್ಥಾನವು (ರಚನೆಯು ಅಥವಾ ಸನ್ನಿವೇಶವು) ಎಲ್ಲವೂ ಹೀಗೆ ಲಯ ಹೊಂದಿ ಕ್ರಮೇಣ ಕ್ಷಯಿಸಿ ಹೋದರೆ, ನಾನು ಏನು ಮಾಡಿದಂತಾಯಿತು? ನನ್ನ ಲೀಲೆಯನ್ನು (ವಿಲಾಸ ವಿನೋದ) ನಾನೇ ನಾಶ ಮಾಡಿದಂತಾಗುವುದಲ್ಲಾ!

ತತೋಽಡಮಪಿ ಶೂನ್ಯೋಽಸ್ಮಿನ್ನಷ್ಟಚಂದ್ರಾರ್ಕತಾರಕೇ ।
ವಪುಃಪ್ರಶಾಂತಿಮಾಧಾಯ ಸ್ಥಿತಿಮೇಷ್ಯಾಮಿ ತತ್ಪದೇ ॥ ೧೪ ॥

ಅಕಾಂಡ ಏವಮೇವಂ ಹಿ ಜಗತ್ಯುಪಶಮಂ ಗತೇ ।
ನೇಹ ಶ್ರೇಯೋಽನುಪಶಾಮಿ ಮನ್ಯೇ ಜೀವಂತು ದಾನವಾಃ ॥ ೧೫ ॥

(ಲೀಲಾ ಮಾತ್ರಂ ಪ್ರಭೋಃ ಸೃಷ್ಟಿಃ, ಇತ್ಯಾದಿ ಶಾಸ್ತ್ರ ವಚನಗಳು ಜಗತ್ತು ಪರಮಾತ್ಮನ ಲೀಲೆಯೆಂದು ವರ್ಣಿಸುವುವು. "ಅನ್ನಾತ್ ಭವಂತಿ ಭೂತಾನಿ, ಪರ್ಜನ್ಯಾತ್ ಅನ್ನ ಸಂಭವಃ ಯಜ್ಞಾತ್ ಭವತಿ ಪರ್ಜನ್ಯಃ, ಯಜ್ಞಃ ಕರ್ಮ ಸಮುದ್ಭವಃ ॥ ಕರ್ಮ ಬ್ರಹ್ಮೋದ್ಭವಂ (ವೇದೋದ್ಭವ) ವಿದ್ಧಿ ಬ್ರಹ್ಮ ಅಕ್ಷರ (ಪರಮಾತ್ಮಾ) ಸಮುದ್ಭವಂ ॥ ತಸ್ಮಾತ್ ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಂ ॥ ಭಗವದ್ಗೀತಾ ೩-೧೪-೧೫ ಈ ವಚನಗಳನ್ನು ಪರ್ಯಾಲೋಚಿಸಿ ಧರ್ಮೋ ವಿಶ್ವಸ್ಯಜಗತಃ ಪ್ರತಿಷ್ಠಾ-ಧರ್ಮೇ ಸರ್ವಂ ಪ್ರತಿಷ್ಠಿತಂ-ಮಹಾ ನಾರಾಯಣೋಪನಿಷತ್)

೧೪. ಆ ಬಳಿಕಲೋ-ಚಂದ್ರ ಸೂರ್ಯ ನಕ್ಷತ್ರಾದಿಗಳೂ ನಷ್ಟವಾಗಿ ಶೂನ್ಯವಾದ ಈ ಬ್ರಹ್ಮಾಂಡದಲ್ಲಿ ನಾನೂ ಕೂಡ ನನ್ನ ಶರೀರವನ್ನೂ ಕೂಡ ಶಾಂತಿ ಪಡಿಸಿಕೊಂಡು ನಿರ್ವಿಕಲ್ಪ ಸಮಾಧಿಯಲ್ಲಿ ನಿಲ್ಲಬೇಕಾಗುವುದು.

೧೫. ಪೂರ್ವೋಕ್ತ ನಾನಾ ಪ್ರಕಾರಗಳಿಂದ ಅಕಾಲದಲ್ಲಿ (ಕ್ಲಪ್ತವಾದ ಕಾಲಕ್ಕಿಂತ ಮುಂಚೆ) ಹಠಾತ್ತನೆ ಈ ಜಗತ್ತು ಎಲ್ಲವೂ ಶಾಂತವಾಗಿಬಿಡುವುದಾದರೆ. ಅದರಿಂದ ಈ ದೇವ ಮನುಷ್ಯಾದಿ ಪ್ರಾಣಿ ವರ್ಗಕ್ಕೆ ಶ್ರೇಯಸ್ಸು ಉಂಟಾಗುವುದೆಂದು (ದುಃಖೋಪಶಮ) ನನಗೆ ತೀಳಿಯದೇ ಇಲ್ಲ. ("ವೈರಾಗ್ಯಾತ್ ಪ್ರಕೃತೌ ಲಯಃ" ಎಂಬ ಸ್ಮೃತಿಯು ಹೇಳುವಂತೆ ವೈರಾಗ್ಯದಿಂದ ಪ್ರಕೃತಿ ಲಯವಾದರೆ ಸುಷುಪ್ತಿಯಲ್ಲಿ ಹೇಗೋ ಹಾಗೆ ತತ್ಕಾಲದಲ್ಲಿ ಸರ್ವ ದುಃಖೋಪ ಶಮರೂಪ ಶ್ರೇಯಸ್ಸು ಸಿದ್ಧಿಸುವುದು. ಆದರೂ ಕೂಡ ತಮೇವ ಏತಂ ವೇದಾನು ವಚನೇನ ಬ್ರಾಹ್ಮಣಾ ವಿವಿದಿಷಂತಿ-ವೇದಾಂತ ವಿಜ್ಞಾನ ಸುನಿಶ್ಚಿತಾರ್ಥಾಃ....ಅನೇಕ ಜನ್ಮ ಸಂಸಿದ್ಧಃ ತತೋಯಾತಿ ಪರಾಂಗತಾಂ (ಗೀತಾ) ಇತ್ಯಾದ್ಯನೇಕ ಶ್ರುತಿ ಸ್ಮೃತಿ ಪುರಾಣ ನ್ಯಾಯ ಸಮ್ಮತವಾದ ಅನೇಕ ಜನ್ಮಾನುಷ್ಠಿತ ನಿಷ್ಕಾಮ ಕರ್ಮ ಸಾಧ್ಯವಾದ ವಿವಿದಿಷಾ ಸನ್ಯಾಸ ಪೂರ್ವಕ ಸುದೃಢ ತತ್ತ್ವಜ್ಞಾನ ವಿಲ್ಲದ ಕಾರಣ ಸಂಸಾರ ಹೇತುವಾದ ಅಜ್ಞಾನವು ಆತ್ಯಂತಿಕವಾಗಿ ಜ್ಞಾನ ಬಾಧಿತವಾಗಿ ನಿವೃತ್ತಿಯಾಗದೆ ಇರುವುದರಿಂದಲೂ ಸುಷುಪ್ತಿಯಿಂದ, ಸುಷುಪ್ತನು ಪ್ರಬುದ್ಧ

ದೈತ್ಯೋದ್ಯೋಗೇನ ವಿಬುಧಾಸ್ತತೋ ಯಜ್ಞತಪಃಕ್ರಿಯಾಃ ।
ತೇನ ಸಂಸಾರಸಂಸ್ಥಾನಂ ನ ಸಂಸಾರಕ್ರಮೋಽನ್ಯಥಾ ॥ ೧೬ ॥

ತಸ್ಮಾದ್ರಸಾತಲಂ ಗತ್ವಾ ಯಥಾವತ್ಸ್ಥಾಪಯಾಮ್ಯಹಂ ।
ಸ್ವೇ ಕ್ರಮೇ ದಾನವಾಧೀಶಮೃತುಃ ಪುನರಿವ ದ್ರುಮಂ ॥ ೧೭ ॥

ವಿನಾ ಪ್ರಹ್ಲಾದಮಥ ಚೇದಿತರಂ ದಾನವೇಶ್ವರಂ ।
ಕರೋಮಿ ತದಸೌ ಮನ್ಯೇ ದೇವಾನಾಸಾದಯಿಷ್ಯತಿ ॥ ೧೮ ॥

ನಾಗಿ ಪೂರ್ವದಂತೆ ಪುನಃ ಸ್ವವ್ಯಾಪಾರದಲ್ಲಿ ಪ್ರವೃತ್ತನಾಗುವಂತೆಯೇ ತತ್ಕಾಲದಲ್ಲಿ ಉಪಶಾಂತವಾಗುವ ಜಗತ್ತು ಪುನಃ ಸಂಸಾರಕ್ಕೆ ಹಿಂದಿರುಗಬಹುದೆಂಬ ಶಂಕಾ ಪ್ರಸಕ್ತಿಗೆ ಅವಕಾಶವಿರುವುದರಿಂದಲೂ) ನಿತ್ಯ ನಿರತಿಶಯ ಬ್ರಹ್ಮಾನಂದ ಪ್ರಾಪ್ತಿ ರೂಪ ಶಾಶ್ವತವಾದ ನಿಶ್ರೇಯಸವು ಯಾರಿಗೂ ಸಿದ್ಧಿಸುವುದಿಲ್ಲ ಎಂದು ನಾನು ಧೃಢವಾಗಿ ಭಾವಿಸುವೆನು. ಅದು ಕಾರಣ ಕ್ರಮವಾಗಿ ಸರ್ವರಿಗೂ ಅಕ್ಷಯಾತ್ಮಾನಂದ ಲಾಭವಾಗುವ ಸಲುವಾಗಿ ಈಗ ಈ ದಾನವರು ಮೊದಲಿನಂತೆ ಬದುಕಿಕೊಂಡಿರುವುದೇ ಉತ್ತಮವೆಂದು ನನಗೆ ತೋರುವುದು.

೧೬. ಈ ದೈತ್ಯರು ಜೀವಿಸಿ ಉದ್ಯಮಶೀಲರಾಗಿದ್ದರೇ, ಆಗಲೇ ದೇವತೆಗಳೂ ಇರುವರು. ಅವರು ಸರಿಯಾಗಿದ್ದರೇ ಅವರ ಸಲುವಾಗಿಯೇ ಕರ್ಮ ಭೂಮಿಯಲ್ಲಿ ಯಜ್ಞ ದಾನಾದಿ ಕರ್ಮಗಳು ಪ್ರವರ್ತಿಸುತ್ತಿರುವುವು. ಕರ್ಮಾನುಷ್ಠಾನದಿಂದಲೇ ಜಗತ್ತಿನ ವ್ಯವಹಾರ (ಸ್ಥಿತಿ, ಸನ್ನಿವೇಶ)ವೂ ಉಳಿಯುವುದು. ಅನ್ಯಥಾ ಈ ಸಂಸಾರ ಗತಿಯು (ಜಗದ್ವ್ಯವಹಾರವು) ಉಳಿಯುವುದೇ ಇಲ್ಲ. (ಸಂಸಾರೋಚ್ಛೇದವಾಗಿಬಿಡುವುದು)

೧೭. ಅದು ಕಾರಣ, ನಾನು ಈಗಲೇ ಪಾತಾಳಕ್ಕೆ ಹೋಗಿ ಹೇಮಂತ ಶಿಶಿರ ಋತುಗಳಲ್ಲಿ ಜೀರ್ಣಪ್ರಾಯವಾದ ತರುಗುಲ್ಮ ಲತಾದಿಗಳನ್ನು ವಸಂತ ಋತುವು ಪುನಃ ಪೂರ್ವಾವಸ್ಥೆಗೆ ತಂದು ವಿಲಾಸಗೊಳಿಸುವಂತೆ ದಾನವ ರಾಜನಾದ ಪ್ರಹ್ಲಾದನು ಪೂರ್ವದಂತೆಯೇ ಮತ್ತೆ ತನ್ನ ಲೌಕಿಕ ವಿವಿಧ ವ್ಯಾಪಾರಗಳಲ್ಲಿ ವ್ಯಾಪೃತನಾಗುವಂತೆ ಮಾಡುವೆನು.

೧೮. ಅಥವಾ ನಾನು ಈ ಪ್ರಹ್ಲಾದನನ್ನು ಬಿಟ್ಟು ಬೇರೆ ಯಾವನನ್ನಾದರೂ ದೈತ್ಯ ರಾಜನನ್ನಾಗಿ ಮಾಡಿದ್ದೇ ಆದರೆ, ಆಗ ಈ ಹೊಸ ರಾಜನು ದೇವತೆಗಳ ಮೇಲೆ ಬಿದ್ದು ಪರಾಭವಪಡಿಸುವನು ಎಂದು ನನಗೆ ತೋರುವುದು.

ಪ್ರಹ್ಲಾದಸ್ಯ ತ್ವಯಂ ದೇಹಃ ಪಶ್ಚಿಮಃ ಪಾವನೋ ಮಹಾನ್ ।
ಆಕಲ್ಪಮಿವ ವಸ್ತವ್ಯಂ ದೇಹೇನಾನೇನ ತೇನ ಚ ॥ ೧೯ ॥

ಏವಂ ಹಿ ನಿಯತಿರ್ದೇವೀ ನಿಶ್ಚಿತಾ ಪಾರಮೇಶ್ವರೀ ।
ಪ್ರಹ್ಲಾದೇನ ಯಥಾ ಕಲ್ಪಂ ಸ್ಥಾತವ್ಯಮಿಹ ದೇಹಿನಾ ॥ ೨೦ ॥

ತಸ್ಮಾತ್ತಮೇವ ಗತ್ವಾ ತು ದೈತ್ಯೇಂದ್ರಂ ಬೋಧಯಾಮ್ಯಹಂ ।
ಗರ್ಜನ್ಗಿರಿ ನದೀಸುಪ್ತಂ ಮಯೂರಮಿವ ವಾರಿದಃ ॥ ೨೧ ॥

ಜೀವನ್ಮುಕ್ತ ಸಮಾಧಿಸ್ಥಃ ಕರೋತ್ವಸುರನಾಥತಾಂ ।
ಮಣಿರ್ಮುಕ್ತ ಮನಸ್ಕಾರಃ ಪ್ರತಿ ಬಿಂಬ ಕ್ರಿಯಾಮಿವ ॥ ೨೨ ॥

---

೧೯. ಪ್ರಹ್ಲಾದನಿಗಾದರೋ ಇದೇ ಅಂತಿಮ ಜನ್ಮವಾಗಿರುವುದು. ಇವನ ಈ ಚರಮ ಶರೀರವು ರಾಗ ದ್ವೇಷಾದಿ ದೋಷ ಶೂನ್ಯವಾಗಿ ಮಹಾ ಪ್ರಶಸ್ತವಾಗಿರುವುದು. ಇವನು ಈ ದೇಹದಲ್ಲಿಯೇ ಮಹಾ ಪ್ರಳಯ ಕಾಲದವರೆಗೂ ಜಗತ್ತಿನಲ್ಲಿ ವಾಸಮಾಡಿಕೊಂಡಿರಲೇಬೇಕಾಗಿಯೂ ಇರುವುದು.

೨೦. ಹೀಗೆ ಪ್ರಹ್ಲಾದನು ಕಲ್ಪಾಂತದವರೆವಿಗೂ ಈ ದೇಹವನ್ನು ಧರಿಸಿಕೊಂಡು ಜಗತ್ತಿನಲ್ಲಿರಬೇಕೆಂಬುದು ಪರಮೇಶ್ವರನಿಂದ ಕ್ಲಪ್ತವಾದ, ಮೀರಲಾಗದ ಅಥವಾ ಅವಶ್ಯಂಭಾವಯಾದ ದೈವಿಕ ನಿಯಮವು. ಇದರಲ್ಲಿ ಸಂದೇಹವಿಲ್ಲ.

೨೧. ಅದು ಕಾರಣ, ಮೇಘವು ಗಿರಿ ನದೀ ತೀರದಲ್ಲಿ ಮಲಗಿರುವ ನವಿಲನ್ನು ತನ್ನ ಗುಡುಗು (ಗರ್ಜಿತ) ಧ್ವನಿಯಿಂದ ಎಚ್ಚರಗೊಳಿಸಿ ಅದರ ಮನಸ್ಸಿಗೆ ಹರ್ಷವನ್ನುಂಟುಮಾಡುವಂತೆ, ನಾನೇ ಆ ಪ್ರಹ್ಲಾದನಿರುವಲ್ಲಿಗೆ ಹೋಗಿ ಅವನು ಸಮಾಧಿಯನ್ನು ಬಿಟ್ಟು ಬಹಿರ್ಮುಖನಾಗುವಂತೆ ಪ್ರಯತ್ನಿಸಿ, ಸಂತೈಸಿ, ನನ್ನ ದರ್ಶನದಿಂದ ಅವನನ್ನು ಸಂತೋಷಪಡಿಸುವೆನು.

೨೨. ಇದಾದ ಮೇಲೆ, ಸ್ವಚ್ಛವಾದ ಸ್ಫಟಿಕಮಣಿಯು, ಸ್ವಲ್ಪವಾದರೂ ಸ್ವಪ್ರಯತ್ನವು ಯಾವುದೂ ಇಲ್ಲದೆಯೇ ತನ್ನಲ್ಲಿ ಸನ್ನಿಹಿತವಾದ ವಸ್ತುವಿನ ಪ್ರತಿಬಿಂಬ ಧಾರಣೆಯನ್ನು ಮಾಡುವಂತೆ, ಆ ಪ್ರಹ್ಲಾದನೂ, ಜೀವನ್ಮುಕ್ತರಿಗೆ ನೈಸರ್ಗಿಕವೂ ಸದಾತನವೂ ಆಗಿರುವ ಅನಾಸಕ್ತಿ ರೂಪ ಸಮಾಧಿಯಲ್ಲಿದ್ದುಕೊಂಡೇ, ಅಮನಸ್ಕನಾಗಿಯೂ ಮಾನಸಿಕ ಸಂಕಲ್ಪಾದಿ ಚೇಷ್ಟಾರಹಿತನಾಗಿಯೂ ಅಸುರ ರಾಜ್ಯದ ಆಧಿಪತ್ಯವನ್ನು ವಹಿಸಿಕೊಂಡಿರುವಂತೆ ಮಾಡುವೆನು.

ನಹಿ ನಶ್ಯತಿ ಸರ್ಗೋಽಯಮೇವಂ ಸಹ ಸುರಾಸುರೈಃ ।
ಭವಿಷ್ಯತಿ ಚ ತದ್ದ್ವಂದ್ವಂ ತನ್ಮೇ ಕ್ರೀಡಾ ಭವಿಷ್ಯತಿ ॥ ೨೩ ॥

ಸರ್ಗ ಕ್ಷಯೋದಯಾವೇತೌ ಸುಸಮೌ ಮಮ ಯದ್ಯಪಿ ।
ತಥಾಪೀದಂ ಯಥಾಸಂಸ್ಥಂ ಭವತ್ಯನ್ಯೇನ ಕಿಂ ಮಮ ॥ ೨೪ ॥

ಭಾವಾ ಭಾವೇಷು ಯತ್ತುಲ್ಯಂ ತನ್ನಾಶೇ ತತ್ಸ್ಥಿತೌ ಚ ವಾ ।
ಯಃ ಪ್ರಯತ್ನ ಸ್ತ್ವಬುದ್ಧಿತ್ವಾತ್ತದ್ಯೋಗಗಮನಂ ಭವೇತ್ ॥ ೨೫ ॥

---

೨೩. ನಾನು ಹೀಗೆ ಮಾಡುವುದರಿಂದ ಈ ಬ್ರಹ್ಮಾಂಡವೆಲ್ಲವೂ ಸುರಾಸುರರ ಸಮೇತ (ಸಹಿತ) ನಾಶವಾಗುವುದನ್ನು ತಪ್ಪಿಸಿ ಉಳಿಸಿದಂತಾಗುವುದು. ಮತ್ತು ರಾಕ್ಷಸರ ರಾಜ್ಯದಲ್ಲಿ ಅನಾಯಕತ್ವವು ಹೋಗಿ ಅವರೆಲ್ಲರೂ ಪೂರ್ವದಂತೆ ಸುಪುಷ್ಟರಾಗಿ ಇಂದ್ರಾದಿ ದೇವತೆಗಳನ್ನೂ ಕೆಣಕುವರು. ಆಗ ಈ ದೇವಾಸುರರಿಗೆ ಘೋರವಾದ ದ್ವಂದ್ವಯುದ್ಧಗಳು ಪದೇ ಪದೇ ಸಂಭವಿಸುತ್ತಲೇ ಇರುವುವು. ನನ್ನ ಅನಂತಲೀಲೆಗಳಲ್ಲಿ ಇದೂ ಒಂದು ವಿನೋದಾವಹವಾದ ಲೀಲೆಯೇ ಸರಿ.

೨೪. ಸದಾ ನಿರ್ವಿಕಾರನೂ, ಸರ್ವಾತೀತನೂ, ಸಚ್ಚಿದಾನಂದರೂಪನೂ ಆದ ನನಗೆ, ಈ ಬ್ರಹ್ಮಾಂಡ ಮಂಡಲದ ಸೃಷ್ಟಿಲಯಗಳೆರಡೂ ಯದ್ಯಪಿ ನಿರ್ವಿಶೇಷವೂ ಅಕಿಂಚಿತ್ಕರವೂ ಆಗಿ ಸಮಾನವಾಗಯೇ ಇರುವುವು. (ನನಗೆ ಹರ್ಷವಿಷಾದಾದಿ ಹೇತುಗಳಾಗಿಲ್ಲ.) ಆದರೂ ಕೂಡ ಈ ಜಗತ್ತು ಪೂರ್ವತನ ಸರ್ಗದ ಸಂಸ್ಥಾನವನ್ನೂ ಅತಿಕ್ರಮಿಸದೆಯೇ ಮೊದಲಿನಂತೆಯೇ ಇದ್ದುಕೊಂಡಿರಲಿ. ಇದನ್ನು ಬೇರೆ ರೀತಿಯಾಗಿ ಬದಲಾಯಿಸುವುದರಿಂದ ನನಗೇನು ಲಾಭ?

೨೫. ಈಗ ಯೋಗ ನಿದ್ರೆಯಲ್ಲಿರುವ ನಾನು, ತತ್ಪ್ರಾಪ್ಯವಾದ ಸ್ವರೂಪ ಸುಖಾನುಭವವನ್ನು ಬಿಟ್ಟು ರಾಕ್ಷಸರ ಲೋಕಕ್ಕೆ ಹೋಗುವಿಕೆಯೂ ಅನುಚಿತವಾಗುವುದಿ. ಅಭಿನಿವೇಶರಹಿತನಾಗಿ ಮಾಡುವ ಗಮನಾದಿ ಪ್ರಯತ್ನವು ಯೋಗ ಗಮನವೆನ್ನಿಸುವುದೇ ಹೊರತು ಅನ್ಯತೋ ಗಮನವಾಗುವುದಿಲ್ಲ. ಏಕೆಂದರೆ, ಗಮನಾದಿ ಪ್ರಯತ್ನದ ಉತ್ಪತ್ತಿ ಅನುತ್ಪತ್ತಿಗಳಲ್ಲಿಯೂ (ಭಾವಾಭಾವಗಳಲ್ಲಿ) ಮತ್ತು ಅದರ ನಾಶದಲ್ಲಿಯೂ ಸ್ಥಿತಿಯಲ್ಲಿಯೂ ಕೂಡ, ಯೋಗನಿದ್ರಾ ಪ್ರಾಪ್ಯ ಸುಖವು ನನಗೆ ಸರ್ವದಾ ಸರ್ವಸ್ಥಿತಿಗಳಲ್ಲಿಯೂ ಏಕರೂಪವಾಗಿಯೇ ಇರುವುದು. ಇದು ಕಾರಣ, ನಾನು ರಾಕ್ಷಸರ ನಗರಿಗೆ ಹೋದ ಮಾತ್ರದಿಂದಲೇ ನನಗೆ ಯೋಗ ನಿದ್ರಾಪ್ರಾಪ್ಯ ಸುಖವು ತಪ್ಪುವುದೆಂಬ ಶಂಕೆಯೇ ಉದಯಿಸುವುದಿಲ್ಲ.

ತಸ್ಮಾತ್ಪ್ರಯಾಮಿ ಪಾತಾಲಂ ಬೋಧಯಾಮ್ಯಸುರೇಶ್ವರಂ ।
ಸ್ಥೈರಂ ಯಾಮಿ ನ ಸಂಸಾರ ಲೀಲಾಂ ಸಂಪಾದಯಾಮ್ಯಹಂ ॥ ೨೬ ॥

ಅಸುರಪುರಮವಾಪ್ಯ ಪ್ರೋದ್ಧತಾಚಾರ ಘೋರಂ ।
ಕಮಲಮಿವ ವಿವಸ್ವಾನ್ದೈತ್ಯ ಮುದ್ಬೋಧಯಾಮಿ ॥
ಜಗದಿದಮಖಿಲಂ ಸ್ವಸ್ಥೈರ್ಯಮಭ್ಯಾನಯಾಮೋ ।
ಘನವಿಧಿರಿವ ಶೈಲೇ ಚಂಚಲಂ ಮೇಘ ಜಾಲಂ ॥ ೨೭ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷೂಪಶಮ ಪ್ರಕರಣೇ ಪರಮೇಶ್ವರವಿತರ್ಕೋ ನಾಮಾಷ್ಟತ್ರಿಂಶಃ ಸರ್ಗಃ

---

೨೬. ಈ ಕಾರಣದಿಂದ, ನಾನು ಈಗಲೇ ಪಾತಾಳಕ್ಕೆ ಹೋಗುವೆನು. ಅಲ್ಲಿ ದೈತ್ಯ ರಾಜನಾದ ಪ್ರಹ್ಲಾದನನ್ನೂ ಸಮಾಧಿಯಿಂದ ಬಹಿ ರ್ಮುಖವನ್ನಾಗಿ ಮಾಡು ವೆನು. ನಾನು ಅಲ್ಲಿಗೆ ಹೋದರೂ, ಸ್ವ ಸ್ವರೂಪದಲ್ಲಿ (ಮೇರು ಪರ್ವತದಂತೆ) ಎಂದಿ ನಂತೆ ಅತ್ಯಂತ ಸುಸ್ಥಿರನಾಗಿಯೇ ಇರುವೆನು. ಆತ್ಮಸ್ವರೂಪ ಜ್ಞಾನ ವಿಮುಖನಾದ ಪ್ರಾಕೃತ ಮನುಷ್ಯನಂತೆ ಸಂಸಾರ ಲೀಲೆಯನ್ನೂ ಎಂದಿಗೂ ಸಂಪಾದಿಸಿಕೊಳ್ಳು ವುದಿಲ್ಲ.

೨೭. ಈಗ ನಾನು, ಅರಾಜಕತ್ವದ ದೆಸೆಯಿಂದ, ನಿರ್ಭಯವಾಗಿ. ಲೋಕ ಮರ್ಯಾದೆಯನ್ನು ಅತಿಕ್ರಮಿಸಿ ಉಚ್ಛೃಂಖಲಾಚಾರ ಪ್ರವೃತ್ತರಾದ ಕ್ರೂರ ಕರ್ಮಿಗಳ ದುರ್ವ್ಯಾಪಾರಗಳಿಂದ ಅತಿ ಭಯಂಕರವಾಗಿರುವ ಪಾತಾಳಲೋಕ ದೊಳಗಿರುವ ದಾನವ ರಾಜಧಾನಿಗೆ ಹೋಗಿ ಸೂರ್ಯನು ಕಮಲವನ್ನು ಪ್ರಬೋಧ ಪಡೆಸುವಂತೆ, ಆ ಪ್ರಹ್ಲಾದನನ್ನು ಪ್ರಬೋಧ ಪಡಿಸುವೆನು. ಪರ್ವತಾಗ್ರದಲ್ಲಿ ಚಂಚ ಲವಾಗಿಸುತ್ತಲೂ ಚದುರಿಹೋಗಿರುವ ಮೇಘಗಳ ಸಮೂಹವನ್ನು ವರ್ಷರ್ತುವು ಪುನಃ ಒಟ್ಟಿಗೆ ಕೂಡಿಸುವಂತೆ ನಾನೂದಸ್ಯುಭಯದಿಂದ ಕಂಗೆಟ್ಟು ಎಲ್ಲೆಲ್ಲಿಗೋ ಓಡಿ ಹೋಗಿ ತಲೆ ಮರೆಯಿಸಿಕೊಂಡು ಕಳವಳಗೊಂಡಿರುವ ರಾಕ್ಷಸರನ್ನೆಲ್ಲ ಪುನಃ ಒಟ್ಟು ಗೂಡಿಸಿ ತನ್ಮೂಲಕ ಈ ನಿಖಿಲ ಜಗತ್ತನ್ನೂ ಮತ್ತೆಯೂ ಸ್ಥಿರಪಡಿಸುವೆನೂ, ಎಂದು ಶ್ರೀ ಹರಿಯು ತನ್ನ ಮನದಲ್ಲಿ ಪರ್ಯಾಲೋಚಿಸಿದನು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ ವಿಬುಧವಾಕ್ಯ ಎಂಬ ಮೂವತ್ತೆಂಟನೆಯ ಸರ್ಗವು.

ಏಕೋನ ಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಇತಿ ಸಂಚಿಂತ್ಯ ಸರ್ವಾತ್ಮಾ ಕ್ಷೀರೋದಾದಾತ್ಮಕಾತ್ಪುರಾತ್ ।
ಚಚಾಲ ಪರಿವಾರೇಣ ಸಹ ಸಾನುರಿವಾಚಲಃ ॥ ೧ ॥

ಮೂವತ್ತೊಂಭತ್ತನೆಯ ಸರ್ಗ

ಶ್ರೀ ವಶಿಷ್ಠರು ಹೇಳಿದರು :—

೧. ವಸ್ತುತಃ ಸರ್ವಾತ್ಮಕನಾದ ಮತ್ತು ಅಚಲನಾದ ಶ್ರೀಹರಿಯು, ಪೂರ್ವೋಕ್ತ ನಾನಾ ಪ್ರಕಾರಗಳಿಂದ ಪರ್ಯಾಲೋಚಿಸಿ, ಅಚಲವಾದ ಪರ್ವತವು ತನ್ನ ಪ್ರಸ್ಥಭೂಮಿಗಳ ಸಮೇತ ಹೋಗುತ್ತಿರುವುದೋ ಎಂಬಂತೆ ತನ್ನ ಪರಿವಾರ ವನ್ನು ಜೊತೆಯಲ್ಲಿ ಕರೆದುಕೊಂಡು ಕ್ಷೀರ ಸಮುದ್ರವೆಂಬ ತನ್ನ ನಗರವನ್ನು ಬಿಟ್ಟು ಹೊರಟನು.

ಸರ್ವಸ್ಯ+ಆತ್ಮಾ= ಸರ್ವಾತ್ಮಾ. ಚರಾಚರಾತ್ಮಕವಾದ ಸಕಲ ಜಗತ್ತಿಗೂ ಆತ್ಮನಾಗಿರುವವನು. ಅಥವಾ ಅನನ್ತವೀರ್ಯಾಮಿತ ವಿಕ್ರ-ಮಸ್ತ್ವಂ ಸರ್ವಂ ಸಮಾಪ್ನೋಷಿತತೋಽಸಿ ಸರ್ವಃ. ಎಂಬ ಭಗವದ್ಗೀತಾನುಸಾರ, ಅನಂತ ವೀರ್ಯಾದಿ ಗಳಿಂದ ಕೂಡಿ ನಿಖಿಲ ಜಗತ್ತನ್ನೂ ಸ್ವಸ್ವರೂಪದಿಂದ ವ್ಯಾಪಿಸಿರುವವನು. ಅದು ಕಾರಣ ಪರಬ್ರಹ್ಮವು ಸರ್ವಃ ಎನ್ನಿಸುವುದು. ಸರ್ವವೂ ಆತ್ಮನೂ ಆಗಿರುವವನು ಎಂದರ್ಥ. ಅಚಲಃ ಸರ್ವವ್ಯಾಪಿಯಾಗಿಯೂ, ಸರ್ವತ್ರ ಪರಿಪೂರ್ಣವಾಗಿಯೂ ದಿಕ್ಕಾಲಾದಿಗಳಿಂದ ಅಪರಿಚ್ಛಿನ್ನನಾಗಿಯೂ ಇರುವವನಾದ ಕಾರಣ, ಗಂತವ್ಯ ಸ್ಥಾನವೇ ಇಲ್ಲವು. ಮತ್ತು ಆತ್ಮನು ಸ್ವತಃ ನಿರಾಕಾರನೂ (ಅಶರೀರನು) ಆತ ಏವ ಗಮನಾಗಮನಾದಿ ಸಕಲ ಚೇಷ್ಟಾ ಶೂನ್ಯವಾಗಿಯೂ ಇರುವನು. ಆದುದರಿಂದ ನಿಶ್ಚಲನು ಎಂದರ್ಥ. ಟೀಕಾಕಾರರು ತಾತ್ಪರ್ಯ ಪ್ರಕಾಶದಲ್ಲಿ ಕ್ಷೀರೋದಾತ್ಮಕಾತ್ ಪುರಾತ್ ಎನ್ನುವುದಕ್ಕೆ ಕ್ಷೀರ ಸಮುದ್ರಾಂತರ್ಗತ ಶ್ವೇತ ದ್ವೀಪಾಂತರ್ಗತವಾದ ತನ್ನ ನಗರದಿಂದ ಎಂದರ್ಥ ಮಾಡಿರುವರು.

ಕ್ಷೀರೋದತಲ ರಂಧ್ರೇಣ ತೇನೈವ ಸ್ತಂಭಿತಾಂಭಸಾ ।
ಪ್ರಹ್ಲಾದ ನಗರಂ ಪ್ರಾಪ ಶಕ್ರಲೋಕಮಿವಾಪರಂ ॥ ೨ ॥

ಹೇಮ ಮಂದಿರ ಕೋಶಸ್ಥಂ ದದರ್ಶಾತ್ರಾಸುರಂ ಹರಿಃ ।
ಅಥ ಶೈಲಗುಹಾಲೀನಂ ಸಮಾಧಿಸ್ಥಮಿವಾಬ್ಜಜಂ ॥ ೩ ॥

ತತ್ರ ತೇ ತೇಜಸಾ ದೈತ್ಯಾ ವೈಷ್ಣವೇನಾವಧೂಲಿತಾಃ ।
ದೂರಂ ಯಯುರ್ದಿನೇಶಾಂಶು ವಿತ್ರಸ್ತಾ ಇವ ಕೌಶಿಕಾಃ ॥ ೪ ॥

ದ್ವಿತ್ರೈಃ ಸಹಾಸುರೈರ್ಮುಖ್ಯೈಃ ಪರಿವಾರಯುತೋ ಹರಿಃ ।
ಪ್ರವಿವೇಶಾಸುರಗೃಹಂ ತಾರಾವಾನಿವ ಖಂ ಶಶೀ ॥ ೫ ॥

---

೨. ಸೃಷ್ಟಿಕರ್ತನಿಂದ ಪ್ರಜಾಪತಿಯ ಸಂಕಲ್ಪಾನುಗುಣವಾಗಿಯೇ, ಪಾತಾಳ ಕುಹರವನ್ನು ಪ್ರವೇಶಿಸಿದ ಹಾಗೆ ಸ್ತಂಭಿಸಲ್ಪಟ್ಟು (ತಡೆದು ನಿಲ್ಲಿಸಲ್ಪಟ್ಟ) ಇರುವ ನೀರುಗಳುಳ್ಳ ಕ್ಷೀರಸಾಗರದ ತಳದಲ್ಲಿರುವ ರಂಧ್ರದ ಮೂಲಕವೇ ಎರಡನೆಯದಾದ ಬೇರೆ ಇಂದ್ರ ಲೋಕವೋ ಎಂಬಂತೆ ಅತಿ ರಮ್ಯವಾದ ಪ್ರಹ್ಲಾದ ನಗರವನ್ನು ಹೋಗಿ ಸೇರಿದನು.

೩. ಆ ಬಳಿಕ ಶ್ರೀಮನ್ನಾರಾಯಣನೂ, ಆ ನಗರಿಯಲ್ಲಿ ಸುವರ್ಣಮಯ ವಾದ ಒಂದು ಮನೆಯೊಳಗೆ ಪ್ರಶಾಂತವೂ, ಏಕಾಂತವೂ ಆದ ಧ್ಯಾನ ಮಂಟಪದ ಮಧ್ಯದಲ್ಲಿ ಕುಳಿತು, ಮೇರು ಪರ್ವತದ ಗುಹೆಯೊಳಗೆ ಸೇರಿಕೊಂಡು ಧ್ಯಾನಾ ರೂಢನಾದ ಚತುರ್ಮುಖ ಬ್ರಹ್ಮನೋ ಎಂಬಂತೆ ನಿರ್ವಿಕಲ್ಪ ಸಮಾಧಿಯಲ್ಲಿ ಪರಿ ನಿಷ್ಠಿತನಾಗಿ ಶೋಭಿಸುತ್ತಿದ್ದ ಆ ಪ್ರಹ್ಲಾದನನ್ನು ಕಂಡನು.

೪. ಆಗ ಅಲ್ಲಿದ್ದ ಆ ದಾನವರು (ತಾಮಸ ಪ್ರಕೃತಿಗಳು) ಶ್ರೀಮನ್ಮಹಾವಿಷ್ಣು ವಿನ ಕೋಟಿ ಸೂರ್ಯಸದೃಶವಾದ ತೇಜಸ್ಸಿನಿಂದ, ಬಿರುಗಾಳಿಯಿಂದ ಧೂಳಿಯು ರಾಶಿಯಂತೆ ಚದುರಿ ಹೋಗಿ, ಸೂರ್ಯ ಕಿರಣ ಜಾಲಗಳ ತೇಜಸ್ಸಿಗೆ ಭಯ ಪಟ್ಟುಕೊಂಡು ಗೂಗೆ (ಘೂಕ-ದಿವಾಂಧ) ಗಳು ಓಡಿಹೋಗುವಂತೆಯೇ ದೂರ ವಾಗಿ ಓಡಿಹೋದರು.

೫. ತರುವಾಯ, ಓಡಿಹೋಗದೆ ಅಲ್ಲಿ ಉಳಿದಿದ್ದ (ಸಾತ್ತ್ವಿಕರಾದ) ಅತಿ ಮುಖ್ಯರಾದ ಇಬ್ಬರು ಮೂವರು ರಾಕ್ಷಸರೊಡನೆ, ಸಪರಿವಾರನಾದ ಶ್ರೀಮನ್ನಾರಾಯ ಣನು, ಸ್ವಕೀಯ ಸರ್ವಕಲಾನ್ವಿತನಾದ ಪೂರ್ಣ ಚಂದ್ರನು ಅತಿ ಮುಖ್ಯವಾದ

ವೈನತೇಯಾಸನಸ್ಥೋಽಸೌ ಲಕ್ಷ್ಮೀ ವಿಧುತ ಚಾಮರಃ ।
ಸ್ವಾಯುಧಾದಿ ಪರೀವಾರೋ ದೇವರ್ಷಿ ಮುನಿವಂದಿತಃ ॥ ೬ ॥

ಮಹಾತ್ಮನ್ಸಂಪ್ರಬುಧ್ಯಸ್ವೇತ್ಯೇವಂ ವಿಷ್ಣುರುದಾಹರನ್ ।
ಪಾಂಚಜನ್ಯಂ ಪ್ರದಧ್ಮೌ ಚ ಧ್ವನಯನ್ಕಕುಭಾಂ ಗಣಂ ॥ ೭ ॥

ಮಹತಾ ತೇನ ಶಬ್ದೇನ ವೈಷ್ಣವ ಪ್ರಾಣ ಜನ್ಮನಾ ।
ತುಲ್ಯಕಾಲ ಪರಿಕ್ಷುಬ್ಧ ಕಲ್ಪಾಭ್ರಾರ್ಣವರಂಹಸಾ ॥ ೮ ॥

ಆಸುರೀಜನತಾ ಭೂಮೌ ಪಪಾತಾಗತ ಸಂಭ್ರಮಾ ।
ಮತ್ತಲೀಲಾಭ್ರನಾದೇನ ರಾಜಹಂಸಾವಲೀ ಯಥಾ ॥ ೯ ॥

ಜಹರ್ಷ ಜನಿತಾನಂದಾ ವೈಷ್ಣವೀ ಗತ ಸಂಭ್ರಮಾ ।
ಜನತಾ ಜಲದಧ್ವಾನ ಫುಲ್ಲೇವ ಕುಟಜಾವಲೀ ॥ ೧೦ ॥

ಕೆಲವು ನಕ್ಷತ್ರಗಳೊಡನೆ ಗಗನ ಮಂಡಲವನ್ನು ಪ್ರವೇಶಿಸುವಂತೆ ಪ್ರಹ್ಲಾದನು ಸಮಾಧಿಸ್ಥನಾಗಿ ಕುಳಿತಿದ್ದ ಧ್ಯಾನ ಮಂಡಪದೊಳಕ್ಕೆ ಪ್ರವೇಶ ಮಾಡಿದನು.

೬-೭. ಆಗ ಶ್ರೀಮನ್ನಾರಾಯಣನು ತನ್ನ ವಾಹನವಾದ ಗರುಡನ ಬೆನ್ನಿನ ಮೇಲೆ ಕುಳಿತಿದ್ದನು. ಲಕ್ಷ್ಮೀ ದೇವಿಯು ತಾನೇ ಕೈಗಳಲ್ಲಿ ಚಾಮರಗಳನ್ನು ಹಿಡಿದು ಬೀಸಿದಳು. ಸಚೇತನಗಳಾಗಿ ದೇವಾತ್ಮಕಗಳಾದ ಪಾಂಚಜನ್ಯ. ಸುದರ್ಶನ, ಕೌಮೋದಕೀ ನಂದಕ, ಶಾರ್ಙ್ಗ ಮುಂತಾದ ದಿವ್ಯಾಯುಧಗಳ ಪರಿವಾರದಿಂದ ಪರಿವೃತನಾಗಿದ್ದನು. ನಾರದಾದಿ ದೇವರ್ಷಿಗಳೂ, ವಸಿಷ್ಠ, ವಾಮದೇವಾದಿ ಇತರ ಋಷಿಗಳೂ ದೇವ ದೇವನಿಗೆ ಭಕ್ತಿಯಿಂದ ನಮಸ್ಕಾರ ಮಾಡಿದರು. ಇಂತಹ ಅಪಾರವಾದ ವೈಭವದೊಡನೆ ಕಂಗೊಳಿಸುತ್ತಲಿದ್ದ ಶ್ರೀ ಹರಿಯು ಪ್ರಹ್ಲಾದನನ್ನು ಕುರಿತು, ಎಲೈ ಮಹಾತ್ಮನೇ, ಸಮಾಧಿಯನ್ನು ಬಿಟ್ಟು ಬಹಿರ್ಮುಖನಾಗು ಎಂಬು ದಾಗಿ ತಾರಧ್ವನಿಯಿಂದ ಕೂಗಿದನು ಮತ್ತು ದಿಙ್ಮಂಡಲಗಳೆಲ್ಲವೂ ಪ್ರತಿಧ್ವನಿತವಾ ಗುವ ರೀತಿಯಲ್ಲಿ ಪಾಂಚ ಜನ್ಯವೆಂಬ ಮಹಾ ಶಂಖವನ್ನು ಘಟ್ಟಿಯಾಗಿ ಊದಿ ದನು.

೮-೧೦ ವೈಷ್ಣವ ಜನರಿಗೆ ಪ್ರಾಣದಾಯಕವಾದ ಆ ಪಾಂಚಜನ್ಯ ಮಹಾ ಶಂಖದ ಮಹಾ ಶಬ್ದವು ಪ್ರಳಯ ಕಾಲಿಕ ಮೇಘಗಳೂ ಸಪ್ತ ಮಹಾ

ಬಭೂವ ಸಂಪ್ರಬುದ್ಧಾತ್ಮಾ ದಾನವೇಶಃ ಶನೈಃ ಶನೈಃ ।
ಮೇಘಾವಸರ ಉತ್ಫುಲ್ಲಕದಂಬ ಇವ ಕಾನನೇ ॥ ೧೧ ॥

ಬ್ರಹ್ಮ ರಂಧ್ರ ಕೃತೋತ್ಥಾನಾ ಪ್ರಾಣಶಕ್ತಿ ರಥಾಸುರಂ ।
ಶನೈರಾಕ್ರಮಯಾಮಾಸ ಗಂಗಾ ಸರ್ವಮಿವಾರ್ಣವಂ ॥ ೧೨ ॥

ಕ್ಷಣಾದಾಕ್ರಮಯಾಮಾಸ ಪ್ರಾಣಶ್ರೀಃ ಸರ್ವತೋಽಸುರಂ ।
ಉದಯಾನಂತರಂ ಸೌರೀ ಪ್ರಭೇವ ಭುವನಾಂತರಂ ॥ ೧೩ ॥

ಸಮುದ್ರಗಳೂ ಒಂದೇ ಕಾಲದಲ್ಲಿ ಸಂಕ್ಷುಭಿತ (ಅಲ್ಲೋಲ ಕಲ್ಲೋಲ) ವಾಗುವ ರೀತಿಯಲ್ಲಿ ಅತಿ ವೇಗದಿಂದ ಜಗತ್ತನ್ನೆಲ್ಲ ಆವರಿಸಿತು ಇದರ ಪರಿಣಾಮವಾಗಿ, ಕೋಮಲಾದ ಮೃಣಾಲ ಖಂಡಗಳನ್ನೂ ಚೆನ್ನಾಗಿ ತಿಂದು ಮದ ವೇರಿ ವಿನೋದವಾಗಿ ವಿಹರಿಸುತ್ತಲಿದ್ದ ರಾಜ ಹಂಸ ಪಕ್ಷಿಗಳ ಶ್ರೇಣಿ ವರ್ಷಾಕಾಲಿಕ ನಾದ ಜಲಪೂರ್ಣಮೇಘಗಳ ಧ್ವನಿಯನ್ನು ಕೇಳಿದೊಡನೆಯೇ ಕಳವಳಕ್ಕೆ ಈಡಾ ಗುವಂತೆ, ದಾನವರ ಸಮೂಹವೆಲ್ಲ, ಮನಗಳಲ್ಲಿ ಉದ್ಭವಿಸಿದ ಮಹಾಭೀತಿಯಿಂದ ಮೂರ್ಛಿತವಾಗಿ ಕೆಳಗೆ ಬಿದ್ದು ಬಿಟ್ಟಿತು. ವಿಷ್ಣು ಭಕ್ತರಾದ ಪರಮ ಭಾಗವತರ ಗುಂಪೆಲ್ಲವೂ, ಮೇಘ ಧ್ವನಿಯನ್ನು ಕೇಳಿದೊಡನೆ ಕುಟಜ ವೃಕ್ಷ ಮಂಜರಿಗಳು ವಿಕಸಿತವಾಗುವಂತೆ, ಭಯ ಭ್ರಾಂತಿ ಶೂನ್ಯವಾಗಿ ಪರಮಾನಂದ ಭರದಿಂದ ನಲಿ ದಾಡಿದರು.

೧೧. ಉಪವನದೊಳಗೆ ಗ್ರೀಷ್ಮಾತಪ ಸಂತಪ್ತವಾಗಿ ಇದ್ದಂಥ ಕದಂಬ ವೃಕ್ಷವು ವರ್ಷಾಕಾಲದಲ್ಲಿ ಮೇಘನಾದವನ್ನೂ ಕೇಳಿ ಹೇಗೆ ಕ್ರಮೇಣ ವಿಕಸಿತವಾಗುವುದೋ ಹಾಗೆ ಆಗ, ಆ ಶಂಖಧ್ವನಿಯನ್ನು ಕೇಳಿ ದಾನವರಾಜನಾದ ಪ್ರಹ್ಲಾದನು ಮೆಲ್ಲ ಮೆಲ್ಲಗೆ ಸಮಾಧಿಯಿಂದ ಬಹಿರ್ಮುಖನಾದನು.

೧೨. ಗಂಗಾನದಿಯು ಹರಿದುಹೋಗಿ ಸಮುದ್ರವನ್ನು ಸೇರಿ ಕ್ರಮೇಣ ಸಮುದ್ರವನ್ನೆಲ್ಲ ಆಕ್ರಮಿಸಿಕೊಳ್ಳುವಂತೆ, ಪ್ರಹ್ಲಾದನ ಪ್ರಾಣ ಶಕ್ತಿಯು ಬ್ರಹ್ಮ ರಂಧ್ರದ ಮೂಲಕ ಹೊರಟು, ಅವನ ಶರೀರವನ್ನು ಸೇರಿ ಕ್ರಮವಾಗಿ ಸರ್ವತ್ರ ತುಂಬಿಕೊಂಡಿತು. (ಆವರಿಸಿಕೊಂಡಿತು)

೧೩. ಸೂರ್ಯೋದಯಾನಂತರದಲ್ಲಿ ಸೂರ್ಯನ ತೇಜಸ್ಸು ಬ್ರಹ್ಮಾಂಡದ

ಪ್ರಾಣೇಷು ರಂಧ್ರನವಕೇ ಪ್ರವೃತ್ತೇಷ್ವಥ ತಸ್ಯ ಚಿತ್ ।
ಚೇತ್ಯೋನ್ಮುಖೀ ಬಭೂವಾಂತಃ ಪ್ರಾಣ ದರ್ಪಣ ಬಿಂಬಿತಾ ॥ ೧೪ ॥

ಚೇತಸೀಯೋನ್ಮುಖೀ ಚೇತ್ಯಂ ಚಿನ್ಮನಸ್ಥಾಮುಪಾಯಯೌ ।
ದ್ವಿತ್ವಂ ಮುಕುರ ಸಂಕ್ರಾಂತಾ ಮುಖಶ್ರೀರಿವ ರಾಘವ ॥ ೧೫ ॥

ಮಧ್ಯದಲ್ಲಿ ಸರ್ವತ್ರ ವ್ಯಾಪಿಸುವಂತೆ, ಒಂದು ಕ್ಷಣದೊಳಗಾಗಿ ಪ್ರಾಣ ಶಕ್ತಿಯು ಪ್ರಹ್ಲಾದನ ದೇಹದೊಳಗೆ ಸರ್ವತ್ರ ವಿವರಿಸಿಕೊಂಡಿತು.

(ಪ್ರಾಣವೆಂದರೆ ಉಸಿರಾಡುವುದು ಮಾತ್ರವೇ ಅರ್ಥವಲ್ಲ. ಶರೀರೇಂದ್ರಿಯಗಳಲ್ಲಿ ತೋರುವ ಎಲ್ಲ ವಿಧವಾದ ಕ್ರಿಯಾಶಕ್ತಿಯು ಶರೀರೇಂದ್ರಿಯಗಳೊಳಗೆ ತ್ರಾಣ ಬರುವ ರಕ್ತ ಚಲನ ಆಹಾರ ಪಚನ ಶರೀರ ಧಾರಣ ಇತ್ಯಾದಿ ಕ್ರಿಯೆಗಳೆಲ್ಲ ಪ್ರಾಣ ಶಕ್ತಿಯಿಂದಲೇ ಎಂದು ತಿಳಿಯಬೇಕು.)

೧೪. ಹೀಗೆಯೇ ಇಂದ್ರಿಯ ಶಕ್ತಿಗಳು ಅವನ ಸ್ಥೂಲ ದೇಹದ ಹೊರಗಣ ನವದ್ವಾರಗಳಲ್ಲಿ ಪ್ರವರ್ತಿಸಿದ ಬಳಿಕ, ಅವನ ಜ್ಞಾನ ಶಕ್ತಿಯು ಒಳಗಡೆ, ಅಂಗ ದೇಹವೆಂಬ ದರ್ಪಣದಲ್ಲಿ (ಕನ್ನಡಿಯಲ್ಲಿ) ಪ್ರತಿ ಬಿಂಬಿಸಿ ಕ್ರಮೇಣ (ಚೇತ್ಯಗಳಾದ-ಜ್ಞೇಯಗಳಾದ) ವಿಷಯಾಭಿಮುಖಿಯನಾಯಿತು.

ಸ್ಥೂಲದೇಹ = ರಕ್ತ ಮಾಂಸಾದಿಗಳಿಂದ ಕೂಡಿಕೊಂಡಿರುವ ಪ್ರಸಿದ್ಧವಾದ ದೇಹ. ಅತಿ ಸ್ಥೂಲಮತಿಗಳಾದ ಪಾಮರರಿಗೂ ಗೊತ್ತಿರುವುದ್ದರಿಂದ ಇದಕ್ಕೆ ಸ್ಥೂಲವೆಂದು ಹೆಸರು ಬಂದಿತು.

ಲಿಂಗದೇಹ = ಅಂತಃಕರಣ, ಪ್ರಾಣ ಮುಂತಾದ ಒಳಗಣ (ಆಂತರ) ಭಾಗವು. ಲಿಂಗನೆಂದರೆ ಗುರುತು. ಲಿಂಗ ಶರೀರದಿಂದ ಸಾಮಾನ್ಯ ಜನರು ಆತ್ಮನಿರುವುದನ್ನು ಗುರುತಿಸುವರು.

ಕಾರಣ ಶರೀರ= ಶರೀರವೆಂದರೆ ನಾಶವಾಗತಕ್ಕದ್ದು ಎಂದರ್ಥ. ಇದು ಸ್ಥೂಲ ಶರೀರದಂತೆ ಶರೀರವಾಗಿ ಗೋಚರಿಸುವುದಿಲ್ಲ. ಅವಿದ್ಯೆಯು ವಿದ್ಯೆಯಿಂದ (ಜ್ಞಾನದಿಂದ) ನಾಶವಾಗತಕ್ಕದ್ದಾದ ಕಾರಣ, ಅವಿದ್ಯೆಯನ್ನೇ ಶಾಸ್ತ್ರದಲ್ಲಿ ಕಾರಣವೆಂದು ಹೇಳಿದೆ ಹೀಗೆ ಸ್ಥೂಲ. ಸೂಕ್ಷ್ಮ ಕಾರಣಗಳೆಂದು ಶರೀರವು ಮೂರು ವಿಧ]

೧೫. ರಾಘವ ಅವಧರಿಸು. ಮುಖವು ಒಂದು ಕನ್ನಡಿಯಲ್ಲಿ ಪ್ರತಿಬಿಂಬಿಸಿ

ಕಿಂಚಿದಂಕುರಿತೇ ಚಿತ್ತೇ ನೇತ್ರೇ ವಿಕಸನೋನ್ಮುಖೇ ।
ಶನೈರ್ಬಭೂವತುಸ್ತಸ್ಯ ಪ್ರಾತರ್ನೀಲೇ ಯಥೋತ್ಪಲೇ ॥ ೧೬ ॥

ಪ್ರಾಣಾಪಾನಪರಾಮೃಷ್ಟಾ ನಾಡೀ ವಿವರ ಸಂವಿದಃ ।
ವಾತಾರ್ತಸ್ಯೇವ ಪದ್ಮಸ್ಯ ಸ್ಪಂದೋಽಸ್ಯ ಸಮಜಾಯತ ॥ ೧೭ ॥

ದಾಗ, ಏಕಕಾಲದಲ್ಲಿ ಬಿಂಬ ಮತ್ತು ಪ್ರತಿಬಿಂಬ ಎಂಬ ಉಭಯಾ ತಾರಗಳನ್ನೂ ಹೊಂದಿರುವಂತೆ- ಚೇತನೀಯಗಳಾದ ವಿಷಯಾಭಿಮುಖಿಯಾಗಿ ಪರಿಣತವಾದ ಅವನ ಚಿತ್ (ಜ್ಞಾನ) ಶಕ್ತಿಯು ಆಗ ಚೇತ್ಯಾಕಾರ ಸಂಸ್ಕಾರೋದ್ಬೋಧದಿಂದ ಚೇತ್ಯದಂತೆ ಆಗಿ ಚಿಜಡೋಭಯರೂಪತ್ವವೆಂಬ ಮನಸ್ತ್ವ (ಮನೋರೂಪತ್ವ) ವನ್ನೂ ಹೊಂದಿತು. (ಸ್ವತಃ ಚಿದ್ರೂಪವಾದ ಜ್ಞಾನಶಕ್ತಿಯು ಜಡವಾದ ಚೇತ್ಯದಂತೆಯೂ ಕಾಣಿಸಿಕೊಂಡು, ಚಿತ್ತು, ಜಡ ಉಭಯಾತ್ಮಕವಾದ ಮನೋ ರೂಪವನ್ನೂ ಹೊಂದಿತು.)

(ಮನಸ್ಸನ್ನೂ ಚೇತನವೆಂದು ಸಾಮಾನ್ಯವಾಗಿ ಪ್ರಾಕೃತ ಜನರು ಹೇಳುವರು, ನಿಜವಾಗಿ ವಿಚಾರಮಾಡಿ ನೋಡಿದರೆ ಮನಸ್ಸು ಚೇತನವಲ್ಲ. ಆತ್ಮನೊಬ್ಬನೇ ಚೇತನನು. ಮನಸ್ಸಾದರೋ ಚೇತನದಂತೆ ಕಾಣುವ ಚಿದಾಭಾಸ. ಒಂದು ವಸ್ತುವಿಗೂ ಅದರ ನೆರಳಿಗೂ ಇರುವಷ್ಟು ಭೇದವು ಚೇತನಕ್ಕೂ ಮನಸ್ಸಿಗೂ ಇರುವುದು. ಚೈತನ್ಯವೇ (ಚಿಚ್ಛಕ್ತಿ) ಮನಸ್ಸಿನ ಮೂಲಕ ಜಡವಾದ ವಿಷಯಾಕಾರವಾಗುವುದರಿಂದ, ಮನಸ್ಸು ಚಿಜ್ಜಡೋಭಯಾತ್ಮಕವೆಂದು ಇಲ್ಲಿ ಹೇಳಿದೆ.

(ಚಿತ್ = ಚೇತನ= ಜ್ಞಾನ) (ಚೇತ್ಯ) (ಜ್ಞೇಯ= ಜ್ಞಾನದಿಂದ ಗ್ರಹಿಸಲ್ಪಬೇಕಾದ ವಿಷಯ ವಸ್ತು)

೧೬. ಬಳಿಕ, ಆ ಪ್ರಹ್ಲಾದನ ಚಿತ್ತವು ಸ್ವಲ್ಪ ಅಂಕುರಿತವಾಗಲಾಗಿ ಪ್ರಾತಃಕಾಲದಲ್ಲಿ ನೀಲೋತ್ಪಲಗಳು ಚೆನ್ನಾಗಿ ಅರಳುವಂತೆ, ಅವನ ನೇತ್ರಗಳೂ ಮೆಲ್ಲ ಮೆಲ್ಲನೆ ತೆರೆಯಲಾರಂಭಿಸಿದವು.

೧೭. ಒಂದು ಸರಸ್ಸಿನೊಳಗೆ ಹೊಕ್ಕು ಗಾಳಿಯು ಬೀಸುತ್ತಿರಲು ಅದರ ಹೊಡೆತಕ್ಕೆ ಸಿಕ್ಕಿ ಪದ್ಮವು ಚಲಿಸುವಂತೆ. ಪ್ರಹ್ಲಾದನ ದೇಹದ ನಾಡೀ ರಂಧ್ರಗಳೊ

ನಿಮೇಷಾಂತರ ಮಾತ್ರೇಣ ಮನಃ ಪೀವರತಾಂ ಯಯೌ ।
ತಸ್ಮಿನ್ಪ್ರಾಣವಶಾತ್ಪೂರ್ಣೇ ತರಂಗ ಇವ ವಾರಿಣೀ ॥ ೧೮ ॥
ಅಥಾಸೌ ವಿಕಸನ್ನೇತ್ರಮನಃ ಪ್ರಾಣವಪುರ್ಬಭೌ ।
ಅರ್ಧೋದಿತ ಇವಾದಿತ್ಯೇ ಸರಃ ಸ್ಫುರಿತ ಪಂಕಜಂ ॥ ೧೯ ॥
ಅಸ್ಮಿನ್ನವಸರೇ ಯಾವದ್ಬುಧ್ಯಸ್ವೇತ್ಯವದದ್ವಿಭುಃ ।
ಪ್ರಬುದ್ಧ ಸ್ತಾವದೇಷೋಽಭೂದ್ಬರ್ಹೀ ಘನರವಾದಿವ ॥ ೨೦ ॥
ಪ್ರಫುಲ್ಲಿ ನಯನಂ ಜಾತ ಮನನಂ ಪೀವರಸ್ಮೃತಿಂ ।
ಉವಾಚೈನಂ ತ್ರಿಲೋಕೇಶಃ ಪುರಾ ನಾಭ್ಯಬ್ಜಜಂ ಯಥಾ ॥ ೨೧ ॥

ಳಗೆ ಸರ್ವತ್ರ ಪ್ರಾಣಾ ಪಾನಗಳು ಪ್ರವೇಶಮಾಡಿ ಸಂವೇದನ ಶಕ್ತಿಯನ್ನೂ ಉದ್ಬೋಧಗೊಳಿಸಿದ ಕಾರಣ, ಅವನ ದೇಹದಲ್ಲಿಯೂ ಸ್ವಲ್ಪ ಚಲನವು ಉಂಟಾಯಿತು.

(ಸಂವೇದನ–ಅರಿವು, ಜ್ಞಾನ, ಎಚ್ಚರ, ಪ್ರಜ್ಞೆ)

೧೮. ಹೀಗೆ ಅವನದೇಹವು ಪ್ರಾಣ ಗತಿಯಿಂದ ಪರಿಪೂರ್ಣವಾದ ಜಲರಾಶಿಯಲ್ಲಿ ತರಂಗಗಳು ಕ್ರಮೇಣ ಪ್ರಬಲಿಸುವಂತೆ, ಅವನ ದೇಹದೊಳಗೆ ಮನಸ್ಸು ಒಂದು ಕ್ಷಣಕಾಲದೊಳಗಾಗಿಯೇ ಸ್ಥೂಲತ್ವವನ್ನು ಹೊಂದಿ ವಿಶೇಷವಾಗಿ ಬೆಳೆಯಿತು (ವೃದ್ಧಿ ಹೊಂದಿತು.)

೧೯. ಈ ಕ್ರಮದಿಂದ, ನೇತ್ರ ಮನಸ್ಸು ಪ್ರಾಣ ಶರೀರಗಳೆಲ್ಲವೂ ವಿಕಾಸ ಹೊಂದಿ ಬಿಡಲು ಆಗ ಪ್ರಹ್ಲಾದನು ಸೂರ್ಯನು ಆಗತಾನೇ ಅರ್ಧ ಮಾತ್ರ ಉದಯಿಸಿರುವ ಕಾಲದಲ್ಲಿ ವಿಕಸಿತವಾಗುತ್ತಿರುವ ಕಮಲಗಳುಳ್ಳ ಸರೋವರದಂತೆ ಬಹು ಚೆನ್ನಾಗಿ ವಿರಾಜಿಸಿದನು.

೨೦. ಇಂತಹ ಸಮಯದಲ್ಲಿ, ಶ್ರೀಮನ್ನಾರಾಯಣನು. 'ಅಯ್ಯ ಪ್ರಹ್ಲಾದ, ಏಳು-ಬಹಿರ್ಮುಖನಾಗು' ಎಂದು ಕೂಗಿ ಹೇಳುತ್ತಿರುವಾಗಲೇ, ಮೇಘ ಧ್ವನಿಯನ್ನು ಕೇಳಿದ ನವಿಲಿನಂತೆ, ಆ ಪ್ರಹ್ಲಾದನೂ ಸಮಾಧಿಯನ್ನು ಬಿಟ್ಟು ಎಚ್ಚತ್ತನೂ (ಬಹಿರ್ಮುಖನಾದನು.

೨೧. ಆಗ, ಚೆನ್ನಾಗಿ ವಿಕಾಸಹೊಂದಿದ (ಉನ್ಮೀಲಿತ) ನಯನಗಳುಳ್ಳವನ್ನಾಗಿಯೂ ತಾನು ಪ್ರಹ್ಲಾದನೆಂಬ ಪ್ರತ್ಯಭಿಜ್ಞಾನವನ್ನು (ತನ್ನ ದೇಹದ ಮೇಲೆ ಪೂರ್ವಾನುಭೂತವಾದ ನಾನು ಪ್ರಹ್ಲಾದನೆಂಬ ಅಹಂ ಭಾವದ ಸ್ಮರಣೆ) ಮತ್ತೆ ಪಡೆದವನಾಗಿಯೂ ಚೆನ್ನಾಗಿ ವೃದ್ಧಿ ಹೊಂದಿದ ತನ್ನ ಪೂರ್ವಕಾಲದ ಸಕಲ ವ್ಯವ

ಸಾಧೋ ಸ್ಮರ ಮಹಾಲಕ್ಷ್ಮೀ ಮಾತ್ಮೀಯಾಂ ಸ್ಮರ ಚಾಕೃತಿಂ ।
ಅಕಾಂಡ ಏವ ಕಿಂ ದೇಹವಿರಾಮಃ ಕ್ರಿಯತೇ ತ್ವಯಾ ॥ ೨೨ ॥

ಹೇಯೋಪಾದೇಯ ಸಂಕಲ್ಪ ವಿಹೀನಸ್ಯ ಶರೀರಗೈಃ ।
ಭಾವಾಭಾವೈಸ್ತವಾರ್ಥಃ ಕಿಮುತ್ತಿಷ್ಠೋತ್ತಿಷ್ಠ ಸಂಪ್ರತಿ ॥ ೨೩ ॥

ಹಾರಗಳ ಸ್ಮರಣೆಯುಳ್ಳವನಾಗಿಯೂ ಇದ್ದ ಪ್ರಹ್ಲಾದನನ್ನೂ ಕುರಿತು, ತ್ರಿಲೋಕಾಧಿಪತಿಯಾದ ಆ ಪರಮಾತ್ಮನು, ಪೂರ್ವದಲ್ಲಿ ತನ್ನ ನಾಭಿಕಮಲದಿಂದ ಆವಿರ್ಭವಿಸಿದ (ಕಮಲ ಸಂಭವ) ಚತುರ್ಮುಖನನ್ನು ಕುರಿತು ಮಾತನಾಡಿದಂತೆ, ಮಾತನಾಡಿದನು.

(ಪ್ರತ್ಯಭಿಜ್ಞಾನ = ಸೋಯಂ ದೇವದತ್ತಃ ಹಿಂದೆ ನಾನು ನೋಡಿದ್ದಂಥ ದೇವದತ್ತನು ಇವನೇ ಸಃ, ಎಂಬ ಪದದಿಂದ ಪೂರ್ವಾನು ಭೂತನಾದ ದೇವದತ್ತನ ವಿಷಯಯುಕ್ತವಾದ ಸ್ಮರಣೆಯೂ, ಅಯಂ ಎಂಬ ಪದದಿಂದ ಪೂರ್ವಾನು ಭೂತ ವ್ಯಕ್ತಿಯನ್ನೂ ಗುರ್ತಿಸುವ ನೇರವಾದ ಅನುಭವವೂ, (ಅವನೇ ಇವನು) ಸೂಚಿತವಾಗಿವೆ. ಇದಕ್ಕೆ ಪ್ರತ್ಯಭಿಜ್ಞಾನವೆಂದು ಹೆಸರು.)

೨೨. ಎಲೈ ಸಾಧುವೇ, ನಿನ್ನ ಅಖಂಡವಾದ ಆ ದಾನವ ರಾಜ್ಯಶ್ರೀಯ ಮಹಾವೈಭವವನ್ನೂ ಮತ್ತು ಹಾಗೆಯೇ ಆತ್ಮೀಯವಾದ ರೂಪಲಾವಣ್ಯ ಸಂಪತ್ತಿಯನ್ನೂ ಸ್ಮರಿಸಿಕೊಳ್ಳುವವನಾಗು. ಇದೇನು ಹೀಗೆ ಅಕಾಲದಲ್ಲಿ, ದೇಹ ತ್ಯಾಗಮಾಡಬೇಕಾದ ಕಾಲವು ಇನ್ನೂ ಒದಗದಿರುವಾಗಲೇ, ಈ ದೇಹವನ್ನೂ ಕೊನೆಗಾಣಿಸಬೇಕೆಂದು ಉದ್ಯುಕ್ತನಾಗಿರುವೆ ?

೨೩. (ನಹ ವೈಸ ಶರೀರಸ್ಯ ಪ್ರಿಯಾಪ್ರಿಯಯೋರಪಹತಿರಸ್ತಿ (ಸ ಶರೀರನಾಗಿರುವವನಿಗೆ ಪ್ರಿಯಾ ಪ್ರಿಯಗಳ ಬಾಧೆಯು ತಪ್ಪುವುದಿಲ್ಲ) ಎಂಬ ಛಾಂದೋಗ್ಯ ಶ್ರುತ್ಯನು ಸಾರವಾಗಿ) ಈ ದೇಹಸದ್ಭಾವದಿಂದ ನಿನಗೆ ಪ್ರಿಯಾ ಪ್ರಿಯ ಸಂಪರ್ಕವೂ ತನ್ಮೂಲಕವಾಗಿ ಅನರ್ಥ ಪ್ರಾಪ್ತಿಯೂ ಆಗುವುದೆಂದು ಶಂಕಿಸಬೇಡ, ಏಕೆಂದರೆ, ಇದು ಅಪ್ರಿಯವಾದುದು ಅದು ಕಾರಣ ಹೇಯವು (ತ್ಯಾಜ್ಯವು) ಇದು ಪ್ರಿಯವಾಗಿರುವ ಕಾರಣ ಉಪಾದೇಯವು (ಗ್ರಾಹ್ಯವು) ಎಂಬ ಸಂಕಲ್ಪವೇ ನಿನಗೆ ಇಲ್ಲದಿರುವ ಕಾರಣ, ಈ ದೇಹವು ಇದ್ದರೂ ಕೂಡ, ತದ್ಗತವಾದ ಪ್ರಿಯಾಪ್ರಿಯ (ಭಾವಾ

ಭಾವ) ಗಳಿಂದ ನಿನಗೇನಾಗುವುದು? (ಯಾವ ಬಗೆಯ ಅನರ್ಥ ಪ್ರಸಕ್ತಿಗೂ ಅವ ಕಾಶವೇ ಇಲ್ಲವಲ್ಲಾ!) ಅದು ಕಾರಣ ನೀನು ಈ ದೇಹವನ್ನೂ ಕೊನೆಗಾಣಿಸಬೇಕೆಂಬ ಪ್ರಯತ್ನವನ್ನು ಬಿಟ್ಟು ಈಗಲೇ ಏಳು.

(ಅಶರೀರಂವಾ ವ ಸಂತಂ ನ ಪ್ರಿಯಾ ಪ್ರಿಯೇ ಸ್ಪೃಶತಃ-ಛಾಂದೋಗ್ಯ ೮-೧೨-೧. ಅಶರೀರನಾಗಿಯೇ ಇರತಕ್ಕ ಜ್ಞಾನಿಯನ್ನೂ ಪ್ರಿಯಾಪ್ರಿಯಗಳು ಎಂದಿಗೂ ಸೋಕುವುದೇ ಇಲ್ಲವು. ಈ ಶ್ರುತಿಯು ಆಪಾತತಃ "ಮಮ ಮಾತಾ ವಂಧ್ಯಾ" ("ನನ್ನ ತಾಯಿಯು ಬಂಜೆಯು") ಎಂಬ ವಾಕ್ಯದಂತೆ ಅತ್ಯಂತ ವಿರುದ್ಧವೂ, ವ್ಯಾಘಾತವೂ ಆಗಿರುವುದು. ತಾನು ಇದ್ದುಕೊಂಡೇ ತನ್ನನ್ನು ಹೆತ್ತಿರುವ ತಾಯಿಯು ಬಂಜೆಯಾಗುವುದೆಂತು? ತಾನೇ ಆ ಮಾತನ್ನು ಹೇಳುವುದಾದರೂ ಹೇಗೆ? ಹೇಳಿದರೂ ಸಮಂಜಸವಾಗುವುದೇ? ಉನ್ಮತ್ತರಿಗೂ ಕೂಡ ಈ ಮಾತು ವಿರುದ್ಧವೆಂದು ತಿಳಿಯುವುದಲ್ಲಾ! ಹೀಗಿರುವಾಗ ಇದರಂತೆಯೇ ಪ್ರತ್ಯಕ್ಷವಾಗಿ ದೇಹೇಂದ್ರಿಯಗಳೊಡನೆ ಕೂಡಿಕೊಂಡಿರುವಾಗಲೂ ಈ ದೇಹಿಯು ಅಶರೀರನಾಗುವುದೆಂತು? ಈ ಮಾತು ಪರಸ್ಪರ ಅಸಂಬದ್ಧವೂ, ವಿರುದ್ಧವೂ ಆದುದಲ್ಲವೇ!!! ಎಂಬುದಾಗಿ ಭ್ರಾಂತಿಯುಂಟಾಗುವುದು ಸಹಜವೇ! ಆದರೆ ವಸ್ತುತಃ ಆತ್ಮನು ಎಂದೆಂದಿಗೂ ಅಶರೀರಿಯೇ, ನಿರಾಕಾರನೇ, ನಿರವಯವಿಯೇ ಅಖಂಡಾಪರಿಚ್ಛಿನ್ನನೇ ಇದರಲ್ಲಿ ಸಂಶಯವಿಲ್ಲ. (ಆತ್ಮನಿಗೆ ನಾಮರೂಪಗಳೊಂದೂ ಇಲ್ಲವು.) ಇದೇ ಪರಮಾರ್ಥ. ಶರೀರವು ಬಿದ್ದು ಹೋಗಲು (ಸತ್ತು ಹೋಗಲು) ಆಗ ಆತ್ಮನು ಅಶರೀರನಾಗಬಹುದೇ ಹೊರತು, ಆದು ಬದುಕಿರುವಾಗ, ಅದೇ ದೇಹದಿಂದಲೇ ಸಕಲ ಲೌಕಿಕ ವ್ಯವಹಾರಗಳನ್ನು ನಡೆಸುತ್ತಿರುವಾಗ ಅಶರೀರನಾಗುವುದೇ ಇಲ್ಲ ಎಂದು ಹೇಳಕೂಡದು. ಏಕೆಂದರೆ ಆತ್ಮನ ಸಶರೀರತ್ವವು ಮಿಥ್ಯಾಜ್ಞಾನ ನಿಮಿತ್ತಕವಾದುದು. ಶರೀರೇಂದ್ರಿಯಾದಿಗಳಲ್ಲಿ "ನಾನು-ನನ್ನದು" ಎಂಬುದಾಗಿ ಲೋಕ ಸ್ವಾಭಾವಿಕವಾದ ಆತ್ಮಾಭಿಮಾನವೆಂಬ ಮಿಥ್ಯಾ ಜ್ಞಾನದ ಮೂಲಕವೇ ಆತ್ಮನಿಗೆ ಶರೀರತ್ವವನ್ನು ಕಲ್ಪಿಸುವುದಕ್ಕೆ ಸಾಧ್ಯವು. ಅನ್ಯಥಾ ಸಾಧ್ಯವಿಲ್ಲ. ಆತ್ಮನ ಸಶರೀರತ್ವವು ವಾಸ್ತವವಾಗಿದ್ದ ಪಕ್ಷದಲ್ಲಿ ಅದು ಜೀವಿಸಿರುವಾಗ ಎಂದಿಗೂ ನಿವೃತ್ತಿಯಾಗಲಾರದು. ಅದು ಮಿಥ್ಯಾಜ್ಞಾನ ನಿಮಿತ್ತದಿಂದ ಕಲ್ಪಿತವಾಗಿರುವವರಿಂದಲೇ ತತ್ತ್ವ ಜ್ಞಾನವು ಉದಯವಾದ ಕೂಡಲೇ ಮಿಥ್ಯಾ ಜ್ಞಾನವೂ ತತ್ಕಾರ್ಯದಿಂದ ಸಶರೀರತ್ವವೂ ಸ್ವತ ಏವ ಬದುಕಿರುವಾಗಲೆ ನಿವೃತ್ತಿಯಾಗುವುವು. ಅಶರೀರತ್ವವಾದರೋ ಆತನ ಸ್ವಭಾವ. ಅದು ಎಂದಿಗೂ ನಿವೃತ್ತಿಯಾಗುವುದಿಲ್ಲ. ಅದು ನಿತ್ಯ-ದೇಹಾದಿವ್ಯತಿರಿಕ್ತನಾಗಿ ನಿತ್ಯನಾದ ಆತ್ಮನಿಗೆ, ಆತ್ಮೀಯವಾದ ಅನಾತ್ಮ ದೇಹಾದಿಗಳಲ್ಲಿ ಆತ್ಮತ್ವಾಭಿಮಾನವು ರಜ್ಜು ಸರ್ಪಾದಿ ಬುದ್ಧಿಯಂತೆ ಅಧ್ಯಾಸ ಲಕ್ಷಣ ಮಿಥ್ಯಾಜ್ಞಾನವಿಜೃಂಭಿತವು. ಅದು ತತ್ತ್ವಜ್ಞಾನದಿಂದ ಬಾಧಿತವಾಗುವುದು.

ಆದುದರಿಂದ ಆತ್ಮನ ಶರೀರತ್ವವು ಮಿಥ್ಯಾಜ್ಞಾನ ನಿಮಿತ್ತಕವೆಂಬುದು ಸಿದ್ಧವಾಗುವ ಕಾರಣ. ಜ್ಞಾನಿಯು ಜೀವಿಸಿರುವಾಗಲೂ (ದೇಹಾದಿಗಳಿಂದ ವ್ಯವಹರಿಸುತ್ತಿರುವಾಗಲೂ) ಅಶರೀರನೇ ಸರಿ. ಅದರಲ್ಲಿ ಯಾವ ಶಂಕೆಗೂ ಅವಕಾಶವೇ ಇಲ್ಲ.)

(ತದ್ಯಥಾ, ಅಹಿನಿರ್ಲ್ವಯನೀ ವಲ್ಮೀಕೇ ಮೃತಾ ಪ್ರತ್ಯಸ್ತಾ ಶಯಿತ-ಏಕಮೇವೇದಂ ಶರೀರಂ ಶೇತೇ ಅಥಾಯಮಶರೀರೋ ಅಮೃತಃ ಪ್ರಾಣೋ ಬ್ರಹ್ಮೈವ ತೇಜ ಏವ. ಬೃಹದಾರಣ್ಯಕ. ೮-೮-೨. ಜೀವನ್ಮುಕ್ತನು ದೇಹದಲ್ಲಿದ್ದರೂ ಕೂಡ, ಅಜ್ಞಾನಿಯಾಗಿದ್ದ ಕಾಲದಲ್ಲಿ ಹೇಗೋ ಹಾಗೆ ಸಂಸಾರಿಯಾಗಿಲ್ಲವು.)

(ಹಾವಿನ ಪೊರೆಯು ಹುತ್ತದಲ್ಲಿ ಇಡಲ್ಪಟ್ಟದ್ದರೂ (ಬಿದ್ದಿದ್ದರೂ) ಅದನ್ನು ನೋಡಿ ಹಾವು ಅದರಲ್ಲಿ “ಅಹಂ-ನಾನು” ಎಂಬ ಅಭಿಮಾನವನ್ನು ಇಡದೆ ಇರುವ ಕಾರಣ ಹೇಗೆ ಅದು ಮೃತವಾಗಿ ಬಿದ್ದಿರುವುದೋ ಮತ್ತು ಭೀತಿಜನಕವಾಗಿಲ್ಲವೋ ಹಾಗೆಯೇ ಜೀವನ್ಮುಕ್ತನು ಈ ದೇಹವಲ್ಲಿದ್ದರೂ ಕೂಡ ತನ್ನ ತತ್ತ್ವ ಜ್ಞಾನದಿಂದ ಅಭಿಮಾನ ಶೂನ್ಯನಾಗಿಯೇ ವ್ಯವಹರಿಸುವನು. ಅದು ಕಾರಣ ಅವನ ಶರೀರವು ಮೃತಪ್ರಾಯವಾಗಿಯೇ ಪ್ರಿಯಾಪ್ರಿಯಗಳನ್ನು ಉಂಟುಮಾಡದೆಯೇ ಇರುವುದು. ಈ ದೃಷ್ಟಾಂತದಂತೆಯೇ ಪೊರೆಯನ್ನು ಬಿಟ್ಟ ಹಾವು ತನ್ನದೇ ಆದ ಪೊರೆಯಲ್ಲಿ ಹೇಗೆ ಅಭಿಮಾನವು ಇಲ್ಲವೋ ಹಾಗೆ ಜ್ಞಾನಿಗೆ ತನ್ನ ದೇಹದಲ್ಲಿ ಪೂರ್ವದಂತೆ ಅತ್ಮತ್ವಾಭಿಮಾನವು ಸುತರಾಂ ಇಲ್ಲವಾಗಿ ಬಿಟ್ಟಿರುವದರಿಂದ ಅವನು ಶರೀರಸ್ಥನಾಗಿದ್ದರೂ ಅಶರೀರನೇ ! ಅಶರೀರನಾಗಿರುವುದರಿಂದಲೇ ಅಮೃತನು. ಅವನು (ಆ ದೇಹದಿಂದ) ಜೀವಿಸಿಕೊಂಡಿರುವವನಾದರೂ ಸ್ವಯಂ ಜ್ಯೋತಿರಾನಂದ ಸ್ವರೂಪನಾದ ಬ್ರಹ್ಮವೇ ಮತ್ತು ಸಚಕ್ಷುಃ ಅಚಕ್ಷುರಿವ, ಸಕರ್ಣಃ ಅಕರ್ಣ ಇವ ಸವಾಕ್ ಅವಾಗಿವ, ಸಮನಾ ಅಮನಾ ಇವ ಸಪ್ರಾಣೋ ಅಪ್ರಾಣ ಇವ, ಎಂಬೀ ಎರಡು ಶ್ರುತಿಗಳೂ ಬ್ರಹ್ಮಜ್ಞಾನಿಯಾದ ಜೀವನ್ಮುಕ್ತನು ಅಶರೀರನೆಂಬ ವಿಷಯದಲ್ಲಿ ಪ್ರಮಾಣವು. ಸ್ಥಿತ ಪ್ರಜ್ಞಸ್ಯ ಕಾ ಭಾಷಾ ಇತ್ಯಾದಿ ಭಗವದ್ಗೀತೆಯ ೨-೫೪ ಶ್ಲೋಕವನ್ನು ಮೊದಲುಗೊಂಡು ಸ್ಥಿತ ಪ್ರಜ್ಞನ ಲಕ್ಷಣಗಳು ಉಕ್ತವಾಗಿವೆ. ಅದರಲ್ಲಿ ಜೀವನ್ಮುಕ್ತನಿಗೆ ದೈಹಿಕವಾದ ಸಕಲ ವ್ಯಾಪಾರಗಕಲ್ಲಿಯೂ ಸಂಬಂಧವು ಸುತರಾಂ ಇಲ್ಲವೇ ಇಲ್ಲ ಎಂದು ವರ್ಣಿತವಾಗಿವೆ. ಆದುದರಿಂದ ಬ್ರಹ್ಮಾತ್ಮ ಭಾವವನ್ನು ತತ್ತ್ವತಃ ಧೃಢವಾಗಿ ಮನಗಂಡಿರುವ ಜೀವನ್ಮುಕ್ತನಿಗೆ ಮೊದಲಿನಂತೆ ಸಂಸಾರತ್ವವು ಇಲ್ಲವು. ಯಾವನಿಗೆ ಪೂರ್ವದಂತೆ ಸಂಸಾರವು ಇದೆಯೋ ಅವನು ಬ್ರಹ್ಮಾತ್ಮ ಭಾವವನ್ನು ಸಾಕ್ಷಾತ್ಕರಿಸಿದ ಜ್ಞಾನಿಯಲ್ಲವು ಎಂಬುದೇ ಅನವದ್ಯವಾದ ಪರಮ ಸಿದ್ಧಾಂತ.

ಸ್ಥಾತವ್ಯಮಿಹ ದೇಹೇನ ಕಲ್ಪಂ ಯಾವದನೇನ ತೇ ।
ವಯಂ ಹಿ ನಿಯತಿಂ ವಿದ್ಮೋ ಯಥಾಭೂತಾಮನಿಂದಿತಾಂ ॥ ೨೪ ॥

ಜೀವನ್ಮುಕ್ತೇನ ಭವತಾ ರಾಜ್ಯ ಏವೇಹ ತಿಷ್ಠತಾ ।
ಕ್ಷೇಪಣೀಯಾ ಗತೋದ್ವೇಗಮಾಕಲ್ಪಾಂತಮಿಯಂ ತನುಃ ॥ ೨೫ ॥

ತನ್ವಾಂ ಕಲ್ಪಾಂತಶೀರ್ಣಾಯಾಂ ಸ್ವೇ ಮಹಿಮ್ನಿ ತ್ವಯಾನಘ ।
ವಸ್ತವ್ಯಂ ಸ್ಫುಟಿತೇ ಕುಂಭೇ ಕುಂಭಾಕಾಶೇನ ಖೇ ಯಥಾ ॥ ೨೬ ॥

ಹೆಚ್ಚಿನ ವಿವರಗಳನ್ನು ಬ್ರಹ್ಮ ಸೂತ್ರ ಶ್ರೀ ಶಾಂಕರ ಭಾಷ್ಯದ, ಸಮನ್ವಯಾಧಿಕರಣದ ಉಪಾಂತ್ಯ ಗ್ರಂಥದಿಂದ ತಿಳಿದುಕೊಳ್ಳಬಹುದು.)

೨೪. ವತ್ಸ, ಪ್ರಹ್ಲಾದ ನೀನು ಪ್ರಾರಬ್ಧ ದೇಹಧಾರಿಯಾಗಿ ಈ ಕಲ್ಪಾಂತದವರೆಗೂ ಈ ಪಾತಾಳದಲ್ಲಿ ಇರಲೇಬೇಕೆಂಬ ವಿಧಿಯು ನಿಯಮವು ಇರುವುದು. ನಿನ್ನ ಆಯುಸ್ಸಿನ ಕ್ಲಪ್ತವಾದ ಪರಮಾವಧಿಯನ್ನು ಯಥಾರ್ಥವಾಗಿ ನಾನು ಬಲ್ಲೆನು. ಈ ವಿಧಿನಿಯಮವು ಸರ್ವರಿಗೂ ಅನುಲ್ಲಂಘನೀಯವಾದುದು. ಚಿಂತಿಸಬೇಡ. ಜೀವನ್ಮುಕ್ತನಾದ ನಿನಗೆ ಈ ದೇಹದಿಂದ ಯಾವ ಅನರ್ಥಪ್ರಸಕ್ತಿಯೂ ಸರ್ವಥಾ ಇಲ್ಲವು.

"ಆಚಾರ್ಯವಾನ್ ಪುರುಷೋ ವೇದ ತಸ್ಯ ತಾವದೇವ ಚಿರಂ ಯಾವನ್ನ ವಿಮೋಕ್ಷ್ಯೇ ಅಥ ಸಂಪತ್ಸ್ಯೇ ಛಾಂದೋಗ್ಯ ೬ನೆಯ ಪ್ರಪಾಠಕದ ಉಪಸಂಹಾರ ವಾಕ್ಯ. ಈ ಶ್ರುತಿಯು "ಜ್ಞಾನಿಯು. ಸಂಸಾರಮೂಲವಾದ ಅವಿದ್ಯಾನಾಶದಿಂದ ಮುಕ್ತನೇ ಆದರೂ ಅತ್ಯಂತಿಕವಾದ ಸತ್ಸಂಪತ್ತಿಗಾಗಿ ಪ್ರಾರಬ್ಧ ದೇಹಪಾತವನ್ನು ನಿರೀಕ್ಷಿಸಲೇಬೇಕು." ಎಂದು ಹೇಳುವುದು.

೨೫. ನೀನು ಜೀವನ್ಮುಕ್ತನಾಗಿ ಈ ದಾನವ ರಾಜ್ಯ ಪದವಿಯಲ್ಲಿಯೇ ಇರುತ್ತ ಅನುದ್ವಿಗ್ನನಾಗಿ (ಯಾವುದರಿಂದಲೂ ಕಳವಳಗೊಳ್ಳದೆ) ಕಲ್ಪಾಂತದವರೆಗೂ ನಿನ್ನ ಈ ದೇಹವನ್ನು ಯದೃಚ್ಛಾ ಪ್ರಾಪ್ತವಾದ ಪ್ರಾಪಂಚಿಕ ವ್ಯವಹಾರಗಳಲ್ಲಿ ವಿನಿಯೋಗಿಸಲೇಬೇಕು (ಗತ್ಯಂತರವು ಇಲ್ಲ)

೨೬. ಎಲೈ ಅನಘನೇ (ದೋಷಾಸಂಸ್ಪೃಷ್ಟ), ಉಪಾಧಿಯಾದ ಘಟವು

ಕಲ್ಪಾಂತಸ್ಥಾಯಿನೀ ಶುದ್ಧಾ ದೃಷ್ಟಲೋಕಪರಾವರಾ ।
ಇಯಂ ತವ ತನುರ್ಜಾತಾ ಜೀವನ್ಮುಕ್ತವಿಲಾಸಿನೀ ॥ ೨೭ ॥

ಒಡೆದುಹೋಗಲು ಕೂಡಲೆ ತದುಪಹಿತವಾದ ಘಟಾಕಾಶವು ತಾನಾಗಿ ಪ್ರಯತ್ನಾಂತರಾಪೇಕ್ಷೆಯಿಲ್ಲದೆಯೇ) ಮಹಾಕಾಶದೊಳಗೆ ಐಕ್ಯವಾಗುವಂತೆ, ಕಲ್ಪಾಂತ ಕಾಲದಲ್ಲಿ ನಿನ್ನ ಈ ಪ್ರಾರಬ್ಧ ದೇಹವು ನಷ್ಟವಾದೊಡನೆಯೇ ನೀನು ನಿರತಿಶಯ ಮಹತ್ವ ರೂಪ ಸ್ವಾತ್ಮಸ್ಥಿತಿಯಲ್ಲಿ ಇರಬೇಕಾಗುವುದು.

ಉಪಾಧಿ: ಯಾವುದಾದರೊಂದು ವಸ್ತುವಿನ ಅಂಶವಾಗಿರದೆ ಆ ವಸ್ತುವಿನಲ್ಲಿಲ್ಲದ ಧರ್ಮವನ್ನು ಅದರಲ್ಲಿ ತೋರುವಂತೆ ಮಾಡಿ, ಭೇದವನ್ನು ಕಲ್ಪಿಸುವ ಬೇರೊಂದು ವಸ್ತು, ವಸ್ತುತಃ ಆಕಾಶವು (ಬಯಲು) ಒಂದೇ. ಅದರಲ್ಲಿ ಭೇದವು ಇಲ್ಲ. ಆದರೆ ಘಟ ಗೃಹ ಇವೇ ಮೊದಲಾದವುಗಳ ಸಂಬಂಧದಿಂದ ಘಟಾಕಾಶ, ಗೃಹಾಕಾಶ ಎಂದು ಮುಂತಾಗಿ ಬೇರೆಬೇರೆ ಇರುವಂತೆ ತೋರುವುದು. ಇಲ್ಲಿ ಘಟ ಗೃಹಾದಿಗಳು ಆಕಾಶದ ಅಂಶ (ಭಾಗ)ವಾಗಿರದೆಯೇ ಆಕಾಶದಲ್ಲಿ ಮೊದಲಿಗಿಂತಲೂ ವಾಸ್ತವವಾಗಿ ಇಲ್ಲದ ಭೇದ ವ್ಯವಹಾರಕ್ಕೆ ಕಾರಣವಾಗಿರುವುದರಿಂದ ಇವು ಆಕಾಶದ ಉಪಾಧಿಗಳು. ಇವು ಸರ್ವಥಾ ಅನುಗತವಾದವುಗಳೂ ಅಲ್ಲ. ವಸ್ತುತಃ ಯಾರ ಸಂಬಂಧವೂ ಇಲ್ಲದೆಯೇ ವಸ್ತುವಿನಲ್ಲಿ ಭೇದವನ್ನು ಕಲ್ಪಿಸುವುದು. ಮಹಾಕಾಶವು ಉಪಹಿತವು, ಘಟಶರಾವಾದಿಗಳು. ಉಪಾಧಿಗಳು ಉಪಾಧಿಗತ ಗುಣದೋಷಗಳಿಂದ ಉಪಹಿತವಾದುದಕ್ಕೆ ಸರ್ವಥಾ ಸಂಪರ್ಕವಿಲ್ಲವು. ಭೇದ ಉಪಾಧಿಗಳು ಇಲ್ಲದಿರಲು ಭೇದ ದೃಷ್ಟಿಯೇ ಇರುವುದಿಲ್ಲ. ಉಪಾಧಿಗಳು ನಾಶವಾದರೆ ತನ್ಮೂಲಕ ವಿಭಿನ್ನವಾಗಿ ತೋರುತ್ತಿದ್ದ ಘಟಾಕಾಶ ಗೃಹಾಕಾಶಗಳೂ ದೊಡ್ಡ ಆಕಾಶದಲ್ಲಿಯೇ ಸರಿಹೋಗುವುವು. ನಿರುಪಾಧಿಕವೆಂದರೆ ಉಪಾಧಿಯಿಂದ ಬೇರೆಯಾಗದ ಅಥವಾ ಉಪಾಧಿಯೇ ಇಲ್ಲದಿರುವ ಯಥಾಭೂತವಾದ ವಸ್ತು. ಸೋಪಾಧಿಕವೆಂದರೆ ಉಪಾಧಿ ಸಂಬಂಧದಿಂದ ಬೇರೆ ಬೇರೆಯಾಗಿರುವಂತೆ ತೋರುವ ವಸ್ತು.

೨೭. ಇದುವರೆವಿಗೆ ಈ ಪ್ರಪಂಚದ ಉಚ್ಚ ನೀಚಗಳಾದ ಸಕಲ ವ್ಯವಹಾರಗಳನ್ನೂ ಕಂಡು ಅರಿತಿರುವ, ನಿನ್ನ ಈ ಶರೀರವು ಈಗ ರಾಗದ್ವೇಷಾದಿ ಸಕಲ ದೋಷ ವಿನಿರ್ಮುಕ್ತವಾಗಿ ಅತಿ ಪವಿತ್ರವಾಗಿಯೂ ಜೀವನ್ಮುಕ್ತ ಸ್ಥಿತಿಯಲ್ಲಿ ಸರ್ವದಾ

ನೋದಿತಾ ದ್ವಾದಶಾದಿತ್ಯಾ ನ ಪ್ರಲೀನಾಃ ವಿಲೋಚ್ಚಯಾಃ ।
ನ ಜಗಜ್ಜ್ವಲಿತಂ ಸಾಧೋ ತನುಂ ತ್ಯಜಸಿ ಕಿಂ ಮುಧಾ　॥ ೨೮ ॥

ನಾಯುರ್ವಹತಿ ನೊನ್ಮತ್ತಾಸ್ತ್ರಿಲೋಕೀಭಸ್ಮಧೂಸರಃ ।
ಲೋಲಾಮರಕಪಾಲಾಂಕಸ್ತನುಂ ತ್ಯಜಸಿ ಕಿಂ ಮುಧಾ　॥ ೨೯ ॥

ಧರಾಸಾರರಣಚ್ಛೈಲಾಃ ಪ್ರಜ್ಜ್ವಲಜ್ಜ್ವಲನೋಜ್ಜ್ವಲಾಃ ।
ಕಕುಭೋ ನ ವಿಶೀರ್ಯಂತೇ ತನುಂ ತ್ಯಜಸಿ ಕಿಂ ಮುಧಾ　॥ ೩೦ ॥

ನ ಬ್ರಹ್ಮವಿಷ್ಣುರುದ್ರಾಖ್ಯತ್ರಯೀಶೇಷಮಿದಂ ಸ್ಥಿತಂ ।
ಜಗಜ್ಜಠರಜೀಮೂತಂ ತನುಂ ತ್ಯಜಸಿ ಕಿಂ ಮುಧಾ　॥ ೩೧ ॥

ಪರಿನಿಷ್ಠಿತವಾಗಿ ದುಃಖಮಯವಾದ ಪ್ರಪಂಚದಲ್ಲಿಯೂ ಅಖಂಡವಾದ ಆತ್ಮಾನಂದವನ್ನೇ ಅನುಭವಿಸುತ್ತಾ, ಕಲ್ಪಾಂತ ಸ್ಥಾಯಿಯಾಗಿ ಇರುವುದು.

೨೮. ನೀನೇ ನೋಡು. ಈಗಲಾದರೋ ದ್ವಾದಶಾದಿತ್ಯರೂ ಏಕಕಾಲದಲ್ಲಿ ಉದಯಿಸಿಲ್ಲವು. ಕುಲಾಚಲಗಳು ಮೊದಲಿನಂತೆಯೇ ಎದ್ದು ಕಾಣುತ್ತಲೇ ಇವೆ. ಅವು ಲೀನವಾಗಲೂ ಇಲ್ಲ. ಜಗತ್ತು ಉರಿಯುತ್ತಲೂ ಇಲ್ಲ. ಹೀಗೆ ಪ್ರಳಯಕಾಲದ ಯಾವುದೊಂದು ಚಿಹ್ನೆಯೂ ಕಾಣುವುದಿಲ್ಲವಲ್ಲ, ನೀನು ಈಗಾಗಲೇ ವ್ಯರ್ಥವಾಗಿ ಹೀಗೇತಕ್ಕಾಗಿ ನಿನ್ನ ದೇಹವನ್ನೂ ಬಿಡಲು ಯತ್ನಿಸುವೆ.?

೨೯. ಲೋಕ ತ್ರಯಗಳನ್ನೂ ಹತ್ತಿ ಉರಿಸಿ ಅದರ ಬೂದಿಯಿಂದ ಮಲಿನವಾಗಿಯೂ ದೇವತೆಗಳ ದೇಹಗಳಿಂದ ಜೋಲಾಡುವ ಶಿರಃ ಕಪಾಲಗಳನ್ನೂ ಹೊತ್ತುಕೊಂಡು ಪ್ರಳಯ ಮಾರುತವು ಹುಚ್ಚು ಹುಚ್ಚಾಗಿ, ಭಯಂಕರವಾದ ರೀತಿಯಲ್ಲಿ ಇನ್ನೂ ಬೀಸುತ್ತಿಲ್ಲ. ಹೀಗೇಕೆ ವ್ಯರ್ಥವಾಗಿ ನೀನು ದೇಹ ತ್ಯಾಗಮಾಡುವೆ.?

೩೦. ದಿಗಂತಗಳಲ್ಲಿರುವ ಬ್ರಹ್ಮಾಂಡ ಭಿತ್ತಿಗಳು ಪ್ರಜ್ಜ್ವಲಿಸುತ್ತಿರುವ ಕಾಲಾಗ್ನಿಯಿಂದ ಇನ್ನೂ ಉಜ್ಜ್ವಲವಾಗಿಲ್ಲ ಮತ್ತೂ ಅವುಗಳೊಳಗಿರುವ ಬೆಟ್ಟಗಳೆಲ್ಲವೂ, ಸುಡಲ್ಪಡುತ್ತಿರುವ ಭೂಮಿಯ ಸಾರ್ವತ್ರಿಕವಾದ ಪ್ರಕಂಪದಿಂದ ಸೀಳಿಹೋಗಿ ಭೀಕರವಾಗಿ ಧ್ವನಿಮಾಡುತ್ತಲೂ ಇಲ್ಲ. ನೀನೇಕೆ ಈಗಲೇ ಶರೀರವನ್ನು ಬಿಡುವೆ ?

೩೧. ಈ ಜಗತ್ತನ್ನೆಲ್ಲ, ಪ್ರಕೃದ್ಧವಾದ ಪ್ರಳಯ ಕಾಲದ ಮೇಘಗಳು ವ್ಯಾಪಿಸಿಕೊಂಡು, ಸಮಸ್ತವನ್ನೂ ನಾಶಮಾಡಿ, ಬ್ರಹ್ಮ ವಿಷ್ಣು ಮಹೇಶ್ವರರೆಂಬ ತ್ರಿಮೂ

ನ ಚೇಹಾದ್ರಿದಲಶ್ರೇಣಿ ಮಾತ್ರೈಕಾನುಮಿತಾಂತರಾಃ ।
ದಿಶೋ ಜರ್ಜರತಾಂ ಯಾತಾಸ್ತನುಂ ತ್ಯಜಸಿ ಕಿಂ ಮುಧಾ ॥ ೩೨ ॥

ಸ್ಫುಟದದ್ರೀಂದ್ರ ಟಂಕಾರಾಃ ಕರಾಃ ಸೌರಾಃ ಭ್ರಮಂತಿ ಖೇ ।
ಕಲ್ಪಾಭ್ರಾಣಿ ನ ಘರ್ಜಂತಿ ತನುಂ ತ್ಯಜಸಿ ಕಿ ಮುಧಾ ॥ ೩೩ ॥

ರ್ತಿಗಳು ಮಾತ್ರವೇ ಉಳಿದುಕೊಂಡಿರತಕ್ಕಂತಹ ಸ್ಥಿತಿಯು ಇನ್ನೂ ಸಂಪ್ರಾಪ್ತವಾಗಿಲ್ಲ. ನೀನೇಕೆ ವ್ಯರ್ಥವಾಗಿ ಅಕಾಲದಲ್ಲಿ ಶರೀರವನ್ನು ಬಿಡುವೆ ?

೩೨. ಮತ್ತೂ ಕೂಡ ಈ ಬ್ರಹ್ಮಾಂಡದೊಳಗೆ ಸೂರ್ಯ ಚಂದ್ರಾದಿಗಳೊಂದೂ ಇಲ್ಲದೆ ನಾಶವಾಗಿ ಬಿಡುವ ಕಾರಣ, ಲೋಕಾಲೋಕವೆಂಬ ಪರ್ವತದ (ಭೂ ಪದ್ಮದಳ ಸದೃಶಗಳಾದ) ಶಿಖರಗಳ ಸಾಲುಗಳಿಂದ ಮಾತ್ರವೇ ದಿಗ್ಭೇದಗಳನ್ನು ಊಹಿಸಿ ತಿಳಿದುಕೊಳ್ಳಬೇಕಾದ ಅವಸ್ಥೆಯೂ ಸಂಭವಿಸಿಲ್ಲ. ನೀನೇಕೆ ಹೀಗೆ ಶರೀರವನ್ನು ಬಿಡಲು ಹೊರಟಿರುವೆ ?

(ಲೋಕಾಲೋಕವೆಂಬುದು ಒಂದು ಪುರಾಣ ಪ್ರಸಿದ್ಧವಾದ ಪರ್ವತ. ಇದು ಭೂಮಿಯನ್ನೂ ಸುತ್ತಿಕೊಂಡಿರುವುದೆಂದೂ ಭೂಮಿಯ ಏಳು ಖಂಡಗಳೊಳಗೆ ಕೊನೆಯ ಖಂಡವನ್ನೂ ಸುತ್ತಿಕೊಂಡಿರುವ ಶುದ್ಧ ಜಲಾರ್ಣವದ ಆಚೆ ದಡದಲ್ಲಿ ನೆಲೆಸಿರುವುದೆಂದೂ ಉಕ್ತವಾಗಿದೆ. ಈ ಲೋಕಾಲೋಕ ಪರ್ವತವನ್ನೂ ದಾಟಿ ಇನ್ನೂ ಮುಂದಕ್ಕೆ ಹೋದರೆ ಕೇವಲ ಗಾಢಾಂಧಕಾರವು ಮಾತ್ರ ಕವಿದಿರುವುದೆಂಬೂ ವರ್ಣಿತವಾಗಿದೆ. ಹೀಗೆ ಈ ಪರ್ವತವು ಪ್ರಕಾಶಮಯವಾಗಿ ಕಣ್ಣಿಗೆ ಗೋಚರಿಸುವ ಈ ಭೂಲೋಕವನ್ನೂ, ಅಂಧಕಾರಮಯವಾಗಿ ಕಾಣದೇ ಇರುವ ಲೋಕದಿಂದ ಪ್ರತ್ಯೇಕಿಸುವುದಂತೆ. ಅದು ಕಾರಣವೇ ಇದಕ್ಕೆ ಲೋಕ = ಪ್ರಕಾಶxಅಲೋಕ = ಕತ್ತಲೆ = (ಲೋಕಾಲೋಕ) ಎಂಬ ಹೆಸರು ಬಂದಿರುವುದು.

೩೩. ಸೂರ್ಯ ಕಿರಣ ಜಾಲಗಳು, ಸಮಸ್ತ ಪರ್ವತಗಳನ್ನೂ ದಹಿಸಿ ಸೀಳುತ್ತಲೂ, ಆಗ ಉಂಟಾಗುವ ಟಂಕಾರಶಬ್ದಗಳಿಂದ ಪ್ರಚುರವಾಗಿ, ಈಗ ಆಕಾಶದಲ್ಲಿ ಅತಿಭೀಕರವಾಗಿ ಸಂಚರಿಸುತ್ತಿಲ್ಲ. ಪ್ರಳಯ ಮೇಘಗಳೂ ಭಯಾನಕವಾಗಿ ಗರ್ಜಿಸುತ್ತಿರುವ ಶಬ್ದವು ಕೇಳಿಸುತ್ತಿಲ್ಲ. ನೀನೇಕೆ ವ್ಯರ್ಥವಾಗಿ ಶರೀರವನ್ನು ಬಿಡುವೆ ?

ಅಹಂ ಭೂತಾವಕೀರ್ಣಾಸು ಸಾಲೋಕಾಸು ಖಗಧ್ವಜಃ ।
ವಿಹರಾಮಿ ದಶಾಶಾಸು ಮಾ ದೇಹಮವಧೀರಯ ॥ ೩೪ ॥

ಇಮೇ ವಯಮಿಮೇ ಶೈಲಾ ಭೂತಾನಿಮಾನ್ಯಯಂ ಭವಾನ್ ।
ಇದಂ ಜಗದಿದಂ ವ್ಯೋಮ ಮಾ ದೇಹಮವಧೀರಯ ॥ ೩೫ ॥

ಪೀವರಾಜ್ಞಾನಯೋಗೇನ ಯಸ್ಯ ಪರ್ಯಾಕುಲಂ ಮನಃ ।
ದುಃಖಾನಿ ವಿನಿಕೃಂತಂತಿ ಮರಣಂ ತಸ್ಯ ರಾಜತೇ ॥ ೩೬ ॥

ಕೃಶೋಽತಿದುಃಖೀ ಮೂಢೋಽಹ ಮೇತಾಶ್ಚಾನ್ಯಾಶ್ಚ ಭಾವನಾಃ ।
ಮತಿಂ ಯಸ್ಯಾವಲುಂಪಂತಿ ಮರಣಂ ತಸ್ಯ ರಾಜತೇ ॥ ೩೭ ॥

---

೩೪ ಅಂಡಜಾದಿ ಚತುರ್ವಿಧ ಪ್ರಾಣಿ ಸಮೂಹಗಳಿಂದ ವ್ಯಾಪ್ತವಾಗಿಯೂ ಪ್ರಕಾಶವಾಗಿಯೂ ಇರುವ ಹತ್ತು ದಿಕ್ಕುಗಳಲ್ಲಿಯೂ, ನಾನು ಈಗಲೂ ಗರುಡ ಧ್ವಜ ನಾಗಿ ವಿಹರಿಸುತ್ತಿರುವೆನು ನೀನು ಈಗಲೇ ಈ ನಿನ್ನ ದೇಹವನ್ನು ತಿರಸ್ಕರಿಸಬೇಡ.

(ಅಂಡಜ, ಸ್ವೇದಜ ಉದ್ಭಿಜ್ಜ, ಜರಾಯು ಜ ಇವು ಚತುರ್ವಿಧ ಪ್ರಾಣಿಗಳು

೩೫. ಇಗೋ ನಾನು ಇಲ್ಲಿಯೇ ಇರುವೆನು. ಈ ಪರ್ವತಗಳೆಲ್ಲವೂ ಕಾಣುತ್ತ ಲಿವೆ. ಇಲ್ಲಿ ಸಕಲ ಭೂತ ಸಂಘಗಳೂ ಪೂರ್ವದಂತೆಯೇ ಸುಸ್ಥಿತವಾಗಿವೆ. ನೀನೂ ಇಲ್ಲಿಯೇ ಇದ್ದಿಯೇ. ಈ ಜಗತ್ತೂ ಅನುಭೂತವಾಗಿದೆ. ಈ ಆಕಾಶವೂ ಪ್ರಕಾಶ ಮಾನವಾಗಿ ಎಲ್ಲರಿಗೂ ಗೋಚರವಾಗಿಯೇ ಇದೆ. ಹೀಗೆ ಒಂದಾದರೂ ಪ್ರಳಯ ಕಾಲದ ಲಕ್ಷಣವು ಕಾಣಲಿಲ್ಲ. ಹೀಗಿರುವ ಕಾರಣ, ಇನ್ನೂ ಪ್ರಳಯ ಕಾಲವು ಬರು ವುದಕ್ಕಿಂತ ಮುಂಚೆಯೇ ಈಗಾಗಲೇ ನೀನು ಶರೀರ ತ್ಯಾಗ ಮಾಡುವುದು ಯುಕ್ತ ವಾಗಿಯೂ ಇಲ್ಲ. ನಿನ್ನಿಂದ ಶಕ್ಯವೂ ಅಲ್ಲ.

೩೬. (ಯಾವ)ನರಾಧಮನ ಹುಟ್ಟಿದಂದಿನಿಂದಲೂ ದೃಢವಾಗಿ ಬೇರು ಬಿಟ್ಟು ಕೊಂಡು ತಾನೇ ತಾನಾಗಿ ಸುಸ್ಪಷ್ಟವಾಗಿರುವ ಅಜ್ಞಾನ ಸಂಪರ್ಕದಿಂದ ವ್ಯಾಕುಲೀ ಕೃತವಾಗಿ ಕಂಗೆಟ್ಟು ಮೂಢವಾಗಿರುವ ಮನಸ್ಸನ್ನು ದುಃಖಗಳು ಸರ್ವದಾ ಛೇದಿ ಸುತ್ತಿರುವುವೋ, ಅಂತಹವನಿಗೆ ಮರಣವು ಚೆನ್ನಾಗಿ ಕಾಣುವುದು.

೩೭. ಈಗ ನಾನು ಕೃಶನಾದೆನು, ಅತ್ಯಂತ ದುಃಖಿಯಾಗಿರುವೆನು, ಮೂಢ ನಾಗಿರುವೆನು, ಇತ್ಯಾದಿ ನಾನಾ ಪ್ರಕಾರಗಳಾದ ಮತ್ತೂ ಬೇರೆ ಬೇರೆ ವಿಧಗಳಾದ

ಆಶಾಪಾಶ ನಿಬದ್ಧೋಽಂತರಿತಶ್ಚೇತಶ್ಚ ನೀಯತೇ ।
ಯೋ ವಿಲೋಲ ಮನೋವೃತ್ತ್ಯಾ ಮರಣಂ ತಸ್ಯ ರಾಜತೇ ॥ ೩೮ ॥

ಯಸ್ಯ ತೃಷ್ಣಾಃ ಪ್ರಭಂಜಂತಿ ಹೃದಯಂ ಹೃತಭಾವನಾಃ ।
ಪ್ರರೋಹವಿಃವ ಗರ್ಥೇಭ್ಯೋ ಮರಣಂ ತಸ್ಯ ರಾಜತೇ ॥ ೩೯ ॥

ಚಿತ್ತವೃತ್ತಿಲತಾ ಯಸ್ಯ ತಾಲೋತ್ತಾಲ ಮನೋವನೇ ।
ಫಲಿತಾ ಸುಖದುಃಖಾಭ್ಯಾಂ ಮರಣಂ ತಸ್ಯ ರಾಜತೇ ॥ ೪೦ ॥

ಭಾವನೆಗಳು ಯಾವ ಪುರುಷನ ಮನಸ್ಸನ್ನು ಕೆಡಿಸಿ ಅಪಹರಿಸುತ್ತವೆಯೋ, ಅಂತಹವನಿಗೆ ಮರಣವು ಶೋಭಿಸುವುದು.

೩೮. ಯಾವನು, ಅತ್ಯಂತ ಚಪಲವಾದ ಚಿತ್ತ ವೃತ್ತಿಯಿಂದ ಕೂಡಿ ತನ್ನ ಮನಸ್ಸಿನೊಳಗೆ ವಿವಿಧಾನೇಕ ಸಂಕಲ್ಪಗಳು ಯಥೇಚ್ಛವಾಗಿ ಉದ್ಭವಿಸುವುಕ್ಕೆ ಅವಕಾಶಕೊಟ್ಟು ತನ್ಮೂಲಕವಾದ ಆಶಾಪಾಶ ಶತಗಳಿಂದ ನಿಬದ್ಧನಾಗಿ (ನಿಯಂತ್ರಿತನಾಗಿ) ತಪ್ಪಿಸಿಕೊಳ್ಳಲಾರದೆ ಇತ್ತಲೂ ಅತ್ತಲೂ ವ್ಯರ್ಥವಾಗಿ ಭ್ರಮಿಸುತ್ತಿರುವನೋ ಅಂತಹ ನರಪಶುವಿಗೇ ಮರಣವು ಉಚಿತವು.

೩೯. ಅತ್ಯುತ್ತಮ ಮಹಾ ಫಲದಾಯಕವಾದ ಭತ್ತದ ಪೈರುಗಳನ್ನು ತಿನ್ನುವುದಕ್ಕೆ ಅಭಿಲಾಷೆ ಪಡುವ ಪಶುಗಳಿಗಾಗಿ, ಮೂಢ ಜನರು ಆ ಪೈರುಗಳನ್ನೂ ಫಲಿಸುವುದಕ್ಕಿಂತ ಮೊದಲೇ ಹೇಗೆ ಕಿತ್ತು ಹಾಕುವರೋ ಹಾಗೆ, ಈ ತೃಷ್ಣೆಗಳು ಯಾವ ಮನುಷ್ಯನ ಮನಸ್ಸಿನ ದೆಸೆಯಿಂದ ವಿವೇಕವನ್ನು ನಿಶ್ಶೇಷವಾಗಿ ಅಪಹರಿಸಿ ಬಳಿಕ (ವಿವೇಕ ಶೂನ್ಯವಾದ) ಆ ಮನಸ್ಸನ್ನು ಚೆನ್ನಾಗಿ ಸ್ವರೂಪ ನಾಶವಾಗುವ ರೀತಿಯಲ್ಲಿ ಮರ್ದನ ಮಾಡಿ ಬಿಡುವುವೋ ಅಂತಹ ಮೂಢನಿಗೆ ಮರಣವು ಶೋಭಿಸುವುದು.

೪೦. ತಾಳೇ ಗಿಡದಂತೆ, ರಾಗ ದ್ವೇಷಾದಿಗಳಿಂದ ಅತ್ಯುನ್ನತವಾಗಿ ಬೆಳೆದಿರುವ ಯಾವ ಅವಿವೇಕಿಯ ಮನಸ್ಸೆಂಬ ವನದೊಳಗೆ ಚಿತ್ತವೃತ್ತಿಯೆಂಬ ಲತೆಯು ಬಹು ವಿಸ್ತಾರವಾಗಿ ಹಬ್ಬಿಕೊಂಡು ಪೌಕಿಕ ಸುಖ ದುಃಖಗಳೆಂಬ ಕಟುವಾದ ಫಲಗಳನ್ನು ಫಲಿಸುವುದೋ ಅಂತಹ ಅವಿವೇಕಿಗೆ ಮರಣವು ಉಚಿತವಾಗಿ ಕಾಣುವದು.

ರೋಮರಾಜೀಲತಾಜಾಲಂ ಯಸ್ಯೇಮಂ ದೇಹದುದ್ರುಮಂ ।
ಅನರ್ಥೌಘೋ ಹರತ್ಯುಚ್ಚೈರ್ಮರಣಂ ತಸ್ಯ ರಾಜತೇ ॥ ೪೧ ॥

ಯಸ್ಯ ಸ್ವದೇಹವಿಪಿನಮಾಧಿ ವ್ಯಾಧಿ ದವಾಗ್ನಯಃ ।
ದಹಂತಿ ಲೋಲಾಂಗಲತಂ ಮರಣಂ ತಸ್ಯ ರಾಜತೇ ॥ ೪೨ ॥

ಕಾಮ ಕೋಪಾತ್ಮಕಾ ಯಸ್ಯ ಸ್ಫೂರ್ಜಂತ್ಯಜಗರಾ ಸ್ತನೌ ।
ಅಂತಃ ಶುಷ್ಕ ದ್ರುಮಸ್ಯೇವ ಮರಣಂ ತಸ್ಯ ರಾಜತೇ ॥ ೪೩ ॥

ಯೋಯಂ ದೇಹ ಪರಿತ್ಯಾಗಸ್ತಲ್ಲೋಕೇ ಮರಣಂ ಸ್ಮೃತಂ ।
ನ ಸತಾ ನಾಸತಾ ತೇನ ಕಾರಣಂ ವೇದ್ಯವೇದನಂ ॥ ೪೪ ॥

---

೪೧. ರೋಮಗಳ ಸಾಲುಗಳೆಂಬ ಲತಾಗುಲ್ಮಗಳಿಂದ ಆವೃತವಾಗಿರುವ (ಯಾವ ಮನುಜನ) ದೇಹವೆಂಬ ವಿಷ ವೃಕ್ಷವನ್ನೂ ಕಾಮಕ್ರೋಧಾದಿ ಅನರ್ಥಗಳೆಂಬ ಅತಿ ಪ್ರಬಲವಾದ ಚಕ್ರ ಮಾರುತ ಪ್ರವಾಹವು ಬಹು ಎತ್ತರಕ್ಕೆ ಹೊತ್ತುಕೊಂಡು ಹೋಗಿ ತಳ್ಳಿ ಬಿಡುವುದೋ ಅಂತಹವನು ಮರಣವನ್ನು ಬಯಸುವುದು ಯುಕ್ತವು.

೪೨. ಕರಚರಣಾದ್ಯವಯವಗಳೆಂಬ ಲತೆಗಳು ಚಲಿಸುತ್ತಿರುವ ಯಾವ ನರನ ದೇಹವೆಂಬ ಅರಣ್ಯವನ್ನು ಆಧಿವ್ಯಾಧಿಗಳೆಂಬ ಕಾಡು ಕಿಚ್ಚುಗಳು ಸುತ್ತಲೂ ಆವರಿಸಿಕೊಂಡು ಸದಾ ಸುಡುತ್ತಿರುವುವೋ ಅವನಿಗೆ ಮರಣವು ಶೋಭಿಸುವುದು. (ಆಧಿ= ಮನೋರೋಗ, ವ್ಯಥೆ.)

೪೩. ಯಾವನ ಶರೀರದೊಳಗೆ ಕಾಮಕ್ರೋಧಾದಿ ಅರಿಷಡ್ವರ್ಗಗಳು ಒಣಗಿರುವ ಮರದ ಪೊಟ್ಟರೆಯೊಳಗೆ ಹೆಬ್ಬಾವುಗಳಂತೆ ಸೇರಿಕೊಂಡು ಬಹು ಭೀಕರವಾಗಿ ನಿರಂತರವೂ ಘೂತ್ಕಾರ ಮಾಡುತ್ತಿರುವುವೋ ಅಂತಹವನಿಗೆ ಮರಣವು ಶೋಭಿಸುವುದು.

೪೪. ಈ ದೇಹವನ್ನು ಬಿಡುವಿಕೆ ಯೆಂಬುವುದೇ ಲೋಕದಲ್ಲಿ ಮರಣವೆಂದು ಪ್ರಸಿದ್ಧವಾಗಿರುವುದು. ಇಂತಹ ದೇಹ ಪರಿತ್ಯಗವೆಂಬ ಮರಣವು ತತ್ತ್ವಜ್ಞನಿಗೆ ಯಾವ ಬಗೆಯಿಂದಲೂ ಸಂಭವಿಸುವುದೇ ಇಲ್ಲವೆಂಬುದು ವಿಚಾರಮಾಡಿದರೆ ತಿಳಿಯುವುದು. ಹೇಗೆಂದರೆ, ಆತ್ಮನು ಸ್ವತಃ ನಿಷ್ಕ್ರಿಯನು ಅವಿಕ್ರಿಯನು ಮತ್ತು

ಯಸ್ಯ ನೋತ್ಕ್ರಾಮತಿ ಮತಿಃ ಸ್ವಾತ್ಮತತ್ತ್ವಾವಲೋಕನಾತ್ ।
ಯಥಾರ್ಥ ದರ್ಶನೋ ಜ್ಞಸ್ಯ ಜೀವಿತಂ ತಸ್ಯ ಶೋಭತೇ ॥ ೪೫ ॥

ಅಸಂಗನು. ನಿಷ್ಕ್ರಿಯನಾದ ಆತ್ಮನಲ್ಲಿ ತ್ಯಾಗಮಾಡುವುದು ಎಂಬ ಕ್ರಿಯೆಯು ಸರ್ವಾತ್ಮನಾ ಉಪಪನ್ನವಾಗುವುದಿಲ್ಲ. ಸ್ವತಃ ಅಸಂಗನಾಗಿರುವ ಆತ್ಮನಿಗೆ ಅಸತ್ತಾದ ದೇಹಾದಿಗಳ ಸಂಗವೂ ಅಪ್ರಸಿದ್ಧವು ಆದು ಕಾರಣ ಸದ್ರೂಪನಾದ ಆತ್ಮನು ದೇಹವನ್ನು ಬಿಡುವದು ಹೇಗೂ ಸಂಗತವಾಗುವುದಿಲ್ಲ. ದೇಹವೇ ತಾನಾಗಿಯೇ ಬಿಟ್ಟು ಹೋಗುವುದು ಎಂದು ಹೇಳೋಣವೆಂದರೆ ಅದೂ ಸಾಧುವಲ್ಲ. ದೇಹವು ಅತ್ಯಂತಾಸತ್ ವಸ್ತುವು: ಅಸತ್ತಾದುದು. ತನ್ನನ್ನು ತಾನು ಬಿಡುವುದೆಂದು ಹೇಳುವುದು ಯುಕ್ತಿ ಯುಕ್ತವಾದ ಮಾತಾಗಲಾರದು. ವೇದಾಂತಶಾಸ್ತ್ರಾಚಾರ್ಯೋಪದೇಶಾದಿ ಸಕಲೋಪಾಯುಗಳಿಂದಲೂ ಅತ್ಯವಶ್ಯ ವೇದ್ಯವಾಗಿರುವ ಸ್ವಾತ್ಮತತ್ತ್ವ ಜ್ಞಾನವುಂಟಾದರೆ "ಆಗ ಈ ದೇಹಾದಿ ಸದ್ಭಾವ ಪ್ರತ್ಯಯವೆಲ್ಲವೂ ಅಜ್ಞಾನ ಮೂಲಕವಾಗಿ ಕಲ್ಪಿತವಾದುದು ಅದುಕಾರಣ ಈ ದೇಹಾದಿಗಳು ಅಸತ್ತೇ" ಎಂಬ ಸಿದ್ಧಾಂತವು ಸ್ವತ ಏವ ಸಿದ್ಧವಾಗುವುದು.

೪೫. ದೇಹದ ದೆಸೆಯಿಂದ ಪ್ರಾಣಗಳು ಉತ್ಕ್ರಮಣವಾಗುವುದೇ (ಹಾರಿ ಹೋಗುವುದೇ) ಮರಣವೆಂದು ಅಜ್ಞನು ತಿಳಿದುಕೊಂಡಿರುವನು ಇದು ಯುಕ್ತವಲ್ಲ. ಆದರೆ ಬುದ್ಧಿಯು ಆತ್ಮತತ್ತ್ವವನ್ನೂ ಬಿಟ್ಟು ಬೇರೆ ಕಡೆಯಲ್ಲಿ ಹೋಗಿ ಚಲಿಸುವುದೇ (ಉತ್ಕ್ರಮಣವಾಗುವುದೇ) ಮರಣವು" ಎಂಬುದು ಪ್ರಾಜ್ಞರ ಮತವು ಅದು ಸಾಧುವಾದುದೇ! ಯಥಾಭೂತವಾಗಿ ತತ್ತ್ವತಃ ಆತ್ಮಸ್ವರೂಪವನ್ನು ತಿಳಿದಿರುವ ಯಾವ ಪ್ರಾಜ್ಞನ ಬುದ್ಧಿಯು ಸ್ವಾತ್ಮತತ್ತ್ವಸಾಕ್ಷಾತ್ಕಾರವನ್ನು ಬಿಟ್ಟು ಹೊರಕ್ಕೆ ಉತ್ಕ್ರಮಿಸುವುದಿಲ್ಲವೋ ಅವನಿಗೆ ಪ್ರಾಜ್ಞ ಸಮ್ಮತವಾದ ಮರಣವು ಎಲ್ಲಿಂದ ಬರಬೇಕು? ಸರ್ವಥಾ ಸಂಭವಿಸುವುದಿಲ್ಲ. ಅದುಕಾರಣ ಅಂತಹ ಆತ್ಮತತ್ತ್ವಾಪ್ರಚ್ಯುತನಾದ ಜ್ಞಾನಿಗೆ ಜೀವಿತವೇ ಚೆನ್ನಾಗಿ ಶೋಭಿಸುವುದು. ಅಜ್ಞಾನಿಗಾದರೋ ಬುದ್ಧಿಯು ಸಂತತವೂ ಸ್ವಾತ್ಮ ತತ್ತ್ವವನ್ನು ಬಿಟ್ಟು ಉತ್ಕ್ರಮಿಸಿಯೇ ಇರುವ ಕಾರಣ ಅವನು (ಅಜ್ಞನು) ನಿತ್ಯಮೃತಸ್ವರೂಪನೆಂದೇ ತಿಳಿಯಬೇಕು. ಅಜ್ಞನಿಗೆ ಸರ್ವದಾ ಮರಣವೇ ಶೋಭಿಸುವುದು.

ಯಸ್ಯ ನಾಹಂಕೃತೋ ಭಾವೋ ಬುದ್ಧಿರ್ಯಸ್ಯ ನ ಲಿಪ್ಯತೇ ।
ಯಃ ಸಮಃ ಸರ್ವಭಾವೇಷು ಜೀವಿತಂ ತಸ್ಯ ರಾಜತೇ ॥ ೪೬ ॥

ಯೋಽಂತಃ ಶೀತಲಯಾ ಬುದ್ಧ್ಯಾ ರಾಗದ್ವೇಷ ವಿಮುಕ್ತಯಾ ।
ಸಾಕ್ಷಿವತ್ಪಶ್ಯತೀದಂ ಹಿ ಜೀವಿತಂ ತಸ್ಯ ರಾಜತೇ ॥ ೪೭ ॥

ಯೇನ ಸಂಮ್ಯಕ್ಪರಿಜ್ಞಾಯ ಹೇಯೋಪಾದೇಯ ಮುಜ್ಝಿತಾ ।
ಚಿತ್ತಸ್ಯಾಂತೇಽರ್ಪಿತಂ ಚಿತ್ತಂ ಜೀವಿತಂ ತಸ್ಯ ಶೋಭತೇ ॥ ೪೮ ॥

---

೪೬. ಯಾವ ಮಹಾತ್ಮನಿಗೆ ದೇಹೇಂದ್ರಿಯಾದಿಗಳಲ್ಲಿ ಅಹಂಕಾರ ರೂಪ ಅಭಿಮಾನವು ಇಲ್ಲವೋ, ಯಾವನ ಬುದ್ಧಿಯು ದೈಹಿಕವಾದ ಪ್ರಿಯಾ ಪ್ರಿಯುಗಳಿಂದ ಅಸಂಸ್ಪೃಷ್ಟವಾಗಿ (ನಿರ್ಲಿಪ್ತವಾಗಿ) ಇರುವುದೋ ಮತ್ತು ಯಾವನು ಸಮಸ್ತ ಭಾವ ಗಳಲ್ಲಿಯೂ ಅಂದರೆ ದೇಹಗಳಲ್ಲಿಯೂ ವಿಷಯುಗಳಲ್ಲಿಯೂ ಏಕರೂಪನಾಗಿ (ಸಾಧಾ ರಣಾತ್ಮನಾಗಿ) ರುವನೋ ಅಂತಹ ಜ್ಞಾನಿಗೆ ಜೀವಿತವು ಉತ್ತಮವಾಗಿ ವಿರಾಜಿಸು ವುದು.

[ಅಜ್ಞನು ತನ್ನ ಏಕ ದೇಹದಲ್ಲಿ ಅಭಿಮಾನವುಳ್ಳವನಾಗಿ ಅದರಿಂದ ವಿಯುಕ್ತ ನಾದಾಗ ತಾನು ಮೃತನಾದೆನೆಂದು ಭಾವಿಸುವನು. ಅದು ಅವನಿಗೆ ಮರಣವಾಗ ಬಹುದು. ಜ್ಞಾನಿಗೆ ಆದರೋ ತನ್ನ ಏಕ ದೇಹದಲ್ಲಿ ಆತ್ಮತ್ವಾಭಿಮಾನವಿಲ್ಲ. ಆದು ಕಾರಣ ಅವನಿಗೆ ಪ್ರಿಯಾಪ್ರಿಯುಗಳ ಲೇಪವೂ ಇಲ್ಲ ಮತ್ತು ಅವನು ಸರ್ವತ್ರ ಸಮ ಬುದ್ಧಿಯುಳ್ಳವನಾಗಿ ಸರ್ವದಾ ಸರ್ವಭಾವಗಳಲ್ಲಿಯೂ ಸ್ವಾತ್ಮ ಸ್ವರೂಪವನ್ನೇ ಕಾಣುತ್ತ ಸರ್ವಗತಾತ್ಮನಾಗಿರುವದ್ದರಿಂದ ಅವನಿಗೆ ಸಂಯೋಗವಿಯೋಗಗಳೊಂದೂ ಇಲ್ಲದೆ ಮರಣವೇ ಸಂಭವಿಸುವುದಿಲ್ಲ)

೪೭. ಯಾವನು ಅಂತಃ ಪರಮಶಾಂತವಾಗಿಯೂ ರಾಗದ್ವೇಷ, ವಿಮುಕ್ತವಾ ಗಿಯೂ ಇರುವ ಬುದ್ಧಿಯಿಂದ ಈ ಸಮಸ್ತ ಜಗತ್ತನ್ನೂ ಕೇವಲ ಸಾಕ್ಷಿಯಂತೆ (ಯಾವುದರಲ್ಲಿಯೂ ಪಕ್ಷ ಪಾತವಿಲ್ಲದೆ) ತಟಸ್ಥನಾಗಿ ನೋಡುವನೋ ಅಂತಹವ ನಿಗೇ ನಿಜವಾಗಿಯೂ ಜೀವಿತವು ಶೋಭಿಸುವುದು.

೪೮. ಯಾವನು ಈ ನಿಖಿಲವಾದ ಸಂಸಾರ (ಜಗತ್ತು) ವನ್ನೇ ಅಸಾರವೆಂದು ದೃಢವಾಗಿ ತಿಳಿದುಕೊಂಡು ಹೇಯೋಪಾದೇಯ ಜ್ಞಾನವನ್ನೂ ಪರಿತ್ಯಾಗ ಮಾಡಿ

ಅವಸ್ತು ಸದೃಶೇ ವಸ್ತುನ್ಯಸಕ್ತಂ ಕಲನಾಮಲೇ ।
ಯೇನ ಲೀನಂ ಕೃತಂ ಚೇತೋ ಜೀವಿತಂ ತಸ್ಯ ಶೋಭತೇ ॥ ೪೯ ॥

ಸತ್ಯಾಂ ದೃಷ್ಟಿಮವಷ್ಟಭ್ಯ ಲೀಲಯೇಯಂ ಜಗತ್ಕ್ರಿಯಾ ।
ಕ್ರಿಯತೇಽವಾಸನಂ ಯೇನ ಜೀವಿತಂ ತಸ್ಯ ರಾಜತೇ ॥ ೫೦ ॥

ನಾಂತಸ್ತುಷ್ಯತಿ ನೋದ್ವೇಗಮೇತಿ ಯೋ ವಿಹರನ್ನಪಿ ।
ಹೇಯೋಪಾದೇಯ ಸಂಪ್ರಾಪ್ತೌ ಜೀವಿತಂ ತಸ್ಯ ಶೋಭತೇ ॥ ೫೧ ॥

ಯಸ್ಮಿನ್ ಶ್ರುತಿಪಥಂ ಪ್ರಾಪ್ತೇ ದೃಷ್ಟೇ ಶ್ರುತಿಮುಪಾಗತೇ ।
ಆನಂದಂ ಯಾಂತಿ ಭೂತಾನಿ ಜೀವಿತಂ ತಸ್ಯ ಶೋಭತೇ ॥ ೫೨ ॥

ಈ ಚಿತ್ತಕ್ಕೆ ಅವಸಾನ ಭೂತವಾದ ಸಾಕ್ಷಿ ಚೈತನ್ಯದಲ್ಲಿ ತನ್ನ ಮನಸ್ಸನ್ನು ಇಟ್ಟಿರುವನೋ ಅಂತಹವನ ಜೀವಿತವು ಶ್ಲಾಘ್ಯವಾಗಿ ವಿರಾಜಿಸುವುದು.

೪೯. ಶುಕ್ತಿ ರಜತಾದಿ ಸದೃಶವಾದ, ವಸ್ತುತಃ ಸತ್ಯವಲ್ಲದಿದ್ದರೂ ಸತ್ಯ ವಸ್ತುವಿನಂತೆ ಪ್ರತಿಭಾಸಮಾನವಾಗಿರುವ, ಪ್ರಪಂಚ ಕಲ್ಪನೆಯೆಂಬ ಮಲದಲ್ಲಿ, ಯಾವನು ತನ್ನ ಮನಸ್ಸನ್ನು ಸಕ್ತವಾಗದಂತೆಯೂ, ಅದು ನಿರಂತರವೂ ಸ್ವಯಂಜ್ಯೋತಿಸ್ಸ್ವರೂಪನಾವ ಬ್ರಹ್ಮನಲ್ಲಿಯೇ ಲೀನವಾಗಿರುವಂತೆಯೂ ಮಾಡಿಕೊಂಡಿರುವನೋ ಅಂತಹವನ ಜೀವಿತವು ಪ್ರಶಸ್ತವಾದುದು.

೫೦. ಯಾವನು ಪಾರಮಾರ್ಥಿಕವಾದ ಆತ್ಮೈಕ್ಯದೃಷ್ಟಿಯನ್ನು ಆಶ್ರಯಿಸಿ, ವಾಸನಾಶೂನ್ಯನಾಗಿಯೇ ಈ ಜಗದ್ವ್ಯವಹಾರವನ್ನು ಕೇವಲ ಲೀಲೆಯಿಂದಲೇ ನಡೆಯಿಸುತ್ತಿರುವನೋ ಅವನ ಜೀವಿತವೇ ಸಾರ್ಥಕವಾದುದು.

೫೧. ಯಾವನು, ಈ ಜಗದ್ವ್ಯಾಪಾರಗಳಲ್ಲಿ ವಿಹರಿಸಿಕೊಂಡಿದ್ದರೂ ಕೂಡ, ಯಾವುದೇ ಹೇಯವಾಗಲೀ, ಉಪಾದೇಯವೇ ಆಗಲಿ, (ದುಃಖ-ಸುಖಾದಿಗಳು) ಸಂಪ್ರಾಪ್ತವಾದರೂ, ಮನಸ್ಸಿನಲ್ಲಿ ವಿಷಾದವನ್ನಾಗಲೀ, ಹರ್ಷವನ್ನಾಗಲೀ ಪಡೆಯದೆ, ನಿರ್ವಿಕಾರನಾಗಿಯೇ ಸಮವರ್ತಿಯಾಗಿ ವರ್ತಿಸುವನೋ ಅವನ ಜೀವಿತವು ಅತಿಧನ್ಯವಾದುದು.

೫೨. ಶುಭ್ರ (ಬೆಳ್ಳಗಿರುವ) ವಾದ ಹಂಸ, ಚಕಾದಿ ಪಕ್ಷಿಗಳ ಸಮೂಹಗಳುಳ್ಳಂಥ, ಸ್ವತಃ ನಿರ್ಮಲವಾಗಿ ಇರುವ ಒಂದು ಸರಸ್ಸಿನ ದೆಸೆಯಿಂದ ಹಂಸ

ಶುದ್ಧ ಪಕ್ಷಸ್ಯ ಶುದ್ಧಸ್ಯ ಹಂಸೌಘಃ ಸರಸೋ ಯಥಾ ।
ಯಸ್ಮಾದ್ಗುಣೌಘೋ ನಿರ್ಯಾತಿ ಜೀವಿತಂ ತಸ್ಯ ಶೋಭತೇ ॥ ೫೩ ॥

ಯಸ್ಯೋದಯೇಷು ಹೃದಯೇನ ಜನಾಂಬುಜಾನಿ
ಜೀವಾಲಿಮಂತಿ ಸಕಲಾನಿ ವಿಲಾಸವಂತೀ ॥
ತಸ್ಯೈವ ಭಾತಿ ಪರಿಜೀವಿತಮಕ್ಷಯೇಂದೋ-
ರಾಪೂರ್ಣತೇವ ದನುಜೇಶ್ವರ ನೇತರಸ್ಯ ॥ ೫೪ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ಉಪಶಮ ಪ್ರಕರಣೇ "ನಾರಾಯಣ ವಚನೋಪನ್ಯಾಸೋನಾಮ"
ಏಕೋನಚತ್ವಾರಿಂಶಃ ಸರ್ಗಃ

ಪಕ್ಷಿಗಳ ಗುಂಪು ಹೇಗೆ ಹೊರಕ್ಕೆ ಹೊರಡುತ್ತಿರುವುದೋ ಹಾಗೆ ತತ್ತ್ವಜ್ಞಾನಿಗಳೊಡನೆ ಇದ್ದುಕೊಂಡು ಸ್ವತಃ ಜ್ಞಾನಿಯಾಗಿ ರಾಗಾದಿ ಮಲ ಶೂನ್ಯನಾಗಿರುವ ಯಾವ ಜ್ಞಾನಿಯ ದೆಸೆಯಿಂದ ಶಾಂತಿ ಕ್ಷಮೆ ಇತ್ಯಾದಿ ಗುಣಗಳು ಉದಯಿಸುವುವೋ ಅಂತಹ ಪುರುಷೋತ್ತಮನ ಜೀವಿತವೇ ಸಾರ್ಥಕವು.

೫೩. ಯಾವ ಪುಣ್ಯ ಶ್ಲೋಕನ ದರ್ಶನದಿಂದಲೂ, ಶ್ರವಣದಿಂದಲೂ ಅಥವಾ ನಾಮ ಸ್ಮರಣೆಯಿಂದಲೂ, ಸಕಲ ಭೂತಗಳೂ ಆನಂದಿಸುವುವೋ ಅಂತಹವನಿಗೆ ಜೀವಿತವು ಶೋಭಿಸುವುದು.

೫೪. ಯಾವ ತತ್ತ್ವಜ್ಞನೆಂಬ ಅಕ್ಷಯನಾದ ಪೂರ್ಣ ಚಂದ್ರನು ಉದಯಿಸಿ, ತನ್ನ ಜ್ಞಾನ ಪ್ರಸಾರವೆಂಬ ಚಂದ್ರಿಕೆಯನ್ನು ಹರಡುವುದರಿಂದ ಲೋಕದಲ್ಲಿ ಜೀವ ರೂಪ ಭ್ರಮರಗಳಿಂದ ಪೂರ್ಣರಾದ ಜನರೆಂಬ ಕುಮುದ ಪುಷ್ಪಗಳ ಸಮೂಹಗಳು ಹೃದಯಗಳಲ್ಲಿ ಅಜ್ಞಾನವೆಂಬ ಗ್ಲಾನಿಯನ್ನು ಕಳೆದುಕೊಂಡು ಆನಂದ ಮಯವಾಗಿ ವಿಲಾಸಗೊಳ್ಳುವುವೋ ಅಂತಹ ಜ್ಞಾನಿಯ ಪರಿಪೂರ್ಣವಾದ ಜೀವಿತವೇ ಶೋಭಿಸುವುದಲ್ಲದೆ, ಇತರ ಅಜ್ಞ ಜನರ ಜೀವಿತವು ಎಂದಿಗೂ ವಿರಾಜಮಾನವಾಗಿರುವುದಿಲ್ಲ.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ಮಹಾರಾಮಾಯಣದ ಉಪಶಮ ಪ್ರಕರಣದಲ್ಲಿ ನಾರಾಯಣ ವಚನೋಪನ್ಯಾಸವೆಂಬ ಮೂವತ್ತೊಂಭತ್ತನೆ ಸರ್ಗ.

ಚತ್ವಾರಿಂಶಃ ಸರ್ಗಃ

ಶ್ರೀ ಭಗವಾನುವಾಚಃ—

ಸ್ಥೈರ್ಯಂ ದೇಹಸ್ಯ ದೃಷ್ಟಸ್ಯ ಜೀವಿತಂ ಪ್ರೋಚ್ಯತೇ ಜನೈಃ ।
ದೇಹಾಂತರಾರ್ಥಂ ದೇಹಸ್ಯ ಸಂತ್ಯಾಗೋ ಮರಣಂ ಸ್ಮೃತಂ ॥ ೧ ॥

ದ್ವಾಭ್ಯಾಂ ಚೈವಾಸಿ ಪಕ್ಷಾಭ್ಯಾಮಾಭ್ಯಾಂ ಮುಕ್ತೋ ಮಹಾಮತೇ ।
ಕಿಂ ತೇ ಮರಣ ಮಸ್ತೀಹ ಕಿಂ ವಾ ಜೀವಿತಮಸ್ತಿ ತೇ ॥ ೨ ॥

ನಿದರ್ಶನಾರ್ಥಮೇತತ್ತು ಮಯೋಕ್ತಮರಿಮರ್ದನ ।
ನ ತ್ವಂ ಜೀವಸಿ ಸರ್ವಜ್ಞ ಮ್ರಿಯಸೇ ನ ಕದಾಚನ ॥ ೩ ॥

ನಲವತ್ತನೆಯ ಸರ್ಗವು

ಶ್ರೀ ಭಗವಂತದು ಹೇಳಿದನು :—

೧-೨. ಎಲೈ ಮಹಾ ಜ್ಞಾನಿಯಾದ ಪ್ರಹ್ಲಾದನೇ, ದೃಷ್ಟಿಗೋಚರವಾಗುತ್ತಿರುವ ಪಾಂಚಭೌತಿಕ ಶರೀರವು ಸ್ಥಿರವಾಗಿ ಇರುವಿಕೆಯನ್ನೇ, ಲೋಕದಲ್ಲಿ ಜನರು ಜೀವಿತವೆಂದು ಕರೆಯುವರು. ಪ್ರಾಣವು ಹೊಸದಾದ ದೇಹಾಂತರವನ್ನು (ಈ ಜೀರ್ಣ ದೇಹವನ್ನು ಬಿಟ್ಟು) ಪಡೆಯುವುದಕ್ಕಾಗಿ ಹೊರಹೋಗುವುದನ್ನೇ ಮರಣವೆಂದು ಹೇಳುವರು. ಹೀಗೆ ದೇಹ ಸ್ಥೈರ್ಯ ಪ್ರಾಣೋತ್ಕ್ರಮಣ ರೂಪ ಉಭಯ ವಿಧ ಪಕ್ಷಗಳಿಂದಲೂ, ಅವಿಕ್ರಿಯಾತ್ಮ ಜ್ಞಾನ ಸಂಪನ್ನನಾದ ನೀನು ಸ್ವತ ಏವ ವಿನಿರ್ಮುಕ್ತನೇ ಆಗಿರುವೆ. ಆದು ಕಾರಣ ನಿನಗೆ ಇಲ್ಲಿ ಮರಣವೆಂಬುದಾಗಲೀ ಅಥವಾ ಜೀವಿತವೆಂಬುದಾಗಲೀ ಇರುವುದೇನು ?

[ಅಶರೀರಂ ಶರೀರೇಷು ಅನವಸ್ಥೇಷು ಅವಸ್ಥಿತಂ । ಮಹಾಂತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ ॥ ಕಠ. ನ ತಸ್ಯ ಪ್ರಾಣಾಃ ಉತ್ಕ್ರಾಮಂತಿ. ಅತ್ರೈವ ಸಮವನೀಯಂತೇ । ಬೃಹದಾರಣ್ಯಕ ದೇಹಿನೋಽಸ್ಮಿನ್ ಯಥಾ ದೇಹೇ ಕೌಮಾರಂ ಯೌವನಂ ಜರಾ । ತಥಾ ದೇಹಾನ್ತರ ಪ್ರಾಪ್ತಿಃ ಧೀರಸ್ತತ್ರ । ನ ಮುಹ್ಯತಿ ನ ಜಾಯತೇ ಮ್ರಿಯತೇ ವಾ ವಿಪಶ್ಚಿತ್. ಇತ್ಯಾದಿ ಗೀತಾ. ಅಧ್ಯಾಯ ೨.] ಗಮನಿಸಿ.

೩. ಎಲೈ ಕಾಮಾದ್ಯರಿಷಡ್ವರ್ಗ ಮರ್ದನನಾದ ಸರ್ವಾತ್ಮಜ್ಞನೇ, ನಾನು

ದೇಹಸಂಸ್ಥೋಽ ಪ್ಯದೇಹತ್ವಾದದೇಹೋಽಸಿ ವಿದೇಹದೃಕ್ ।
ವ್ಯೋಮಸಂಸ್ಥೋಽಪ್ಯಸಕ್ತತ್ವಾದವ್ಯೋಮೇವ ಹಿ ಮಾರುತಃ ॥ ೪ ॥

ಸ್ಪರ್ಶ ಸಂಬೋಧಕಾರಿತ್ವಾದ್ದೇಹ ಏವಾಸ್ತಿ ಸುವ್ರತ ।
ಉತ್ಸೇಧಾರೋಧಕತ್ವೇನ ಖಮುತ್ಸೇಧಸ್ಯ ಕಾರಣಂ ॥ ೫ ॥

ಪೂರ್ವಾಧ್ಯಾಯದಲ್ಲಿ ಜೀವಿತಂತವ ಶೋಭತೇ-ಮರಣಂ ನೈವ ಶೋಭಶೇ-ಇತ್ಯಾದಿಯಾಗಿ ನಿನಗೆ ಹೇಳಿದುದೆಲ್ಲವೂ, ಕೇವಲ ನಿದರ್ಶನಾರ್ಥವಾಗಿಯೇ ಎಂದು ತಿಳಿ. (ಜ್ಞಾನಾಜ್ಞಾನ ಕೃತಗುಣದೋಷ ಪ್ರಪಂಚನಾರ್ಥವೇ ಎಂದು ಅಭಿಪ್ರಾಯ.) ಜೀವನ ಮರಣ ಇತ್ಯಾದಿ ಭಾವ ವಿಕಾರಗಳೊಂದೂ, ದೇಹಾತಿರಿಕ್ತಾತ್ಮಜ್ಞನಾದ ನಿನಗೆ ಎಂದೆಂದಿಗೂ ಸುತರಾಂ ಇಲ್ಲವೇ ಇಲ್ಲ.

[ಗೀತೆಯ ಎರಡನೆ ಅಧ್ಯಾಯದಲ್ಲಿ ಆತ್ಮನು ನಿತ್ಯನು, ಅವಿಕಾರಿ, ಅಜೋನಿತ್ಯಃ ಶಾಶ್ವತೋಯಂ ಪುರಾಣಃ. ದೇಹಧರ್ಮಗಳಾದ ಜನನ ಜೀವನ ಮರಣಗಳೊಂದೂ ಇಲ್ಲದವನು ಎಂದು ಸ್ಪಷ್ಟವಾಗಿ ಭಗವಂತನು ಅರ್ಜುನನ ಶೋಕಮೋಹ ನಿವಾರಣೆಗಾಗಿ ಉಪದೇಶಿಸಿರುವುದನ್ನು ಅನು ಸಂಧಾನ ಮಾಡಿರಿ.]

೪. ನೀನು ಈಗ ಈ ದೇಹದಲ್ಲಿಯೇ ಇದ್ದುಕೊಂಡಿದ್ದರೂ ವಸ್ತುತಃ ನಿನಗೆ ದೇಹವೆಂಬುದೇ ಇಲ್ಲ. ನೀನು ಅಶರೀರನು. ನಿನಗೆ ಮಿಥ್ಯಾ ಕಲ್ಪಿತವಾದ ದೇಹಾಹಂ ಭಾವವೇ ಸರ್ವದಾ ನಿರ್ಮೂಲವಾಗಿ ನಾಶವಾಗಿರುವ ಕಾರಣ ಸರ್ವದಾ ಅಶರೀರನಾಗಿಯೇ ಇರುವೆ. ವಾಯುವು ಸರ್ವದಾ ಆಕಾಶದಲ್ಲಿ ಸರ್ವತ್ರ ಇದ್ದುಕೊಂಡಿರುವುದಾದರೂ, ಅದು ಆಕಾಶದೊಡನೆ ಯಾವ ಬಗೆಯ ಸಂಪರ್ಕವನ್ನೂ (ಆಸಕ್ತಿಯನ್ನೂ) ಸ್ವಲ್ಪವೂ ಹೊಂದದೆ ಇರುವ ಕಾರಣ, ಸ್ವತಃ ಅವ್ಯೋಮವಾಗಿಯೇ (ಆಕಾಶರಹಿತವಾಗಿಯೇ) ಇರುವುದು.

೫. ಎಲೈ ಸುವ್ರತನೇ, ದೇಹವನ್ನು ಬಿಟ್ಟು ಅನ್ಯತ್ರ ಸ್ಪರ್ಶಾದಿ ಜ್ಞಾನವುಂಟಾಗುವುದಿಲ್ಲ. ದೇಹದಲ್ಲಿ ಮಾತ್ರವೇ ಶೀತೋಷ್ಣಾದಿ ಸ್ಪರ್ಶಸಂವೇದನವುಂಟಾಗುವುದು. ದೇಹವು ಜಡವಾದುದರಿಂದ ಅದಕ್ಕೆ ಸ್ಪರ್ಶಾದಿ ಸಂವೇದನವು ಅಸಂಭವ. ಅದು ಕಾರಣ, ನೀನು ಆ ಸ್ಪರ್ಶಾದಿ ಸಂವೇದನ ನಿಮಿತ್ತವಾಗಿ ಈ ದೇಹದಲ್ಲಿಯೇ ಇದ್ದುಕೊಂಡಿರುವೆ ಎಂಬುದು ಸ್ಪಷ್ಟವಾಗುವುದು. ಒಂದು ಅಂಕುರವು ಬಹಳ ಎತ್ತರವಾಗಿ ಬೆಳೆಯಬೇಕಾದರೆ ಆಕಾಶ ಮಧ್ಯದಲ್ಲಿ ಅದರ ಮೇಲುಗಡೆ ಯಾವ ವಿಧವಾದ ತಡೆಯೂ ಇರಕೂಡದು. ತಡೆಯಿಲ್ಲದೆ ಬರಿಯ ಬಯಲು ಮಾತ್ರ

ಪ್ರಬುದ್ಧೋ ಜ್ಞಾತವಸ್ತುತ್ವಾದ್ದೇಹಃ ಕ್ವ ಶಮಿನಾಮಿಹ ।
ಇದಂ ತ್ವೇಕಂ ಪರಿಚ್ಛಿನ್ನಂ ರೂಪಮಜ್ಞೇಷು ದುಃಸ್ಥಿತಂ ॥ ೬ ॥

ಸರ್ವದಾ ಸರ್ವಮೇವಾಸಿ ಚಿತ್ಪ್ರಕಾಶಃ ಪರೈಕಧೀಃ ।
ಕೋ ದೇಹಃ ಕೋಽಪ್ಯದೇಹಸ್ತೇ ಯಂ ಗೃಹ್ಣಾತಿ ಜಹಾಸಿ ಚ ॥ ೭ ॥

(ಆಕಾಶ) ಇದ್ದರೆ, ಆಗಲೇ ಅದು ತಾನು ಬೆಳೆಯುವಷ್ಟು ಎತ್ತರವಾಗಿ (ಉದ್ದವಾಗಿ) ಶಾಖೋಪಶಾಖೆಗಳಿಂದ ಚೆನ್ನಾಗಿ ಬೆಳೆಯುವುದು. ತಡೆಯಿದ್ದು ಬಿಟ್ಟರೆ ಎತ್ತರವಾಗಿ ಬೆಳೆಯಲು ಅವಕಾಶವಿಲ್ಲದೆ ಮೊಟಕಾಗಿಬಿಡುವುದು. ಹೀಗೆ ಮರವು ಅತಿ ದೀರ್ಘವಾಗಿ (ಎತ್ತರವಾಗಿ) ಬೆಳೆಯುವುದಕ್ಕೆ ಆಕಾಶದಿಂದ ಮತ್ಯಾವ ಬಗೆಯ ಸಾಹಾಯ್ಯವಿಲ್ಲದಿದ್ದರೂ ಪ್ರತಿಬಂಧಕವಿಲ್ಲದಂತೆ ಮಾಡುವುದರಿಂದ ಆಕಾಶವೂ ಮರದ ಎತ್ತರವಾಗಿ ಬೆಳೆಯುವಿಕೆಗೆ ಒಂದು ನಿಮಿತ್ತ ಕಾರಣವೆಂದು ಹೇಳಲ್ಪಡುವುದು. ಇದರಂತೆಯೇ ಆತ್ಮನು ಅಸಂಗನಾಗಿ, ದೇಹಾಸಂಬದ್ಧನಾಗಿ ಅವಿಕ್ರಿಯನಾಗಿದ್ದರೂ ದೇಹಗತ ತ್ವಾಚಸ್ಪರ್ಶಾದಿ ಸಂವೇದನಕ್ಕೆ (ದೇಹದಲ್ಲಿ ಉಂಟಾಗುವ ತ್ವಗಿಂದ್ರಿಯ ವೇದ್ಯವಾದ ಸ್ಪರ್ಶ ರೂಪ ಜ್ಞಾನಕ್ಕೆ) ಕಾರಣನೆನ್ನಿಸಿಕೊಳ್ಳುವನು.

೬. ಅಯ್ಯ, ನೀನು ವೇದಿತವ್ಯಾತ್ಮ ತತ್ತ್ವವನ್ನು ಪರಮಾರ್ಥವಾಗಿ ತಿಳಿದುಕೊಂಡಿರುವೆಯಾದ ಕಾರಣ ಪ್ರಬುದ್ಧನಾಗಿರುವೆ. ಸ್ವಪ್ನದಿಂದ ಪ್ರಬುದ್ಧನಾದವನಿಗೆ, "ಸ್ವಪ್ನದಲ್ಲಿ ತಾನು ಅನುಭವಿಸಿದ ದೇಹಾದಿ ಪ್ರಪಂಚವೆಲ್ಲವೂ ಕೇವಲ ಮಾಯೆಯು. ಅಸತ್ಯವು. ಭ್ರಾಂತಿ ಮೂಲಕವು" ಎಂದು ದೃಢ ನಿಶ್ಚಯವಾದ ಮೇಲೆ ಪೂರ್ವಾನುಭೂತ ಸ್ವಾಪ್ನ ದೇಹ ಭ್ರಾಂತಿಯು ಹೇಗೆ ಉದಯಿಸುವುದೇ ಇಲ್ಲವೋ ಹಾಗೆ ಅಸಂಗನೂ, ಅಪರಿಚ್ಛಿನ್ನನೂ, ಅದ್ವಿತೀಯನೂ, ನಿಷ್ಪ್ರಪಂಚನೂ ಆಗಿರುವ ಆತ್ಮನ ಜ್ಞಾನದಿಂದ, ಸರ್ವದ್ವೈತ ಭ್ರಾಂತಿಯೂ ಉಪಶಾಂತವಾಗಿರತಕ್ಕ ನಿನ್ನಂತಹ ಪ್ರಬುದ್ಧರಾದ ಮುಕ್ತಾತ್ಮರಿಗೆ ದೇಹವೆಲ್ಲಿರುವುದು ? ದಿಕ್ಕಾಲಾದಿಗಳಿಂದ ಪರಿಚ್ಛಿನ್ನವಾಗಿರುವ ಈ ದೇಹರೂಪವಾದರೋ ವಾಸ್ತವವಾಗಿ ಅಸಂಭಾವ್ಯವಾದುದಾಗಿದ್ದರೂ ಅಪ್ರಬುದ್ಧರಾದ ದೇಹಾತ್ಮ ಭ್ರಾಂತಿಯುಳ್ಳ ನರ ಪಶುಗಳಲ್ಲಿ ಮಾತ್ರವೇ ಸ್ಫುರಿಸುತ್ತಿರುವುದು.

೭. ಅಯ್ಯ ಪ್ರಹ್ಲಾದ, ಅಜ್ಞನು ಕೇವಲ ದೇಹೈಕ ದೃಷ್ಟಿಯಾಗಿ ದೇಹದಲ್ಲಿಯೇ ಆತ್ಮಾಭಿಮಾನವನ್ನು ಇಟ್ಟು ದೇಹಿಯಾಗುವನು. ಅದ್ವಿತೀಯಾತ್ಮ ಜ್ಞಾನ ಸಂಪನ್ನನೂ, ಸರ್ವಾವಭಾಸಕವಾದ ಚೈತನ್ಯ ರೂಪನೂ, ಸ್ವಪ್ರಕಾಶನೂ

ಸಮುದೇತು ವಸಂತೋ ವಾವಾತು ವಾ ಪ್ರಲಯಾನಿಲಃ ।
ಭಾವಾಭಾವ ವಿಹೀನಸ್ಯ ಕಿಮಭ್ಯಾಗತಮಾತ್ಮನಃ ॥ ೮ ॥

ಸ್ಫಲುಠತ್ಸ್ವಪಿ ಶೈಲೇಷು ಕಲ್ಪಾಗ್ನಿಷು ದಹತ್ಸ್ವಪಿ ।
ವಹತ್ಸೂತ್ಪಾದವಾತೇಷು ಸ್ವಾತ್ಮನ್ಯೇವ ಹಿ ತಿಷ್ಠತಿ ॥ ೯ ॥

ಆದ ನೀನಾದರೋ (ಸ್ವಯಂ ಜ್ಯೋತಿಃ) ಸರ್ವದಾ ಸರ್ವಾನುಗತ ಸರ್ವ ಸ್ವರೂಪಿಯಾಗಿಯೇ [ಸರ್ವತ್ರ ಸಮ (ಬ್ರಹ್ಮ)ದರ್ಶಿಯೇ] ಆಗಿ ಏಕ ರೂಪನಾಗಿರುವೆ. ಹೀಗಿರುವ ಕಾರಣ ನಿನಗೆ ಈ ಮಿಥ್ಯಾ ಪ್ರಪಂಚದಲ್ಲಿ ಗ್ರಾಹ್ಯ ಬುದ್ಧಿಯಿಂದ ಸ್ವೀಕರಿಸಬೇಕಾದ ದೇಹವೆಂಬುದು ಯಾವುದಿರುವುದು ? ಅಥವಾ ತ್ಯಾಜ್ಯ ಬುದ್ಧಿಯಿಂದ ಬಿಡಬೇಕಾದ ಅದೇಹ ರೂಪ ವಸ್ತ್ವಂತರವು ತಾನೇ ಯಾವುದು ಇರುವುದು? ವಸ್ತುಸ್ಥಿತಿಯು ಹೀಗಿರುವುದರಿಂದ ನಿನಗೆ ಈ ದೇಹವಿದ್ದರೂ, ಅದರಮೇಲೆ ಅಭಿಮಾನವೇ ಇಲ್ಲದೆ, ಅಸಂಬದ್ಧನಾಗಿ (ಅಶರೀರನಾಗಿ) ಇರುವೆ. ದೇಹಗತವಾದ ಜೀವಿತ ಮರಣಗಳೊಂದೂ ನಿನಗೆ ಇಲ್ಲವೇ ಇಲ್ಲ. ಅದು ಕಾರಣ, ಈಗ ನೀನು ಈ ದೇಹತ್ಯಾಗ ಪ್ರಯತ್ನದಿಂದ ನಿವೃತ್ತನಾಗಿ ಪೂರ್ವದಂತೆ ಸ್ವಸಾನ್ನಿಧ್ಯ ಮಾತ್ರದಿಂದ ರಾಜ್ಯ ಪರಿಪಾಲನೆ ಮಾಡುತ್ತಾ ಜೀವನ್ಮುಕ್ತ ಸ್ಥಿತಿಯಲ್ಲಿ ಇರುವವನಾಗು.

ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ ।
ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇನ ಪ್ರಣಶ್ಯತಿ. ಗೀತಾ.)

೮. ಅಂಡಜೋದ್ಭಿಜ್ಜಾದಿ ಸಕಲ ವಿಧ ಭೂತಗಳಿಗೂ ಅತ್ಯುಲ್ಲಾಸಕರವಾದವಾದ ವಸಂತ ಋತುವು ಬೇಕಾದರೂ ಯಥೇಚ್ಛವಾಗಿ ವಿಜೃಂಭಿಸಲಿ. ಅಥವಾ ಸರ್ವ ನಾಶಕರವಾದ ಪ್ರಳಯ ಕಾಲದ ಪ್ರಚಂಡ ಮಾರುತವಾದರೂ ಭೀಕರವಾಗಿ ಬಿರುಸಿನಿಂದ ಬೀಸಲಿ. ಇದು ಪ್ರಿಯ, ಇದು ಅಪ್ರಿಯವೆಂಬ ಜ್ಞಾನವೇ ಇಲ್ಲದಿರುವ ಸಮದರ್ಶಿಯಾದ ಆತ್ಮನಿಗೆ ಏನು ತಾನೇ ಸಂಭವಿಸುವುದು ? (ಹರ್ಷಶೋಕಾದಿ ದ್ವಂದ್ವಗಳೊಂದೂ ಆತ್ಮನಿಗೆ ಇಲ್ಲವು.)

೯. ಪರ್ವತಗಳೆಲ್ಲವೂ ಬಿದ್ದುಹೋಗಿ ಹೊರಳಾಡುತ್ತಿದ್ದರೂ, ಪ್ರಳಯ ಕಾಲಾಗ್ನಿಗಳು ಪ್ರಪಂಚವನ್ನೆಲ್ಲ ದಹಿಸುತ್ತಿದ್ದರೂ, ಉತ್ಪಾತಕಾರಿಗಳಾದ ಪ್ರಳಯ ಮಾರುತ

ಸರ್ವ ಭೂತಾನಿ ತಿಷ್ಠಂತು ಸರ್ವಮೇವ ಪ್ರಯಾತು ವಾ ।
ನಶ್ಯಂತು ವಾಥ ವರ್ಧಂತಾಮಾತ್ಮನ್ಯೇವಾಭಿತಿಷ್ಠತಿ ॥ ೧೦ ॥

ಕ್ಷೀಯತೇ ನ ಕ್ಷಯಂ ಪ್ರಾಪ್ತೇ ವರ್ಧಮಾನೇ ನ ವರ್ಧತೇ ।
ನ ಸ್ಪಂದತೇ ಸ್ಪಂದಮಾನೇ ದೇಹೇಽಸ್ಮಿನ್ಪರಮೇಶ್ವರಃ ॥ ೧೧ ॥

ದೇಹಸ್ಯಾಹಮಹಂ ದೇಹೀತಿ ಕ್ಷೀಣೇ ಚಿತ್ತವಿಭ್ರಮೇ ।
ತ್ಯಜಾಮಿ ನ ತ್ಯಜಾಮೀತಿ ಕಿಂ ಮುಧಾ ಕಲನೋದಿತಾ ॥ ೧೨ ॥

ಗಳು ಜೋರಾಗಿ ಬೀಸುತ್ತಿದ್ದರೂ, ಏನೇ ಆದರೂ ಕೂಡ ತತ್ತ್ವಜ್ಞನು ಸ್ವಾತ್ಮ ಸ್ವರೂಪದಲ್ಲಿಯೇ ಅಲುಗಾಡದೆ, ಅವಿಕೃತನಾಗಿಯೇ ಪರಿನಿಷ್ಠಿತನಾಗಿರುವನು.

೧೦. ಸರ್ವ ಭೂತಗಳೂ ಇದ್ದುಕೊಂಡಿರಲಿ ಅಥವಾ ಪ್ರಪಂಚವೆಲ್ಲವೂ ಹೋಗಿಬಿಡಲಿ. ಎಲ್ಲವೂ ನಾಶ ಹೊಂದಿಬಿಡಲಿ ಅಥವಾ ಸಂರಕ್ಷಿತವಾಗಿರಲಿ. ಏನೇ ಆಗಲಿ, ಆತ್ಮಜ್ಞನು ಎಂದಿಗೂ ಸ್ವಸ್ವರೂಪದಿಂದ ಕದಲುವುದಿಲ್ಲ.

೧೧. (ಪರಮೇಶ್ವರನು) ಆ ಆತ್ಮನು. ಈ ದೇಹವು ಕ್ಷಯಿಸಿದರೂ, ತಾನು ಕ್ಷೀಣನಾಗುವುದಿಲ್ಲ. ಈ ದೇಹದ ವೃದ್ಧಿಯಿಂದ ತಾನು ವೃದ್ಧಿ ಹೊಂದುವುದಿಲ್ಲ. ಇದು ಚಲಿಸಿದರೂ ಅವನು ಎಂದಿಗೂ ಚಲಿಸುವುದಿಲ್ಲ. (ಅಚಲನು) [ಉಪಚಯಾ ಪಚಯಗಳು ದೇಹ ಧರ್ಮಗಳೇ. ಆತ್ಮನು ಸರ್ವ ವಿಕಾರ ಶೂನ್ಯನು.]

೧೨. "ನಾನು ಈ ದೇಹದ ಸ್ವಾಮಿಯು. (ಸಂಬಂಧವುಳ್ಳವನು.) ಈ ದೇಹವು ನನ್ನದು. ನಾನು ದೇಹ ಪರಿಚ್ಛಿನ್ನನು (ದೇಹಿ)" ಇವೇ ಮೊದಲಾದ ಮನೋ ಭ್ರಾಂತಿಯು ಸ್ವಸ್ವರೂಪ ತತ್ತ್ವ ಜ್ಞಾನದಿಂದ ಚೆನ್ನಾಗಿ ಶಾಂತವಾಗಿ ಬಿಟ್ಟಮೇಲೆ "ನಾನು ಇದನ್ನು ಬಿಡುವೆನು. ಇದನ್ನು ಬಿಡುವುದಿಲ್ಲ. ಸ್ವೀಕರಿಸು ವೆನು" ಎಂಬೀ ಮೊದಲಾದ ವ್ಯರ್ಥವಾದ ಅನರ್ಥ ಹೇತುವಾದ (ಅಜ್ಞಾನಮಯ) ಕಲ್ಪನೆಗಳು ಹೇಗೆ ಉದಯಿಸುವುವು? (ಕಾರಣವೇ ಇಲ್ಲದಿರುವಾಗ ಕಾರ್ಯವು ಉದಯಿಸುವುದು ಅಸಂಭವವು.)

ಇದಂ ಕೃತ್ವಾ ಕರೋಮೀದಮಿದಂ ತ್ಯಕ್ತ್ವೇದಮಿತ್ಯಲಂ ।
ಇತಿ ತತ್ತ್ವವಿದಾಂ ತಾತ ಸಂಕಲ್ಪಾಃ ಸಂಕ್ಷಯಂ ಗತಾಃ ॥ ೧೩ ॥

ಪ್ರಬುದ್ಧಾ ಸರ್ವಕರ್ತಾರಃ ಕರಿಷ್ಯಂತೀಹ ಕಿಂಚನ ।
ನ ತಸ್ಯಾಕರಣೇ ನಿತ್ಯಮಕರ್ತೃತ್ವಪದಂ ಗತಾಃ ॥ ೧೪ ॥

---

೧೩. ನಾನು ಈಗ ಇದನ್ನು ಮಾಡಿದೆನು. ಇನ್ನುಮೇಲೆ ಇಂತಹುದನ್ನು ಮಾಡುವೆನು. ನಾನು ಈಗ ಇದನ್ನು ಬಿಟ್ಟುಬಿಟ್ಟೆನು. ಇದು ನನಗೆ ಬೇಡ. ಮುಂದೆ ಇದನ್ನು ಬಿಡುವೆನು, ಇತ್ಯಾದಿ ಸಂಕಲ್ಪಗಳೆಲ್ಲವೂ, ತತ್ತ್ವಜ್ಞರಿಗೆ ಸಂಪೂರ್ಣವಾಗಿ ಶಾಂತವಾಗಿ ಬಿಟ್ಟಿರುವುವು. ಒಂದೂ ಇರುವುದಿಲ್ಲ.

೧೪. ತತ್ತ್ವಜ್ಞರು, ಯಾದೃಚ್ಛಿಕವಾಗಿ ದೇಹೇಂದ್ರಿಯಾದಿಗಳಿಂದ ನಿರ್ವರ್ತ್ಯವಾದ ಕರ್ಮಗಳಿಗೆಲ್ಲ ಕರ್ತೃಗಳಾಗಿರುವವರಂತೆ ಕಂಡು ಬಂದರೂ, ಅವರು ಯಾವದೊಂದು ಕರ್ಮವನ್ನೂ ಮಾಡದೆಯೇ ಇರುವರು. ವಸ್ತುತಃ ಅಕರ್ತೃಗಳೇ ಯಾವಾಗಲೂ ಕೂಡ ದೇಹೇಂದ್ರಿಯಾದಿಗಳಿಂದಲೂ ಯಾವುದೊಂದೂ ಕೆಲಸವನ್ನು ಮಾಡದೆಯೇ ಇದ್ದು ಬಿಟ್ಟರೆ ಆಗ ನಿತ್ಯವಾಗಿಯೇ ಅವರು ಅಕರ್ತೃತ್ವರೂಪ ಸ್ಥಿತಿಯನ್ನು ಪಡೆದವರಾಗಿ ಇರುವರು.

[ಕರ್ಮಣ್ಯಕರ್ಮ ಯಃ ಪ್ರಶ್ಯೇತ್ ಅಕರ್ಮಣಿ ಚ ಕರ್ಮಯಃ । ಸಬುದ್ಧಿರ್ಮಾಮನುಷ್ಯೇಷು ಸ ಯುಕ್ತಃ ಕೃತ್ಸ್ನ ಕರ್ಮಕೃತ್ ॥ ಗೀತೆ ೪-೧೮ (ನಾವು ವೇಗವಾಗಿ ಓಡುವ ರೈಲುಗಾಡಿಯಲ್ಲಿ ಕುಳಿತು ಪ್ರಯಾಣ ಮಾಡುವಾಗ ದಾರಿಯುದ್ದಕ್ಕೂ ಬೆಳೆದಿರುವ ಅಚಲವಾದ ವೃಕ್ಷ, ಶೈಲ ಮೊದಲಾದುವುಗಳು, ನಮಗೆ (ಅಸಭಿಮುಖವಾಗಿ) ಪ್ರತಿಕೂಲ ದಿಕ್ಕಿನ ಕಡೆಗೆ ಓಡುತ್ತಿರುವಂತೆಯೇ ಕಾಣುವುವು. ವಾಸ್ತವಾಂಶವನ್ನು ವಿಚಾರ ಮಾಡಿದರೆ. ಅವುಗಳು ನಿಶ್ಚಲವಾಗಿ (ಒಂದೇ ಕಡೆಯಲ್ಲಿ ಕದಲದೆ) ಇರತಕ್ಕವುಗಳೆಂಬುದು ನಮ್ಮ ಅನುಭವ ಪ್ರತ್ಯಕ್ಷ ಸಿದ್ಧವಾದ ಸಂಗತಿ. ಅವು ವೇಗವಾಗಿ ಓಡುತ್ತಿರುವುವು ಎಂದು ತಿಳಿದುಕೊಳ್ಳುವುದು ಕೇವಲ ಭ್ರಾಂತಿಯು. ನಿಶ್ಚಲವಾಗಿ

ಅಕರ್ತೃತ್ವಾದಭೋಕ್ತೃತ್ವಮರ್ಥಾದೇವ ಸಮಾಗತಂ ।
ಸಂಗ್ರಹೀತಂ ಕಿಲಾನುಪ್ತಂ ಕೇನೇಹ ಭುವನತ್ರಯೇ ॥ ೧೫ ॥

ನಿಂತೇ ಇರುವ ವೃಕ್ಷ ಶೈಲಾದಿಗಳಲ್ಲಿ ತೋರುವ ವೇಗವಾದ ಪ್ರತಿಕೂಲ ಗತಿ ರೂಪ ಕರ್ಮದಲ್ಲಿ, ಯಾವನು ಕರ್ಮಾಭಾವವನ್ನು ಕಾಣುವನೋ, ಅಂದರೆ ವೃಕ್ಷಾದಿಗಳು ಓಡುತ್ತಿರುವಂತೆ ಕಂಡರೂ, ಅವು ನಿಜವಾಗಿ ಓಡುತ್ತಿಲ್ಲ, ಒಂದೇ ಕಡೆ ನಿಂತಿವೆ, ಅವು ಓಡುವುದೆಂದು ತಿಳಿದುಕೊಳ್ಳುವುದು ಕೇವಲ ಭ್ರಾಂತಿ ಎಂದು ಯಾವನಿಗೆ ದೃಢವಾದ ಜ್ಞಾನವು ಇದೆಯೋ ಅವನು ಬುದ್ಧಿವಂತ (ವಿವೇಕಿ). ಈ ದೃಷ್ಟಾಂತದಂತೆಯೇ ದೇಹಾದ್ಯಾಶ್ರಯವಾದ ಕರ್ಮವನ್ನೂ ಅಕರ್ಮನಾದ ಆತ್ಮನಲ್ಲಿ ಅಧ್ಯಾರೋಪಮಾಡಿಕೊಂಡು, ನಾನು ಕರ್ತೃ, ಭೋಕ್ತೃ, ಹೋಗುತ್ತೇನೆ ನೋಡುತ್ತೇನೆ ಇತ್ಯಾದಿ ನಾನಾ ವಿಧಗಳಲ್ಲಿ ಅಜ್ಞನು ವ್ಯವಹರಿಸುತ್ತಿರುವನು. ಅದು ಕಾರಣ, ಆತ್ಮ ಸಮವೇತವಾಗಿ ಸರ್ವಲೋಕ ಪ್ರಸಿದ್ಧವಾದ ಕರ್ಮದಲ್ಲಿ ಇದು ದೇಹಾದ್ಯಾಶ್ರಯವಾದುದು. ಆತ್ಮ ಸಮವೇತವಲ್ಲ. ಆತ್ಮನು ಅಕ್ರಿಯನು ಎಂಬುದಾಗಿ ತಾತ್ತ್ವಿಕವಾದ ಕರ್ಮಾಭಾವವನ್ನೂ ಕಾಣುವವನು ಜ್ಞಾನಿಯು (ಬುದ್ಧಿವಂತ). ಹೀಗೆಯೇ ಕಣ್ಣಿಗೆ ಬಹುದೂರದಲ್ಲಿರುವ ಜನರ ಗುಂಪು ವೇಗದಿಂದ ಚಲಿಸುತ್ತಿದ್ದರೂ ಕೂಡ, ಅವರು ಒಂದೇ ಕಡೆ ನಿಂತಿರುವಂತೆಯೇ ತೋರುವುದು. ಹೀಗೆ ತೋರುವ ಅಕರ್ಮದಲ್ಲಿ ಕರ್ಮವನ್ನು ಕಾಣುವವನೇ ಜಾಣ. ಈ ರೀತಿಯಾಗಿಯೇ ಕರ್ಮದಂತೆ ಆತ್ಮನಲ್ಲಿ ಅಧ್ಯಾರೋಪಿತವಾದ ದೇಹೇಂದ್ರಿಯಾದಿಗಳ ವ್ಯಾಪಾರೋಪರಮ ರೂಪ. ಅಕರ್ಮದಲ್ಲಿಯೂ, ನಾನು ಏನೂ ಮಾಡದೆ ಸುಮ್ಮನೆ ಸುಖವಾಗಿ ಕುಳಿತಿರುವೆನು ಎಂಬ ಅಹಂಕಾರಾಭಿಸಂಧಿಗೆ ಕಾರಣವಾಗಿರುವುದರಿಂದ ಕರ್ಮವನ್ನು ಕಾಣುವವನೇ ಜಾಣನು. ಇತ್ಯಾದಿ ಮತ್ತು ತ್ಯಕ್ತ್ವಾ ಕರ್ಮಫಲಾಸಂಗಂ ನಿತ್ಯತೃಪ್ತೋ ನಿರಾಶ್ರಯಃ । ಕರ್ಮಣಿ ಅಭಿಪ್ರವೃತ್ತೋಽಪಿ ನೈವ ಕಿಂಚಿತ್ ಕರೋತಿಸಃ-ಗೀತೆ ೪–೨೦. ಇವುಗಳನ್ನು ಗಮನಿಸಿ]

೧೫. ಯಾವಾಗ ಕರ್ತೃತ್ವವು ಇಲ್ಲವಾಗುವುದೋ ಆಗಲೇ ಭೋಕ್ತೃತ್ವವೂ ಕೂಡ ತಾನಾಗಿಯೇ ಇಲ್ಲವು, ಬೀಜಾವಾಪಾದಿ ಸ್ವೀಯ ಕರ್ಮಗಳಿಂದ ಅನಿಷ್ಪಾದಿತವಾದ ವ್ರೀಹ್ಯಾದಿಫಲಗಳನ್ನೂ ಸಂಗ್ರಹಿಸತಕ್ಕವನು ಯಾವನಾದರೂ ಈ ಮೂರು ಲೋಕಗಳಲ್ಲಿ ಹುಡುಕಿನೋಡಿದರೂ ಎಲ್ಲಿಯಾದರೂ ಸಿಕ್ಕುವನೇನು ? ಇಲ್ಲವೆಂದು ತಾತ್ಪರ್ಯ.

ಶಾಂತೇ ಕರ್ತೃತ್ವಭೋಕ್ತೃತ್ವೇ ಶಾಂತಿರೇವೇಹ ಶಿಷ್ಯತೇ ।
ಪೌಢಿಮಭ್ಯಾಗತಾ ಸೈವ ಮುಕ್ತಿರಿತ್ಯುಚ್ಯತೇ ಬುಧೈಃ ॥ ೧೬ ॥

ಪ್ರಬುದ್ಧಾಶ್ಚಿನ್ಮಯಾಃ ಶುದ್ಧಾಃ ಸರ್ವಮಾಕ್ರಮ್ಯ ಸಂಸ್ಥಿತಾಃ ।
ಕಿಂ ತ್ಯಕ್ತಂ ಪರಿಗೃಹ್ಣಂತು ಕಿಂ ಗೃಹೀತಂ ತ್ಯಜಂತು ವಾ ॥ ೧೭ ॥

ಗ್ರಾಹ್ಯಗ್ರಾಹಕಸಂಬಂಧ ಪ್ರಮಿತಾವಯವಿಕ್ರಮೈಃ ।
ಹೀನಃ ಪ್ರಮೇಯಾವಯವೈಃ ಕಿಂ ಗೃಹ್ಣಾತು ಜಹಾತು ಕಿಂ ॥ ೧೮ ॥

---

೧೬. ಹೀಗೆ ಕರ್ತೃತ್ವ ಭೋಕ್ತೃತ್ವಗಳೆರಡೂ ಶಾಂತವಾಗಿ ಬಿಡಲಾಗಿ, ಬಳಿಕ ಈ ಲೋಕದಲ್ಲಿ, ಶಾಂತಿಯೊಂದು ಮಾತ್ರವೇ ಅವಶಿಷ್ಟವಾಗುವುದು (ಮಿಗುವುದು) ಹೀಗೆ ಕರ್ತೃತ್ವ ಭೋಕ್ತೃತ್ವವನ್ನು ಚೆನ್ನಾಗಿ ಮುಲೋತ್ಪಾಟನೆ ಮಾಡಿ ಶಾಂತಿಯನ್ನೂ ಪ್ರಬಲಗೊಳಿಸಿದರೆ, ಅದೇ ಮುಕ್ತಿಯೆನ್ನಿಸಿಕೊಳ್ಳುವುದೆಂದು ಪ್ರಾಜ್ಞರು ಹೇಳುವರು.

(ಶಾಂತಿ, ಮನಸ್ಸು ವಿಕ್ಷೇಪಕ್ಕೆ ಒಳಗಾಗದೆ, ಸಮಾಧಾನದಿಂದ ಇರುವ ಸ್ಥಿತಿ.)

೧೭. ಈ ರೀತಿಯಲ್ಲಿ ಪ್ರಬುದ್ಧರಾಗಿಯೂ ಚಿನ್ಮಯರಾಗಿಯೂ ಶುದ್ಧರಾಗಿಯೂ ಇರುವ ಜ್ಞಾನಿಗಳು. ಪಾರಮಾರ್ಥಿಕವಾದ ಸ್ವಸ್ವರೂಪಾವಿರ್ಭಾವದಿಂದ ಅನಾತ್ಮೀಯವಾದ ಸಮಸ್ತ ದೃಶ್ಯವನ್ನೂ ತಿರಸ್ಕರಿಸಿ ಬಿಟ್ಟಿರುವರು. ಇಂತಹವರು, ಹಿಂದೆ ಬಿಟ್ಟಿದ್ದು ಈಗ ಸ್ವೀಕರಿಸಬೇಕಾಗಿರುವ ವಸ್ತು ವು ಯಾವುದಿರುವುದು? ಅಥವಾ ತಾವು ಮೊದಲು ಸ್ವೀಕರಿಸಿರುವ ಯಾವುದನ್ನು ತಾನೇ ಈಗ ಬಿಡಬೇಕಾಗಿರುವುದು? ಯಾವುದೂ ಇಲ್ಲವು.

೧೮. ಇದು ಗ್ರಾಹ್ಯವು, ಗ್ರಾಹಕವು, (ಇದು ದೃಶ್ಯವು, ಇದು ದೃಕ್ಕು) ಎಂದು ಪರಸ್ಪರ ಸಂಬಂಧಗಳಿಂದ ಗೊತ್ತಾಗಿರುವ ಅವಯವಿಗಳು ಸೇರಿ ಆಗಿರುವುದು ಈ ಜಗತ್ತು. ಜಗತ್ತಿನ ಕ್ರಮವೇ, ಪದ್ಧತಿಯೇ ಇಂಥದು. ಈ ಕ್ರಮ, ಈ ಪದ್ಧತಿಗಳನ್ನೇ ಬಿಟ್ಟಮೇಲೆ, ಯಾವುದನ್ನು ಹಿಡಿಯುವುದು? ಯಾವುದನ್ನು ಬಿಡುವುದು ?

ಗ್ರಾಹ್ಯಗ್ರಾಹಕಸಂಬಂಧೇ ಕ್ಷೀಣೇ ಶಾಂತಿರುದೇತ್ಯಲಂ ।
ಸ್ಥಿತಿಮಭ್ಯಾಗತಾ ಶಾಂತಿರ್ಮೋಕ್ಷನಾಮ್ನಾಭಿಧೀಯತೇ ॥ ೧೯ ॥

ತತ್ರ ಸ್ಥಿತಾಃ ಸದಾ ಶಾಂತಾಸ್ತ್ವಾದೃಶಾಃ ಪುರುಷೋತ್ತಮಾಃ ।
ಸುಷುಪ್ತಾವಯವಸ್ಪಂದಸಾಧರ್ಮ್ಯೇಣ ಚರಂತಿ ಹಿ ॥ ೨೦ ॥

ಪರಾವಬೋಧ ವಿಶ್ರಾಂತವಾಸನೋ ಜಗತಿ ಸ್ಥಿತಿಂ ।
ಅರ್ಧಸುಪ್ತ ಇವೇಹೇಮಾಂ ತ್ವಂ ಪಶ್ಯಾತ್ಮಸ್ಥಯಾ ಧಿಯಾ ॥ ೨೧ ॥

---

೧೯. ಹೀಗೆ ಐಹಿಕಾಮುಷ್ಮಿಕಗಳಾದ ಇಷ್ಟಾನಿಷ್ಟ ಸಾಧನಗಳನ್ನೂ ಗ್ರಹಿಸುವ ಮತ್ತು ತ್ಯಜಿಸುವ ವ್ಯಾಪಾರಗಳಿಗೆ ನಿಮಿತ್ತವಾದ ಗ್ರಾಹ್ಯಗ್ರಾಹಕ ಸಂಬಂಧವು ಕ್ಷೀಣವಾಗಿ ಬಿಟ್ಟರೆ ಆಗಲೇ ರಾಗದ್ವೇಷಾದಿ ವಿಕ್ಷೇಪಗಳ ಶಾಂತಿಯು ಸಂಪೂರ್ಣವಾಗಿ ಉದಯವಾಗುವುದು. ಚೆನ್ನಾಗಿ ಪ್ರವೃದ್ಧವಾದ (ರೂಢ ಮೂಲವಾದ) ಈ ಶಾಂತಿಯನ್ನೇ ಮೋಕ್ಷವೆಂಬ ಹೆಸರಿನಿಂದ ಜ್ಞಾನಿಗಳು ಕರೆಯುವರು.

೨೦. ಅಯ್ಯ ಪ್ರಹ್ಲಾದ, ಇಂತಹ ಶ್ಲಾಘ್ಯವಾದ ಸ್ಥಿತಿಯಲ್ಲಿದ್ದುಕೊಂಡು ಸರ್ವದಾ ಶಾಂತರಾಗಿರುವ ನಿನ್ನಂತಹ ಪುರುಷ ಶ್ರೇಷ್ಠರಿಂದ ಜೀವನ್ಮುಕ್ತರು, ಸುಷುಪ್ತರಾಗಿರುವವರು. (ಚೆನ್ನಾಗಿ ಗಾಢ ನಿದ್ರೆಯಲ್ಲಿರುವ ಜನಗಳು) ಸ್ವ ಸ್ವರೂಪದಲ್ಲಿ ಲಯಹೊಂದಿ ಬ್ರಹ್ಮ ಭಾವವನ್ನೂ ಪಡೆದವರಾಗಿದ್ದರೂ ಕೂಡ ಸ್ವಪ್ರಯತ್ನಲೇಶವೂ ಇಲ್ಲದೆಯೇ ಶ್ವಾಸ ನಿಶ್ವಾಸಾದಿ ರೂಪಚಲನೆಯನ್ನೂ ಮಾಡುವಂತೆ ಅದೇ ಕ್ರಮದಿಂದ ಸ್ವ ಪ್ರಯತ್ನ ಪರಾಙ್ಮುಖರಾಗಿ ನಿರ್ಲಿಪ್ತರಾಗಿ ಪ್ರಪಂಚ ವ್ಯಾಪಾರವನ್ನೂ ಪ್ರಾರಬ್ಧದೇಹ ಪಾತ ಪರ್ಯಂತವೂ ನಡೆಯಿಸುವರು.

೨೧. ಅದು ಕಾರಣ ಆತ್ಮ ತತ್ತ್ವ ಸಾಕ್ಷಾತ್ಕಾರದಿಂದ ವಾಸನಾಕ್ಷಯವನ್ನೂ ಪಡೆದಿರುವ ನೀನೂ ಕೂಡ ಸುಷುಪ್ತಿ ಜಾಗ್ರದವಸ್ಥೆಗಳ ಮಧ್ಯದಲ್ಲಿರುವ ನರನಂತೆ, (ಅರ್ಧನಿದ್ರಿತನಾದವನಂತೆ) ಈ ಜಗತ್ತಿನಲ್ಲಿ ಆತ್ಮ ಜ್ಞಾನ ಪರಿನಿಷ್ಠಿತವಾದ ನಿನ್ನ ಬುದ್ಧಿಯಿಂದ, ಈ ಜೀವನ್ಮುಕ್ತ ವ್ಯವಹಾರ ರೂಪ ಸ್ಥಿತಿಯನ್ನು ಚೆನ್ನಾಗಿ ವಿಚಾರ ಮಾಡಿ ತಿಳಿ.

ನ ರಮಂತೇ ಹಿ ರಮ್ಯೇಷು ಸ್ವಾತ್ಮನ್ಯೇವ ಗತಾಶಯಾಃ ।
ನೋದ್ವಿಜಂತೇಽನ್ಯದುಃಖೇಷು ಸ್ವಾತ್ಮನ್ಯೇಕರಸಾಯನಾಃ ॥ ೨೨ ॥

ನಿತ್ಯಪ್ರಬುದ್ಧಾ ಗೃಹ್ಣಂತಿ ಕಾರ್ಯಾಣೀಮಾನ್ಯಸಂಗಿನಃ ।
ಮುಕುರಾ ಇವ ಬಿಂಬಾನಿ ಯಥಾ ಪ್ರಾಪ್ತಾವಾಂಛಯಾ ॥ ೨೩ ॥

ಜಾಗ್ರತಿ ಸ್ವಾತ್ಮನಿ ಸ್ವಸ್ಥಾಃ ಸುಪ್ತಾಃ ಸಂಸಾರಸಂಸ್ಥಿತೌ ।
ಬಾಲವತ್ಪ್ರವಿವೇಷಂತೇ ಸುಷುಪ್ತಸದೃಶಾಶಯಾಃ ॥ ೨೪ ॥

---

೨೨. ಸ್ವಾತ್ಮ ಸ್ವರೂಪಾನುಸಂಧಾನದಲ್ಲಿಯೇ ಸರ್ವದಾ ಲೀನವಾದ ಮನಸ್ಸುಳ್ಳ ಪ್ರಾಜ್ಞರು, ಅನಾತ್ಮಗಳಾದ ಪ್ರಾಪಂಚಿಕ ರಮ್ಯ ವಸ್ತುಗಳಲ್ಲಿ ಎಂದಿಗೂ ರಮಿಸುವುದಿಲ್ಲ. ನಿರತಿಶಯಾನಂದ ರೂಪವಾದ ಸ್ವಾತ್ಮ ಚೈತನ್ಯದಲ್ಲಿ ಮಾತ್ರವೇ ನಿರವಧಿಕ ಸುಖವನ್ನೂ ಸಂತತವೂ ಅನುಭವಿಸುತ್ತಿರುವ ಜ್ಞಾನಿಗಳು, ಆತ್ಮನೊಂದಿಗೆ ಲೇಶ ಮಾತ್ರವೂ ಸಂಬಂಧವಿಲ್ಲದ (ಬಹುದೂರದಲ್ಲಿರುವ-ಅನಾತ್ಮಗಳಾದ) ಪ್ರಾಪಂಚಿಕ ದುಃಖಗಳಲ್ಲಿ ಉದ್ವೇಗವನ್ನೂ ಹೊಂದುವುದಿಲ್ಲ.

[ದುಃಖೀ ಯದಿ ಭವೇತ್ ಸಾಕ್ಷೀತಃ ಸಾಕ್ಷೀ ದುಃಖಿತೋಭವೇತ್ । ದುಃಖಿನಃ ಸಾಕ್ಷಿತಾನಾಸ್ತಿ ಸಾಕ್ಷಿಣೋ ದುಃಖಿತಾ ಕುತಃ" ಎಂದು ವಾರ್ತಿಕಕಾರರು ಹೇಳಿರುವರು.

೨೩. ನಿತ್ಯ ಪ್ರಬುದ್ಧರಾದ ಜೀವನ್ಮುಕ್ತರು, ದರ್ಪಣಗಳು ತಮ್ಮ ಇಚ್ಛೆಯಿಲ್ಲದೆಯೇ ವಸ್ತುಗಳನ್ನೂ (ಬಿಂಬಗಳನ್ನೂ) ಹತ್ತಿರಕ್ಕೆ ಬಂದ ಬಂದಂತೆಲ್ಲಾ ಪ್ರತಿಬಿಂಬದಿಂದ ಗ್ರಹಿಸುವಂತೆಯೂ, ಆದರೂ ಬಿಂಬಗತವಾದ ಗುಣ ದೋಷಗಳಿಂದ ನಿರ್ಲಿಪ್ತಗಳಾಗಿಯೇ ಇರುವಂತೆಯೂ, ಈ ಪ್ರಾಪಂಚಿಕ ವ್ಯವಹಾರಗಳನ್ನೆಲ್ಲ ಅವು ಬಂದ ಬಂದ ಹಾಗೆಲ್ಲ (ಯಥಾ ಪ್ರಾಪ್ತ) ಸ್ವೇಚ್ಛೆಯು ಲೇಶ ಮಾತ್ರವೂ ಇಲ್ಲದೆ ನಿಸ್ಸಂಗರಾಗಿ ಗ್ರಹಿಸುವರು.

೨೪. ಸ್ಥಿತ ಪ್ರಜ್ಞರು ಸುಷುಪ್ತ ಸ್ಥಿತಿಗೆ ಸಮನಾದ ಆಶಯವುಳ್ಳವರಾಗಿ, ಜಾಗ್ರದ ವಸ್ಥೆಯಲ್ಲಿ ಸ್ವಾತ್ಮ ನಿಷ್ಠರಾಗಿಯೂ ಸಂಸಾರ ಸ್ಥಿತಿಯಲ್ಲಿ ಸುಪ್ತರಾಗಿಯೂ ಬಾಲಕರಂತೆ ವ್ಯವಹಾರ ಮಾಡುವರು.

ತ್ವಮುಜಿತಪದವೀಮುಪಾಗತೋಂತಃ ।
ಕಮಲಜವಾಸರಮೇಕಮೇವ ಭುಕ್ತ್ವಾ ॥
ಗುಣಗಣಕಲಿತಾಮಿಹೈವ ಲಕ್ಷ್ಮೀಂ
ವ್ರಜ ಪರಮಾಸ್ಪದಮಚ್ಯುತಂ ಮಹಾತ್ಮನ್ ॥ ೨೫ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ
ಮೋಕ್ಷೋಪಾಯೇಷೂಪಶಮ ಪ್ರಕರಣೇ ಪ್ರಹ್ಲಾದ ಬೋಧನಂ
ನಾಮ ಚತ್ವಾರಿಂಶಃ ಸರ್ಗಃ

[ಯಾನಿ ಶಾಸರ್ವ ಭೂತಾನಾಂ ತಸ್ಯಾಂಜಾಗರ್ತಿ ಸಂಯಮೀ । ಯಸ್ಯಾಜಾಗ್ರತಿ ಭೂತಾನಿ ಸಾ ನಿಶಾಪಶ್ಯತೋಮುನೇಃ –ಗೀತಾ–ಅಧ್ಯಾಯ ೨-೬೯.

ರಾತ್ರಿಯಲ್ಲಿ ಸಂಚರಿಸತಕ್ಕ ರಾಕ್ಷಸ, ಘೂಕ (ಗೂಗೆ) ಮುಂತಾದವರಿಗೆ ವ್ಯವಹಾರ ಯೋಗ್ಯವಾಗಿ ಹಗಲೇ ಆಗಿದ್ದರೂ ಕೂಡ ಆಕಾಲವು ಇತರರಿಗೆ ರಾತ್ರಿಯಾಗಿರುವುದು. ಹಾಗೆಯೇ ನಕ್ತಂಚರರಿಗೆ ವಿಶ್ರಾಂತಿ ಯೋಗ್ಯವಾದ ರಾತ್ರಿಯೇ ಆಗಿದ್ದರೂ ಆ ಕಾಲವು ಉಳಿದವರಿಗೆ ಹಗಲಾಗಿರುವುದು. ಅಜ್ಞಾನಿಗಳಾದ ಸಕಲ ಭೂತಗಳಿಗೂ ಪರಮಾರ್ಥಾತ್ಮ ತತ್ತ್ವವೆಂಬುದು ಅಗೋಚರವಾಗಿರುವುದರಿಂದ ಅದರಲ್ಲಿ ಅಜ್ಞಾನಿಗಳು ನಿದ್ರಿತರಾಗಿರುವರು. ಇಂತಹ ಅಜ್ಞಾನಿಗಳಾದ ಸಕಲ ಭೂತಗಳಿಗೂ ನಿದ್ರಾಯೋಗ್ಯವಾದ ಪರಮಾರ್ಥಾತ್ಮ ತತ್ತ್ವವೆಂಬ ರಾತ್ರಿಯ ವೇಳೆಯಲ್ಲಿ ಜಿತೇಂದ್ರಿಯನಾದ ಯೋಗಿಯು ಜಾಗ್ರತನಾಗಿ ವ್ಯವಹರಿಸುವನು. ಸಕಲ ಭೂತಗಳಿಗೂ ವ್ಯವಹಾರ ಯೋಗ್ಯವಾದ ಗ್ರಾಹ್ಯ ಗ್ರಾಹಕರೂಪ ಅವಿದ್ಯೆಯೆಂಬ ಹಗಲಲ್ಲಿ ಅಜ್ಞಾನಿಗಳು ಜಂಗರೂಕರಾಗಿ ವ್ಯವಹರಿಸುತ್ತಿರಲು ಪರಮಾರ್ಥ ತತ್ತ್ವವನ್ನು ಮನಗಂಡ ಸ್ಥಿತ ಪ್ರಜ್ಞನಿಗೆ ಅವಿದ್ಯೆಯು ರಾತ್ರಿಯಾಗಿರುವುದು. ಅಂದರೆ ಸಕಲ ಅವಿದ್ಯಾ ವ್ಯವಹಾರಗಳಿಂದ ಪರಾಙ್ಮುಖನಾಗಿ ತಟಸ್ಥನಾಗಿ ಸ್ವಸ್ಥನಾಗಿರುವನು.

೨೫. ಆದು ಕಾರಣ, ಎಲೈ ಮಹಾತ್ಮನೇ, ನೀನು ನಿನ್ನ ಮನಸ್ಸಿನೊಳಗೆ ಪರಮಾತ್ಮನ ಪರಮ ಪದವನ್ನು ಪಡೆದವನಾಗಿ ಈ ಒಂದು ಕಲ್ಪ ಪರ್ಯಂತ ಕಾಲವೂ ಅಭಿಮಾನ ಶೂನ್ಯನಾಗಿ ಈ ಪಾತಾಳ ಲೋಕದಲ್ಲಿಯೇ, ಮಹಾ ವೈಭವ (ಗುಣಗಣ)ಯುತವಾದ, ಅಸುರ ರಾಜ್ಯ ಲಕ್ಷ್ಮಿಯನ್ನು ಅನುಭವಿಸಿ, ಬಳಿಕ ಈ ಪ್ರಾರಬ್ಧ ದೇಹಪಾತಾನಂತರ ಪುನರಾವೃತ್ತಿ (ಚ್ಯುತಿ) ರಹಿತವಾದ ನಿರತಿಶಯ ಪರಮ ಪ್ರೇಮಾಸ್ಪದವಾದ ಮೋಕ್ಷವನ್ನು (ಕೈವಲ್ಯವನ್ನು) ಹೊಂದುವವನಾಗು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ "ಪ್ರಹ್ಲಾದ ಬೋಧನ" ಎಂಬ ನಲವತ್ತೊಂದನೆಯ ಸರ್ಗವು.

ಏಕ ಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಜಗದ್ರತ್ನಸಮುದ್ಗೇನ ತ್ರೈಲೋಕ್ಯಾದ್ಭುತದರ್ಶಿನಾ ।
ಇತ್ಯುಕ್ತೇ ಪದ್ಮನಾಭೇನ ಜ್ಯೋತ್ಸ್ನಾಶೀತಲಯಾ ಗಿರಾ ॥ ೧ ॥

ಪ್ರಹ್ಲಾದನಾಮ ದೇಹೋಽಸೌ ವಿಕಾಸಿನಯನಾಂಬುಜಃ ।
ಮುದೋವಾಚ ವಚೋ ಧೀರೋ ಗೃಹೀತಮನನಕ್ರಮಃ ॥ ೨ ॥

ಪ್ರಹ್ಲಾದ ಉವಾಚ:—

ಹಿತಾಹಿತವಿಚಾರೇಣ ರಾಜಕಾರ್ಯಶತೇನ ಚ ।
ಅತ್ಯಹಂ ಶ್ರಮಿತೋ ದೇವ ಕ್ಷಣಂ ವಿಶ್ರಾಮತಾಂ ಗತಃ ॥ ೩ ॥

ನಲವತ್ತೊಂದನೆಯ ಸರ್ಗ

ಶ್ರೀ ವಸಿಷ್ಠನು ಹೇಳಿದನು :—

೧-೨. ರಾಮ, ಮುಂದೆ ಏನಾಯಿತೆಂಬುದನ್ನು ಹೇಳುವೆನು ಕೇಳು. ಪ್ರಳಯ ಕಾಲದಲ್ಲಿ ಜಗತ್ತುಗಳೆಂಬ ರತ್ನಗಳನ್ನು ತನ್ನೊಳಗೆ ಅಡಗಿಸಿಕೊಂಡು ಬಿಡತಕ್ಕ ಸಂಪುಟವಾಗಿಯೂ, ಪುನಃ ಸೃಷ್ಟಿ ಕಾಲದಲ್ಲಿ ಭುವನತ್ರಯ ಕಲ್ಪನೆಗಳೆಂಬ ಆಶ್ಚರ್ಯವನ್ನು ಪ್ರದರ್ಶಿಸುವವನಾಗಿಯೂ ಇರುವ ಪದ್ಮನಾಭನೆಂಬ ಹೆಸರುಳ್ಳ ವಿಷ್ಣು ದೇಹವು, ಚಂದ್ರನ ಬೆಳದಿಂಗಳಂತೆ ಶೀತಲವಾಗಿ ಆಪ್ಯಾಯನಕರವಾದ ಹಿತ ಪೂರ್ವೋಕ್ತವಾದ ವಚನವನ್ನು ಹೇಳಲಾಗಿ, ಆ ಬಳಿಕ ಜಿತೇಂದ್ರಿಯನೂ, ಚೆನ್ನಾಗಿ ಅರಳಿದ ನೇತ್ರ ಕಮಲಗಳುಳ್ಳವನೂ ಆದ ಪ್ರಹ್ಲಾದ ನಾಮಾಂಕಿತವಾದ ದೇಹವು, ಪುನಃ ಪುನಃ ಶ್ರೀಹರಿಯ ಆದೇಶವನ್ನು ಮನನ ಮಾಡಿ ನಿರ್ಧರಿಸಿಕೊಂಡು, ಸಂತೋಷದಿಂದ (ಮುಂದೆ ಹೇಳುವ) ಮಾತನ್ನು ಈರೀತಿ ಅರಿಕೆ ಮಾಡಿಕೊಂಡಿತು. (ಇಲ್ಲಿ ವಿಷ್ಣು ದೇಹ, ಪ್ರಹ್ಲಾದ ದೇಹವೆಂದು ಹೇಳಿರುವುದು, ಆತ್ಮನಲ್ಲಿ ವಾಸ್ತವವಾದ ಸರ್ವ ವ್ಯವಹಾರಾಭಾವವನ್ನು ಸೂಚಿಸುವುದಕ್ಕಾಗಿಯೇ ಎಂದು ನ್ಯಾಯ ಪ್ರಕಾಶದಲ್ಲಿ ಟೀಕಾಕಾರರು ಹೇಳಿರುವರು.)

೩. ದೇವಾಧಿದೇವನೇ, ನನ್ನ ಪ್ರಜೆಗಳಿಗೆ ಹಿತವಾದುದು ಯಾವುದು?

ಭಗವಂ ಸ್ತ್ವತ್ಪ್ರಸಾದೇನ ಸ್ಥಿತಿಃ ಸಮ್ಯಗಥಾಗತಾ ।
ಸಮಾಧಾವಸಮಾಧೌ ಚ ರೂಪೇಣಾಹಂ ಸಮಃ ಸದಾ ॥ ೪ ॥

ಚಿರಮಂತರ್ಮಹಾದೇವ ದೃಷ್ಟೋಽಸ್ಯಮಲಯಾ ಧಿಯಾ ।
ಪುನರ್ಬಹಿರಯಂ ದೃಷ್ಟ್ವಾ ದಿಷ್ಟ್ಯಾದೇವ ಪ್ರದೃಶ್ಯಸೇ ॥ ೫ ॥

ಅಹಮಾಸಮನಂತಾಯಾಮಸ್ಯಾಂ ದೃಷ್ಟೌ ಮಹೇಶ್ವರ ।
ಸರ್ವಸಂಕಲ್ಪಮುಕ್ತಾಯಾಂ ವ್ಯೋಮ ವ್ಯೋಮ್ನೀವ ನಿರ್ಮಲೇ ॥ ೬ ॥

ನ ಶೋಕೇನ ನ ಮೋಹೇನ ನಚ ವೈರಾಗ್ಯಚಿಂತಯಾ ।
ನ ದೇಹತ್ಯಾಗಕಾರ್ಯೇಣ ನ ಸಂಸಾರಭಯೇನ ಚ ॥ ೭ ॥

ಅಹಿತವು ಯಾವುದು ? ಎಂಬೀ ಮೊದಲಾದ ವಿಚಾರದಿಂದಲೂ, ಸಾವಿರಾರು ಇತರ ರಾಜಕಾರ್ಯಗಳಿಂದಲೂ, ನಾನು ಇದುವರೆವಿಗೆ ಅತ್ಯಂತ ಶ್ರಮಪಟ್ಟು ಈಗತಾನೇ ಒಂದು ಕ್ಷಣ ಕಾಲ ವಿಶ್ರಾಂತಿಯನ್ನು ಪಡೆದೆನು.

೪. ಹೀಗೆ ವಿಶ್ರಾಂತಿಯನ್ನು ಪಡೆದ ತರುವಾಯ, ಭಗವಂತನೇ, ನಿನ್ನ ಅನುಗ್ರಹದಿಂದ ಈಗ ನನಗೆ ಪರಮಾರ್ಥ ತತ್ತ್ವ ಬೋಧದ ಮೂಲಕ ಸ್ವರೂಪಾವ ಸ್ಥಿತಿಯು ಯಥಾರ್ಥವಾಗಿಯೇ ದೊರಕಿತು. ಸಮಾಧ್ಯ ಸಮಾಧಿ ಕಾಲಗಳಲ್ಲಿಯೂ ಸರ್ವದಾ ನಾನು ಪಾರಮಾರ್ಥಿಕ ಸ್ವರೂಪದಿಂದ ಸಮನಾಗಿಯೇ ಇರುವೆನು.

೫. ಮಹಾದೇವನೇ, ನಾನು ನಿರ್ಮಲವಾದ ಚಿತ್ತೈಕಾಗ್ರತೆಯಿಂದ ನನ್ನ ಹೃದಯದೊಳಗೆ ಬಹು ದೀರ್ಘಕಾಲ ನಿನ್ನ ಸಾಕ್ಷಾತ್ಕಾರ ಮಾಡಿದೆನು. ಮತ್ತೆ ಈಗಲೂ ಕೂಡ ನನ್ನ ಭಾಗ್ಯೋದಯ ವಶದಿಂದ ನೀನು ಹೀಗೆ ನನ್ನೆದುರಿನಲ್ಲಿ ಈ ಚರ್ಮ ನೇತ್ರಕ್ಕೂ ಗೋಚರಿಸುತ್ತಿರುವೆ.

೬-೭. ಮಹೇಶ್ವರನೇ, ನಿರ್ಮಲವಾದ ಮಹಾಕಾಶದೊಳಗೆ ಬೇರೊಂದು ಆಕಾಶವಿರುವಂತೆ ನಾನು ಸರ್ವ ಸಂಕಲ್ಪ ವಿವರ್ಜಿತವಾದ, ಅನಂತವಾದ ಅತಿ ಪವಿತ್ರ ವಾದ ಈ ಆಂತರಿಕವಾದ ಜ್ಞಾನದೃಷ್ಟಿಯಲ್ಲಿ ಚಿರಕಾಲ ಇದ್ದುಬಿಟ್ಟೆನು. ಆದರೆ ನಾನು ಶೋಕದಿಂದಾಗಲಿ, ವೈರಾಗ್ಯ ಚಿಂತೆಯಿಂದಲಾಗಲಿ, ದೇಹವನ್ನು ಬಿಡಬೇಕೆಂಬ ಸಂಕಲ್ಪದಿಂದಲಾಗಲೀ, ಈ ಸಂಸಾರ ಭೀತಿಯಿಂದಲಾಗಲಿ, ಅಥವಾ ಈ ಬಗೆಯ ಮತ್ಯಾವ ಕಾರಣದಿಂದಲಾಗಲೀ ಹೀಗೆ ಸಮಾಧಿಯನ್ನು ಆಶ್ರಯಿಸಲಿಲ್ಲ.

ಏಕಸ್ಮಿನ್ವಿದ್ಯಮಾನೇ ಹಿ ಕುತಃ ಶೋಕಃ ಕುತಃ ಕ್ಷತಿಃ ।
ಕುತೋ ದೇಹಃ ಕ್ವ ಸಂಸಾರಃ ಕ್ವ ಸ್ಥಿತಿಃ ಕ್ವ ಭಯಾಭಯೇ ॥ ೮ ॥

ಯಥೇಚ್ಛಯೈವಾಮಲಯಾ ಕೇವಲಂ ಸ್ವಯಮುತ್ಥಯಾ ।
ಏವಮೇವಾಹಮವಸಂ ವಿತತೇ ಪಾವನೇ ಪದೇ ॥ ೯ ॥

ಹಾ ವಿರಕ್ತೋಽಸ್ಮಿ ಸಂಸಾರಂ ತ್ಯಜಾಮೀತಿಯಮೀಶ್ವರ ।
ಅಪ್ರಬುದ್ಧದಶಾಂ ಚಿಂತಾ ಹರ್ಷಶೋಕವಿಕಾರದಾ ॥ ೧೦ ॥

---

೮. ಅದ್ವಿತೀಯವಾದ ಪರಬ್ರಹ್ಮವೊಂದೇ ಪರಮಾರ್ಥ ಸತ್ಯವು. ಯಾವುದೊಂದು ಭೇದವೂ ಇಲ್ಲವೇ ಇಲ್ಲ. ನಾನು ಸರ್ವದಾ ಅಂತಹ ಬ್ರಹ್ಮವೇ ಆಗಿರುವೆನು ಎಂಬೀ ಅನುಭವವು ದೃಢವಾಗಿರುವ ಕಾಲದಲ್ಲಿ ಶೋಕವೆಂಬುದು ಎಲ್ಲಿಯದು? ವಿಪತ್ತು ಎಲ್ಲಿಂದ ಬರಬೇಕು? ದೇಹವೆಲ್ಲಿರುವುದು? ಸಂಸಾರವೆಲ್ಲಿಯದು? ಸಂಸಾರ ಸ್ಥಿತಿಯು ಹೇಗೆ ಬರುವುದು? ಭಯದೃಷ್ಟಿಯಾಗಲಿ ಅಥವಾ ಭಯವಿಲ್ಲವೆಂಬ ದೃಷ್ಟಿಯಾಗಲಿ ಎಲ್ಲಿರುವುವು? ಒಂದೂ ಇಲ್ಲವೆಂದೇ ತಾತ್ಪರ್ಯ.

["ಏಕಮೇವಾ ದ್ವಿತೀಯಂ ಬ್ರಹ್ಮ" "ನೇಹನಾನಾಸ್ತಿ ಕಿಂಚನ-" ತತ್ರಕೋ ಮೋಹಃ ಕಃ ಶೋಕಃ ಏಕತ್ವ ಮನುಪಶ್ಯತಃ -ಈಶಾ ವಾಸ್ಯ. ೭. ಆನಂದಂ ಬ್ರಹ್ಮಣೋ ವಿದ್ವಾನ್ ನಬಿಭೇತಿ ಕುತಶ್ಚನ. ಬ್ರಹ್ಮಾನಂದ ಸ್ವರೂಪವನ್ನು ಕಂಡ ಜ್ಞಾನಿಯು ಯಾವುದರಿಂದಲೂ ಸ್ವಲ್ಪವೂ ಭಯಪಡುವುದಿಲ್ಲ. -ತೈತ್ತಿರೀಯ. ರಾಹೋಃ ಶಿರಃ ಎಂಬಂತೆ ಬ್ರಹ್ಮಣಃ ಆನಂದಂ ಎಂಬುದು ಅಭೇದ ದ್ಯೋತಕವೇ.]

೯. ಹೀಗೆ ದೇಹತ್ಯಾಗಾದಿ ರೂಪ ಯಾವ ಅಭಿಸಂಧಿಯೂ ಇಲ್ಲದೆಯೇ ತಾನಾಗಿಯೇ ನನ್ನ ಮನಸ್ಸಿನಲ್ಲಿ ತತ್ತ್ವ ವಿಚಾರ ಜನ್ಯವಾಗಿ ವಿಶ್ರಾಂತಿಯನ್ನು ಹೊಂದಬೇಕೆಂಬ ನಿರ್ಮಲವಾದ ಇಚ್ಛೆಯು ಉದ್ಭವಿಸಿತು. ತದನುಸಾರವಾಗಿ ನಾನು ಹೀಗೆ ಅಪಾರವಾದ, ಅತಿ ಪವಿತ್ರವಾದ ಪರಮಪದದಲ್ಲಿ ಸ್ವಸ್ಥನಾಗಿದ್ದೆನು.

೧೦. "ನಾನು ಈಗ ವಿರಕ್ತನಾಗಿರುವೆನು. ಅಯ್ಯೋ, ಇದುವರೆವಿಗೂ ಈ ಹಾಳು ಸಂಸಾರದಿಂದ ಅನೇಕ ಅನರ್ಥಗಳನ್ನು ಅನುಭವಿಸಿ ದಣಿದೆನು. ಇನ್ನು ಈಗ ಈ ಸಂಸಾರವನ್ನು ಪರಿತ್ಯಾಗ ಮಾಡುವೆನು" ಇತ್ಯಾದಿ ವಿಧವಾದ ಈ ಚಿಂತೆಯೆಲ್ಲವೂ, ಹೇ ಪರಮೇಶ್ವರ, ಅಪ್ರಬುದ್ಧಾತ್ಮರಿಗೆ ಮಾತ್ರವೇ ಹರ್ಷ ವಿಷಾದಾದಿ

ದೇಹಾಭಾವೇ ನ ದುಃಖಾನಿ ದೇಹೇ ದುಃಖಾನಿಮೇವಮತಿಃ ।
ಇತಿ ಚಿಂತಾವಿಷವ್ಯಾಲೀ ಮೂರ್ಖಮೇವಾವಲುಂಪತಿ ॥ ೧೧ ॥

ಇದಂ ಸುಖಮಿದಂ ದುಃಖಮಿದಂ ನಾಸ್ತೀದಮಸ್ತಿ ಮೇ ।
ಇತಿ ದೋಲಾಯಿತಂ ಚೇತೋ ಮೂಢಮೇವ ನ ಪಂಡಿತಂ ॥ ೧೨ ॥

ಅಹಮನ್ಯೋಽನ್ಯ ಮೇವಾಯಮಜ್ಞಾನಾಂ ತು ವಾಸನಾ ।
ದೂರೋದಸ್ತಾತ್ಮಬುದ್ಧಿನಾಂ ಜಯತ್ಯಸುಮತಾ ಮಿಹ ॥ ೧೩ ॥

ಇದಂ ತ್ಯಾಜ್ಯಮಿದಂ ಗ್ರಾಹ್ಯಮಿತಿ ಮಿಥ್ಯಾ ಮನೋಭ್ರಮಃ ।
ನೋನ್ಮತ್ತತಾಂ ನಯತ್ಯಂತಜ್ಞ್ಞಮಜ್ಞಮಿವ ದುರ್ಧಿಯಃ ॥ ೧೪ ॥

ಸಕಲ ವಿಕಾರಗಳನ್ನು ಕೊಡತಕ್ಕುದು ಎಂದು ಈಗ ನನಗೆ ನಿನ್ನ ಅನುಗ್ರಹದಿಂದ ಚೆನ್ನಾಗಿ ತಿಳಿಯಿತು.

೧೧-೧೨. "ದೇಹವಿಲ್ಲದಿರುವ ಸಕಲ ದುಃಖಗಳೂ ಇಲ್ಲವು. ದೇಹವಿದ್ದರೇ ಎಲ್ಲ ದುಃಖಗಳೂ ಪ್ರಾಪ್ತವಾಗುವುವು. ಇದು ನನ್ನ ಸಿದ್ಧಾಂತ." ಇತ್ಯಾದಿ ನಾನಾ ಬಗೆಯಾದ ಚಿಂತೆಯೆಂಬ ವಿಷ ಸರ್ಪವು ಮೂರ್ಖನನ್ನು ಮಾತ್ರವೇ ಕಚ್ಚಿ ನಾಶಪಡಿಸುವುದು. ಮತ್ತೂ ಕೂಡ, "ಇದು ಸುಖ, ಇದು ದುಃಖ. ಇದು ನನ್ನಲ್ಲಿದೆ, ಇದು ಇಲ್ಲ ಎಂಬೀ ಮೊದಲಾಗಿ ಸರ್ವದಾ ಚಿಂತಾಕ್ರಾಂತವಾಗಿ ಅತ್ಯಂತ ಚಪಲವಾದ ಚಿತ್ತವು ಮೂಢನನ್ನು ಮಾತ್ರವೇ ಹಿಂಸಿಸುವುದೇ ಹೊರತು, ಪಂಡಿತನನ್ನು (ತತ್ವಜ್ಞಾನಿ) ಎಂದಿಗೂ ಸಂಕಟಪಡಿಸುವುದಿಲ್ಲ.

೧೩. "ನಾನು ಬೇರೆ. ಇವನೇ ಬೇರೆಯವನು." ಎಂಬೀ ದುಷ್ಟ ಭೇದ ವಾಸನೆಯು, ಬಹು ದೂರದಲ್ಲಿ ಆತ್ಮತತ್ತ್ವ ಜ್ಞಾನವನ್ನು ಬಿಟ್ಟಿರುವ, ಅಂದರೆ ಆತ್ಮ ಜ್ಞಾನದಿಂದ ಬಹು ದೂರದಲ್ಲಿರುವ, ಅಜ್ಞರಾದ ಮೂಢ ಜಂತುಗಳಿಗೆ ಮಾತ್ರವೇ ಉದಯಿಸುವುದು. (ಅಜ್ಞರನ್ನು ಮಾತ್ರವೇ ಮುತ್ತಿಬಿಡುವುದು.)

೧೪, ಇದು ತ್ಯಾಜ್ಯವು, (ಬಿಡಲ್ಪಡತಕ್ಕುದು, ಹೇಯ), ಇದು ಗ್ರಾಹ್ಯವು. (ಉಪಾದೇಯ, ಸ್ವೀಕರಿಸಲರ್ಹವಾದುದು.) ಎಂಬೀ ಮಿಥ್ಯಾ ಭೂತವಾದ ಮನೋಭ್ರಾಂತಿಯು ದುರ್ಬುದ್ಧಿಯುಳ್ಳ ನರಾಧಮನಿಗೆ ಮಾತ್ರವೇ ಯೋಗ್ಯವಾದುದು. ಇದು ಅಜ್ಞಾನಿಗಳಿಗೆ (ಜ್ಞಾನ ಶೂನ್ಯರಿಗೆ) ಹುಚ್ಚು ಹಿಡಿಸುವಂತೆ ತತ್ತ್ವಜ್ಞಾನಿಯನ್ನು ಆವರಿಸಿಕೊಂಡು, ಅವನಿಗೆ ಎಂದೆಂದಿಗೂ ಹುಚ್ಚು ಹಿಡಿಸಲಾರದು.

ಸರ್ವಸ್ಮಿನ್ನಾತ್ಮನಿ ತತೋ ತ್ವಯಿ ತಾಮರಸೇಕ್ಷಣ ।
ಹೇಯೋಪಾದೇಯ ಪಕ್ಷಸ್ಥಾ ದ್ವಿತೀಯಾ ಕಲನಾ ಕುತಃ ॥ ೧೫ ॥

ವಿಜ್ಞಾನಾಭಾಸಮಖಿಲಂ ಜಗತ್ಸದಸದುತ್ಥಿತಂ ।
ಕಿಂ ಹೇಯಂ ಕಿಮುಪಾದೇಯಮಿಹ ಯತ್ತ್ಯಜ್ಯತೇ ನವಾ ॥ ೧೬ ॥

ಕೇವಲಂ ಸ್ವಸ್ವಭಾವೇನ ದ್ರಷ್ಟೃದೃಶ್ಯೇ ವಿಚಾರಯನ್ ।
ಕ್ಷಣಂ ವಿಶ್ರಾಂತವಾನಂತಃ ಪರಮಾತ್ಮಾತ್ಮನಾತ್ಮನಿ ॥ ೧೭ ॥

ಭಾವಾಭಾವ ವಿನಿರ್ಮುಕ್ತೋ ಹೇಯೋಪಾದೇಯ ವರ್ಜಿತಃ ।
ಏವಮಾಸಮಹಂ ಪೂರ್ವಮಧುನೇತ್ಥಂ ವ್ಯವಸ್ಥಿತಃ ॥ ೧೮ ॥

---

೧೫. ಎಲೈ ಪುಂಡರೀಕಾಕ್ಷನೇ, (ಕಮಲ ನೇತ್ರನೇ.) ಪರಮಾತ್ಮನಾದ ನೀನು ಸರ್ವ ವ್ಯಾಪಿಯೂ ಆಗಿರುವಾಗ, ಹೇಯೋಪಾದೇಯಗಳೆಂಬ ಪಕ್ಷದ್ವಯವನ್ನು ಅವಲಂಬಿಸಿದ ಭೇದ ಕಲ್ಪನೆಯು ಎಲ್ಲಿಂದ ಬರುವುದು?

೧೬. ಈ ಸಮಸ್ತವಾದ ಜಗತ್ತು ಶುಕ್ತಿ ರಜತಾದಿಗಳಂತೆ ಕೇವಲ ಭ್ರಾಂತಿ ಜ್ಞಾನದಿಂದ ವಿಜೃಂಭಿತವಾಗಿರುವ ಕಾರಣ, ವಿಜ್ಞಾನಾಭಾಸ ಮಾತ್ರ ರೂಪವಾದುದು. ಪರಮಾರ್ಥ ಸತ್ಯವಾದುದು ಅಲ್ಲವೇ ಅಲ್ಲ. ಇದು ಮಾಯೆಯಿಂದ ಸದಸದ್ರೂಪವಾಗಿ (ಅನಿರ್ವಚನೀಯವಾಗಿ) ಉದಯ ಹೊಂದಿರುವಂತೆ ತೋರುವುದು. ಇಂತಹ ಮಾಯಿಕವಾದ ಮಿಥ್ಯಾ ಜಗತ್ತಿನಲ್ಲಿ ನಾವು ಬಿಡಬೇಕಾಗಿರುವ ಹೇಯ ವಸ್ತುವು ಯಾವುದು ಇರುವುದು? ಅಥವಾ ಬಿಡಲಾಗದ ಉಪಾದೇಯವಾದ ವಸ್ತುವು ತಾನೇ ಯಾವುದಿರುವುದು?

[ಸತಃ= ಆತ್ಮನ ಮತ್ತು ಅಸತ= ಮಾಯೆಯ. ಇವೆರಡರ ಅನ್ಯೋನ್ಯ ತಾದಾತ್ಮ್ಯಾಧ್ಯಾಸವೆಂಬ ಮಿಥುನೀಕರಣದಿಂದ (ಸಂಯೋಗದಿಂದ) ಉತ್ಥಿತವಾದದ್ದು ಜಗತ್ತು ಎಂದು ನ್ಯಾ. ಪ್ರ. ದಲ್ಲಿ ಹೇಳಿದೆ.]

೧೭-೧೮. ನಾನು ಕೇವಲ ಸ್ವಸ್ವಭಾವವಾದ ಪರಮಾತ್ಮ ಸ್ವರೂಪದಿಂದ, ಮನಸ್ಸಿನೊಳಗೆ ದ್ರಷ್ಟೃ ದೃಶ್ಯಗಳ ಸ್ವರೂಪವನ್ನು ವಿಚಾರ ಮಾಡುತ್ತಾ ಭಾವಾಭಾವಗಳಿಂದ ವಿನಿರ್ಮುಕ್ತನಾಗಿಯೂ ಹೇಯೋಪಾದೇಯ ಜ್ಞಾನದಿಂದ ರಹಿತನಾಗಿಯೂ, ಅದ್ವಿತೀಯಾತ್ಮ ಸ್ವರೂಪದಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡಿದ್ದೆನು.

ಸಮಯಾತ್ಮೀಯಮಾಪನ್ನಂ ಸರ್ವಮಾತ್ಮಾತ್ಮತಾಂ ಗತಃ ।
ಕರೋಮ್ಯಹಂ ಮಹಾದೇವ ತುಭ್ಯಂ ಯತ್ಪರಿರೋಚತೇ ॥ ೧೯ ॥

ತ್ವಮಯಂ ಪುಂಡರೀಕಾಕ್ಷಃ ಪೂಜ್ಯಸ್ತ್ವಾವಜ್ಜಗತ್ತ್ರಯೇ ।
ತನ್ಮತ್ತಃ ಪ್ರಕೃತಿಪ್ರಾಂ ಪೂಜಾಮಾದಾತು ಮರ್ಹಸಿ ॥ ೨೦ ॥

ಇತ್ಯುಕ್ತ್ವಾ ದಾನವಾಧೀಶಃ ಪುರಃ ಕ್ಷೀರೋಧಶಾಯಿನಃ ।
ಶೈಲೇಂದ್ರ ಇವ ಪೂರ್ಣೇಂದು ಮರ್ಘಪಾತ್ರ ಮುಪಾದದೇ ॥ ೨೧ ॥

ಸಾಯುಧಂ ಸಾಪ್ಸರೋವೃಂದಂ ಸಸುರಂ ಸಖಗಾಧಿಪಂ ।
ಪೂಜಯಾಮಾಸ ಗೋವಿಂದಂ ಸತ್ರೈಲೋಕ್ಯಮಥಾಗ್ರಗಂ ॥ ೨೨ ॥

ಸಬಾಹ್ಯಾಭ್ಯಂತರಭ್ರಾಂತ ಭುವನಂ ಭುವನೇಶ್ವರಂ ।
ಪೂಜಯಿತ್ವಾಥ ಶಿಷ್ಟಂತಮುವಾಚ ಕಮಲಾಪತಿಃ ॥ ೨೩ ॥

ಸ್ವಲ್ಪ ಹೊತ್ತಿಗೆ ಮುಂಚೆ, ನಾನು ಹೀಗೆ ಸಮಾಧಿಯಲ್ಲಿದ್ದು, ಈಗ ಬಹಿರ್ಮುಖನಾಗಿ ನಿನ್ನ ಆಜ್ಞಾಪಾಲನೆ ಮಾಡುವುದರಲ್ಲಿ ಸಿದ್ಧನಾಗಿರುವೆನು.

೧೯. ಮಹಾದೇವನೇ, ಸ್ವಸ್ವಭಾವವನ್ನು ಹೊಂದಿದವನಾದ, ಈ ನಾನು ನಿನ್ನ ಇಚ್ಛಾನುವರ್ತಿಯಾಗಿ ನಿನ್ನ ಮನಸ್ಸಿಗೆ ಇಷ್ಟವಾದ, ನನಗೆ ಕರ್ತವ್ಯವಾಗಿ ಪ್ರಾಪ್ತವಾದ, ನಿನ್ನಿಂದ ಆಜ್ಞಾಪಿಸಲ್ಪಟ್ಟ ಕಾರ್ಯಗಳನ್ನೆಲ್ಲ ಖಂಡಿತವಾಗಿ ಮಾಡುವೆನು. ಸಂದೇಹವಿಲ್ಲ.

೨೦. ಕಮಲಾಕ್ಷನೇ, ಇಂತಹ ನೀನು ತ್ರಿಲೋಕಗಳಲ್ಲಿಯೂ, ಸರ್ವರಿಗೂ ಏಕ ರೀತಿಯಲ್ಲಿ ಪೂಜ್ಯನಾಗಿರುವೆ. ಅದು ಕಾರಣ. ನೀನು ನನ್ನ ಬಳಿಯಿಂದಲೂ ಸಾಂಪ್ರದಾಯಕ ಕ್ರಮದಿಂದ (ನ್ಯಾಯ) ಪ್ರಾಪ್ತವಾದ ಪೂಜೆಯನ್ನು ದಯೆಮಾಡಿ ಪರಿಗ್ರಹಿಸಿ ಅನುಗ್ರಹಿಸಬೇಕೆಂದು ಪ್ರಾರ್ಥಿಸುವೆನು. (ಎಂದು ಪ್ರಹ್ಲಾದನು ವಿಜ್ಞಾಪಿಸಿಕೊಂಡನು.

೨೧. ಹೀಗೆಂದು, ದೈತ್ಯರಾಜನಾದ ಪ್ರಹ್ಲಾದನು (ಕ್ಷೀರಸಾಗರಶಾಯಿಯಾದ) ಶ್ರೀಮನ್ನಾರಾಯಣನ ಮುಂದೆ ವಿಜ್ಞಾಪಿಸಿ, ಉದಯ ಪರ್ವತವು ಪೂರ್ಣಚಂದ್ರನನ್ನು ಹೇಗೋ ಹಾಗೆ ತನ್ನ ಕೈಗೆ ಅರ್ಘ್ಯ ಪಾತ್ರೆಯನ್ನು ತೆಗೆದುಕೊಂಡನು.

೨೨-೨೩. ತರುವಾಯ (ಚೈತನ್ಯಯುಕ್ತ) ಶಂಖ ಚಕ್ರಗದಾ ಖಡ್ಗಾದ್ಯಾಯುಧ

ಶ್ರೀ ಭಗವಾನುವಾಚ—

ಉತ್ತಿಷ್ಠ ದಾನವಾಧೀಶ ಸಿಂಹಾಸನ ಮುಪಾಶ್ರಯ ।
ಯಾವದಾಶ್ವಭಿಷೀಕಂ ತೇ ಸ್ವಯಮೇವ ದದಾಮ್ಯಹಂ ॥ ೨೪ ॥

ಪಾಂಚಜನ್ಯರವಂ ಶ್ರುತ್ವಾ ಯ ಇಮೇ ಸಮುಪಾಗತಾಃ ।
ಸಿದ್ಧಾಃ ಸಾಧ್ಯಾಃ ಸುರೌಘಾಸ್ತೇ ಕುರ್ವಂತು ತವ ಮಂಗಳಂ ॥ ೨೫ ॥

ಇತ್ಯುಕ್ತ್ವಾ ಪುಂಡರೀಕಾಕ್ಷೋ ದಾನವಂ ಸಿಂಹವಿಷ್ಟರೇ ।
ಯೋಜಯಾಮಾಸ ಯೋಗ್ಯಂ ತಂ ಮೇರುಶೃಂಗ ಇವಾಂಬುದಂ ॥ ೨೬ ॥

ಗಳೊಡನೆಯೂ, ಅಪ್ಸರಸಿಯರ ಗಣಗಳೊಡನೆಯೂ, ಸುರಗಣಗಳೊಡನೆಯೂ, ಗರುಡನೊಡನೆಯೂ, ಅಂತರ್ಬಹಿಸ್ಥಿತ ಲೋಕತ್ರಯದೊಡನೆಯೂ, ತನ್ನ ಎದುರಿನಲ್ಲಿ ಪ್ರತ್ಯಕ್ಷನಾಗಿರುವ ಮತ್ತು ಬಾಹ್ಯ ರೋಮ ಕೂಪಾದಿಗಳೊಳಗೂ ಆಭ್ಯಂತರ ಜಠರ ಹೃದಯಾದಿಗಳೊಳಗೂ ಕೂಡ ಚತುರ್ದಶ ಭುವನಗಳನ್ನು ಚಕ್ರಾಕಾರವಾಗಿ ಸುತ್ತಿಸುತ್ತಿರುವ ಸರ್ವಲೋಕೇಶ್ವರನಾದ ಪರಮಾತ್ಮನನ್ನು (ಗೋವಿಂದನನ್ನು) ಅನನ್ಯ ಭಾವದಿಂದ ಅತ್ಯಂತ ಭಕ್ತಿಯೊಡನೆ ಪೂಜೆ ಮಾಡಿದನು. ಹೀಗೆ ಪೂಜೆ ಮಾಡಿ ನಮ್ರನಾಗಿ ನಿಂತಿರುವ ಪ್ರಹ್ಲಾದನನ್ನು ಕಂಡು, ಲಕ್ಷ್ಮೀಪತಿಯಾದ ಶ್ರೀಹರಿಯು ಇಂತೆಂದು ಹೇಳಿದನು.

ಶ್ರೀ ಭಗವಂತನು ಹೇಳಿದನು :—

೨೪. ಎಲೈ ಅಸುರ ಚಕ್ರವರ್ತಿಯಾಗಿರುವ ಪ್ರಹ್ಲಾದನೇ, ಇನ್ನು ನೀನು ಏಳು. ಸಿಂಹಾಸನಾರೊಹಣಕ್ಕೆ ಸಿದ್ಧನಾಗು. ತಡಮಾಡಬೇಡ. ನಾನು ಇಲ್ಲಿಂದ ಹೊರಡುವುದರೊಳಗಾಗಿ, ನಾನೇ ನಿನಗೆ ಬೇಗನೆ ಪಟ್ಟಾಭಿಷೇಕವನ್ನು ಮಾಡುವೆನು.

೨೫. ನನ್ನ ಪಾಂಚಜನ್ಯವೆಂಬ ಶಂಖದ ಧ್ವನಿಯನ್ನು ಕೇಳಿದೊಡನೆಯೇ ಇಲ್ಲಿಗೆ ಬಂದು ಸೇರಿರುವ ಈ ಸಿದ್ಧ, ಸಾಧ್ಯ, ಚಾರಣ ಗಂಧರ್ವಾದಿ ಸಕಲ ದೇವ ವೃಂದಗಳೂ ಕೂಡ ನಿನಗೆ ಮಂಗಳವನ್ನು ಹರಿಸಲಿ.

೨೬. ಹೀಗೆಂದು ಹೇಳಿ ಆ ಕಮಲಾಕ್ಷನು ಮೇರು ಶಿಖರದಲ್ಲಿ ಮೇಘವನ್ನು ಹೇಗೋ ಹಾಗೆ, ಸಕಲ ವಿಘ್ನಗಳಿಂದಲೂ ರಾಜ್ಯಾರ್ಹನಾದ ಆ ಪ್ರಹ್ಲಾದನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದನು.

ಅಥೈನಂ ಹರಿರಾಹೂತೈಃ ಕ್ಷೀರೋದಾದ್ಯೈರ್ಮಹಾಬ್ಧಿಭಿ; ।
ಗಂಗಾದಿಭಿಃ ಸರಿತ್ಪೂರೈಃ ಸರ್ವತೀರ್ಥ ಜಲೈಸ್ತಥಾ ॥ ೨೭ ॥

ಸರ್ವವಿಪ್ರರ್ಷಿಸಂಘೈಶ್ಚ ಸರ್ವಸಿದ್ಧಗಣೈಃ ಸಹ ।
ಪುನರ್ವಿದ್ಯಾಧರಯುತೋ ಲೋಕಪಾಲ ಸಮನ್ವಿತಃ ॥ ೨೮ ॥

ಅಭ್ಯಷಿಂಚದಮೇಯಾತ್ಮಾ ದೈತ್ಯರಾಜ್ಯೇ ಮಹಾಸುರಂ ।
ಮರುದ್ಗಣೈಃ ಸ್ತೋಯಮಾನಂ ಪೂರ್ವಂ ಸ್ವರ್ಗೇ ಹರಿಂ ಯಥಾ ॥ ೨೯ ॥

ಸುರಾಸುರೈಃ ಸ್ತೂಯಮಾನಂ ಸ್ತೂಯಮಾನಃ ಸುರಾಸುರೈಃ ।
ಅಭಿಷಿಕ್ತಮುವಾಚೇದಂ ಪ್ರಹ್ಲಾದಂ ಮಧುಸೂದನಃ ॥ ೩೦ ॥

ಶ್ರೀ ಭಗವಾನುವಾಚಃ—

ಯಾವನ್ಮೇರುರ್ಧರಾ ಯಾವದ್ಯಾವಚ್ಚಂದ್ರಾರ್ಕ ಮಂಡಲೇ ।
ಅಖಂಡಿತ ಗುಣಶ್ಲಾಘೀ ತಾವದ್ರಾಜಾ ಭವಾನಘ ॥ ೩೧ ॥

೨೭-೨೯. ಅನಂತರ ಅಪ್ರಮೇಯಾತ್ಮನಾದ ಶ್ರೀಹರಿಯು, ತಾನು ಮೊದಲು ಸಂಕಲ್ಪಿಸಿದ್ದಂತೆಯೇ ಪಾಂಚಜನ್ಯವನ್ನು ಊದಿ ತನ್ನಾದಶ್ರವಣ ಮಾತ್ರದಿಂದಲೇ ಸಂಪ್ರಾಪ್ತರಾದ ಸಕಲ ಬ್ರಹ್ಮರ್ಷಿಗಳ ಸಮೂಹಗಳಿಂದಲೂ ಸಕಲ ಸಿದ್ಧಸಾಧ್ಯಾದಿ ದೇವ ವೃಂದಗಳಿಂದಲೂ, ವಿದ್ಯಾಧರದಿಂದಲೂ ಮತ್ತು ಲೋಕಪಾಲರುಗಳಿಂದಲೂ ಸಮನ್ವಿತನಾಗಿ, ಪೂರ್ವ ಕಾಲದಲ್ಲಿ (ಹಿಂದಿನ ಕಾಲದಲ್ಲಿ) ಸ್ವರ್ಗ ಲೋಕದೊಳಗೆ ದೇವ ಸಂಘಗಳಿಂದ ಸ್ತುತಿಸಲ್ಪಡುತ್ತಲಿದ್ದ ದೇವೇಂದ್ರನನ್ನು ದೇವ ರಾಜ್ಯದಲ್ಲಿ ಪಟ್ಟಾಭಿಷೇಕ ಮಾಡಿದಂತೆಯೇ ಆ ಪಾತಾಳ ಲೋಕದೊಳಗೆ ಸರ್ವಲೋಕ ಸ್ತುತ್ಯನಾದ ಪ್ರಹ್ಲಾದನನ್ನು, ತಾನೇ ಆಜ್ಞೆ ಮಾಡಿ ಕರೆಸಿದ ಕ್ಷೀರಸಾಗರವೇ ಮೊದಲಾದ ಮಹಾ ಸಮುದ್ರಗಳ, ಗಂಗಾದಿ ಸಮಸ್ತ ನದಿಗಳ, ಸಮಸ್ತ ತೀರ್ಥ ಕ್ಷೇತ್ರಗಳ ದಿವ್ಯ ಪವಿತ್ರೋದಕ ಧಾರೆಗಳಿಂದ ದಾನವ ರಾಜ್ಯದಲ್ಲಿ ತನ್ನ ಕೈಯಿಂದಲೇ ಪಟ್ಟಾಭಿಷೇಕ ಮಾಡಿದನು.

೩೦. ಆಗ ಸಕಲ ಸುರಾಸುರರಿಂದ ಸ್ತುತಿಸಲ್ಪಡುತ್ತಿರುವ ಮಧುಸೂದನನಾದ ಶ್ರೀಮನ್ನಾರಾಯಣನು, ದೇವಾಸುರರಿಂದ ಹೊಗಳಿಸಿಕೊಳ್ಳುತ್ತಿರುವ ಪಟ್ಟಾಭಿಷಿಕ್ತನಾದ ಪ್ರಹ್ಲಾದನನ್ನು ಕಂಡು ಈ ಮಾತನ್ನು ಹೇಳಿದನು.

ಶ್ರೀ ಭಗವಂತನು ಹೇಳಿದನು :—

೩೧. ಅನಘನೇ (ನಿರ್ದೋಷಿಯೇ,) ಈ ಮೇರು ಪರ್ವತವೂ, ಭೂಮಿಯೂ

ಇಷ್ಟಾನಿಷ್ಟಫಲಂ ತ್ಯಕ್ತ್ವಾ ಸಮದರ್ಶನಯಾ ಧಿಯಾ ।
ವೀತರಾಗಭಯಕ್ರೋಧೋ ರಾಜ್ಯಂ ಸಮನುಪಾಲಯ ॥ ೩೨ ॥

ರಾಜ್ಯೇಽಸ್ಮಿನ್ಭೋಗಸಂಪೂರ್ಣೇ ದೃಷ್ಟಾನುತ್ತಮಭೂಮಿನಾ ।
ನ ಗಂತವ್ಯಸ್ತ್ವಯೋದ್ವೇಗಃ ಸ್ವರ್ಗೇ ಮಾನವಕೇಽಥವಾ ॥ ೩೩ ॥

ಚಂದ್ರ ಸೂರ್ಯ ಮಂಡಲಗಳೂ, ಎಲ್ಲಿಯವರೆಗೆ ಸ್ಥಿರವಾಗಿರುವುವೋ, ಅಷ್ಟು ಕಾಲ ಪರ್ಯಂತವೂ, ಶ್ಲಾಘ್ಯವಾದ ಗುಣಗಣಗಳಿಂದ ಪರಿಪೂರ್ಣನಾಗಿ, ದಾನವ ಚಕ್ರವರ್ತಿಯಾಗಿ ಇರು.

೩೨. ಇಷ್ಟಾನಿಷ್ಟ (ಪ್ರಿಯಾ ಪ್ರಿಯ) ಫಲಗಳನ್ನೂ ಗಮನಿಸದೆ, ಸದಾ ಸರ್ವತ್ರ ಸಮದರ್ಶಿಯಾಗಿ ರಾಗ ಭಯಕ್ರೋಧಾದಿ ಅಂತ ಶ್ಯತ್ರುಗಳಿಗೆ ತಲೆಹಾಕಲು ಅವಕಾಶಕೊಡದೆ ಅವುಗಳನ್ನು ಅಸಂಗ ಶಸ್ತ್ರದಿಂದ ನಿಗ್ರಹಿಸಿ ವಿವೇಕ ಮಯಿಯಾದ ಬುದ್ಧಿಯಿಂದ ರಾಜ್ಯವನ್ನು ಪರಿಪಾಲಿಸು.

(ಪ್ರಹ್ಲಾದನು ಆತ್ಮ ತತ್ತ್ವ ಜ್ಞಾನಿಯಾದ ಸ್ಥಿತ ಪ್ರಜ್ಞನಾಗಿರುವನು. ಅದು ಕಾರಣ ಅವನಲ್ಲಿ ಮೇಲೆ ಉದಹರಿಸಿದ ದೋಷಗಳು ಒಂದೂ ಕೂಡ ಆವಿರ್ಭವಿಸುವುದಕ್ಕೆ ಅವಕಾಶವಿಲ್ಲವು. ವಿವೇಕ ವೈರಾಗ್ಯಾದಿಗಳನ್ನೂ ಪಡೆದು ಸಂತತವೂ ಶಾಸ್ತ್ರಾಚಾರ್ಯೋಪದೇಶ ಕ್ರಮಗಳಿಂದ ಬೋಧಿತನಾಗಿ, ಶ್ರವಣ ಮನನ ನಿದಿಧ್ಯಾಸನಾದಿಗಳ ಬಲದಿಂದ ಸ್ವತಃ ವಿಚಾರಮಾಡಿ ಸ್ಥೂಣಾನಿಖನನ ನ್ಯಾಯದಂತೆ ಅತ್ಯಂತ ದೃಢವಾಗಿ ನೆಲೆಗೊಂಡ ಅದ್ವಿತೀಯಾತ್ಮ ಯಾಥಾರ್ಥ್ಯ ಜ್ಞಾನದಿಂದ ದ್ವೈತೋಪಶಮನ ಪೂರ್ವಕವಾಗಿ ಸದಾ ಆತ್ಮ ಪರಿನಿಷ್ಠಿತನಾಗಿರುವ ನಿರವದ್ಯ, ಜೀವನ್ಮುಕ್ತನಿಗೆ ಪುನಃ ದೋಷ ಪ್ರಸಕ್ತಿಯನ್ನು ಊಹಿಸುವುದಾದರೂ ಹೇಗೆ ? ಹೀಗಿರುವಾಗ ಜೀವನ್ಮುಕ್ತನಾದ ಪ್ರಹ್ಲಾದನ ವಿಷಯದಲ್ಲಿ ಈಗ ಮಾಡಿದ ಉಪದೇಶಕ್ಕೆ ಔಚಿತ್ಯವೇನು ಎಂದರೆ ನಿಜ ಪ್ರಕೃತದಲ್ಲಿ ಈ ಉಪದೇಶವು ಪ್ರಹ್ಲಾದನಿಗೆ ಬೇಕಾಗಿಲ್ಲ. ಆದರೂ ರಾಜ್ಯ ಪದವಿಯು ಸಕಲ ದುರ್ಗುಣಗಳಿಗೆ ಆಕರವು ಸರ್ವಾನರ್ಥ ಹೇತುವು ಎಂತಹ ವಿವೇಕಿಯಾದರೂ ಸದಾ ಜಾಗರೂಕನಾಗಿರಬೇಕು ಎಂದು ಸಾಮಾನ್ಯರನ್ನು ಎಚ್ಚರಿಸುವುದಕ್ಕಾಗಿ ಎಂದು ಗ್ರಹಿಸಬೇಕು.)

೩೩. ನೀನು, ಅನುತ್ತಮವಾದ ನಿತ್ಯ ನಿರತಿಶಯಾನಂದ ರೂಪ ಜ್ಞಾನಭೂಮಿಯನ್ನು ಚೆನ್ನಾಗಿ ಮನಗಂಡು ನೆಲೆಸಿರುವೆಯಾದ ಕಾರಣ, ಭೋಗಪೂರ್ಣವಾದ

ದೇಶಕಾಲಕ್ರಿಯಾಕಾರ್ಯೈರ್ಯಥಾಪ್ರಾಪ್ತಾಸು ದೃಷ್ಟಿಷು ।
ಪ್ರಕೃತಂ ಕಾರ್ಯಮಾತಿಷ್ಠ ತ್ಯಕ್ತ್ವಾ ಮಾನಸಮಾಸ್ವಭೋ ॥ ೩೪ ॥

ಅತಿದೇಹತಯೇದಂತಾಮಮತಾ ಪರಿವರ್ಜಿತಂ ।
ಭಾವಾಭಾವೇಸಮಂ ಕಾರ್ಯಂ ಕುರ್ವನ್ನಿಹ ನ ಬಾಧ್ಯಸೇ ॥ ೩೫ ॥

ಈ ರಾಜ್ಯ ವೈಭವದಲ್ಲಿಯಾಗಲೀ, ಸ್ವರ್ಗ ಮರ್ತ್ಯ ಲೋಕಗಳಲ್ಲಿಯಾಗಲಿ ಉದ್ವೇಗ ವನ್ನು ಹೊಂದಕೂಡದು.

೩೪. ಯಾದೃಚ್ಛಿಕವಾಗಿ ಆಗಿಂದಾಗ್ಗೆ ಸಂಭವಿಸಬಹುದಾದ ಶಿಷ್ಟ ರಕ್ಷಣ, ದುಷ್ಟ ಶಿಕ್ಷಣಾದಿ ಸಕಲ ರಾಜಕೀಯ ವ್ಯವಹಾರಗಳಲ್ಲಿ, ಆಯಾ ದೇಶಕಾಲ ಸಂದರ್ಭ ಗಳನ್ನು ಗಮನಿಸಿ, ಆಯಾ ಪುರುಷಾನು ರೂಪವಾಗಿ, ಅವರವರ (ದುಷ್ಕರ್ಮಗಳಿಗೆ) ಅಪರಾಧಕ್ಕೆ ತಕ್ಕಂತೆ ಪ್ರಸಕ್ತವಾಗುವ ವಧ, ಬಂಧನ, ದಂಡಾದಿ ಕಾರ್ಯಗಳನ್ನೋ ಅಥವಾ ಅವರವರ ಸತ್ಕರ್ಮಗಳಿಗೆ ತಕ್ಕಂತೆ ಸನ್ಮಾನಗಳನ್ನೋ ವಿಧಿಸುವವನಾಗು. ಹೀಗೆ ವಿಧಿಸುವಾಗ, ನಿನ್ನ ಮನಸ್ಸಿನಲ್ಲಿ ರಾಗಾದಿ ವೈಷಮ್ಯಗಳಿಗೆ ಸ್ವಲ್ಪವೂ ಆಸ್ಪದ ವನ್ನು ಕೊಡಬೇಕು.

[ಅದಂಡ್ಯಾನ್ ದಂಡಯಾನ್ ರಾಜಾ ದಂಡ್ಯಾಂಶ್ಚೈವಾಪ್ಯದಂಡಯನ್ । ಅಯಶೋ ಮಹದಾಪ್ನೋತಿ ರೌರವಂಚಾಧಿಗಚ್ಛತಿ–ನೀತಿ ಶಾಸ್ತ್ರ. "ಯಥಾಪರಾಧ ದಂಡಾನಾಂ"—ದ್ವೇಷ್ಯೋಽಪಿ ಸಮ್ಮತಃ ಶಿಷ್ಟಃ ರೋಗಾರ್ತಸ್ಯ ಯಥೌಷಧಂ । ತ್ಯಾಜ್ಯೋ ದುಷ್ಟಃ ಪ್ರಿಯೋಽಪ್ಯಾಸೀತ್ ಅಂಗುಲೀ ಪೋರಗಕ್ಷತಾ ॥ –ರಘುವಂಶ ಸರ್ಗ ೧. ಇವುಗಳನ್ನು ಗಮನಿಸಿ.]

೩೫. ಈಗ ನೀನು ಸರ್ವತ್ರ ಅಭಿಮಾನ ರಹಿತನಾಗಿ, ದೇಹೇಂದ್ರಿಯಾತಿರಿಕ್ತಾತ್ಮ ಭಾವನೆಯಿಂದ ಈ ಪಾಂಚಭೌತಿಕ ಶರೀರವನ್ನು ಅತಿಕ್ರಮಿಸಿರುವೆಯಾದ ಕಾರಣ, 'ಇದು ಇಂತಹುದು. ಇದು ನನ್ನದು' ಇತ್ಯಾದ್ಯಾಕಾರಕ ಭೇದ ಭಾವನೆಯೇ ಇಲ್ಲದೆ, ಲಾಭಾ ಲಾಭಗಳಲ್ಲಿ ಗಮನವಿಡದೆ, ಕರ್ತವ್ಯವನ್ನು ಮಾತ್ರ ಸಮವರ್ತಿಯಾಗಿ (ಏಕರೀತಿಯಾಗಿ) ಬಿಡದೆ ನಡೆಯಿಸಿಕೊಂಡು ಬರುವಿಯಾದರೆ ಆಗ ನೀನು ಹೀಗೆ ಅಸಂಗನಾಗಿ ನಿರಭಿಸಂಧಿಯಿಂದ (ಕೇವಲ ಕರ್ತವ್ಯ ಬುದ್ಧಿ ಯಿಂದ) ವ್ಯವಹರಿಸುತ್ತಿದ್ದರೂ ಆ ವ್ಯವಹಾರದಿಂದ ನಿನಗೆ ಲೇಶಮಾತ್ರವೂ ಯಾವ ತೊಂದರೆಯೂ ಸರ್ವಥಾ ಇರುವುದೇ ಇಲ್ಲ.

ದೃಷ್ಟಸಂಸಾರಪರ್ಯಾಯಸ್ತುಲಿತಾತುಲತತ್ಪದಃ ।
ಸರ್ವಂ ಸರ್ವತ್ರ ಜಾನಾಸಿ ಕಿಮನ್ಯದುಪದಿಶ್ಯತೇ ॥ ೩೬ ॥

ವೀತರಾಗಭಯಕ್ರೋಧೇ ತ್ವಯಿ ರಾಜನಿ ರಾಜತಿ ।
ನೇದಾನೀಂ ದುಃಖದುರ್ಗ್ರಂಥಿರ್ನಾಸುರಾಂದಲಯಿಷ್ಯತಿ ॥ ೩೭ ॥

ಬಾಷ್ಪಶ್ರೀರ್ನಾಸುರೀಕರ್ಣಮಂಜರೀಃ ಪ್ಲಾವಯಿಷ್ಯತಿ ।
ವನರಾಜೀಮಿವೋನ್ಮತ್ತಾ ಸರಿತ್ಪ್ರಾವೃತರಂಗಿಣೀ ॥ ೩೮ ॥

ಅದ್ಯಪ್ರಭೃತ್ಯಸಂಪ್ರಾಪ್ತದಾನವಾಮರಸಂಗರಂ ।
ನಿರ್ಮಂದರಾಂಬೋನಿಧಿವಜ್ಜಗತ್ಸ್ವಸ್ಥಮಿವ ಸ್ಥಿತಂ ॥ ೩೯ ॥

---

೩೬. ನೀನು ಈ ಸಂಸಾರದ ಸ್ವರೂಪವನ್ನೂ ಚೆನ್ನಾಗಿ ಕಂಡಿರುವೆ. ಅನುತ್ತಮವಾದ ಆ ಪರಮಾರ್ಥ ಪರಮಪದವನ್ನೂ ಚೆನ್ನಾಗಿ ವಿಚಾರಮಾಡಿ ದೃಢವಾಗಿ ಸಾಕ್ಷಾತ್ಕರಿಸಿ ಅದರಲ್ಲಿ ಪರಿನಿಷ್ಠಿತನಾಗಿರುವೆ. ಹೀಗೆ ವ್ಯವಹಾರದಲ್ಲಿಯೂ ಪರಮಾರ್ಥದಲ್ಲಿಯೂ ನೀನೇ ಕುಶಲನಾಗಿದ್ದುಕೊಂಡು ಸರ್ವತ್ರ ಸರ್ವವನ್ನೂ ಅರಿತಿರುವೆಯಾದ ಕಾರಣ, ಇನ್ನು ಬೇರೆ ನಿನಗೆ ಉಪದೇಶ ಮಾಡತಕ್ಕದು ಏನು ತಾನೇ ಇರುವುದು ? (ಯಾವುದೂ ಇಲ್ಲ.)

೩೭. ರಾಗ ಭಯಕ್ರೋಧಾದಿ ಪರಿವರ್ಜಿತನಾದ ನೀನು ಹೀಗೆ ಶ್ಲಾಘ್ಯವಾದ ರೀತಿಯಲ್ಲಿ ರಾಜ್ಯವನ್ನು ಪಾಲಿಸುತ್ತಿರಲು, ಇನ್ನು ಮೇಲೆ, (ಬಿಡಿಸುವುದಕ್ಕಾಗದ) ದುಃಖಗಳೆಂಬ ದುರ್ಗ್ರಂಥಿಗಳು ನಿನ್ನ ಪ್ರಜೆಗಳಾದ ಅಸುರರಲ್ಲಿಯೂ ಇರುವುದಿಲ್ಲ. ಅಂತೆಯೇ ಸುರರಲ್ಲಿಯೂ ಇಲ್ಲದೆ ಹೋಗಿ ನನ್ನ ಮೂಲಕ (ಆ ದುಃಖದುರ್ಗ್ರಂಥಿಯು) ಅಸುರರನ್ನು ನಾಶ ಮಾಡುವುದೂ ಇಲ್ಲ.

೩೮. ವರ್ಷರ್ತುವಿನಲ್ಲಿ ಪೂರ್ಣ ಪ್ರವಾಹ ಬಂದು, ದೊಡ್ಡ ದೊಡ್ಡದಾಗಿ ಏಳುತ್ತಿರುವ ಅಲೆಗಳಿಂದ ಕೂಡಿಕೊಂಡು ಕೂಲಂಕಷವಾಗಿ ಹರಿಯುತ್ತಿರುವ ಹುಚ್ಚು ಹೊಳೆಯು) ನದಿಯು, ತೀರದ್ವಯ ಗತವಾದ ವನಗಳ ಶ್ರೇಣಿಯನ್ನೆಲ್ಲ ತೇಲಿಸುವ ರೀತಿಯಲ್ಲಿ ಇನ್ನು ಮೇಲೆ ಅಶ್ರುಧಾರೆಯು, ರಾಕ್ಷಸವೀರ ಪತ್ನಿಯರ ಕರ್ಣ ಪ್ರಾಂತಗಳನ್ನು ನೆನೆಯಿಸುವುದಿಲ್ಲ.

೩೯. ಇಲ್ಲಿಂದ ಮುಂದಕ್ಕೆ ದೇವದಾನವರಿಗೆ (ವೈರವು ಹುಟ್ಟದೆ.), ಯುದ್ಧ

ದೇವಾಸುರ ಕುಟುಂಬಿನ್ಯೋ ಭರ್ತೃಸ್ವಂತಃಪುರೇಷು ಚ ।
ಸ್ವೇಷ್ವೇವ ಯಾಂತು ವಿಶ್ವಾಸಮಪರಸ್ಪರಮಾಹೃತಾಃ ॥ ೪೦ ॥

ಭವಬಹುಲನಿಶಾನಿತಾಂತನಿದ್ರಾ ।
ತಿಮಿರಮಪಾಸ್ಯ ಸದೋದಿತಾಶಯಶ್ರೀಃ ॥
ದನುಸುತವನಿತಾವಿಲಾಸರಮ್ಯಾಂ ।
ಚಿರಮಜಿತಾಮುಪಭುಂಕ್ಷ್ವ ರಾಜ್ಯ ಲಕ್ಷ್ಮೀಂ ॥ ೪೧ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ ಪ್ರಹ್ಲಾದಾಭಿಷೇಕೋ ನಾಮೈಕ ಚತ್ವಾರಿಂಶಃ ಸರ್ಗಃ

ಪ್ರಸಕ್ತಿಯೇ ಇಲ್ಲವಾಗಿ ಹೋಗುವ ಕಾರಣ ಈ ಜಗತ್ತೆಲ್ಲವೂ, ಮಂದರ ಪರ್ವತದ ಮಂಥನದಿಂದ ವಿವರ್ಜಿತವಾದ (ತಪ್ಪಿಸಿಕೊಂಡ) ಕ್ಷೀರ ಸಾಗರದಂತೆ ಸ್ವಸ್ಥವಾಗಿ (ಪ್ರಶಾಂತವಾಗಿ) ರುವುದು.

೪೦. ಇನ್ನೂ ಮುಂದೆಯಾದರೂ ದೇವಸ್ತ್ರೀಯರೂ, ರಾಕ್ಷಸ ಸ್ತ್ರೀಯರೂ ಪರಪುರುಷರಿಂದ ಅನ್ಯೋನ್ಯವಾಗಿ ಅಪಹರಿಸಲ್ಪಟ್ಟು ಬಂಧಿತರಾಗದೆ, ತಮ್ಮ ತಮ್ಮ ಅಂತಃಪುರಗಳಲ್ಲಿ ತಮ್ಮ ತಮ್ಮ ಪತಿಗಳೊಡನೆ ನಿರ್ಭಯವಾಗಿ ವಿಲಾಸಗೊಳ್ಳುತ್ತಾ ಸುಖದಿಂದಿರಲಿ.

೪೧. ಅಯ್ಯ ದಾನವೇಂದ್ರ, ನೀನು ಸರ್ವದಾ ಜಾಗೃತವಾಗಿರುವ ಸ್ವಪ್ರಕಾಶ ಬ್ರಹ್ಮಾತ್ಮ ಸ್ಫೂರ್ತಿಯುಳ್ಳವನಾಗಿರುವ ಕಾರಣ, ಗಾಢ ನಿದ್ರಾಪ್ರದವಾಗಿ ಅಂಧಕಾರ ಮಯವಾದ ಕೃಷ್ಣ ಪಕ್ಷದ ರಾತ್ರಿಯಂತೆ ಅತ್ಯಂತ ತಾಮಸವಾದ ಆಸುರ ಪ್ರಕೃತಿ ಸಹಜವಾದ ಮಹಾಮೋಹಾಂಧಕಾರದಿಂದ ಪರಿವರ್ಜಿತನಾಗಿಯೇ, ಅಸುರಸ್ತ್ರೀಯರ ಮತ್ತು ಶಾಂತಿದಾಂತ್ಯಾದಿಗಳ (ಶಮ-ದಮ) ವಿಲಾಸ (ಲೀಲೆ) ಗಳಿಂದ ರಮ್ಯವಾದ, ಶತ್ರುಗಳಿಂದಲೂ ಕಾಮಕ್ರೋಧಾದಿ ಷಟ್ಕದಿಂದಲೂ ಅಪರಾಜಿತವಾದ (ಪರಾಜಯ ವನ್ನು ಹೊಂದಿಸದ) ದಾನವ ರಾಜ್ಯಲಕ್ಷ್ಮಿಯನ್ನು ಸಚ್ಚಿದಾನಂದ ರೂಪಸ್ವ (ಆತ್ಮ) ರಾಜ್ಯ ಲಕ್ಷ್ಮಿಯನ್ನೂ ಏಕಕಾಲದಲ್ಲಿ (ಅನ್ಯೋನ್ಯ ವಿರೋಧ ಬರದ ಹಾಗೆ ಒಟ್ಟಿಗೆ ಹೊಂದಿಸಿಕೊಂಡು) ಬಹುಕಾಲ ಅಸಂಗನಾಗಿ ಸುಖದಿಂದ ಅನುಭವಿ ಸಿಕೊಂಡಿರು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ ಪ್ರಹ್ಲಾದೋಪಾಖ್ಯಾನದೊಳಗೆ ಪ್ರಹ್ಲಾದ ಪಟ್ಟಾಭಿಷೇಕವೆಂಬ ನಲವತ್ತೊಂದನೆಯ ಸರ್ಗವೂ

ದ್ವಿಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಇತ್ಯುಕ್ತ್ವಾ ಪುಂಡರೀಕಾಕ್ಷಃ ಸನರಾಮರಕಿನ್ನರಃ ।
ದ್ವಿತೀಯ ಇವ ಸಂಸಾರಶ್ಚಚಾಲಾಸುರಮಂದಿರಾತ್ ॥ ೧ ॥

ಪ್ರಹ್ಲಾದಾದಿವಿನಿರ್ಮುಕ್ತೈಃ ಪಶ್ಚಾತ್ಪುಷ್ಪಾಂಜಲಿವ್ರಜೈಃ ।
ಪೂರ್ಯಮಾಣೋ ವಿಹಂಗೇಶಪಾಶ್ಚಾತ್ಯಾಂಗರುಹೋತ್ಕರೈಃ ॥ ೨ ॥

ಕ್ರಮಾತ್ಕ್ಷೀರೋದಮಾಸಾದ್ಯ ವಿಸೃಜ್ಯ ಸುರವಾಹಿನೀಂ ।
ಭೋಗಿಭೋಗಾಸನೇ ತಸ್ಥೌ ಶ್ವೇತಾಬ್ಜ ಇವ ಷಟ್ಪದಃ ॥ ೩ ॥

ನಲವತ್ತೆರಡನೆಯ ಸರ್ಗ

ಶ್ರೀ ವಸಿಷ್ಠನು ಹೇಳಿದನು:—

೧. ಈ ಪ್ರಕಾರವಾಗಿ ಕಮಲಾಕ್ಷನಾದ ಶ್ರೀ ಹರಿಯು ಪ್ರಹ್ಲಾದನಿಗೆ ಹೇಳಿ, ಬಳಿಕ ಪ್ರಯಾಣೋನ್ಮುಖನಾಗಿ ನರ, ಸುರ, ಕಿನ್ನರರೇ ಮೊದಲಾದ ಪರಿವಾರದಿಂದ ಪರಿವೃತನಾಗಿ, (ಅದು ಕಾರಣವೇ) ಅತಿ ವಿಸ್ತೃತವಾದ ಎರಡನೆಯ (ಬೇರೆ) ಸಂಸಾರವೋ (ಪ್ರಪಂಚವೋ) ಎಂಬ ಭ್ರಾಂತಿಯನ್ನುಂಟುಮಾಡುತ್ತ, ಪ್ರಹ್ಲಾದನ ಮನೆಯಿಂದ ಹೊರಕ್ಕೆ ಹೊರಟನು.

೨-೩. ಬಳಿಕ ಪರಮಾತ್ಮನ ಪ್ರಯಾಣ ಕಾಲದಲ್ಲಿ ಪ್ರಹ್ಲಾದಾದಿಗಳು ಅಪರಿಮಿತ ಪುಷ್ಪಾಂಜಲಿಗಳನ್ನು ಸಮರ್ಪಿಸಿದರು. ಆ ಪುಷ್ಪಾಂಜಲಿಗಳು, ವಿಷ್ಣುವಿನ ವಾಹನವಾದ ಪಕ್ಷಿರಾಜನ (ಗರುಡನ) ಬೆನ್ನಿನ ಮೇಲೆ ಬೆಳೆದಿರುವ ರೋಮಗಳ ಮೇಲೆ ರಾಶಿ ರಾಶಿಯಾಗಿ ಬಿದ್ದಿದ್ದುವು. ಹೀಗೆ ಪಾತಾಳ ಲೋಕದಿಂದ ಪ್ರಯಾಣ ಮಾಡಿ ಕ್ರಮೇಣ ಕ್ಷೀರ ಸಮುದ್ರವನ್ನು ಸೇರಿ ಸುರನರಾದಿಗಳ ಗುಂಪುಗಳನ್ನೆಲ್ಲ (ತನ್ನ ಹಿಂದೆ ಬಂದಿದ್ದ) ಅವರವರ ಸ್ಥಳಗಳಿಗೆ ಕಳುಹಿಸಿಕೊಟ್ಟು, ಬಿಳಿದಾವರೆಯ ಮೇಲೆ ಒಂದು ಭ್ರಮರವು ಹೋಗಿ ಕುಳಿತುಕೊಳ್ಳುವಂತೆ, ಆದಿಶೇಷನ ದೇಹವೆಂಬ ಆಸನದ ಮೇಲೆ ಕುಳಿತುಕೊಂಡನು.

ಭೋಗಿಭೋಗಾಸನೇ ವಿಷ್ಣುಃ ಶಕ್ರಃ ಸ್ವರ್ಗೇ ಸಹಾಮರೈಃ ।
ಪಾತಾಲೇ ದಾನವಾಧೀಶ ಇತಿ ತಸ್ಥುರ್ಗತಜ್ವರಾಃ ॥ ೪ ॥

ಏಷಾ ತೇ ಕಥಿತಾ ರಾಮ ನಿಃಶೇಷಮಲನಾಶಿನೀ ।
ಪ್ರಾಹ್ಲಾದೀ ಬೋಧಸಂಪ್ರಾಪ್ತಿರೈಂದವದ್ರವಶೀತಲಾ ॥ ೫ ॥

ತಾಂ ತು ಯೇ ಮಾನವಾ ಲೋಕೇ ಬಹುದುಷ್ಕೃತಿನೋಽಪಿ ಹಿ ।
ಧಿಯಾ ವಿಚಾರಯಿಷ್ಯಂತಿ ತೇ ಪ್ರಾಪ್ಸ್ಯಂತ್ಯಚಿರಾತ್ಪದಂ ॥ ೬ ॥

---

೪. ಆದಿಶೇಷನ ದೇಹವೆಂಬ ಆಸನದ ಮೇಲೆ ವಿಷ್ಣುವೂ, ಸ್ವರ್ಗದಲ್ಲಿ ಸಕಲ ಸುರರೊಡನೆ ಇಂದ್ರನೂ, ಪಾತಾಳದಲ್ಲಿ ಅಸುರರೊಡನೆ ಪ್ರಹ್ಲಾದನೂ ಹೀಗೆ ಈ ಮೂವರೂ, ಯಾವ ವಿಧ ಸಂತಾಪವೂ ಇಲ್ಲದವರಾಗಿ ಸುಖದಿಂದಿದ್ದರು.

೫. ರಾಮ, ಪ್ರಹ್ಲಾದನಿಗೆ ಜ್ಞಾನ ಪ್ರಾಪ್ತಿಯಾದ ಈ ಆಖ್ಯಾಯಿಕೆಯನ್ನು ಸವಿಸ್ತರವಾಗಿ ಇದೋ ಈರೀತಿಯಾಗಿ ನಿನಗೆ ಹೇಳಿರುವೆನು. ಇದನ್ನು ವಿಚಾರ ಮಾಡಿದರೆ, ಮಾನಸಿಕವಾದ ಅಜ್ಞಾನವೆಂಬ ಮಲವು ನಿಶ್ಶೇಷವಾಗಿ ತೊಳೆದು ಹೋಗುವುದು. ಮತ್ತು ಚಂದ್ರನ ಅಮೃತ ಮಯವೂ, ಸುಶೀತಲವೂ ಆದ ಚಂದ್ರಿಕೆಯು ತಾಪ ಪರಿಹಾರ ಮಾಡುವಂತೆ, ಇದೂ ಸಾಂಸಾರಿಕ ತಾಪಗಳನ್ನು ಆತ್ಯಂತಿಕವಾಗಿ ಶಮನಗೊಳಿಸುವುದು.

೬. ಇಂತಹ ಈ ಪ್ರಹ್ಲಾದೋಪಾಖ್ಯಾನವನ್ನು ಯಾವ ಜನರು ಈ ಲೋಕ ದಲ್ಲಿ ವಿವೇಕ ಪೂರ್ಣವಾದ ಬುದ್ಧಿಯಿಂದ ಚೆನ್ನಾಗಿ ವಿಚಾರ ಮಾಡುತ್ತಾರೆಯೋ, ಅವರು ಅನೇಕಾನೇಕ ಮಹಾ ಪಾಪ ಕರ್ಮಗಳನ್ನು ಮಾಡಿದವರಾದರೂ, ಆ ಪಾಪ ಗಳನ್ನೆಲ್ಲ ಪರಿಹರಿಸಿಕೊಂಡು ಅತಿ ಕ್ಷಿಪ್ರದಲ್ಲಿ ಪರಮ ಪದವನ್ನು ಹೊಂದುವರು. (ಜ್ಞಾನ ಪ್ರಾಪ್ತಿಗೆ ತಕ್ಕ ಯೋಗ್ಯತೆಯನ್ನು ಪಡೆಯುವರು.)

[ಜ್ಞಾನಮುತ್ಪದ್ಯತೇ ಪುಂಸಾಂ ಕ್ಷಯಾತ್ ಪಾಪಸ್ಯ ಕರ್ಮಣಃ. ಯಥಾ ದರ್ಶತಲ ಪ್ರಖ್ಯೇ ಪಶ್ಯತ್ಯಾತ್ಮಾನಮಾತ್ಮನಿ–ಮೋಕ್ಷ ಧರ್ಮ. ಮನುಷ್ಯರ ಪಾಪ

ಸಾಮಾನ್ಯೇನ ವಿಚಾರೇಣ ಕ್ಷಯಮಾಯಾತಿ ದುಷ್ಕೃತಂ ।
ಯೋಗವಾಕ್ಯವಿಚಾರೇಣ ಕೋ ನ ಯಾತಿ ಪರಂ ಪದಂ ॥ ೭ ॥

ಅಜ್ಞಾನಮುಚ್ಯತೇ ಪಾಪಂ ತದ್ವಿಚಾರೇಣ ನಶ್ಯತಿ ।
ಪಾಪಮೂಲಚ್ಛಿದಂ ತಸ್ಮಾದ್ವಿಚಾರಂ ನ ಪರಿತ್ಯಜೇತ್ ॥ ೮ ॥

ಇಮಾಂ ಪ್ರಹ್ಲಾದಸಂಸಿದ್ಧಿಂ ಪ್ರವಿಚಾರಯತಾಂ ನೃಣಾಂ ।
ಸಪ್ತಜನ್ಮಕೃತಂ ಪಾಪಂ ಕ್ಷಯಮಾಯಾತ್ಯಸಂಶಯಂ ॥ ೯ ॥

ಪರಿಹಾರವಾದ ಕೂಡಲೆ ಆತ್ಮತತ್ತ್ವ ವಿಚಾರದಿಂದ ಆತ್ಮ ಸಾಕ್ಷಾತ್ಕಾರಕ್ಕೆ ಅನುಕೂಲವಾದ ತತ್ತ್ವ ಜ್ಞಾನವು ಉದಯಿಸುವುದು.]

೭. ಯಾವುದಾದರೊಂದು ಸತ್ಕಥಾ ಕಾಲಕ್ಷೇಪ ರೂಪ ಸಾಮಾನ್ಯವಾದ ವಿಚಾರದಿಂದಲೂ ಕೂಡ ಮನುಷ್ಯರ ಪಾಪವೂ, ಅದಕ್ಕೆ ಹೇತುವಾದ ಅಜ್ಞಾನವೂ ಕ್ಷಯಿಸುವುವು. ಹೀಗಿರುವಾಗ ಆತ್ಮತತ್ತ್ವ ಸ್ವರೂಪವನ್ನು ತತ್ಪ್ರಾಪ್ತ್ಯುಪಾಯಗಳನ್ನೂ ಉಪದೇಶಿಸುವ ತತ್ತ್ವಮಸ್ಯಾದಿ ಮಹಾ ವಾಕ್ಯ ವಿಚಾರದಿಂದ ಯಾವನು ತಾನೇ ಪರಮ ಪುರುಷಾರ್ಥವನ್ನು ಪಡೆಯುವುದಿಲ್ಲ ?

೮. ಅಜ್ಞಾನವೆಂಬುದೇ ಪಾಪವು. ಅದು ವಿಚಾರದಿಂದ ನಾಶ ಹೊಂದುವುದು. ಅದುಕಾರಣ, ಪಾಪವಾದ ಅಜ್ಞಾನವನ್ನು ಸಮೂಲವಾಗಿ ಕತ್ತರಿಸಿ ಹಾಕಿ ನಾಶ ಮಾಡುವಂತಹ ಸಂತತವಾದ ಸಚ್ಛಾಸ್ತ್ರ ವಿಚಾರವನ್ನು ಮುಮುಕ್ಷುವಾದವನು ಎಂದಿಗೂ ಬಿಡಲೀಕೂಡದು.

೯. ನಾನು ಈಗಲೇ ನಿನಗೆ ವಿವರಿಸಿದ, ಪ್ರಹ್ಲಾದನು ಸಿದ್ಧಿಯನ್ನು ಹೊಂದಿದ ಕ್ರಮವನ್ನು, ಚೆನ್ನಾಗಿ ಮನಸ್ಸಿನಲ್ಲಿ ವಿಚಾರ ಮಾಡತಕ್ಕ ಜನರ, ಹಿಂದೆ ಏಳು ಜನ್ಮಗಳಲ್ಲಿ ಮಾಡಿರುವ ಪಾಪ ರಾಶಿಗಳೂ ಕೂಡ ನಿಸ್ಸಂದೇಹವಾಗಿ ಕ್ಷಯಿಸಿ ಹೋಗುವುವು.

[ಸಪ್ತ ಜನ್ಮಕೃತ ಪಾಪವು ನಶಿಸುವುದು ಎಂಬ ಮಾತು ಆಪಾತತಃ (ಮೇಲೆ ಮೇಲೆ) ವಿಚಾರ ಮಾಡುವುದರ ಫಲವೆಂದು ತಿಳಿಯಬೇಕು. ಜ್ಞಾನಫಲ ಪರ್ಯಂತವಾಗಿ ಬಿಡದೆ ಸಂತತವೂ ವಿಚಾರ ಮಾಡಿ ಆತ್ಮೈಕತ್ವ ಸ್ವರೂಪ ಜ್ಞಾನವನ್ನು ಪಡೆ

ಶ್ರೀ ರಾಮ ಉವಾಚ :—
ಪರೇ ಪದೇ ಪರಿಣತಂ ಪಾಂಚಜನ್ಯಸ್ವನೈರ್ಮನಃ ।
ಕಥಂ ಪ್ರಬುದ್ಧಂ ಭಗವನ್ಪ್ರಹ್ಲಾದಸ್ಯ ಮಹಾತ್ಮನಃ ॥ ೧೦ ॥

ಶ್ರೀ ವಸಿಷ್ಠ ಉವಾಚ—
ದ್ವಿವಿಧಾ ಮುಕ್ತತಾ ಲೋಕೇ ಸಂಭವತ್ಯನಘಾಕೃತೇ ।
ಸದೇಹೈಕಾ ವಿದೇಹಾನ್ಯಾ ವಿಭಾಗೋಽಯಂ ತಯೋಃ ಶ್ರುಣು ॥ ೧೧ ॥

ಅಸಂಸಕ್ತಮತೇರ್ಯಸ್ಯ ತ್ಯಾಗಾದಾನೇಷು ಕರ್ಮಣಾಂ ।
ನೈಷಣಾವತ್ಸ್ಥಿತಿಂ ವಿದ್ಧಿ ತ್ವಂ ಜೀವನ್ಮುಕ್ತತಾಮಿಹ ॥ ೧೨ ॥

ದರೋ, ತತ್ ಕ್ಷಣವೇ ಇಲ್ಲಿಯೇ ಮುಕ್ತನಾಗಿಬಿಡುವನು. ಪ್ರಾರಬ್ಧ ಫಲಾತಿರಿಕ್ತ ಸರ್ವ ಪಾಪಕ್ಷಯವೂ ಉಂಟಾಗಿಬಿಡುವುದು ಎಂದು ತಾತ್ಪರ್ಯ.)

ಶ್ರೀರಾಮನು ಕೇಳಿದನು :—

೧೦. ಪೂಜ್ಯರೇ, ಮಹಾತ್ಮನಾದ ಪ್ರಹ್ಲಾದನ ಮನಸ್ಸು ಸಮಾಧಿ ನಿಷ್ಠವಾಗಿ ನಿರತಿಶಯಾನಂದ ಸ್ವಾತ್ಮರೂಪ ಪರಮ ಪದದಲ್ಲಿ ವಿಶ್ರಾಂತವಾಗಿದ್ದಿತು. ಹೀಗಿದ್ದ ಮನಸ್ಸು ಮಹಾ ವಿಷ್ಣುವಿನ ಪಾಂಚಜನ್ಯವೆಂಬ ಶಂಖನಾದವನ್ನು ಕೇಳಿ ಒಡನೆಯೇ ಬಹಿರ್ಮುಖವಾಗಿ ಎಚ್ಚೆತ್ತುದು ಹೇಗೆ? ಜೀವನ್ಮುಕ್ತನಿಗೂ, ವಿದೇಹ ಮುಕ್ತನಿಗೂ, ಯಾವ ಭೇದವೂ ಇಲ್ಲದಿರುವಾಗ ಪ್ರಹ್ಲಾದನು ಪ್ರಬುದ್ಧನಾದುದಕ್ಕೆ ಕಾರಣವೇನು? (ವಿದೇಹ ಮುಕ್ತನೂ, ಸಮಾಧಿ ಮುಕ್ತನಂತೆ ಯಾವಾಗಲಾದರೂ ಬಹಿರ್ಮುಖನಾಗುವನೇ? ಎಂಬುದು ಪ್ರಶ್ನಾರ್ಥವು.)

ಶ್ರೀ ವಸಿಷ್ಠನು ಹೇಳಿದನು :—

೧೧. ಅಜ್ಞಾನ ದೋಷರಹಿತನಾದ ರಾಮನೇ, ಲೋಕದಲ್ಲಿ ಮುಕ್ತಿಯೆಂಬುದು ಎರಡುಬಗೆಯಾಗಿರುವುದು. ಸದೇಹ ಮುಕ್ತಿ ಎಂಬುದು ಒಂದು. ವಿದೇಹ ಮುಕ್ತಿ ಎಂಬುದು ಮತ್ತೊಂದು. ಆವೆರಡನ್ನೂ ಬೇರ್ಪಡಿಸುವ (ವಿಭಾಜಕ) ಲಕ್ಷಣ ಭೇದವು, ನನ್ನಿಂದ ಈಗಲೇ ಹೇಳಲ್ಪಡುವ ಪ್ರಕಾರವುಳ್ಳುದಾಗಿರುವುದು. ಆದನ್ನು ಹೇಳುವೆನು ಕೇಳು.

೧೨. ಬಾಹ್ಯ ವಿಷಯಗಳಲ್ಲಿ ಸರ್ವತ್ರ ಅನಾಸಕ್ತವಾದ ಮತ್ತು ವಿವೇಕ ವೈರಾಗ್ಯಗಳಿಂದ ಪೂರ್ಣವಾದ ಮನಸ್ಸುಳ್ಳವನಾಗಿ ಯಾವ ಸುಕೃತಿಯು ಯಾವ

ಸ್ಯೈವ ದೇಹಕ್ಷಯೇ ರಾಮ ಪುನರ್ಜನನವರ್ಜಿತಾ ।
ವಿದೇಹಮುಕ್ತತಾ ಪ್ರೋಕ್ತಾ ತತ್ಸ್ಥಾ ನಾಯಾಂತಿ ದೃಶ್ಯತಾಂ ॥ ೧೩ ॥

ಭ್ರಷ್ಟಬೀಜೋಪಮಾ ಭೂಯೋ ಜನ್ಮಾಂಕುರವಿವರ್ಜಿತಾಃ ।
ಹೃದಿ ಜೀವದ್ವಿಮುಕ್ತಾನಾಂ ಶುದ್ಧಾ ಭವತಿ ವಾಸನಾ ॥ ೧೪ ॥

ಪಾವನೀ ಪರಮೋದಾರಾ ಶುದ್ಧ ಸತ್ವಾನುಪಾತಿನೀ ।
ಆತ್ಮಧ್ಯಾನಮಯೀ ನಿತ್ಯಂ ಸುಷುಪ್ತಸ್ಯೇವ ತಿಷ್ಠತಿ ॥ ೧೫ ॥

ಚ್ಛಿಕವಾಗಿ ಪ್ರಾಪ್ತವಾಗುವ ಇಷ್ಟಾನಿಷ್ಟ ಕರ್ಮಗಳನ್ನು ಮಾಡುವುದರಲ್ಲಿಯಾಗಲೀ, ಬಿಡುವುದರಲ್ಲಿಯಾಗಲಿ, ರಾಗಶೂನ್ಯನಾಗಿರುವನೋ ಅವನ ಅಂತಹ ಸ್ಥಿತಿಯನ್ನೇ ಜೀವನ್ಮುಕ್ತ ಸ್ಥಿತಿಯೆಂಬುದಾಗಿ ನೀನು ತಿಳಿ.

೧೩-೧೪. ಈಗ ಕಾಣುತ್ತಿರುವ ಈ ದೇಹ ಧಾರಣೆಗೆ ಹೇತುವಾದ ಪ್ರಾರಬ್ಧ ಕರ್ಮವು ಭೋಗದಿಂದ ಕ್ಷಯ ಹೊಂದಿದ (ಕ್ಷೀಣವಾದ) ಕ್ಷಣದಲ್ಲಿಯೇ, ಈ ಜೀವನ್ಮುಕ್ತ ಸ್ಥಿತಿಯೇ ವಿದೇಹ ಮುಕ್ತಿಯೆನ್ನಿಸುವುದು. ಇಂತಹ ವಿದೇಹ ಮುಕ್ತಿಯು ಉಂಟಾದಮೇಲೆ ಪುನಃ ಜನ್ಮಾಂತರವು ಇರುವುದಿಲ್ಲ. ವಿದೇಹ ಮುಕ್ತರು ದೃಷ್ಟಿ ಗೋಚರರಾಗುವುದೂ ಇಲ್ಲ. ಹುರಿದ ಬೀಜಗಳು ಭೂಮಿಯಲ್ಲಿ ಬಿತ್ತಿದರೂ, ಅಂಕುರಿಸದೆ ಇರುವಂತೆ ಈ ವಿದೇಹ ಮುಕ್ತರೂ ಕೂಡ, (ಜ್ಞಾನಾಗ್ನಿ ದಗ್ಧವಾದ ಜನ್ಮಾಂತರಾರಂಭಕ ಕರ್ಮಗಳುಳ್ಳವರಾಗಿ) ಜನ್ಮಾಂಕುರ ಶೂನ್ಯರಾಗಿರುವರು. (ಪುನಃ ದೇಹಗಳೇ ಇಲ್ಲದಿರುವಾಗ ಅವರು ಗೋಚರವಾಗುವುದೆಂತು ?).

(" ಜ್ಞಾನಾಗ್ನಿ ದಗ್ಧ ಕರ್ಮಾಣಂ ತಮಾಹುಃ ಪಂಡಿತಂಬುಧಾಃ " -ಗೀತಾ.)

೧೫. ಜೀವನ್ಮುಕ್ತರಾದವರ ಹೃದಯದಲ್ಲಿ, ಕೇವಲ ಶುದ್ಧ ಸತ್ವಾನುಸಾರಿಯಾಗಿಯೂ, ಶುದ್ಧ ಬ್ರಹ್ಮಾತ್ಮ ಭಾವನೆಯಿಂದ ಪವಿತ್ರವಾಗಿಯೂ, ತೃಷ್ಣಾ, ಕಾರ್ಪಣ್ಯ ದೈನ್ಯಾದಿಗಳಿಂದ ವಿರಹಿತವಾಗಿಯೂ, ಅವಿದ್ಯಾದಿ ಮಲರಹಿತವಾಗಿಯೂ ಇರುವ ವಾಸನೆಯು ಇರುವುದು. ಜೀವನ್ಮುಕ್ತನ ಅಂತಃಕರಣವು ಸ್ವಾತ್ಮ(ಬ್ರಹ್ಮ) ರೂಪದಲ್ಲಿ ಲೀನವಾಗಿದ್ದರೂ, ಸುಷುಪ್ತನಿಗೆ ಇರುವಂತೆ, ಈ ವಾಸನೆಯು ಆತ್ಮ ಧ್ಯಾನಮಯಿಯಾಗಿ ಇರುವುದು.

ಅಪಿ ವರ್ಷಸಹಸ್ರಾಂತೇ ತಥೈವಾಂತರವಸ್ಥಯಾ ।
ಸತಿ ದೇಹೇ ಪ್ರಬುಧ್ಯಂತೇ ಜೀವನ್ಮುಕ್ತಾ ರಘೂದ್ವಹ ॥ ೧೬ ॥

ಪ್ರಹ್ಲಾದೋಽಂತಸ್ಥಯಾ ಶುದ್ಧ ಸತ್ತ್ವವಾಸನಯಾ ಸ್ವಯಾ ।
ಬೋಧಮಾಪ ಮಹಾಬಾಹೋ ಶಂಖಶಬ್ದಾವಬುದ್ಧಯಾ ॥ ೧೭ ॥

ಹರಿರಾತ್ಮಾ ಹಿ ಭೂತಾನಾಂ ಯಸ್ಯ ಯತ್ಪ್ರತಿಭಾಸತೇ ।
ತತ್ತಥೈವ ಭವತ್ಯಾಶು ಸರ್ವಮಾತ್ಮೈವ ಕಾರಣಂ ॥ ೧೮ ॥

---

೧೬. ಶರೀರ ಧಾರಣ ಹೇತುವಾದ ಪ್ರಾರಬ್ಧ ಶೇಷವಿರುವವರೆಗೂ ಸಮಾಧಿಯಲ್ಲಿ ಸಾವಿರಾರು ವರ್ಷಗಳು ಕಳೆದರೂ ಕೂಡ ಕೊನೆಯಲ್ಲಿಯಾದರೂ ಅಂತರ್ಗತವಾಗಿರುವ ಈ ವಾಸನೆಯ ವಶದಿಂದಲೇ, ಜೀವನ್ಮುಕ್ತರಾಗಿರತಕ್ಕವರು ಮತ್ತೆ ಪ್ರಬುದ್ಧರಾಗುವರು.

೧೭. ಮಹಾ ಬಾಹುವಾದ ರಾಮನೇ, ಹೀಗೆ ಪ್ರಹ್ಲಾದನೂ ಕೂಡ, ತನ್ನ ಹೃದಯಾಂತರ್ಗತವಾಗಿದ್ದ ಶುದ್ಧ ಸತ್ವಮಯವಾದ ಸ್ವಕೀಯ ವಾಸನೆಯಿಂದಲೇ ಪ್ರಬೋಧವನ್ನು ಹೊಂದಿದನು. ಆ ವಾಸನೆಯು ಶ್ರೀ ಹರಿಯು ಮಾಡಿದ ಶಂಖ ಧ್ವನಿಯಿಂದ ಆಗ ಉದ್ಬೋಧವನ್ನು ಹೊಂದಿತು.

೧೮. (ಸಮಾಧಿನಿಷ್ಠನ ಮನಸ್ಸು ಇಂದ್ರಿಯಗಳೊಡನೆ ಸ್ವಾತ್ಮ ರೂಪದಲ್ಲಿ ಲೀನವಾಗಿರುವ ಕಾರಣ, ಕಿವಿಗಳು ಶಬ್ದಗ್ರಹಣ ಮಾಡುವುದಿಲ್ಲ. ಯಾವ ಇಂದ್ರಿಯವೂ ವಿಷಯವನ್ನು ಗ್ರಹಿಸುವುದಿಲ್ಲ. ಇದು ಲೋಕ ವಿದಿತವಾದದ್ದು. ಹೀಗಿರುವಾಗ ಸಮಾಧಿನಿಷ್ಠನಾಗಿದ್ದ ಪ್ರಹ್ಲಾದನ ಕಿವಿಯು (ಶ್ರೋತ್ರವು) ಶಂಖಧ್ವನಿಯನ್ನು ಗ್ರಹಣ ಮಾಡುವುದೆಂತು? ಅದನ್ನು ಕೇಳಿದ ಮಾತ್ರದಿಂದಲೇ ಅವನ ವಾಸನೆಯು ಉದ್ಬುದ್ಧವಾಗಿ ಅವನು ಬಹಿರ್ಮುಖನಾದುದು ಹೇಗೆ? ಎಂದರೆ), ಶ್ರೀ ಹರಿಯು ಸಮಸ್ತ ಭೂತಗಳಿಗೂ ಆತ್ಮನು. ಅವನಿಗೆ ಯಾವಾಗ, ಯಾವುದು ಹೇಗೆ ಭಾಸಿಸುವುದೋ ಅದೆಲ್ಲವೂ ಹಾಗೆಯೇ ಆ ಕ್ಷಣವೇ ಅತ್ಯವಶ್ಯವಾಗಿ ಆಗಿಬಿಡುವುದು. ಆತ್ಮನೇ ಸರ್ವ ಕಾರಣನು. ಸತ್ಯ ಸಂಕಲ್ಪನು.

(ಈಶ್ವರಃ ಸರ್ವ ಭೂತಾನಾಂ ಹೃದ್ದೇಶೇ ಅರ್ಜುನ ತಿಷ್ಠತಿ । ಭ್ರಾಮಯನ್ ಸರ್ವ ಭೂತಾನಿ ಯಂತ್ರಾರೂಢಾ ಮಾಯಯಾ. -ಗೀತಾ. ೧೮-೬೧.

ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ. -ಗೀತಾ ೧೩-೨.)

ಪ್ರಬೋಧಮೇತು ಪ್ರಹ್ಲಾದೋ ಯದೈವೇತಿ ವಿಚಿಂತಿತಂ ।
ನಿಮೇಷಾದ್ವಾಸುದೇವೇನ ತದೈವೈತದುಪಸ್ಥಿತಂ ॥ ೧೯ ॥

ಅತ್ಮನ್ಯಕಾರಣೇನೈವ ಭೂತಾನಾಂ ಕಾರಣೇನ ಚ ।
ಸೃಷ್ಟ್ಯರ್ಥಂ ವಪುರಾತ್ತಂಹಿ ವಾಸುದೇವಮಯಾತ್ಮನಾ ॥ ೨೦ ॥

ಆತ್ಮಾವಲೋಕನೇನಾಶು ಮಾಧವಃ ಪರಿದೃಶ್ಯತೇ ।
ಮಾಧವಾರಾಧನೇನಾಶು ಸ್ವಯಮಾತ್ಮಾವಲೋಕ್ಯತೇ ॥ ೨೧ ॥

---

೧೯. "ಪ್ರಹ್ಲಾದನು ಸಮಾಧಿಯನ್ನು ಬಿಟ್ಟು ಬಹಿರ್ಮುಖನಾಗಲಿ" ಎಂದು ಯಾವಾಗ, ಶ್ರೀ ವಾಸುದೇವನಿಂದ ಮನಸ್ಸಿನಲ್ಲಿ ಸಂಕಲ್ಪಿಸಲ್ಪಟ್ಟಿತೋ ಆಗಲೇ ಆ ಕ್ಷಣದಲ್ಲಿಯೇ ಪ್ರಹ್ಲಾದನಿಗೆ ಹಾಗೆಯೇ ಪ್ರಬೋಧವುಂಟಾಯಿತು.

೨೦. ಪರಮಾತ್ಮನು ವಸ್ತುತಃ ಶುದ್ಧಾತ್ಮನು, ನಿರ್ಗುಣನು, ಅಕಾರಣನು. ಆದರೂ ಅವ್ಯಾಕೃತ ಸ್ವರೂಪದಿಂದ ಸರ್ವ ಭೂತಗಳಿಗೂ ಕಾರಣನೆನ್ನಿಸುವನು. ಸ್ವಾತ್ಮನಲ್ಲಿಯೇ ಉಂಟಾದ ಕಾಮ ಕರ್ಮಗಳೆಂಬ ನಿಮಿತ್ತದಿಂದ ವಾಸುದೇವ ಮಯ ಸ್ವರೂಪನಾಗಿ ಜಗತ್ಸೃಷ್ಟಿಗಾಗಿ ಶರೀರ ಗ್ರಹಣ ಮಾಡುವನು. ಇದು ಶ್ರುತಿ, ಸ್ಮೃತಿ ಪುರಾಣೇತಿಹಾಸ ಪ್ರಸಿದ್ಧವು.

[ಅಜೋಽಪಿಸನ್ ಅವ್ಯಯಾತ್ಮಾ ಭೂತಾನಾಮೀಶ್ವರೋಽಪಿಸನ್ । ಪ್ರಕೃತಿಂ ಸ್ವಾಂ ಅಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥ ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ । ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥ ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ । ಧರ್ಮ ಸಂಸ್ಥಾಪ ನಾರ್ಥಾಯ ಸಂಭವಾಮಿ ಯುಗೇಯುಗೇ ॥ ಭಗವದ್ಗೀತಾ. ೬-೭-೮ ಇತ್ಯಾದಿ.]

೨೧. ತಾತ್ತ್ವಿಕವಾದ ಯಥಾ ಭೂತಾತ್ಮ ದರ್ಶನದಿಂದ, ತತ್‌ಕ್ಷಣವೇ ಪರ ಮಾತ್ಮನು ಗೋಚರನಾಗುವನು. ಮಾಧವನ ಆರಾಧನೆಯಿಂದ, ಶೀಘ್ರದಲ್ಲಿ ತಾನಾ ಗಿಯೇ ಸುಲಭವಾಗಿ ಆತ್ಮದರ್ಶನವು ಲಭಿಸುವುದು.

ಏತಾಂ ದೃಷ್ಟಿಮವಷ್ಟಭ್ಯ ರಾಘವಾತ್ಮಾವಲೋಕನೇ ।
ವಿಹರಾಶು ವಿಚಾರಾತ್ಮಾ ಪದಂ ಪ್ರಾಪ್ಸ್ಯಸಿ ಶಾಶ್ವತಂ ॥ ೨೨ ॥

ದುಃಖಾಸಾರವತೀ ರಾಮ ಸಂಸಾರಪ್ರಾವೃಧಾತತಾ ।
ಜಾಡ್ಯಂ ದದಾತಿ ಪರಮಂ ವಿಚಾರಾರ್ಕಮಪಶ್ಯತಾಂ ॥ ೨೩ ॥

ಪ್ರಸಾದಾದಾತ್ಮನೋ ವಿಷ್ಣೋರ್ಮಾಯೇಯಮತಿಭಾಸುರಾ ।
ಪ್ರಬಾಧತೇ ನ ಧೀರಾಂಸ್ತು ಯಕ್ಷೀ ಮಂತ್ರವತೋ ಯಥಾ ॥ ೨೪ ॥

೨೨, ರಾಘವನೇ, ನೀನೂ ಈ ಪ್ರಕಾರವಾದ ಜ್ಞಾನ ದೃಷ್ಟಿಯನ್ನು ಆಶ್ರಯಿಸಿಕೊಂಡು ಆತ್ಮದರ್ಶನಕ್ಕಾಗಿ ವಿಶೇಷವಾಗಿ ಪ್ರಯತ್ನಮಾಡು. ಹೀಗೆ ನೀನು ಸಂತತವೂ ಚಿರಕಾಲ, ತತ್ತ್ವ ಜ್ಞಾನೋದಯವಾಗುವವರೆವಿಗೆ ಆತ್ಮ ಸ್ವರೂಪವನ್ನು ವಿಚಾರಮಾಡುತ್ತ ಬಂದರೆ, ಕ್ರಮೇಣ ತತ್ತ್ವ ಜ್ಞಾನೋದಯವಾಗಿ ಶಾಶ್ವತವಾದ ಪರಮ ಪದವು (ಮೋಕ್ಷವು) ನಿನಗೆ ನಿಜವಾಗಿಯೇ ದೊರಕುವುದು.

೨೩. ರಾಮಚಂದ್ರನೇ, ಅತಿದೀರ್ಘವಾದ ವರ್ಷಾಕಾಲವೆಂಬ ಈ ಸಂಸಾರವು ನಾನಾವಿಧ ದುಃಖ ಪರಂಪರೆಗಳೆಂಬ ಧಾರಾಕಾರವಾದ ವೃಷ್ಟಿಗಳನ್ನು ಸುರಿಸುತ್ತಾ ಬಹುವಾಗಿ ಹರಡಿಕೊಂಡಿರುವುದು. ಪರಮ ಶ್ಲಾಘ್ಯವಾದ (ವೇದಾಂತ ಶಾಸ್ತ್ರದ ಮೂಲಕ) ಆತ್ಮ ತತ್ತ್ವ ವಿಚಾರವೆಂಬ ಸೂರ್ಯನನ್ನು ದರ್ಶನಮಾಡದೆಯೇ ಅತ್ಯಂತ ದುರ್ದಿನಗಳಲ್ಲಿ ನರಳುತ್ತಿರುವ ದೀನರಿಗೆ (ಅತಿಯಾದ ಶೈತ್ಯವನ್ನೂ ಮೌಢ್ಯವನ್ನೂ) ಜಾಡ್ಯವನ್ನು ಉಂಟುಮಾಡುವುದು.

೨೪. ಆದರೆ ಸರ್ವಪಿಶಾಚಗಳೂ ಭೀರುಗಳನ್ನು ಹಿಂಸಿಸುತ್ತವೆಯೇ ಹೊರತು, ಮಂತ್ರ ಸಿದ್ಧರಾದ ಧೀರರನ್ನು ಎಂದಿಗೂ ಪೀಡಿಸುವುದಿಲ್ಲ. ಅಂತೆಯೇ ಅತಿಭಾಸ್ವರ (ಮಹಾ ಪ್ರತಾಪಶಾಲಿ) ವಾದ ಈ ಮಾಯೆಯು ಸರ್ವಾತ್ಮನಾದ ವಿಷ್ಣುವಿನ ಅನುಗ್ರಹದಿಂದ ಧೀರರಾದ ವಿವೇಕಿಗಳನ್ನು ಎಂದಿಗೂ ಹಿಂಸಿಸುವುದೇ ಇಲ್ಲ.

ಆತ್ಮೇಚ್ಛಯೈವ ಘನತಾಂ ಸಮುಪಾಗತಾಂತ
ರಾತ್ಮೇಚ್ಛಯೈವ ತನುತಾಮುಪಯಾಂತಿ ಕಾಲೇ ||
ಸಂಸಾರಜಾಲರಚನೇಯ ಮನಂತಮಾಯಾ
ಜ್ವಾಲೇಹ ವಾತವಲಯಾದಿವ ಪಾವಕಸ್ಯ || ೨೫ ||

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ “ಪ್ರಹ್ಲಾದ ವ್ಯವಸ್ಥಾನಾಮ” ದ್ವಿಚತ್ವಾರಿಂಶಃ ಸರ್ಗಃ.

---

೨೫. ಈ ಸಂಸಾರಜಾಲ ರಚನೆ ಯೆಂಬುದೇ ಅನಂತನಾದ ವಿಷ್ಣುವಿನ ಮಾಯೆಯು. ಅಗ್ನಿ ಜ್ವಾಲೆಯು ವಾಯುವು ಬೀಸಿದ ಹಾಗೆಲ್ಲಾ ಕೆಲವು ವೇಳೆ ಹೆಚ್ಚುತ್ತಲೂ ಕೆಲವು ವೇಳೆ ತಗ್ಗುತ್ತಲೂ ಇರುವಂತೆ, ಆತ್ಮ ಸ್ವರೂಪನಾದ ವಿಷ್ಣುವಿನ ಇಚ್ಛೆಯಿಂದಲೇ ಹೃದಯದೊಳಗೆ ವಿಚಾರ ಶೂನ್ಯವಾದ ಕೆಲವು ವೇಳೆ ದೇಹಾದಿಗಳೆಂಬ ಘನವಾದ ಅನರ್ಥಭಾವವನ್ನು ಹೊಂದಿ ವೃದ್ಧಿಯಾಗುತ್ತಲೂ, ಮತ್ತೆ ಕಾಲಾಂತರದಲ್ಲಿ ಆತ್ಮೇಚ್ಛೆಯಿಂದಲೇ, ವಿಚಾರ ದಶೆಯಲ್ಲಿ ಕೃಶವಾಗುತ್ತಲೂ ಇರುವುದು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ಮಹಾರಾಮಾಯಣದ ಉಪಶಮ ಪ್ರಕರಣದಲ್ಲಿ ಪ್ರಹ್ಲಾದೋಪಾಖ್ಯಾನದೊಳಗೆ “ಪ್ರಹ್ಲಾದ ವ್ಯವಸ್ಥೆ” ಎಂಬ ನಲವತ್ತೆರಡನೆಯ ಸರ್ಗವು

ತ್ರಿಚತ್ವಾರಿಂಶಃ ಸರ್ಗಃ

ಶ್ರೀ ರಾಮ ಉವಾಚ :—

ಭಗವನ್ಸರ್ವಧರ್ಮಜ್ಞ ಶುದ್ಧೈಸ್ತ್ವದ್ವಚನಾಂಶುಭಿಃ ।
ನಿರ್ವೃತಾಃ ಸ್ಮ ಶಶಾಂಕಸ್ಯ ಕರೈರೋಷಧಯೋ ಯಥಾ ॥ ೧ ॥

ಕರ್ಣಾಭಿವಾಂಛ್ಯಮಾನಾನಿ ಪವಿತ್ರಾಣಿ ಮೃದೂನಿ ಚ ।
ಸುಖಯಂತಿ ಗೃಹೀತಾನಿ ಪುಷ್ಪಾಣೀವ ವಚಾಂಸಿ ತೇ ॥ ೨ ॥

ಪೌರುಷೇಣ ಪ್ರಯತ್ನೇನ ಸರ್ವಮಾಸಾದ್ಯತೇ ಯದಿ ।
ಪ್ರಹ್ಲಾದಸ್ತತ್ಕಥಂ ಬುದ್ಧೋ ನ ಮಾಧವವರಂ ವಿನಾ ॥ ೩ ॥

ನಲವತ್ತ ಮೂರನೆಯ ಸರ್ಗ

ಶ್ರೀ ರಾಮನು ಕೇಳಿದನು :—

೧-೨-೩. ಸರ್ವಧರ್ಮಜ್ಞರಾದ ಪೂಜ್ಯರೇ, ಚಂದ್ರನ ನಿರ್ಮಲವಾದ ಮತ್ತು ತಂಪಾದ ಕಿರಣಗಳಿಂದ ಓಷಧಿಗಳು ಆಪ್ಯಾಯನವನ್ನು ಹೊಂದುವಂತೆ ಅನಘಗಳಾದ ತಮ್ಮ ದಿವ್ಯವಚನಾಮೃತಗಳಿಂದ ನಾವೆಲ್ಲರೂ ಆಹ್ಲಾದಗೊಂಡವರಾದೆವು. ಶ್ರೋತ್ರಗಳಿಂದ ಕೇಳುವುದಕ್ಕೆ ಅಪೇಕ್ಷಣೀಯಗಳಾದ, ಅಜ್ಞಾನವೆಂಬ ಪಾಪವನ್ನು ಪರಿಹರಿಸತಕ್ಕವುಗಳಾಗಿರುವ ಕಾರಣ ಅತಿ ಪವಿತ್ರವಾದ, ಮತ್ತು ಶಾಸ್ತ್ರ ಸಮ್ಮತವಾಗಿರುವ ಕಾರಣ ಕೋಮಲವಾದ (ಹೃದಯಂಗಮ) ತಮ್ಮ ಉಪದೇಶ ವಚನಗಳು ಹೃದಯದಲ್ಲಿ ಸ್ವೀಕರಿಸಲ್ಪಟ್ಟ ಕೂಡಲೆ (ಅಂದರೆ ಕಿವಿಗಳಿಂದ ಕೇಳಿ ಮನಸ್ಸಿಗೆ ತೆಗೆದುಕೊಂಡು ವಿಚಾರ ಮಾಡಿದ ಕೂಡಲೆ) ಶೋತ್ರಾವತಂಸಕಗಳಾಗಿ ಸ್ಪೃಹಣೀಯಗಳಾದ ಗುರು ದೇವತಾ ಪ್ರಸಾದ ರೂಪದಿಂದ ಪವಿತ್ರವಾದ ಮತ್ತು ಮೃದುವಾದ ಹೂಗಳಂತೆ ನಿರತಿಶಯಾನಂದವನ್ನುಂಟುಮಾಡುವುವು. ತಾವು ಪೂರ್ವದಲ್ಲಿ ಉಪದೇಶ ಮಾಡಿದಂತೆ ಪೌರುಷ ಪ್ರಯತ್ನದಿಂದಲೇ ಸಮಸ್ತವೂ ಸಿಕ್ಕುವುದು (ಲಭ್ಯವಾಗುವುದು) ಎಂಬ ತಮ್ಮ ಮಾತು ಯಥಾರ್ಥವಾಗಿದ್ದ ಪಕ್ಷದಲ್ಲಿ, ಪ್ರಹ್ಲಾದನು ಶ್ರೀ ಹರಿಯ ವರವಿಲ್ಲದೆಯೇ ಸ್ವ ಪೌರುಷ ಪ್ರಯತ್ನದಿಂದಲೇ ಏಕೆ ಪ್ರಬುದ್ಧನಾಗ

ಶ್ರೀ ವಸಿಷ್ಠ ಉವಾಚ—
ಯದ್ಯದ್ರಾಘವ ಸಂಪ್ರಾಪ್ತಂ ಪ್ರಹ್ಲಾದೇನ ಮಹಾತ್ಮನಾ ।
ತತ್ತದಾಸಾದಿತಂ ತೇನ ಪೌರುಷಾದೇವ ನಾನ್ಯತಃ ॥ ೪ ॥

ಆತ್ಮಾ ನಾರಾಯಣಶ್ಚೈವ ನ ಭಿನ್ನಸ್ತಿಲತೈಲ ವತ್ ।
ತಥೈವ ಶೌಕ್ಲ್ಯ ಪಟವತ್ಕುಸುಮಾಮೋದವತ್ತಥಾ ॥ ೫ ॥

ಯೋ ಹಿ ವಿಷ್ಣುಃ ಸ ಏವಾತ್ಮಾ ಯೋ ಹ್ಯಾತ್ಮಾಸೌ ಜನಾರ್ದನಃ ।
ವಿಷ್ಣ್ವಾತ್ಮಶಬ್ದೌ ಪರ್ಯಾಯೌ ಯಥಾ ವಿಟಪಿಪಾದಪೌ ॥ ೬ ॥

ಲಿಲ್ಲ ? (ಎಂಬೀ ನನ್ನ ಸಂದೇಹವನ್ನು ತಕ್ಕ ಸಮಾಧಾನದಿಂದ ಪರಿಹರಿಸಿಕೊಡ ಬೇಕಾಗಿ ಬೇಡುತ್ತೇನೆ ಎಂದು ಕೇಳಿದನು)

ಶ್ರೀ ವಸಿಷ್ಠನು ಹೇಳಿದನು :—

೪. ಅಯ್ಯ, ರಾಘವ, ಮಹಾತ್ಮನಾದ ಪ್ರಹ್ಲಾದನು ಯಾವ ಯಾವದನ್ನು ಪಡೆದನೋ, ಅದೆಲ್ಲವನ್ನೂ ಅವನು ತನ್ನ ಪೌರುಷ ಪ್ರಯತ್ನದಿಂದಲೇ ದೊರಕಿಸಿ ಕೊಂಡನೇ ಹೊರತು ಮತ್ತೆ ಯಾವುದರಿಂದಲೂ ಅಲ್ಲವು. (ಪುರುಷಾರ್ಥ ಸಿದ್ಧಿಯು ಲೋಕದಲ್ಲಿ ಸರ್ವರಿಗೂ ಸ್ವ ಪುರುಷಕಾರದಿಂದಲೇ ಸಾಧ್ಯವು. ಆದರೆ ಪರಮಾತ್ಮನ ಅನುಗ್ರಹವು ಅದಕ್ಕೆ ದ್ವಾರವು. ಸ್ವತಂತ್ರ ಕಾರಣವಲ್ಲ. ಅದು ಕಾರಣ ನನ್ನ ಮಾತಿ ನಲ್ಲಿ ಪೂರ್ವೋತ್ತರ ವಿರೋಧವೂ ನಿಯಮಭಂಗವೂ ಇಲ್ಲ)

೫. ಅಥವಾ, ತಿಲಗಳಲ್ಲಿಯೇ ಇದ್ದು ಹೊರಕ್ಕೆ ತೆಗೆಯಲ್ಪಟ್ಟ ತೈಲವು ತಿಲ ಕ್ಕಿಂತ ಹೇಗೆ ಭಿನ್ನವಲ್ಲವೋ, ಒಂದು ವಸ್ತ್ರದಲ್ಲಿರುವ ಧಾವಳ್ಯವು (ಶುಕ್ಲತ್ವ, ಬಿಳುಪು) ಆ ವಸ್ತ್ರಕ್ಕಿಂತ ಹೇಗೆ ಬೇರೆಯಾಗಿಲ್ಲವೋ, ಹೂಗಳಲ್ಲಿರುವ ಪರಿಮಳವು ಹೂಗಳಿಗಿಂತ ಹೇಗೆ ಪ್ರತ್ಯೇಕವಲ್ಲವೋ ಹಾಗೆಯೇ, ಪ್ರಹ್ಲಾದಾತ್ಮನೂ ಶ್ರೀಮನ್ನಾ ರಾಯಣನೂ ಇಬ್ಬರೂ ಒಂದೇ! ಭಿನ್ನರಲ್ಲವು. ಹೀಗೆ ವಿಷ್ಣುವಿಗೂ ಆತ್ಮನಿಗೂ ಭೇದ ವೇ ಇಲ್ಲವಾದ ಕಾರಣ, ವಿಷ್ಣುವಿನ ಪ್ರಸಾದದಿಂದ ಪ್ರಾಪ್ತವಾದ ವರವು ಪ್ರಹ್ಲಾದ ಪ್ರಯತ್ನದಿಂದಲೇ ಲಭ್ಯವಾದುದೆಂದು ತಿಳಿ.

೬. ವಿಷ್ಣುವೆಂಬುವನು ಯಾವನೋ ಅವನೇ ಆತ್ಮನು. ಆತ್ಮನೆಂಬುವನೇ ವಿಷ್ಣುವು. ಇದು ಪರಮಾರ್ಥವು. ವಿಷ್ಣು ಆತ್ಮ ಎಂಬೀ ಎರಡು ಶಬ್ದಗಳೂ ವಿಟಪೀ

ಪ್ರಹ್ಲಾದನಾಮಾ ಪ್ರಥಮ ಮಾತ್ಮೈವ ಸ್ವಯಮಾತ್ಮನಾ ।
ಸ್ವಯೈವ ಪರಯಾ ಶಕ್ತ್ಯಾ ವಿಷ್ಣುಭಕ್ತೌ ನಿಯೋಜಿತಃ ॥ ೭ ॥

ಪ್ರಹ್ಲಾದೋ ಹ್ಯಾತ್ಮನೈವೈನಂ ವರಮರ್ಜಿತ ವಾನ್ಸ್ವಯಂ ।
ಸ್ವಯಂ ವಿಚಾರಗಂ ಕೃತ್ವಾ ಸ್ವಯಂ ವಿದಿತವಾನ್ಮನಃ ॥ ೮ ॥

ಕದಾಚಿದಾತ್ಮನೈವಾತ್ಮಾ ಸ್ವಯಂ ಶಕ್ತ್ಯಾ ಪ್ರಬುಧ್ಯತೇ ।
ಕದಾಚಿದ್ವಿಷ್ಣುದೇಹೇನ ಭಕ್ತಿಲಭ್ಯೇನ ಬೋಧ್ಯತೇ ॥ ೯ ॥

ಚಿರಮಾರಾಧಿತೋಽಪ್ಯೇಷ ಪರಮ ಪ್ರೀತಿಮಾನಪಿ ।
ನಾವಿಚಾರವತೋ ಜ್ಞಾನಂ ದಾತುಂ ಶಕ್ನೋತಿ ಮಾಧವಃ ॥ ೧೦ ॥

ಪಾದಪಃ ಎಂಬ ಪದಗಳು ವೃಕ್ಷ ಎಂಬ ಅರ್ಥವನ್ನು ಕೊಡತಕ್ಕ ಪರ್ಯಾಯ ಶಬ್ದಗಳಾಗಿರುವಂತೆ ಸಮಾನಾರ್ಥ ಬೋಧಕಗಳಾದ ಪರ್ಯಾಯ ಶಬ್ದಗಳು.

೭. ಪ್ರಹ್ಲಾದ ನಾಮಕನಾದ ಆತ್ಮನೇ ಮೊದಲು ತಾನೇ ಆತ್ಮೀಯವಾದ ಅದ್ಭುತ ಶಕ್ತಿಯಿಂದಲೇ ತನ್ನನ್ನು ವಿಷ್ಣು ಭಕ್ತಿಯಲ್ಲಿ ವಿನಿಯೋಗಿಸಿಕೊಂಡನು.

೮. ಪ್ರಹ್ಲಾದನೂ ಕೂಡ ಸ್ವಾತ್ಮ ಭೂತನಾದ ವಿಷ್ಣುವಿನಿಂದಲೇ ತಾನೇ ಈ ವರವನ್ನು ಸಂಪಾದಿಸಿದನು. ತಾನೇ ತನ್ನ ಮನಸ್ಸನ್ನು ಆತ್ಮ ತತ್ತ್ವ ವಿಚಾರ ದಲ್ಲಿ ನೆಲೆಗೊಳ್ಳುವಂತೆ ಮಾಡಿ ತನ್ನಿಂದಲೇ ಸ್ವಾತ್ಮತತ್ತ್ವ ಜ್ಞಾನವನ್ನು ಪಡೆ ದನು.

೯. ಈ ಆತ್ಮನು ಒಂದು ಸಲ ತಾನೇ ತನ್ನನ್ನು ಕುರಿತು ತನ್ನ ಪ್ರಯತ್ನದಿಂದ ಮಾಡಿದ ವಿಚಾರ ಬಲದಿಂದ ಪ್ರಬೋಧವನ್ನು ಪಡೆಯುವನು. ಮತ್ತೊಂದು ಸಮಯದಲ್ಲಿ ಭಕ್ತಿಯೆಂಬ ಸ್ವಪ್ರಯತ್ನಲಭ್ಯನಾದ ವಿಷ್ಣುವಿನ ದೇಹದ ಮೂಲಕ ಪ್ರಬುದ್ಧನಾಗುವನು.

೧೦. ಈ ವಿಷ್ಣುವು ಬಹು ದೀರ್ಘಕಾಲ ಆರಾಧಿಸಲ್ಪಟ್ಟರೂ, ಅತ್ಯಂತ ಸುಪ್ರೀತನಾಗಿ ಅನುಗ್ರಹೋನ್ಮುಖನಾಗಿದ್ದರೂ ಕೂಡ ಸ್ವಪ್ರಯತ್ನದಿಂದ ವಿಚಾರ ಪರನಾಗದವನಿಗೆ ಎಂದೆಂದಿಗೂ ಜ್ಞಾನವನ್ನುಂಟುಮಾಡಲು ಸಮರ್ಥನಾಗುವುದಿಲ್ಲ.

ಮುಖ್ಯಃ ಪುರುಷಯತ್ನೋತ್ಥೋ ವಿಚಾರಃ ಸ್ವಾತ್ಮ ದರ್ಶನೇ |
ಗೌಣೋ ವರಾದಿತೋ ಹೇತುರ್ಮುಖ್ಯ ಹೇತುಪರೋ ಭವ || ೧೧ ||

ಪೂರ್ವಮೇವ ಬಲಾತ್ತಸ್ಮಾದಾಕ್ರಮ್ಯೇಂದ್ರಿಯ ಪಂಚಕಂ |
ಅಭ್ಯಸನ್ಸರ್ವಯತ್ನೇನ ಚಿತ್ತಂ ಕುರು ವಿಚಾರವತ್ || ೧೨ ||

---

೧೧. ರಾಮ, ವಾಸ್ತವಾಂಶವು ಹೀಗಿರುವುದರಿಂದ ಆತ್ಮ ದರ್ಶನದ ವಿಷಯದಲ್ಲಿ ಪುರುಷ ಪ್ರಯತ್ನಪೂರ್ವಕವಾದ ತತ್ತ್ವ ವಿಚಾರವೇ ಮುಖ್ಯ ಕಾರಣವು. ಈಶ್ವರಾನುಗ್ರಹ ರೂಪ ವರ ಮೊದಲಾದುವು ಗೌಣ (ಅಪ್ರಧಾನ) ಕಾರಣವು. ನೀನು (ಮುಖ್ಯ) ಪ್ರಧಾನಕಾರಣವಾದ ಸ್ವಪ್ರಯತ್ನದಿಂದ ಆತ್ಮ ತತ್ತ್ವ ವಿಚಾರಪರನಾಗು.

[ನಾಹಂ ವೇದೈಃ ನ ತಪಸಾ ನ ದಾನೇನ ನ ಚೇಜ್ಯಯಾ! ಶಕ್ಯ ಏವಂ ವಿಧೋ ದ್ರಷ್ಟುಂ ದೃಷ್ಟವಾನಸಿ ಮಾಂಯಥಾ|| ಗೀತಾ ೧೧-೫೩. ಅಭ್ಯಾಸಯೋಗ ಯುಕ್ತೇನ ಚೇತಸಾ ನಾನ್ಯ ಗಾಮಿನಾ | ಪರಮಂ ಪುರುಷಂ ದಿವ್ಯಂ ಯಾತಿ ಪಾರ್ಥಾನು ಚಿಂತಯನ್ || ಗೀತಾ ೮-೮. ಫಲಾಭಿ ಸಂಧಿ ವರ್ಜಿತವಾಗಿ ಈಶ್ವರಾರ್ಪಣ ಬುದ್ಧಿಯಿಂದ ಆಚರಿಸುವ ವಿಹಿತ ಕರ್ಮಾನುಷ್ಠಾನಾದಿ ದೇವತಾರಾಧನೆಯಿಂದ ಮನಸ್ಸು ಸಂಸ್ಕೃತವಾಗುವುದು. ವಿವೇಕ ವೈರಾಗ್ಯ ಶಮದಮಾದಿಗಳು ಉದಯಿಸುವುವು. ಬಳಿಕ ಆತ್ಮತತ್ತ್ವ ವಿಚಾರ ಪ್ರವೃತ್ತಿ, ಚಿರಕಾಲ ಸಂತತವಾದ ತತ್ತ್ವ ವಿಚಾರದಿಂದಲೇ ಆತ್ಮ ಸಾಕ್ಷಾತ್ಕಾರ ರೂಪ ತತ್ತ್ವಜ್ಞಾನ ಲಾಭ. ಅದೇ ಪರಮ ಪುರುಷಾರ್ಥ. ಗುರೂಪದೇಶವನ್ನು ಪಡೆದು ವೇದಾಂತ ವಾಕ್ಯಗಳಿಂದ ವಿಚಾರ ಮಾಡದೆ ಹೋದರೆ ತತ್ತ್ವ ಜ್ಞಾನವು ಎಂದೆಂದಿಗೂ ಸರ್ವದಾ ಉದಯಿಸುವುದೇ ಇಲ್ಲ. ಜ್ಞಾನವುಂಟಾದ ಹೊರತು ಸಂಸಾರ ಹೇತುವಾದ ಅಜ್ಞಾನವು ಧ್ವಂಸವಾಗುವುದಿಲ್ಲ. ಅದು ಕಾರಣವೇ ಇಲ್ಲಿ ಶ್ರೀ ವಸಿಷ್ಠರು ರಾಮನಿಗೆ ನೀನು ಜ್ಞಾನ ಪ್ರಾಪ್ತಿಗೆ ಮುಖ್ಯ ಸಾಧನವಾದ ವಿಚಾರವನ್ನು ಸಂತತವೂ ಬಿಡಬೇಡವೆಂದು ಉಪದೇಶಿಸಿರುವರು. ಸುಪ್ರೀತನಾದ ಹರಿಯೂ ಕೂಡ ತನ್ನ ಭಕ್ತನಿಗೆ. "ಆತ್ಮ ಜ್ಞಾನೋದಯ ಪರ್ಯಂತವೂ ನೀನು ವಿಚಾರಪರನಾಗಿರು" ಎಂದು ವರವನ್ನು ಕೊಡಬಹುದೇ ಹೊರತು "ನಿನಗೆ ಆತ್ಮ ಜ್ಞಾನವು ಲಭಿಸಲಿ" ಎಂದು ವರವನ್ನು ಕೊಡಲಾರನು ಎಂದು ತಿಳಿಯಬೇಕು.]

೧೨. ಅದು ಕಾರಣ, ನೀನು ಪ್ರಥಮದಲ್ಲಿಯೇ (ಮೊಟ್ಟಮೊದಲಲ್ಲಿ ಆರಂಭದಲ್ಲಿಯೇ) ನಿನ್ನ ವಿವೇಕ ಬಲದಿಂದ ಸಕಲೇಂದ್ರಿಯಗಳನ್ನು ನಿಗ್ರಹಿಸಿ ವಶಮಾಡಿ

ಯದ್ಯದಾಸಾದ್ಯತೇ ಕಿಂಚಿತ್ಕೇನ ಚಿತ್ತ್ವಚಿದೇವ ಹಿ ।
ಸ್ವಶಕ್ತಿ ಸಂಪ್ರವೃತ್ತ್ಯಾ ತಲ್ಲಭ್ಯತೇ ನಾನ್ಯತಃ ಕ್ವಚಿತ್ ॥ ೧೩ ॥

ಪೌರುಷಂ ಯತ್ನಮಾಶ್ರಿತ್ಯ ಪ್ರೋಲ್ಲಂಘ್ಯೇಂದ್ರಿಯ ಪರ್ವತಂ ।
ಸಂಸಾರ ಜಲಧಿಂ ತೀರ್ತ್ವಾ ಪಾರಂ ಗಚ್ಛ ಪರಂ ಪದಂ ॥ ೧೪ ॥

ವಿನಾ ಪುರುಷಯತ್ನೇನ ದೃಶ್ಯತೇ ಚೇಜ್ಜನಾರ್ದನಃ ।
ಮೃಗ ಪಕ್ಷಿಗಣಂ ಕಸ್ಮಾತ್ತದಾಸೌ ನೋದ್ಧರತ್ಯಜಃ ॥ ೧೫ ॥

ಕೊಂಡು, ಮನಸ್ಸಿನಲ್ಲಿ ನೆಲೆಸಿರುವ ಜ್ಞಾನ ವಿಜ್ಞಾನನಾಶಕವಾದ ಕಾಮವೆಂಬ ಶತ್ರುವನ್ನು ಸಂಹರಿಸಿ ಸರ್ವ ಪ್ರಯತ್ನಗಳಿಂದಲೂ ಅಭ್ಯಾಸ ಮಾಡುತ್ತ, ಯತಾತ್ಮನಾಗಿ ನಿನ್ನ ಮನಸ್ಸು ವಿಚಾರಪರವಾಗುವಂತೆ ಮಾಡು.

(ತಸ್ಮಾತ್ ತ್ವಮಿಂದ್ರಿಯಾ ದೌಣ್ಯಾನಿಯಮ್ಯ ಭರತರ್ಷಭ । ಪಾಪ್ಮಾನಂ ಪ್ರಜಹಿಹ್ಯೇನಂ ಜ್ಞಾನ ವಿಜ್ಞಾನ ನಾಶನಂ ಗೀತಾ. ೩-೪೧.)

೧೩. ಈ ಲೋಕದಲ್ಲಿ ಯಾವ ಯಾವ ಮನುಷ್ಯನು ಯಾವ ಯಾವುದನ್ನು ಯಾವ ಯಾವ ಕಾಲದಲ್ಲಿ ದೊರಕಿಸಿಕೊಳ್ಳುವನೋ, ಅದೆಲ್ಲವೂ ಆಗಾಗ ಅವನವನಿಗೆ ತನ್ನ ಶಕ್ತಿಯನ್ನು ಉಪಯೋಗಿಸಿ ಸತ್ಕಾರ್ಯಗಳಲ್ಲಿ ಪ್ರಯತ್ನಪಡುವುದರಿಂದಲೇ ಲಭ್ಯವಾಗುವುದಲ್ಲದೆ ಮತ್ಯಾವುದರಿಂದಲೂ ಸಾಧ್ಯವಲ್ಲವು.

೧೪. ರಾಮ, ನೀನು ಸರ್ವ ಪ್ರಕಾರದಿಂದಲೂ, ಸಂತತವೂ ಪುರುಷ ಪ್ರಯತ್ನವನ್ನು ಅವಲಂಬಿಸಿ, ಇಂದ್ರಿಯಗಳೆಂಬ ದುರ್ಲಂಘ್ಯವಾದ ಪರ್ವತಗಳನ್ನು ಉಲ್ಲಂಘಿಸಿ, ಅಪಾರವಾದ ಸಂಸಾರ ಸಾಗರವನ್ನು ದಾಟಿ ಅದರ ಆಚೆಯಿಂದ ಪರಮ ಪದವನ್ನು ಹೊಂದುವವನಾಗು.

೧೫. ತತ್ತ್ವ ವಿಚಾರವೆಂಬ ಪುರುಷ ಪ್ರಯತ್ನವಿಲ್ಲದೆಯೇ ಪರಮಾತ್ಮನು ಅನುಗ್ರಹಿಸಿ ತನ್ನ ಸಾಕ್ಷಾತ್ಕಾರದಿಂದ ಭಕ್ತರನ್ನು ಉದ್ಧರಿಸುವುದೇ ನಿಜವಾಗಿದ್ದರೆ, ವಿಚಾರ ಶೂನ್ಯವಾದ ಮೃಗ ಪಕ್ಷ್ಯಾದಿಗಳನ್ನು ಅನುಗ್ರಹಿಸಿ ಇವನು ಏಕೆ ಉದ್ಧರಿಸುವುದಿಲ್ಲ ?

ಗುರುಶ್ಚೇದುದ್ಧರತ್ಯಜ್ಞಮಾತ್ಮೀಯಾ ತ್ಪೌರುಷಾದೃತೇ ।
ಉಷ್ಟ್ರಂ ದಾಂತಂ ಬಲೀವರ್ದಂ ತತ್ಕಸ್ಮಾನ್ನೋದ್ಧರತ್ಯಸೌ　　　　|| ೧೬ ||

ನ ಹರೇರ್ನ ಗುರೋರ್ನಾರ್ಥಾತ್ಕಿಂಚಿದಾಸಾದ್ಯತೇ ಮಹತ್ ।
ಆಕ್ರಾಂತ ಮನಸಃ ಸ್ವಸ್ಮಾದ್ಯದಾಸಾದಿತಮಾತ್ಮನಃ　　　　|| ೧೭ ||

---

೧೬. ಸ್ವಕೀಯವಾದ ವಿಚಾರಾತ್ಮಕ ಪುರುಷ ಪ್ರಯತ್ನವೇ ಇಲ್ಲದ ಅಜ್ಞನಾದ ಶಿಷ್ಯನನ್ನು ಗುರುವು ಉದ್ಧರಿಸುವನು ಎಂದು ಹೇಳುವುದಾದರೆ, ಅದೇ ಗುರುವು ತನ್ನಲ್ಲಿ ಅತ್ಯಂತ ವಿಧೇಯವಾಗಿರುವ ಒಂಟೆಯನ್ನೋ, ಅಥವಾ ಎತ್ತನ್ನೋ ಏಕೆ ಉದ್ಧರಿಸಲಾಗದು ? (ಗುರು ಭಕ್ತಿ ಮೊದಲಾದ ಶಿಷ್ಯ ಪ್ರಯತ್ನವೇ ಗುರ್ವನು ಗ್ರಹವನ್ನು ದ್ವಾರಮಾಡಿಕೊಂಡು ಶಕ್ತಿ ಪಾತಾದಿಗಳಿಂದ ಶಿಷ್ಯನನ್ನು ವಿಚಾರಪರ ನನ್ನಾಗಿ ಮಾಡಿ ಶೀಘ್ರವಾಗಿ ಸುಲಭವಾಗಿ ಆತ್ಮ ಜ್ಞಾನವನ್ನುಂಟುಮಾಡುವುದು. ತತ್ತ್ವ ವಿಚಾರವಿಲ್ಲದೆ ಜ್ಞಾನೋದಯವಾಗುವುದೇ ಇಲ್ಲ)

೧೭. ಮನುಷ್ಯನು ತನ್ನ ಸ್ವಂತ ಪ್ರಯತ್ನದ ದೆಸೆಯಿಂದಲೇ, ವಿಚಾರ ಪೂರ್ವಕವಾಗಿ ಲಭ್ಯವಾದ ಜ್ಞಾನ ದಾರ್ಢ್ಯದಿಂದ ಮನಸ್ಸನ್ನು ಲಯಗೊಳಿಸಿಕೊಂಡು ಯಾವ ಪರಮ ಪುರುಷಾರ್ಥ ರೂಪ ಮೋಕ್ಷವನ್ನು ಪಡೆಯುವನೋ ಅಂತಹ ಮೋಕ್ಷವು ವಿಷ್ಣುವಿನ ದೆಸೆಯಿಂದಲೂ ಲಭ್ಯವಾಗುವುದಿಲ್ಲ. ಗುರುವಿನ ದೆಸೆ ಯಿಂದಲೂ ಲಭ್ಯವಲ್ಲ. ಮತ್ತು ವಿತ್ತದ ದೆಸೆಯಿಂದಲಾಗಲಿ ಅಥವಾ ವಿತ್ತ ಸಾಧ್ಯ ವಾದ ಕರ್ಮದಿಂದಲಾಗಲಿ ಸುತರಾಂ ಸಾಧ್ಯವಲ್ಲ.

[ಅಮೃತತ್ವಸ್ಯತು ನಾ-ಶಾಸ್ತಿ ವಿತ್ತೇನ–ವಿತ್ತ ಸಾಧ್ಯವಾದ ಕರ್ಮದಿಂದ ಮೋಕ್ಷದ ಆಸೆಯೂ ಇಲ್ಲ. ಬೃಹದಾರಣ್ಯಕ-ಮೈತ್ರೇಯಿಾ ಬ್ರಾಹ್ಮಣ. ಮತ್ತು ಬ್ರಹ್ಮವಿತ್ ಆಪ್ನೋತಿ ಪರಂ || ತಮೇವಂ ವಿದ್ವಾನ್ ಅಮೃತ ಇಹ ಭವತಿ–ನಾನ್ಯಃ ಪಂಥಾಃ ಅಯನಾಯ ವಿದ್ಯತೇ.] (ಅಜ್ಞಾನವು ಬಂಧ-ಅಜ್ಞಾನ ಧ್ವಂಸವೇ (ನಾಶವೇ) ಬಂಧ ನಿವೃತ್ತಿ ರೂಪ ಮೋಕ್ಷ. ಅಜ್ಞಾನಕ್ಕೆ ಜ್ಞಾನವೊಂದೇ ವಿರೋಧಿ. ಪ್ರಕಾಶವುಂಟಾದ ಕೂಡಲೆ ಕತ್ತಲೆಯು ನಾಶವಾಗುವಂತೆ, ಅಜ್ಞಾನವು ಜ್ಞಾನ ವಾದ ಕೂಡಲೆ ಸಮೂಲವಾಗಿ ತೊಲಗುವುದು. ಜ್ಞಾನದಿಂದಲೇ ಅಜ್ಞಾನ ನಾಶ ವಾಗುವುದು. ಬೇರೆ ಮಾರ್ಗವಿಲ್ಲ.)

ಅಭ್ಯಾಸ ವೈರಾಗ್ಯಯುಕ್ತಾದಾಕ್ರಾಂತೇಂದ್ರಿಯ ಪನ್ನಗಾತ್ ।
ನಾತ್ಮನಃ ಪ್ರಾಪ್ಯತೇ ಯತ್ತತ್ಪ್ರಾಪ್ಯತೇ ನ ಜಗತ್ತ್ರಯಾತ್ ॥ ೧೮ ॥

ಆರಾಧಯಾತ್ಮನಾತ್ಮಾನ ಮಾತ್ಮನಾತ್ಮಾನಮರ್ಚಯ ।
ಆತ್ಮನಾತ್ಮಾನ ಮಾಲೋಕ್ಯ ಸಂತಿಷ್ಠ ಸ್ವಾತ್ಮನಾತ್ಮನಿ ॥ ೧೯ ॥

ಶಾಸ್ತ್ರಯತ್ನ ವಿಚಾರೇಭ್ಯೋ ಮೂರ್ಖಾಣಾಂ ಪ್ರಪಲಾಯಿನಾಂ ।
ಕಲ್ಪಿತಾ ವೈಷ್ಣವೀ ಭಕ್ತಿಃ ಪ್ರವೃತ್ತ್ಯರ್ಥಂ ಶುಭಸ್ಥಿತೌ ॥ ೨೦ ॥

ಅಭ್ಯಾಸಯತ್ನೌ ಪ್ರಥಮಂ ಮುಖ್ಯೋ ವಿಧಿರುದಾಹೃತಃ ।
ತದಭಾವೇ ತು ಗೌಣಃ ಸ್ಯಾತ್ಪೂಜ್ಯ ಪೂಜಾಮಯ ಕ್ರಮಃ ॥ ೨೧ ॥

---

೧೮. ವೇದಾಂತ ಶಾಸ್ತ್ರಗಳ ಅಭ್ಯಾಸ, ವೈರಾಗ್ಯಗಳಿಂದ ಯುಕ್ತನಾಗಿಯೂ ಇಂದ್ರಿಯಗಳೆಂಬ ಸರ್ಪಗಳನ್ನು ಆಕ್ರಮಿಸಿ ನಿಗ್ರಹ ಮಾಡಿರುವವನಾಗಿಯೂ ಇರುವ ಪುಣ್ಯಾತ್ಮನಿಗೆ ಲಭ್ಯವಾಗದೆ ಇರುವ ಪರಮ ಪುರುಷಾರ್ಥವು ಈ ಮೂರು ಲೋಕಗಳೊಳಗಾಗಿ (ಜ್ಞಾನವನ್ನು ಬಿಟ್ಟು) ಮತ್ತೆ ಯಾವುದರಿಂದಲೂ, ಎಲ್ಲಿಯೂ ಲಭ್ಯವಾಗುವುದೇ ಇಲ್ಲ.

೧೯. ಆದುದರಿಂದ ನೀನು ಆತ್ಮನಿಂದಲೇ ಆತ್ಮನನ್ನು ಆರಾಧಿಸು. ಆತ್ಮನನ್ನು ಅರ್ಚಿಸು. ಆತ್ಮನಿಂದಲೇ ಆತ್ಮನನ್ನು ಸಂದರ್ಶಿಸಿ, ಆತ್ಮನಿಂದ ಆತ್ಮನಲ್ಲಿಯೇ ಪರಿನಿಷ್ಠಿತನಾಗಿರು.

೨೦. ಶಾಸ್ತ್ರಾಭ್ಯಾಸವನ್ನೂ, ಪುರುಷ ಪ್ರಯತ್ನವನ್ನೂ, ತತ್ತ್ವ ವಿಚಾರವನ್ನೂ ಬಿಟ್ಟು, ಅತ್ಯಂತ ದೂರದಲ್ಲಿ ಓಡಿಹೋಗಿರತಕ್ಕ ಅವಿವೇಕಿ ಪಶುಗಳಿಗೆ ಶ್ರೇಯಃ ಪ್ರದವಾದ ಸನ್ಮಾರ್ಗ ಪ್ರವೃತ್ತಿಯುಂಟಾಗುವುದಕ್ಕೋಸ್ಕರವಾಗಿಯೇ ಭಗವದ್ಭಕ್ತಿಯೆಂಬುದು ಶಾಸ್ತ್ರಗಳಲ್ಲಿ ವಿಹಿತವಾಗಿರುವುದು.

೨೧. ಜ್ಞಾನಲಾಭಕ್ಕಾಗಿ ಪ್ರಥಮತಃ ಶಾಸ್ತ್ರಾಭ್ಯಾಸವನ್ನೂ, ತತ್ತ್ವ ವಿಚಾರ ರೂಪ ಪ್ರಯತ್ನವನ್ನೂ ಮಾಡಬೇಕೆಂದು ಶಾಸ್ತ್ರಗಳಲ್ಲಿ ಪ್ರಧಾನವಾಗಿ ವಿಧಿಸಲ್ಪಟ್ಟಿರುವುದು. ಇವುಗಳಲ್ಲಿ ಅಸಮರ್ಥನಾದರೆ ಸಾಧಕನು ಪೂಜ್ಯನಾದ ಈಶ್ವರನನ್ನು ಆರಾಧಿಸಬೇಕು, ಧ್ಯಾನಿಸಬೇಕು. ಎಂಬೀ ಮೊದಲಾಗಿ ಗೌಣ ಕಲ್ಪವು ಉಕ್ತವಾಗಿರುವುದು. [ಈ ಸಂದರ್ಭದಲ್ಲಿ– ಮಯ್ಯೇವಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ । ನಿವಸಿಷ್ಯಸಿ ಮಯ್ಯೇವ ಅತ ಊರ್ಧ್ವಂ ನ ಸಂಶಯಃ ॥ ಅಥ ಚಿತ್ತಂ

ಅಸ್ತಿ ಚೇದಿಂದ್ರಿಯಾಕ್ರಾಂತಿಃ ಕಿಂ ಪ್ರಾಪ್ಯಂ ಪೂಜನೈಃ ಫಲಂ ।
ನಾಸ್ತಿ ಚೇದಿಂದ್ರಿಯಾಕ್ರಾಂತಿಃ ಕಿಂ ಪ್ರಾಪ್ಯಂ ಪೂಜನೈಃಫಲಂ ॥ ೨೨ ॥

ವಿಚಾರೋಪಶಮಾಭ್ಯಾಂ ಹಿ ನ ವಿನಾಸಾದ್ಯತೇ ಹರಿಃ ।
ವಿಚಾರೋಪಶಮಾಭ್ಯಾಂ ಚ ಮುಕ್ತಸ್ಯಾಬ್ಜಕರೇಣ ಕಿಂ ॥ ೨೩ ॥

ಸಮಾಧಾತುಂ ನ ಶಕ್ನೋಷಿ ಮಯಿಸ್ಥಿರಂ । ಅಭ್ಯಾಸ ಯೋಗೇನ ತತೋ ಮಾಮಿಚ್ಛಾಪ್ತುಂ ಧನಂಜಯ ॥ ಅಭ್ಯಾಸೇಪ್ಯಸಮರ್ಥೋಸಿ ಮತ್ಕರ್ಮ ಪರಮೋಭವ । ಮದರ್ಥಮಪಿ ಕುರ್ವಾಣಿ ಕುರ್ವನ್ ಸಿದ್ಧಿಮವಾಪ್ಸ್ಯಸಿ ॥ ಅಥೈತದಪ್ಯಶಕ್ತೋಸಿ ಕರ್ತುಂ ಮದ್ಯೋಗಮಾಶ್ರಿತಃ । ಸರ್ವ ಕರ್ಮ ಫಲತ್ಯಾಗಂ ತತಃ ಕುರು ಯತಾತ್ಮವಾನ್ ॥ ಗೀತಾ ೧೨. -೯ ರಿಂದ ೧೧ ಶ್ಲೋಕ. ಇವುಗಳನ್ನು ಗಮನಿಸಬೇಕು.]

೨೨. ಮುಮುಕ್ಷುವಾದವನು ಇಂದ್ರಿಯಗಳನ್ನು ಆಕ್ರಮಿಸಿ ತನ್ನ ಸ್ವಾಧೀನಪಡಿಸಿಕೊಂಡು ಬಿಟ್ಟರೆ ಆಗ ಅವನಿಗೆ ಈ ಪೂಜಾದಿಗಳಿಂದ ಹೊಂದಲ್ಪಡಬೇಕಾದ ಫಲವು ಯಾವುದು ಇರುವುದು? ಇಂದ್ರಿಯ ಜಯವಿಲ್ಲದಿದ್ದರೋ ಆಗಲೂ ಈ ಪೂಜಾದಿಗಳಿಂದ ಯಾವ ಫಲವು ತಾನೇ ಲಭಿಸುವುದು? (ಇಂದ್ರಿಯಗಳನ್ನು ನಿಗ್ರಹಿಸಿರುವ ಅಂದರೆ ಜಿತೇಂದ್ರಿಯನಾದ ವಿರಕ್ತನಿಗೆ ಪೂಜಾಪ್ರಾಪ್ಯವಾದ ಫಲವು ಯಾವುದೂ ಇಲ್ಲ. ಇಂದ್ರಿಯ ನಿಗ್ರಹ ಮಾಡದವನಿಗೆ ಪೂಜಾದಿಗಳನ್ನು ಮಾಡಿದರೂ ಪ್ರಯೋಜನವಿಲ್ಲ. ತತ್ತ್ವ ಜ್ಞಾನೋದಯಕ್ಕೆ ಸಾಧಕವಾಗಿಲ್ಲ.)

೨೩. ಶಾಸ್ತ್ರ ವಿಚಾರವೂ, ಉಪಶಾಂತಿಯೂ ಇಲ್ಲದೆ ಹೋದರೆ, ಪೂರ್ಣಾನಂದ ರೂಪನಾದ ಹರಿಯು ತಾತ್ತ್ವಿಕವಾಗಿ ಸ್ವಾತ್ಮ ಭಾವದಿಂದ ಎಂದಿಗೂ ಸಾಕ್ಷಾತ್ಕೃತನಾಗುವುದಿಲ್ಲ. ಶಾಸ್ತ್ರ ವಿಚಾರೋಪಶಮಗಳಿಂದಲೇ ಮುಕ್ತನಾಗಿ ಪರಮ ಪುರುಷಾರ್ಥವನ್ನು ಪಡೆದಿರುವ ತತ್ತ್ವಜ್ಞನಿಗೆ (ಆಪ್ತ ಸರ್ವಕಾಮನಾಗಿರುವ ಕಾರಣ) ಶ್ರೀಹರಿಯ ದರ್ಶನದಿಂದ ಹೆಚ್ಚಾಗಿ ಪ್ರಾಪ್ಯವಾಗುವ ಫಲವು ಯಾವುದು ತಾನೇ ಉಳಿದಿರುವುದು? (ಯಾವುದೂ ಇಲ್ಲ) (ಅಥವಾ ವಿಚಾರೋಪಶಮಗಳನ್ನು ಬಿಟ್ಟು ಕೇವಲ ವಿಷಯಾಸಕ್ತನಾಗಿರುವ ಮೂಢನಿಗೆ ಶ್ರೀಹರಿಯಿಂದಲೂ ಕೂಡ ಯಾವ ಶ್ರೇಯಸ್ಸನ್ನೂ ಮಾಡಲು ಶಕ್ಯವಿಲ್ಲ ಎಂಬ ಅರ್ಥವನ್ನು ಹೇಳಬಹುದು.)

ವಿಚಾರೋಪಶಮೋಪೇತಂ ಚಿತ್ತಮಾರಾಧಯಾತ್ಮನಃ ।
ತಸ್ಮಿನ್ಸಿದ್ಧೇ ಭವಾನ್ಸಿದ್ಧೋ ನೋಚೇತ್ತ್ವಂ ವನಗರ್ದಭಃ ॥ ೨೪ ॥

ಕ್ರಿಯತೇ ಮಾಧವಾದೀನಾಂ ಪ್ರಣಯ ಪ್ರಾರ್ಥನಾ ಸ್ವಯಂ ।
ತಥೈವ ಕ್ರಿಯತೇ ಕಸ್ಮಾನ್ನ ಸ್ವಕಸ್ಯೈವ ಚೇತಸಃ ॥ ೨೫ ॥

ಸರ್ವಸ್ಯೈವ ಜನಸ್ಯಾಸ್ಯ ವಿಷ್ಣುರಭ್ಯಂತರೇ ಸ್ಥಿತಃ ।
ತಂ ಪರಿತ್ಯಜ್ಯ ಯೇ ಯಾಂತಿ ಬಹಿರ್ವಿಷ್ಣುಂ ನರಾಧಮಾಃ ॥ ೨೬ ॥

---

೨೪. ಅಯ್ಯ ರಾಮಚಂದ್ರ, ಅವಧರಿಸು. ಆದುದರಿಂದ ನೀನು ಮೊದಲು ಶಾಸ್ತ್ರ ವಿಚಾರ ಜನ್ಯವಾದ ವಿವೇಕ ವೈರಾಗ್ಯಗಳ ಸಹಾಯದಿಂದ ನಿನ್ನ ಮನಸ್ಸನ್ನು ಅದು ವಿಷಯಗಳ ಕಡೆಗೆ ಓಡುವುದನ್ನು ತಪ್ಪಿಸಿ, ಹಿಂದಿರುಗಿಸಿ, ಪ್ರತ್ಯಗಾತ್ಮನಲ್ಲಿ ಪ್ರಶಾಂತವಾಗುವಂತೆ ಮಾಡಿ ಅದನ್ನು ಚೆನ್ನಾಗಿ ಆರಾಧಿಸು. ಹೀಗೆ ಮನಸ್ಸು ಉಪಶಾಂತವಾಗಿ ನಿನಗೆ ಸ್ವಾಧೀನವಾಗಿ ಬಿಟ್ಟರೆ ಆಗ ನೀನೂ ಸಿದ್ಧನಾಗುವೆ. (ಪರಮ ಪುರುಷಾರ್ಥಸಿದ್ಧಿಯನ್ನು ಹೊಂದುವೆ.) ಹಾಗೆ ಮನಸ್ಸು ನಿನಗೆ ಸ್ವಾಧೀನವಾಗದೇ ಹೋದರೋ ಆ ಮೇಲೆ ನೀನು ಒಂದು ಕಾಡು ಕತ್ತೆಯೇ ಆಗಿ ಬಿಡುವೆ.

೨೫. ಪ್ರಪಂಚದಲ್ಲಿ ಜನರು ವಿಷ್ಣು, ಶಿವ, ಬ್ರಹ್ಮಮೊದಲಾದ ದೇವರುಗಳನ್ನು ತಮಗೆ ಅನುಗ್ರಹಮಾಡಬೇಕೆಂದು ಬಹು ಕಷ್ಟಪಟ್ಟು ನಾನಾ ಪ್ರಯತ್ನಗಳಿಂದ ಪ್ರಾರ್ಥನೆ ಮಾಡುವರು. ತತ್ಫಲವಾಗಿ ಕೇವಲ ಕ್ಷಣ ಭಂಗುರಗಳಾದ ಐಹಿಕ ಅಥವಾ ಆಮುಷ್ಮಿಕ ಕ್ಷುದ್ರ ಸುಖಗಳನ್ನು ಪಡೆದು ಅವುಗಳಿಂದಲೇ ತೃಪ್ತರಾಗುವರು. ಅವರ ಅವಿವೇಕವನ್ನೂ ಎಷ್ಟೆಂದು ಹೇಳಲಿ ! ಇದಕ್ಕೆ ಬದಲಾಗಿ, ಅವರು ತಮ್ಮದೇ ಆದ ಮನಸ್ಸನ್ನು ಕುರಿತು ತಮ್ಮಲ್ಲಿ ಅನುಗ್ರಹವಿಡಬೇಕೆಂದು ಅದೇಕೆ ಪ್ರಾರ್ಥಿಸುವುದಿಲ್ಲ ? ಅಲ್ಪ ಪ್ರಯತ್ನದಿಂದ ತಮ್ಮ ಮನಸ್ಸನ್ನು ಒಲಿಸಿಕೊಳ್ಳುವುದಕ್ಕೆ ಪ್ರಯತ್ನಪಟ್ಟಿದ್ದರೂ ಅವರು ಅದನ್ನು ತಮ್ಮ ವಶವರ್ತಿಯನ್ನಾಗಿ ಮಾಡಿಕೊಂಡು ನಿರತಿಶಯಾನಂದರೂಪ ಪರಮ ಪದವನ್ನು ಪಡೆದು ಕೃತ ಕೃತ್ಯರಾಗಬಹುದಾಗಿತ್ತು.

೨೬. ಈಶ್ವರನು ಸಕಲ ಭೂತಗಳ ಹೃದಯ ದೇಶದಲ್ಲಿಯೇ ಸರ್ವದಾ ನೆಲೆಸಿರುವನು. ಇಂತಹ ಸ್ವಾಂತರಾತ್ಮನಾದ ವಿಷ್ಣುವನ್ನು ಉಪೇಕ್ಷಿಸಿ, ಯಾರು ಬಾಹ್ಯನಾದ ವಿಷ್ಣುವನ್ನು ಹುಡುಕುವರೋ ಅವರು ನರಾಧಮರೇ ಸರಿ.

ಹೃದ್ಗುಹಾವಾಸಿ ಚಿತ್ತತ್ತ್ವಂ ಮುಖ್ಯಂ ಸಾನಾತನಂ ವಪುಃ ।
ಶಂಖ ಚಕ್ರ ಗದಾಹಸ್ತೋ ಗೌಣ ಆಕಾರ ಆತ್ಮನಃ ॥ ೨೭ ॥

ಯೋ ಹಿ ಮುಖ್ಯಂ ಪರಿತ್ಯಜ್ಯ ಗೌಣಂ ಸಮನುಧಾವತಿ ।
ತ್ಯಕ್ತ್ವಾ ರಸಾಯನಂ ಸಿದ್ಧಂ ಸಾಧ್ಯಂ ಸಂಸಾದಯತ್ಯಸೌ ॥ ೨೮ ॥

ಯಸ್ತು ಭೋಃ ಸ್ಥಿತಿಮೇವಾಸ್ಯಾಮಾತ್ಮಜ್ಞಾನ ಚಮತ್ಕೃತೌ ।
ನಾಸಾದಯತಿ ಸಮ್ಮತ್ತಮನಾಃ ಸ ರಘುನಂದನ ॥ ೨೯ ॥

ಅಪ್ರಾಪ್ತಾತ್ಮ ವಿವೇಕೋಽಂತರಜ್ಞ ಚಿತ್ತವಶೀಕೃತಃ ।
ಶಂಖಚಕ್ರ ಗದಾಪಾಣಿ ಮರ್ಚಯೇತ್ಪರಮೇಶ್ವರಂ ॥ ೩೦ ॥

---

೨೭. ಸರ್ವಭೂತಗಳ ಹೃದಯವೆಂಬ ಗುಹೆಯಲ್ಲಿ ಸರ್ವದಾ ನೆಲೆಸಿರುವ ಚೈತ್ಯನ್ಯವೆಂಬ ತ್ರಿಕಾಲಾಬಾಧಿತವಾದ ತತ್ತ್ವವೇ ಆತ್ಮನಿಗೆ ಮುಖ್ಯವಾದ ಸನಾತನ (ಶಾಶ್ವತ) ಶರೀರವು. ಶಂಖ ಚಕ್ರಗದಾದ್ಯಾಯುಧಗಳನ್ನು ಕೈಗಳಲ್ಲಿ ಧರಿಸಿರುವ ಶರೀರವಾದರೋ ಮಾಯಾ ಕಲ್ಪಿತವಾದ, ಗೌಣವಾದ ಆಗಂತುಕವು.

೨೮. ಮುಖ್ಯವಾದ ಆತ್ಮ ಸ್ವರೂಪವನ್ನು ಉಪೇಕ್ಷಿಸಿ ಯಾವನು ಗೌಣವಾದುದನ್ನು ಹುಡುಕಿಕೊಂಡು ಓಡಿಹೋಗುವನೋ ಅವನು ನಿಜವಾಗಿಯೂ ಸಿದ್ಧವಾಗಿರುವ ಅಮೃತ ಪ್ರಾಯವಾದ ಮೃಷ್ಟಾನ್ನವನ್ನು ಪರಿತ್ಯಜಿಸಿ, ಇನ್ನೂ ಮೇಲೆ ಕೃಷ್ಯಾದಿಗಳಿಂದ ಭತ್ತವನ್ನು ಸಂಪಾದಿಸಿ ಅನ್ನವನ್ನು ಮಾಡಿ ತಿನ್ನಬೇಕೆಂದು ಶ್ರಮಿಸುವ ದುರ್ಮತಿಯಂತೆ ಕಡು ಮೂರ್ಖನೇ ಸರಿ.

೨೯–೩೦. ಎಲೈ ರಘುನಂದನ, ಯಾವ ಅವಿವೇಕಿಯು ಆತ್ಮ ತತ್ತ್ವ ವಿಚಾರದಲ್ಲಿ ದೃಢವಾದ ನೆಲೆಯನ್ನು ಎಂದಿಗೂ ಪಡೆಯುವುದೇ ಇಲ್ಲವೋ ಅವನು ಕೇವಲ ಭ್ರಾಂತ ಚಿತ್ತನೇ ಎನ್ನಿಸಿಕೊಳ್ಳುವನು, ಸಂಮಥವಾದ ತನ್ನ ಮನಸ್ಸಿನ ಬಲಿಗೆ ಬಿದ್ದು ಸಿಕ್ಕಿಕೊಂಡು, ತನ್ನೊಳಗೆ ಆತ್ಮವಿವೇಕವನ್ನು ಪಡೆಯದಿರುವ ಇಂತಹ ಉನ್ಮತ್ತನು ಮಾತ್ರವೇ, ಶಂಖ ಚಕ್ರಗದಾಪಾಣಿಯಾದ ಪರಮೇಶ್ವರ (ವಿಷ್ಣು) ನನ್ನು ಹೊರಗೆ ಪೂಜಿಸಬೇಕು.

ತತ್ಪೂಜನೇನ ಕಷ್ಟೇನ ತಪಸಾ ತಸ್ಯ ರಾಘವ ।
ಕಾಲೇ ನಿರ್ಮಲತಾಮೇತಿ ಚಿತ್ತಂ ವೈರಾಗ್ಯ ಕಾರಿಣಾ ॥ ೩೧ ॥

ನಿತ್ಯಾಭ್ಯಾಸ ವಿವೇಕಾಭ್ಯಾಂ ಚಿತ್ತಮಾಶು ಪ್ರಸೀದತಿ ।
ಆಮ್ರ ಏವ ದಶಾಮೇತಿ ಸಾಹಕಾರೀಂ ಶನೈಃ ಶನೈಃ ॥ ೩೨ ॥

ಏತದಪ್ಯಾತ್ಮನೈವಾತ್ಮಾ ಫಲಮಾಪ್ನೋತಿ ಭಾಷಿತಂ ।
ಹರಿಪೂಜಾ ಕ್ರಮಾಖ್ಯೇನ ನಿಮಿತ್ತೇನಾರಿಸೂದನ ॥ ೩೩ ॥

---

೩೧. ರಾಘವ, ಇಂತಹ ಬಾಹ್ಯ ಪೂಜೆಯು ವ್ಯರ್ಥವೆಂದು ತಿಳಿಯಬೇಡ. ಅತಿ ಕಷ್ಟಪಟ್ಟು ಶ್ರದ್ಧಾ ಭಕ್ತಿ ಪೂರ್ವಕವಾಗಿ, ಯಥಾ ವಿಧಿಯಾಗಿ ಮಾಡುವ ಬಾಹ್ಯ ಪೂಜೆಯೂ ತಪಸ್ಸೂ ಇತ್ಯಾದಿ ಸತ್ಕರ್ಮಗಳೆಲ್ಲವೂ ನಿರಭಿಮಾನವಾಗಿ ಈಶ್ವರ ಪ್ರೀತ್ಯರ್ಥವಾಗಿ ಆಚರಿಸಲ್ಪಟ್ಟದ್ದೇ ಆದರೆ, ಅವು ಸಾಧಕನ ಮನಸ್ಸಿನಲ್ಲಿ ವೈರಾಗ್ಯ ವನ್ನುಂಟುಮಾಡಿ ಕಾಲಕ್ರಮದಲ್ಲಿ ಚಿತ್ತ ಶುದ್ಧಿ ಹೇತುಗಳಾಗುವುವು.

೩೨. ಹೀಗೆ ಸಂತತವಾದ ಶಾಸ್ತ್ರಾಭ್ಯಾಸದಿಂದಲೂ ಚಿತ್ತವು ಬೇಗನೆ ಪ್ರಸನ್ನ ವಾಗುವುದು (ಕಾಮಾದಿ ಮಲಗಳಿಂದ ವಿವರ್ಜಿತವಾಗುವುದು). ಮೊಟ್ಟ ಮೊದಲು ಆದಿಯಲ್ಲಿ ಹುಳಿಯಾಗಿರುವ ಮಾವಿನ ಕಾಯಿಯೇ, ಸ್ವಲ್ಪ ಕಾಲಾನಂತರ ಸಂಸ್ಕಾರ ವಿಶೇಷಗಳನ್ನು ಹೊಂದಿ ಮೆಲ್ಲ ಮೆಲ್ಲಗೆ ಅತಿ ಮಧುರವಾದ ಸಹಕಾರವಾಗಿ ಪರಿಣ ಮಿಸುವುದು.

೩೩. ಎಲೈ ಶತ್ರು ನಾಶಕನಾದ ರಾಮ, ವಿಷ್ಣು ಪೂಜಾ ಕ್ರಮವೆಂಬ ನಿಮಿತ್ತ ದಿಂದ ಯಾವ ಫಲವು ಶಾಸ್ತ್ರದಲ್ಲಿ ಉಕ್ತವಾಗಿರುವುದೋ, ಅಂತಹ ತನ್ನಿಂದಲೇ ಸಂಕ ಲ್ಪಿತವಾದ ಫಲವನ್ನು ಕೂಡ ಆತ್ಮನು ತಾನೇ ಪಡೆಯುವನು.

ಪರಮಾಪ್ನೋತಿ ಯೋ ವಾಪಿ ವಿಷ್ಣೋರಮಿತ ತೇಜಸಃ ।
ತೇನ ಸ್ವಸ್ಯೈವ ತತ್ಪ್ರಾಪ್ತಂ ಫಲಮಭ್ಯಾಸ ಶಾಖಿನಃ ॥ ೩೪ ॥

ಸರ್ವೇಷಾಮುತ್ತಮಸ್ಥಾನಾಂ ಸರ್ವಾಸಾಂ ಚಿರಸಂಪದಾಂ ।
ಸ್ವಮನೋನಿಗ್ರಹೋ ಭೂಮಿರ್ಭೂಮಿಃ ಸತ್ಯಶ್ರಿಯಾಮಿವ ॥ ೩೫ ॥

ಅಪ್ಯುರ್ವೀಖನನೋತ್ಕಸ್ಯ ಹರ್ಷತೋಽಪಿ ಶಿಲೋಚ್ಚಯಂ ।
ಸ್ವಮನೋ ನಿಗ್ರಹಾದನ್ಯೋನೋಪಾಯೋಽಸ್ತೀಹ ಕಶ್ಚನ ॥ ೩೬ ॥

---

೩೪. ಅಪರಿಮಿತ ಪ್ರಭಾವಶಾಲಿಯಾದ ವಿಷ್ಣುವಿನ ದೆಸೆಯಿಂದ ಯಾವನು ವರವನ್ನು ಪಡೆಯುವನೋ ಅವನು ತನ್ನ ಸಂತತವಾದ ಸತ್ಕರ್ಮಗಳ ಅಭ್ಯಾಸ ವೆಂಬ ವೃಕ್ಷದ ಫಲವನ್ನೇ ತಾನೇ ಪಡೆದಂತಾಯಿತೇ ಹೊರತು ಅದೇನೋ ಅಕಸ್ಮಿಕ ವಲ್ಲವು.

೩೫. ಸಕಲ ವಿಧಗಳಾದ ಸಸ್ಯಸಮೃದ್ಧಿಗಳಿಗೂ ಹೇಗೆ ಭೂಮಿಯು ಆಧಾರ ವಾಗಿರುವುದೋ ಹಾಗೆಯೇ ಪ್ರಶಸ್ತವಾದ ಧರ್ಮಾದಿ ಪುರುಷಾರ್ಥಗಳಲ್ಲಿರುವ ಸಕಲ ಅಭಿನಿವೇಶಗಳಿಗೂ ಚಿರಕಾಲ ಭೋಗ್ಯವಾದ ಸಕಲ ವಿಧ ಸಂಪತ್ತುಗಳಿಗೂ ಸ್ವಮನೋನಿಗ್ರಹವೇ ಆಶ್ರಯವಾಗಿರುವುದು.

೩೬. ಮನಸ್ಸಿನ ಏಕಾಗ್ರತೆಯಿಲ್ಲದೆ ಯಾವ ಮಹತ್ಕಾರ್ಯವೂ ಸಿದ್ಧಿಸ ಲಾರದು. ಅದು ಕಾರಣ, ಪೂರ್ವದಲ್ಲಿ ಭೂಮಿಯನ್ನು ಅಗೆದು ಬಿಡುವುದರಲ್ಲಿ ಉತ್ಕಂಠಿತರಾಗಿದ್ದ ಸಗರ ಪುತ್ರಾದಿಗಳಿಗೂ (ಅಥವಾ ನಿಧಿ ರತ್ನಾದಿ ಲಾಭಕ್ಕಾಗಿ ನೆಲವನ್ನು ಅಗೆಯುವುದರಲ್ಲಿ ಆಸಕ್ತರಾಗಿರುವವರಿಗೂ), ಮತ್ತು ಮಂದರಾದ್ರಿ ಯನ್ನು ಎತ್ತಿಕೊಂಡು ಹೋದ ದೇವಾಸುರಾದಿಗಳಿಗೂ, ಹೀಗೆ ಮಹತ್ಕಾರ್ಯ ಪ್ರವೃತ್ತರಾದ ಸರ್ವರಿಗೂ, ತಮ್ಮ ಮನೋನಿಗ್ರಹವನ್ನು ಬಿಟ್ಟು ಬೇರೆಯಾದ ಯಾವ ಉಪಾಯವೊಂದೂ ಇಲ್ಲವು. ಮನೋನಿಗ್ರಹವೊಂದಿದ್ದರೆ ಎಂತಹ ಮಹ ತ್ಕಾರ್ಯವನ್ನಾದರೂ ಸಾಧಿಸಬಹುದು.

ತಾವಜ್ಜನ್ಮ ಸಹಸ್ರಾಣಿ ಭ್ರಮಂತಿ ಭುವಿ ಮಾನವಾಃ ।
ಯಾವನ್ನೋಪಶಮಂ ಯಾತಿ ಮನೋಮತ್ತ ಮಹಾರ್ಣವಃ ॥ ೩೭ ॥

ಬ್ರಹ್ಮ ವಿಷ್ಣ್ವಿಂದ್ರ ರುದ್ರಾದ್ಯಾಶ್ಚಿರ ಸಂಪೂಜಿತಾ ಅಪಿ ।
ಉಪಪ್ಲವಾನ್ಮನೋವ್ಯಾಧೇರ್ನ ತ್ರಾಯಂತೇಽಪಿ ವತ್ಸಲಾಃ ॥ ೩೮ ॥

ಆಕಾರ ಭಾಸುರಂ ತ್ಯಕ್ತ್ವಾ ಬಾಹ್ಯಮಾಂತರ ಮಪ್ಯಜಂ ।
ಕುರು ಜನ್ಮ ಕ್ಷಯಾಯಾಶು ಸಂವಿನ್ಮಾತ್ರೈಕ ಚಿಂತನಂ ॥ ೩೯ ॥

---

೩೭. ಎಲ್ಲಿಯ ವರೆವಿಗೆ ಮತ್ತ (ಮದಿಸಿದ) ಮನಸ್ಸೆಂಬ ವಿಕ್ಷುಬ್ಧವಾದ ಮಹಾ ಸಮುದ್ರವು ಉಪಶಮನವನ್ನು ಹೊಂದುವುದಿಲ್ಲವೋ ಅಲ್ಲಿಯ ವರೆವಿಗೂ ಈ ಸಂಸಾರದಲ್ಲಿ ಮೂಢರಾದ ಜನರು ಜನ್ಮಾಂತರ ಪರಂಪರೆಗಳನ್ನು ಪಡೆದು ಭ್ರಮಿಸುತ್ತಿರುವರು.

೩೮. ಬ್ರಹ್ಮ (ಚತುರ್ಮುಖ), ವಿಷ್ಣು, ಇಂದ್ರ, ಈಶ್ವರ (ಶಿವ) ಮುಂತಾದ ದೇವರುಗಳು ನಮ್ಮಿಂದ ಬಹು ದೀರ್ಘಕಾಲ ಶ್ರದ್ಧಾಭಕ್ತಿಗಳಿಂದ ಪೂಜಿಸಲ್ಪಟ್ಟಾಗ್ಯೂ ಮತ್ತು ಅವರು ನಮ್ಮ ಪೂಜಾದಿಗಳಿರಿದ ಸುಪ್ರೀತರಾಗಿ ತಮ್ಮ ಅನುಗ್ರಹವನ್ನು ನಮ್ಮಮೇಲೆ ಹೆಚ್ಚಾಗಿ ಬೀರಿದರೂ ಕೂಡ, ನಮ್ಮ ತತ್ತ್ವ ವಿಚಾರಾದ್ಯಾತ್ಮಕ ಪ್ರಯತ್ನವಿಲ್ಲದೆ ಇದ್ದರೆ ಮನಸ್ಸೆಂಬ ವ್ಯಾಧಿಯ ಬಾಧೆಯ ಸೆರೆಯಿಂದ ನಮ್ಮನ್ನು ಸರ್ವಥಾ ಕಾಪಾಡಲಾರರು.

೩೯. ಅಯ್ಯ ರಾಮಚಂದ್ರ, ಹೊರಗಡೆ ಚಕ್ಷುರಾದೀಂದ್ರಿಯಗಳಿಂದಲೂ, ಒಳಗಡೆ ಅಂತಃಕರಣದಿಂದಲೂ ಗ್ರಾಹ್ಯವಾಗಿ ಕೇವಲ ಆಕಾರದಿಂದ ಮಾತ್ರವೇ (ಸತ್ತಾಶೂನ್ಯವಾಗಿ) ಪ್ರತಿಭಾಸಿಸುತ್ತಿರುವ ಸಮಸ್ತ ವಿಷಯ ರೂಪವನ್ನೂ ಪರಿತ್ಯಾಗ ಮಾಡಿ, ಜನ್ಮಾದಿ ಸರ್ವ ವಿಕಾರಶೂನ್ಯ ಕೇವಲ ಶುದ್ಧ ಚೈತನ್ಯದ ಅಖಂಡಾಕಾರವನ್ನು ನೀನು ಸದಾ ಚಿಂತಿಸುತ್ತಿರು. ಇದರಿಂದ ಅತಿ ಕ್ಷಿಪ್ರದಲ್ಲಿ ನಿನಗೆ ಪುನರ್ಜನ್ಮ ಹೇತುವಾದ ಸಕಲ ಕರ್ಮಗಳೂ ದಗ್ಧವಾಗಿ, ಈ ಸಂಸಾರ ಬಂಧದಿಂದ ಮುಕ್ತಿಯಾಗುವುದು.

ಸಂವೇದ್ಯ ನಿರ್ಮುಕ್ತ ನಿರಾಮಯೈಕ ।
ಸಂವಿನ್ಮಯಾಸ್ವಾದ ಮನಂತ ರೂಪಂ ॥
ಸನ್ಮಾತ್ರಮಾಸ್ವಾದಯ ಸರ್ವ ಸಾರಂ ।
ಸಾರಂ ಪರಂ ಪ್ರಾಪ್ಸ್ಯಸಿ ಜನ್ಮನದ್ಯಾಃ ॥ ೪೦ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ಉಪಶಮ ಪ್ರಕರಣೇ ಪ್ರಹ್ಲಾದ ವಿಶ್ರಾಂತಿರ್ನಾಮ ತ್ರಿಚತ್ವಾರಿಂಶಃ ಸರ್ಗಃ

---

೪೦. ಅಯ್ಯ ರಾಮಚಂದ್ರ, ನೀನು, ಬಾಹ್ಯಾಭ್ಯಂತರಗಳಾದ ಸಕಲ ವಿಷಯ ವಿನಿರ್ಮುಕ್ತವಾಗಿಯೂ, ನಿರುಪದ್ರವವಾಗಿಯೂ, ಕೇವಲ ಚೈತನ್ಯರೂಪವಾಗಿಯೂ, ನಿರತಿಶಯಾನಂದಾತ್ಮಕವಾಗಿಯೂ, ಅನಂತ ರೂಪವಾಗಿಯೂ ಸರ್ವಸಾರವಾಗಿಯೂ ಇರುವ ಕೇವಲ ಸದ್ರೂಪನಾದ ಆತ್ಮನನ್ನು ನಿರಂತರವೂ ತದಾಕಾರ ವೃತ್ತಿಯಿಂದ ಅನುಭವಿಸುತ್ತಿರು. ಸಾರ್ವಕಾಲಿಕವಾದ ಇಂತಹ ಸದ್ರೂಪಾತ್ಮಾನುಭವದಿಂದ, ನೀನು ಮುಂದಿನ ಜನ್ಮಾಂತರಗಳೆಂಬ ನದಿಯನ್ನು ದಾಟಿ ಆಚೆಯ ದಡವನ್ನು ಸುರಕ್ಷಿತವಾಗಿ ಸೇರಿ ಸದಾ ಆನಂದಿಸುವೆ. ಅನ್ಯಥಾ ಜನ್ಮಾಂತರಗಳೆಂಬ ನದೀ ಪ್ರವಾಹಗಳಲ್ಲಿ ಮುಳುಗಿ ಹೋಗುವೆ.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಉಪಶಮ ಪ್ರಕರಣದಲ್ಲಿ ಪ್ರಹ್ಲಾದೋಪಾಖ್ಯಾನದೊಳಗೆ " ಪ್ರಹ್ಲಾದ ವಿಶ್ರಾಂತಿ " ಎಂಬ
ನಲವತ್ತ ಮೂರನೆಯ ಸರ್ಗವು.

ಚತುಶ್ಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ರಾಮ ಪರ್ಯವಸಾನೇಯಂ ಮಾಯಾ ಸಂಸೃತಿ ನಾಮಿಕಾ ।
ಆತ್ಮ ಚಿತ್ತ ಜಯೇನೈವ ಕ್ಷಯಮಾಯಾತಿ ನಾನ್ಯಥಾ ॥ ೧ ॥

ಜಗನ್ಮಾಯಾ ಪ್ರಪಂಚಸ್ಯ ವೈಚಿತ್ರ್ಯ ಪ್ರತಿಪತ್ತಯೇ ।
ಇತಿಹಾಸಮಿಮಂ ವಕ್ಷ್ಯೇ ಶ್ರುಣುಷ್ವಾವಹಿತೋಽನಘ ॥ ೨ ॥

ಅಸ್ತ್ಯಸ್ಮಿನ್ವಸುಧಾ ಪೀಠೇ ಕೋಶಲೋ ನಾಮ ಮಂಡಲಃ ।
ಕಲ್ಪವೃಕ್ಷ ವನಂ ಮೇರಾವಿವ ರತ್ನಗಣಾಕರಃ ॥ ೩ ॥

ನಲವತ್ತ ನಾಲ್ಕನೆಯ ಸರ್ಗ

ಶ್ರೀ ವಸಿಷ್ಠನು ಹೇಳಿದನು :—

೧. ಅಯ್ಯ ರಾಮ, ಸಂಸಾರವೆಂಬ ಹೆಸರುಳ್ಳ ಈ ಮಾಯೆಯು ಅನಂತವಾದುದು. [ಇದಕ್ಕೆ ಕೊನೆಯೇ (ಆತ್ಮತತ್ತ್ವ ಜ್ಞಾನೋದಯಪರ್ಯಂತವೂ) ಇಲ್ಲವು] ಆದರೂ ಚಿತ್ತ ಜಯವೆಂಬ ಒಂದು ಉಪಾಯದಿಂದ ಮಾತ್ರ ಇದನ್ನು ನಿಶ್ಶೇಷವಾಗಿ ನಾಶಗೊಳಿಸುವುದಕ್ಕೆ ಶಕ್ಯವಾಗುವುದೇ ಹೊರತು ಬೇರೆ ಯಾವ ಉಪಾಯವೂ ಇಲ್ಲ.

೨. ಅಪರಿಮಿತ ಭ್ರಾಂತಿ ಹೇತುವಾದ ಈ ಜಗತ್ತಿನ ಮಾಯಾ ಪ್ರಪಂಚದ ವೈಚಿತ್ರ್ಯವು ಸರಿಯಾಗಿ, ನಿನಗೆ ತಿಳಿಯುವುದಕ್ಕೋಸ್ಕರ, ಈಗ ಈ ಮುಂದಿನ ಇತಿಹಾಸವನ್ನು ಹೇಳುವೆನು. ಅನಘನೇ, ಸಾವಧಾನ ಚಿತ್ತನಾಗಿ ಕೇಳು.

೩. ಮೇರು ಪರ್ವತದಮೇಲೆ, ಕಲ್ಪ ವೃಕ್ಷಗಳಿಂದ ಸಾಂದ್ರವಾದ ನಂದನವನವಿರುವಂತೆ, ಈ ಭೂಮಂಡಲದೊಳಗೆ ಸಕಲ ರತ್ನ ರಾಶಿಗಳಿಗೆ ನಿಧಿ (ಗಣಿ) ಯಾಗಿರುವ ಕೋಸಲವೆಂಬ ಸಮೃದ್ಧವಾದ ದೇಶವೊಂದಿರುವುದು.

ತತ್ರಾಭೂದ್ಬ್ರಾಹ್ಮಣಃ ಕಶ್ಚಿದ್ಗುಣೀ ಗಾಧಿರಿತಿ ಶ್ರುತಃ ।
ಪರಮಃ ಶ್ರೋತ್ರಿಯೋ ಧೀಮಾನ್ಧರ್ಮೋ ಮೂರ್ತಿರಿವ ಸ್ಥಿತಃ ॥ ೪ ॥

ಆಬಾಲ್ಯಾತ್ಪ್ರವಿರಕ್ತೇನ ಚೇತಸಾ ಸ ವ್ಯರಾಜತ ।
ನಿಷ್ಕಲಂಕಾವದಾತೇನ ಭುವನಂ ನಭಸಾ ಯಥಾ ॥ ೫ ॥

ಕಿಮಪ್ಯಭಿಮತಂ ಕಾರ್ಯಂ ವಿನಿಧಾಯ ಸ್ವಚೇತಸಿ ।
ಬಂಧುವೃಂದಾದ್ವಿನಿಷ್ಕ್ರಮ್ಯ ತಪಸ್ತಪ್ತುಂ ವನಂ ಯಯೌ ॥ ೬ ॥

ಉತ್ಫುಲ್ಲ ಕಮಲಂ ಪ್ರಾಪ ಸರಸ್ತತ್ರ ಸ ವಿಪ್ರರಾಟ್ ।
ಚಂದ್ರಃ ಪ್ರಸನ್ನ ವಿಮಲಂ ತಾರಾಸಾರ ಮಿವಾಂಬರಂ ॥ ೭ ॥

---

೪. ಆದೇಶದೊಳಗೆ ಗಾಧಿಯೆಂಬ ಹೆಸರಿನಿಂದ ಸುಪ್ರಸಿದ್ಧನಾದ ಒಬ್ಬ ಗುಣಾಢ್ಯನಾದ ವಿಪ್ರೋತ್ತಮನು ಇದ್ದನು. ಅವನು ಮಹಾಶ್ರೋತ್ರಿಯನಾಗಿಯೂ, ಜ್ಞಾನ ಸಂಪನ್ನನಾಗಿಯೂ, ಮೂರ್ತಿಮತ್ತಾದ ಧರ್ಮವೋ ಎಂಬಂತೆಯೂ ಇದ್ದನು.

೫. ನಿಷ್ಕಳಂಕವಾಗಿಯೂ, ಶುಭ್ರವಾಗಿಯೂ ಇರುವ ಆಕಾಶದಿಂದ ಪ್ರಪಂಚವು ವಿರಾಜಿಸುವಂತೆಯೇ, ಆತನೂ ಲೌಕಿಕವ್ಯವಹಾರಗಳಲ್ಲಿ ತನ್ನ ಬಾಲ್ಯದಿಂದ ಮೊದಲು ಅತ್ಯಂತ ವಿರಕ್ತವಾಗಿದ್ದ ಮನಸ್ಸಿನಿಂದ ಬಹಳವಾಗಿ ವಿರಾಜಿಸುತ್ತಿದ್ದನು.

೬. ಒಂದಾನೊಂದು ಕಾಲದಲ್ಲಿ, ಅವನು ತನ್ನ ಮನಸ್ಸಿನಲ್ಲಿ ಯಾವುದೋ ಒಂದು ಅಭಿಮತವಾದ ಕಾರ್ಯವನ್ನೂ ಉದ್ದೇಶಿಸಿ ಬಂಧು ಬಳಗಗಳನ್ನೆಲ್ಲ ಬಿಟ್ಟು ಬಿಟ್ಟು ತಪಸ್ಸನ್ನು ಆಚರಿಸುವುದಕ್ಕಾಗಿ ವಿವಿಕ್ತವಾದ ಒಂದು ಕಾಡಿಗೆ ಹೋದನು.

೭. ಪ್ರೇಕ್ಷಣೀಯಗಳಾದ ನಕ್ಷತ್ರಗಳಿಂದ ಪರಿವೃತವಾಗಿ ಪ್ರಸನ್ನವಾಗಿಯೂ ನಿರ್ಮಲವಾಗಿಯೂ ಇರುವ ಆಕಾಶವನ್ನು ಚಂದ್ರನು ಹೊಂದುವಂತೆ ಆ ವನದೊಳಗೆ ಆ ವಿಪ್ರೋತ್ತಮನು, ಪ್ರಶಾಂತವಾಗಿಯೂ ಸ್ವಚ್ಛವಾಗಿಯೂ ವಿಕಸಿತವಾದ ಕಮಲಗಳಿಂದ ವಿರಾಜಮಾನನಾಗಿಯೂ ಇದ್ದ ಒಂದು ಸರೋವರವನ್ನು ಕಂಡು ಹಿಡಿದನು.

ಆಶೌರಿ ದರ್ಶನಂ ತಸ್ಮಿನ್ ತಪ್ಸ್ರೋರ್ಥಂ ಸರಸಿ ದ್ವಿಜಃ ।
ಆಕಂಠಮಂಬು ನಿರ್ಮಗ್ನಃ ಪ್ರಾವೃಟ್ಪದ್ಮಂ ಇವಾವಿಶತ್ ॥ ೮ ॥

ಯಯೌ ಮಾಸಾಷ್ಟಕಂ ತಸ್ಯ ಮಗ್ನಸ್ಯ ಸರಸೋಽಂಭಸಿ ।
ವಾಸ ಪಂಕಜ ಸಂಕೋಚ ಮನಾಗ್ಭಿನ್ನ ಮುಖಚ್ಛವೇಃ ॥ ೯ ॥

ಅಥೈನಂ ತಪಸಾ ಸಪ್ತಮಾಜಗಾಮೈಕದಾ ಹರಿಃ ।
ನಿದಾಘಾರ್ತಂ ಘನಃ ಶ್ಯಾಮಃ ಪ್ರಾವೃಷೀವ ಧರಾತಲಂ ॥ ೧೦ ॥

ಶ್ರೀ ಭಗವಾನುವಾಚ—
ವಿಪ್ರೋತ್ತಿಷ್ಠ ಪಯೋಮಧ್ಯಾದ್ಗೃಹಾಣಾಭಿಮತಂ ವರಂ ।
ಅಭೀಪ್ಸಿತಫಲೋಪೇತೋ ಜಾತಸ್ತೇ ನಿಯಮದ್ರುಮಃ ॥ ೧೧ ॥

---

೮. ಆ ಸರಸ್ಸಿನಲ್ಲಿಯೇ ಆ ಬ್ರಾಹ್ಮಣನು ಶ್ರೀ ಮಹಾವಿಷ್ಣುವಿನ ದರ್ಶನವಾಗುವವರೆವಿಗೆ ತಪಸ್ಸನ್ನು ಮಾಡಲೇಬೇಕೆಂಬ ದೃಢ ಸಂಕಲ್ಪದಿಂದ, ವರ್ಷಾಕಾಲದ ಕಮಲದಂತೆ, ತನ್ನ ಕಂಠ ಪರ್ಯಂತವೂ ನೀರಿನಲ್ಲಿ ಮುಣುಗಿ ನಿಂತಿದ್ದನು.

೯. ಹೀಗೆ ಆ ಸರಸ್ಸಿನ ನೀರಿನಲ್ಲಿ ಮುಣುಗಿ ತಪಶ್ಚರ್ಯೆಯಲ್ಲಿ ನಿರತನಾಗಿದ್ದ ಆ ಬ್ರಾಹ್ಮಣನಿಗೆ ಎಂಟು ತಿಂಗಳುಗಳ ಕಾಲವು ಕಳೆದು ಹೋಯಿತು. ತನ್ನ ನಿವಾಸ ಸ್ಥಾನವಾಗಿದ್ದ ಆ ಸರೋವರದಲ್ಲಿ ಕಮಲಗಳು ಸೂರ್ಯನ ವಿಯೋಗದಿಂದ ರಾತ್ರಿ ವೇಳೆ ಸಂಕುಚಿತವಾಗಲು ಸಹವಾಸಸ್ನೇಹದಿಂದ ಆ ಬ್ರಾಹ್ಮಣನ ಮುಖಕಾಂತಿಯೂ ಕೂಡ ಸ್ವಲ್ಪ ಮಟ್ಟಿಗೆ ಭಗ್ನವಾಗುತ್ತಿದ್ದಿತು.

೧೦. ಈ ರೀತಿಯಲ್ಲಿ ಎಂಟು ತಿಂಗಳು ಕಳೆದ ತರುವಾಯ, ಒಂದು ಸಮಯದಲ್ಲಿ, ಬೇಸಗೆಯ ಬಿಸಿಲಿನ ಝಳದಿಂದ ಸಂತಪ್ತವಾಗಿರುವ ಭೂತಲವನ್ನು ವರ್ಷರ್ತುವಿನಲ್ಲಿ ನೀಲ ಮೇಘವು ಕಾಣಿಸಿಕೊಂಡು ಸಂತೋಷಪಡಿಸುವಂತೆ ತಪಶ್ಚರ್ಯೆಯಿಂದ ಬಳಲಿದ್ದ ಆ ಬ್ರಾಹ್ಮಣನ ಹತ್ತಿರಕ್ಕೆ ನೀಲಮೇಘಶ್ಯಾಮನಾದ ಶ್ರೀಮನ್ನಾರಾಯಣನು ಬಂದು ದರ್ಶನವನ್ನಿತ್ತನು.

ಶ್ರೀ ಮಹಾ ವಿಷ್ಣುವು ಹೇಳಿದನು :—

೧೧. ಅಯ್ಯ, ಬ್ರಾಹ್ಮಣ. ನಿನ್ನ ತಪೋನಿಯಮವೆಂಬ ವೃಕ್ಷವು ಈಗ ನಿನ್ನ ವಾಂಛಿತಾರ್ಥಸಿದ್ಧಿಯೆಂಬ ಫಲದಿಂದ ಭರಿತವಾಗಿರುವುದು. ನಿನಗಿಷ್ಟವಾದ ವರವನ್ನು ತೆಗೆದುಕೊ. ಇನ್ನು ನೀರಿನ ಮಧ್ಯದಿಂದ ಎದ್ದು ಈಚೆಗೆ ಬಾ.

ಬ್ರಾಹ್ಮಣ ಉವಾಚ :—

ಅಸಂಖ್ಯೇಯಜಗದ್ಭೂತಹೃತ್ಪದ್ಮಕುಹರಾಲಿನೇ ।
ಜಗತ್ತ್ರಯೈಕನಲಿನೀಸರಸೇ ವಿಷ್ಣವೇ ನಮಃ ॥ ೧೨ ॥

ಮಾಯಾಮಿಮಾಂ ತ್ವದ್ರಚಿತಾಂ ಭಗವನ್ಪರಮಾತ್ಮಿಕೇ ।
ದ್ರಷ್ಟುಮಿಚ್ಛಾಮಿ ಸಂಸಾರನಾಮ್ನೀಮಾಂಧ್ಯೈಕಕಾರಿಣೀಂ ॥ ೧೩ ॥

ಶ್ರೀ ವಸಿಷ್ಠ ಉವಾಚ—

ಇಮಾಂ ದ್ರಕ್ಷ್ಯಸಿ ಮಾಯಾಂ ತ್ವಂ ತತಸ್ತ್ಯಕ್ಷಸಿ ಚೇತ್ಯಜಃ ।
ಉಕ್ತ್ವಾ ಯಯಾವದೃಶ್ಯತ್ವಂ ಗಾಂಧರ್ವಮಿವ ಪತ್ತನಂ ॥ ೧೪ ॥

ಬ್ರಾಹ್ಮಣನು ಹೇಳಿದನು :—

೧೨-೧೩. ಭಗವಂತನೇ, ಪ್ರಪಂಚದಲ್ಲಿರುವ, ಅಸಂಖ್ಯಾಕವಾದ ಸಕಲ ಭೂತಗಳ ಹೃದಯವೆಂಬ ಕಮಲ ಗರ್ಭದಲ್ಲಿ ಭ್ರಮರ ಪ್ರಾಯನಾಗಿರುವವನೂ, ಚರಾಚರಾತ್ಮಕವಾದ ಭುವನತ್ರಯವೆಂಬ ಪದ್ಮ ಲತೆಗೆ ಸರೋವರಪ್ರಾಯನಾಗಿರುವವನೂ ಆದ ವಿಷ್ಣುವಿಗೆ (ನಿನಗೆ) ನಮಸ್ಕಾರವು. ಪರಮಾತ್ಮನಾದ ನಿನ್ನಲ್ಲಿ ಅಧ್ಯಸ್ತವಾಗಿಯೂ, ನಿನ್ನಿಂದಲೇ ಕ್ಲ್ರಪ್ತವಾಗಿಯೂ ಕೇವಲ ಅಜ್ಞಾನೈಕ ಹೇತುವಾಗಿಯೂ ಇರುವ ಈ ಸಂಸಾರ ನಾಮಕವಾದ ಮಹಾಮಾಯೆಯನ್ನು ನೋಡಬೇಕೆಂದು ನಾನು ಇಚ್ಛಿಸುವೆನು.

ಶ್ರೀ ವಸಿಷ್ಠನು ಹೇಳಿದನು :—

೧೪. ರಾಮ, ಕೇಳು. ಹೀಗೆ ಆ ಗಾಧಿಯು ಪ್ರಾರ್ಥಿಸಲಾಗಿ ಶ್ರೀಮನ್ನಾರಾಯಣನು ಅವನನ್ನು ಸಂಬೋಧಿಸಿ, ಅಯ್ಯ, ಬ್ರಾಹ್ಮಣ, ನಿನ್ನ ಇಚ್ಛೆಯಂತೆಯೇ, ನೀನು ಈಗಲೇ ನನ್ನ ಮಾಯೆಯನ್ನು ನೋಡುವೆ: ಮತ್ತು ಸ್ವಲ್ಪಕಾಲಾನಂತರ ಅದರಿಂದ ನೀನು ಮುಕ್ತನೂ ಆಗುವೆ ಎಂದು ಹೇಳಿ, ತತ್ ಕ್ಷಣವೇ ಗಂಧರ್ವ ನಗರದಂತೆ ಅದೃಶ್ಯನಾಗಿ ಬಿಟ್ಟನು.

[ಗಂಧರ್ವನಗರ = ಆಕಾಶದಲ್ಲಿ ಭ್ರಾಂತ ದೃಷ್ಟಿಗೆ ಅತ್ಯಂತಾಸತ್ತಾಗಿಯೇ ಅಜ್ಞಾನದ ಮೂಲಕ ಕಾಣಿಸುವಂತೆ ತೋರುವ ಒಂದು ಪಟ್ಟಣ. ವಸ್ತುತಃ ಅದು ಯಾವಾಗಲೂ ಇಲ್ಲ. ಭ್ರಾಂತಿಯಿಂದ ಮಾತ್ರವೇ ತೋರುವುದು. ತೋರುವುದೆಂಬ ಅರಿವು ಉಂಟಾದ ಕೂಡಲೆ ಕಾಣುವುದೇ ಇಲ್ಲ.]

ಗತೇ ವಿಷ್ಣೌ ಸಮುತ್ತಸ್ಥೌ ಜಲಾತ್ಸ ಬ್ರಾಹ್ಮಣೇಶ್ವರಃ ।
ಶೀತಲಾಮಲಮೂರ್ತಿತ್ವಾದಿಂದುಃ ಕ್ಷೀರೋದಕಾದಿವ ॥ ೧೫ ॥

ಬಭೂವ ಪರಿತುಷ್ಟಾತ್ಮಾ ದರ್ಶನೇನ ಜಗತ್ಪತೇಃ ।
ದರ್ಶನಸ್ಪರ್ಶನೈರಿಂದೋರುತ್ಫುಲ್ಲಮಿವ ಕೈರವಂ ॥ ೧೬ ॥

ಅಥಾಸ್ಯ ಕತಿಚಿತ್ತಸ್ಮಿನ್ದಿವಸಾ ನಿರ್ಯಯುರ್ವನೇ ।
ಹರಿಸಂದರ್ಶನಾನಂದವತೋ ಬ್ರಾಹ್ಮಣಕರ್ಮಣಾ ॥ ೧೭ ॥

ಏಕದಾರಬ್ಧವಾನ್ಸ್ನಾನಂ ಸರಸ್ಯುದಿತಪಂಕಜೇ ।
ಚಿಂತಯನ್ವೈಷ್ಣವಂ ವಾಕ್ಯಂ ಮಹರ್ಷಿರಿವ ಮಾನಸೇ ॥ ೧೮ ॥

---

೧೫. ಹೀಗೆಂದು ಹೇಳಿ ವಿಷ್ಣುವು ಅದೃಶ್ಯನಾಗಿ ಬಿಡಲು ದ್ವಿಜರಾಜನಾದ ಆ ಗಾಧಿಯು ಪೂರ್ವದಲ್ಲಿ ಕ್ಷೀರಸಾಗರ ಮಧ್ಯದಿಂದ (ದ್ವಿಜರಾಜ) ಚಂದ್ರನು ಉದಯಿಸಿದಂತೆಯೇ, ಅತ್ಯಂತ ಶೀತಲವಾಗಿಯೂ ಇರುವ ಶರೀರವುಳ್ಳವನಾಗಿ, ಆ ಸರಸ್ಸಿನ ಮಧ್ಯದಿಂದ ಮೇಲಕ್ಕೆ ಎದ್ದು ಬಂದನು.

(ಬ್ರಾಹ್ಮಣೇಶ್ವರಃ= ದ್ವಿಜರಾಜನೆಂದರ್ಥ. ಈ ಪದವು ಚಂದ್ರನಿಗೂ, ಗಾಧಿಗೂ, ಇಬ್ಬರಿಗೂ ಅನ್ವಯಿಸುವುದು.)

೧೬. ಬಳಿಕ ಚಂದ್ರನ ದರ್ಶನದಿಂದಲೂ, ಕಿರಣ ಸಂಸ್ಪರ್ಶದಿಂದಲೂ ಬಿಳಿ ನೈದಿಲೆಯು ವಿಕಸಿತವಾಗಿ ಉಲ್ಲಾಸಗೊಳ್ಳುವಂತೆ, ಆ ಗಾಧಿಯು ಸರ್ವ ಲೋಕೇಶ್ವರನಾದ ಶ್ರೀ ವಿಷ್ಣುವಿನ ದರ್ಶನ ಲಾಭದಿಂದಲೂ, ಅಭಿಲಷಿತಾರ್ಥ ಸಿದ್ಧಿಯಿಂದಲೂ ಸಂತೋಷಪಟ್ಟ ಮನಸ್ಸುಳ್ಳವನಾದನು.

೧೭. ಅನಂತರವೂ ಆ ಬ್ರಾಹ್ಮಣನು ಶ್ರೀಹರಿಯ ಸಂದರ್ಶನ ಲಾಭದಿಂದ ಆನಂದಪಟ್ಟುಕೊಂಡು, ಸ್ವೋಚಿತ ನಿತ್ಯ ನೈಮಿತ್ತಿಕ ಕರ್ಮಗಳನ್ನು ಅನುಷ್ಠಾನ ಮಾಡುತ್ತ ಕೆಲವು ದಿನಗಳನ್ನು ಆ ವನದಲ್ಲಿಯೇ ಕಳೆದನು.

೧೮. ತರುವಾಯ ಒಂದು ದಿನ ಮಹರ್ಷಿ ಸದೃಶನಾದ ಗಾಧಿಯು, ಉಷಃ ಕಾಲದಲ್ಲಿ ಎದ್ದು ತನ್ನ ಮನಸ್ಸಿನಲ್ಲಿ ಶ್ರೀಮನ್ನಾರಾಯಣನ (ಪೂರ್ವೋಕ್ತ) ವಚನ

ಅಥ ಸ್ನಾನವಿಧಾವಂತರ್ಜಲಮೇಷ ಚಕಾರ ಹ ।
ಸಕಲಾಘವಿಘಾತಾರ್ಥಂ ಪರಿವರ್ತಮಿವಾತ್ಮನಾ ॥ ೧೯ ॥

ಅಂತರ್ಜಲವಿಧೌ ತಸ್ಮಿನ್ವಿಸ್ಮೃತಧ್ಯಾನಮಂತ್ರಧೀಃ ।
ಪರ್ಯಸ್ತಸಂವಿತ್ಪ್ರಸರಃ ಸೋಽಪಶ್ಯಜ್ಜಲಮಧ್ಯತಃ ॥ ೨೦ ॥

ಮೃತಮಾತ್ಮಾನಮಾತ್ಮೀಯೇ ಸದನೇ ಶೋಚ್ಯತಾಂ ಗತಂ ।
ಪತಿತಂ ವಾತವೇಗೇನ ಕಂದರಾಂತರಿವ ದ್ರುಮಂ ॥ ೨೧ ॥

ವನ್ನು ಸ್ಮರಿಸುತ್ತಾ, ಅರಳುತ್ತಿರುವ ಕಮಲಗಳಿಂದ ಕಂಗೊಳಿಸುತ್ತಿದ್ದ ಆ ಸರಸ್ಸಿನಲ್ಲಿ ಸ್ನಾನಮಾಡಲುದ್ಯುಕ್ತನಾದನು.

['ಒಬ್ಬ ಮಹರ್ಷಿಯು ತನ್ನ ಯೋಗ ಬಲದಿಂದ (ಭೂತ ಭವಿಷ್ಯತ್) ಅತೀತಾನಾಗತ ವಿಚಾರಗಳನ್ನು ಕಾಣುವುದಕ್ಕೆ ಮನಸ್ಸಿನಲ್ಲಿ ಯೋಚಿಸುವಂತೆ, ಎಂದು, ಮುಹರ್ಷಿರಿವ ಎಂಬ ಪದಕ್ಕೆ ತಾತ್ಪರ್ಯ ಪ್ರಕಾಶದಲ್ಲಿ ಟೀಕೆ ಮಾಡಿರುತ್ತೆ.]

೧೯. ಆಗ ಯಥಾವಿಧಿಯಾಗಿ ಸ್ನಾನ ಮಾಡುವ ಕರ್ಮದಲ್ಲಿ, ಸಕಲ ಪಾಪ ನಿವಾರಣೆಯು ಸಲುವಾಗಿ, ಅಘಮರ್ಷಣ ಮಂತ್ರಗಳನ್ನು ಜಪಿಸುವುದಕ್ಕೋಸ್ಕರ ಗಾಧಿಯು ನೀರಿನೊಳಗೆ ಇಳಿದು ದರ್ಭಮಯವಾದ ಪವಿತ್ರವನ್ನು ಕೈ ಬೆರಳಲ್ಲಿ ಧರಿಸಿ, ಆಚಮನ ಮಾಡಿ, ಬಲಗೈಯಿಂದ ನೀರನ್ನು ಎತ್ತಿಕೊಂಡು ಪ್ರದಕ್ಷಿಣಾಕಾರ ವಾಗಿ, ಎಡ ಹೆಗಲ ಮೇಲಿಂದ ಆವರ್ತದಂತೆ (ನೀರಿನ ಸುಳಿ) ಸುತ್ತಿಸಿದನು.

೨೦-೨೧. ಹೀಗೆ ನೀರಿನೊಳಗೆ ಮುಳುಗಿ ಸ್ನಾನ ಕರ್ಮವನ್ನು ಮಾಡುತ್ತಿರು ವಾಗ ಆ ಗಾಧಿಯೆಂಬ ಬ್ರಾಹ್ಮಣನು ಪ್ರಣವ ಜಪದಲ್ಲಿಯೂ, ಅಘಮರ್ಷಣ ಮಂತ್ರ ಪಠನದಲ್ಲಿಯೂ ಸ್ಮೃತಿ ತಪ್ಪಿದವನಾಗಿ (ಮರೆವು ಉಂಟಾದವನು) ಮತ್ತು ವಿಪರೀತ ಗ್ರಹಣೋನ್ಮುಖವಾದ ಬುದ್ಧಿ ಪ್ರಸಾರವುಳ್ಳವನಾಗಿ ಚಂಡ ಮಾರುತದ ರಭಸಕ್ಕೆ ಸಿಕ್ಕಿ ಉರುಳಿಕೊಂಡು ಒಂದು ಗುಹೆಯೊಳಗೆ ಬಿದ್ದಿರುವ ಮರದಂತೆ ತಾನು ತನ್ನ ಮನೆಯಲ್ಲಿ ಸತ್ತು ಬಿದ್ದಿರುವುದನ್ನು ತನ್ನನ್ನು ಕುರಿತು ಬಂಧು ಬಳಗಗಳೆಲ್ಲರೂ ಶೋಕಿಸುತ್ತಿರುವುದನ್ನೂ, ತಾನೇ ಆ ನೀರಿನ ಮಧ್ಯದಲ್ಲಿಯೇ ನೋಡಿದನು.

ಪ್ರಾಣಾಪಾನಪ್ರವಾಹೇಣ ಮುಕ್ತಮಂತಮುಪಾಗತಂ ।
ಸಂಶಾಂತಾವಯವಸ್ಪಂದಂ ನಿರ್ವಾತ ಇವ ಖಂಡಕಂ ॥ ೨೨ ॥

ಪಾಂಡುರಾನನಮಾವ್ಲಾನಂ ವೃಕ್ಷಪರ್ಣಮಿವಾರಸಂ ।
ವಶೀಭೂತಮಿವಾಗ್ಲಾನಂ ಛಿನ್ನನಾಲಮಿವಾಂಬುಜಂ ॥ ೨೩ ॥

ವಿಪರ್ಯಸ್ತೇಕ್ಷಣಂ ಪ್ರಾತರ್ಮಗ್ನ ತಾರಮಿವಾಂಬರಂ ।
ಸಾವಗ್ರಹಮಿವ ಗ್ರಾಮಂ ಸರ್ವತಃ ಪಾಂಸುಧೂಸರಂ ॥ ೨೪ ॥

ಬಾಷ್ಪಕ್ಲಿನ್ನಮುಖೈರ್ದೀನೈಃ ಕರುಣಾಕ್ರಂದಕಾರಿಭಿಃ ।
ಆವೃತಂ ಬಂಧುಭಿಃ ಖಿನ್ನೈಃ ಕುರರೈರಿವ ಪಾದಪಂ ॥ ೨೫ ॥

ಸೇತು ಭಂಗಗಲದ್ವಾರಿಹ್ರಿಯಮಾಣಮುಖಾಬ್ಜಯಾ ।
ನಲಿನ್ಯಾ ಸಮುಥರ್ಮಿಣ್ಯಾ ಭಾರ್ಯಯಾ ಪಾದಯೋಃ ಶ್ರಿತಂ ॥ ೨೬ ॥

ತಾರಾಕ್ರಂದರಣದ್ರೇಫ ಪ್ರಲಾಪಾಲಾಪಲುಬ್ಧಯಾ ।
ಮಾತ್ರಾ ಗೃಹೀತಂ ಚುಬುಕೇ ನವವ್ಯಂಜನಲಾಂಛಿತೇ ॥ ೨೭ ॥

ಅನ್ಯೈಃ ಪಾರ್ಶ್ವಗತೈರ್ದೀನೈಃ ಸ್ರವದಶ್ರುಮುಖೈರ್ಜನೈಃ ।
ಶ್ರಿತಂ ಗಲದವಶ್ಯಾಯೈಃ ಶುಷ್ಕಪರ್ಣೈರಿವ ದ್ರುಮಂ ॥ ೨೮ ॥

ವಿಯೋಗಭೀತ್ಯಾ ಸಂಯೋಗ ಪರಿಹಾರ ಪರೈರಿವ ।
ದೂರಂ ವಿಪ್ರಸೃತೈರಂಗೈರನಾತ್ಮೀಯೈರಿವಾವೃತಂ ॥ ೨೯ ॥

ಪರಸ್ಪರಮಲಗ್ನಾಭ್ಯಾಮೋಷ್ಠಾಭ್ಯಾಂ ದಶನೈಃ ಸಿತೈಃ ।
ಸವಿರಾಗಮಿವಾವ್ಲಾನೈರ್ಹಸಂತಂ ಸ್ವಾತ್ಮ ಜೀವಿತಂ ॥ ೩೦ ॥

ಮೌನ ಧ್ಯಾನ ಮಿವಾಪನ್ನಂ ಪದ್ಮಾದಿವ ವಿನಿರ್ಮಿತಂ ।
ಅಪ್ರಬೋಧಾಯ ಸಂಸುಪ್ತಂ ವಿಶ್ರಾಮ್ಯಂತ ಮಿವೋಚ್ಚಕೈಃ ॥ ೩೧ ॥

ಬಾಂಧವಾಕ್ರಂದ ಸಂರಂಭ ಕೋಲಾಹಲಗತಾ ಗಿರಃ ।
ಸ್ನೇಹಭಾವ ವಿಚಾರಾರ್ಥಂ ಶೃಣ್ವಂತಮಿವ ಯತ್ನತಃ ॥ ೩೨ ॥

೨೨-೩೨. ಆಗ ಅವನ ಆ ಮೃತ ದೇಹವು (ಅಂತ ಮುಪಾಗತಂ ಶರೀರಂ= ಅವಸಾನವನ್ನು ಹೊಂದಿದ ದೇಹ= ಶವ). ಪ್ರಾಣಾಪಾನಗಳ ಸಂತತವಾದ ಸಂಚಾರ ಶೂನ್ಯವಾಗಿ ವಾಯುವಿನ ಪ್ರಸಾರದಿಂದ ವಿವರ್ಜಿತವಾದ (ನಿರ್ವಾತ)

ಸ್ಥಳದಲ್ಲಿ ಬಿದ್ದಿರುವ ಬಾಳೆಯ ಕಂಬದಂತೆ ಸ್ವಲ್ಪವೂ ಕದಲದೆ ಇರುವ ಕರಚರಣಾದ್ಯವಯವಗಳುಳ್ಳದಾಗಿತ್ತು. ಅದರ ಮುಖವು ಬಹಳ ಬೆಳ್ಳಗೆ ತೇಜೋಹೀನವಾಗಿತ್ತು. ಒಣಗಿದ ಎಲೆಯಂತೆ ವಿರಸವಾಗಿತ್ತು. ಆ ದೇಹವು ವಸ್ತುತಃ ನಿರ್ಜೀವವಾದ ಶವವಲ್ಲದಿದ್ದರೂ ಶವದಂತೆಯೇ ಕಾಣುತ್ತಿತ್ತು. ನಾಳವನ್ನು ಕತ್ತರಿಸಿದ ಕಮಲದಂತೆ ಸಂಪೂರ್ಣವಾಗಿ ಬಾಡಿ ಹೋಗಿದ್ದಿತು. (ತಲೆಕೆಳಗಾದ) ವಿಪರ್ಯಸ್ತವಾದ ಕಣ್ಣುಗಳಿಂದ ಕೂಡಿ ಅಸ್ತಂಗತವಾಗಿರುವ ನಕ್ಷತ್ರಗಳುಳ್ಳ ಪ್ರಾತಃಕಾಲದ ಗಗನ ಮಂಡಲದಂತೆ ಕಾಣಿಸಿತು. ಅವಗ್ರಹದಿಂದ (ಚಿರಕಾಲ ಮಳೆಯೇ ಬೀಳದೆ ಸಂಭವಿಸಿದ ಬರದಿಂದ) ನಿರ್ಜನವಾಗಿರುವ ಒಂದು ಹಳ್ಳಿಯಂತೆ ಸರ್ವತ್ರ ಧೂಳಿಯು ಮುಸುಕಿಕೊಂಡು ಇತ್ತು. ಗುಬ್ಬಚ್ಚಿಗಳು ಚಿಲಿಪಿಲಿಗುಟ್ಟುತ್ತಾ (ಧ್ವನಿ ಮಾಡುತ್ತಾ) ಒಂದು ಮರವನ್ನು ಆವರಿಸಿಕೊಂಡಿರುವಂತೆ, ಸುರಿಯುತ್ತಿರುವ ಕಣ್ಣೀರಿನಲ್ಲಿ ನೆನೆದ ಮುಖಗಳುಳ್ಳವರಾಗಿಯೂ. ಉದ್ವಿಗ್ನರಾಗಿಯೂ ಇರುವ ಬಂಧುಗಳು ಖೇದದಿಂದ ವಿಹ್ವಲರಾಗಿ, ಕರುಣಾಜನಕವಾಗಿರುವಂತೆ ಘಟ್ಟಿಯಾಗಿ ಅಳುತ್ತಾ ಆ ಶವದ ಸುತ್ತಲೂ ಮುತ್ತಿಕೊಂಡಿದ್ದರು. ಕಟ್ಟೆಯು ಕಿತ್ತು ಹೋಗಲು ತಡೆಯಿಲ್ಲದೆ ಹರಿಯುವ ಜಲ ಪ್ರವಾಹದಿಂದ ಕೊಚ್ಚಿಕೊಂಡು ಹೋಗುವ ಕಮಲಗಳುಳ್ಳ ಕಮಲಿನಿಯಂತೆ ಅವನ ಹೆಂಡತಿಯು, ನಿರರ್ಗಳವಾಗಿ ಸುರಿಯುತ್ತಿದ್ದ ಕಣ್ಣೀರಿನ ಪ್ರವಾಹದೊಳಗೆ ತನ್ನ ಮುಖವನ್ನು ತೇಲಿಸಿಕೊಂಡು ಆ ಶವದ ಕಾಲುಗಳನ್ನು ಹಿಡಿದು ಅಳುತ್ತಿದ್ದಳು. ಅವನ ತಾಯಿಯೂ ಉಚ್ಚ ಧ್ವನಿಯಿಂದ ಝೇಂಕಾರ ಮಾಡುವ ಭ್ರಮರಿಯಂತೆ ನಿರರ್ಥಕವಾದ ನಾನಾ ಮಾತುಗಳನ್ನು ಕೂಗುತ್ತಲೂ, ಅತಿ ದೀರ್ಘವಾಗಿ ಹಾಹಾಕಾರ ಮಾಡುತ್ತಲೂ, ಆಗತಾನೆ ಹೊಸದಾಗಿ ಮೀಸೆ ಉದ್ಭವಿಸುತ್ತಿರುವ ಚಿಬುಕ (ಗಡ್ಡವನ್ನು) ಹಿಡಿದು ರೋದಿಸಿದಳು. ಕೆಳಕ್ಕೆ ಉದುರಿ ಒಣಗಿದ ಎಲೆಗಳು ಹಿಮದಿಂದ ನೆನೆದು ಮರವನ್ನು ಸುತ್ತಲೂ ಆವರಿಸಿಕೊಳ್ಳುವಂತೆ, ಇನ್ನೂ ಇತರ ಅನೇಕ ಸಮೀಪ ಬಂಧುಗಳು ದೀನರಾಗಿ ಕಣ್ಣುಗಳಲ್ಲಿ ನೀರು ಸುರಿಸುತ್ತ ಆ ಶವದ ಉಭಯ ಪಾರ್ಶ್ವಗಳಲ್ಲಿಯೂ ಮುತ್ತಿಕೊಂಡಿದ್ದರು. ಆ ಶರೀರದ ಅವಯವಗಳೆಲ್ಲವೂ, (ಸಂಯೋಗಾಃ ವಿಪ್ರಯೋಗಾಂತಾಃ ಎಂಬ ನ್ಯಾಯದಂತೆ) ಮೊದಲು ಒಟ್ಟಾಗಿ ಜೊತೆಯಲ್ಲಿ ಕೂಡಿಕೊಂಡಿದ್ದು, ತರುವಾಯ ವಿಯೋಗವನ್ನು ಪಡೆದು ಆಗ ದುಃಖಾನುಭವ ಮಾಡುವುದಕ್ಕಿಂತ ಮೊದಲೇ ಒಟ್ಟಿಗೆ ಜೊತೆಯಾಗಿ ಸೇರಿಕೊಳ್ಳದೆ ಇರುವುದೇ ಲೇಸು ಎಂದು ಯೋಚಿಸಿಕೊಂಡೋ ಎಂಬಂತೆ ಆ ಶರೀರದೊಂದಿಗೆ ಅವುಗಳಿಗೆ ಹಿಂದೆ ಯಾವಾಗಲೂ ಸುತರಾಂ ಸಂಬಂಧವೇ ಇರಲಿಲ್ಲ ಎಂಬ ಭ್ರಾಂತಿಯನ್ನು ಪ್ರೇಕ್ಷಕರಿಗೆ ಉಂಟು ಮಾಡುತ್ತಾ ಇರುವಂತೆ ದೂರದೂರದಲ್ಲಿ ಚದುರಿಹೋಗಿ ಬಿದ್ದಿದ್ದವು. ಎರಡು

ಅಥ ತತ್ಕಾಲ ಕಲ್ಲೋಲ ಪ್ರಲಾಪಾಕುಲ ಚೇಷ್ಟಿತೈಃ ।
ಸೋರಸ್ತಾಡನ ಮೂರ್ಛೋತ್ಥ ನೇತ್ರವಾರಿವಹಾಪ್ಲುತೈಃ ॥ ೩೩ ॥

ಕ್ರಮೇಣ ಸ್ವಜನೈಃ ಕ್ಷುಬ್ಧೈಸ್ತಾರಾ ಕ್ರಂದಾದಿ ಘರ್ಘರೈಃ ।
ನಿಷ್ಕಾಲಿತಮಮಂಗಲ್ಯಮಪುನರ್ದರ್ಶನಾಯ ವೈ ॥ ೩೪ ॥

ತುಟಿಗಳೂ ಒಂದಕ್ಕೊಂದು ಕೂಡದೆ ಬಾಯಿ ತೆರೆದುಕೊಂಡಿದ್ದುದರಿಂದ ಒಳಗಣ ಶುಭ್ರವಾದ ಹಲ್ಲುಗಳು ಸ್ವಲ್ಪ ಮಲಿನವಾಗಿ ಹೊರಗೆ ಕಾಣುತ್ತಿದ್ದುವು. ಇದನ್ನು ನೋಡಿದರೆ ಆ ದೇಹವು ತನ್ನ ಜೀವಿತದಲ್ಲಿ ತಾನೇ ವಿರಕ್ತವಾಗಿ ಇದುವರೆವಿಗೂ ಅದು ವ್ಯರ್ಥವಾಗಿ ಹೋಗಿತ್ತೆಂದು ಪರಿಹಾಸ ಮಾಡುತ್ತಿದೆಯೋ ಎಂಬಂತೆ ಕಾಣಿಸಿತು. ಮತ್ತು ಆ ದೇಹವು ಮೌನದಿಂದ ಧ್ಯಾನಮಗ್ನವಾಗಿದೆಯೋ ಎಂಬಂತೆಯೂ, ಮಣ್ಣಿನಿಂದ ನಿರ್ಮಿತವಾದುದೋ ಎಂಬಂತೆಯೂ, ಪುನಃ ಎಚ್ಚರಗೊಳ್ಳಲೇಬಾರದೆಂದು ಉದ್ದೇಶಿಸಿ ಗಾಢನಿದ್ರಾ ಪರವಶವಾಗಿದೆಯೋ ಎಂಬಂತೆಯೂ, ಇದುವರೆವಿಗೆ ಸಂಸಾರದಲ್ಲಿ ಅನುಭವಿಸಿದ ಶ್ರಮವನ್ನು ನೀಗುವುದಕ್ಕಾಗಿ ದೀರ್ಘ ವಿಶ್ರಾಂತಿಯನ್ನು ಪಡೆಯುತ್ತಿದೆಯೋ ಎಂಬಂತೆಯೂ ಬಂಧುಗಳು ರೋದನ ಮಾಡುತ್ತಾ ಗಾಬರಿಗೊಂಡು ಕೋಲಾಹಲವನ್ನೆಬ್ಬಿಸಲು ಅದರಲ್ಲಿರುವ ಶಬ್ದಗಳನ್ನು ಅವರೊಳಗೆ ತನ್ನನ್ನು ಹೆಚ್ಚಾಗಿ ಪ್ರೀತಿಸುವವರು ಯಾರು? ತನ್ನ ಮೇಲೆ ಯಾರಿಗೆ ಪ್ರೀತಿಯು ಕಡಿಮೆಯಾಗಿದೆ? ಎಂಬುದನ್ನು ವಿಮರ್ಶಿಸಿ ಗೊತ್ತುಹಚ್ಚುವುದಕ್ಕೋಸ್ಕರ ಸಾವಧಾನವಾಗಿ ಪ್ರಯತ್ನ ಪೂರ್ವಕ ಮೌನದಿಂದಿದ್ದು ಕೇಳುತ್ತಿದೆಯೋ ಎಂಬಂತೆಯೂ ತೋರಿತು.

೩೩-೩೪. ಆ ಗಾಧಿಯು ಈ ಬಗೆಯಾದ ತನ್ನ ಮೃತ ದೇಹವನ್ನು ಕಂಡುದುದೂ ಅಲ್ಲದೆ, ಆ ಬಳಿಕ ತನ್ನ ಬಂಧುಗಳು ವಿಶೇಷವಾಗಿ ಪ್ರಲಾಪಿಸುತ್ತಲೂ ವ್ಯಾಕುಲವಾಗಿ ಆ ಕಾಲದಲ್ಲಿ ಆ ಶವವನ್ನು ಹೊರಕ್ಕೆ ಒಯ್ಯುವುದಕ್ಕಾಗಿ ಬೇಕಾದ ಕೆಲಸ ಮಾಡುತ್ತಲೂ, ಎದೆಗಳನ್ನು ಬಡಿದುಕೊಳ್ಳುತ್ತಲೂ, ಮೂರ್ಛೆಗೊಳ್ಳುತ್ತಲೂ, ಕಣ್ಣುಗಳಿಂದ ಉದ್ಭವಿಸಿದ ಅಶ್ರುಜಲ ಪ್ರವಾಹಗಳಿಂದ ನೆನೆಯುತ್ತಲೂ, ಉಚ್ಚ ಧ್ವನಿಯಿಂದ ಹೆಚ್ಚಾಗಿ ಅತ್ತು, ಕಿರಿಚಿಕೊಂಡು ಘರ್ಘರ ಶಬ್ದವನ್ನೆಬ್ಬಿಸುತ್ತಲೂ, ಕ್ಷೋಭೆಗೊಂಡವರಾಗಿ ಅಮಂಗಳಕರವಾದ ಆ ಶವವನ್ನು ಪುನಃ ನೋಡದೆ ಇರುವುದಕ್ಕಾಗಿ, ಕ್ರಮೇಣ ಮನೆಯಿಂದ ಹೊರಕ್ಕೆ ಸಾಗಿಸಿದುದನ್ನು ಕಂಡನು.

ನೀತಂ ಸ್ಮಶಾನಂ ಮಾಂಸಾಂತ್ರವಸಾಪಂಕ ಕಲಂಕಿತಂ !
ಶುಷ್ಕಾ ಶುಷ್ಕ ರಸಕ್ಲಿನ್ನಂ ಕಂಕಾಲಶತ ಸಂಕುಲಂ ॥ ೩೫ ॥

ಗೃಧ್ರಾಭ್ರಚ್ಛನ್ನ ಸೂರ್ಯಾಂಶು ಚಿತಾ ಜ್ವಲನ ನಿಸ್ತಮಃ ।
ಶಿವಾ ಶಿವ ಮುಖಜ್ವಾಲಾ ಜಾಲ ಪಲ್ಲವಿತಾ ವನೀ ॥ ೩೬ ॥

ವಹದ್ರಕ್ತ ಸರಿತ್ಸ್ನಾತ ಮಗ್ನ ಕಂಕೋಗ್ರ ವಾಯಸಂ ।
ರಕ್ತಾರ್ದ್ರಾಂತ್ರತಂತ್ರೀ ಪ್ರಸರ ಜಾಲಾ ಬದ್ಧ ಜರತ್ಖಗಂ ॥ ೩೭ ॥

ತತ್ರ ತೇ ಜ್ವಲನೇ ದೀಪ್ತೇ ಚಕ್ರುಸ್ತಂ ಭಸ್ಮಸಾಚ್ಛವಂ ।
ಬಾಂಧವಾಃ ಸಲಿಲಾಪೂರಂ ಸಮುದ್ರಾ ಇವ ಬಾಡವೇ ॥ ೩೮ ॥

೩೫-೩೬-೩೭-೩೮. ಕೂಡಲೇ ಬಂಧುಗಳು ಆ ಶವವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋದರು. ಆ ಸ್ಮಶಾನದಲ್ಲಿ ನೆಲವು ಮಾಂಸಗಳಿಂದಲೂ, ನರಗಳಿಂದಲೂ, ಕೊಬ್ಬಿನಿಂದಲೂ ಕೆಸರಾಗಿ ಅಸಹ್ಯವಾಗಿತ್ತು. ಎಲ್ಲಿ ನೋಡಿದರೆ ಅಲ್ಲಿ ಅಸಂಖ್ಯಾಕವಾದ ಮೂಳೆ (ಎಲುಬುಗಳು) ರಾಶಿರಾಶಿಯಾಗಿ ಬಿದ್ದಿದ್ದವು. ಅವು ರಕ್ತಮಯವಾಗಿದ್ದುವು. ಕೆಲವು ಮಳೆಗಳಲ್ಲಿ ರಕ್ತವು ಹಸಿಯಾಗಿಯೂ ಮತ್ತೆ ಕೆಲವುಗಳಲ್ಲಿ ಒಣಗಿಯೂ ಇತ್ತು. ಅಲ್ಲಿ ಹದ್ದುಗಳು ಹಾರಾಡುತ್ತಾ ಸೂರ್ಯರಶ್ಮಿಯೇ ಕೆಳಗೆ ಬೀಳದಷ್ಟು ಒತ್ತಾಗಿ ಆಕಾಶವನ್ನೆಲ್ಲ ಮುಸುಕಿದ್ದುವು. ಆದರೂ ಚಿತೆಯು ಉರಿಯುತ್ತಿದ್ದ ಕಾರಣ. ಆ ಅಗ್ನಿಯ ಬೆಳಕಿನಿಂದ ಅಲ್ಲಿನ ಕತ್ತಲೆಯು ನಿಶ್ಶೇಷವಾಗಿ ಹೋಗಿದ್ದಿತು. ಅಲ್ಲಿದ್ದ ನರಿಗಳ ಅಮಂಗಳಕರವಾದ ಬಾಯಿಂದ ಹೊರಗೆ ಜ್ವಾಲೆಯಂತೆ ಹೊರಟಿದ್ದ ನಾಲಗೆಗಳು ಆ ಭೂಮಿಯಲ್ಲಿ ಅಂಕುರಿಸಿದ ಪಲ್ಲವಗಳಂತೆ ಕಾಣುತ್ತಿದ್ದುವು. ಅಲ್ಲಿ ಹರಿಯುತ್ತಿದ್ದ ರಕ್ತ ನದಿ ಪ್ರವಾಹಗಳೊಳಗೆ ಕಾಗೆ ಹದ್ದು ಮೊದಲಾದ ಭೀಕರ ಪಕ್ಷಿಗಳು ಮುಳುಗಿ ಸ್ನಾನ ಮಾಡುತ್ತಿದ್ದುವು. ಮತ್ತೆ ಕೆಲವು ಮುದಿ ಹಕ್ಕಿಗಳು ರಕ್ತದಿಂದ ನೆನೆದಿರುವ ನರಗಳ ಗುಂಪಿನೊಳಗೆ ಸಿಕ್ಕಿಕೊಂಡು ಬಲೆಯಲ್ಲಿ ಸಿಕ್ಕಿಬಿದ್ದವುಗಳಂತೆ ಹೊರಗೆ ಬರಲಾಗದೆ ಒದ್ದಾಡುತ್ತಿದ್ದುವು. ಅಂತಹ ಘೋರವಾದ ಹಾಳು ಸ್ಮಶಾನದೊಳಗೆ ಅವನ ಬಂಧುಗಳು ಸಮುದ್ರಗಳು ತಮ್ಮ ನೀರನ್ನು ಬಡಬಾಗ್ನಿಯಲ್ಲಿ ಸುಟ್ಟುಬಿಡುವಂತೆ ಪ್ರಜ್ವಲಿತವಾದ ಚಿತಾಗ್ನಿಯಲ್ಲಿ ಆ ಶವವನ್ನು ಸುಟ್ಟು ಬೂದಿ ಮಾಡಿಬಿಟ್ಟರು.

ಚಿತಿಶ್ಚಟಚಟಾ ಸ್ಫೋಟೈಃ ಶವಮಾಶು ದದಾಹ ಸಾ ।
ಶುಷ್ಕೇಂಧನ ಬಹೂಚ್ಛ್ರಾನಜ್ವಾಲಾ ಜಾಲ ಜಟಾವಲೀ ॥ ೩೯ ॥

ಅಭ್ಯುಲ್ಲಸತ್ಕಟ ಕಟಾರವ ಮುಕ್ತ ಗಂಧ
ವ್ಯಾಪ್ತಾಂಬುವಾಹ ಪಟಲೋಽಸ್ತಿಚಯಂ ಹುತಾಶಃ ॥
ದಂತೀ ಸರಂಧ್ರಮಿವ ವೇಣುವನಂ ಸಮಂತಾ
ದುದ್ವಾಂತಮೇದುರರಸಂ ದಲಯಾಂಚಕಾರ ॥ ೪೦ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು
ಉಪಶಮ ಪ್ರಕರಣೇ ಗಾಧಿ ವೃತ್ತಾಂತೇ " ಗಾಧಿವಿನಾಶೋನಾಮ "
ಚತುಶ್ಚತ್ವಾರಿಂಶಃ ಸರ್ಗಃ.

---

೩೯. ಆ ಸ್ಮಶಾನದಲ್ಲಿ ಒಣಗಿದ ಸೌದೆಗಳಿಂದ ಅತ್ಯಂತ ಎತ್ತರವಾಗಿ ರಜಿತವಾಗಿದ್ದ ಆ ಚಿತೆಯು ವಿಶೇಷ ಜ್ವಾಲಾ ಮಾಲೆಗಳಿಂದ ಪರಿವೃತವಾಗಿ ಚಟ ಚಟ ಎಂದು ಆಸ್ಫೋಟನ ಮಾಡುತ್ತಾ ಬೇಗನೆ ಆ ಶವವನ್ನು ದಹಿಸಿಬಿಟ್ಟಿತು.

೪೦. ಆಗ ಆ ಚಿತಾಗ್ನಿಯು ಉಲ್ಲಾಸಗೊಂಡು ಕಟಕಟಾ ಶಬ್ದಗಳಿಂದಲೂ ಹೊರಹೊಮ್ಮುತ್ತಿರುವ ದುರ್ಗಂಧಗಳಿಂದಲೂ ಮೇಘ ಮಂಡಲವನ್ನೆಲ್ಲ ವ್ಯಾಪಿಸಿಕೊಂಡು ಮದಿಸಿದ ಆನೆಯು ರಂಧ್ರಸಹಿತವಾದ ವೇಣು ವನವನ್ನು (ಬಿದಿರು ಮೆಳೆಯನ್ನು) ಸೀಳಿಬಿಡುವಂತೆಯೇ ಸುತ್ತಲೂ ಹೆಚ್ಚಾಗಿ ರಸವನ್ನು ಕಾರುತ್ತಿದ್ದ ಆ ದೇಹದ ಮೂಳೆಗಳ ಸಮುದಾಯವನ್ನೆಲ್ಲ ಸೀಳಿ ಹಾಕಿಬಿಟ್ಟಿತು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಉಪಶಮ ಪ್ರಕರಣದಲ್ಲಿ ಗಾಧಿ ವಿನಾಶವೆಂಬ ನಲವತ್ತ ನಾಲ್ಕನೆಯ ಸರ್ಗವು.

ಪಂಚ ಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಅಥಾ ಪಶ್ಯದಸೌ ಗಾಧಿಃ ಸ್ವಾಧಿಪೀವರಯಾ ಧಿಯಾ ।
ಅಂತರ್ಜಲಸ್ಥ ಏವಾಂತರಾತ್ಮನಾತ್ಮನಿ ನಿರ್ಮಲೇ ॥ ೧ ॥

ಭೂತ ಮಂಡಲ ಪರ್ಯಂತ ಗ್ರಾಮೋಪಾಂತ ನಿವಾಸಿನಾಂ ।
ಶ್ವಪಚಾನಾಂ ಸ್ತ್ರಿಯಾ ಗರ್ಭೇ ಸ್ಥಿತಿಮಾತ್ಮಾನಮಾಕುಲಂ ॥ ೨ ॥

ಗರ್ಭವಾಸಭರಾಕ್ರಾಂತಂ ಪೀಡಿತಂ ಪೇಲವಾಂಗತಂ ।
ಶ್ವಪಚೀ ಹೃದಯೇ ಸುಪ್ತಂ ಸ್ವವಿಷ್ಟಾಯಾಮಿವಾಕುಲಂ ॥ ೩ ॥

ನಲವತ್ತೈದನೆಯ ಸರ್ಗ

ಶ್ರೀ ವಸಿಷ್ಠನು ಹೇಳಿದನು:—

೧. (ರಾಮ, ಮುಂದಿನ ವೃತ್ತಾಂತವನ್ನು ಹೇಳು) ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ ಆ ಗಾಧಿಯೆಂಬ ಬ್ರಾಹ್ಮಣನು ಸ್ನಾನಾರ್ಥವಾಗಿ ನೀರಿನೊಳಗೆ ಮುಳುಗಿ, ಬುದ್ಧಿ ವಿಪರ್ಯಾಸದಿಂದ ತನ್ನ ದೇಹವನ್ನು ಬಂಧುಗಳು ಸ್ಮಶಾನದಲ್ಲಿ ಸುಟ್ಟು ಬಿಟ್ಟುದನ್ನು ಕಂಡ ಬಳಿಕಲೂ ಇನ್ನೂ ಹಾಗೆಯೇ ನಿರ್ಮಲವಾದ ನೀರಿನೊಳಗೇ ಇದ್ದುಕೊಂಡು ಮಾನಸಿಕವಾದ ದುಃಖಗಳಿಂದ ಪರಿಪೂರ್ಣವಾದ ಬುದ್ಧಿಯಿಂದ ತನ್ನೊಳಗೆ ತಾನೇ ತನ್ನ ಮನಸ್ಸಿನಲ್ಲಿ ಮುಂದೆ ಹೇಳುವುದನ್ನೆಲ್ಲ ಕಂಡನು.

೨. ಭೂತ ಮಂಡಲವೆಂಬ ಒಂದು ದೇಶದ ಎಲ್ಲೆಯಲ್ಲಿದ್ದ ಒಂದು ಹಳ್ಳಿಯ ಸಮೀಪದಲ್ಲಿ ವಾಸವಾಗಿದ್ದ ಶ್ವಪಚರ (ಶ್ವಪಾಕ= ನಾಯಿಯ ಮಾಂಸವನ್ನು ಬೇಯಿಸುವ ಕೀಳು ಜನರು) ಗುಂಪಿನಲ್ಲಿ ಒಬ್ಬ ಸ್ತ್ರೀಯು ತನ್ನನ್ನು ಗರ್ಭದಲ್ಲಿ ಧರಿಸಿರುವಂತೆ ಕಂಡು ವ್ಯಾಕುಲಗೊಂಡನು.

೩. ಆ ಶ್ವಪಚ ಸ್ತ್ರೀಯ ಗರ್ಭದಲ್ಲಿ ವಾಸಮಾಡಿಕೊಂಡು, ಅನೇಕ ದುಃಖಾತಿರೇಕಗಳಿಂದ ಆಕ್ರಾಂತನಾಗಿಯೂ, ಅತಿ ಮೃದು ಶರೀರಿಯಾಗಿಯೂ, ಅವಳ

ಶನೈಃ ಪಕ್ವತಯಾ ಕಾಲೇ ಪ್ರಸೂತಂ ಮೇಚಕಚ್ಛವಿಂ ।
ಶ್ವಪಚ್ಯಾ ಪ್ರಾವೃಷೇವಾಬ್ದಂ ಶ್ಯಾಮಮಾವಲಿತಂ ಮಲೈಃ ॥ ೪ ॥

ಸಂಪನ್ನಂ ಶ್ವಪಚಾಗಾರೇ ಶಿಶುಂ ಶ್ವಪಚವಲ್ಲಭಂ ।
ಇತಶ್ಚೇತಶ್ಚ ಗಚ್ಛಂತಮುತ್ಪೀಡಮಿವ ಯಾಮುನಂ ॥ ೫ ॥

ದ್ವಾದಶಾಬ್ದದಶಾಂ ಯಾತಂ ಸಂಸ್ಥಿತಂ ಷೋಡಶಾಬ್ದಿಕಂ ।
ಪೀವರಾಂಸಮುದಾರಾಂಗಂ ಪಯೋದಮಿವ ಮೇದುರಂ ॥ ೬ ॥

ಸಾರಮೇಯ ಪರೀವಾರಂ ವಿಹರಂತಂ ವನಾದ್ವನಂ ।
ನಿಘ್ನಂತಂ ಮೃಗಲಕ್ಷಾಣಿ ಪೌಲಿಂದೀಂ ಸ್ಥಿತಿಮಾಗತಂ ॥ ೭ ॥

ಹೃದಯದಲ್ಲಿ ಮಲಗಿಕೊಂಡಿರಲು ಅಮೇಧ್ಯ ಮಧ್ಯದಲ್ಲಿ ಬಿದ್ದು ಹೊರಳಾಡುವ ನರನಷ್ಟು ದುಃಖಿತನಾಗಿಯೂ ಇರುವಂತೆ ತನ್ನನ್ನು ಕಂಡನು.

೪. ಬಳಿಕ, ಗರ್ಭವು ಕಾಲಕ್ರಮದಲ್ಲಿ ಪಕ್ವವಾಗಲಾಗಿ, ಆ ಶ್ವಪಚಿಯು ವರ್ಷಾಕಾಲವು ನೀಲ ಮೇಘವನ್ನು ಸೃಜಿಸುವಂತೆ ಅತ್ಯಂತ ಕಪ್ಪು ಬಣ್ಣವುಳ್ಳ ವಿವಿಧ ಮಲಗಳಿಂದ ವಿಲಿಪ್ತವಾದ ಮಗುವನ್ನು ಹೆತ್ತಳು.

೫. ಆ ಶಿಶುವು ಸ್ವಲ್ಪ ಕಾಲಾನಂತರ ಶ್ವಪಚರ ಮನೆಯಲ್ಲಿ ಅವನ ಜಾತಿಯವರಿಗೆಲ್ಲಾ ಅತ್ಯಂತ ಮುದ್ದಾಗಿ (ಪ್ರೀತಿ ಪಾತ್ರವಾಗಿ) ರುತ್ತ, ಯಮುನಾ ನದಿಯ ಪ್ರವಾಹ ಮಧ್ಯದಲ್ಲಿ ಬಿದ್ದ ನೀಲೋತ್ಪಲದಂತೆ, ಬಹು ಕರ್‍ರಗೆ, ಇಲ್ಲಿಗೂ ಅಲ್ಲಿಗೂ ಸಂಚಾರ ಮಾಡತೊಡಗಿತು.

೬. ಹಾಗೆಯೇ ಆ ಬಾಲಕನಿಗೆ ಹನ್ನೆರಡು ವರ್ಷ ತುಂಬಿತು. ಆಮೇಲೆ ಹದಿನಾರು ವರ್ಷಗಳೂ ತುಂಬಿದುವು. ಅವನ ಹೆಗಲುಗಳು ಚೆನ್ನಾಗಿ ಬಲಿತುಕೊಬ್ಬಿದುವು. ಅಂಗೋಪಾಂಗಗಳು ದೃಢವಾಗಿ ಬೆಳೆದುವು. ಜಲ ಭರಿತವಾದ ಮೇಘದಂತೆ ಅವನ ದೇಹವು ರಸಭರಿತವಾಗಿ ಸುಪುಷ್ಟವಾಯಿತು.

೭. ಆಮೇಲೆ ಅವನು ಬೇಟೆ ನಾಯಿಗಳನ್ನು ಜೊತೆಮಾಡಿಕೊಂಡು, ಒಂದು ಕಾಡಿನಿಂದ ಮತ್ತೊಂದು ಕಾಡಿಗೆ ಅಲೆಯುತ್ತಲೂ, ಲಕ್ಷಗಟ್ಟಳೆ ಮೃಗಗಳನ್ನು ಬೇಟೆಯಾಡುತ್ತಲೂ ಬೇಡರ ಸ್ಥಿತಿಯನ್ನು ಪಡೆದನು.

ತಮಾಲ ಲತ ಏವಾಥ ಶ್ರಿತಂ ಶ್ವಪಚಕಾಂತಯಾ ।
ಸ್ತನಸ್ತಬಕ ಶಾಲಿನ್ಯಾ ನವ ಪಲ್ಲವ ಹಸ್ತಯಾ ॥ ೮ ॥

ಶ್ಯಾಮಯಾ ಮಲಿನಾಕಾರ ದಶನಾಮಲಮಾಲಯಾ ।
ವನ ಪಲ್ಲವಯಾ ಭೂರಿ ವಿಲಾಸವಲಿತಾಂಗಯಾ ॥ ೯ ॥

ವಿಲಸಂತಂ ವನಾಂತೇಷು ತಯಾ ಸಹ ನವೇಷ್ಟಯಾ ।
ಶ್ಯಾಮಲಂ ಶ್ಯಾಮಯಾ ಭೃಂಗಂ ಭೃಂಗ್ಯೇವ ಕುಸುಮರ್ದ್ಧಿಷು ॥ ೧೦ ॥

ವನಪರ್ಣ ಲತಾಪತ್ರೇ ವಸಂತಂ ವ್ಯಸನಾತುರಂ ।
ವಿಂಧ್ಯಕಾಂತಾರಮಾಕಾರ ಮಭ್ಯಾಗತ ಮಿವೋದ್ಭಟಂ ॥ ೧೧ ॥

---

೮. ಕೆಲವು ಕಾಲದ ಮೇಲೆ, ಪುಷ್ಪಸ್ತಬಕಗಳೆಂಬ ಸ್ತನಗಳನ್ನು ನವ ಪಲ್ಲವ ಗಳೆಂಬ ಹಸ್ತಗಳನ್ನು ಧರಿಸಿಕೊಂಡು ತಮಾಲ ಲತೆಯಂತಿದ್ದ ಒಬ್ಬ ಶ್ವಪಚ ಯುವತಿಯು ಅವನನ್ನು ಮದುವೆಯಾದಳು.

೯-೧೦. ಅತ್ಯಂತ ಕಪ್ಪಾದ ಶರೀರವುಳ್ಳವಳಾಗಿಯೂ, ಬಹು ದೀರ್ಘ ಕಾಲ ದಿಂದ ಉಜ್ಜಿ ತೊಳೆಯದ ಕಾರಣ ಅತ್ಯಂತ ಮಲಿನವಾಗಿರುವ (ಸ್ವಭಾವತಃ ಬೆಳ್ಳಗಿ ರುವ) ಪಂಕ್ತಿಗಳುಳ್ಳವಳಾಗಿಯೂ, ವನ ಪಲ್ಲವಗಳನ್ನು ಅನುಕರಿಸುವ ತನ್ನ ಕೋಮಲವಾದ ಅಂಗಗಳಿಂದ ಅತ್ಯಂತ ವಿಲಾಸಮಯಿಯಾಗಿ ವಿಹರಿಸುವವ ಳಾಗಿಯೂ ಇದ್ದ ನವೋಢೆಯಾಗಿ ಸದಾ ಅತ್ಯಂತ ಪ್ರಿಯಳಾದ ಆ ಶ್ವಪಚಿಯೊಡನೆ ಅವನು ಕಪ್ಪಗಿರುವ ಒಂದು ಭ್ರಮರವು ಕಪ್ಪಾದ ಭ್ರಮರಿಯೊಡನೆ ಪುಷ್ಪ ಸಮೃದ್ಧಿಯುಳ್ಳ ವನಾಂತರಗಳಲ್ಲಿ ವಿಹರಿಸುವಂತೆ ಸದಾ ವನಾಂತಗಳಲ್ಲಿ ವಿಹರಿ ಸಿದನು.

೧೧. ವಿಂಧ್ಯ ಪರ್ವತದ ಅರಣ್ಯವೇ ಹೀಗೆ ಪುರುಷಾಕಾರವನ್ನು ಧರಿಸಿ ಕೊಂಡು ಬಂದಿಯೋ ಎಂಬಂತೆ ಮಹಾ ಶರೀರಿಯಾದ (ಉದ್ಭಟ) ಆ ಶ್ವಪಚನು ಅತ್ಯಂತ ಕಾಮಬಾಧೆಯಿಂದ ಪೀಡಿತನಾಗಿ ಅವಳೊಡನೆ ವನಗಳಲ್ಲಿ ಎಲೆಗಳ ರಾಶಿಯ ಮೇಲೆ ಮಲಗುತ್ತಲೂ, ಲತಾ ಪತ್ರಗಳಿಂದ ಶೀತಲವಾದ ಕಡೆಗಳಲ್ಲಿ ಕ್ರೀಡಿ ಸುತ್ತಲೂ ಇದ್ದನು.

ವಿಶ್ರಾಂತಂ ವನಕುಂಜೇಷು ಸುಪ್ತಂ ಗಿರಿದರೀಷು ಚ ।
ನಿಲೀನಂ ಪತ್ರಪುಂಜೇಷು ಗುಲ್ಮಕೇಷು ಕೃತಾಲಯಂ ॥ ೧೨ ॥

ಕಿಂಕಿರಾತಾವತಂ ಸಾಢ್ಯಂ ಯೂಥಿಕಾಧಿಸ್ರಗ್ವಿಭೂಷಿತಂ ।
ಕೇತಕೋತ್ತಂಸಸುಭಗಂ ಸಹಕಾರಸ್ರಗಾಕುಲಂ ॥ ೧೩ ॥

ಲುಲಿತಂ ಪುಷ್ಪ ಶಯ್ಯಾಸು ಭ್ರಾಂತಮದ್ರಿತಟೀಷು ಚ ।
ತಜ್ಞಂ ಕಾನನಕೋಶೇಷು ಬಹುಜ್ಞಂ ಮೃಗಮಾರಣೇ ॥ ೧೪ ॥

ಪ್ರಸೂತಮಥ ಶೈಲೇಷು ಪುತ್ರಾನ್ನಿಜಕುಲಾಂಕುರಾನ್ ।
ಅತ್ಯಂತ ವಿಷಮೋದಂತಾನ್ಖದಿರಃ ಕಂಟಕಾನಿವ ॥ ೧೫ ॥

---

೧೨. ಮತ್ತು ಅವನು ಎಲೆಗಳ ರಾಶಿಗಳ ಮೇಲೆ ಬಿದ್ದುಕೊಳ್ಳುತ್ತಲೂ, ಗಿರಿ, ಗುಹೆಗಳಲ್ಲಿ ನಿದ್ರಿಸುತ್ತಲೂ, ಎಲೆಗಳು ಕವಿದಿರುವ ಲತಾ ಗೃಹಗಳೊಳಗೆ ವಿಶ್ರಮಿಸಿಕೊಳ್ಳುತ್ತಲೂ, ಪೊದರುಗಳಲ್ಲಿ ಮನೆ ಮಾಡಿಕೊಂಡು ವಾಸಿಸುತ್ತಲೂ ಇದ್ದನು.

೧೩. ಅವನು ಕಿಂಕಿರಾತವೆಂಬ ವೃಕ್ಷಗಳ ಹೂಗಳನ್ನು ಕಿವಿಗಳ ಮೇಲೆ ಅಲಂಕರಿಸಿಕೊಳ್ಳುತ್ತಲೂ, ಯೂಥಿಕಾ ಪುಷ್ಪಗಳ ಮಾಲೆಗಳನ್ನು ಕೊರಳಲ್ಲಿ ಧರಿಸುತ್ತಲೂ, ಕೇತಕಿ ಪುಷ್ಪವನ್ನೂ ಸಹಕಾರ ಪುಷ್ಪ ಮಾಲೆಯು ಸಂಗಡ ತಲೆಯಲ್ಲಿ ಧರಿಸಿಕೊಳ್ಳುತ್ತಲೂ ವಿಹರಿಸಿದನು.

೧೪. ಪುಷ್ಪಮಯಗಳಾದ ಹಾಸಿಗೆಗಳ ಮೇಲೆ ಮಲಗಿದನು. ಪರ್ವತಗಳ ದಡಗಳಲ್ಲಿ (ಪ್ರಸ್ಥಭೂಮಿಗಳಲ್ಲಿ) ತಿರುಗಾಡಿದನು. ಅರಣ್ಯ ಪ್ರಾಂತಗಳ ವಿಚಾರಗಳನ್ನೆಲ್ಲ ಚೆನ್ನಾಗಿ ಅರಿತನು. ಬೇಟೆಯಾಡಿ ಮೃಗಗಳನ್ನು ಕೊಲ್ಲುವುದರಲ್ಲಿ ಬಹು ಚತುರ (ನಿಸ್ಸೀಮ)ನಾದನು.

೧೫. ಹೀಗೆಯೂ ಕೆಲವು ವರ್ಷಗಳು ಕಳೆದ ಬಳಿಕ; ಕಗ್ಗಿಲಿ (ಖದಿರ) ಗಿಡದಲ್ಲಿ ಮುಳ್ಳುಗಳು ಉದಯಿಸುವಂತೆ ಕೇಳುವುದಕ್ಕೂ ಅಶಕ್ಯವಾದಷ್ಟು ಹೆಚ್ಚು ಕ್ರೂರ ಚರಿತರಾದ ಅವನ ವಂಶಕ್ಕೆ ಅಂಕುರ ಪ್ರಾಯರಾದ ಅನೇಕ ಪುತ್ರರು ಅವನಿಗೆ ಆ ಶ್ವಪಚಿಯಲ್ಲಿ (ಆ ಪರ್ವತ ಪ್ರಾಂತಗಳಲ್ಲಿಯೇ) ಹುಟ್ಟಿದರು.

ಕಲತ್ರವಂತಂ ಸಂಪನ್ನಂ ಸ್ಥಿತಂ ಪ್ರಕ್ಷೀಣ ಯೌವನಂ ।
ಶನೈರ್ಜರ್ಜರತಾಂ ಯಾತಂ ವೃಷ್ಟಿಹೀನಮಿವ ಸ್ಥಲಂ ॥ ೧೬ ॥

ತತೋಽಭೂತಗ್ರಹಗ್ರಾಮ ಜನ್ಮದೇಶಮುಪೇತ್ಯ ತಂ ।
ಸಂಸ್ಥಿತಂ ಮಠಿಕಾಂ ಪರ್ಣೈಃ ಕೃತ್ವಾ ದೂರೇ ಮುನೀಂದ್ರವತ್ ॥ ೧೭ ॥

ಜರಾಜರಠತಾಂ ಯಾತಂ ಸ್ವದೇಹಸಮ ಪುತ್ರಕಂ ।
ಜೀರ್ಣಪ್ರಾಯ ರಸಶ್ವಭ್ರುತಮಾಲತರು ಸನ್ನಿಭಂ ॥ ೧೮ ॥

ಪ್ರೌಢಂ ಶ್ವಪಚಗಾರ್ಹಸ್ಥ್ಯಂ ಕುರ್ವಾಣಂ ಬಹುಬಾಂಧವಂ ।
ಕ್ರೂರನಾಮಾರ್ಥ ವಚನಂ ಪರಾಂ ವೃದ್ಧಿ ಮುಪಾಗತಂ ॥ ೧೯ ॥

---

೧೬. ಈ ಪ್ರಕಾರವಾಗಿ ಅವನು ಅಲ್ಲಿ ದೊಡ್ಡ ಕುಟುಂಬಿಯಾಗಿಬಿಟ್ಟನು. ಕಾಲಾನಂತರದಲ್ಲಿ ಅವನಿಗೆ ಯೌವನವೂ ಕ್ಷಯಿಸಿ ಹೋಯಿತು. ಕೂಡಲೆ ಅವನೂ ಮಳೆಯಿಲ್ಲದ ಭೂಮಿಯಂತೆ ಜರಜರುತ್ತಾ ಶುಷ್ಕ ಶರೀರನಾಗಿಬಿಟ್ಟನು.

೧೭. ತರುವಾಯ ಅವನು ತನ್ನ ಭೂಮಿಯಾದ ಭೂತ ಮಂಡಲ ದೇಶ ದೊಳಗಣ ಗ್ರಾಮದ ಸಮೀಪಕ್ಕೆ ಹೋಗಿ, ಅಲ್ಲಿ ಊರಿಗೆ ದೂರವಾಗಿ ಒಂದು ಪರ್ಣ ಶಾಲೆಯನ್ನು ರಚಿಸಿಕೊಂಡು ಒಬ್ಬ ಮುನೀಂದ್ರನಂತೆ ಅದರೊಳಗೆ ತನ್ನ ಕುಟುಂಬ ದೊಡನೆ ವಾಸವಾಗಿದ್ದನು.

೧೮. ಆಗ ಅವನು ವಾರ್ಧಕ್ಯದಿಂದ (ಜರೆಯಿಂದ) ಶಿಥಿಲನಾಗಿ ಹೋದನು. ಅವನ ಮಕ್ಕಳು ಇವನ ಉದ್ದಕ್ಕೂ ಸಮನಾಗಿ ಬೆಳೆದರು. ಹೀಗೆ ಅವನು ಜೀರ್ಣ ಪ್ರಾಯವಾದ ರಸಗಳುಳ್ಳ, ದೊಡ್ಡ ಗುಣಿಯಲ್ಲಿ ಉತ್ಪನ್ನವಾದ ತಮಾಲ ವೃಕ್ಷಕ್ಕೆ (ಹೊಂಗೆ ಮರ) ಸದೃಶನಾಗಿದ್ದನು.

೧೯. ಅವನ ಶ್ವಪಚ ಕುಟುಂಬವು ಹೀಗೆ ದಿನ ಕ್ರಮೇಣ ವಿಶೇಷವಾಗಿ ವೃದ್ಧಿ ಹೊಂದಿತು. ಅದರೊಡನೆ ಅವನು ಸಂಸಾರ ಮಾಡಿಕೊಂಡಿದ್ದನು. ಅವನ ಬಂಧು ಬಳಗದವರು ಹೆಚ್ಚಿದರು. ಅವರ ಹೆಸರುಗಳೂ, ಕೆಲಸಗಳೂ, ಮಾತುಗಳೂ ಕಠೋರವಾಗಿದ್ದುವು. ಹೀಗೆ ಇಂತಹ ಅತಿ ಪ್ರೌಢನಾದ ಶ್ವಪಚ ಸ್ಥಿತಿಯುಳ್ಳಿರುವ ತನ್ನನ್ನೇ ಆ ಗಾಧಿಯು ನೀರಿನೊಳಗೆ ಕ್ಷಣ ಮಾತ್ರದಲ್ಲಿ ಕಂಡನು.

ಅಥಾಪಶ್ಯದಸೌ ಗಾಧಿರ್ಯಾವತ್ತಸ್ಯ ಕಲತ್ರಿಣಃ ।
ಜರತಃ ಶ್ವಪಚೇಭ್ಯಶ್ಚ ಸ್ವಾತ್ಮನೋ ಭ್ರಮಹಾರಿಣಃ ॥ ೨೦ ॥

ತತ್ಕಲತ್ರಮಶೇಷೇಣ ನೀತಮಾವೃತ್ಯ ಮೃತ್ಯುನಾ ।
ಆಸಾರಸಲಿಲೇನಾಶು ವನಪರ್ಣಗಣೋ ಯಥಾ ॥ ೨೧ ॥

ಪ್ರಲಪತ್ಯೇಕ ಏವಾಸಾವಟವ್ಯಾಂ ದುಃಖ ಕರ್ಷಿತಃ ।
ವಿಯೂಥ ಇವ ಸಾರಂಗೋ ವಿಗತಾಸ್ಥೋಽಶ್ರುಲೋಚನಃ ॥ ೨೨ ॥

ದಿನಾನಿ ಕತಿಚಿತ್ತತ್ರ ನೀತ್ವಾ ಶೋಕಪರೀತಧೀಃ ।
ಜಹೌ ಸ್ವದೇಶಂ ಸಂಶುಷ್ಕ ಪದ್ಮಂ ಸರ ಇವಾಂಡಜಃ ॥ ೨೩ ॥

೨೦-೨೧. ಅನಂತರ ಇತರ ಶ್ವಪಚರಿಗಿಂತಲೂ, ಶ್ವಪಚ ಜನ್ಮದಲ್ಲಿರುವ ತಾನು ಹೆಚ್ಚು ಮುದಿಯಾಗಿರುವುದನ್ನೂ, ದೊಡ್ಡ ಕುಟುಂಬಿಯಾಗಿರುವುದನ್ನೂ, ಅದೇ ಪೂರ್ವದ ಭ್ರಾಂತಿಯನ್ನೇ ಅನುಸರಿಸಿಕೊಂಡು ಆ ಗಾಧಿಯು ಸರೋವರದ ನೀರಿನೊಳಗೆ ನೋಡುತ್ತಿರುವಾಗಲೇ ಅವನಿಗೆ ಇದ್ದ ಕುಟುಂಬವನ್ನೆಲ್ಲಾ ಮೃತ್ಯುವು ಆವರಿಸಿಕೊಂಡು, ದೊಡ್ಡ ಮಳೆಯ ಜಲ ಪ್ರವಾಹವು ಕಾಡಿನಲ್ಲಿ ಬಿದ್ದಿರುವ ತರಗೆಲೆಗಳ ರಾಶಿಗಳನ್ನೆಲ್ಲ ಅಪಹರಿಸಿಕೊಂಡು ಹೋಗುವಂತೆ ನಿಶ್ಶೇಷವಾಗಿ ಅಪಹರಿಸಿದುದನ್ನು ಕೂಡ ಕಂಡನು.

೨೨. ಹೀಗೆ ತನ್ನ ಕುಟುಂಬ ನಾಶದಿಂದ ಉದ್ಭವಿಸಿದ ಅಪಾರವಾದ ದುಃಖಕ್ಕೆ ಸಿಕ್ಕಿಕೊಂಡು ಮುದುಕನಾದ ಆ ಶ್ವಪಚನು ಒಬ್ಬನೇ ಒಬ್ಬನಾಗಿ ತನ್ನ ಗುಂಪಿನಿಂದ ತಪ್ಪಿಸಿಕೊಂಡ ಜಿಂಕೆಯಂತೆ ಯಾವದೊಂದರಲ್ಲಿಯೂ ಆಸೆಯಿಲ್ಲದೆ ಕಣ್ಣೀರಿಡುತ್ತಾ ಕಾಡಿನಲ್ಲೆಲ್ಲಾ ಪ್ರತಿಧ್ವನಿ ಹೊರಡುವಷ್ಟು ಹೆಚ್ಚಾಗಿ ಅಳುತ್ತಾ ಕುಳಿತಿದ್ದನು.

೨೩. ಹೀಗೆ ಆ ಜರಠ ಶ್ವಪಚನು ಶೋಕಾಕ್ರಾಂತನಾಗಿ ಅಲ್ಲಿಯೇ ಕೆಲವು ದಿನಗಳನ್ನು ಕಳೆದು ಕಮಲಗಳೆಲ್ಲವೂ ಒಣಗಿ ಹೋದಮೇಲೆ ಪೂರ್ವಾಶ್ರಯವಾದರೂ ಆ ಸರಸ್ಸನ್ನು ಬಿಟ್ಟು ಹಂಸ ಪಕ್ಷಿಯು ಬೇರೊಂದು ಸರೋವರವನ್ನು ಹುಡುಕಿಕೊಂಡು ಹೋಗುವಂತೆ ತನ್ನ ದೇಶವನ್ನು ಬಿಟ್ಟು ಹೊರಟು ಹೋದನು.

ವಿಜಹಾರ ಬಹೂರ್ದೇಶಾನನಾಥಶ್ಚಿಂತಯಾನ್ವಿತಃ ।
ಪ್ರೇರ್ಯಮಾಣ ಇವಾನ್ಯೇನ ವಾತನುನ್ನ ಇವಾಂಬುದಃ ॥ ೨೪ ॥

ಏಕದಾ ಪ್ರಾಪ ಕೀರಾಣಾಂ ಮಂಡಲೇ ಶ್ರೀಮತೀಂ ಪುರೀಂ ।
ಖೇಚರೋ ವಿಹರನ್ ಶೂನ್ಯೇ ಸದ್ವಿಮಾನಮಿವಾಂಬರೇ ॥ ೨೫ ॥

ನೃತ್ಯದ್ರತ್ನಾಂಶುಕಚ್ಛನ್ನಮಾರ್ಗ ವೃಕ್ಷ ಲತಾಂಗನಂ ।
ಆಗುಲ್ಫಾಕೀರ್ಣ ಕುಸುಮಂ ಚಂದನಾಗರು ಸುಂದಂರ ॥ ೨೬ ॥

ಸಾಮಂತೈರ್ಲಲನಾಭಿಶ್ಚ ನಾಗರೈಶ್ಚ ನಿರಂತರಂ ।
ಸ್ವರ್ಗಮಾರ್ಗೋಪಮಂ ರಾಜಮಾರ್ಗ ಮಧ್ಯಮುಪಾಪ ಸಃ ॥ ೨೭ ॥

---

೨೪. ತರುವಾಯ ಇವನು ಎಲ್ಲದರಲ್ಲಿಯೂ, ಸ್ವಲ್ಪ ಮಾತ್ರವೂ ಆಸಕ್ತಿ (ಆಸ್ಥೆ)ಯೇ ಇಲ್ಲದವನಾಗಿಯೂ, ಚಿಂತಾಕ್ರಾಂತನಾಗಿಯೂ ಯಾವನೋ ಒಬ್ಬನಿಂದ ಪ್ರೇರಿತನಾದವನಂತೆ ಪರಾಧೀನನಾಗಿ, ಮೇಘವು ವಾಯುವಿನಿಂದ ಪ್ರೇರಿತವಾಗಿ ಆಕಾಶದಲ್ಲೆಲ್ಲ ಹಾರಾಡುವಂತೆ ಅನೇಕ ದೇಶಗಳನ್ನು ಸುತ್ತಿದನು.

೨೫. ಹೀಗೆ ಅಲೆಯುತ್ತಿರುವ ಕಾಲದಲ್ಲಿ ಆ ಶ್ವಪಚ ಜರಠನು ಒಂದು ಸಲ ಆಕಸ್ಮಿಕವಾಗಿ ಗಗನಚಾರಿಯಾದ ಒಬ್ಬ ದೇವತೆಯು ಶೂನ್ಯವಾದ ಆಕಾಶದಲ್ಲಿ ವಿಹರಿಸುತ್ತಾ ಇರುವಾಗ ಒಂದು ದಿವ್ಯ ವಿಮಾನವನ್ನು ಪಡೆದು ನಲಿಯುವಂತೆಯೇ ಕೀರ ದೇಶದ ಮಧ್ಯದಲ್ಲಿ ಸರ್ವ ಸಂಪತ್ಸಮೃದ್ಧವಾಗಿದ್ದ ಒಂದು ನಗರಿಯನ್ನು ಸೇರಿ ಆನಂದಿಸಿದನು.

೨೬-೨೭. ಆ ನಗರದ ರಾಜ ಬೀದಿಯ ಉದ್ದಕ್ಕೂ, ವೃಕ್ಷಗಳೂ, ಲತೆಗಳೂ, ಸ್ತ್ರೀಯರೂ, ರತ್ನಗಳಿಂದಲೂ, ವಸ್ತ್ರಗಳಿಂದಲೂ ಭೂಷಿತರಾಗಿ ನರ್ತನ ಮಾಡುತ್ತಿದ್ದರು. ಚಂದನ (ಕೆಂಪು ಗಂಧದ ಮರ) ಅಗರು (ಕರಿ ಗಂಧದ ಮರ) ಮುಂತಾದ ವೃಕ್ಷಗಳ ಬುಡದಲ್ಲಿ ಅರ್ಧಭಾಗದವರೆವಿಗೂ (ಮೊಣ ಕಾಲುದ್ದ) ಹೂವುಗಳು ಉದುರಿ ತುಂಬಿಕೊಂಡು ಆ ದಾರಿಯೆಲ್ಲವೂ ಅತಿ ಸುಂದರವಾಗಿತ್ತು. ಸಾಮಂತ ರಾಜರೂ, ದಿವ್ಯ ಸುಂದರಿಯರೂ, ನಾಗರಿಕರೂ ಅಲ್ಲಿ ನಿಬಿಡವಾಗಿ ತುಂಬಿಕೊಂಡಿದ್ದರು. ಇಂತಹ ಸ್ವರ್ಗ ಮಾರ್ಗ ಸದೃಶವಾದ ರಾಜ ಬೀದಿಯ ಮಧ್ಯಕ್ಕೆ ಆ ಶ್ವಪಚನು ಬಂದು ಸೇರಿದನು.

ಮಣಿರತ್ನ ಕೃತಾಗಾರಂ ತತ್ರ ಮಂಗಲ ಹಸ್ತಿನಂ ।
ದದರ್ಶಾಮರ ಶೈಲೇಂದ್ರ ಮಿವ ಸಂಚಾರ ಚಂಚಲಂ ॥ ೨೮ ॥

ಮೃತೇ ರಾಜನಿ ರಾಜಾರ್ಥಂ ವಿಹರಂತಮಿತ ಸ್ತತಃ ।
ರತ್ನಜ್ಞಮಿವ ರತ್ನಾರ್ಥಂ ಚಿಂತಾಮಣಿ ದಿದೃಕ್ಷಯಾ ॥ ೨೯ ॥

ತಮಸೌ ಶ್ವಪಚೋ ನಾಗಂ ಕೌತುಕೋದ್ಧುರಯಾ ದೃಶಾ ।
ಚಿರಮಾಲೋಕಯಾಮಾಸ ಸ್ಪಂದಯುಕ್ತಾ ಽ ಚಲೋಪಮಂ ॥ ೩೦ ॥

ಆಲೋಕಯಂತಮಾದಾಯ ತಂ ಕರೇಣ ಸ ವಾರಣಃ
ಸ್ವಕಟೇ ಽ ಯೋಜಯನ್ಮೇರುಸ್ತಟೇ ಽ ರ್ಕಮಿವ ಸಾದರಂ ॥ ೩೧ ॥

---

೨೮. ಅಲ್ಲಿ ದಿವ್ಯ ರತ್ನಗಳಿಂದ ನಿರ್ಮಿತವಾಗ ಮನೆಯು ಆಶ್ರಯ ವುಳ್ಳಂತಹ, ಮಹಾ ಮೇರು ಪರ್ವತವೇ ಸಂಚರಿಸುತ್ತಾ ಇಲ್ಲಿಗೆ ಬಂದು ಇದೆಯೋ ಎಂಬಂತೆ ಕಾಣುತ್ತಿದ್ದ ಮಂಗಳಕರವಾದ ಒಂದು ಪಟ್ಟದಾನೆಯನ್ನು ಕಂಡನು.

೨೯. ರತ್ನ ಪರೀಕ್ಷೆಯಲ್ಲಿ ಕುಶಲನಾದ ನರನು ಅನರ್ಘವಾದ ರತ್ನ ಲಾಭ ಕ್ಕಾಗಿ ಚಿಂತಾಮಣಿಯೆಂಬ ದೇವಲೋಕದ ರತ್ನವನ್ನು ನೋಡಬೇಕೆಂಬ ಇಚ್ಛೆ ಹುಡುಕಿಕೊಂಡು ಹೋಗುವಂತೆ ಆ ಪಟ್ಟದಾನೆಯು ಆ ದೇಶದ ತಮ್ಮ ರಾಜನು ಸತ್ತು ಹೋಗಿರಲಿಕ್ಕಾಗಿ ರಾಜ ಪದವಿಗೆ ಅರ್ಹನಾದ ಒಬ್ಬ ಮನುಷ್ಯನನ್ನು ಹುಡು ಕುತ್ತಾ ಅತ್ತಲೂ, ಇತ್ತಲೂ ಓಡಿಯಾಡುತ್ತಿತ್ತು.

೩೦. ಆ ಶ್ವಪಚನು ಹೀಗೆ ಸಂಚರಿಸುತ್ತಿರುವ ಶೈಲಸದೃಶವಾದ ಆ ಆನೆ ಯನ್ನು ಅತ್ಯಂತ ಕುತೂಹಲಾನ್ವಿತವಾದ ಎವೆಯಿಕ್ಕದೆ ಬಹಳ ಹೊತ್ತು ನೋಡುತ್ತಾ ನಿಂತಿದ್ದನು.

೩೧. ನೋಡುತ್ತಾ ನಿಂತಿದ್ದ ಆ ಶ್ವಪಚನನ್ನು ಆ ಪಟ್ಟದಾನೆಯು ಅತ್ಯಾದರ ನೊಡನೆ ತನ್ನ ಸೊಂಡಿಲಿನಿಂದ ಹಿಡಿದೆತ್ತಿಕೊಂಡು ಮೇರು ಪರ್ವತವು ತನ್ನ ತಟ ಪ್ರದೇಶದಲ್ಲಿ ಸೂರ್ಯನನ್ನು ವಹಿಸುವಂತೆ ಅವನನ್ನು ತನ್ನ ಕುಂಭ ಸ್ಥಳದಲ್ಲಿ ಹತ್ತಿಸಿ ಕೂಡಿಸಿಕೊಂಡಿತು.

ತಸ್ಮಿನ್ಕಟಗತೇ ನೇದುರ್ಜಯ ದುಂದುಭಯೋऽಭಿತಃ ।
ಕಲ್ಪಾಂಬುಧ ಇವಾಕಾಶ ಮಧಿರೂಢೇ ಮಹಾರ್ಣವಾಃ ॥ ೩೨ ॥

ಪೂರಿತಾಶೋ ಬಭೌ ರಾಜಾ ಜಯತೀತಿ ಜನಸ್ವನಃ ।
ಉದಭೂತ್ಸಂಪ್ರಬುದ್ಧಾನಾಂ ವಿಹಗಾನಾ ಮಿವಾರವಃ ॥ ೩೩ ॥

ಉದಭೂದ್ವಂದಿ ವೃಂದಾನಾಂ ಘನ ಕೋಲಾಹಲಸ್ತತಃ ।
ವೇಲಾವಿಲುಲಿತಾಂಬೂನಾಮಂಬುಧೀನಾಮಿವ ಧ್ವನಿಃ ॥ ೩೪ ॥

ತಂ ತತ್ರಾವರಯಾಮಾಸುರ್ಮಂಡನಾರ್ಥಂ ವರಾಂಗನಾಃ ।
ಕ್ಷೀರೋದಗತವಿಭ್ರಾಂತಾ ಲಹರ್ಯ ಇವ ಮಂದರಂ ॥ ೩೫ ॥

---

೩೨. ಈರೀತಿಯಾಗಿ ಅವನು ಪಟ್ಟದಾನೆಯ ಕುಂಭ ಸ್ಥಳದಲ್ಲಿ ಕುಳಿತು ಕೊಂಡ ಕೂಡಲೇ ಪ್ರಳಯ ಕಾಲಕ ಮೇಘವು ಆಕಾಶದಲ್ಲಿ ಕಾಣಿಸಿಕೊಂಡ ಒಡನೆಯೇ ಸಮುದ್ರಗಳೆಲ್ಲವೂ ಉದ್ಘೋಷಿಸುವಂತೆ ಎಲ್ಲೆಲ್ಲಿಯೂ ಸುತ್ತಲೂ ಜಯ ಭೇರಿಗಳು ಧ್ವನಿಗೈದುವು.

೩೩. ಬೆಳಗಾದ ಕೂಡಲೆ ಹಕ್ಕಿಗಳೆಲ್ಲವೂ ಎದ್ದು ಕಲಕಲ ಧ್ವನಿಯನ್ನು ಎಬ್ಬಿಸುವಂತೆ (ಮಾಡುವಂತೆ) ಜನರೆಲ್ಲರೂ 'ನಮ್ಮ ರಾಜನಿಗೆ ಜಯವಾಗಲಿ' ಎಂದು ಪೂರ್ಣ ಮನೋರಥರಾಗಿ ಸಂತೋಷದಿಂದ ದಿಕ್ಕುಗಳೆಲ್ಲಾ ತುಂಬಿ ಹೋಗುವಂತೆ ಜಯಕಾರ ಮಾಡಿದರು.

೩೪. ಅನಂತರವೇ ದಡಗಳನ್ನು ಕೊರೆಯುತ್ತಿರುವ ಜಲರಾಶಿ ಪೂರ್ಣವಾದ ಸಮುದ್ರಗಳ ಘೋಷದಂತೆ ಅತಿ ಘನವಾದ ಹೊಗಳು ಭಂಟರ ಗುಂಪಿನ ಕೋಲಾಹಲವು ಉದ್ಭವಿಸಿತು.

೩೫. ಪೂರ್ವದಲ್ಲಿ ಕ್ಷೀರ ಸಾಗರವು ಮಂದರಾದ್ರಿಯಿಂದ ಕಡೆಯಲ್ಪಟ್ಟಾಗ ಸುತ್ತಲೂ ಹಾರಿದ ತರಂಗಗಳು ಮಂದರಾದ್ರಿಯನ್ನು ಆವರಿಸಿಕೊಂಡಂತೆ ಆಗ ಅಲ್ಲಿ ಆ ಶ್ವಪಚನನ್ನು ಅನೇಕ ಉತ್ತಮ ಸ್ತ್ರೀಯರು ರಾಜ ಯೋಗ್ಯವಾದ ವಸ್ತ್ರ ಭೂಷಣಾದಿಗಳಿಂದ ಅಲಂಕಾರ ಮಾಡುವುದಕ್ಕಾಗಿ ಬಂದು ಆವರಿಸಿಕೊಂಡರು.

ಮಾನಿನ್ಯಸ್ತಂ ಗುಣಪ್ರೋತೈರ್ನಾನಾರತ್ನೈರಪೂರಯನ್ ।
ನಾನಾ ಪ್ರಭಾ ಪ್ರಭಾತಾರ್ಕಾ ವೇಲಾ ಇವ ತಟಾಚಲಂ ॥ ೩೬ ॥

ತುಷಾರ ಶಿಶಿರಸ್ಪರ್ಶೈಸ್ತಾಸ್ತಂ ಹಾರೈರಭೂಷಯನ್ ।
ಶ್ಯಾಮಾ ವನನದೀ ಪೂರೈರ್ವರ್ಷಾಃ ಶೃಂಗಮಿವೋತ್ತಮಂ ॥ ೩೭ ॥

ವಿಚಿತ್ರ ವರ್ಣ ಸೌಗಂಧ್ಯೈಃ ಪುಷ್ಪೈರಾವಲಯುಃ ಸ್ತ್ರೀಯಃ ।
ವನಂ ಮಧುಶ್ರಿಯು ಇವ ತಂ ಲೋಕಕರಪಲ್ಲವಾಃ ॥ ೩೮ ॥

ನಾನಾ ವರ್ಣ ರಸಾಮೋದೈಸ್ತಾಸ್ತಮಾಶು ವಿಲೇಪನೈಃ ।
ಆಲೇಪಯನ್ಪ್ರಭಾಜಾಲೈರ್ನಾಗೋಽಭ್ರಮಿವ ಧಾತುಭಿಃ ॥ ೩೯ ॥

---

೩೬. ನಾನಾ ವರ್ಣಗಳಾದ ಮಣಿಗಳಲ್ಲಿ (ಸೂರ್ಯ ಬಿಂಬವು) ಪ್ರತಿಬಿಂಬಿಸುವುದರಿಂದ ಉದಯಿಸಿದ (ಹೊರಹೊಮ್ಮಿದ) ಪ್ರಕಾಶಗಳಿಂದ ಅಧಿಕ ತೇಜಸ್ವಿಯಾದ ಸೂರ್ಯನುಳ್ಳ ಸಮುದ್ರ ತೀರಗಳು ದಡದಲ್ಲಿರುವ ಪರ್ವತವನ್ನು ಅಲಂಕರಿಸುವಂತೆ ಆ ಸುಂದರಿಯರು (ಶ್ವಪಚನಾದ) ತಮ್ಮ ರಾಜನನ್ನು (ಮಾಲಾರೂಪವಾಗಿ) ಸೂತ್ರಗಳಿಂದ ಗ್ರಂಥಿತಗಳಾದ ನಾನಾ ರತ್ನಹಾರಗಳಿಂದ ಮುಚ್ಚಿಹೋಗುವಂತೆ ವಿಶೇಷವಾಗಿ ಅಲಂಕರಿಸಿದರು.

೩೭. ವರ್ಷಾಕಾಲದ ವೃಷ್ಟಿಗಳು ವನ ನದೀ ಪ್ರವಾಹಗಳಿಂದ ಉತ್ತಮ ಗಿರಿಶಿಖರವನ್ನು ಅಲಂಕರಿಸುವಂತೆ ಆ ಯುವತಿಯರು ತಮ್ಮ ರಾಜನನ್ನು ಹಿಮದಂತೆ ಶೀತಲಗಳಾದ ಮುಕ್ತಾಹಾರಗಳಿಂದ ಶೃಂಗಾರ ಮಾಡಿದರು.

೩೮. ವಸಂತ ಲಕ್ಷ್ಮಿಯು ತನ್ನ ಕೈಗಳಂತಿರುವ ಪಲ್ಲವಗಳನ್ನು ಬೀಸುತ್ತಾ ಅರಣ್ಯವನ್ನು ಅಲಂಕರಿಸುವಂತೆ ಯುವತಿಯರು ಆ ರಾಜನನ್ನು ಪಲ್ಲವ ಸದೃಶಗಳಾದ ತಮ್ಮ ಕೈಗಳಿಂದ ವಿಚಿತ್ರ ವರ್ಣಗಳಾಗಿಯೂ, ಸುಗಂಧ ಪರಿಪೂರ್ಣವಾಗಿಯೂ ಇದ್ದ ಪುಷ್ಪ ಮಾಲೆಗಳನ್ನು ಹಾಕಿ ಅಲಂಕಾರ ಮಾಡಿದರು.

೩೯. ಪರ್ವತವು ತನ್ನ ಗೈರಿಕಾದಿ ಧಾತುಗಳ ಪ್ರಭಾ ಜಾಲಗಳಿಂದ ಮೇಘವನ್ನು ಲೇಪಿಸುವಂತೆ ನಾನಾ ವರ್ಣಗಳಾಗಿಯೂ, ರಸವತ್ತಾಗಿಯೂ, ಸುಗಂಧಯುತವಾಗಿಯೂ ಇದ್ದ ಗಂಧಗಳಿಂದ ಆ ಯುವತಿಯರು ತಮ್ಮ ರಾಜನನ್ನು ಬೇಗ ಲೇಪನ ಮಾಡಿದರು.

ರತ್ನ ಕಾಂಚನ ಕಾಂತೋऽಸಾವಾದದೇ ಚಿತ್ತಮಾತತಂ ।
ಸಂಧ್ಯಾಭ್ರತಾರೇಂದು ನದೀ ವ್ಯಾಪ್ತಂ ಮೇರುರಿವಾಂಬರಂ ॥ ೪೦ ॥

ಭೂಷಿತಃ ಸವಿಲಾಸಾಭಿರ್ಬಾಲ ವಲ್ಲೀಭಿರಾವೃತಃ ।
ರತ್ನ ಪುಷ್ಪಾಂಶುಕಾ ಕೀರ್ಣಃ ಕಲ್ಪವೃಕ್ಷ ಇವಾಬಭೌ ॥ ೪೧ ॥

ತಾದೃಶಂ ತಮುಪಾಜಗ್ಮುಃ ಪರಿವಾರ ಸಮನ್ವಿತಾಃ ।
ಸರ್ವಾಃ ಪ್ರಕೃತಯಃ ಫುಲ್ಲಂ ಮಾರ್ಗದ್ರುಮಮಿವಾಧ್ವಗಾಃ ॥ ೪೨ ॥

ತಾ ಏನಮಾಸನೇ ಸ್ಥೈಂಹೇ ಪತ್ರಾಭಿಷಿಷಿಚುಃ ಕ್ರಮಾತ್ ।
ತಸ್ಮಿನ್ನೇವ ಗಜೇ ಶಕ್ರಮೈರಾವತ ಇವಾಮರಾಃ ॥ ೪೩ ॥

---

೪೦. ಹೀಗೆ ಕಾಂಚನ ಮಯವಾದ ರತ್ನಾಭರಣಗಳಿಂದ ಸುಂದರನಾಗಿ ವಿರಾಜಿಸುತ್ತಿದ್ದ (ಆ ಶ್ವಪಚ) ರಾಜನು ಸಂಧ್ಯಾಕಾಲ, ಮೇಘ, ನಕ್ಷತ್ರ, ಚಂದ್ರ, ನದಿಗಳಿಂದ ವ್ಯಾಪ್ತವಾದ ಅಂತರಿಕ್ಷವನ್ನು ಮೇರು ಪರ್ವತವು ಸ್ವೀಕರಿಸುವಂತೆ ಆ ಯುವತಿಯರ ಮನಸ್ಸುಗಳನ್ನೆಲ್ಲ ಅಪಹರಿಸಿದನು.

೪೧. ಆಗ, ವಿಲಾಸವತಿಯರಾದ ಯುವತಿಯರಿಂದ ಅಲಂಕರಿಸಲ್ಪಟ್ಟು ಅವರಿಂದ ಪರಿವೃತನಾಗಿದ್ದ ರತ್ನಾಭರಣಗಳಿಂದಲೂ, ಪುಷ್ಪಹಾರಗಳಿಂದಲೂ, ಪೀತಾಂಬರಗಳಿಂದಲೂ, ವ್ಯಾಪ್ತನಾಗಿದ್ದ ಆ ರಾಜನು ಎಳೆಯ ಬಳ್ಳಿಗಳಿಂದ ಪರಿವೃತವಾದ ಕಲ್ಪವೃಕ್ಷದಂತೆ ಶೋಭಿಸಿದನು.

೪೨. ಅಂತಹ ತಮ್ಮ ರಾಜನ ಸನ್ನಿಧಿಗೆ ಚೆನ್ನಾಗಿ ಚಿಗುರಿರುವ ಸಾಲು ಮರಗಳನ್ನು ಪ್ರಯಾಣಿಕರು (ದಾರಿ ನಡೆಯುವವರು) ಬಂದು ಸೇರುವಂತೆ ಎಲ್ಲ ಪ್ರಜೆಗಳೂ ತಮ್ಮ ಪರಿವಾರ ಸಮೇತರಾಗಿ ಬಂದು ಸೇರಿದರು.

೪೩. ತರುವಾಯ ಆ ಸಕಲ ರಾಜ್ಯಾಂಗದವರು (ಪ್ರಕೃತಿಗಳು) ಸೇರಿ ದೇವತೆಗಳು ಇಂದ್ರನನ್ನು ಐರಾವತದ ಮೇಲೆ ಕುಳ್ಳಿರಿಸಿ ಅಭಿಷೇಕ ಮಾಡಿದ ರೀತಿಯಲ್ಲಿ ಆ ತಮ್ಮ (ಶ್ವಪಚ) ರಾಜನನ್ನು ಆ ಆನೆಯ ಮೇಲೆಯೇ ಸಿಂಹಾಸನದ ಮೇಲೆ ಕುಳ್ಳಿರಿಸಿ ಕ್ರಮದಿಂದ ಪಟ್ಟಾಭಿಷೇಕ ಮಾಡಿದರು.

ಏವಂ ಸ ಶ್ವಪಚೋ ರಾಜ್ಯಂ ಪ್ರಾಪ ಕೀರಪುರಾಂತರೇ ।
ಆರಣ್ಯಂ ಹರಿಣಂ ಪುಷ್ಟಮಪ್ರಾಣಮಿವ ವಾಯಸಃ ॥ ೪೪ ॥

ಕೀರೀಕರತಲಾಂಭೋಜ ಪ್ರಮೃಷ್ಟ ಚರಣಾಂಬುಜಃ ।
ಸರ್ವಾಂಗೇ ಕುಂಕುಮಾಲೇಪೈಃ ಸಂಧ್ಯಾಂಬುಧರ ಶೋಭನಃ ॥ ೪೫ ॥

ಜಜ್ವಾಲ ಕೀರ ನಗರೇ ನಾಗರೀಗಣವಾನಸೌ ।
ಸಿಂಹೀಗಣಯುತಃ ಸಿಂಹೋ ಯಥಾ ಕುಸುಮಿತೇ ವನೇ ॥ ೪೬ ॥

ಹರಿಹತ ಕರಿ ಕುಂಭೋನ್ಮುಕ್ತ ಮುಕ್ತಾ ಕಲಾಪ-
ಪ್ರವಿರಜಿತ ಶರೀರಃ ಶಾಂತ ಚಿಂತಾ ವಿಷಾದಃ ॥
ಅರಮತ ಸಹ ಸದ್ಭಿಸ್ತತ್ರ ಭೋಗ್ಯೈಃ ಸರಸ್ಯಾಂ ।
ರವಿಕರ ಮದತಪ್ತೋ ವಾರಿಪೂರ್ರೈರಿವೇಭಃ ॥ ೪೭ ॥

---

೪೪. ಆರಣ್ಯದಲ್ಲಿ ಸತ್ತು ಬಿದ್ದಿರುವ ಕೊಬ್ಬಿದ ದೇಹವುಳ್ಳ ಒಂದು ಜಿಂಕೆಯನ್ನು ಒಂದು ಕಾಗೆಯು ಪಡೆಯುವಂತೆ ಆ ಶ್ವಪಚನು ಹೀಗೆ ಆಕಸ್ಮಿಕವಾಗಿ ಆ ಕೀರ ದೇಶದ ರಾಜಧಾನಿಯಲ್ಲಿ ರಾಜ್ಯಾಧಿಪತ್ಯವನ್ನು ಪಡೆದನು.

೪೫-೪೬. ಆಗ ಅವನು ಕೀರ ದೇಶದ ಯುವತಿಯರ, ಕಮಲಗಳಂತೆ ಕೋಮಲಗಳಾದ ಕರತಲಗಳಿಂದ ಒತ್ತಲ್ಪಡುತ್ತಿದ್ದ ಪಾದ ಕಮಲಗಳುಳ್ಳವನಾಗಿಯೂ, ಸರ್ವಾಂಗದಲ್ಲಿಯೂ ಕುಂಕುಮ ಕೇಸರಿಯ ಗಂಧಗಳಿಂದ ಲೇಪಿಸಲ್ಪಟ್ಟವನಾಗಿದ್ದ ಕಾರಣ ಸಾಯಂಕಾಲದ ಮೇಘದಂತೆ ಸುಂದರನಾಗಿಯೂ, ಪುಷ್ಪಿತವಾದ ವನದಲ್ಲಿ ಸಿಂಹವು ಹೆಣ್ಣು ಸಿಂಹಗಳ ಗುಂಪಿನೊಡನೆ ವಿರಾಜಿಸುವಂತೆ ಅನೇಕ ನಾಗರಿಕ ಸುಂದರೀಮಣಿಗಳಿಂದ ಪರಿವೃತನಾಗಿ ಕೀರ ದೇಶದ ರಾಜಧಾನಿಯಲ್ಲಿ ವಿಲಾಸಮಯನಾಗಿ ಶೋಭಿಸಿದನು.

೪೭. ಆ ಶ್ವಪಚ ರಾಜನು ಸಿಂಹಗಳಿಂದ ಸೀಳಲ್ಪಟ್ಟ ಅನೇಕ ಕುಂಭಸ್ಥಳಗಳಿಂದ ಹೊರಕ್ಕೆ ಚೆಲ್ಲಿದ ಮುಕ್ತಾಫಲ (ಮುತ್ತು)ಗಳಿಂದ ಅಲಂಕೃತವಾದ ಶರೀರವುಳ್ಳವನಾಗಿಯೂ, ಸಕಲ ಚಿಂತೆಗಳಿಂದಲೂ, ವಿಷಾದಗಳಿಂದಲೂ, ಪರಿವರ್ಜಿತನಾಗಿಯೂ, ಸೂರ್ಯ ಕಿರಣಗಳಿಂದ ಸಂತಪ್ತವಾದ ಮದ ಗಜವು ಒಂದು ಸರಸ್ಸಿನಲ್ಲಿ ಜಲ ಪೂರಗಳಿಂದ ಕ್ರೀಡಿಸುವಂತೆ ಆ ಕೀರ ರಾಜಧಾನಿಯಲ್ಲಿ ಯೋಗ್ಯರಾದ ಮಂತ್ರಿಗಳೊಡನೆಯೂ, ಪೌರಜನರೊಡನೆಯೂ ಉತ್ತಮವಾದ ದಿವ್ಯ ಭೋಗಗಳನ್ನು ಅನುಭವಿಸುತ್ತಾ ಚಿರಕಾಲ ರಮಿಸಿದನು.

ಪರಿವಿಸೃತ ನೃಪಾಜಾಃ ಸರ್ವದಿಕ್ಸಂಸ್ಥಿತಾಜ್ಞ!
ಕತಿ ಪಯದಿವಸೇಹಾ ಸಿದ್ಧದೇಶ ವ್ಯವಸ್ಥಃ ||
ಪ್ರಕೃತಿ ಭಿರಲ ಮೂಢಾ ಶೇಷರಾಜನ್ಯ ಭಾರಃ
ಸ ಗವಲ ಇತಿ ನಾಮ್ನಾ ತತ್ರ ರಾಜಾ ಬಭೂವ || ೪೮ ||

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ಉಪಶಮ ಪ್ರಕರಣೇ ಗಾಧಿ ವೃತ್ತಾಂತೇ ಶ್ವಪಚ ರಾಜ್ಯಲಾಭೋನಾಮ
ಪಂಚ ಚತ್ವಾರಿಂಶಃ ಸರ್ಗಃ

---

೪೮. ಆಗ ಅವನ ಪ್ರಭು ಶಕ್ತಿಯು ಸರ್ವತ್ರ ಹರಡಿಕೊಂಡಿತು. ಅವನ ಆಜ್ಞೆಯು ಎಲ್ಲ ದಿಕ್ಕುಗಳಲ್ಲಿಯೂ ನೆಲೆಗೊಂಡಿತು. ಕೆಲವು ದಿನಗಳೊಳಗಾಗಿಯೇ ಸ್ವೇಚ್ಛಾನುಸಾರವಾಗಿ ತನ್ನ ಪ್ರಭುತ್ವಕ್ಕೆ ಒಳಪಟ್ಟ ರಾಜ್ಯದ ಕಾರುಬಾರುಗಳನ್ನು (ಕಾರ್ಯ ಭಾಗಗಳನ್ನು) ಎಲ್ಲವನ್ನೂ ಒಂದು ನಿಯತವಾಗಿ ವ್ಯವಸ್ಥೆಗೊಳಿಸಿದನು. ಆಮೇಲೆ ಅವನ ಮಂತ್ರಿಗಳು ಮೊದಲಾದ ರಾಜ್ಯಾಧಿಕಾರಿಗಳು ಸಮಸ್ತ ರಾಜ್ಯಭಾರ ಕ್ರಮಗಳನ್ನು ಸಮಗ್ರವಾಗಿ ತಾವೇ ವಹಿಸಿಕೊಂಡು ಆ ರಾಜನ ಇಚ್ಛಾನುವರ್ತಿಗಳಾಗಿ ನಡೆಯಿಸಿಕೊಂಡು ಹೋದರು. ಈ ಪ್ರಕಾರವಾಗಿ ಆ ಶ್ವಪಚನು (ಗಾಧಿಯು) ಆ ರಾಜ್ಯದಲ್ಲಿ ಗವಲನೆಂಬ ಹೊಸ ಹೆಸರಿನಿಂದ ಪ್ರಸಿದ್ಧನಾಗಿ ರಾಜನಾಗಿ ಸ್ವಲ್ಪಕಾಲ ಸುಖವಾಗಿದ್ದನು. (ಹೀಗಿರುವುದನ್ನು ಆ ಗಾಧಿಯೇ ತನ್ನ ಮನಸ್ಸಿನಲ್ಲಿ ನೀರಿನೊಳಗೆ ನಿಂತುಕೊಂಡಿರುವಾಗಲೇ ವಿಷ್ಣು ಮಾಯಾಶಕ್ತಿಯ ಮೂಲಕ ಕ್ಷಣ ಮಾತ್ರದಲ್ಲಿ ಕಂಡನು.)

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ಮಹಾರಾಮಾಯಣದ
ಉಪಶಮ ಪ್ರಕರಣದಲ್ಲಿ ಗಾಧಿ ವೃತ್ತಾಂತದೊಳಗೆ "ಶ್ವಪಚರಾಜ್ಯಲಾಭ" ಎಂಬ
ನಲವತ್ತೈದನೆಯ ಸರ್ಗವು

ಷಟ್ಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ವಿಲಾಸಿನೀಭಿರ್ವಲಿತೋ ಮಂತ್ರಿ ಮಂಡಲ ಪೂಜಿತಃ ।
ವಂದಿತಃ ಸರ್ವಸಾಮಂತೈ ಶ್ಛತ್ರಚಾಮರ ಲಾಲಿತಃ ॥ ೧ ॥

ಸಿದ್ಧಾನುಶಾಸನಃ ಕಾಂತೋ ಜ್ಞಾತರಾಜ್ಯ ಗುಣಕ್ರಮಃ ।
ವೀತ ಶೋಕ ಭಯಾಯಾಸ ಪ್ರಜ್ಞಃ ಪ್ರಾಪ್ತ ಮಹಾದಶಃ ॥ ೨ ॥

ವಿಸ್ಮೃತಾತ್ಮ ಸ್ವಭಾವೋಽ ಭೂದನಿಶಂ ಸ್ತವಮಂಗಲೈಃ ।
ಆನಂದ ಪೂರ್ಣಯಾ ವೃತ್ತ್ಯಾ ಭೃಶಂ ಕ್ಷೀಬ ಇವಾಸವೈಃ ॥ ೩ ॥

ನಲವತ್ತಾರನೆಯ ಸರ್ಗ

ಶ್ರೀ ವಸಿಷ್ಠನು ಹೇಳಿದನು:—

೧-೨-೩. ರಾಮ, ಹಿಂದೆ ಹೇಳಿದ ಕ್ರಮದಿಂದ, ಆ ಗವಲನೆಂಬ ಹೆಸರಿನ ಶ್ವಪಚ ರಾಜನು ಅನೇಕ ವಿಲಾಸವತಿಯರಾದ ಲಲನೆಯರಿಂದ ಆವೃತನಾಗಿಯೂ, ಮಂತ್ರಿಮಂಡಲದಿಂದ ಪೂಜಿತನಾಗಿಯೂ, ಸರ್ವ ಸಾಮಂತರಾಜರಿಂದ ವಂದಿತನಾಗಿಯೂ, ಛತ್ರ ಚಾಮರಾದಿ ರಾಜ ಲಕ್ಷಣಗಳಿಂದ ವಿರಾಜಮಾನನಾಗಿಯೂ, ಪ್ರಭುತ್ವವನ್ನು ನಡೆಯಿಸಿದನು. ಅವನ ಆಜ್ಞೆಗೆ ದೇಶದಲ್ಲಿ ಎಲ್ಲಿಯೂ ತಡೆಯಿರಲಿಲ್ಲ. ಅವನು ಸರ್ವ ಪ್ರಿಯನಾಗಿಯೂ ಇದ್ದನು. ರಾಜ್ಯಭಾರ ಮಾಡುವ ವಿಧಾನವನ್ನೂ, ಪ್ರಜೆಗಳ ಗುಣಗಳನ್ನೂ, ವ್ಯವಹಾರಗಳನ್ನೂ, ಚೆನ್ನಾಗಿ ತಿಳಿದುಕೊಂಡನು. ಅವನ ಪ್ರಜೆಗಳು ಅವನ ಆಳ್ವಿಕೆಯಿಂದ ಶೋಕ, ಭಯ, ಆಯಾಸಾದಿ ಸರ್ವ ಪೀಡೆಗಳೂ ಇಲ್ಲದೆ ಸುಖವಾಗಿದ್ದರು. ಅವನಿಗೆ ಅಂತಹ ಅನುತ್ತಮವಾದ ಮಹಾ ದೆಸೆಯು ಪ್ರಾಪ್ತವಾಯಿತು. ಆದರೇನು ? ಮದ್ಯಪಾನ ಮಾಡುವವನು ಮದ್ಯದಿಂದ ಮತ್ತನಾಗಿ ತನ್ನನ್ನೇ ಮರೆಯುವಂತೆ ವಂದಿಗಳು ಸಾಂಪ್ರದಾಯಕವಾಗಿ ಸಂತತವೂ ವರ್ಣಿಸುತ್ತಿದ್ದ ಸ್ತೋತ್ರ ಪಾಠಗಳಿಂದ ಅವನು ಆನಂದ ಭರಿತವಾದ ಸ್ಥಿತಿಯಲ್ಲಿರುತ್ತ ತನ್ನ ಪೂರ್ವ ಸ್ವಭಾವವನ್ನೇ ಸಂಪೂರ್ಣವಾಗಿ ಮರೆತುಬಿಟ್ಟನು.

ಕೀರೇಷು ಶ್ವಪಚೋ ರಾಜ್ಯಂ ವರ್ಷಾಣ್ಯಷ್ಟೌ ಚಕಾರ ಹ ।
ಆರ್ಯವೃತ್ತನುಶೇಷೇಣ ತಾವತ್ಕಾಲಂ ಬಭಾರ ಹ ॥ ೪ ॥

ಯದೃಚ್ಛಯೈಕದಾ ಥಾ ಸಾವತಿಷ್ಠತ್ತ್ಯಕ್ತ ಭೂಷಣಃ ।
ಅತಮಸ್ತಾರಕೇಂದ್ವರ್ಕ ತೇಜೋಽಂಭೋದ ಮಿವಾಂಬರಂ ॥ ೫ ॥

ಬಭ್ರಮನ್ಯತ ನೋ ಹಾರ ಕೇಯೂರ ವಲಯಾನ್ಯಸೌ ।
ಪ್ರಭುತಾ ಬೃಂಹಿತಂ ಚೇತೋ ನಾಹಾರ್ಯ ಮಭಿನಂದತಿ ॥ ೬ ॥

ಏಕ ಏವಾಜಿರಂ ಬಾಹ್ಯಂ ತಾದೃಗ್ವೇಷಃ ಸ ನಿರ್ಯಯೌ ।
ಮುಖ್ಯಾಂಗಣಾನ್ನ ಭೋಭಾಗಾದಸ್ತಂ ಗಚ್ಛನ್ನಿವಾಂಶುಮಾನ್ ॥ ೭ ॥

---

೪. ಹೀಗೆ ಆ ಶ್ವಪಚನು ಎಂಟು ವರ್ಷಗಳ ಕಾಲ ಕೀರ ದೇಶದಲ್ಲಿ ನಿರಾತಂಕವಾಗಿ ರಾಜ್ಯಭಾರವನ್ನು ನಡೆಯಿಸಿದನು. ಅಷ್ಟು ಕಾಲವೂ ಅವನು ಅಲ್ಲಿ ಉತ್ತಮವಾದ ದಯಾ ದಾಕ್ಷಿಣ್ಯ ಶೌಚಾದಿ ಸದಾಚಾರ ಸಂಪನ್ನನಾಗಿಯೇ ಸಕಲ ವ್ಯವಹಾರಗಳಲ್ಲಿಯೂ ಕುಶಲನಾಗಿದ್ದನು.

೫. ಅನಂತರ ಅವನು ಒಂದು ಸಮಯದಲ್ಲಿ ಆಕಸ್ಮಿಕವಾಗಿ ತನ್ನ ಮೇಲಿದ್ದ ಅಲಂಕಾರಗಳನ್ನೆಲ್ಲ ತೆಗೆದುಬಿಟ್ಟು, ಕತ್ತಲೆ, ನಕ್ಷತ್ರ, ಚಂದ್ರ, ಸೂರ್ಯಾದಿ ತೇಜಸ್ಸುಗಳು, ಮೇಘ ಮೊದಲಾದುವು ಯಾವುದೊಂದೂ ಇಲ್ಲದೆ ಸರ್ವತಃ ನೀಲವಾದ ಗಗನ (ಆಕಾಶ)ದಂತೆ ಇದ್ದನು.

೬. ಪ್ರಭುತ್ವವನ್ನು ಪಡೆದು ನಿತ್ಯ ಭೋಗಗಳಿಂದ ಸಮೃದ್ಧವಾದ ಮನಸ್ಸು ಕೃತ್ರಿಮವಾದ ಅಲಂಕಾರಾದಿ (ಭೂಷಣಾದಿ)ಗಳನ್ನು ಎಂದಿಗೂ ಆಶಿಸುವುದಿಲ್ಲ. ಅದು ಕಾರಣವೇ ಅವನಿಗೆ ಆಗ ಹಾರ, ಕೇಯೂರ, ಕಟಕ ಮುಂತಾದ ಆಭರಣಗಳ ಮೇಲೆಯೂ, ಇತರ ಎಲ್ಲ ಭೋಗಗಳ ಮೇಲೆಯೂ, ಕ್ರಮೇಣ ಅಭಿರುಚಿಯೇ ಇಲ್ಲವಾಯಿತು.

೭. ಅಸ್ತೋನ್ಮುಖನಾದ ಸೂರ್ಯನು ಗಗನ ಮಧ್ಯಭಾಗವನ್ನು ಬಿಟ್ಟು, ಆಕಾಶದಲ್ಲಿ ಪಕ್ಕಕ್ಕೆ ಸರಿಯುವಂತೆ ಹೀಗೆ ತನ್ನ ನಿಜ ವೇಷದಲ್ಲಿದ್ದಂಥ ಆ ಶ್ವಪಚ ರಾಜನು ಮುಖ್ಯ ಜನಾಶ್ರಿತವಾದ ನಗರದ ಒಳಗಡೆಯ ಪ್ರದೇಶವನ್ನು ಬಿಟ್ಟು ಏಕಾಕಿಯಾಗಿ ಹೊರಗಣ ಪ್ರದೇಶಕ್ಕೆ ಬಂದನು.

ತತ್ರಾಪಶ್ಯದ್ವನಂ ಶ್ಯಾಮಂ ಪೀನಂ ಶ್ವಪಚಪೇಟಕಂ ।
ಗಾಯನ್ಮೃದು ವಸಂತೋತ್ಥಂ ಕೋಕಿಲಾನಾಮಿವ ವ್ರಜಂ ॥ ೮ ॥

ಧುನಾನಂ ವಲ್ಲಕೀತಂತ್ರೀಂ ಕರಪಲ್ಲವ ಲೀಲಯಾ ।
ಮೃದುರೇಫಂ ರಣದ್ರೇಫಾ ವಲಿಶ್ರೇಣಿಮಿವ ದ್ರುಮಂ ॥ ೯ ॥

ಏಕಸ್ತಸ್ಮಾತ್ಸಮುತ್ತಸ್ಥೌ ಜರಾವಾನ್ರಕ್ತಲೋಚನಃ ।
ಕಾಚಶೃಂಗ ಹಿಮಾ ಪೂರ್ಣಮಿವ ಶ್ವಪಚನಾಯಕಃ ।
ಭೋ ಕಟಂಜೇತಿ ಸಹಸಾ ವದನ್ಕೀರ ಮಹೀಪತಿಂ ॥ ೧೦ ॥

ಇಹ ರಾಜಾ ಭವಂತಂ ವಾ ಕಶ್ಚಿದ್ಗೇಯ ಕ್ರಿಯಾವಿದಂ ।
ರಕ್ತ ಕಂಠಂ ಮಾನಯತಿ ರಾಗವಾನಿವ ಕೋಕಿಲಂ ॥ ೧೧ ॥

---

೮. ಹೊರಗೆ ಹೋದೊಡನೆಯೇ ಅಲ್ಲಿ ಅವನು ದಟ್ಟವಾಗಿ ಮರಗಳು ಬೆಳೆದು ಅಂಧಕಾರ ಮಯವಾಗಿ ಕಪ್ಪಗಿರುವ ಒಂದು ಅರಣ್ಯವನ್ನೂ, ಅದರೊಳಗೆ ಕೋಗಿಲೆಗಳು ವಸಂತರ್ತುವಿನಲ್ಲಿ ಗಾನ ಮಾಡುವಂತೆ ಮೃದುವಾಗಿ ಗಾನ ಮಾಡುತ್ತಿರುವ ಶ್ವಪಚರ ಗುಂಪನ್ನೂ ಕಂಡನು.

೯. ಆ ಶ್ವಪಚರ ಗುಂಪು ತಮ್ಮ ಪಲ್ಲವ ಸದೃಶವಾದ ಕೈ ಬೆರಳುಗಳಿಂದ ವೀಣೆಯ ತಂತಿಗಳನ್ನು ಮಿಾಟುತ್ತಾ, ಭ್ರಮರ ಪಂಕ್ತಿಗಳು ರೆಕ್ಕೆಗಳಿಂದ ಮರಗಳನ್ನು ಬಡಿಯುತ್ತಾ ಝುಂಕಾರ ಮಾಡುವಂತೆ ಮೃದು ಸ್ವರದಿಂದ ಗಾನ ಮಾಡುತ್ತಿದ್ದಿತು.

೧೦. ಆ ಗುಂಪಿನ ಮಧ್ಯದಿಂದ ಹಿಮ ಕವಿದಿರುವ ಅಂಜಿನ ಪರ್ವತದ ಕಪ್ಪು (ನೀಲ) ಶಿಖರದಂತೆ ಇದ್ದ, ಮುದುಕನಾಗಿ ಕೆಂಪು ಕಣ್ಣುಗಳುಳ್ಳವನಾಗಿದ್ದ ಆ ಗುಂಪಿನ ಯಜಮಾನನೊಬ್ಬನು ಆ ಕೀರ ದೇಶದ ರಾಜನನ್ನು ನೋಡಿ-'ಏನಯ್ಯಾ ಕಟರಾಜ,' ಎಂದು ಕೂಗುತ್ತಾ, ಅಸಿರೀಕ್ಷಿತವಾಗಿ ಎದ್ದು ಬಂದನು. (ಮತ್ತು ಮಾತನಾಡಿಸಿದನು.)

೧೧. 'ಅಯ್ಯ ಕಟಂಜ, ಸಂಗೀತ ರಸವನ್ನು ಬಲ್ಲವನು ಕೋಗಿಲೆಯನ್ನು ಬಹುಮಾನಿಸುವಂತೆ ಇಂಪಾದ ಕಂಠ ಸ್ವರವುಳ್ಳವನಾಗಿ, ಸಂಗೀತದಲ್ಲಿ ಕುಶಲನಾದ ನಿನ್ನನ್ನು ಇಲ್ಲಿನ ದೊರೆಯು ಸನ್ಮಾನಿಸುತ್ತಿರುವನೇನು ?

ಆಪ್ಪೂರಯತಿ ವಾ ಕಚ್ಚಿದ್ಗೃಹ ವಸ್ತ್ರಾಸನಾರ್ಪಣೈಃ ।
ಮಧೂ ರಸಾಲ ವಿಟಪಂ ಫಲಪುಷ್ಪಭರೈರಿವ ॥ ೧೨ ॥

ದರ್ಶನೇನ ತವಾದ್ಯಾಹಂ ಪರಾಂ ನಿರ್ವೃತಿ ಮಾಗತಃ ।
ಪದ್ಮಂ ಸೂರ್ಯೋದಯೇನೇವ ಚಂದ್ರೋದಯ ಇವೌಷಧೀಃ ॥ ೧೩ ॥

ಆನಂದಾನಾಮ ಶೇಷಾಣಾಂ ಲಾಭಾನಾಂ ಮಹತಾಮಪಿ ।
ವಿಶ್ರಾಮಾಣಾಮನಂತಾನಾಂ ಸೀಮಾಂತೋ ಬಂಧು ದರ್ಶನಂ ॥ ೧೪ ॥

ಶ್ವಪಚೇ ಪ್ರವದತ್ಯೇವಂ ರಾಜಾ ಯಾವತ್ತಯಾ ತಯಾ ।
ಚಕಾರ ತತ್ಕಾಲ ಜಯಾ ಚೇಷ್ಟಯೈವಾ ವಧೀರಣಂ ॥ ೧೫ ॥

ತಾವದ್ವ್ಯಾತಾಯನಗತಾಃ ಕಾಂತಾ ಪ್ರಕೃತಯ ಸ್ತಥಾ ।
ಶ್ವಪಚೋಯಮಿತಿ ಜ್ಞಾತ್ವಾ ಮ್ಲಾನತಾಮುಲಮಾಯಯುಃ ॥ ೧೬ ॥

---

೧೨. ಚೈತ್ರ ಮಾಸವು ಮಾವಿನ ಮರದ ಶಾಖೆಯನ್ನು ಫಲ ಪುಷ್ಪಗಳ ಅತಿಶಯದಿಂದ (ಸಮೃದ್ಧಿ) ಪೂರ್ಣ ಮಾಡುವಂತೆ ಇಲ್ಲಿನ ರಾಜನು ನಿನಗೆ ಗೃಹ, ವಸ್ತ್ರ, ಭೂಷಣಾದಿಗಳನ್ನೂ, ಉಚಿತವಾದ ಆಸನವನ್ನೂ ಕೊಟ್ಟು ನಿನ್ನ ಮನೋರಥವನ್ನು ಪರಿಪೂರ್ಣ ಮಾಡಿರುವನೇನು?

೧೩. ನಿನ್ನನ್ನು ಈಗ ನೋಡಿದುದರಿಂದ ನನಗೆ ಪರಮಾನಂದವಾಯಿತು. ಸೂರ್ಯೋದಯದಿಂದ ಪದ್ಮಗಳೂ, ಚಂದ್ರೋದಯದಿಂದ ಜ್ಯೋತಿರ್ಮಯವಾದ ವನೌಷಧಿಗಳೂ ಸಂತೋಷಪಡುವಂತೆ (ನಿನ್ನ ಆಗಮನದಿಂದ) ನಾನೂ ಸಂತೋಷಭರಿತನಾದೆನು.

೧೪. ಲೋಕದಲ್ಲಿ ಆಪ್ತ ಬಂಧು ದರ್ಶನವೆಂಬುದು ಸಮಸ್ತ ಆನಂದಗಳಿಗೂ, ಅಪಾರವಾದ ಸಕಲ ಲಾಭಗಳಿಗೂ, ಅನಂತವಾದ ವಿಶ್ರಾಂತಿಗಳಿಗೂ, ಪರಮಾವಧಿಯಾದುದು. (ಎಲ್ಲೆಯ ಕೊನೆ.)

೧೫-೧೬. ಒಬ್ಬ ಶ್ವಪಚನು ಹೀಗೆ ಗವಲ ರಾಜನೊಂದಿಗೆ ಮಾತನಾಡುತ್ತಿರುವಾಗ ಆ ರಾಜನು ಉಪಾಯಾಂತರವನ್ನು ಕಾಣದೆ ಆ ಕಾಲಕ್ಕೆ ತಕ್ಕ ಹಾಗೆ ತನ್ನ

ಪದ್ಮಾಸ್ತುಷಾರಪಾತ್ರಾನ್ವೃಷ್ಟ್ಯಾ ಗ್ರಾಮಾಃ ಸಾವಗ್ರಹಾ ಇವ ।
ದಾವವಂತ ಇವಾದ್ರೀಂದ್ರಾ ನಾಗರಾ ನ ವಿರೇಜಿರೇ ॥ ೧೭ ॥

ನೃಪೋಽ ವಧೀರಯಾಮಾಸ ತಾಂ ತಾಂ ಶ್ವಪಚ ಸಂಕಥಾಂ ।
ವೃಕ್ಷಾಗ್ರಗತಮಾರ್ಜಾರ ಫೇತ್ಕಾರಂ ಮೃಗರಾಡಿವ ॥ ೧೮ ॥

ಸತ್ವರಂ ಪ್ರವಿವೇಶಾಂತಃ ಪುರಮಾಮ್ಲಾನ ಮಾನಸಂ ।
ರಾಜಹಂಸ ಇವಾವರ್ಷೇ ಸೀದತ್ಸರಸಿಜಂ ಸರಃ ॥ ೧೯ ॥

ಗುಟ್ಟನ್ನು ಹೊರಗೆ ತೋರ್ಪಡಿಸದೆ ಇರುವುದಕ್ಕಾಗಿ ವಿವಿಧ ಚೇಷ್ಟೆಗಳಿಂದ ಆ ಶ್ವಪಚ ನಾಯಕನ ಮಾತಿನಲ್ಲಿ ಔದಾಸೀನ್ಯದಿಂದ ಧಿಕ್ಕರಿಸುವುದರೊಳಗಾಗಿಯೇ ಅರಮನೆಯ ಗವಾಕ್ಷಗಳಿಂದ ನೋಡುತ್ತಿದ್ದ ರಾಣಿ ವಾಸದವರೂ, ಇವರ ಮಂತ್ರಿ ಮೊದಲಾದ ಪ್ರಜೆಗಳೂ ಇದನ್ನೆಲ್ಲ ನೋಡಿ ತಮ್ಮ ರಾಜನಾದ ಗಾಲವನು ಶ್ವಪಚ ನೆಂದೇ ನಿಶ್ಚಯಿಸಿ. ಬಹಳವಾಗಿ ಸಂಕಟಪಟ್ಟು ತೇಜೋಹೀನರಾದರು.

೧೭ ಆಗ ಆ ದೇಶದ ನಾಗರಿಕರು ಮಂಜಿನ ಮಳೆಗೆ ಸಿಕ್ಕಿದ ಪದ್ಮಗಳಂತೆಯೂ, ಅನಾವೃಷ್ಟಿ ಪೀಡಿತಗಳಾದ ಗ್ರಾಮಗಳಂತೆಯೂ ಕಾಡು ಕಿಚ್ಚುಗಳಿಂದ ಉರಿದು ಹೋದ ದೊಡ್ಡ ಬೆಟ್ಟಗಳಂತೆಯೂ ಕಂಗೆಟ್ಟು ಶೋಕಾಕ್ರಾಂತರಾದರು.

೧೮. ಹೀಗಿರುವಾಗ ಆ ಗವಲ ರಾಜನು ಒಂದು ಮರದ ಮೇಲೆ ಕುಳಿತಿರುವ ಬೆಕ್ಕಿನ ಶಬ್ದವನ್ನು ಮೃಗರಾಜನಾದ ಸಿಂಹವು ಲಕ್ಷ್ಯಮಾಡದಿರುವಂತೆಯೇ ಆ ಶ್ವಪ ಚನ ಸಂಭಾಷಣೆಯನ್ನೆಲ್ಲ ಅಲಕ್ಷ್ಯ ಮಾಡಿಬಿಟ್ಟನು. (ಬಹುಮಾನಿಸದೆ ಹೋದನು.)

೧೯. ಮಳೆಯಿಲ್ಲದ ಸುರಿಯುವ ಬಿಸಿಲುಗಾಲದಲ್ಲಿ ಕಮಲಗಳೆಲ್ಲವೂ ಒಣಗಿ ಹೋಗುತ್ತಿರುವ ಸರೋವರವನ್ನು ಒಂದು ರಾಜ ಹಂಸವು ಪ್ರವೇಶ ಮಾಡುವಂತೆ ಗವಲ ರಾಜನು, ರಾಣಿವಾಸದವರೆಲ್ಲರೂ ದುಃಖಪಡುತ್ತಿರಲು ಕೂಡಲೇ ಅಂತಃಪುರ ವನ್ನು ಪ್ರವೇಶ ಮಾಡಿದನು.

ಸರ್ವಾವಯವ ವಿಶ್ರಾಂತಾಂ ಮ್ಲಾನತಾಮಯ ಮಾಯಯೌ ।
ಜಾನುಸ್ತಂಭಾಂತರಮಹಾ ರಂಧ್ರಾಗ್ನಿರಿವ ದುರ್ದ್ರುಮಃ ॥ ೨೦ ॥

ತತ್ರಾಪಶ್ಯದಸೌ ಸರ್ವಂ ವಿಷಣ್ಣವದನಂ ಜನಂ ।
ಜಾಲಂ ಕುಂಕುಮ ಪುಷ್ಪಾಣಾಂ ಭುಕ್ತಮೂಲ ಮಿವಾಖುನಾ ॥ ೨೧ ॥

ಮಂತ್ರಿಣೋ ನಾಗರಾ ನಾರ್ಯಸ್ತತಸ್ತೇ ತಂ ಮಹೀಪತಿಂ ।
ನಾಸ್ಪ್ರಾಕ್ಷುರಪಿ ತಿಷ್ಟಂತಂ ಗೃಹ ಏವ ಶವಂ ಯಥಾ ॥ ೨೨ ॥

ಭೃತ್ಯಾಶ್ಚ ಕೃತ ಸತ್ಕಾರಂ ದೂರ ಏನಮಥಾ ತ್ಯಜನ್ ।
ದುಃಖಯುಕ್ತಾ ಘನಸ್ನೇಹಾ ಅಪಿ ಬಾಲಾಃ ಶವಂ ಯಥಾ ॥ ೨೩ ॥

---

೨೦. ಆ ಸಮಯದಲ್ಲಿ ಬುಡದಲ್ಲಿ ಒಂದು ದೊಡ್ಡ ರಂಧ್ರದೊಳಗೆ ಬೆಂಕಿಯು ಹೊತ್ತಿಕೊಂಡು ಉರಿದು ಹೋಗುತ್ತಿರುವ ಬೂರುಗದ ಮರದಂತೆ (ಶಾಲ್ಮಲೀ) ಆ ಶ್ವಪಚನಾದ ಗವಲ ರಾಜನು ಸರ್ವಾವಯವಗಳಲ್ಲಿಯೂ ಗ್ಲಾನಿಯನ್ನು ಹೊಂದಿದವನಾದನು.

೨೧. ಅಂತಃಪುರದಲ್ಲಿದ್ದ ಸಕಲ ಜನಗಳೂ, ಇಲಿಯಿಂದ ಬೇರು ಕತ್ತರಿಸಲ್ಪಟ್ಟ ಕುಂಕುಮ ಜಾಲಾಸ್ಪದವಾದ ಗುಲ್ಮದಂತೆ ತಮ್ಮ ಮುಖಗಳಲ್ಲಿ ವಿಷಾದಯುಕ್ತರಾಗಿರುವುದನ್ನು ಅವನು ನೋಡಿದನು.

೨೨. ಪೂರ್ವದಲ್ಲಿ ಆ ರಾಜನ ಮೇಲೆ ಬಹಳ ಗೌರವವನ್ನೂ, ಪ್ರೀತಿಯನ್ನೂ ತೋರಿಸುತ್ತಿದ್ದ ಮಂತ್ರಿಗಳೂ, ಪುರಜನರೂ, ರಾಣಿ ವಾಸದ ಲಲನೆಯರೂ ಅವನು ತಮ್ಮೆದುರಿನಲ್ಲಿಯೇ ಇದ್ದರೂ ಕೂಡ ಮನೆಯಲ್ಲಿಯೇ ಇರುವ ಶವವನ್ನು ಯಾರೂ ಮುಟ್ಟದೆ ಹಿಂಜರಿಯುವಂತೆಯೇ ಅವನನ್ನು ಮುಟ್ಟುವುದಕ್ಕೂ ಇಷ್ಟವಿಲ್ಲದೆ ದೂರ ಸರಿದರು.

೨೩. ಅನಂತರ ಅತ್ಯಂತ ಪ್ರೇಮ ಪಾತ್ರರಾದ ಪಿತ್ರಾದಿ ಬಂಧುಗಳು ಸತ್ತು ಬಿದ್ದಿರುವಾಗ ಬಾಲಕನು ಕೇವಲ ದುಃಖಿತನಾಗಿದ್ದರೂ ಆ ಶವವನ್ನು ಮುಟ್ಟದೆ ದೂರದಲ್ಲಿ ಬಿಡುವಂತೆ ಅವನ ಭೃತ್ಯರೂ ಕೂಡ, ಮೊದಲಿನಂತೆ ಯಾವುದೊಂದು ರಾಜ ಮರ್ಯಾದೆಯನ್ನೂ ಸಲ್ಲಿಸದೆ ಉದಾಸೀನವಾಗಿ ಚಂಡಾಲನಾದ ಅವನನ್ನು ಬಹು ದೂರದಲ್ಲಿ ಬಿಡುತ್ತ ಬಂದರು.

ಅನಾನಂದ ಮುಖಂ ಶ್ಯಾಮಂ ಶರೀರಂ ಶ್ರೀ ವಿವರ್ಜಿತಂ ।
ದಗ್ಧಂ ಸ್ಥಲಮಿವೈನಂ ತೇ ಬಹ್ವಮನ್ಯಂತ ನಾಕುಲಾಃ ॥ ೨೪ ॥

ಧೂಮಾಯಮಾನ ದೇಹಸ್ಯ ಪರಿತಾಪದಶಾವತೀ ।
ನಾಶ್ಲೌಕತಾಸ್ಯ ಜನತಾ ಪಾರ್ಶ್ವಮಗ್ನಿರ್ಗಿರೇರಿವ ॥ ೨೫ ॥

ಮಂದೋತ್ಸಾಹಾಃ ಸಮುದ್ಭೂತಾಃ ಸಭ್ಯ ಸಂಘಾತ ವರ್ಜಿತಾಃ ।
ನ ತದಾಜ್ಞಾಃ ಪದಂ ಪ್ರಾಪುರ್ಭಸ್ಮನೀವಾಂಬು ವಿಪ್ರುಷಃ ॥ ೨೬ ॥

ಕ್ರೂರ ಕರ್ಮಕರಾಕಾರಾತ್ಸಂಗತಾಽಶುಭದಾಯಿನಃ ।
ತಸ್ಮಾದ್ವಿಶೇಷೇಣ ಜನಾ ರಾಕ್ಷಸಾದಿವ ದುದ್ರುವುಃ ॥ ೨೭ ॥

---

೨೪. ಮುಖದಲ್ಲಿ ಆನಂದ ಶೂನ್ಯನಾಗಿಯೂ, (ನಿರುತ್ಸಾಹಿಯಾಗಿಯೂ) ರಾಜನ ವರ್ಚಸ್ಸು ಕಳೆದು ಹೋಗಿ ದೇಹವೆಲ್ಲ ಕಪ್ಪಗಾಗಿರುವ ಅವನನ್ನು ಸುಡುಗಾಡಿನ ಭೂಮಿಯನ್ನು ಕಾಣುವಂತೆ ಕಾಣುತ್ತ, ಅಲ್ಲಿದ್ದ ಜನರೆಲ್ಲರೂ ವ್ಯಾಕುಲಚಿತ್ತರಾಗಿ ಬಹುಮಾನಿಸದೆ ಹೋದರು.

೨೫. ಅಲ್ಲಿದ್ದ ಜನ ಸಮೂಹವೆಲ್ಲವೂ ಅತ್ಯಂತ ಸಂತಾಪ ಮಯವಾದ ಸ್ಥಿತಿಯಲ್ಲಿರುತ್ತಾ (ಸಂತಾಪ ಪಡುತ್ತಾ) ಬೆಟ್ಟದ ಪಾರ್ಶ್ವದಲ್ಲಿರುವ ಕಲ್ಲು ಗೋಡೆಯ ಹತ್ತಿರಕ್ಕೆ ಅಗ್ನಿಯು ಹೋಗದಿರುವಂತೆ ಅವನ ಪಾರ್ಶ್ವಕ್ಕೆ ಕೂಡ ಹೋಗದೆ ದೂರದಲ್ಲಿದ್ದರು.

೨೬. ಅನಂತರ ನೀರಿನ ಬಿಂದುಗಳು ಭಸ್ಮರಾಶಿಯಲ್ಲಿ ಒಳಹೋಗುವುದಕ್ಕೆ ಅವಕಾಶವನ್ನು ಪಡೆಯಲಾರದೆ ಇರುವಂತೆ ಅವನ ಆಜ್ಞೆಗಳು ಎಲ್ಲಿಯೂ, ಯಾರಲ್ಲಿಯೂ ಅವಕಾಶವನ್ನು ಪಡೆಯಲಿಲ್ಲ. ಏಕೆಂದರೆ ಅವನ ಸಭಿಕರೂ, ಸೇವಕರೂ, ಪ್ರಜಾ ವರ್ಗಗಳೂ, ಎಲ್ಲರೂ ಅವನ ಮೇಲೆ ಸ್ವಲ್ಪವೂ ಗೌರವವಿಲ್ಲದೆ ಉಪೇಕ್ಷೆಯನ್ನು ತೋರಿಸಿದರು. ಹೀಗೆ ಅವನ ಆಜ್ಞಾ ಶಕ್ತಿಯು ನಿರಾಸ್ಪದವಾಗಿ ಸರ್ವತ್ರ ಪರಾಭೂತವಾಯಿತು. (ಯಾರೂ ಅವನ ಆಜ್ಞೆಯನ್ನು ಕಿವಿಯಿಂದ ಕೂಡ ಕೇಳದೆ ಹೋದರು.)

೨೭. ಅತಿ ಕ್ರೂರಗಳಾದ ಪ್ರಾಣಿವಧಾದಿ ಕರ್ಮಗಳಲ್ಲಿ ನಿರತನಾಗಿರತಕ್ಕ ಶ್ವಪಚಾಕಾರನಾಗಿಯೂ, ಸಹವಾಸ ಸಂಪರ್ಕಮಾತ್ರದಿಂದಲೇ ಅಮಂಗಳವನ್ನುಂಟು ಮಾಡುವವನಾಗಿಯೂ ಇದ್ದ ಆ ಗವಲನನ್ನು ಕಂಡೊಡನೆಯೇ ಜನರೆಲ್ಲರೂ,

ಏಕ ಏವ ಬಭೂವಾಸೌ ಜನಮಧ್ಯಗತೋಽಪಿ ಸನ್ ।
ಅರ್ಥಾದಿ ಗುಣ ನಿರ್ಮುಕ್ತಃ ಪರದೇಶ ಇವಾಧ್ವಗಃ ॥ ೨೮ ॥

ಭೃಶಮೂಲಪತೇಽಪ್ಯಸ್ಮೈ ನಾಲಾಪಂ ನಾಗರಾ ದದುಃ ।
ಮುಕ್ತಾಜಾಲಯುತಾಯಾಪಿ ಕೀಚಕಾಯಾಧ್ವಗಾ ಇವ ॥ ೨೯ ॥

ಅಥ ಸರ್ವೇ ವಯಂ ದೀರ್ಘಕಾಲಂ ಶ್ವಪಚ ದೂಷಿತಾಃ ।
ಪ್ರಾಯಶ್ಚಿತ್ತೈರ್ನ ಶುದ್ಧ್ಯಾಮಃ ಪ್ರವಿಶಾಮೋ ಹುತಾಶನಂ ॥ ೩೦ ॥

ಇತಿ ನಿರ್ಣೀಯ ನಗರೇ ನಾಗರಾ ಮಂತ್ರಿಣಸ್ತಥಾ ।
ಅಭಿತೋ ಜ್ವಾಲಯಾಮಾಸುಶ್ಚಿತಾಃ ಶುಷ್ಕೇಂಧನೈಧಿತಾಃ ॥ ೩೧ ॥

ಕ್ರೂರಕರ್ಮಿಯಾದ ರಾಕ್ಷಸನನ್ನು ಕಂಡಂತೆಯೇ ವಿಶೇಷವಾಗಿ ಹೆದರಿಕೊಂಡು ಓಡಿಹೋದರು.

೨೮. ತರುವಾಯ ಹೀಗೆ ಆ ಶ್ವಪಚನಾದ ಗವಲನು ಜನ ಸಮೂಹದ ಮಧ್ಯಗತನಾಗಿದ್ದರೂ ಕೂಡ ಪರದೇಶಗಳಲ್ಲಿ ಸಂಚರಿಸುವ ಪ್ರಯಾಣಿಕನು ತನ್ನಲ್ಲಿರುವ ಹಣವನ್ನೂ, ಸ್ವಜನರನ್ನೂ, ಸ್ನೇಹಿತರನ್ನೂ ಕಳೆದುಕೊಂಡ ಬಳಿಕ ಅಸಹಾಯನಾಗಿ ಹೋಗುವಂತೆ ಗುಣಹೀನನಾಗಿ ಏಕಾಕಿಯಾಗಿಬಿಟ್ಟನು.

೨೯. (ಬಿದಿರುಗಳೊಳಗೆ ಮುಕ್ತಾಫಲಗಳು ಇರುವುವು ಎಂದು ಪ್ರತೀತಿ.) ವಸ್ತುತಃ ಬಿದಿರು (ವೇಣುವು) ಒಳಗೆ ಮುತ್ತುಗಳಿಂದ ಪೂರ್ಣವಾಗಿದ್ದರೂ ಕೂಡ, ಅದು ಎಷ್ಟು ಕೂಗಿಕೊಂಡರೂ, ದಾರಿಯಲ್ಲಿ ಸಂಚರಿಸುವ ಪ್ರಯಾಣಿಕರೊಬ್ಬರೂ ಗಮನಿಸದೆ ಉತ್ತರವನ್ನು ಕೊಡದಿರುವಂತೆ ಆ ಗವಲನು ಎಷ್ಟು ಮಾತನಾಡಿಸಿದರೂ, ಪುರ ಜನರಲ್ಲಿ ಯಾರೊಬ್ಬರೂ ಅವನಿಗೆ ಉತ್ತರವನ್ನೂ ಕೊಡದೇ ಹೋದರು.

(ಕೀಚಕ ಎಂಬುದು ಒಂದು ಬಗೆಯ ಬಿದಿರು. ಅದು ತನ್ನ ರಂಧ್ರಗಳಲ್ಲಿ ಗಾಳಿಯು ತುಂಬಿಕೊಂಡಾಗ ಧ್ವನಿ ಮಾಡುವುದು.)

೩೦-೩೧. ಆ ಬಳಿಕ ಆ ನಗರದಲ್ಲಿದ್ದ ಪುರಜನರೂ, ಮಂತ್ರಿಗಳೂ ಮೊದಲಾದವರೆಲ್ಲ ಪಶ್ಚಾತ್ತಾಪಗೊಂಡು, "ನಾವುಗಳೆಲ್ಲ ಬಹುಕಾಲದಿಂದಲೂ ಶ್ವಪಚನ ಸೇವೆ ಮಾಡಿ ಅವನ ಸಂಪರ್ಕದಲ್ಲಿದ್ದು ಅತ್ಯಂತ ಮಹಾ ದೋಷಿಗಳಾಗಿರುವೆವು.

ಜ್ವಲಿತಾ ಸ್ವಭಿತಸ್ತಾಸು ತಾರಕಾಸ್ವಿವ ಖೇಃತದಾ ।
ಬಭೂವ ನಗರಂ ಸರ್ವಮಾಕ್ರಂದ ಪರಮಾನನಂ ॥ ೩೨ ॥

ಕರುಣಾರಾವ ಮುಖರೈಃ ಕಲತ್ರೈರ್ಬಾಷ್ಪ ವರ್ಷಿಭಿಃ ।
ಅವಷ್ಟಬ್ಧಂ ಜ್ವಲತ್ಕುಂಡೋಪಾಂತ ಮಂದರುದತ್ಪ್ರಜಂ ॥ ೩೩ ॥

ಅಗ್ನಿಕುಂಡ ಪ್ರವಿಷ್ಟಾನಾಂ ಮಂತ್ರಿಣಾಂ ಭೃತ್ಯರೋದನೈಃ ।
ರುದತ್ಕ್ರಂದ ದ್ಧೃಷತರ ಮರಣ್ಯಮಿವ ಮಾರುತೈಃ ॥ ೩೪ ॥

ಚಿತಾದೀಪಿತ ವಿಪ್ರೇಂದ್ರ ಮಾಂಸಮಾಂಸಲಗಂಧಯಾ ।
ಜಾತನೀಹಾರ ಮುತ್ಪಾತವಾತ್ಯಯಾಪಕರೋದ್ಧತೈಃ ॥ ೩೫ ॥

ಈ ದೋಷ ಪರಿಹಾರಕ್ಕೆ ಅಗ್ನಿ ಪ್ರವೇಶ ಮಾಡುವುದೊಂದೇ ತಕ್ಕ ಪ್ರಾಯಶ್ಚಿತವು. ಬೇರೆ ಇನ್ನಾವ ಪ್ರಾಯಶ್ಚಿತ್ತದಿಂದಲೂ ಈ ಮಹಾ ಪಾಪದಿಂದ ನಿರ್ಮುಕ್ತರಾಗಿ ಶುದ್ಧರಾಗಲಾರೆವು" ಎಂದು ನಿರ್ಣಯ ಮಾಡಿಕೊಂಡು ಒಣಗಿದ ಸೌದೆಗಳಿಂದ ಚಿತಿಗಳನ್ನು ಊರ ಸುತ್ತಲೂ ರಚಿಸಿ ಬೆಂಕಿಯಿಂದ ಹೊತ್ತಿಸಿದರು.

೩೨. ರಾತ್ರಿ ಕಾಲದಲ್ಲಿ ನಕ್ಷತ್ರಗಳು ಪ್ರಜ್ವಲಿಸುವಂತೆ ಆಗ ಊರ ಸುತ್ತಲೂ ಆ ಚಿತಿಗಳು ಉರಿಯುತ್ತಿರಲಾಗಿ ಪಟ್ಟಣವೆಲ್ಲವೂ ಜನರ ಗೋಳಿನಿಂದ ತುಂಬಿ ಹೋಯಿತು.

೩೩. ಪ್ರಜ್ವಲಿಸುತ್ತಿರುವ ಅಗ್ನಿ ಕುಂಡಗಳ ಸಮೀಪದಲ್ಲಿ ನಿಂತುಕೊಂಡು ಪತ್ನಿ ಪುತ್ರಾದಿಗಳನ್ನು ಕಂಡು ಕಂಡೂ, ಪ್ರಜೆಗಳೆಲ್ಲರೂ ಮೆಲ್ಲಗೆ ಅಳುತ್ತಾ ಇದ್ದರು. ಅವರ ಹೆಂಡತಿಯರೆಲ್ಲರೂ ದೈನದಿಂದ ಬಹಳವಾಗಿ ಅಳುತ್ತಲೂ, ಕಣ್ಣೀರಿಡುತ್ತಲೂ, ಅಗ್ನಿ ಪ್ರವೇಶೋನ್ಮುಖರಾಗಿದ್ದ ತಮ್ಮ ತಮ್ಮ ಪತಿಗಳನ್ನು ತಡೆಯುತ್ತಿದ್ದರು.

೩೪. ಮಂತ್ರಿಗಳೆಲ್ಲರೂ ಚಿತಾ ಪ್ರವೇಶ ಮಾಡಿದುದನ್ನು ಕಂಡು ಅವರ ಭೃತ್ಯರು ಗೋಳಿಟ್ಟರು. ಆಗ ಆ ಪಟ್ಟಣವೆಲ್ಲವೂ, ಅರಣ್ಯವು ಹಿಮ ಜಲಪೂರ್ಣವಾದ ಝುಂಝಾ ಮಾರುತದಿಂದ ನೀರುಗರೆಯುತ್ತಲೂ, ಶಬ್ದ ಮಾಡುತ್ತಲೂ ಇರುವಂತೆ ಕಣ್ಣೀರು ಸುರಿಸಿ ಅಳುತ್ತಿದ್ದಿತು.

೩೫. ಆ ನಗರದ ವಿಪ್ರೋತ್ತಮರು ಪ್ರದೀಪಿತವಾದ ಚಿತೆಗಳಲ್ಲಿ ತಮ್ಮ ದೇಹ

ವಾತದೀರ್ಘವಸಾಗಂಧ ದೂರಾನೀತ ಖಗೋರ್ಜಿತೈಃ ।
ಚಕ್ರೈರ್ವ್ಯೋಮಾಭವಚ್ಛನ್ನ ಭಾಸ್ಕರಂ ಜಲದೈರಿವ ॥ ೩೬ ॥

ವಾತೋದ್ಧೂತ ಚಿತಾವಹ್ನಿಪ್ರಜ್ವಲದ್ವ್ಯೋಮ ಮಂಡಲಂ ।
ಉಡ್ಡೀನಾಗ್ನಿ ಕಣವ್ರಾತ ತಾರಾಸಾರ ದಿಗಂತರಂ ॥ ೩೭ ॥

ಗಳನ್ನು ಅರ್ಪಿಸಿಬಿಟ್ಟರು. ಅವರ ಮಾಂಸವು ಬೆಂದುಹೋಗಿ ಅದರ ಗಂಧವೆಲ್ಲವೂ ವಾಯುಮಂಡಲದಲ್ಲೆಲ್ಲ ವ್ಯಾಪಿಸಿತು. ಇಂತಹ ಮಾಂಸ ಗಂಧದಿಂದ ಭರಿತವಾದ ವಾತ ಸಮೂಹವು ಬಹು ರಭಸವಾಗಿ ಬೀಸಲು ಅದರಿಂದ ಧೂಳು ಎದ್ದು ಆ ನಗರ ವನ್ನೆಲ್ಲಾ ಮುಸುಕಿಕೊಂಡಿತು. ಅದನ್ನು ನೋಡಿದರೆ ಆ ನಗರದ ಮೇಲೆಲ್ಲಾ ಮಂಜು ಕವಿದಿರುವಂತೆ ಕಂಡಿತು.

೩೬. ಅಗ್ನಿಯು ಮನುಷ್ಯರ ದೇಹಗಳನ್ನು ಸುಡುತ್ತಿರಲು ಅವುಗಳ ವಸಾ ಗಂಧವು (ಕೊಬ್ಬಿನ ವಾಸನೆಯು) ಗಾಳಿಯ ಮೂಲಕ ಬಹುದೂರ ಪ್ರಸರಿಸಿ ಎಲ್ಲೆಲ್ಲಿಯೋ ಇದ್ದ ಹದ್ದು ಮೊದಲಾದ ಪಕ್ಷಿಗಳನ್ನೂ, ಪಿಶಾಚಾದಿಗಳನ್ನೂ, ವಿಶೇಷ ವಾಗಿ ಬಹು ದೂರದಿಂದ ಆಕರ್ಷಿಸಿತು. ಮಾಂಸಾಹಾರಿಗಳಾದ ಆ ಪಕ್ಷ್ಯಾದಿಗಳ ಗುಂಪುಗಳು ಬರುಬರುತ್ತಾ ಹೆಚ್ಚಿ, ಆ ನಗರದ ಮೇಲುಗಡೆ ಚಕ್ರಾಕಾರವಾಗಿ ಸುತ್ತಲಾರಂಭಿಸಿದುವು. ಆಗ ಆ ನಗರವು ಸೂರ್ಯಮಂಡಲವೇ ಕಾಣದ ರೀತಿಯಲ್ಲಿ ಮೇಘಗಳು ಕವಿದುಕೊಂಡಿರುವ ಆಕಾಶದ ಹಾಗೆ ಕಂಡಿತು.

೩೭. ಗಾಳಿಯು ರಭಸವಾಗಿ ಬೀಸಿದುದರಿಂದ ಚಿತಾಗ್ನಿ ಜ್ವಾಲೆಗಳು ಮೇಲಕ್ಕೆದ್ದು ಗಗನ ಮಂಡಲದಲ್ಲೆಲ್ಲ ಪ್ರಜ್ವಲಿಸಿದುವು. ಬೆಂಕಿಯಿಂದ ಕಿಡಿಗಳ ಸಮೂಹ ಗಳು ಮೇಲಕ್ಕೆ ಹಾರಿ ನಕ್ಷತ್ರಗಳಂತೆ ಕಾಣಿಸುತ್ತ ದಿಗಂತರಗಳಲ್ಲೆಲ್ಲಾ ತುಂಬಿ ಕೊಂಡುವು.

ಪ್ರಮತ್ತಮುಸ್ಕರ ಕ್ರಂದದ್ವೇಲದ್ಬಾಲ ಕುಮಾರಕಂ ।
ಸಂತ್ರಸ್ತ ನಾಗರಾ ಪಾಸ್ತ ಜೀವಿತಾಖ್ಯಮುಸಂ ಸ್ಥಿತಿ ॥ ೩೮ ॥

ಅಲಕ್ಷಿತ ಗೃಹಂ ಚೌರಲುಂಠಿತಾಖಿಲ ಸಂಚಯಂ ।
ತ್ಯಕ್ತಪುತ್ರ ಕಲತ್ರಂ ತನ್ಮರಣವ್ಯಗ್ರನಾಗರಂ ॥ ೩೯ ॥

ತಸ್ಮಿಂಸ್ತಥಾ ವರ್ತಮಾನೇ ನಷ್ಟೇ ವಿಧಿ ವಿಪರ್ಯಯೇ ।
ಅಶೇಷ ಜನತಾಶೇಷ ಕಲ್ಪಾಂತಸದೃಶ ಸ್ಥಿತೌ ॥ ೪೦ ॥

ರಾಜ್ಯ ಸಜ್ಜನ ಸಂಪರ್ಕ ಪವಿತ್ರೀಕೃತ ಧೀರಧೀಃ ।
ಗವಲಶ್ಚಿಂತಯಾಮಾಸ ಶೋಕೇನಾಕುಲ ಚೇತನಃ ॥ ೪೧ ॥

---

೩೮. ತಮಗೆ ಸರಿಯಾದ ಅವಕಾಶವು ದೊರೆಯಿತೆಂದು ಭಾವಿಸಿ ಉದ್ಧತರಾದ ಕಳ್ಳರು ತಮ್ಮ ಮೈಮೇಲಿನ ಒಡವೆಗಳನ್ನು ಸುಲಿದುಕೊಳುತ್ತಿರಲು ಆಗ ಆ ನಗರದ ಸಣ್ಣ ಮಕ್ಕಳೂ, ಸ್ವಲ್ಪ ಪ್ರೌಢರಾದ ಬಾಲಕರೂ, ಅಳುತ್ತಲೂ, ನಡುಗುತ್ತಲೂ ಇದ್ದರು. ಪುರ ನಿವಾಸಿಗಳೆಲ್ಲರೂ ಹೆದರಿಕೊಂಡು ತಮ್ಮ ಪ್ರಾಣಗಳ ಮತ್ತು ಹೆಸರುವಾಸಿಯ ಮೇಲಣ ಆಸೆಯನ್ನು ಕಳೆದುಕೊಂಡರು. ಆಗ ಅಲ್ಲಿ ಯಾವದೊಂದು ಬಗೆಯ ವ್ಯವಸ್ಥೆಯೂ (ನಿಯಮವೂ) ಇಲ್ಲವಾಯಿತು.

೩೯. ಆಗ ಆ ಪಟ್ಟಣದಲ್ಲಿ ಮನೆಗಳೆಲ್ಲವೂ ಕಣ್ಣಿಗೆ ಕಾಣದಂತೆ ಹಾಳಾದುವು. ಕಳ್ಳರು ಮನೆಗಳಿಗೆ ನುಗ್ಗಿ ಸರ್ವಸ್ವಗಳನ್ನೂ ಕದ್ದು ಹೋದರು. ನಾಗರಿಕರೆಲ್ಲರೂ ತಮ್ಮ ತಮ್ಮ ಹೆಂಡಿರು ಮಕ್ಕಳುಗಳನ್ನೂ ಬಿಟ್ಟು ಬಿಟ್ಟು ಸಾಯುವುದಕ್ಕೆ ಆತುರಗೊಂಡರು.

೪೦-೪೧. ಹೀಗೆ ದೇಶದ ಸಮಸ್ತ ಜನಗಳಿಗೆ ನಿಶ್ಶೇಷವಾಗಿ ಒಬ್ಬರೂ ಉಳಿಯದಂತೆ ಪ್ರಳಯ ಸದೃಶವಾದ ದುರ್ದಶೆಯುಳ್ಳ ಆ ದೈವ ವಿಪರ್ಯಾಸವು ಅತಿ ದುಸ್ಸಹವಾದ ಕಷ್ಟವಾಗಿ ಪರಿಣಮಿಸಿರುವಾಗ ಇಷ್ಟು ದೀರ್ಘ ಕಾಲದಿಂದಲೂ ದೊರೆತನವನ್ನು ಮಾಡಿ ಸದಾ ಸಜ್ಜನ ಸಹವಾಸವಲ್ಲಿದ್ದುದರಿಂದ ಪೂರ್ವದ ಶ್ವಪಚತ್ವದ ದುಷ್ಟ ಸಂಸ್ಕಾರಗಳನ್ನೆಲ್ಲ ಪರಿಹರಿಸಿಕೊಂಡು ಪವಿತ್ರವಾಗಿಯೂ, ಸ್ಥಿರವಾಗಿಯೂ ಇದ್ದ ತನ್ನ ಬುದ್ಧಿಯಿಂದ ಆ ಗವಲ ರಾಜನು ಬಹಳ ಶೋಕಾಕ್ರಾಂತನಾಗಿ ಹೀಗೆ ತನಗೆ ತಾನೇ ಚಿಂತಿಸಿದನು.

ಮದರ್ಥೇ ಹಿ ಕದರ್ಥೋಽಯಂ ದೇಶೇಽಸ್ಮಿನ್ ಸ್ಥಿತಿ ಮಾಗತಃ |
ಅಕಾಲ ಕಲ್ಪಾಂತಮಯಃ ಸರ್ವ ನಾಯಕ ನಾಶನಃ || ೪೨ ||

ಕಿಂ ಮೇ ಜೀವಿತ ದುಃಖೇನ ಮರಣಂ ಮೇ ಮಹೋತ್ಸವಃ |
ಲೋಕ ನಿಂದ್ಯಸ್ಯ ದುರ್ಜಂತೋರ್ಜೀವಿಕಾನ್ಮರಣಂ ವರಂ || ೪೩ ||

ಇತಿ ನಿಶ್ಚಿತ್ಯ ಗವಲೋ ಜ್ವಲಿತೇ ಜ್ವಲನೇ ಪುನಃ |
ಪತಂಗವದನುದ್ವೇಗಮಕರೋದಾಹುತಿಂ ವಪುಃ || ೪೪ ||

ತಸ್ಮಿನ್ಸ್ಬಲಾದ್ಗವಲನಾಮ್ನಿ ಹುತಾಶರಾಶೌ |
　　ದೇಹೇ ಪತತ್ಯವಯವಾಕುಲತಾಂ ಪ್ರಯಾತೇ ||
ಸ್ವಾಂಗಾವದಾಹ ದಹನ ಸ್ಫುರಣಾನುರೋಧಾ |
　　ದಂತರ್ಜಲೇ ಝುಟಿತಿ ಬೋಧಮವಾಪ ಗಾಧಿಃ || ೪೫ ||

೪೨-೪೩. ಅಯ್ಯೋ ನನ್ನ ಸಲುವಾಗಿಯೇ ಈ ದೇಶದಲ್ಲಿ ಇಂತಹ ಮಹಾ ಅನರ್ಥವು ಪ್ರಾಪ್ತವಾಯಿತಲ್ಲಾ! ಈಗಲೇ ಈ ದೇಶದಲ್ಲಿ ಅಕಾಲ ಪ್ರಳಯವು ಸಂಭವಿಸಿ ಇಲ್ಲಿನ ಮುಖ್ಯಸ್ಥರಾದ ಪ್ರಧಾನ ಪುರುಷರನ್ನೆಲ್ಲ ಆಹುತಿ ತೆಗೆದುಕೊಳ್ಳುತ್ತಿರುವುದು. ಇದಕ್ಕೆ ನಾನೇ ಕಾರಣನಾದೆನು. ಈಗ ನಾನೇನು ಮಾಡಲಿ!! ಇನ್ನು ನನಗೆ ಈ ದುಃಖಮಯವಾದ ಜೀವಿತದಿಂದ ಫಲವೇನು? ಲೋಕದಲ್ಲೆಲ್ಲಾ ಸರ್ವರಿಂದಲೂ ನಿಂಧಿತವಾಗಿರುವ ಒಬ್ಬರಿಗೂ ಬೇಡವಾಗಿರುವ ಕೆಟ್ಟ ಪ್ರಾಣಿಯು ಬದುಕಿರುವುದಕ್ಕಿಂತಲೂ ಸಾಯುವುದೇ ಲೇಸು. ಅದು ಕಾರಣ ಈಗ ಅತಿ ನಿಂದ್ಯನಾದ ನನಗೆ ಜೀವಿತಕ್ಕಿಂತಲೂ ಮರಣವೇ ಮಹೋತ್ಸವ (ಮಹದಾನಂದಕರವಾಗಿರುವುದು.

೪೪. ಹೀಗೆಂದು ನಿಶ್ಚಯಿಸಿಕೊಂಡು ಆ ಗವಲನು ಸ್ವಲ್ಪವೂ ಕಳವಳಗೊಳ್ಳದೆ ಪತಂಗದ ಹುಳುವಂತೆ ತನ್ನ ದೇಹವನ್ನು ಆಗಲೂ ಪುನಃ ಉರಿಯುತ್ತಿರುವ ಬೆಂಕಿಯಲ್ಲಿ ಆಹುತಿ ಮಾಡಿದನು.

(ಮೊದಲೊಂದುಸಲ ಗಾಧಿ ದೇಹವು ಸುಟ್ಟು ಹೋಗಿತ್ತು. ಈಗ ಅದೇ ಗಾಧಿಯು ಗವಲ ರಾಜನಾಗಿ ತನ್ನ ದೇಹವನ್ನು ಬೆಂಕಿಯಲ್ಲಿ ಹಾಕಿ ಸುಟ್ಟುದನ್ನೂ ತಾನೇ ಕಂಡನು-)

೪೫. ಅಯ್ಯಾ ರಾಮ, ಈರೀತಿಯಾಗಿ ಆ ಕಾಲದಲ್ಲಿ ಆ ಗವಲನೆಂಬ

ಶ್ರೀ ವಾಲ್ಮೀಕಿ ರುವಾಚ—
ಇತ್ಯುಕ್ತ ವತ್ಯಥ ಮುನೌ ದಿವಸೋ ಜಗಾಮ
ಸಾಯಂತನಾಯ ವಿಧಯೇ ಽ ಸ್ತಮಿನೋ ಜಗಾಮ ||
ಸ್ನಾತುಂ ಸಭಾ ಕೃತ ನಮಸ್ಕರಣಾ ಜಗಾಮ
ಶ್ಯಾಮಾಕ್ಷಯೇ ರವಿಕರೈಶ್ಚ ಸಹಾಜಗಾಮ || ೪೬ ||

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ಉಪಶಮ ಪ್ರಕರಣೇ ಗಾಧಿ ವೃತ್ತಾಂತೇ "ರಾಜ್ಯಭ್ರಂಶೋನಾಮ"
ಷಟ್ಚತ್ವಾರಿಂಶಃ ಸರ್ಗಃ

ಹೆಸರಿನ ಶರೀರವು ಬಲಾತ್ಕಾರವಾಗಿ ತಾನೇ ಅಗ್ನಿಯಲ್ಲಿ ಬಿದ್ದು ಅವಯವ ಗಳೆಲ್ಲವೂ ಬೆಂದು ಸಂತಾಪಪಡುತ್ತಿರಲಾಗಿ ಇದನ್ನೆಲ್ಲ ತಾನೇ ತನ್ನ ಮನಸ್ಸಿ ನಲ್ಲಿಯೇ ಕಾಣುತ್ತ ಸ್ನಾನಾರ್ಥವಾಗಿ ಸರೋವರದ ಮಧ್ಯದಲ್ಲಿ ನೀರಿನೊಳಗೆ ನಿಂತಿದ್ದ ಗಾಧಿಯು ತನ್ನ ಅವಯವಗಳಲ್ಲಿ ಅಗ್ನಿ ಸ್ಪರ್ಶವಾದಂತಾಗಿ ತಟ್ಟನೆ ಕೂಡಲೆ ಪ್ರಬುದ್ಧನಾಗಿ ಮಾಯಾವರಣದಿಂದ ವಿಮುಕ್ತನಾಗಿ ಜ್ಞಾನ ಪಡೆದನು. (ಎಂದು ಶ್ರೀ ವಸಿಷ್ಠರು ಶ್ರೀರಾಮನಿಗೆ ಹೇಳಿದರು.)

೪೬. ಶ್ರೀ ವಾಲ್ಮೀಕಿ ಋಷಿಗಳು (ಭರದ್ವಾಜನೆಂಬ ಶಿಷ್ಯನಿಗೆ) ಹೇಳಿದರು :— ಅಯ್ಯ ಭರದ್ವಾಜ, ಹೀಗೆ ಶ್ರೀ ವಸಿಷ್ಠರು ಶ್ರೀರಾಮನಿಗೆ ಹೇಳುತ್ತಿರಲಿಕ್ಕಾಗಿ ಆ ಹಗಲು ಕಳೆದು ಹೋಯಿತು. ಸೂರ್ಯನೂ ಅಸ್ತಮಿಸಿದನು. ಆಗ ಸಂಧ್ಯಾ ಕಾಲದಲ್ಲಿ ವಿಹಿತವಾದ ಕರ್ಮಾನುಷ್ಠಾನಕ್ಕೋಸ್ಕರ ಸಭೆಯೆಲ್ಲವೂ ಶ್ರೀ ವಸಿಷ್ಠರಿಗೆ ನಮಸ್ಕಾರಮಾಡಿ ಎದ್ದು ಸ್ನಾನಾರ್ಥವಾಗಿ ಹೋಯಿತು. ಆ ರಾತ್ರಿ ಕಳೆದ ಬಳಿಕ ಪುನಃ ಪ್ರಾತಃ ಸಂಧ್ಯಾಕಾಲಿಕವಾದ ನಿತ್ಯ ಕರ್ಮಗಳನ್ನು ಮುಗಿಸಿಕೊಂಡು ಆ ಸಭೆಯು ಸೂರ್ಯ ಕಿರಣಗಳ ಸಂಗಡಲೇ ಶ್ರೀ ವಸಿಷ್ಠರ ಬಳಿಗೆ ಬಂದು ಸೇರಿತು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಉಪಶಮ ಪ್ರಕರಣದಲ್ಲಿ ಗಾಧಿ ವೃತ್ತಾಂತದೊಳಗೆ "ರಾಜ್ಯ ಭ್ರಂಶ" ಎಂಬ
ನಲವತ್ತಾರನೆಯ ಸರ್ಗವು.

ಸಪ್ತ ಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಮುಹೂರ್ತದ್ವಿತಯೇನಾಥ ಗಾಧಿರಾಧಿಭವಭ್ರಮಾತ್ ।
ಪ್ರಶಮಾಮಾಕುಲೀಭಾವೋ ವೇಲಾವರ್ತ ಇವಾಂಬುಧೇಃ ॥ ೧ ॥

ಮನೋನಿರ್ಮಾಣ ಸಂಮೋಹಾತ್ತಸ್ಮಾತ್ಸ ವಿರರಾಮ ಹ ।
ಕಲ್ಪಾಂತ ಸಮಯೇ ಬ್ರಹ್ಮಾ ಜಗದ್ವಿರಚನಾದಿವ ॥ ೨ ॥

ಬೋಧಮಾಪ ಶನೈಃ ಶಾಂತಃ ಸ್ವಮೋಪೋನ್ನಿದ್ರ ಧೀರಿವ ।
ಕ್ಷೀಬತಾಯಾಂ ಪ್ರಶಾಂತಾಯಾಂ ಯಥಾ ಪರಿಣತಾಶಯಃ ॥ ೩ ॥

ಅಯಂ ಮೋಹಮಿದಂ ಕಾರ್ಯಮಿದಂ ನೇತಿ ದದರ್ಶಹ ।
ನಿಶಾವ್ಯಪಗಮೇ ಲೋಕೋ ಯಥಾ ಕ್ಷೀಣೇ ತಮಃ ಪಟೇ ॥ ೪ ॥

ನಲವತ್ತೇಳನೆಯ ಸರ್ಗ

ಶ್ರೀ ವಸಿಷ್ಠನು ಹೇಳಿದನು :—

೧-೪. ಅಯ್ಯ ರಾಮಚಂದ್ರ, ಹೀಗೆ ಆ ಗಾಧಿ ಬ್ರಾಹ್ಮಣನು ಪ್ರಬೋಧವನ್ನು ಹೊಂದಿ ಎರಡು ಮುಹೂರ್ತಗಳು ಕಳೆದ ಬಳಿಕ, ಸಮುದ್ರದಲ್ಲಿ ಎಲ್ಲವನ್ನೂ ವ್ಯಾಕುಲ ಪಡಿಸತಕ್ಕ ಸುಳಿಯು ದಡಕ್ಕೆ ಹತ್ತಿರವಾದೊಡನೆಯೇ ಪ್ರಶಾಂತವಾಗುವಂತೆ, ತನ್ನ ಮನೋವ್ಯಥಾ ರೂಪವಾದ ಸಂಸಾರ ಭ್ರಮೆಯಿಂದ ಶಾಂತನಾದನು. ಪ್ರಳಯ ಕಾಲದಲ್ಲಿ ಚತುರ್ಮುಖ ಬ್ರಹ್ಮನು ಬ್ರಹ್ಮಾಂಡ ಸೃಷ್ಟಿಯನ್ನು ಮಾಡುವ ತನ್ನ ಕೆಲಸವನ್ನು ನಿಲ್ಲಿಸಿ ವಿರಾಮವನ್ನು ಪಡೆಯುವಂತೆ ಆ ಗಾಧಿಯೂ ತನ್ನ ಮನಸ್ಸಿನಲ್ಲಿಯೇ ಅನೇಕಾನರ್ಥಗಳನ್ನು ನಿರ್ಮಿಸುವ ಭ್ರಾಂತಿಯನ್ನು ಬಿಟ್ಟು ವಿರಾಮವನ್ನು ಹೊಂದಿದನು. ಮದ್ಯಪಾನದಿಂದ ಉಂಟಾಗಿದ್ದ ಚಿತ್ತ ಭ್ರಮೆಯು ಇಳಿದು ಹೋದಮೇಲೆ, ಸುರಾಪಾಯಿಯು ಸ್ವಸ್ಥಚಿತ್ತನಾಗಿ ಪ್ರಬುದ್ಧನಾಗುವಂತೆ ಅವನೂ ತನಗೆ ತಾನೇ ನಿದ್ರೆಯಿಂದ ಎಚ್ಚೆತ್ತವನ ಹಾಗೆ ಮೆಲ್ಲಗೆ ಭ್ರಮೆಯಿಂದ ಎಚ್ಚೆತ್ತು, ತಾನು ಗಾಧಿಯೆಂದು ತಿಳಿದು ಶಾಂತನಾದನು. ರಾತ್ರಿಯೆಲ್ಲ ಕಳೆದು

ಸ್ಮೃತ ಸ್ವರೂಪೋಽಥ ಪದಮುದ್ದಧ್ರೇ ನಜಲಾಂತರಾತ್ ।
ಶಿಶಿರಾಂತೇ ಪ್ರವೃತ್ತಾಸ್ಯಂ ಸರೋಜಮಿವ ಮಾಧವಃ ॥ ೫ ॥

ಏತದ್ವಾರಿ ಕಕುಬ್ವ್ಯೋಮವತೀಂ ವಸುಮತೀಮಿಮಾಂ ।
ಅನ್ಯಾಮಿವ ಪುನಃ ಪಶ್ಯನ್ವಿಸ್ಮಯಂ ಪರಮಂ ಯಯೌ ॥ ೬ ॥

ಕೋಽಹಂ ಕಿಮಿವ ಪಶ್ಯಾಮಿ ಕಿಮಕಾರ್ಷಮಹಂ ಕಿಲ ।
ಏವಂ ವಿಚಾರಯಂಶ್ಚಿತ್ರಂ ಸಭ್ರೂಭಂಗಮಭೂತ್ಕ್ಷಣಂ ॥ ೭ ॥

ಹೋದಮೇಲೆ ಕತ್ತಲೆಯು ಸಂಪೂರ್ಣವಾಗಿ ನಾಶವಾದಾಗ ಜನಗಳು ವಿವೇಕದಿಂದ ವಸ್ತು ಸ್ವರೂಪವನ್ನು ತಿಳಿದುಕೊಳ್ಳುವಂತೆ ಆಗ ಆ ಗಾಧಿಯು 'ನಾನು ಇಂತಹವನು, ಇದು ಕಾರ್ಯವು, ಇದು ಅಕಾರ್ಯವು' ಎಂಬ ವಿವೇಕವನ್ನು ಹೊಂದಿದನು.

(ಅಂದರೆ ನಾನು ಗಾಧಿಯೆಂಬ ಬ್ರಾಹ್ಮಣನು. ನಾನು ಸ್ನಾನ ಕರ್ಮವನ್ನು ಮಾಡುತ್ತಿದ್ದೆನು. ಚಂಡಾಲ ರಾಜ್ಯಾದಿ ಅಕಾರ್ಯಗಳನ್ನೆಲ್ಲ ಮನಸ್ಸಿನಲ್ಲಿ ಭ್ರಾಂತಿಯಿಂದ ನೋಡಿದೆನು ಎಂದು ಸ್ಪಷ್ಟವಾಗಿ ವಿವೇಕದಿಂದ ತಿಳಿದುಕೊಂಡನು.)

೫. ಶಿಶಿರ ಋತುವು ಮುಗಿದು ಹೋದಮೇಲೆ ವಸಂತ ಕಾಲವು ಮೊಗ್ಗಾಗಿರುವ ಕಮಲವನ್ನು ಮೇಲಕ್ಕೆಬ್ಬಿಸಿ ಚೆನ್ನಾಗಿ ಅರಳಿಸುವಂತೆ ಅವನು ತನ್ನ ಪೂರ್ವ ಸ್ವರೂಪವನ್ನು ಚೆನ್ನಾಗಿ ಸ್ಮರಿಸಿಕೊಂಡವನಾಗಿ ಆಮೇಲೆ ಜಲ ಮಧ್ಯದ ಡೆಸೆಯಿಂದ ತನ್ನ ಪಾದವನ್ನು ಈಚೆಗೆ ತೆಗೆದು ಹೊರಕ್ಕೆ ಬಂದನು.

೬. ತರುವಾಯ ಮೊದಲಿದ್ದಂತೆಯೇ, ಅದೇ ನೀರು, ದಿಕ್ಕುಗಳು, ಆಕಾಶ, ಮೊದಲಾದ ಯಾವುದೊಂದೂ ಸ್ವಲ್ಪವೂ ವ್ಯತ್ಯಾಸವಾಗದೇ ಇದ್ದರೂ ಈ ಭೂಮಿಯನ್ನು ಬೇರೆ ಹೊಸದಾಗಿರುವಂತೆ ಕಂಡವನಾಗಿ ಪುನಃ ಅತ್ಯಾಶ್ಚರ್ಯಭರಿತನಾದನು.

೭. ಆಮೇಲೆ "ನಿಜವಾಗಿ ನಾನು ಯಾರು? ಈಗ ಏನನ್ನು ನೋಡುತ್ತಿರುವೆನು? ನಾನೇನನ್ನು ಮಾಡಿದೆನು" ಎಂದು ಒಂದು ಕ್ಷಣಕಾಲ ತನ್ನ ಹುಬ್ಬು

ಶ್ರಾಂತಸ್ತತ್ಕ್ಷಣಮಾತ್ರೇಣ ಸಂಭ್ರಮಂ ದೃಢವಾನಹಂ ।
ಇತಿ ವಿಜ್ಞಾಯ ಸಲಿಲಾದುದಸ್ಥಾದುದಯಾರ್ಕವತ್ ॥ ೮ ॥

ಚಿಂತಯಾಮಾಸ ಚ ತಟೇ ಕ್ವ ಸಾ ಮಾತಾ ಕ್ವ ಸಾ ಪ್ರಿಯಾ ।
ಯದಾಹಂ ಮೃತಿಮಾಯಾತೋ ಮಧ್ಯೇ ಮಾತೃ ಮಹೇಲಯೋಃ ॥ ೯ ॥

ಬಾಲಸ್ಯ ಮಾತಾಪಿತರೌ ನಷ್ಟೌ ಕಿಲ ಮಮಾಮತೇಃ ।
ವಾತನೀತಸ್ಯ ಪತ್ರಸ್ಯ ವಲ್ಲೀ ವೃಕ್ಷನಿವಾಸಿನಾ ॥ ೧೦ ॥

ಗಳನ್ನು ಗಂಟು ಹಾಕಿಕೊಂಡು (ಭ್ರೂಭಂಗದೊಡನೆ) ಅತಿ ವಿಚಿತ್ರವಾಗಿ ಪರ್ಯಾಲೋಚಿಸುತ್ತಾ ಇದ್ದನು.

೮. ಹೀಗೆ ಆಲೋಚಿಸಿದ ಬಳಿಕ, "ಒಂದು ಕ್ಷಣದೊಳಗಾಗಿ ನಾನು ಮನಸ್ಸಿನಲ್ಲಿಯೇ ದೊಡ್ಡದೊಂದು ಭ್ರಾಂತಿಯನ್ನು ಕಲ್ಪಿಸಿಕೊಂಡು ಅದರಿಂದ ಇದು ವರೆವಿಗೆ ಬಹಳ ಕಷ್ಟಪಟ್ಟೆನು" ಎಂಬ ಜ್ಞಾನೋದಯವಾಯಿತು. ಆಗ ಉದಯ ಕಾಲದ ಸೂರ್ಯನಂತೆ ಜಲ ಮಧ್ಯದಿಂದ ಮೇಲಕ್ಕೆದ್ದು ಬಂದನು.

೯. ಆಗ ಅವನು ಆ ಸರಸ್ತೀರದಲ್ಲಿ ನಿಂತುಕೊಂಡು ಹೀಗೆ ಯೋಚಿಸಿದನು. "ಯಾವಾಗ ನಾನು ತಾಯಿ ಸತ್ತಮೇಲೆ ಹೆಂಡತಿಯನ್ನು ಮದುವೆಯಾಗುವುದಕ್ಕಿಂತ ಮುಂಚೆ (ತಾಯಿ ಹೆಂಡತಿಯರ ಮಧ್ಯದಲ್ಲಿ) ಮರಣವನ್ನು ಹೊಂದಿದೆನು? ಆಗಿನ ನನ್ನ ಆ ಮಾತೆಯೆಲ್ಲಿರುವಳು? ಅಥವಾ ಆ ಹೆಂಡತಿಯು ತಾನೇ ಎಲ್ಲಿರುವಳು?

(ಮಾತೃಮಹೇಲಯೋಃ: ಎಂಬಲ್ಲಿ ಮಹಿಳಾ ಶಬ್ದವನ್ನೇ ಮಹೇಲಾ ಎಂದು ಪ್ರಯೋಗಿಸಿದೆ. ಇದು ಆರ್ಷವಾದುದರಿಂದ ಸಾಧುವೆಂದು ಪರಿಗಣಿಸಬೇಕಾಗಿದೆ.)

೧೦. ವಾಯುವಿನಿಂದ ಅಪಹೃತವಾದ ಎಲೆಗೆ (ಮಾತಾಪಿತೃ ಸ್ಥಾನೀಯವಾದ) ಲತೆಯೂ, ವೃಕ್ಷವೂ, ಕೊಡಲಿಯಿಂದ ಕತ್ತರಿಸಲ್ಪಡುವಂತೆ ನಾನಿನ್ನೂ ಶೈಶವಾವಸ್ಥೆಯಲ್ಲಿಯೇ ಇರುತ್ತ ಬುದ್ಧಿ ತಿಳಿಯದಂತೆ ಅಪ್ರಬುದ್ಧನಾಗಿರುವಾಗಲೇ ನನ್ನ ತಾಯಿ ತಂದೆಗಳಿಬ್ಬರೂ ಮೃತ್ಯುವಿನಿಂದ ಅಪಹೃತರಾಗಿರುವರಲ್ಲಾ !!

ಅವಿವಾಹೋಽಸ್ಮಿ ಜಾನಾಮಿ ನ ಸ್ವರೂಪಮಪಿ ಸ್ತ್ರಿಯಃ ।
ದುಷ್ಟಾಯಾಃ ಕ್ಷೋಭಕಾರಿಣ್ಯಾ ಮದಿರಾಯಾ ಇವ ದ್ವಿಜಃ ॥ ೧೧ ॥

ಅತಿ ದೂರತರೀಭೂತಾಃ ಸ್ವದೇಶಶ್ಚ ಸ್ವಬಾಂಧವಾಃ ।
ಕೇ ನಾಮ ಮಮ ಯೇಷಾಂ ತೇ ಮಧ್ಯೇ ಜೀವಂ ತ್ಯಜಾಮ್ಯಹಂ ॥ ೧೨ ॥

ತಸ್ಮಾದೇತತ್ಸಮುದ್ಭೂತಮಹಂ ಕಿಂ ನಾಮ ದೃಷ್ಟವಾನ್ ।
ವಿವಿಧಾರಂಭ ಸಂರಂಭಂ ಗಂಧರ್ವ ನಗರಂ ಯಥಾ ॥ ೧೩ ॥

ತದಾಸ್ತಾಂ ಮೇತದೇಷಾ ಹಿ ಬಂಧು ಮಧ್ಯೇ ಮೃತ ಸ್ಥಿತಿಃ ।
ಮಾಯಾಮೋಹೇ ಮನಾಗಸ್ಮಿನ್ನ ಸತ್ಯಮುಪಲಭ್ಯತೇ ॥ ೧೪ ॥

---

೧೧. ನನಗೆ ಇನ್ನೂ ಮದುವೆಯಾಗಿಲ್ಲವು. ಅದು ಕಾರಣ, ಒಬ್ಬ ಸದ್ಬ್ರಾಹ್ಮಣನಾದ ಶ್ರೋತ್ರಿಯನು ಮಹಾ ಪಾಪ ಹೇತುವಾದ ಮತ್ತು ಚಿತ್ತಕ್ಷೋಭ ಕರವಾದ ಮದ್ಯದ ರಸವನ್ನು ತಿಳಿಯದಿರುವಂತೆ ನಾನು ಇದುವರೆವಿಗೆ ಸ್ತ್ರೀಯ ಮುಖವನ್ನೇ ಕಾಣದಿರುವೆನು.

೧೨. ನಾನು ಯಾರ ಮಧ್ಯದಲ್ಲಿ ಇದ್ದುಕೊಂಡು ಪ್ರಾಣತ್ಯಾಗ ಮಾಡಿ ನನ್ನ ಮರಣವನ್ನು ಕಂಡಿರುವೆನೋ ಅಂತಹ ನನ್ನ ಜನ್ಮ ಭೂಮಿಯು ಆತ್ಮ ಬಾಂಧವರು ತಾನೇ ಇಲ್ಲಿ ಇನ್ನು ಯಾರಿರುವರು ? ಅವರೆಲ್ಲರೂ ಈಗ ಅತಿ ದೂರವಾಗಿ ಬಿಟ್ಟಿರುವರು.

೧೩. ವಿವಿಧ ವಸ್ತುಗಳಿಂದಲೂ, ಜನ್ಮಾದ್ಯಭಿನಿವೇಶಗಳಿಂದಲೂ ಯುಕ್ತವಾಗಿ ಈಗಲೇ ನಾನು ಜಲಾಂತರ್ಗತನಾಗಿದ್ದಾಗ ನನಗೆ ಗಂಧರ್ವ ನಗರದಂತೆ ಕಾಣಿಸಿ ಕೊಂಡ ಜಗತ್ತು ಯಾವುದರಿಂದ ಉದ್ಭೂತವಾಯಿತು ? ನಾನು ಇದೇನನ್ನು ನೋಡಿದೆನು ? ಇದಕ್ಕೆ ಕಾರಣವೇನಿರಬಹುದು ?

೧೪. ನನ್ನ ಬಂಧುಗಳ ಮಧ್ಯದಲ್ಲಿ ನಾನು ಮರಣ ಹೊಂದಿದೆನೆಂಬ ಆ ಸ್ಥಿತಿಯು ಹಾಗಿದ್ದುಕೊಂಡಿರಲಿ. ಅಂತೂ ಏನೇ ಆಗಲಿ, ಈ ಮಾಯಾ ಮೋಹದಲ್ಲಿ ಎಷ್ಟೇ ಯೋಚಿಸಿದರೂ, ಸ್ವಲ್ಪ ಮಾತ್ರವೂ, ಸತ್ಯವೆಂಬುದೇ ಸಿಕ್ಕುವುದಿಲ್ಲವಲ್ಲಾ !!!

ನಿತ್ಯಮೇವಮನಂತಾಸು ಭ್ರಾಂತಿ ದೃಷ್ಟಿಷು ದೇಹಿನಾಂ ।
ಚೇತೋ ಭ್ರಮತಿ ಶಾರ್ದೂಲೋ ವನರಾಜಿಷ್ವಿವೋನ್ಮದಃ ॥ ೧೫ ॥

ಅವಧಾರ್ಯೇತಿ ತಂ ಚಿತ್ತೇ ಮೋಹಂ ಗಾಧಿರ್ನಿನಾಯ ಸಃ ।
ದಿನಾನಿ ಕತಿ ಚಿತ್ತಸ್ಮಿನ್ಸ್ವಕ ಏವಾಶ್ರಮೇ ತದಾ ॥ ೧೬ ॥

ಏಕದಾ ಗಾಧಿಮಗತ್ಕಶ್ಚಿತ್ತತ್ರ ಪ್ರಿಯೋಽತಿಥಿಃ ।
ಬ್ರಹ್ಮಾಣಮಿವ ದುರ್ವಾಸಾಃ ಸ ವಿಶಶ್ರಾಮ ಸಶ್ರಮಃ ॥ ೧೭ ॥

ಪರಮಾಂ ತುಷ್ಟಿಮಾನೀತಃ ಫಲ ಪುಷ್ಪರಸಾಶನೈಃ ।
ಸೋಽತಿಥಿರ್ಗಾಧಿನಾ ತೇನ ವಸಂತೇನೇವ ಪಾದಪಃ ॥ ೧೮ ॥

---

೧೫. ಮದೋನ್ಮತ್ತವಾದ ಹುಲಿಯು ಅರಣ್ಯಗಳಲ್ಲಿ ನಿರಾತಂಕವಾಗಿ ವಿಹರಿಸುವಂತೆ ಹೀಗೆ ಅನಂತವಾಗಿ ತನ್ನಿಂದಲೇ ಕಲ್ಪಿತವಾದ ಭ್ರಾಂತಿ ದೃಷ್ಟಿಗಳಲ್ಲಿ ಜಂತುಗಳ ಮನಸ್ಸು ಸರ್ವದಾ ಸ್ವೇಚ್ಛೆಯಾಗಿ ಭ್ರಮಿಸುತ್ತಿರುವುದು ಎಂಬುದೀಗ ನನ್ನ ಮನಸ್ಸಿಗೆ ದೃಢವಾಯಿತು.

೧೬. ಹೀಗೆಂದು ಆ ಗಾಧಿಯು ತಾನು ಹಿಂದೆ ತನ್ನ ಚಿತ್ತದಲ್ಲಿ ಕಂಡುದುದನ್ನೆಲ್ಲ ಕೇವಲ ಮೋಹವೇ ಎಂದು ನಿಶ್ಚಯಿಸಿಕೊಂಡು ಆಗ ತನ್ನ ಆಶ್ರಮದಲ್ಲಿಯೇ (ಸರಸ್ತೀರದಲ್ಲಿದ್ದ) ಕೆಲವು ದಿನಗಳನ್ನು ಕಳೆದನು.

೧೭. ಹೀಗಿರುವಾಗ ಒಂದಾನೊಂದು ದಿನ ಯಾವನೋ ಒಬ್ಬ ಪಥಿಕನು ಬ್ರಹ್ಮನ ಬಳಿಗೆ ದೂರ್ವಾಸ ಮುನಿಯು ಹೋದಂತೆ ಆ ಗಾಧಿಯ ಆಶ್ರಮಕ್ಕೆ ಹೋದನು. ಅವನು ಅತಿಯಾಗಿ ಆಯಾಸಗೊಂಡಿದ್ದ ಕಾರಣ ಅಲ್ಲಿಯೇ ಸ್ವಲ್ಪ ವಿಶ್ರಮಿಸಿಕೊಂಡನು. ಗಾಧಿಯೂ ಆ ಪ್ರಿಯನಾದ ಅತಿಥಿಯನ್ನು ಪ್ರೀತಿಯಿಂದ ಕಂಡು ಸತ್ಕರಿಸಿದನು.

೧೮. ಆಗ ಆ ಗಾಧಿಯು ತತ್ಕಾಲೋಚಿತವಾದ ಧರ್ಮ ಬುದ್ಧಿಯಿಂದ ತನ್ನ ಅತಿಥಿಯನ್ನು ಆದರಿಸಿ ವಸಂತರ್ತುವು ವೃಕ್ಷ ಲತಾದಿಗಳನ್ನು ತೃಪ್ತಿಗೊಳಿಸುವಂತೆ ಫಲ (ಪುಷ್ಪ ರಸ) ಮಧು ಮುಂತಾದ ವಸ್ತುಗಳನ್ನು ತಂದುಕೊಟ್ಟು ವಿಶೇಷವಾಗಿ ತೃಪ್ತಿಗೊಳಿಸಿದನು.

ಮಿಥೋ ವಂದಿತಸಂಧ್ಯೌ ತೌ ಕೃತಜಾಪ್ಯಾವುಭಾವಪಿ ।
ಕ್ರಮಾಚ್ಛಯನ ಮಾಸಾದ್ಯ ತಸ್ಥತು ರ್ಮೃದುಪಲ್ಲವಂ ॥ ೧೯ ॥

ತತಃ ಪ್ರಾವರ್ತತೇ ಶಾಂತಾ ತಯೋಸ್ತಾಪಸಯೋಃ ಕಥಾ ।
ಸ್ವವ್ಯಾಪಾರೋಚಿತಾ ಪುಷ್ಪಶ್ರೀರಿವರ್ತುರ್ತ್ವಮಾಶಯೋಃ ॥ ೨೦ ॥

ತಂ ಪಪ್ರಚ್ಛಾತಿಥಿಂ ಗಾಧಿಃ ಪ್ರಸಂಗ ಪತಿತಂ ವಚಃ ।
ಕಿಂ ಬ್ರಹ್ಮನ್ನುಕೃಶಾಂಗ ಸ್ತ್ವಂ ಕಿಮಿತಿ ಶ್ರಮವಾನಸಿ ॥ ೨೧ ॥

---

೧೯. ಬಳಿಕ ಸಾಯಂ ಸಂಧ್ಯಾಕಾಲವು ಪ್ರಾಪ್ತವಾಗಲು ಅವರಿಬ್ಬರೂ ಕೂಡಲೆ ಎದ್ದು ಸ್ನಾನ ಸಂಧ್ಯಾವಂದನೆಗಳನ್ನು ಮುಗಿಸಿ, ಮಂತ್ರ ಜಪಗಳನ್ನು ಆಚರಿಸಿ ಕ್ರಮೇಣ ರಾತ್ರಿಯಾಗಲು ಆಗ ಮೃದುವಾದ ಪಲ್ಲವಗಳಿಂದ ಹಾಸುಗೆಗಳನ್ನು ರಚಿಸಿಕೊಂಡು, ಅದರ ಮೇಲೆ ಕುಳಿತುಕೊಂಡರು.

೨೦. ಸೂರ್ಯನಿಗೂ, ಉತ್ತರ ದಿಕ್ಕಿಗೂ ಸಮಾಗಮವಾಗಿ (ಅಂದರೆ ಉತ್ತರಾಯಣದಲ್ಲಿ) ವಸಂತರ್ತುವು ಸಂಭವಿಸಿತಾಗ ಪುಷ್ಪ ಸಮೃದ್ಧಿಯು ಉಪ ಕ್ರಮಿಸುವಂತೆ ಆಮೇಲೆ ಆ ತಾಪಸರಿಬ್ಬರೂ ಒಟ್ಟಿಗೆ ಸೇರಿದಾಗ ಅವರವರ ತಪಶ್ಚರ್ಯೆ ಧ್ಯಾನ ಮುಂತಾದ ವ್ಯಾಪಾರಾನುಗುಣವಾದ ಶಾಂತಿ ರಸ ಪ್ರಧಾನವಾದ ಪರಸ್ಪರ ಸಲ್ಲಾಪಗಳು ವಿನೋದಕರವಾಗಿ ಪ್ರವರ್ತಿಸಿದುವು.

("ಪ್ರಾವರ್ತತೇ–" ಎಂಬಲ್ಲಿ "ಪ್ರಾವರ್ತತ + ಈ" ಎಂದು ಪದಚ್ಛೇದ ಮಾಡಿ "ಈ" ಎಂಬ ನಿಪಾತಕ್ಕೆ 'ಖಲು' ಎಂಬರ್ಥವನ್ನು ಹೇಳಿದೆ. ಮತ್ತು ಋತುತ್ವಮಾಶಯೋಃ ಎಂಬ ದ್ವಂದ್ವಸಮಾಸ ಪದಕ್ಕೆ ಋತುತ್ವಮಶ್ಚ + ಆಶಾಚ= ಋತು ತಮಾಶೇ ಎಂದು ವಿಗ್ರಹ ವಾಕ್ಯವನ್ನು ಮಾಡಿರುವುದು. ಸಕ್ರಿಯಯಾ ಋತೂನಾಂ ಋತುತ್ವಂ ಮಿನೋತಿ ಪರಿಚ್ಛಿನತ್ತೀತಿ= ಋತುತ್ವಮಃ ಎಂಬವ್ಯುತ್ಪತ್ತಿ ಯಿಂದ ಋತುತ್ವಹಃ ಎಂದರೆ ತನ್ನ ಕ್ರಿಯೆಯಿಂದ ಋತುಗಳ ಋತುತ್ವವನ್ನು ವ್ಯವಸ್ಥೆಗೊಳಿಸುವವನಾದ ಸೂರ್ಯನು ಎಂದರ್ಥ. ಆಶಾ ಎಂದರೆ ದಿಕ್ಕು. ಅರ್ಥಾತ್ ಉತ್ತರ, ಎಂದು ತಾತ್ಪರ್ಯ ಪ್ರಕಾಶದಲ್ಲಿ ಹೇಳಿದೆ.)

೨೧. ಆಗ ಲೋಕಾಭಿರಾಮವಾದ ಪರಸ್ಪರ ಸಂಭಾಷಣೆಯ ಮಧ್ಯದಲ್ಲಿ ಪ್ರಾಸಂಗಿಕವಾಗಿ ಗಾಧಿಯು ತನ್ನ ಅತಿಥಿಯನ್ನು ಕುರಿತು- "ಅಯ್ಯ ಬ್ರಾಹ್ಮಣ,

/ ಅತಿಥಿ ರುವಾಚ :—

ಮಮಾತಿ ಕಾರ್ಶ್ಯ ಶ್ರಮಯೋರ್ಭಗವನ್ ಶೃಣು ಕಾರಣಂ ।
ಕಥಯಾಮಿ ತಥಾಭೂತಂ ವಯಂ ನಾಸತ್ಯವಾದಿನಃ ॥ ೨೨ ॥

ಅಸ್ತ್ಯಸ್ಮಿನ್ವಸುಧಾ ಪೀಠೇ ಉತ್ತರಾಶಾನಿಕುಂಜಕೇ ।
ಕೀರೋ ನಾಮಾತಿ ವಿಖ್ಯಾತಃ ಶ್ರೀಮಾಞ್ಜನಪದೋ ಮಹಾನ್ ॥ ೨೩ ॥

ತತ್ರಾಹಮವಸಂ ಮಾಸಂ ಪೂಜ್ಯಮಾನಃ ಪುರೇ ಜನೈಃ ।
ನಾನಾತ್ಮಸ್ವಾದ ಲೋಕಾತ್ಮಾ ಚಿತ್ತವೇತಾಲ ಮೋಹಿತಃ ॥ ೨೪ ॥

ಏಕದೈಕೇನ ತತ್ರೋಕ್ತಂ ಕಥಾ ಪ್ರಸ್ತಾವತಃ ಕ್ವಚಿತ್ ।
ಇಹಾಭೂ ಚ್ಛ್ವಪಚೋ ರಾಜಾ ವರ್ಷಾಣ್ಯಷ್ಟೌ ದ್ವಿಜೇತಿ ಮೇ ॥ ೨೫ ॥

ನೀನು ಏಕೆ ಹೀಗೆ ಅತಿ ಕೃಶಾಂಗನಾಗಿದ್ದೀಯೆ ? ಅದೇತಕ್ಕೆ ಇಷ್ಟೊಂದು ಹೆಚ್ಚಾಗಿ ಆಯಾಸಗೊಂಡಿರುವೆ ? ಎಂದು ಕುತೂಹಲಿಯಾಗಿ ಪ್ರಶ್ನೆ ಮಾಡಿದನು.

೨೨. ಅತಿಥಿಯು ಹೇಳಿದನು :— ಎಲೈ ಮಹಾತ್ಮನೇ, ನಾನು ಇಷ್ಟು ಹೆಚ್ಚಾಗಿ ದಣಿದಿರುವುದಕ್ಕೂ, ಕೃಶಾಂಗನಾಗಿರುವುದಕ್ಕೂ ಕಾರಣವನ್ನು ಹೇಳುವೆನು ಕೇಳು. ಇದ್ದುದನ್ನು ಇದ್ದಹಾಗೆಯೇ (ಯಥಾರ್ಥವಾಗಿಯೇ) ನುಡಿಯುವೆನು. ನಾನೆಂದಿಗೂ ಸುಳ್ಳು ಹೇಳತಕ್ಕವನಲ್ಲ.

೨೩. ಈ ಧರಣೀತಲದೊಳಗೆ ಉತ್ತರ ದಿಕ್ಕಿನಲ್ಲಿ ಲತಾ ಗುಲ್ಮಾದಿಗಳಿಂದ ಪರಿವೃತವಾದ ಒಂದು ಪ್ರದೇಶದಲ್ಲಿ ಕೀರ ದೇಶವೆಂದು ಅತಿ ಪ್ರಸಿದ್ಧವಾದ ಸರ್ವ ಸಂಪತ್ಸಮೃದ್ಧವಾಗಿರುವ ದೊಡ್ಡ ದೇಶವೊಂದಿರುವುದು.

೨೪. ಆ ದೇಶದ ಒಂದು ನಗರದಲ್ಲಿ ನಾನು, ಎಲ್ಲ ಜನರಿಂದಲೂ, ವಿವಿಧೋಪಚಾರಗಳಿಂದ ಪೂಜಿಸಲ್ಪಡುತ್ತಲೂ, ಅವರು ಆದರದಿಂದ ಸಮರ್ಪಿಸಿದ ಅತ್ಯಂತ ರುಚಿಕರವಾದ ನಾನಾ ವಿಧ ಭಕ್ಷ್ಯಪೇಯಾದಿ ಭೋಗಗಳಲ್ಲಿ ಲೋಭಪರವಶನಾಗಿಯೂ, ಚಿತ್ತವೆಂಬ ಬೇತಾಳನಿಂದ ಮೋಹಿತನಾಗಿಯೂ ಒಂದು ತಿಂಗಳ ಕಾಲ ವಾಸವಾಗಿದ್ದೆನು.

೨೫. ಹೀಗಿರುವಾಗ ಒಂದು ಸಮಯದಲ್ಲಿ ಅಲ್ಲಿದ್ದವನೊಬ್ಬನು ಯಾವುದೋ

ತತೋ ಗ್ರಾಮೇಷು ತತ್ಪೃಷ್ಟೈಃ ಪ್ರೋಕ್ತಂ ಸಕಲ ಜಂತುಭಿಃ ।
ರಾಜಾ ಬಭೂವ ಶ್ವಪಚೋ ವರ್ಷಾಣ್ಯಷ್ಟಾವಿಹೇತಿ ತೈಃ ॥ ೨೬ ॥

ಸೋಽಯಮಂತೇ ಪರಿಜ್ಞಾತಃ ಪ್ರವಿಷ್ಟೋ ಜ್ವಲನಂ ಜವಾತ್ ।
ತತೋ ದ್ವಿಜಶತಾನೀಹ ಪ್ರವಿಷ್ಟಾನಿ ಹುತಾಶನಂ ॥ ೨೭ ॥

ಇತಿ ತೇಷಾಂ ಮುಖಾಚ್ಛ್ರುತ್ವಾ ತಸ್ಮಾನ್ನಿರ್ಗತ್ಯ ಮಂಡಲಾತ್ ।
ಪ್ರಯಾಗೇಽಕರವಂ ಶುದ್ಧ್ಯೈ ಪ್ರಾಯಶ್ಚಿತ್ತಮಹಂ ದ್ವಿಜ ॥ ೨೮ ॥

ಕೃತ್ವಾ ಚಾಂದ್ರಾಯಣಸ್ಯಾಂತೇ ತೃತೀಯಸ್ಯಾದ್ಯ ಪಾರಣಂ ।
ಇಹಾಹ ಮಾಗತಸ್ತೇನ ಶ್ರಾಂತೋಽಸ್ಮ್ಯತಿ ಕೃಶೋಽಸ್ಮಿ ಚ ॥ ೨೯ ॥

ಒಂದು ಸಂದರ್ಭದಲ್ಲಿ ಕಥಾ ಪ್ರಸಕ್ತಿಯಿಂದ (ವಿನೋದವಾಗಿ ಸಂಭಾಷಿಸುತ್ತಿರುವ ಮಧ್ಯದಲ್ಲಿ ಪ್ರಾಸಂಗಿಕವಾಗಿ)- ನನ್ನನ್ನು ಕುರಿತು– "ಅಯ್ಯ ಬ್ರಾಹ್ಮಣ, ಈ ದೇಶದಲ್ಲಿ ಸ್ವಲ್ಪ ಕಾಲದ ಹಿಂದೆ ಶ್ವಪಚನೊಬ್ಬನು ಎಂಟು ವರ್ಷಗಳ ಕಾಲ ರಾಜ್ಯವಾಳಿದನು." ಎಂದು ಹೇಳಿದನು.

೨೬. ಅನಂತರ ಈ ಮಾತಿನ ನಿಜಾಂಶವನ್ನು ತಿಳಿದುಕೊಳ್ಳುವ ಸಲುವಾಗಿ, ನಾನು ಹೋದ ಕಡೆಗಳಲ್ಲೆಲ್ಲ, ಆಯಾ ಹಳ್ಳಿಯ ಜನಗಳನ್ನು ಯಾರುಯಾರನ್ನು ಕೇಳಿದರೂ, ಅವರೆಲ್ಲರೂ ಅದೇ ಮಾತನ್ನೇ (ಶ್ವಪಚನೊಬ್ಬನು ಎಂಟು ವರ್ಷ ಕಾಲ ಈ ದೇಶದ ರಾಜನಾಗಿದ್ದನು ಎಂಬುದಾಗಿಯೇ) ಹೇಳಿದರು.

೨೭. ಮತ್ತೂ ಎಂಟು ವರ್ಷಗಳ ಅನಂತರ "ಆ ರಾಜನು ನಿಜವಾಗಿಯೂ ಶ್ವಪಚನೇ" ಎಂಬ ಅವನ ನಿಜ ಸ್ವರೂಪವು ಎಲ್ಲರಿಗೂ ಗೊತ್ತಾಗಿಬಿಟ್ಟಿತೆಂದೂ, ತರುವಾಯ ಅವನು ಎಲ್ಲರಿಂದಲೂ ತಿರಸ್ಕೃತನಾಗಿ ಕೊನೆಗೆ ಅಗ್ನಿ ಪ್ರವೇಶ ಮಾಡಿಬಿಟ್ಟನೆಂದೂ ಅಲ್ಲಿದ್ದ ನೂರಾರು ಮಂದಿ ಬ್ರಾಹ್ಮಣರೂ ಕೂಡ, ಇದನ್ನು ತಿಳಿದು ತಮಗೆ ಶ್ವಪಚ ಸಂಸರ್ಗದಿಂದ ಉಂಟಾದ ದೋಷ ಪ್ರಾಯಶ್ಚಿತ್ತಾರ್ಥವಾಗಿ ಎಲ್ಲರೂ ಅಗ್ನಿ ಪ್ರವೇಶ ಮಾಡಿ ಶರೀರ ತ್ಯಾಗ ಮಾಡಿದರೆಂದೂ ಅಲ್ಲಿ ನನಗೆ ತಿಳಿಯಿತು.

೨೮-೨೯. ಅಯ್ಯ ಗಾಧಿಯೇ, ಹೀಗೆ ಈ ಸಮಾಚಾರವನ್ನು ಅವರ ಮುಖದಿಂದಲೇ ಕೇಳಿ, ಒಡನೆಯೇ ನಾನು ಆ ದೇಶದಲ್ಲಿ ವಾಸಮಾಡಿಕೊಂಡಿರಲು ಮನಸ್ಸಿಲ್ಲದೆ, ಆ ದೇಶವನ್ನು ಬಿಟ್ಟು ಹೊರಟು, ಶ್ವಪಚನು ರಾಜನಾಗಿದ್ದ ದೇಶದಲ್ಲಿ

ಶ್ರೀ ವಸಿಷ್ಠ ಉವಾಚ—
ಇತಿ ಶ್ರುತವತಾ ತೇನ ಗಾಧಿನಾ ಸ ತದಾ ದ್ವಿಜಃ ।
ಭೂಯಃ ಪೃಷ್ಟೋಽಪ್ಯೇತದೇವ ಕಥಯಾಮಾಸ ನಾನ್ಯಥಾ ॥ ೩೦ ॥

ವಾಸ ಮಾಡಿದ ದೋಷ ನಿವಾರಣೆಗಾಗಿ ಪ್ರಯಾಗ ಕ್ಷೇತ್ರಕ್ಕೆ ಹೋಗಿ ಅಲ್ಲಿ ಪ್ರಾಯಶ್ಚಿತ್ತ ಮಾಡಿಕೊಂಡೆನು. ಆ ಕ್ಷೇತ್ರದಲ್ಲಿದ್ದುಕೊಂಡು ಮೂರು ಸಲ ಚಾಂದ್ರಾಯಣ ವ್ರತವನ್ನು ಆಚರಿಸಿದೆನು. ಮೂರನೆಯ ಚಾಂದ್ರಾಯಣ ವ್ರತದ ಕೊನೆಯ ಅಂಗವಾಗಿ ಈ ದಿವಸ ಪಾರಣೆಯನ್ನು ಮಾಡಿ ಮುಗಿಸಿಕೊಂಡು ಅಲ್ಲಿಂದ ಹೊರಟು ಈಗಲೇ ಇಲ್ಲಿಗೆ ಬಂದು ಸೇರಿದೆನು. ಆದುದರಿಂದ ನಾನು ಅತ್ಯಂತ ಕೃಶನಾಗಿಯೂ, ಶ್ರಾಂತನಾಗಿಯೂ ಇರುವೆನು. ಎಂದು ಆ ಅತಿಥಿಯಾಗಿ ಬಂದಿದ್ದ ಬ್ರಾಹ್ಮಣನು ಗಾಧಿಯೊಡನೆ ಹೇಳಿದನು.

(ಚಾಂದ್ರಾಯಣವೆಂಬುದು ದೇಹ ಶುದ್ಧಿಗಾಗಿ ಆಚರಿಸಲ್ಪಡುವ ಒಂದು ವ್ರತ ನಿಯಮ. ಶುಕ್ಲ ಪಕ್ಷದ ಕೊನೆಯ ಪೂರ್ಣಿಮಾ ದಿನದಲ್ಲಿ ಹದಿನೈದು ಕವಳಗಳ ಪರಿಮಿತವಾದ ಪೂರ್ತಿ ಆಹಾರವನ್ನು ತೆಗೆದುಕೊಂಡು ಕೃಷ್ಣ ಪಕ್ಷದಲ್ಲಿ ದಿನ ಕ್ರಮೇಣ ಆಹಾರವನ್ನು ಒಂದೊಂದು ತುತ್ತಿನಂತೆ (ಕವಳ) ಕಡಿಮೆ ಮಾಡುತ್ತಾ ಅಮಾವಾಸ್ಯೆಯ ದಿನ ಒಂದು ತುತ್ತೂ ಇಲ್ಲದಂತೆ ಆಗಿ ಪುನಃ ಶುಕ್ಲ ಪಕ್ಷದ ಪಾಡ್ಯಮಿಯಿಂದ ದಿನದಿನಕ್ಕೂ ಒಂದೇ ಒಂದು ತುತ್ತಿನಂತೆ ಆಹಾರವನ್ನು ಹೆಚ್ಚಿಸುತ್ತಾ ಹುಣ್ಣಿಮೆಯ ವೇಳೆಗೆ ಹದಿನೈದು ತುತ್ತುಗಳ ಆಹಾರವಾಗುವ ಕ್ರಮದಲ್ಲಿ ಶಾಸ್ತ್ರೋಕ್ತವಾದ ನಿಯಮದಿಂದ ವ್ರತವನ್ನು ಪಾಲಿಸುವುದು. ಹೀಗೆ ಒಂದು ತಿಂಗಳ ಅವಧಿಯಲ್ಲಿ ಒಂದು ಸಲ ಮಾಡಿದರೆ ಅದು ಒಂದು ಚಾಂದ್ರಾಯಣವಾಗುವುದು. ಇಂತಹ ಪ್ರಾಯಶ್ಚಿತ್ತವನ್ನು, ದೋಷಾನುಗುಣವಾಗಿ ತಾನು ಶುದ್ಧನಾದೆನೆಂಬ ಬುದ್ಧಿಯುಂಟಾಗುವವರೆವಿಗೂ ಎಷ್ಟು ಸಲ ಬೇಕಾದರೂ ಮಾಡಬಹುದು. ಇಂತಹ ವ್ರತವನ್ನು ಆ ಅತಿಥಿಯು ಮೂರು ತಿಂಗಳ ಕಾಲದ ಅವಧಿಯಲ್ಲಿ ಮೂರು ಆವೃತ್ತಿ ಮಾಡಿದನೆಂದು ಇಲ್ಲಿ ಹೇಳಿದೆ.)

೩೦. ಶ್ರೀ ವಸಿಷ್ಠನು ಹೇಳಿದನು :—ಅಯ್ಯ ರಾಮ, ಆ ಅತಿಥಿಯು ಈರೀತಿಯಾಗಿ ಹೇಳಲಾಗಿ ಇದನ್ನೆಲ್ಲ ಕೇಳಿದ ಗಾಧಿಯು ಆಗ ಅವನನ್ನು ಪುನಃ ಪುನಃ ಅದೇ ವಿಚಾರವಾಗಿ ಪ್ರಶ್ನೆ ಮಾಡುತ್ತ ಹೋದನು. ಅವನೆಷ್ಟು ವಿಧವಾಗಿ ಪ್ರಶ್ನಿ

ಅಥ ವಿಸ್ಮಯವಾನ್ಗಾಧಿಸ್ತಾಂ ನೀತ್ವಾ ತತ್ರ ಶರ್ವರೀಂ ।
ಜಗದ್ಗೇಹ ಮಹಾದೀಪೇ ರವಾವುದಯಮಾಗತೇ ॥ ೩೧ ॥

ಕೃತಪ್ರಾತಃ ಸ್ನಾನವಿಧಾ ವಾಪೃಚ್ಛ್ಯ ಸ್ವಾತಿಥೌ ಗತೇ ।
ಏವಂ ಸಂಚಿಂತಯಾಮಾಸ ವಿಸ್ಮಯೋದ್ಧುರಯಾ ಧಿಯಾ ॥ ೩೨ ॥

ಯನ್ಮಯಾ ಸಂಭ್ರಮೇ ದೃಷ್ಟಂ ಸತ್ಯಭೂತಂ ದ್ವಿಜೇನ ತತ್ ।
ಉಕ್ತಂ ಮಮೇತಿ ಕಿನ್ನಾಮ ಸ್ಯಾನ್ಮಾಯಾಶಂಬರ ಕ್ರಮಃ ॥ ೩೩ ॥

ಯದ್ಬಂಧು ಮಧ್ಯೈ ಮರಣಂ ಮಯಾ ತದ್ದೃಷ್ಟಮಾತ್ಮನಃ ।
ಸಾ ಮಾಯೈವ ನ ಸಂದೇಹಃ ಶೇಷಂ ಪಶ್ಯಾಮಿ ತಸ್ಯ ತತ್ ॥ ೩೪ ॥

ಮಾಡಿದರೂ ಕೂಡ ಅತಿಥಿಯಾದ ಆ ಬ್ರಾಹ್ಮಣನು ಪೂರ್ವೋಕ್ತವಾದ ಅದೇ ಮಾತನ್ನೇ ಮತ್ತೆ ಮತ್ತೆ ಹೇಳಿದನೇ ಹೊರತು ಬೇರೆ ಯಾವ ಮಾತೂ ಅವನ ಬಾಯಿಂದ ಹೊರಡಲಿಲ್ಲ.

೩೧-೩೨. ತರುವಾಯ ಆ ಅತಿಥಿಯು ಮಾತಿನಿಂದ ಅತ್ಯಂತ ವಿಸ್ಮಿತವಾಗಿ, ಆ ರಾತ್ರಿಯನ್ನು ತನ್ನ ಆಶ್ರಮದಲ್ಲಿಯೇ ಕಳೆದು ಜಗತ್ತೆಂಬ ಮನೆಗೆ ಮಹಾ ದೀಪವಾದ ಸೂರ್ಯನು ಉದಯಿಸಿದ ಕೂಡಲೇ ತನ್ನ ಅತಿಥಿಯು ಅವನ ಪ್ರಾತಸ್ಸ್ನಾನಾದಿ ಕರ್ಮಗಳನ್ನು ಮುಗಿಸಿಕೊಂಡು ತನ್ನನ್ನು ಕೇಳಿ, ಹೊರಟು ಹೋದ ಬಳಿಕ ಅತ್ಯಾಶ್ಚರ್ಯಗೊಂಡಿರುವ ತನ್ನ ಮನದಲ್ಲಿ ಹೀಗೆ ಯೋಚಿಸಿದನು. :–

೩೩. ನಾನು ಭ್ರಾಂತ ದೆಸೆಯಲ್ಲಿ ಯಾವುದನ್ನು ನೋಡಿದೆನೋ ಅದು ಸತ್ಯಭೂತವಾಗಿಯೇ ನಡೆದಿರುವುದೆಂದು ಈಗ ನನಗೆ ಅತಿಥಿಯಾಗಿದ್ದ ಬ್ರಾಹ್ಮಣನೂ ಹೇಳಿದ್ದರಿಂದ ಗೊತ್ತಾಗುವುದು. ನಮ್ಮ ಈ ವಿಧವಾದ ದರ್ಶನವು ಮಾಯಾ ರೂಪವಾದ ಇಂದ್ರಜಾಲದ ರಚನಾಕ್ರಮವಾಗಿರಬಹುದೇ ?

೩೪. ನಾನು ನನ್ನ ಬಂಧುಗಳ ಮಧ್ಯದಲ್ಲಿ (ನನ್ನ) ಮರಣವನ್ನು ನೋಡಿದುದು ಯಾವುದುಂಟೋ ಅದು ಮಾಯೆಯೇ ಅಹುದು. ಇದರಲ್ಲಿ ಸಂಶಯವಿಲ್ಲ. ಇನ್ನು ಉಳಿದ ಆ ಅತಿಥಿಯು ವಿವರಿಸಿದ ಶ್ವಪಚ ಸಂಪರ್ಕಾದಿ ವೃತ್ತಾಂತವನ್ನು ನಾನೇ ಸಾಕ್ಷಾತ್ತಾಗಿ ನೋಡುವುದಕ್ಕೆ ಆಸೆಯುಂಟಾಗುವುದು.

ತದಾತ್ಮಶ್ವಪಚೋದಂತು ದ್ರಷ್ಟುಂ ತಾವದಖಿನ್ನಧೀಃ ।
ಭೂಮಂಡಲ ಪರ್ಯಂತ ಗ್ರಾಮಂ ಗಚ್ಛಾಮಿ ಸತ್ವರಂ　　॥ ೩೫ ॥

ಇತಿ ಸಂಚಿಂತಯಾನ್ಗಂತುಂ ಮಂಡಲಾಂತರ ಮಾದರಾತ್ ।
ಉತ್ತಸ್ಥೌ ಭಾಸ್ಕರಃ ಪಾರ್ಶ್ವಂ ಮೇರೋರ್ದ್ರಕ್ಷು ಮಿವೋದ್ಯತಃ　　॥ ೩೬ ॥

ಮನೋರಾಜ್ಯಮಪಿ ಪ್ರಾಜ್ಞಾ ಲಂಬತೇ ವ್ಯವಸಾಯಿನಃ ।
ಗಾಧಿನಾ ಸ್ವಪ್ನ ಸಂದೃಷ್ಟಂ ಗತ್ವಾ ಲಬ್ಧಮಖಂಡಿತಂ　　॥ ೩೭ ॥

ಸರ್ವಮಧ್ಯವಸಾಯೇನ ದುಃಷ್ಪ್ರಾಪಮಪಿ ಲಭ್ಯತೇ ।
ಪಶ್ಯನ್ಗಾಧಿರ್ಜಗನ್ಮಾಯಾಂ ಪ್ರಮೇಯೀ ಕರ್ತು ಮುದ್ಯತಃ　　॥ ೩೮ ॥

---

೩೫. ಆದುದರಿಂದ ಈಗ ನಾನು ಪೂರ್ವದಲ್ಲಿ ಅನುಭವಿಸಿದ ಆ ಶ್ವಪಚ ವೃತ್ತಾಂತವನ್ನೆಲ್ಲ ಸಾಕ್ಷಾತ್ತಾಗಿ ನೋಡುವುದಕ್ಕೋಸ್ಕರ ಮನಸ್ಸಿಗೆ ಸ್ವಲ್ಪವೂ ಖೇದವನ್ನು ತಂದುಕೊಳ್ಳದೆ ಬೇಗನೆ (ತಡಮಾಡದೆ) ಆ ಭೂತ ಮಂಡಲ ಗ್ರಾಮದ ಸಮಿಪಕ್ಕೆ ಹೋಗುವೆನು.

೩೬. ಹೀಗೆಂದು ಯೋಚಿಸುತ್ತಲೇ ಆ ಗಾಧಿಯು ಮೇರು ಪರ್ವತದ ಪಾರ್ಶ್ವವನ್ನು ನೋಡುವುದಕ್ಕಾಗಿ ಸೂರ್ಯನು ಉದ್ಯುಕ್ತನಾಗುವಂತೆ ಭೂತ ಮಂಡಲಾಂತರ್ಗತವಾದ ಗ್ರಾಮವನ್ನು ಕುರಿತು ಪ್ರಯಾಣ ಮಾಡುವುದಕ್ಕೆ ಆತ್ಯಾನಂದದಿಂದ ಎದ್ದು ನಿಂತನು.

೩೭. ಲೋಕದಲ್ಲಿ ಅನಿರ್ವಿಣ್ಣರಾಗಿ ಸರ್ವದಾ ಉದ್ಯಮ ಶೀಲರಾದ ಪ್ರಾಜ್ಞರು ತಮ್ಮ ಮನೋ ರಾಜ್ಯವನ್ನೂ ಕೂಡ ಪ್ರತ್ಯಕ್ಷವಾಗಿಯೇ ಪಡೆಯುವರು. ಇದಕ್ಕೆ ಈ ಗಾಧಿಯೇ ನಿದರ್ಶನವು. ಅವನು ಸ್ವಪ್ನದಲ್ಲಿ ಕಂಡುದುದೆಲ್ಲವನ್ನೂ, ಭೂತ ಮಂಡಲ ಗ್ರಾಮಕ್ಕೆ ಹೋಗಿ ಸಂಪೂರ್ಣವಾಗಿ ಸಾಕ್ಷಾತ್ಕರಿಸಿ ಪಡೆದನು. ಅಯ್ಯಾ ರಾಮ, ಅದು ಕಾರಣ ಪ್ರಪಂಚದಲ್ಲಿ ಪುರುಷ ಪ್ರಯತ್ನದಿಂದ ಅಲಭ್ಯವಾದುದು ಯಾವುದೂ ಇಲ್ಲವು.

೩೮. ಪ್ರಪಂಚದಲ್ಲಿ ದುರ್ಲಭವಾದುದೆಲ್ಲವೂ ಪ್ರಯತ್ನದಿಂದ ಸುಲಭವಾಗುವುದು. ಆಗ ಗಾಧಿಯೂ ಕೂಡ ತಾನು ಭ್ರಾಂತಿ ದಶೆಯಲ್ಲಿ ಕಂಡ ಪ್ರಪಂಚದ

ವಿನಿರ್ಗತ್ಯಾ ಽ ಭವನ್ಮಾರ್ಗೇ ಪ್ರಾವೃಡೋಘಜವೇನ ಸಃ ।
ದೇಶಾನುಲ್ಲಂಘಯಾಮಾಸ ಬಹೂನ್ವಾತ ತುರಂಗವತ್ ॥ ೩೯ ॥

ತಚ್ಚೇದೃಶ ನಿಜಾಚಾರಂ ಭೂಮಂಡಲ ಮಾಗತಃ ।
ಕರಭಃ ಕಂಟಕಾರ್ಥ್ಯೇಕಃ ಕಾರಂಜಮಿವ ಕಾನನಂ ॥ ೪೦ ॥

ತತ್ರ ಸಂವಿತ್ಸಿತೇನೈವ ಸನ್ನಿವೇಶೇನ ವೈ ಪುನಃ ।
ಅಪಶ್ಯದ್ಗ್ರಾಮಕಂ ಕಂಚಿದ್ಗಂಧರ್ವ ಇವ ಪತ್ತನಂ ॥ ೪೧ ॥

ದದರ್ಶ ತಸ್ಯ ಪರ್ಯಂತೇ ತಮೇವ ಶ್ವಪಚಾಲಯಂ ।
ಅಧಸ್ತಾದ್ಭುವನಸ್ಯೇವ ಪಾತಾಲೇ ನರಕವ್ರಜಂ ॥ ೪೨ ॥

ಮಾಯೆಯನ್ನು ತನ್ನ ಅನುಭವ ಗೋಚರಮಾಡಿಕೊಳ್ಳುವುದಕ್ಕೆ (ಚಾಕ್ಷುಕ ಪ್ರಮಾಣದಿಂದ ವಿಷಯ ಮಾಡಿಕೊಳ್ಳುವುದಕ್ಕೆ) ಉದ್ಯುಕ್ತನಾದನು.

೩೯. ಕೂಡಲೆ ಗಾಧಿಯು ತನ್ನ ಆಶ್ರಮವನ್ನು ಬಿಟ್ಟು ಮಾರ್ಗಸ್ಥನಾದನು. ಆಮೇಲೆ ಅವನು ವರ್ಷಾಕಾಲದ ನದೀ ಪ್ರವಾಹದಂತೆ ಅತಿ ವೇಗದಿಂದ ಪ್ರಯಾಣ ಮಾಡುತ್ತಾ ವಾಯುವಿನಿಂದ ಒಯ್ಯಲ್ಪಡುವ ಮೇಘದ ಹಾಗೆ ದಾರಿಯುದ್ದಕ್ಕೂ ಅನೇಕ ದೇಶಗಳನ್ನು ದಾಟಿ ಇನ್ನೂ ಮುಂದಕ್ಕೆ ನಡೆದನು.

(ವಾತಃ ಏವ ತುರಂಗಃ ವಾಹನಂ ಯಸ್ಯ ಸಃ= ಮೇಘಃ. ಎಂದು ತಾತ್ಪರ್ಯ ಪ್ರಕಾಶ.)

೪೦. ಅನಂತರ ಆ ಗಾಧಿಯು, ಮುಳ್ಳುಗಳನ್ನೇ ಬಯಸುತ್ತಿರುವ ಒಂದು ಒಂಟೆಯು ಮುಳ್ಳು ಗಿಡಗಳ ಕಾಡಿಗೆ ಹೋಗಿ ಸೇರುವಂತೆ ತಾನು ಹಿಂದೆ ತನ್ನ ಮನಸ್ಸಿನಲ್ಲಿ ಕಂಡಂತೆಯೇ ವ್ಯವಹಾರ (ಆಚಾರ)ವುಳ್ಳದ್ದಾಗಿರುವ ಭೂತ ಮಂಡಲ ದೇಶಕ್ಕೆ ಹೋಗಿ ಸೇರಿದನು.

೪೧. ಅಲ್ಲಿಯಾದರೋ ತನ್ನ ಬುದ್ಧಿಸ್ಥವಾಗಿರುವ ಸನ್ನಿವೇಶಾನುಸಾರ ವಾಗಿಯೇ ಗಂಧರ್ವ ನಗರಪ್ರಾಯವಾದ ಒಂದು ಕುಗ್ರಾಮವನ್ನು ಪುನಃ ಕಂಡನು.

೪೨. ಭೂಲೋಕದ ಅಧೋ ಭಾಗದಲ್ಲಿ ಪಾತಾಳ ಲೋಕದಲ್ಲಿ ರೌರವಾದಿ

ಚಿತ್ರಚಿಂತಿತ ವಿಸ್ತಾರಂ ತನ್ನಿವೇಶಮಯಂ ಪರಂ ।
ಗಂಧರ್ವ ವದಸಾವಾತ್ಮ ಶ್ವಪಚತ್ವಂ ಚ ದೃಷ್ಟವಾನ್ ॥ ೪೩ ॥

ತೇನೈವ ಸನ್ನಿವೇಶೇನ ಪ್ರಾಗ್ದೃಷ್ಟಂ ಶ್ವಪಚಾಲಯಂ ।
ತಸ್ಯ ಕಾಮಪಿ ವೈರಾಗ್ಯ ಪದವೀ ಮನಯನ್ಮನಃ ॥ ೪೪ ॥

ಪ್ರಾವೃಢಾಸಾರಲುಠಿತಂ ಭಿತ್ತಿಜಾತಯವಾಂಕುರಂ ।
ಪರ್ಯಸ್ತಚ್ಛಾದನಾರ್ಥಾಂಕಂ ಕಿಂಚಿದಾದೃಷ್ಟ ತಲ್ಪಕಂ ॥ ೪೫ ॥

ದಾರಿದ್ರ್ಯಂ ತದ್ದೃಢಮಿವ ದೌರ್ಭಾಗ್ಯಮಿವ ಕುಡ್ಯವತ್ ।
ಭ್ರಷ್ಟಾಂಗಮಿವ ದೌರಾತ್ಮ್ಯಂ ದೌಸ್ಥಿತ್ಯಮಿವ ಖಂಡಿತಂ ॥ ೪೬ ॥

ನರಕ ಸಮೂಹಗಳಿರುವಂತೆ ಆ ಗ್ರಾಮದ ಸಮೀಪದಲ್ಲಿ ಪೂರ್ವದೃಷ್ಟವಾದ ಅದೇ ಶ್ವಪಚನ ಗುಡಿಸಲಿದ್ದುದನ್ನೂ ನೋಡಿದನು.

೪೩. ಆಮೇಲೆ ಹಿಂದೆ ತಾನು ಮನಸ್ಸಿನಲ್ಲಿ ಯೋಚಿಸಿದ್ದ ಜನ್ಮಾದಿ ವಿಸ್ತಾರವುಳ್ಳದ್ದಾಗಿಯೂ ಪೂರ್ವದೃಷ್ಟವಾದ ಗುಡಿಸಿಲು ಮುಂತಾದ ಆಶ್ರಯ ಸ್ಥಾನಗಳಿಂದ ಪ್ರಚುರವಾಗಿಯೂ ಇರುವ ಆ ಪ್ರದೇಶವನ್ನೂ, ಅಲ್ಲಿ ತಾನು ಶ್ವಪಚನಾಗಿದ್ದುದನ್ನೂ ಆಯಾ ಚಿಹ್ನಗಳಿಂದ ಆ ಗಾಧಿಯು ಮತ್ತೆ ನೋಡಿದನು.

೪೪. ಹೀಗೆ ಪೂರ್ವದಲ್ಲಿ ಕಂಡ ಅದೇ ಸನ್ನಿವೇಶದಿಂದಲೇ (ಮೊದಲಿದ್ದಂತೆಯೇ) ಇರುವ ಆಗ ಶ್ವಪಚನಾಗಿದ್ದ ತನ್ನ ಆಗಿನ ವಾಸಸ್ಥಾನವನ್ನು (ಮನೆಯು) ನೋಡಿದ ಕೂಡಲೇ ಅವನಿಗೆ ಏನೋ ಒಂದು ಬಗೆಯ ವಿಶೇಷವಾದ ವೈರಾಗ್ಯವನ್ನು ಪ್ರಾಪ್ತವಾಯಿತು.

೪೫. ಆಗ ಆ ಶ್ವಪಚನಾಗಿದ್ದ ಕಟಂಜನ ಮನೆಯು ಸಂತತವಾಗಿ ಮಳೆ ಸರಿದು ಬಹಳ ಜೀರ್ಣವಾಗಿದ್ದಿತು. ಗೋಡೆಗಳ ಮೇಲೆಲ್ಲಾ ಗರಿಕೆ ಹುಟ್ಟಿ ಬೆಳೆದಿತ್ತು. ಮನೆಗಳ ಮುಚ್ಚಳಗಳೆಲ್ಲವೂ (ಮಾಳಿಗೆ) ಅರ್ಧ ವ್ಯತ್ಯಸ್ತವಾಗಿ ಮಗುಚಿಕೊಂಡು ಸ್ವಲ್ಪ ಸ್ವಲ್ಪ ಗುರುತು ಕಾಣಿಸುತ್ತಿದ್ದಿತು. ಪೂರ್ವದಲ್ಲಿ ತಾನು ಉಪಯೋಗಿಸುತ್ತಿದ್ದ ಹಾಸಿಗೆ ಚಾಪೆ ಮುರತಾದುವು ಹರಿದು ಹೋಗಿ ಸ್ವಲ್ಪ ಸ್ವಲ್ಪ ಕಾಣುತ್ತಾ ಅಲ್ಲಿ ಬಿದ್ದಿದ್ದುವು.

೪೬. ಮತ್ತು ಆ ಶ್ವಪಚಾ ವಾಸವು ಸ್ಥಿರವಾಗಿ ನಿಂತಿರುವ ದಾರಿದ್ರ್ಯವೋ

ಗಾಧಿರ್ದಂತಾವದಲಿತೈರ್ಗವಾಶ್ವ ಮಹಿಷಾಸ್ಥಿಭಿಃ ।
ಧವಲೈರ್ವ್ಯಾಪ್ತ ಪರ್ಯಂತಂ ಸಾಕ್ಷ್ಯಂ ಕರ್ತುಮಿವ ಸ್ಥಿತೈಃ ॥ ೪೭ ॥

ಭುಕ್ತಂ ಪೀತಂ ಪುರಾ ತೇನ ಯೇಷು ಖರ್ಪರಕೇಷು ವೈ ।
ತೈರಪ್ಪಂದಾಭ್ರಸಲಿಲೈಃ ಪಾನಪೂರ್ಣೈರಿವಾವೃತಂ ॥ ೪೮ ॥

ತಾಭಿರೇವಾಂತ್ರತಂತ್ರೀಭಿಃ ಸಂಶುಷ್ಕಾಭಿರ್ಲತಾವೃತೈಃ ।
ತೃಷ್ಣಾಭಿರಿವ ದೀರ್ಘಾಭಿಃ ಸರಿತಃ ಪರಿವೇಷ್ಟಿತಂ ॥ ೪೯ ॥

ಚಿರಮಾಲೋಕಯಾಮಾಸ ಸ ತದಾತ್ಮ ಗೃಹಂ ಜನಾತ್ ।
ಪ್ರಾಕ್ತನಂ ಶುಷ್ಕಶವತಾಂ ಯಾತಂ ದೇಹಮಿವಾತ್ಮವಾನ್ ॥ ೫೦ ॥

ಎಂಬಂತೆಯೂ, ಗೋಡೆಗಳು ಮಾತ್ರವೇ ಉಳಿದಿರುವ ಮನೆಗಳ ಆಕಾರವುಳ್ಳ ದೌರ್ಭಾಗ್ಯವೋ ಎಂಬಂತೆಯೂ, ಅವಯವಗಳೆಲ್ಲ ಕುಸಿದು ಬಿದ್ದುಹೋದ ದೌರಾತ್ಮ್ಯ (ದೌರ್ಜನ್ಯ)ವೋ ಎಂಬಂತೆಯೂ, ಅನೇಕ ಚೂರುಗಳಾಗಿ ಕತ್ತರಿಸಲ್ಪಟ್ಟಿರುವ ದುರ್ದಶೆಯೋ ಎಂಬಂತೆಯೂ ಕಾಣಿಸಿತು.

೪೭. ಹಲ್ಲುಗಳಿಂದ ಅರ್ಧ ಕಚ್ಚಲ್ಪಟ್ಟು ಸೀಳಿ ಕೆಳಗೆ ಬಿದ್ದಿರುವ ಹಸು. ಕುದುರೆ, ಕೋಣಗಳ ಬಿಳುಪಾದ ಮೂಳೆಗಳು ಅಲ್ಲಿ ಇನ್ನೂ ಸಾಕ್ಷ್ಯವನ್ನು ಹೇಳುವುದಕ್ಕೋ ಎಂಬಂತೆ ಸಮೀಪದಲ್ಲೆಲ್ಲಾ ತುಂಬಿಕೊಂಡಿದ್ದುವು.

೪೮. ಅವನು ಪೂರ್ವದಲ್ಲಿ ತನ್ನ ಮನೆಯೊಳಗೆ ಯಾವ ಒಡಕು ಮಡಕೆಗಳಲ್ಲಿ ನೀರು ಕುಡಿಯುತ್ತಲೂ, ಅನ್ನ ತಿನ್ನುತ್ತಲೂ, ಇದ್ದನೋ ಅವು ಈಗ ಮಳೆಯ ನೀರು ತುಂಬಿಕೊಂಡು ಮದ್ಯಪೂರ್ಣವಾದ ಪಾತ್ರೆಗಳಂತೆ ಕಾಣುತ್ತಿದ್ದುವು.

೪೯. ಪೂರ್ವದಲ್ಲಿದ್ದ ತಂತಿಗಳಂತೆ ಉದ್ದವಾದ ಅದೇ ನರಗಳೇ ಈಗ ಒಣಗಿ ಹೋಗಿ ಅತಿ ದೀರ್ಘಗಳಾದ ತೃಷ್ಣೆಗಳೋ ಎಂಬಂತೆ ಸುತ್ತಲೂ ಅಲ್ಲಲ್ಲಿ ಲತೆಗಳಂತೆ ಕಂಬ ಮೊದಲಾದವುಗಳಿಗೆ ಸುತ್ತಿಕೊಂಡಿದ್ದುವು.

೫೦. ಇಂತಹ ತನ್ನ ಪೂರ್ವದ ಮನೆಯನ್ನು ಆ ಗಾಧಿಯು ಒಣಗಿದ ಶವವಾಗಿ ಬಿದ್ದಿರುವ ತನ್ನ ಪ್ರಾಚೀನ ದೇಹವನ್ನು ತತ್ತ್ವ ಜ್ಞಾನಿಯು ಕಾಣುವಂತೆ ಬಹುಕಾಲ ವಿಸ್ಮಯದಿಂದ ನೋಡಿದನು.

ಅತಿ ವಿಸ್ಮಯ ಮಾತಸ್ಥೌ ಗ್ರಾಮುಕಂ ಸಮುಪಾಯಯೌ ।
ಉಲ್ಲಂಘ್ಯ ಮ್ಲೇಚ್ಛನಗರಮಾರ್ಯದೇಶ ಮಿವಾಧ್ವಗಃ ॥ ೫೧ ॥

ತತ್ರಾಪೃಚ್ಛಜ್ಜನಂ ಸಾಧೋ ಕಚ್ಚಿತ್ಸ್ಮರತಿ ಭೋ ಭವಾನ್ ।
ಪ್ರಾಗ್ವೃತ್ತಮಸ್ಯ ಗ್ರಾಮಸ್ಯ ಪರ್ಯಂತೇ ಶ್ವಪಚ ಕ್ರಮಂ ॥ ೫೨ ॥

ಸರ್ವ ಏವ ಹಿ ಧೀಮಂತಶ್ಚಿರವೃತ್ತಾಮಪಿ ಸ್ಫುಟಂ ।
ಕರಸ್ಥಮಿವ ಪಶ್ಯಂತಿ ಮಯೇತಿ ಸುಜನಾಚ್ಛ್ರುತಂ ॥ ೫೩ ॥

ಅತ್ರ ಶ್ವಪಚಮೇಕಾಂತೇ ವಾಸಿನಂ ವೃದ್ಧ ಮುತ್ತಮಂ ।
ಸ್ಮರಸ್ಯೇನಂ ಕಿಮುತ ಭೋ ದುಃಖಾನಾಮಿವ ದೇಹಕಂ ॥ ೫೪ ॥

---

೫೧. ಆಮೇಲೆ ಆ ಗಾಧಿಯು ತನ್ನ ಆ ಮನೆಯನ್ನು ಬಿಟ್ಟು ಮುಂದೆ ಸ್ವಲ್ಪ ದೂರ ನಡೆದು, ಪಾರಿ ನಡೆಯುವಾಗ ಮಧ್ಯದಲ್ಲಿ ಸಿಕ್ಕಿದ ಮ್ಲೇಚ್ಛರ ಊರನ್ನು ದಾಟಿ, ಆರ್ಯರು ವಾಸಮಾಡುವ ಊರಿಗೆ ಬಂದು ಸೇರಿದ ಒಬ್ಬ ಪ್ರಯಾಣಿಕನಂತೆ ಅತ್ಯಾಶ್ಚರ್ಯಭರಿತನಾದನು.

೫೨. ಅನಂತರ ಅಲ್ಲಿದ್ದ ಒಬ್ಬ ಮನುಷ್ಯನನ್ನು ಕಂಡು ಹೀಗೆ ಪ್ರಶ್ನೆ ಮಾಡಿದನು. "ಅಯ್ಯ ಸಾಧುವೇ, ಇಲ್ಲಿನ ಪೂರ್ವ ವೃತ್ತಾಂತವು ನಿನಗೆ ಜ್ಞಾಪಕವಿರುವುದೇನು ? ಈ ಗ್ರಾಮದ ಹತ್ತಿರದಲ್ಲಿ ವಾಸವಾಗಿದ್ದ ಶ್ವಪಚನ ವಿಷಯವು ಈಗ ನಿನ್ನ ಸ್ಮೃತಿ ಪಥಕ್ಕೆ ಬರುವುದೇನು ?

೫೩. ಲೋಕದಲ್ಲಿ ಬುದ್ಧಿಶಾಲಿಗಳಾದವರೆಲ್ಲರೂ ಬಹು ದೀರ್ಘಕಾಲದ ಹಿಂದೆ ನಡೆದ ವಿಷಯಗಳನ್ನಾದರೂ ಸ್ಪಷ್ಟವಾಗಿ ಈಗ ನಡೆದಂತೆ ಕರತಲಾಮಲಕವಾಗಿ ಸ್ಮರಿಸಿಕೊಳ್ಳುವರು ಎಂಬ ವಿಚಾರವನ್ನು ನಾನು ಸುಜನರಿಂದ ಕೇಳಿ ತಿಳಿದಿದ್ದೇನೆ.

೫೪. ಅಯ್ಯಾ, ಇಲ್ಲಿ ಒಂದು ಕಡೆ, ಮೂರ್ತಿಮತ್ತಾದ ದುಃಖಗಳ ರಾಶಿಯೋ ಎಂಬಂತೆ ಒಬ್ಬ ವೃದ್ಧನಾದ ಶ್ವಪಚನು ಏಕಾಂತದಲ್ಲಿ ವಾಸಮಾಡಿಕೊಂಡಿದ್ದನಲ್ಲಾ ! ಈಗ ನಿನಗೆ ಅವನ ಜ್ಞಾಪಕವು ಚೆನ್ನಾಗಿ ಇರುವುದೇನು ?

ಯದಿ ಜಾನಾಸಿ ಭೋಃ ಸಾಧೋ ತನ್ಮೇ ಕಥಯ ತತ್ತ್ವತಃ ।
ಪಾಂಥ ಸಂಶಯವಿಚ್ಛೇದೇ ಮಹತ್ಪುಣ್ಯ ಫಲಂ ಸ್ಮೃತಂ ॥ ೫೫ ॥

ಭೂಯೋ ಭೂಯ ಇತಿ ಗ್ರಾಮ್ಯಾಃ ಪೃಷ್ಟಾ ಗಾಧಿದ್ವಿಜನ್ಮನಾ ।
ಅನಲ್ಪಸ್ಮಯ ಸಂರಂಭಾ ಮಾರ್ತೇನೇವ ಚಿಕಿತ್ಸತಾಃ ॥ ೫೬ ॥

ಗ್ರಾಮ್ಯಾ ಊಚುಃ :—

ಯಥಾ ಕಥಯಸಿ ಬ್ರಹ್ಮಂಸ್ತತ್ತಥಾ ನ ತದನ್ಯಥಾ ।
ಕಟಂಜನಾಮಾ ಶ್ವಪಚ ಇಹಾಭೂದ್ದಾರುಣಾಕೃತಿಃ ॥ ೫೭ ॥

ಪುತ್ರ ಪೌತ್ರ ಸು ಹೃದ್ಭೃತ್ಯ ಬಂಧು ಸ್ವಜನ ಪೇಟಕಂ ।
ಯಸ್ಮಾತಿ ವಿಸ್ತೀರ್ಣ ಮಭೂತ್ಪತ್ರವೃಂದಂ ತರೋರಿವ ॥ ೫೮ ॥

---

೫೫. ಎಲೈ ಸಾಧುವೇ, ಈ ವಿಚಾರವು ನಿನಗೆ ಗೊತ್ತಿರುವ ಪಕ್ಷದಲ್ಲಿ ಅದನ್ನು ನನಗೆ ಇದ್ದದ್ದು ಇದ್ದ ಹಾಗೆ ತಾತ್ತ್ವಿಕವಾಗಿ ದಯೆಮಾಡಿ ತಿಳಿಸು. ಪರಸ್ಥಳದಿಂದ ಬಂದಿರುವ ಪ್ರಯಾಣಿಕರಿಗೆ (ಮಾರ್ಗಸ್ಥರಿಗೆ) ಉಂಟಾದ ಸಂಶಯವನ್ನು ಪರಿಹಾರ ಮಾಡುವುದು ಮಹಾ ಪುಣ್ಯದ ಕೆಲಸವೆಂದು ಹಿರಿಯರು ಹೇಳುವುದನ್ನು ನೀನು ಅರಿಯೆಯಾ ?" ಎಂದು ಆ ಗಾಧಿಯು ಪ್ರಶ್ನೆ ಮಾಡಿದನು.

೫೬. ಅಯ್ಯ ರಾಮಚಂದ್ರ, ಹೀಗೆ ಆ ಗಾಧಿಯೆಂಬ ಬ್ರಾಹ್ಮಣನು ವೈದ್ಯರನ್ನು ಔಷಧಕ್ಕಾಗಿ ರೋಗಿಗಳು ಪ್ರಾರ್ಥಿಸುವಂತೆ ಅತ್ಯಧಿಕವಾದ ಆಶ್ಚರ್ಯ ಕುತೂಹಲಗಳಿಂದ ಕೂಡಿದವನಾಗಿ ಪುನಃ ಪುನಃ ಒಬ್ಬೊಬ್ಬರನ್ನಾಗಿ ಆ ಹಳ್ಳಿಯ ಜನರನ್ನೆಲ್ಲ ಪ್ರಶ್ನೆ ಮಾಡಿದನು.

ಆಗ ಆ ಗ್ರಾಮದವರು (ಗಾಧಿಯನ್ನು ಕುರಿತು) ಹೇಳಿದರು :—

೫೭. ಅಯ್ಯ ಬ್ರಾಹ್ಮಣ, ನೀನು ಹೇಳಿದುದೆಲ್ಲವೂ ಹಾಗೆಯೇ ಸರಿ. ಅದರಲ್ಲಿ ಸ್ವಲ್ಪವೂ ಸಂಶಯವಿಲ್ಲವು. ಇಲ್ಲಿ ಹಿಂದೆ ಅತ್ಯಂತ ಘೋರಾಕಾರನಾದ ಕಟಂಜನೆಂಬ ಹೆಸರಿನ ಒಬ್ಬ ಶ್ವಪಚನು ವಾಸವಾಗಿದ್ದನು.

೫೮. ಮರದಲ್ಲಿ ಎಲೆಗಳ ಸಮೂಹವು ತುಂಬಿರುವಂತೆ ಅವನಿಗೆ ಮಕ್ಕಳು, ಮೊಮ್ಮಕ್ಕಳು, ಮಿತ್ರ, ಭೃತ್ಯ, ಬಂಧು ಮುಂತಾದ ಸ್ವಜನರ ಬಳಗವು ಅತಿ ವಿಸ್ತಾರವಾಗಿ ಲೆಕ್ಕವಿಲ್ಲದಷ್ಟು ತುಂಬಿಕೊಂಡಿದ್ದಿತು.

ಯಸ್ಯ ವೃದ್ಧಸ್ಯ ತತ್ಸರ್ವಂ ಕಲತ್ರಂ ಮೃತ್ಯುರಾಚ್ಛಿನತ್ ।
ಅದ್ರೇಃ ಪುಷ್ಪ ಫಲೋಪೇತಂ ದಾವೋ ವನಮಿವಾನಲಃ ॥ ೫೯ ॥

ಯಸ್ತತೋ ದೇಶ ಮುತ್ಸೃಜ್ಯ ಯಯೌ ಕೀರ ಪುರಾಂತರಂ ।
ವರ್ಷಾಣ್ಯಷ್ಟಾವನುದ್ವೇಗಂ ತತ್ರ ರಾಜಾ ಬಭೂವ ಸಃ ॥ ೬೦ ॥

ಯಸ್ತತ್ರಾರ್ಥಂ ಪರಿಜ್ಞಾಯ ಜನೈರ್ದೂರೇ ನಿರಾಕೃತಃ ।
ಯಥಾ ರಾಶಿರನರ್ಥಸ್ಯ ಯಥಾ ಗ್ರಾಮೋ ವಿಷದ್ರುಮಃ ॥ ೬೧ ॥

ತತೋ ಜನೇಽಗ್ನಿಂ ಪ್ರವಿಶತ್ಯಾತ್ಮನಾ ಯೋ ಹುತಾಶನಂ ।
ಆರ್ಯತಾಮಾರ್ಯ ಸಂಸರ್ಗಾದಾಗತಃ ಪ್ರವಿವೇಶ ಹ ॥ ೬೨ ॥

---

೫೯. ಪುಷ್ಪ ಫಲ ಭರಿತವಾಗಿರುವ ಒಂದು ಪರ್ವತದ ವನ ಪ್ರದೇಶವನ್ನು ದಾವಾಗ್ನಿಯು ಆವರಿಸಿಕೊಂಡು ನಾಶಪಡಿಸುವಂತೆ ವೃದ್ಧನಾದ ಅವನ ಆ ಸಮಸ್ತ ಕುಟುಂಬವನ್ನೂ ಮೃತ್ಯುವು ಆವರಿಸಿಕೊಂಡು ನಿಶ್ಶೇಷವಾಗಿ ಅಪಹರಿಸಿಬಿಟ್ಟಿತು.

೬೦. ಬಳಿಕ ಆ ಕಟಂಜನು (ಶ್ವಪಚನು) ಈ ದೇಶವನ್ನು ಪರಿತ್ಯಾಗ ಮಾಡಿ ಕೀರ ದೇಶದ ರಾಜಧಾನಿಯೊಳಗೆ ಹೋದನು. ಅಲ್ಲಿ ಅವನು ಎಂಟು ವರ್ಷಗಳ ಪರ್ಯಂತ ನಿರಾತಂಕವಾಗಿ ರಾಜನಾಗಿ ದೊರೆತನ ಮಾಡಿಕೊಂಡಿದ್ದನು.

೬೧. ಆಮೇಲೆ ಅಲ್ಲಿನ ಜನರೆಲ್ಲರೂ ಅವನ ಸ್ವರೂಪವನ್ನು (ಶ್ವಪಚನೆಂಬುದನ್ನು) ಸ್ಪಷ್ಟವಾಗಿ ತಿಳಿದುಕೊಂಡು, ಅನರ್ಥಗಳ ಪರಂಪರೆಯನ್ನು ಪರಿಹರಿಸಿಕೊಳ್ಳುವಂತೆಯೂ, ವಿಷ ವೃಕ್ಷಗಳು ಬೆಳೆದುಕೊಂಡಿರುವ ಗ್ರಾಮವನ್ನು ಬಿಟ್ಟು ಹೋಗುವಂತೆಯೂ, ಅವನನ್ನು ದೂರದಲ್ಲಿ ಬಿಟ್ಟು ನಿರಾಕರಿಸಿದರು.

೬೨. ಅನಂತರ ಅಲ್ಲಿನ ಜನರೆಲ್ಲರೂ ತನ್ನ ಸಲುವಾಗಿ ಅಗ್ನಿ ಪ್ರವೇಶ ಮಾಡಲಾಗಿ, ಸತ್ಸಹವಾಸದ ಪ್ರಭಾವದಿಂದ ಆಗ ಸೌಜನ್ಯವನ್ನು ಪಡೆದಿದ್ದ ರಾಜನಾದ ಆ ಕಟಂಜನೂ ತಾನೂ ಅಗ್ನಿಯೊಳಗೆ ಬಿದ್ದುಬಿಟ್ಟು ಶರೀರ ತ್ಯಾಗ ಮಾಡಿದನು.

ಕಿಂ ತ್ವಮೇವ ಪ್ರಯತ್ನೇನ ಶ್ವಪಚಂ ಪೃಚ್ಛಸಿ ಪ್ರಭೋ ।
ಕಿಂ ತೇ ಬಂಧುರಸೌ ಕಚ್ಚಿದಭವಸ್ತ್ವಂ ಸ್ವತೋಽಥವಾ ॥ ೬೩ ॥

ಏವಂಸ್ತೈಕಥಯತೋ ಗ್ರಾಮ್ಯಾನ್ಗಾಧಿಃ ಪೃಚ್ಛನ್ಪುನಃ ಪುನಃ ।
ಸರ್ವೇಷು ತತ್ರ ಪ್ರಾಂತೇಷು ವಾಸಮೇಕಮುವಾಸ ಸಃ ॥ ೬೪ ॥

ಯಥಾ ತೇನಾನುಭೂತಂ ತಚ್ಛ್ವಪಚಂ ತತ್ತಥೈವ ತೈಃ ।
ಗ್ರಾಮೀಣೈಸ್ತಸ್ಯ ಕಥಿತಂ ಸರ್ವೈರೇವಾವ ಖಂಡಿತಂ ॥ ೬೫ ॥

---

೬೩. ಸ್ವಾಮಿ ಪ್ರಭುವೇ, ನೀನೇನು ಇಷ್ಟೊಂದು ಹೆಚ್ಚಾದ ಪ್ರಯತ್ನ ಪೂರ್ವಕವಾಗಿ ಅತ್ಯಂತ ಕುತೂಹಲದಿಂದ ಆ ಶ್ವಪಚನ ವಿಷಯವನ್ನು ಕುರಿತು ನಮ್ಮನ್ನು ಪ್ರಶ್ನಿಸುತ್ತಿರುವೆ? ಅವನೇನಾದರೂ ನಿನಗೆ ಬಂಧುವಾಗಬೇಕೇ? ಅಥವಾ ನೀನೇ ಸ್ವತಃ ಅವನೇ ಆಗಿದ್ದೆಯೋ? ಏನು ಕಾರಣ? (ಎಂದು ಆ ಗ್ರಾಮದ ಜನರೆಲ್ಲರೂ ಕೇಳಿದರು.)

೬೪. ಹೀಗೆ ಕೇಳುತ್ತಿರುವ ಆ ಗ್ರಾಮದ ಜನರನ್ನು ಪುನಃ ಪುನಃ ಪ್ರಶ್ನೆ ಮಾಡುತ್ತಾ ಆ ಗಾಧಿಯೆಂಬ ಬ್ರಾಹ್ಮಣನು ಆ ಗ್ರಾಮದ ಪ್ರಾಂತಗಳಲ್ಲೆಲ್ಲಾ ಒಂದು ತಿಂಗಳು ಕಾಲ (ನಿಜಾಂಶವನ್ನು ಕಂಡು ಹಿಡಿಯುವುದಕ್ಕಾಗಿ) ವಾಸ ಮಾಡಿ ಕೊಂಡಿದ್ದನು.

೬೫. ಅಯ್ಯ ರಾಮ, ಹೆಚ್ಚು ಹೇಳುವುದೇನು? ಆ ಗಾಧಿಯು ಕಟಂಜ ನಾಮಕ ಶ್ವಪಚನಾಗಿದ್ದುಕೊಂಡು ಯಾವ ಯಾವುದನ್ನು ಎಲ್ಲಿ ಎಲ್ಲಿ ಹೇಗೆ ಹೇಗೆ ಏನೇನು ಅನುಭವಿಸಿದನೋ ಅದದನ್ನೆಲ್ಲ ಹಾಗೆಗೆ ಹಾಗೆಯೇ ಆ ಗ್ರಾಮದ ಜನ ರೆಲ್ಲರೂ ಇದ್ದದ್ದು ಇದ್ದ ಹಾಗೆ ಸಮಗ್ರವಾಗಿ ಹೇಳಿಬಿಟ್ಟರು.

ಅನ್ಯಾಹತಂ ಸಕಲ ಭೂತ ಮುಖಾದಥೈಕ
    ದಾಕರ್ಣ್ಯ ಸಮ್ಯಗವಲೋಕ್ಯ ಯಥಾನುಭೂತಂ ||
ಗಾಧಿಃ ಶಶಾಂಕ ಮಲವದ್ಧೃತಯೋಽಧಿರೂಢಂ |
    ಗೂಢಾಕೃತಿಃ ಪರಮ ವಿಸ್ಮಯಮಾಜಗಾಮ | || ೬೬ ||

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ ಗಾಧಿ ವೃತ್ತಾಂತೇ "ಪ್ರತ್ಯಕ್ಷಾವಲೋಕನಂ" ನಾಮ ಸಪ್ತಚತ್ವಾರಿಂಶಃ ಸರ್ಗಃ

---

೬೬. ಆಮೇಲೆ ಆ ಗಾಧಿಯು, ತಾನು ಹಿಂದೆ ಸರೋವರದ ಮಧ್ಯದಲ್ಲಿ ನಿಂತುಕೊಂಡು ಹೇಗೆ ಕಂಡಿದ್ದನೋ, ಆ ಬಳಿಕ ಅತಿಥಿಯೊಬ್ಬನು ಬಂದು ಅದಕ್ಕೆ ಅನುಸಾರವಾಗಿಯೇ ಹೇಗೆ ಹೇಳಿದ್ದನೋ, ಹಾಗೆಯೇ ಈಗ ಆ ಹಳ್ಳಿಯವರೆಲ್ಲರ ಮುಖದಿಂದಲೂ ಸತ್ಯಾಂಶವನ್ನು ಕೇಳಿ ತನ್ನ ಅನುಭವಕ್ಕೆ ಬಂದಿರುವಂತೆಯೇ ಅಲ್ಲಿರುವುದನ್ನೂ ತಾನೇ ಪ್ರತ್ಯಕ್ಷವಾಗಿ ನೋಡಿ ನಾಚಿಕೆಯಿಂದ ತನ್ನ ಮನಸ್ಸಿನ ಆಶಯವನ್ನು ಪ್ರಕಟಗೊಳಿಸದೆ, ತನ್ನ ಮನಸ್ಸಿನಲ್ಲಿಯೇ ಚಂದ್ರಮಂಡಲದೊಳಗಿರುವ ಕಳಂಕದಂತೆ ರೂಢಮೂಲವಾಗಿದ್ದ ಹೆಚ್ಚಾದ ಆಶ್ಚರ್ಯವನ್ನು ಹೊಂದಿದನು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಉಪಶಮ ಪ್ರಕರಣದಲ್ಲಿ ಗಾಧಿ ವೃತ್ತಾಂತದೊಳಗೆ "ಪ್ರತ್ಯಕ್ಷಾವಲೋಕನ" ಎಂಬ ನಲವತ್ತೇಳನೆಯ ಸರ್ಗವು.

ಅಷ್ಟಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಲುಠಿತಂ ಶ್ವಪಚಾಗಾರೇ ಪುನರ್ವಿಸ್ಮಯಮಾಯಯಾ ।
ಗಾಧೇರ್ಮನೋ ಹಿ ನಾಯಾತಿ ತೃಪ್ತಿಮಾಶ್ಚರ್ಯದರ್ಶನೇ ॥ ೧ ॥

ತತ್ರಾವಲೋಕಯಾಮಾಸ ಸ್ಥಾನಾನಿ ಸದನಾನಿ ಚ ।
ಕಲ್ಪಿಕ್ಷೋಭನಿವೃತ್ತಾನಿ ಜಗಂತೀವಾಂಬುಜೋದ್ಭವಃ ॥ ೨ ॥

ಉವಾಚ ಸ್ವಾತ್ಮನೇವೇದಮರಣ್ಯೇ ಲುಠಿತಾಲಯೇ ।
ಶುಷ್ಕಾಸ್ಥಿಮಾಲಾವಲಿತೇ ಪಿಶಾಚಕ ಇವ ದ್ರುಮೇ ॥ ೩ ॥

ನಲವತ್ತೆಂಟನೆಯ ಸರ್ಗ

ಶ್ರೀ ವಸಿಷ್ಠನು ಹೇಳಿದನು :—

೧. ಅಯ್ಯ ರಾಮ, ಹೀಗೆ ಚಿರಕಾಲ ಶ್ವಪಚಗೃಹದಲ್ಲಿ ಬಿದ್ದು ಹೊರಳಾಡುತ್ತಾ ಸಂಸಕ್ತವಾಗಿದ್ದ ಆ ಗಾಧಿಯ ಮನಸ್ಸು ಮತ್ತೆ ಮತ್ತೆ ಹೆಚ್ಚು ಹೆಚ್ಚು ಆಶ್ಚರ್ಯವನ್ನು ಹೊಂದಿತು. ಆ ಆಶ್ಚರ್ಯವನ್ನು ನೋಡುವುದರಲ್ಲಿ ಅದಕ್ಕೆ ತೃಪ್ತಿಯೇ ಉಂಟಾಗಲಿಲ್ಲ.

೨. ಮತ್ತೆಯೂ ಆ ಗಾಧಿಯು ಪ್ರಳಯ ಕಾಲದಲ್ಲಿ ಜಗತ್ತುಗಳೆಲ್ಲವೂ ಕ್ಷೋಭೆಯಿಂದ (ಉಪಪ್ಲವದಿಂದ) ಮುಗುಚಿಕೊಂಡು ಭಗ್ನವಾಗಿರುವುದನ್ನು ಬ್ರಹ್ಮದೇವನು ನೋಡುವಂತೆ, ಆ ಶ್ವಪಚಾವಾಸದ ವಸತಿ ಸ್ಥಾನಗಳೂ ಮನೆಗಳೂ ಭಗ್ನವಾಗಿರುವುದನ್ನು ಕಂಡನು.

೩. ಒಂದು ಪಿಶಾಚವು ಕಾಡುಮರದೊಳಗೆ ಸೇರಿಕೊಂಡು ತನಗೆ ತಾನೇ ಮಾತನಾಡಿಕೊಳ್ಳುವಂತೆ, ಆಗ ಆ ಗಾಧಿಯು, ಮನೆಗಳೆಲ್ಲವೂ ಬಿದ್ದುಹೋಗಿ, ಒಣಗಿಹೋಗಿ ರಾಶಿ ರಾಶಿಯಾಗಿ ಬಿದ್ದಿರುವ ಮೂಳೆಗಳಿಂದ ವ್ಯಾಪ್ತವಾದ ಕಾಡಿನಲ್ಲಿದ್ದುಕೊಂಡು, ತನಗೆ ತಾನೇ ಮನಸ್ಸಿನಲ್ಲಿ ಹೀಗೆ ಹೇಳಿಕೊಂಡನು :—

ಇಮಾಸ್ತಾ ಮೃತಮಾತಂಗದಂತಮಾಲಾ ವೃತೌ ಕೃತಾಃ ।
ಅದ್ಯಾಪಿ ಸಂಸ್ಥಿತಾಃ ಕಲ್ಪಂ ಪ್ರತಿಮೇರುಶಿಖಾ ಇವ ॥ ೪ ॥

ಇಹ ತದ್ವಾನರೀಮಾಂಸಂ ಪಕ್ವವಂಶಾಂಕುರೈಃ ಸಹ !
ಭುಕ್ತಂ ಪುರಾಸವೋನ್ಮತ್ತೈಃ ಸಹ ಶ್ವಪಚಬಂಧುಭಿಃ ॥ ೫ ॥

ಆಲಿಂಗ್ಯ ಶ್ವಪಚಶ್ಯಾಮಾಮಿಹ ಕೇಸರಿಚರ್ಮಣಿ ।
ಸುಪ್ತಮಾಪೀಯ ಮೈರೇಯಂ ತಿಕ್ತಂ ಗಜಮದೇನ ಚ ॥ ೬ ॥

ಕೌಲೇಯಕಕುಟುಂಬಿನ್ಯಃ ಪಿಣ್ಯಾಕಪಲವರ್ಧಿತಾಃ ।
ಇಹ ಬದ್ಧಾ ವರತ್ರಾಭಿರ್ಮೃತೇಭ ರದ ಕಾಷ್ಟಕೇ ॥ ೭ ॥

---

೪. ಇದೋ ಇಲ್ಲಿ ಸತ್ತುಹೋಗಿರುವ ಆನೆಗಳ ದಂತಪಂಕ್ತಿಗಳು, ಪ್ರಳಯ ಕಾಲದಲ್ಲಿ ಮೇರು ಪರ್ವತದ ಶಿಖರಗಳು ಬಿದ್ದಿರುವ ಹಾಗೆ, ಪ್ರಾಕಾರದ ಮೇಲೆ ನೆಡಲ್ಪಟ್ಟ ಶೂಲಗಳೋಪಾದಿಯಲ್ಲಿ ರಾಶಿಯಾಗಿ ಬಿದ್ದಿರುವುವು. ಇವು ನನಗೆ ಪೂರ್ವಾನುಭವದ ಸ್ಮೃತಿಯನ್ನು ತರುವುವು.

೫. ಈ ಕಡೆ ಅತ್ಯಧಿಕವಾದ ಮದ್ಯಪಾನದಿಂದ ಉನ್ಮತ್ತರಾದ ಶ್ವಪಚರು ತಮ್ಮ ಬಂಧುಗಳೊಡಗೂಡಿ, ಬಿದಿರು ಕಳಲೆಗಳನ್ನು ಬೇಯಿಸಿ ವ್ಯಂಜನವನ್ನಾಗಿ ಮಾಡಿಕೊಂಡು ಹೆಣ್ಣುಕಪಿಗಳ ಮಾಂಸವನ್ನು ತಿಂದಿರುವರು. ಇದೂ ನನಗೆ ನೆನಪಿದೆ.

೬. ಇದೋ ಈ ಸ್ಥಳದಲ್ಲಿ ಒಬ್ಬ ಶ್ವಪಚ ತರುಣನು, ಆನೆಗಳ ಮದೋದಕದಿಂದ ಮಿಶ್ರಿತವಾಗಿ, ಸುಗಂಧಯುತವಾದ ಮದ್ಯವನ್ನು ಮಾವಟಿಗರಿಂದ ಕೊಂಡುಕೊಂಡು ಪಾನ ಮಾಡಿ, ಮೈಮೇಲೆ ಜ್ಞಾನವಿಲ್ಲದೆ ಒಬ್ಬ ಯುವತಿಯನ್ನು ಆಲಿಂಗಿಸಿಕೊಂಡು ಈ ಸಿಂಹದ ಚರ್ಮದ ಮೇಲೆ ಮಲಗಿದ್ದನು.

೭. ಇಲ್ಲಿ ಗಾಣವಾಡಿ ಎಣ್ಣೆ ತೆಗೆದಿರುವ ಬೀಜಗಳ ಹಿಂಡಿಗಳಿಂದಲೂ ಮಾಂಸಗಳಿಂದಲೂ ಪೋಷಿಸಲ್ಪಟ್ಟಿದ್ದ ಹೆಣ್ಣುನಾಯಿಗಳನ್ನು ಸತ್ತ ಆನೆಗಳ ದಂತಗಳಿಂದ ಗೂಟಗಳಲ್ಲಿ ಚರ್ಮಮಯ ರಜ್ಜುಗಳಿಂದ ಬಿಗಿದಿದ್ದರು.

ಇಹ ವಾರಣಮುಕ್ತಾನಾಂ ದದಾಸೀಿತ್ಪಿಠರತ್ರಯಂ ।
ಪಿನದ್ಧಂ ಮಾಹಿಷೇಣೋಗ್ರಚರ್ಮಣಾಂಬುದಶೋಭಿನಾ ॥ ೮ ॥

ಸ್ಥಲೀಷ್ವೇತಾಸು ತಾಸ್ವತ್ರ ಸಹ ಶ್ವಪಚಬಾಲಕೈಃ ।
ಚಿರಂ ವಿಲುಠಿತಂ ಚೂತಪತ್ರಪುಂಜೇ ಪಿಕೈರಿವ ॥ ೯ ॥

ಅತ್ರ ತದ್ಬಾಲನಿಃಶ್ವಾಸರಣದ್ವಂಶಪ್ರವೃತ್ತವತ್ ।
ಗೀತಂ ಪೀತಂ ಶುನೀರಕ್ತಂ ಸಾಧಿತಾ ಶವಭೂಷಿತಃ ॥ ೧೦ ॥

ಅತ್ರ ಸಾರ್ಧಂ ಕುಟುಂಬೇನ ಜನ್ಯತ್ರೇಷು ಕುಟುಂಬಿನಾ ।
ನೃತ್ತಂ ತತ್ಕೃತಮುನ್ನಾದಂ ಕಲ್ಲೋಲೈರ್ಜಲಧಾವಿವ ॥ ೧೧ ॥

---

೮. ಈ ಸ್ಥಳದಲ್ಲಿ ಆನೆಗಳ ಕುಂಭಸ್ಥಳದಿಂದ ಮೂರು ಸೇರಿನಷ್ಟು ಮುತ್ತುಗಳನ್ನು ತಂದು, ಆನೆಯ ದಂತದಿಂದ ಮಾಡಿದ ಪಾತ್ರೆಗಳಲ್ಲಿ ತುಂಬಿ, ಮೇಘದಂತೆ ಕಪ್ಪಗಿರುವ ಕೋಣನ (ಮಹಿಷ) ಒರಟಾದ ಚರ್ಮದಿಂದ ಆ ಪಾತ್ರೆಗಳ ಬಾಯಿಯನ್ನು ಕಟ್ಟುಕಟ್ಟಿ ಬಿಗಿದು ಇರಿಸಿದ್ದರು.

೯. ಹಿಂದೆ ನೋಡಿಯೂ ಈಗ ನೋಡುತ್ತಲೂ ಇರುವ ಈ ಅಕೃತ್ರಿಮವಾದ ನೆಲಗಳಲ್ಲಿ ಗ್ರಾಮದ ಹೊರಗೆ ಈ ಕಡೆ ಶ್ವಪಚ ಬಾಲಕರ ಸಂಗಡ ಮಣ್ಣಿನಲ್ಲಿ ಆಟವಾಡುವಾಗ, ಕೋಗಿಲೆಗಳು ಮಾವಿನೆಲೆಗಳ ರಾಶಿಯ ಮೇಲೆ ಹೇಗೋ ಹಾಗೆ, ಬಹಳ ಹೊತ್ತು ಹೊರಳಾಡಿದೆವು.

೧೦. ಇಲ್ಲಿ ಶ್ವಪಚ ಬಾಲಕರು ತಮ್ಮ ನಿಶ್ವಾಸ ವಾಯುವಿನಿಂದ ಕೊಳಲು ವಾದ್ಯಗಳನ್ನು ಊದುತ್ತಲೂ ಅದಕ್ಕನುಸಾರವಾಗಿ ಗಾನಮಾಡುತ್ತಲೂ ಇದ್ದರು. ಹೆಣ್ಣುನಾಯಿಗಳ ರಕ್ತವನ್ನು ಇಲ್ಲಿ ಕುಡಿದರು. ಮತ್ತು ಇತ್ತ ಕಡೆ ಶ್ಮಶಾನದೊಳಗಿರುವ ಹೂವು, ಗಂಧ ಮುಂತಾದವುಗಳನ್ನು ತಂದು ಒಬ್ಬರಿಗೊಬ್ಬರು ಅಲಂಕಾರ ಮಾಡಿಕೊಳ್ಳುತ್ತಲೂ ಇದ್ದರು. (ಶವಗಳನ್ನು ಅಲಂಕರಿಸುವ ಹೂವು ಗಂಧ ಮೊದಲಾದದ್ದು, ಶವಭೂಷಿ ತಸ್ಮಾತ್).

೧೧. ಇತ್ತಕಡೆ ಒಬ್ಬ ದೊಡ್ಡ ಶ್ವಪಚ ಕುಟುಂಬಿಯು, ದೊಡ್ಡ ಅಲೆಗಳು ಭೋರ್ಗರೆಯುತ್ತಾ ಸಮುದ್ರದಲ್ಲಿ ನರ್ತನ ಮಾಡುವಂತೆ, ತನ್ನ ಮನೆಯ ಮದುವೆ ಕಾಲಗಳಲ್ಲಿ ತನ್ನ ಕುಟುಂಬದ ಜೊತೆಯಲ್ಲಿ ಹಾಡುತ್ತಾ ಕುಣಿದಾಡುತ್ತಿದನು.

ಅತ್ರೋಡ್ಡಯನಲೋಲಾನಾಂ ಕಾಕಭಾಸಪತಂತ್ರಿಣಾಂ ।
ನೃತಾನಾಮನ್ಯದಾಶಾರ್ಥಂ ಗ್ರಥಿತಂ ವಂಶಪಂಜರಂ ॥ ೧೨ ॥

ಶ್ರೀ ವಶಿಷ್ಠ ಉವಾಚ:—

ಏವಂಪ್ರಾಯಾಃ ಸ್ಮರನ್ಗಾಧಿಃ ಪ್ರಾಕ್ತನೀಃ ಶ್ವಪಚಕ್ರಿಯಾಃ ।
ವಿಸ್ಮಯೋತ್ಕಂಪಿತಶಿರಾ ಧಾತುಶ್ಚೇಷ್ಟಾಂ ಪರಾಮೃಶತ್ ॥ ೧೩ ॥

ಚಚಾಲ ತಸ್ಮಾದ್ದೀರ್ಘೇಣ ದೇಶಾತ್ಕಾಲೇನ ಕಾರ್ಯವಿತ್ ।
ಭೂತಮಂಡಲಮುತ್ಸೃಜ್ಯ ಪ್ರಾಪ ದೇಶಾಂತರಂ ಕ್ರಮಾತ್ ॥ ೧೪ ॥

ಸಮುಲ್ಲಂಘ್ಯ ನದೀಶೈಲಮಂಡಲಾರಣ್ಯಸಂತತಿಂ ।
ಆಸಸಾರ ತುಷಾರಾದ್ರಿರತ್ನಂ ಕಿಲ ಜನಾಸ್ಪದಂ ॥ ೧೫ ॥

---

೧೨. ಈ ಸ್ಥಳದಲ್ಲಿ, ಆಕಾಶಕ್ಕೆ ಹಾರಿಹೋಗುತ್ತಿದ್ದ ಕಾಗೆ ಭಾಸ ಮುಂತಾದ ಹಕ್ಕಿಗಳನ್ನು ಹಿಡಿದು, ಬಿದಿರು ಪಂಜರದೊಳಗೆ ಬಂಧಿಸಿ, ಮೂರನೆಯ ದಿನದ ಆಹಾರಕ್ಕೋಸ್ಕರ ಆ ಪಂಜರಗಳನ್ನು ಸಾಲಾಗಿ ತೂಗಹಾಕಿದ್ದರು. ಅದೇ ಈ ಸ್ಥಳವು. (ಎಂದು ಗಾಧಿಯು ತನ್ನ ಮನಸ್ಸಿನಲ್ಲಿಯೇ ಪ್ರತ್ಯಭಿಜ್ಞಾನದಿಂದ ಯೋಚಿಸಿದನು).

ಶ್ರೀ ವಸಿಷ್ಠನು ಹೇಳಿದನು :—

೧೩. ರಾಮ, ಇತ್ಯಾದಿ ನಾನಾ ಪ್ರಕಾರಗಳಾಗಿ ಪೂರ್ವಾನುಭೂತವಾದ ಸ್ವಕೀಯ ಶ್ವಪಚ ಕರ್ಮಗಳನ್ನು ಸ್ಮರಿಸುತ್ತಲಿದ್ದ ಗಾಧಿಯು ತಲೆದೂಗುತ್ತಾ ದೈವ ವಿಲಾಸವನ್ನು ಚೆನ್ನಾಗಿ ತಿಳಿದನು.

೧೪. ತರುವಾಯ, ಅಲ್ಲಿಂದ ಮುಂದೆ ನಡೆದ ಆತ್ಮವೃತ್ತಾಂತವನ್ನು ತಿಳಿಯಲುದ್ಯುಕ್ತನಾಗಿದ್ದ ಆ ಗಾಧಿಯು, ಬಹುಕಾಲ ಅಲ್ಲಿಯೇ ಇದ್ದು, ಆಮೇಲೆ ಭೂತ ಮಂಡಲ ಗ್ರಾಮವನ್ನು ಬಿಟ್ಟು, ಆ ಸ್ಥಳದಿಂದ ಮತ್ತೊಂದು ದೇಶಕ್ಕೆ ಹೊರಟನು.

೧೫. ದಾರಿಯುದ್ದಕ್ಕೂ ಅನೇಕಾನೇಕ ನದಿಗಳ, ಪರ್ವತಗಳ, ದೇಶಗಳ, ಕಾಡುಗಳ ಸಮುದಾಯಗಳನ್ನು ದಾಟಿ ಕಳೆದು, ಹಿಮವತ್ಪರ್ವತದ ತಪ್ಪಲಿನಲ್ಲಿ ರತ್ನದಂತೆ ವಿರಾಜಿಸುತ್ತಿದ್ದ ಪೂರ್ವಪರಿಚಿತವಾದ ಕೀರದೇಶಕ್ಕೆ ಬಂದು ಸೇರಿದನು.

ತತ್ರ ಪ್ರಾಪ ಮಹೀಪಾಲನಗರಂ ನಗಸನ್ನಿಭಂ ।
ಜಗದ್ಭ್ರಮಣಖಿನ್ನಾತ್ಮಾ ಸ್ವರ್ಲೋಕಮಿವ ನಾರದಃ ॥ ೧೬ ॥

ಅಥಾತ್ಮನಾನುಭೂತಾನಿ ದೃಷ್ಟಾನ್ಯಾಸೇವಿತಾನಿ ಚ ।
ಸ್ಥಾನಾನಿ ನಗರೇ ಪಶ್ಯನ್ಪಪ್ರಚ್ಛ ಜನಮಾದೃತಃ ॥ ೧೭ ॥

ಸಾಧೋ ಸ್ಮರಸಿ ಕಿಂಚಿತ್ತ್ವಮಿಹ ಶ್ವಪಚಮೀಶ್ವರಂ ।
ಯದಿ ಜಾನಾಸಿ ತತ್ತ್ವಂ ಮೇ ವರ್ಣಯಾಶು ಯಥಾವಿಧಿ ॥ ೧೮ ॥

ನಾಗರಾ ಊಚುಃ :—

ಅಭೂದಿಹಾಷ್ಟೌ ವರ್ಷಾಣಿ ಶ್ವಪಚೋ ಭೂಮಿಪೋ ದ್ವಿಜ ।
ರಾಜತ್ವಮರ್ಪಿತಂ ಯಸ್ಯ ನಾಮ ಮಂಗಲಹಸ್ತಿನಾ ॥ ೧೯ ॥

---

೧೬. ಸರ್ವದಾ ತ್ರಿಲೋಕಗಳಲ್ಲಿ ಸಂಚಾರ ಮಾಡಿ ಆಯಾಸಗೊಂಡ ದೇಹವುಳ್ಳ ನಾರದನು ಸ್ವರ್ಗಲೋಕಕ್ಕೆ ಹೋಗಿ ಆನಂದಿಸುವಂತೆ, ಆ ಗಾಧಿಯು ಆ ದೇಶದಲ್ಲಿ ಪರ್ವತಗಳಂತೆ ಉನ್ನತವಾದ ಉಪ್ಪರಿಗೆಗಳಿಂದಲೂ ಧಾತು ರತ್ನಾದಿ ವಿವಿಧ ವಸ್ತುಗಳಿಂದಲೂ ಶೋಭಿಸುತ್ತಲಿದ್ದ ರಾಜಧಾನಿಯನ್ನು ತಲಪಿದನು.

೧೭-೧೮. ಬಳಿಕ, ಆ ಗಾಧಿಯು, ಆ ನಗರದಲ್ಲಿ ಹಿಂದೆ ತಾನು ರಾಜನಾಗಿದ್ದಾಗ ಅನುಭವಿಸಿಯೂ ನೋಡಿಯೂ ಸೇವಿಸಿಯೂ ಇದ್ದ ಅನೇಕ ಪ್ರದೇಶಗಳನ್ನು ಪ್ರತ್ಯಕ್ಷವಾಗಿ ನೋಡುತ್ತ, ಅತ್ಯಾದರದಿಂದ ಅಲ್ಲಿದ್ದ ಜನರನ್ನು ಸಂಬೋಧಿಸಿ ಒಬ್ಬೊಬ್ಬನನ್ನು ಒಂದೊಂದು ಸಲದಂತೆ, "ಅಯ್ಯ ಪುಣ್ಯಾತ್ಮ, ಸಾಧುವೇ, ಹಿಂದೆ ಒಬ್ಬ ಶ್ವಪಚನು ಇಲ್ಲಿ ದೊರೆಯಾಗಿದ್ದನಲ್ಲವೇ? ಅವನನ್ನು ನೀನು ಬಲ್ಲೆಯಾ? ಅಥವಾ ಜ್ಞಾಪಕವಿದೆಯೇ? ನಿನಗೆ ತಿಳಿದಿದ್ದರೆ ಆ ವಿಚಾರವನ್ನು ಯಥಾಸ್ಥಿತವಾಗಿ ದಯೆಮಾಡಿ ನನಗೆ ಬೇಗ ವಿವರಿಸು'' ಎಂದು ಪದೇಪದೇ ಪ್ರಶ್ನೆ ಮಾಡಿದನು.

ಆಗ ಆ ಪಟ್ಟಣಿಗರು (ಅವನಿಗೆ ಉತ್ತರ) ಹೇಳಿದರು :—

೧೯. ಅಯ್ಯ ದ್ವಿಜೋತ್ತಮ, ಈ ದೇಶದಲ್ಲಿ ಒಬ್ಬ ಶ್ವಪಚನು ಎಂಟು ವರ್ಷಗಳು ರಾಜನಾಗಿ ರಾಜ್ಯವಾಳಿದನು. ಅವನಿಗೆ ಇಲ್ಲಿನ ಪಟ್ಟದಾನೆಯು ದೊರೆತನವನ್ನು ಕೊಟ್ಟಿತು.

ಅನ್ತ್ಯೇ ಚ ಸಂಪರಿಜ್ಞಾತಃ ಸ ಪ್ರವಿಷ್ಟೋ ಹುತಾಶನಂ |
ಅದ್ಯ ದ್ವಾದಶವರ್ಷಾಣಿ ಸಮತೀತಾನಿ ತಾಪಸ ॥ ೨೦ ॥

ಯಂ ಯಂ ಪೃಚ್ಛತ್ಯಸೌ ಗಾಧಿರ್ಜನಂ ಜಾತಕುತೂಹಲಃ |
ತಸ್ಯ ತಸ್ಯ ಮುಖಾದೇವ ಶೃಣೋತ್ಯಾಸ್ವಾದಯತ್ಯಪಿ ॥ ೨೧ ॥

ಅಥಾಪಶ್ಯತ್ಪುರೇ ತಸ್ಮಿನ್ನೃಪಂ ಸಕಲವಾಹನಂ |
ದೇವಂ ಚಕ್ರಧರಂ ವಿಷ್ಣುಂ ಮಂದಿರಾನ್ನಿರ್ಗತಂ ಬಹಿಃ ॥ ೨೨ ॥

ಸ ದೃಷ್ಟ್ವಾ ಸ್ಥಗಿತಾಕಾಶಂ ಚಲರೇಣುಪಯೋಧರೈಃ |
ಪ್ರಾಕ್ತನೀಂ ರಾಜತಾಂ ಸ್ಮೃತ್ವಾ ಸಮುವಾಚಾತಿ ವಿಸ್ಮಯಃ ॥ ೨೩ ॥

---

೨೦. ಅಯ್ಯ ತಪಸ್ವಿಯೇ, ಕೊನೆಯಲ್ಲಿ ಅವನು ಶ್ವಪಚನೆಂದು ಪ್ರಜೆಗಳಿಗೆಲ್ಲ ಗೊತ್ತಾದಮೇಲೆ ಅವನು ಅಗ್ನಿಪ್ರವೇಶ ಮಾಡಿದನು. ಇದಾಗಿ ಇಲ್ಲಿಗೆ ಹನ್ನೆರಡು ವರ್ಷಗಳು ಕಳೆದು ಹೋಗಿವೆ. (ಎಂದು ನಾಗರಿಕರು ಹೇಳಿದರು).

೨೧. ಅಯ್ಯ ರಾಮ, ಆ ಗಾಧಿಯು ಇನ್ನೂ ಹೀಗೆಯೇ ಕುತೂಹಲಾನ್ವಿತನಾಗಿ ಅಲ್ಲಿ ಯಾರುಯಾರು ಸಿಕ್ಕಿದರೆ ಅವರವರನ್ನು ಪ್ರಶ್ನೆ ಮಾಡಿದನು. ಎಲ್ಲರ ಬಾಯಿಯಿಂದಲೂ ಒಂದೇ ವಿಧವಾದ ಉತ್ತರವನ್ನು ಪಡೆದನು. ಮತ್ತು ಅದನ್ನು ತನ್ನ ಪೂರ್ವಾನುಭವದೊಂದಿಗೆ ಸರಿದೂಗಿಸಿ, ಆ ಮಾಯೆಯ ಚಮತ್ಕಾರವನ್ನು ಅನುಭವಿಸಿದನು.

೨೨. ಆಗ ಆ ಪಟ್ಟಣದೊಳಗೆ ಚಕ್ರಪಾಣಿಯಾದ ಶ್ರೀಮನ್ಮಹಾವಿಷ್ಣುವೇ ರಾಜನಾಗಿ ದೊರೆತನ ಮಾಡುತ್ತಿದ್ದರು. ಹೀಗಿರುವಾಗ ಒಂದು ಸಮಯದಲ್ಲಿ ರಾಜನಾದ ಭಗವಂತನು ತನ್ನ ಸೈನ್ಯದೊಡನೆಯೂ, ವಾಹನಗಳೊಡನೆಯೂ, ಅರಮನೆಯಿಂದ ಹೊರಗೆ ಹೊರಟುದುದನ್ನು ಗಾಧಿಯು ಕಂಡನು.

(ಭಗವದನುಗ್ರಹದಿಂದ ಆ ನಗರದಲ್ಲಿಯೇ ರಾಜನ ರೂಪದಿಂದ ಅವನಿಗೆ ಭಗವಂತನ ದರ್ಶನವಾಯಿತು.)

೨೩. ಬಾಹ್ಯ ವಸ್ತುಗಳ ದರ್ಶನದಲ್ಲಿಯೇ ಗಾಧಿಯ ಮನಸ್ಸು ವ್ಯಾಮೋಹಗೊಂಡಿದ್ದುದರಿಂದ ಸಾಕ್ಷಾತ್ತಾಗಿ ಭಗವಂತನ ದರ್ಶನವಾದರೂ ಕೂಡ, ಆ ಭಗವತ್ತ್ವ

ಇಮಾಸ್ತಾಃ ಕೀರಕಾಮಿನ್ಯಾಃ ಪದ್ಮಗರ್ಭೋಪಮತ್ವಚಃ ।
ಕನಕದ್ರವವರ್ಣಿನ್ಯೋ ಲೋಲನೀಲೋತ್ಪಲೇಕ್ಷಣಾಃ ॥ ೨೪ ॥

ಚಾಮರೌಘಾ ಇಮೇ ಚಂದ್ರಕರಸಂಪಿಂಡಪಾಂಡುರಾಃ ।
ಸ್ಥಿತನಿರ್ಝರಸಂಕಾಶಾಃ ಕಾಶಪುಷ್ಪಚಯಾ ಇವ ॥ ೨೫ ॥

ಕಾಂತಾಭಿರವಧೂಯಂತೇ ಬಾಲವ್ಯಜನರಾಜಯಃ ।
ಇಮಾಸ್ತಾ ವನವಲ್ಲೀಭಿರ್ದೀಪ್ಯಮಾನಾ ಇವದ್ರ್ಧಯಃ ॥ ೨೬ ॥

ರೂಪದಲ್ಲಿ ಅವನಿಗೆ ಭಾವವಾಗಲೀ, ವಿಚಾರವಾಗಲೀ ಉಂಟಾಗಲಿಲ್ಲ. (ಆದರೆ ಅವನನ್ನು ಒಬ್ಬ ಸಾಮಾನ್ಯ ರಾಜನನ್ನಾಗಿ ತಿಳಿದನು. ತನ್ನಿಂದ ಪೂರ್ವಾನುಭೂತ ಸ್ತ್ರೀ ಛತ್ರ ಚಾಮರಾದಿ ವಿಷಯಗಳಲ್ಲಿ ಪ್ರಾಕ್ತನ ಸಂಸ್ಕಾರ ಬಲದಿಂದ ಪ್ರತ್ಯಭಿಜ್ಞಾನವುಂಟಾಗಿ ಆ ಕೌತುಕಗಳ ದರ್ಶನದಲ್ಲಿಯೇ ಅವನ ಮನಸ್ಸು ಭ್ರಮಿಸುತ್ತಿತ್ತು.) ಸೈನ್ಯದ ತುಳಿತದಿಂದ ಧೂಳಿಯೆದ್ದು ಮೇಘಾಕಾರವಾಗಿ ಆಕಾಶವನ್ನೆಲ್ಲ ಮುಸುಕಿಕೊಂಡಿತು. ಅದನ್ನು ನೋಡಿ, ತಾನು ಪೂರ್ವದಲ್ಲಿ ಆದೇ ದೇಶದ ರಾಜನಾಗಿದ್ದುದನ್ನೂ ಆಗ ಅನುಭವಿಸಿದ ಮಹಾ ವೈಭವಗಳನ್ನೂ ಸ್ಮರಿಸಿಕೊಂಡು, ಅತಿ ವಿಸ್ಮಯದಿಂದ ತನಗೆ ತಾನೇ ಮನಸ್ಸಿನಲ್ಲಿ ಹೇಳಿಕೊಂಡನು.

೨೪. ಇದೋ ಇವರು, ಪದ್ಮ ಗರ್ಭಸದೃಶವಾದ ಕೋಮಲಾಂಗಿಯರೂ, ಕರಗಿಸಿದ ಚಿನ್ನದಂತೆ ಕಾಂತಿ ಯುಕ್ತವಾದ ಮೈ ಬಣ್ಣವುಳ್ಳವರೂ, ಅತಿ ಚಂಚಲವಾದ ನೀಲೋತ್ಪಲದಂತಹ ಕಣ್ಣುಗಳುಳ್ಳವರೂ ಆದ ಕೀರದೇಶದ ರಾಜನ ಸುಂದರಿಯರು. ಇವರನ್ನು ನಾನು ಹಿಂದೆ ಅನುಭವಿಸಿಯೇ ಇರುವೆನು.

೨೫. ರಾಶಿಯಾಗಿ ಒಟ್ಟಿಗೆ ಕೂಡಿಸಲ್ಪಟ್ಟ ಚಂದ್ರ ಕಿರಣಗಳಂತೆಯೂ ನಿಶ್ಚಲವಾಗಿ ಒಂದೇ ಕಡೆ ನಿಂತಿರುವ ಜಲ ಪ್ರವಾಹಗಳಂತೆಯೂ, ಕಾಶ ಪುಷ್ಪಗಳ ಸ್ತಬಕಗಳಂತೆಯೂ ಅತ್ಯಂತ ಶುಭ್ರವಾಗಿರುವ ಆದೇ ಚಾಮರಗಳು ಇದೋ, ಈಗ, ಇಲ್ಲಿ ಶೋಭಿಸುತ್ತಿರುವುವು.

೨೬. ಬಾಲ ಲತೆಗಳು ಪುಷ್ಪ ಮಂಜರಿಗಳ ಸಮೂಹವನ್ನು ಎರಚುವಂತೆ ಈ ಯುವತಿಯರು, ಇದೋ, ಇಲ್ಲಿ ಪ್ರಕಾಶಮಾನಗಳಾದ ಚಾಮರಗಳನ್ನು ಬೀಸುತ್ತಿರುವರು.

ಇಮಾಸ್ತಾ ಮತ್ತಮಾತಂಗಘಟಾ ಘಟಿತದಿಕ್ತಟಾಃ ।
ಸಂಕಲ್ಪಪಾದಪಾ ಮೇರೋರಿವ ಶೃಂಗಪರಂಪರಾಃ ॥ ೨೭ ॥

ಏತೇ ತೇ ಯಮವಾರೀಶಕುಬೇರಪ್ರತಿಮೌಜಸಃ ।
ಸಾಮಂತಾ ವಾಸವಸ್ಯೇವ ಲೋಕಪಾಲಾ ಮಹೀಭೃತಃ ॥ ೨೮ ॥

ಇಮಾಸ್ತಾಃ ಸರ್ವವಸ್ತ್ವೋಘಾಃ ಸರ್ವಾಭಿಮತದಾಸ್ತತಾಃ ।
ಕಲ್ಪವೃಕ್ಷಲತಾಕುಂಜಸುಂದರ್ಯೋ ಗೃಹಪಂಕ್ತಯಃ ॥ ೨೯ ॥

ಇದಂ ತತ್ಕೀರಜನತಾರಾಜ್ಯಂ ಪ್ರಾಗ್ಭುಕ್ತಮದ್ಯ ಮೇ ।
ಆತ್ಮಜನ್ಮಾಂತರಾಚಾರ ಇವ ಪ್ರತ್ಯಕ್ಷತಾಂ ಗತಂ ॥ ೩೦ ॥

---

೨೭. ಇಲ್ಲಿ ಇದೋ, ಈ ಮದಿಸಿದ ಆನೆಗಳ ಗುಂಪುಗಳು, ಕಲ್ಪವೃಕ್ಷಗಳಿಂದ ಸಹಿತವಾದ ಮೇರು ಪರ್ವತದ ಶಿಖರಗಳ ಶ್ರೇಣಿಗಳಂತೆ ತಮ್ಮ ದಂತಾಗ್ರಗಳಿಂದ ದಿಕ್ತಟಗಳನ್ನೆಲ್ಲ ಭೇದಿಸಿ ಆವರಿಸಿಕೊಂಡು ನಿಂತಿರುವುವು.

೨೮. ಇದೋ, ಇಲ್ಲಿ, ಇಂದ್ರನ ಸುತ್ತಲೂ ದಿಕ್ಪಾಲಕರಿರುವಂತೆ, ಯಮ, ವರುಣ, ಕುಬೇರಾದಿಗಳಿಗೆ ಸಮಾನವಾದ ತೇಜೋ ವೈಭವವುಳ್ಳ ಸಾಮಂತ ರಾಜರುಗಳು ಸುತ್ತಲೂ ನಿಂತಿರುವರು.

೨೯. ಈ ಮನೆಗಳ ಸಾಲುಗಳೂ ಕೂಡ, ಮೊದಲಿನಂತೆಯೇ ಕಲ್ಪವೃಕ್ಷಗಳುಳ್ಳ ನಂದನ ವನದ ಲತಾಮಂಟಪಗಳ ಹಾಗೆ ಅತಿ ಸುಂದರವಾಗಿಯೂ, ಧನ ಧಾನ್ಯಾದಿ ಸಕಲ ವಸ್ತುಗಳಿಂದ ಪರಿಪೂರ್ಣವಾಗಿಯೂ, ಸಕಲ ವಾಂಛಿತಾರ್ಥಪ್ರದಗಳಾಗಿಯೂ ವಿರಾಜಿಸುತ್ತಿರುವುವು.

೩೦. ನಾನು ಹಿಂದೆ ಅನುಭವಿಸಿದ್ದ ಈ ಕೀರ ದೇಶದ ಮಹಾರಾಜ ಪದವಿಯು, ಮನುಷ್ಯರು ಈ ಜನ್ಮದಲ್ಲಿ ಅನುಭವಿಸುವ ಸುಖ ದುಃಖಾತ್ಮಕ ಫಲಗಳಿಂದ, ಅವರು ಪೂರ್ವ ಜನ್ಮಾಂತರಗಳಲ್ಲಿ ಆಚರಿಸಿದ ಧರ್ಮಾಧರ್ಮಗಳ ವಿಚಾರವು, ಅನುಮಾನ ಪ್ರಮಾಣದಿಂದ ಅನುಭವ ಗೋಚರವಾಗುವಂತೆ, ಈಗ ನನಗೆ ಪ್ರತ್ಯಕ್ಷವಾಗಿಯೇ ಗೋಚರವಾಗಿರುವುದು.

ಸತ್ಯಂ ಸ್ವಪ್ನ ಇವಾಯಂ ಮೇ ಜಾಗ್ರದ್ಭೂತಃ ಪುನಃ ಸ್ಥಿತಃ ।
ನಜಾನೇ ಕಿಂ ಕೃತೋತ್ಥಾನಾ ಮಾಯೇಯಂ ಪ್ರವಿಜೃಂಭತೇ ॥ ೩೧ ॥

ಅಹೋ ನು ಖಲು ದೀರ್ಘೇಣ ಮನೋಮೋಹೇನ ವಲ್ಗತಾ ।
ವೈವಶ್ಯಮುಪನೀತೋಽಹಂ ಜಾಲೇನೇವ ಶಕುಂತಕಃ ॥ ೩೨ ॥

ಹಾ ಧಿಕ್ಕಷ್ಟಮಬುದ್ಧಂ ಮೇ ಮನೋ ವಾಸನಯಾ ಹತಂ ।
ಪಶ್ಯತಿ ಭ್ರಮಜಾಲಾನಿ ವಿತತಾನಿ ಶಿಶೋರಿವ ॥ ೩೩ ॥

ಏಷಾ ಹಿ ಮಾಯಾ ಮಹತೀ ತೇನ ಮೇ ಚಕ್ರಧಾರಿಣಾ ।
ದರ್ಶಿತೇತ್ಯಧುನಾ ಸಾಧು ಮಾಯಾ ಸ್ಮೃತಮಖಂಡಿತಂ ॥ ೩೪ ॥

[ಫಲಾನುಮೇಯಾಃ ಪ್ರಾರಂಭಾಃ ಸಂಸ್ಕಾರಾಃ ಪ್ರಾಕ್ತನಾ ಇವ-
ಕಾಳಿದಾಸ. ರಘುವಂಶ.]

೩೧. ನಿಶ್ಚಯವಾಗಿಯೇ ಮೊದಲು ಸ್ವಪ್ನದ ಹಾಗೆ ಕಾಣಲ್ಪಟ್ಟ ಈ ವಿಲಾಸವೆಲ್ಲವೂ ಈಗಲಾದರೇ ಜಾಗ್ರದ್ರೂಪವಾಗಿಯೇ ಇದ್ದುಕೊಂಡಿದೆ. ಅಥವಾ ಈ ಮಾಯೆಯು ಯಾರಿಂದ ಯಾವ ನಿಮಿತ್ತದಿಂದ ಏತಕ್ಕೋಸ್ಕರವಾಗಿ ಆವಿರ್ಭವಿಸಿ ಹೀಗೆ ವಿಜೃಂಭಿಸುತ್ತಲಿರುವುದೋ? ಅಯ್ಯೋ! ನನಗೆ ಒಂದೂ ಗೊತ್ತಾಗುವುದಿಲ್ಲವಲ್ಲಾ!!

೩೨. ಅಹಹ! ಇದೇನು ಆಶ್ಚರ್ಯ!! ಅತಿ ದೀರ್ಘವಾಗಿ ಪ್ರಸರಿಸುತ್ತಿರುವ ಈ ಮನೋ ಭ್ರಾಂತಿಯು ಒಂದು ಸಣ್ಣ ಹಕ್ಕಿಯನ್ನು ಬಲೆಯು ವಶಪಡಿಸಿಕೊಳ್ಳುವಂತೆ ನನ್ನನ್ನು ಸ್ವಾಧೀನಪಡಿಸಿಕೊಂಡಿರುವುದಲ್ಲಾ!

೩೩. ಅಯ್ಯೋ, ಕಷ್ಟ, ನನ್ನ ಈ ಹಾಳು ಮನಸ್ಸನ್ನು ಸುಡಬೇಕು. ಕೇವಲ ಸಣ್ಣ ವಯಸ್ಸಿನ ಬಾಲಕನ ಮನಸ್ಸಿನಂತೆ ಈ ನನ್ನ ಮನಸ್ಸು ಅಪ್ರಬುದ್ಧವಾಗಿಯೂ, ವಾಸನಾವಶತೆಯಿಂದ ಹಾಳಾಗಿಯೂ ಇರುವುದಲ್ಲಾ! ಹೀಗೆ ಅತಿವಿಸ್ತೃತಗಳಾದ ಭ್ರಮಜಾಲಗಳನ್ನು ಕಾಣುತ್ತಿರುವುದಲ್ಲಾ!!

೩೪. ಅಹಹ!! ಈಗ ನೆನಪಾಯಿತು. ಇದೆಲ್ಲವೂ ಆ ಮಹಾ ವಿಷ್ಣುವಿನಿಂದ ನನಗೆ ತೋರಿಸಲ್ಪಟ್ಟ ಮಹಾ ಮಾಯೆಯೇ ಎಂಬುದು ಈಗ ನನಗೆ ಚೆನ್ನಾಗಿ ತಿಳಿಯಿತು. ಇದು ಸತ್ಯವು!

ತದಿದಾನೀಂ ತಥಾ ಯತ್ನಂ ಕರಿಷ್ಯೇ ಗಿರಿಕಂದರೇ ।
ಯಥಾ ಕುಸಂಭ್ರಮಸ್ಯಾಸ್ಯ ಜಾನೇ ಜನ್ಮ ತಥಾ ಸ್ಥಿತಿಂ ॥ ೩೫ ॥

ಇತಿ ಸಂಚಿಂತ್ಯ ನಗರಾದ್ಗಾಧಿಸ್ತಸ್ಮಾಜ್ಜಗಾಮ ಹ ।
ಕಂದರಂ ಪ್ರಾಪ್ಯ ಶೈಲಸ್ಯ ತಸ್ಥೌ ವಿಶ್ರಾಂತ ಸಿಂಹವತ್ ॥ ೩೬ ॥

ತತ್ರ ಸಂವತ್ಸರಂ ಸಾರ್ಧಂ ಪಯಶ್ಚುಲುಕಭೋಜನಂ ।
ತಪಶ್ಚಕ್ರೇ ಮಹಾತೇಜಾಸ್ತುಷ್ಟಯೇ ಶಾರ್ಙ್ಗಧನ್ವನಃ ॥ ೩೭ ॥

ಅಥಾಸ್ಯ ಪುಂಡರೀಕಾಕ್ಷಃ ಪಯೋಮೂರ್ತಿರುಪಾಯಯೌ ।
ಪ್ರಸಾದಮುತ್ಪಲಶ್ಯಾಮಃ ಶರದೀವ ಮಹಾಹ್ರದಃ ॥ ೩೮ ॥

---

೩೫. ಆದುದರಿಂದ, ಈ ದುಷ್ಟವಾದ ಚಿತ್ತ ವಿಭ್ರಮವು ಹೇಗೆ ಹುಟ್ಟಿತೋ ಮತ್ತು ಹೇಗೆ ನೆಲೆಸಿರುವುದೋ ಅದನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದಕ್ಕೋಸ್ಕರ ಈ ಹಿಮವತ್ಪರ್ವತದ ಗುಹೆಯಲ್ಲಿ ತಕ್ಕ ಪ್ರಯತ್ನ ಮಾಡುವೆನು. (ಎಂದು ಗಾಧಿಯು ಮನಸ್ಸಿನಲ್ಲಿ ಯೋಚಿಸಿದನು.)

ಶ್ರೀ ವಸಿಷ್ಠನು ಹೇಳಿದನು :—

೩೬. ಅಯ್ಯ ರಾಮ, ಗಾಧಿಯು ಈರೀತಿಯಾಗಿ ಯೋಚಿಸಿ, ಕೂಡಲೆ ಆ ನಗರದಿಂದ ಹೊರಟುಬಿಟ್ಟನು. ಆಮೇಲೆ ಹಿಮವತ್ಪರ್ವತದ ಗುಹೆಯನ್ನು ಸೇರಿ, ವಿಶ್ರಾಂತಿಯನ್ನು ಅನುಭವಿಸುತ್ತಿರುವ ಸಿಂಹದಂತೆ ಅಲ್ಲಿಯೇ ಸ್ಥಿರವಾಗಿ ನಿಂತನು.

೩೭. ಆ ಹಿಮಾದ್ರಿಯ ತಪ್ಪಲಿನಲ್ಲಿ ಮಹಾ ತೇಜಸ್ವಿಯಾದ ಆ ಗಾಧಿಯು ಮಹಾ ವಿಷ್ಣುವಿನ ಅನುಗ್ರಹವನ್ನು ಪಡೆಯುವುದಕ್ಕೋಸ್ಕರ ಒಂದೂವರೆ ವರ್ಷ ಕಾಲ, ಒಂದು ಆಪೋಶನದಷ್ಟು ಮಾತ್ರ ಆಹಾರ ಮಾಡುತ್ತಾ ಮಹತ್ತರವಾದ ತಪಸ್ಸಿನಲ್ಲಿ ನಿಂತನು.

೩೮. ಆ ಬಳಿಕ, ಉದಕವೇ ಸ್ವರೂಪವಾಗಿ ಉಳ್ಳ ಒಂದು ಅಗಾಧವಾದ ಜಲಾಶಯವು ಶರದೃತುವಿನಲ್ಲಿ ಪ್ರಸನ್ನತೆ (ಸ್ವಚ್ಛತೆ)ಯನ್ನು ಪಡೆಯುವಂತೆ ಹಾಲಿನಂತೆ ಪ್ರಸಾದ ಸ್ವಭಾವ ಮೂರ್ತಿಯಾಗಿ, (ಕರುಣಾರಸ ಸಾಗರನಾದ) ಕನ್ನೈದಿಲೆಯಂತೆ ನೀಲವರ್ಣನಾದ ಮತ್ತು ಪುಂಡರೀಕಾಕ್ಷ (ಕಮಲ ನೇತ್ರ)ನಾದ ಶ್ರೀಮನ್ನಾರಾಯಣನು ಆ ಗಾಧಿಯ ತಪಸ್ಸಿಗೆ ಸುಪ್ರೀತನಾಗಿ ಪ್ರಸನ್ನನಾದನು.

ತಮಾಜಗಾಮ ಶೈಲೇಂದ್ರಕಂದರಂ ದ್ವಿಜಮಂದಿರಂ ।
ಪಯೋಧರವದಚ್ಛಾಚ್ಛಚ್ಛವಿರ್ವ್ಯೋಮನ್ಯಥಾವಸತ್ ॥ ೩೯ ॥

ಶ್ರೀ ಭಗವಾನುವಾಚ:....
ಗಾಧೇ ಕಚ್ಚಿತ್ತ್ವಯಾ ದೃಷ್ಟಾ ಮಾಯಾ ಮಮ ಗರೀಯಸೀ ।
ದೃಷ್ಟಂ ತ್ವಯಾ ಜಗಜ್ಜಾಲಚೇಷ್ಟಿತಂ ದೈಷ್ಟಿಕಾತ್ಮಕಂ ॥ ೪೦ ॥

ಚಿರಾತ್ಪ್ರಾಭಿಗತ ಏತಸ್ಮಿನ್ಪ್ರಾಪ್ತೇ ಸಮ್ಯಗನಿಂದಿತಃ ।
ತಪ್ತೋ ಗಿರಿತಟೇ ಕುರ್ವನ್ಕಿಮನ್ಯದಭಿವಾಂಛಸಿ ॥ ೪೧ ॥

ಶ್ರೀ ವಸಿಷ್ಠ ಉವಾಚ—
ಏವಂ ವದಂತಮಾಲೋಕ್ಯ ಹರಿಂ ಗಾಧಿರ್ದ್ವಿಜೋತ್ತಮಃ ।
ಅರ್ಚಾಂ ಕುಸುಮಪೂರೇಣ ಪಾದಯೋಃ ಪರ್ಯಪೂರಯತ್ ॥ ೪೨ ॥

ದತ್ತ್ವಾರ್ಘ್ಯಂ ಕೀರ್ಣಕುಸುಮಃ ಪ್ರಣಮ್ಯಾಶು ಪ್ರದಕ್ಷಿಣೈಃ ।
ವಿಷ್ಣುಮಾಹ ದ್ವಿಜೋ ವಾಕ್ಯಮಂಭೋದಮಿವ ಚಾತಕಃ ॥ ೪೩ ॥

---

೩೯. ಅನಂತರ, ಆ (ಗಾಧಿ) ಬ್ರಾಹ್ಮಣನು ವಾಸಮಾಡಿಕೊಂಡಿದ್ದ ಪರ್ವತದ ಗುಹೆಗೆ ಮಹಾ ವಿಷ್ಣುವು ಬಂದನು. ಮತ್ತು ನೀಲ ಮೇಘದಂತೆ ನಿರ್ಮಲತರವಾದ ದೇಹಕಾಂತಿಯುಳ್ಳವನಾಗಿ ಆಕಾಶದಲ್ಲಿ ನಿಂತನು. (ಅಥವಾ ಆಕಾಶದಲ್ಲಿ ಮೇಘದಂತೆ ನಿಂತನು).

ಶ್ರೀ ಭಗವಂತನು ಹೇಳಿದನು :—

೪೦. ಅಯ್ಯ ಗಾಧಿ, ನೀನು ನನ್ನ ಗುರುತರವಾದ ಮಹಾ ಮಾಯೆಯನ್ನು ನೋಡಿದೆಯಾ ಏನು? ದೈವವೇ (ವಿಧಿಯೇ) ಪ್ರತೀತಿ ನಿಮಿತ್ತವಾಗುಳ್ಳ ಈ ಜಗಜ್ಜಾಲದ ವ್ಯವಹಾರ ಸ್ವರೂಪವು ನಿನಗೆ ಸ್ಪಷ್ಟವಾಗಿ ಗೋಚರವಾಯಿತೇನು?

೪೧. ನೀನು ಹಿಂದೆ ತಪಸ್ಸು ಮಾಡಿದಾಗ ಪ್ರಾರ್ಥಿಸಿಕೊಂಡ ಮನಸ್ಸಿನ ಅಭಿಲಷಿತಾರ್ಥವು ಈಡೇರಿದ ಮೇಲೆಯೂ ಕೂಡ, ಈಗ ಪುನಃ ವಿಶೇಷ ನಿಯಮಗಳಿಂದ ಶುದ್ಧನಾಗಿ ಈ ಗಿರಿ ತಟದಲ್ಲಿ ತಪಸ್ಸು ಮಾಡುತ್ತ ಮತ್ತೇನನ್ನು ಅಪೇಕ್ಷಿಸುವೆ? ಹೇಳು.

ಶ್ರೀ ವಸಿಷ್ಠನು ಹೇಳಿದನು :—

೪೨-೪೩. ರಾಮ, ಹೀಗೆ ಮಾತನಾಡಿದ ಶ್ರೀ ಹರಿಯನ್ನು ನೋಡಿ,

ಗಾಧಿರುವಾಚ: —

ದೇವ ಯೈಷ ತ್ವಯಾ ಮಾಯಾ ದರ್ಶಿತಾತಿತಮೋಮಯೀ ।
ಮಹೀಂ ಪ್ರಾತರಿವಾದಿತ್ಯಸ್ತಾಂ ಮೇ ಪ್ರಕಟಿತಾಂ ನಯ ॥ ೪೪ ॥

ಭ್ರಮಂ ಯಂ ಪಶ್ಯತಿ ಮನೋ ವಾಸನಾಮಲಮಾಲಿತಂ ।
ಸ್ವಪ್ನವತ್ಸ ಕಥಂ ದೇವ ಜಾಗ್ರತ್ಯಪಿ ಹಿ ದೃಶ್ಯತೇ ॥ ೪೫ ॥

ಮುಹೂರ್ತಮುಪಲಬ್ಧಶ್ಚ ಜಲಾಂತಃ ಸ್ವಪ್ನವಿಭ್ರಮಃ ।
ಕಥಂ ಪ್ರತ್ಯಕ್ಷತಾಂ ಪ್ರಾಪ್ತೋ ಮಮಾಮಲ ಪದಾಸ್ಪದ ॥ ೪೬ ॥

ಬ್ರಾಹ್ಮಣೋತ್ತಮನಾದ ಗಾಧಿಯು ತಾನು ನಿತ್ಯವೂ ಪೂಜೆ ಮಾಡುತ್ತಿದ್ದ ವಿಷ್ಣು ಪ್ರತಿಮೆಯನ್ನು ಪಾದಗಳ ಮೇಲೆ ಪುಷ್ಪರಾಶಿಯಿಂದ ತುಂಬಿಸಿ ಪೂಜೆ ಮಾಡಿದನು. ಬಳಿಕ ಉತ್ತರಾರ್ಘ್ಯವನ್ನು ಕೊಟ್ಟು ಪುಷ್ಪಾಂಜಲಿಗಳನ್ನು ಸಮರ್ಪಿಸಿ ಬೇಗ ಬೇಗನೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ತನ್ನ ಪೂಜೆಯನ್ನು ಮುಗಿಸಿಕೊಂಡು, ಚಾತಕ ಪಕ್ಷಿಯು ಮೇಘವನ್ನು ಬೇಡಿಕೊಳ್ಳುವಂತೆ, ಆ ಬ್ರಾಹ್ಮಣನು ಸಾಕ್ಷಾತ್ತಾಗಿ ಎದುರಿಗೆ ಬಂದು ನಿಂತಿರುವ ಮಹಾವಿಷ್ಣುವನ್ನು ಈರೀತಿಯಾಗಿ ಪ್ರಾರ್ಥಿಸಿಕೊಂಡನು.

ಗಾಧಿಯು ಹೇಳಿದನು :—

೪೪. ಎಲೈ ದೇವದೇವ, ನೀನು ನನಗೆ ಅತ್ಯಂತ ತಮೋಮಯವಾದ (ಭ್ರಾಂತಿ ಅಥವಾ ಅಜ್ಞಾನಮಯ) ಯಾವ ಈ ಮಾಯೆಯನ್ನು ತೋರಿಸಿದೆಯೋ ಅದನ್ನು, ಪ್ರಾತಃಕಾಲದಲ್ಲಿ ಸೂರ್ಯನು ಭೂಮಿಯನ್ನು ಪ್ರಕಾಶಗೊಳಿಸುವಂತೆ, ಈಗ ನೀನು ಸ್ಪಷ್ಟವಾಗಿ ನನಗೆ ಪ್ರಕಟಪಡಿಸುವವನಾಗಬೇಕು.

೪೫. ವಾಸನಾಜಾಲವೆಂಬ ಮಲದರಾಶಿಯಿಂದ ದೂಷಿತವಾದ ನನ್ನ ಮನಸ್ಸು ಸ್ವಪ್ನದಲ್ಲಿ ಕಂಡಂತೆ, ಯಾವ ಮಿಥ್ಯಾವಿಷಯಜಾತಾತ್ಮಕ ಭ್ರಮೆಯನ್ನು ಕಾಣುವುದೋ ಅದು ಜಾಗ್ರತ್ತಿನಲ್ಲಿಯೂ ಕೂಡ ಸತ್ಯವಾಗಿಯೇ ಕಾಣುತ್ತಿರುವುದಲ್ಲಾ ಇದು ಹೇಗೆ?

೪೬. ಅವಿದ್ಯಾದಿ ಮಲರಹಿತವಾದ ಪರಮಪದದಲ್ಲಿ ಪ್ರತಿಷ್ಠಿತನಾದ ಹೇ ಸ್ವಾಮಿಯೇ, ನಾನು ಒಂದು ಮುಹೂರ್ತಕಾಲ ಜಲಾನ್ತರ್ಗತನಾಗಿದ್ದುಕೊಂಡೇ

ದೈರ್ಘ್ಯಾದೈರ್ಘ್ಯೇಽಸ್ಯ ಕಾಲಸ್ಯ ಶರೀರಸ್ಯ ಭವಾಭವಾಃ ।
ಕಥಮಂತಃಸ್ಥಿತಾ ನ ಸ್ಯುರ್ಮದೀಯೈಃ ಶ್ವಪಚಭ್ರಮೈಃ ॥ ೪೭ ॥

ಶ್ರೀ ಭಗವಾನುವಾಚ :—

ಗಾಧೇ ಸ್ವಾಧಿ ವಿಧೂತಸ್ಯ ಸ್ವರೂಪಸ್ಯೈತದಾತ್ಮಕಂ ।
ಚೇತಸೋಽ ದೃಷ್ಟ ತತ್ತ್ವಸ್ಯ ಯತ್ಪಶ್ಯತ್ಯುರು ವಿಭ್ರಮಂ ॥ ೪೮ ॥

ನೋಡಿ ಅನುಭವಿಸಿದ ಸ್ವಪ್ನವಿಭ್ರಮವು ಆಮೇಲೆ ನನಗೆ ಈಗ ಪ್ರತ್ಯಕ್ಷವಾಗಿಯೇ ಕಾಣುತ್ತಿರುವ ಈ ಬಗೆ ಯಾವುದು ?

೪೭. ನನ್ನ ಸಂಬಂಧವಾದ ಶ್ವಪಚತ್ವಾದಿ ಭ್ರಾಂತಿಗಳಾದ ಕಲ್ಪಿತವಾದ ಈ ಕಾಲದೀರ್ಘತ್ವ ಹ್ರಸ್ವತ್ವಗಳೂ ಅಂತೆಯೇ ಆ ಶರೀದ ಉತ್ಪತ್ತಿವಿನಾಶಗಳೂ ಇವುಗಳೆಲ್ಲವೂ ಮನಸ್ಸಿನಲ್ಲಿ ಮಾತ್ರವೇ ಇದ್ದುಕೊಂಡಿಲ್ಲವಲ್ಲಾ ! ಅವು ಹೊರಗೆ ಕೂಡ ಇದ್ದುಕೊಂಡಿರುವುದು ಹೇಗೆ? (ನಾನು ಅನೇಕ ವರ್ಷ ಶ್ವಪಚನಾಗಿದ್ದು ಕೊಂಡು, ಎಂಟುವರ್ಷ ದೊರೆತನವನ್ನು ಅನುಭವಿಸಿದಂತೆ ಕಂಡದ್ದು ನೀರಿನೊಳಗೆ, ಅದೂ ನನ್ನ ಮನಸ್ಸಿನಲ್ಲಿ, ಸ್ವಪ್ನದಲ್ಲಿ ಕಂಡಂತೆ, ಅಷ್ಟುದೀರ್ಘಕಾಲದ ಶ್ವಪಚತ್ವ, ರಾಜತ್ವಾದಿಗಳನ್ನು ಒಂದು ಮುಹೂರ್ತದೊಳಗೆ ನನ್ನ ಮನಸ್ಸಿನಲ್ಲಿಯೇ ಕಂಡ ಬಗೆ ಹೇಗೆ? ಮತ್ತು) ಈ ಶರೀರವಿದ್ದಾಗಲೇ, ಇದು ಸತ್ತುಹೋದುದನ್ನೂ ಪುನಃ ಶ್ವಪಚ ಜನ್ಮ ಪಡೆದುದನ್ನೂ ಕಂಡದ್ದು ಹೇಗೆ? ಮನೋಭ್ರಾಂತಿಯಿಂದ ಮನಸ್ಸಿನೊಳಗೆ ಕಂಡದ್ದು ಮನಸ್ಸಿನಲ್ಲಿ ಮಾತ್ರವೇ ಗೋಚರಿಸದೆ, ಹೊರಗಣ ಪ್ರಪಂಚದಲ್ಲಿಯೂ ಅದೇ ರೀತಿಯಲ್ಲಿಯೇ ಅನುಭವಕ್ಕೆ ಬರುತ್ತಿರುವುದಕ್ಕೆ ಕಾರಣವೇನು ? ಇದನ್ನು ದಯೆಮಾಡಿ ತಿಳಿಸಬೇಕು.

ಶ್ರೀ ಭಗವಂತನು ಹೇಳಿದನು:—

೪೮. ಎಲೈ ಗಾಧಿಯೇ, ನೀನು ಯಾವ ಮಹಾ ಜಗದ್ವಿಭ್ರಮವನ್ನು ಕಾಣು ವೆಯೋ ಅದೆಲ್ಲವೂ ಆತ್ಮತತ್ವಜ್ಞಾನವನ್ನು ಕಾಣದಿರುವ ಕಾರಣದಿಂದಲೇ ತನ್ನೊಳಗಿರುವ ವಾಸನಾರೋಗಗಳಿಂದಚಂಚಲವಾಗುತ್ತಿರುವ ಚಿತ್ತಭಾವಾಪನ್ನವಾದ ಆತ್ಮಸ್ವರೂಪವಾದ ರೂಪವೇ ಹೀಗೆ ಭಾಸಿಸುವುದೇ ಹೊರತು ವಸ್ತುತಃ ಅದೆಂದೂ ಒಳಗೂ ಇಲ್ಲವು, ಹೊರಗೂ ಇಲ್ಲವು. ಅಥವಾ ಅಲ್ಪವೂ ಇಲ್ಲ, ದೀರ್ಘವೂ ಇಲ್ಲ.

ಬಹಿರ್ನ ಕಿಂಚಿದಪ್ಯಸ್ತಿ ಖಾದ್ರ್ಯಬ್ಧ್ಯುರ್ವೀದಿಗಾದಿಕಂ ।
ಏತತ್ಸ್ವಚಿತ್ತ ಏವಾಸ್ತಿ ಪತ್ರ ಪುಂಜ ಮಿವಾಂಕುರೇ ॥ ೪೯ ॥

ಫಲಾದಿ ಸ್ಫಾರತಾಮೇತಿ ಯಥೈವ ಬಹಿರಂಕುರಾತ್ ।
ಬಹಿಃ ಪ್ರಕಟತಾಂ ಯಾತಿ ತಥಾ ಪೃಥ್ವ್ಯಾದಿ ಚೇತಸಃ ॥ ೫೦ ॥

ಸತ್ಯಂ ಪೃಥ್ವ್ಯಾದಿ ಚಿತ್ತಸ್ಥಂ ನ ಬಹಿಷ್ಠಂ ಕದಾಚನ ।
ಅಂಕುರಸ್ಥಃ ಪಲ್ಲವಸ್ತು ತಸ್ಮಾದ್ಯಸ್ಮಾತ್ಫಲಶ್ರಿಯಃ ॥ ೫೧ ॥

ರೂಪಾಲೋಕ ಮನಸ್ಕಾರ ತತ್ತಾಕಾಲ ಕ್ರಿಯಾತ್ಮಕಂ ।
ಕುಂಭಕಾರೋ ಘಟಮಿವ ಚೇತೋ ಹಂತಿ ಕರೋತಿ ಚ ॥ ೫೨ ॥

---

೪೯. ಆಕಾಶ, ಪರ್ವತ, ಸಮುದ್ರ, ಭೂಮಿ, ದಿಕ್ಕು ಮೊದಲಾದವು ಒಂದೂ ಕೂಡ ಹೊರಗೆ ಇಲ್ಲವೇ ಇಲ್ಲ. ಒಂದು ಸಣ್ಣ ಅಂಕುರದೊಳಗೆ ಪತ್ರಪುಷ್ಪಾದಿಗಳ ಸಮೂಹವು ಅವ್ಯಕ್ತವಾಗಿ ಅತಿ ಸೂಕ್ಷ್ಮಸ್ಥಿತಿಯಲ್ಲಿ ಅಡಗಿಕೊಂಡಿರುವಂತೆ, ಇವೆಲ್ಲವೂ ನಿನ್ನ ಮನಸ್ಸಿನಲ್ಲಿಯೇ ಇರುವುದು.

೫೦. ಒಂದು ಅಂಕುರದ ಪೆಸೆಯಿಂದ, ಕಾಲಾಂತರದಲ್ಲಿ ಪುಷ್ಪಫಲಾದಿಗಳು ಹೇಗೆ ಹೊರಕ್ಕೆ ಬಂದು ಅತಿ ವಿಸ್ತಾರವಾಗಿ ಸ್ಫುರಿಸುವುವೋ ಹಾಗೆಯೇ ಈ ಪೃಥ್ವ್ಯಾದಿಗಳೂ ಚಿತ್ತದಿಂದ ಹೊರಗೆಬಂದು ವಿಶಾಲವಾಗಿ ಪ್ರಕಟವಾಗುವುವು.

೫೧. ಈ ಪೃಥಿವ್ಯಾದಿಗಳು ಸರ್ವದಾ ಚಿತ್ತದಲ್ಲಿಯೇ ಇರುವುವು. ಈ ಮಾತು ಸತ್ಯವು, ಇವು ಎಂದಿಗೂ ಹೊರಗೆ ಇರತಕ್ಕವು ಅಲ್ಲ, (ಅಂದರೆ ಚಿತ್ತದ ಹೊರಗೆ ಇಲ್ಲ.) ಯಾವ ಪಲ್ಲವದ ದೆಸೆಯಿಂದ ಮುಂದೆ ಫಲಪುಷ್ಪ ಸಮೃದ್ಧಿಗಳು ಕಾಣುವುವೋ ಅಂತಹ ಪಲ್ಲವವಾದರೋ ಅಂಕುರದೊಳಗೆಯೇ ಇದ್ದುಕೊಂಡಿರುವುದು. ಅದರಂತೆಯೇ ಪೃಥಿವ್ಯಾದಿಗಳೂ ಚಿತ್ತದೊಳಗೆಯೇ ಇರತಕ್ಕವುಗಳು.

೫೨. ಒಬ್ಬ ಕುಂಬಾರನು ಒಂದು ಗಡಿಗೆಯನ್ನು ನಿರ್ಮಾಣ ಮಾಡುವುದಕ್ಕೂ ಅದನ್ನು ಒಡೆದು ಹಾಕಿಬಿಡುವುದಕ್ಕೂ ಹೇಗೆ ಶಕ್ತನಾಗಿರುವನೋ, ಹಾಗೆಯೇ ಚಿತ್ತವು, ವರ್ತಮಾನ ಭವಿಷ್ಯತ್ ಭೂತ ವಿಷಯಗಳು, ತನ್ನಿ ರೂಪಕ ಕಾಲತ್ರಯಗಳು, ತದ್ವ್ಯಂಜಕ ಸೂರ್ಯ ಚಂದ್ರಾದಿ ಕ್ರಿಯೆ, ಇತ್ಯಾದ್ಯನೇಕಾತ್ಮಕವಾದ ಜಗತ್ತನ್ನು ತನ್ನೊಳಗೇ ಉಪಸಂಹಾರ ಮಾಡಲೂ, ಸೃಷ್ಟಿಮಾಡಲೂ ಬಲ್ಲುದು.

ಆಬಾಲಮೇತತ್ಪುರುಷೈಃ ಸರ್ವೈರೇವಾನುಭೂಯತೇ ।
ಸ್ವಪ್ನಭ್ರಮ ಮದಾವೇಗ ರಾಗರೋಗಾದಿ ದೃಷ್ಟಿಷು ॥ ೫೩ ॥

ಚಿತ್ತೇ ವೃತ್ತಾಂತ ಲಕ್ಷಾಣಿ ಸಂಸ್ಥಿತಾನ್ಯಾತ್ತವಾಸನೇ ।
ಪಾದಪೇ ಫಲ ಪುಷ್ಪಾಣಿ ಮೂಲಾಕ್ರಾಂತಾವನಾವಿವ ॥ ೫೪ ॥

ತ್ಯಕ್ತಾವನೇರ್ವಿಟಪಿನೋ ಭೂಯಃ ಪತ್ರಾಣಿ ನೋ ಯಥಾ ।
ನಿರ್ವಾಸನಸ್ಯ ಜೀವಸ್ಯ ಪುನರ್ಜನ್ಮಾದಿ ನೋ ತಥಾ ॥ ೫೫ ॥

[ವರ್ತಮಾನ ವಿಷಯೇ ಚಕ್ಷುರಾದಿನಾ ರೂಪಾಲೋಕಃ= ಎದುರಿಗೆ ಇರುವ ವಿಷಯದಲ್ಲಿ ಚಕ್ಷುರಾದೀಂದ್ರಿಯಗಳಿಂದ ರೂಪಾದಿಗಳನ್ನು ಗ್ರಹಿಸುವುದು. ಭಾವಿನಿ ಚ ಮನಸಾ ಸಮರ್ಥನಾತ್ ಮನಸ್ಕಾರಃ. ಭವಿಷ್ಯತ್ಕಾಲಿಕ ವಿಷಯದಲ್ಲಿ ಮನಸ್ಸಿನಿಂದ ಪರ್ಯಾಲೋಚಿಸುವುದರಿಂದ ಮನಸ್ಕಾರ. ಅತೀತೇ ಚ ಸ್ಮರ್ಯಮಾಣೇ ತತ್ತಾ. ಭೂತ ವಿಷಯವನ್ನು ಸ್ಮರಿಸುವುದರಲ್ಲಿ ತತ್ತಾ. ತನ್ನಿರೂಪಕಾಃ ತ್ರಿವಿಧಾಃ ಕಾಲಾಃ. ತದ್ವ್ಯಂಜಕಾಶ್ಚ ಸೂರ್ಯಾದಿ ಕ್ರಿಯಾ ಇತ್ಯೇವ ಮಾತ್ಮಕಂ ॥. ಹನ್ತಿ= ಸ್ವಾತ್ಮನಿ ಉಪಸಂಹರತಿ ॥ ಕರೋತಿ= ಸೃಜತಿ ಚ ॥ ತಾ. ಪ್ರ.]

೫೩. ಸ್ವಪ್ನದಲ್ಲಿಯೂ, ಮನೋಭ್ರಾಂತಿಯಲ್ಲಿಯೂ, ಚಿತ್ತೋದ್ರೇಕ(ಗರ್ವ) ಉಂಟಾದಾಗಲೂ ಗಾಬರಿ ಅಧಿಕವಾದಾಗಲೂ, ರಾಗಾಧಿಕ್ಯದಿಂದಲೂ, ರೋಗಬಾಧೆಯು ಹೆಚ್ಚಿದಾಗಲೂ ಇತ್ಯಾದಿ ಇನ್ನೂ ಇಂತಹ ಅನೇಕ ಸಂದರ್ಭಗಳಲ್ಲಿ ಕೇವಲ ಅಸತ್ಯವಾದ ವಸ್ತುಗಳನ್ನು ಬಾಲರಾದಿಯಾಗಿ ಸಕಲ ಜನಗಳೂ ಅನುಭವಿಸುವರು. ಅದು ಕಾರಣ ಇದು ಸರ್ವಾನುಭವಸಿದ್ಧವೆಂದು ತಿಳಿ.

೫೪. ಭೂಮಿಯೊಳಗೆ ಚೆನ್ನಾಗಿ ಬೇರುಬಿಟ್ಟುಕೊಂಡಿರುವ ವೃಕ್ಷದೊಳಗೆ ಪತ್ರ, ಪುಷ್ಪ, ಫಲಾದಿಗಳು ಸಮೃದ್ಧಿಯಾಗಿ ತುಂಬಿಕೊಂಡಿರುವಂತೆ, ವಾಸನಾಕ್ರಾಂತವಾದ ಚಿತ್ತದೊಳಗೆ ಲಕ್ಷಾಂತರ ವೃತ್ತಾಂತಗಳು ಹೇರಳವಾಗಿ ತುಂಬಿಕೊಂಡಿರುವುವು.

೫೫. ಅದೇ ಮರವು ಬುಡದಲ್ಲಿ ಕತ್ತರಿಸಲ್ಪಟ್ಟು ನಿರ್ಮೂಲವಾಗಿ ಉರುಳಿಕೊಂಡಾಗ ಅದರೊಳಗೆ ಪತ್ರ ಪುಷ್ಪ ಫಲಾದಿಗಳು ಪುನಃ ಹೇಗೆ ಸರ್ವಥಾ ಉದಯಿಸುವುದೇ ಇಲ್ಲವೋ ಹಾಗೆಯೇ ನಿರ್ವಾಸನವಾದ (ವಾಸನಾರಹಿತ) ಆತ್ಮನಿಗೆ ಪುನಃ ಜನನ ಮರಣಗಳೊಂದೂ ಇರುವುದಿಲ್ಲ.

ಯತ್ರಾನಂತ ಜಗಜ್ಜಾಲಂ ಸಂಸ್ಥಿತಂ ತೇನ ಚೇತಸಾ ।
ಶ್ವಪಚತ್ವಂ ಪ್ರಕಟಿತಂ ಯದಿ ಸದ್ವಿಸ್ಮಯೋಽತ್ರ ಕಿಂ ॥ ೫೬ ॥

ಆವಬದ್ಧಾ ಶ್ವಪಚತಾ ಪ್ರತಿಭಾಸವಶಾತ್ತ್ವಯಾ ।
ಯಥೈವಾನಲ್ಪ ಸಂರಂಭಾ ವಿಚಿತ್ರಾಧಿವಿಕಾರದಾ ॥ ೫೭ ॥

ತಥೈವಾತಿಥಿರಾಯಾತೋ ಭುಕ್ತವಾನ್ಸುಪ್ತವಾನ್ದ್ವಿಜಃ ।
ಕಥಾಂ ಕಥಿತವಾಂಶ್ಚೇತಿ ದೃಷ್ಟವಾನಸಿ ಸಂಭ್ರಮಂ ॥ ೫೮ ॥

ತಥೈವೋತ್ಥಾಯ ಗಚ್ಛಾಮಿ ಪ್ರಾಪ್ತೋಽಹಂ ಭೂತ ಮಂಡಲಂ ।
ಇಮೇ ಭೂತಾ ಇಮೇ ಗ್ರಾಮಾ ದೃಷ್ಟವಾನಸಿ ಸಂಭ್ರಮಂ ॥ ೫೯ ॥

ತಥೈವೇದಂ ಕಟಂಜಸ್ಯ ಪ್ರಾಕ್ತನಂ ಲುಠಿತಂ ಗೃಹಂ ।
ಜನ್ಯೈರುಕ್ತಂ ಕಟಂಜಸ್ಯ ದೃಷ್ಟವಾನಸಿ ಸಂಭ್ರಮಂ ॥ ೬೦ ॥

ತಥೈವ ಕೀರನಗರಂ ಪ್ರಾಪ್ತೋಽಸ್ಮಿ ಕಥಿತಂ ಚ ಮೇ ।
ಕೀರೈಃ ಶ್ವಪಚ ರಾಜತ್ವಂ ದೃಷ್ಟವಾನಸಿ ಸಂಭ್ರಮಂ ॥ ೬೧ ॥

---

೫೬. ಹೀಗಿರುವಾಗ, ಈ ನಿನ್ನ ಶ್ವಪಚತ್ವಾದಿ ವಿಭ್ರಮವು, ಮನಸಿನೊಳಗಿರುವ ಅನಂತವಾಸನಾಜಾಲದಲ್ಲಿ ಏಕದೇಶಪ್ರಕಟನವು, ಅಸಂಖ್ಯಾಪರಿಮಿತವಾಸನಾಜಾಲಗಳಿಂದ ಆವೃತವಾದ ಯಾವ ಮನಸ್ಸಿನ ಬಲದಿಂದ ನಿನಗೆ ಶ್ವಪಚತ್ವವನ್ನು ಪ್ರಕಟಿಸಿದ್ದೇ ಆದರೆ ಇದರಲ್ಲಿ ಆಶ್ಚರ್ಯವೇನಿರುವುದು ?

೫೭-೫೮ ನೀನು ಸತ್ಯವೆಂದೇ ಭಾವಿಸಿರುವ ಅತಿಥಿಯ ಆಗಮನ ಮುಂತಾದ ಮುಂದಿನ ವೈಚಿತ್ರ್ಯವೂ ಕೂಡ ನಿನ್ನ ಶ್ವಪಚತ್ವದಂತೆಯೇ, ನಿನ್ನ ಮನಸ್ಸೊಂದೇ ಹೊರತು ಒಂದೂ ಸತ್ಯವಲ್ಲ. ಹೇಗೆಂದರೆ, ಅತ್ಯಧಿಕವಾದ ಕ್ಷೋಭೆಗೆ ಹೇತುವಾಗಿಯೂ ನಾನಾ ವಿಚಿತ್ರಗಳಿಂದ ಮನೋವ್ಯಥೆಗಳನ್ನೂ ಮನೋವಿಕಾರಗಳನ್ನೂ ಉಂಟುಮಾಡತಕ್ಕುದುದಾಗಿಯೂ ಇದ್ದ ಶ್ವಪಚಾವಸ್ಥೆಯನ್ನು ನೀನು ಹೇಗೆ ನಿನ್ನ ಮನೋಭ್ರಾಂತಿಯು (ಅಜ್ಞಾನ) ವಶದಿಂದಲೇ ಅನುಭವಿಸಿದೆಯೋ, ಅದರಂತೆಯೇ, ಒಬ್ಬ ಬ್ರಾಹ್ಮಣನು ಅತಿಥಿಯಾಗಿ ಬಂದನೆಂಬುದನ್ನೂ, ಅವನು ಊಟಮಾಡಿ ನನ್ನ ಹತ್ತಿರವೇ ಮಲಗಿದನೆಂಬುದನ್ನೂ, ಕಥೆಯನ್ನು ಹೇಳಿದನೆಂಬುದನ್ನೂ ಇವೆಲ್ಲವನ್ನೂ ನೀನು ಮನೋಭ್ರಮಮೂಲಕವಾಗಿಯೇ ತಿಳಿದುಕೊಂಡಿರುವೆ.

೫೯-೬೧. ಇದರಂತೆಯೇ ಬಳಿಕ ನಾನು ಎದ್ದು ಹೊರಟೆನೆಂದೂ ಭೂತಗ್ರಾಮಕ್ಕೆ ಹೋದೆನೆಂದೂ ಇವೇ ಆ ಪ್ರಾಣಿಗಳೆಂದೂ ಇವೇ ಆ ಗ್ರಾಮಗಳೆಂದೂ ನೀನು

ಏವಂ ಸರ್ವಂ ತ್ವಯಾ ದೃಷ್ಟಂ ಮೋಹಜಾಲಂ ದ್ವಿಜೋತ್ತಮ ।
ಯತ್ಸತ್ಯಮಿತಿ ಜಾನಾಸಿ ಯಚ್ಚಾಸತ್ಯಮವೈಷಿ ಚ ॥ ೬೨ ॥

ವಾಸನಾವಲಿತಂ ಚೇತಃ ಕಿಂ ನಾಮಾಂತರ್ನ ಪಶ್ಯತಿ ।
ಸಾಧಿತಂ ದೃಶ್ಯತೇ ಸ್ವಪ್ನೇ ವರ್ಷಸಾಧ್ಯಂ ಪ್ರಯೋಜನಂ ॥ ೬೩ ॥

ನಾತಿಥಿರ್ನ ಚ ಭೂತಾಸ್ತೇ ನ ಕೀರಾಸ್ತೇ ನ ತತ್ಪುರಂ ।
ಸರ್ವಮೇತನ್ಮಹಾಬುದ್ಧೇ ವ್ಯಾಮೋಹಾದ್ದೃಷ್ಟವಾನಸಿ ॥ ೬೪ ॥

ಗಚ್ಛತಾ ಭವತಾ ಭೂತದೇಶಂ ಪಾಂಥೇನ ಕಂದರೇ ।
ಕಸ್ಮಿಂಶ್ಚಿದ್ವಿಪ್ರ ವಿಶ್ರಾಂತಂ ಕುರಂಗೇಣೇವ ಕಾನನೇ ॥ ೬೫ ॥

ತತ್ರೈವ ಭ್ರಮಮೂಢತ್ವಾದಿದಂ ತದ್ಭೂತ ಮಂಡಲಂ ।
ಇದಂ ತಚ್ಛ್ವಪಚಾಗಾರಮಿತಿ ದೃಷ್ಟಂ ನ ಸತ್ಯತಃ ॥ ೬೬ ॥

ಸಂಭ್ರಮವನ್ನು ನೋಡಿದೆ. ಇದು ಆ ಕಟಂಜನ ಗೃಹವೆಂದೂ, ಅದು ಜೀರ್ಣವಾಗಿ ಬಿದ್ದುಹೋಗಿರುವುದೆಂದೂ ಅಲ್ಲಿನ ಜನರು ಕಟಂಜನ ವೃತ್ತಾಂತವನ್ನು ಹೇಳಿದರೆಂದೂ ನಿನ್ನ ಮನೋಭ್ರಾಂತಿಯನ್ನೇ ನೋಡಿದೆ. ಹಾಗೆಯೇ, ನಾನು ಕೀರದೇಶದ ರಾಜಧಾನಿಗೆ ಹೋದೆನೆಂದೂ, ಅಲ್ಲಿನ ಕೀರಜನರು ಶ್ವಪಚನೊಬ್ಬನು ದೊರೆಯಾಗಿದ್ದುದನ್ನು ಹೇಳಿದರೆಂದೂ ನೀನು ನಿನ್ನ ಭ್ರಾಂತಿಯನ್ನೇ ಕಂಡವನಾದೆ.

೬೨. ಎಲೈ ದ್ವಿಜೋತ್ತಮನೇ, ಈ ಪ್ರಕಾರವಾಗಿ ನೀನು ಯಾವುದನ್ನು ಸತ್ಯವೆಂದು ತಿಳಿದಿರುವೆಯೋ ಮತ್ತು ಯಾವುದು ಅಸತ್ಯವೆಂದು ನಿನಗೆ ಗೊತ್ತಿದೆಯೋ ಅದೆಲ್ಲವೂ ನೀನು ಅನುಭವಿಸಿದ ಮೋಹಜಾಲವೇ ಸರಿ.

೬೩. ಅತಿದೃಢವಾದ ವಾಸನಾಕ್ರಾಂತವಾದ ಚಿತ್ತವು ತನ್ನೊಳಗೆ ಏನನ್ನು ತಾನೆ ನೋಡಲಾರದು ? ಅನೇಕ ವರ್ಷಕಾಲ ಕೆಲಸಮಾಡಿ ಸಾಧಿಸಬೇಕಾದ ಒಂದು ಕಾರ್ಯವು (ಪ್ರಯೋಜನವು) ಸ್ವಪ್ನದಲ್ಲಿ ಒಂದು ಕ್ಷಣದೊಳಗೆ ಸುಲಭವಾಗಿ ಸಾಧಿತವಾದುದು ಕಾಣುವುದಲ್ಲವೇ ?

೬೪. ವಸ್ತುತಃ ವಿಚಾರ ಮಾಡಿದರೋ ಆ ಅತಿಥಿಯೂ ಇಲ್ಲ, ಪ್ರಾಣಿಗಳೂ ಇಲ್ಲ, ಕೀರ ದೇಶವೂ ಇಲ್ಲ, ರಾಜಧಾನಿಯೂ ಇಲ್ಲ. ಎಲೈ ಮಹಾಮತಿಯೇ, ಇದೆಲ್ಲವನ್ನೂ ನಿನ್ನ ವ್ಯಾಮೋಹದ ದೆಸೆಯಿಂದ ಮಾತ್ರವೇ ನೋಡಿದವನಾಗಿರುವೆ.

೬೫-೬೬. ನೀನು ಅತಿಥಿಯ ಕಥಾವೃತ್ತಾಂತವನ್ನು ಕೇಳಿದ ತರುವಾಯ,

ತಥೈವ ಕೀರನಗರಂ ದೃಷ್ಟವಾನಸಿ ತತ್ತಥಾ ।
ತದೈವ ಚಾನ್ಯದಾ ವಾಪಿ ಮಾಯಾರ್ಥಂ ಹಿ ಭವಾನ್ದ್ವಿಜ ॥ ೬೭ ॥

ಸರ್ವದೈವ ಸಮಗ್ರಾಸು ವಿಹರನ್ನಸಿ ದೃಷ್ಟವಾನ್ ।
ದಿಕ್ಷು ಪ್ರೋನ್ಮತ್ತಕ ಇವ ವಿಭ್ರಮಂ ಮನಸಾ ಮುನೇ ॥ ೬೮ ॥

ತದುತ್ತಿಷ್ಠ ನಿಜಂ ಕರ್ಮ ಕುರ್ವಂಸ್ತಿಷ್ಠೋಪಶಾಂತಧೀಃ ।
ನ ಸ್ವಕರ್ಮವಿನಾ ಶ್ರೇಯಃ ಪ್ರಾಪ್ನುವಂತೀಹ ಮಾನವಾಃ ॥ ೬೯ ॥

ಭೂತಗ್ರಾಮಕ್ಕೆ ಹೋಗಿ ಅಲ್ಲಿ ಎಲ್ಲವನ್ನೂ ಪ್ರತ್ಯಕ್ಷವಾಗಿ ಕಂಡೆನೆಂದು ತಿಳಿದು ಕೊಂಡಿರುವೆಯಷ್ಟೆ, ಅದೂ ಸರಿಯಲ್ಲ. ಅದೂ ಭ್ರಾಂತಿಯೇ ಸರಿ. ಏಕೆನ್ನು ವಿಯೋ, ಅಯ್ಯ ಬ್ರಾಹ್ಮಣ, ನೀನು ಅತಿಥಿಯ ವಾಕ್ಯವನ್ನು ಕೇಳಿ, ಭೂತ ಗ್ರಾಮಕ್ಕೆ ಹೊರಟವನು, ದಾರಿಯಲ್ಲಿ ಬಹು ದೂರ ಪ್ರಯಾಣ ಮಾಡುತ್ತಾ, ಅತಿಯಾಗಿ ಆಯಾಸಗೊಂಡು, ಒಂದು ದಣಿದ ಜಿಂಕೆಯು ತಣ್ಣಗಿರುವ ಕಾಡಿ ನೊಳಗೆ ವಿಶ್ರಮಿಸಿಕೊಳ್ಳುವಂತೆ, ನೀನು ಆ ಗುಹೆಯೊಳಗೆ ವಿಶ್ರಮಿಸಿಕೊಳ್ಳುತ್ತಾ ಬಿದ್ದುಕೊಂಡಿರುವಾಗಲೇ, ಅತ್ಯಾಯಾಸದಿಂದ ಪರವಶ (ಮೂಢ) ಚಿತ್ತನಾಗಿದ್ದ ಕಾರಣ, ಸ್ವಲ್ಪ ನಿದ್ರೆ ಬಂದವನಾಗಿ, ಸ್ವಪ್ನದಲ್ಲಿ, ಇದು ಆ ಭೂತಮಂಡಲ ಗ್ರಾಮವೆಂದೂ, ಇದು ಆ ಶ್ವಪಚ ಸಮೂಹವೆಂದೂ ಇತ್ಯಾದಿ ನಾನಾ ಬಗೆಗಳಾಗಿ ಭ್ರಾಂತಿಯಿಂದ ನೀನು ನೋಡಿದೆ. ಅಷ್ಟೇ ಹೊರತು, ನೀನು ಈಗ ಭಾವಿಸಿರು ವಂತೆ, ಭೂತಗ್ರಾಮ ಗಮನ ಪ್ರತ್ಯಕ್ಷ ದರ್ಶನಾದಿಗಳೊಂದೂ ಸತ್ಯವಲ್ಲ.

೬೭. ಅಯ್ಯ ಬ್ರಾಹ್ಮಣ, ನೀನು ಆ ಕೀರ ದೇಶದ ರಾಜಧಾನಿಯನ್ನೂ ಹಾಗೆಯೇ ಭ್ರಾಂತಿಯಿಂದಲೇ ಈಗ ನೋಡಿದವನಾದೆ. ನೀನು ಹಿಂದೆ ಒಂದು ಸಲ ನೋಡಿದ್ದುದೂ ಅಥವಾ ಮುಂದೆ ಯಾವಾಗಲಾದರೂ ಒಂದು ಕಾಲದಲ್ಲಿ ನೋಡತಕ್ಕುದೂ ಇವೆಲ್ಲವೂ ಕೇವಲ ಮಾಯಾಮಯವಾದುದೇಯೇ !

೬೮. ಎಲೈ ಮುನಿಯೇ, ಯಾವಾಗಲೂ ಕೂಡ, ನೀನು ಹೀಗೆ ಹುಚ್ಚನಂತೆ, ಎಲ್ಲ ದಿಕ್ಕುಗಳಲ್ಲಿಯೂ ಅಲೆಯುತ್ತಾ ನಿನ್ನ ಮನಸ್ಸಿನಿಂದಲೇ ನಾನಾ ಭ್ರಮೆಗಳನ್ನು ಕಂಡವನಾಗಿದ್ದೀಯೆ.

೬೯. ಇನ್ನು ನೀನು ಏಳು; ಪ್ರಶಾಂತ ಮನಸ್ಕನಾಗಿ, ನಿನ್ನ ವರ್ಣಾಶ್ರಮಾ ನುಸಾರವಾದ ನಿತ್ಯ ನೈಮಿತ್ತಿಕ ವಿಹಿತ ಕರ್ಮಗಳನ್ನು (ಶ್ರೌತ ಮತ್ತು ಸ್ಮಾರ್ತ) ಫಲಾಭಿಸಂಧಿ ಶೂನ್ಯನಾಗಿ ಪರಮೇಶ್ವರ ಪ್ರೀತ್ಯರ್ಥವಾಗಿ ಮಾಡಿಕೊಂಡಿರು.

ಶ್ರೀ ವಸಿಷ್ಠ ಉವಾಚ :—

ಇತಿ ನಿಗದಿತವಾಂಸ ಪದ್ಮನಾಭೋ ।
ಭುವನಗತಾಪಸ ವೃಂದ ಪೂಜ್ಯಮಾನಃ ॥
ವಿಬುಧ ಮುನಿಗಣೈಃ ಪವಿತ್ರ ಹಸ್ತೈ ।
ವೃತ ಉದಧಿಂ ನಿಜಮಾಸ್ಪದಂ ಜಗಾಮ ॥ ೭೦ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕೀಯೇ ಮೋಕ್ಷೋಪಾಯೇಷು ಉಪಶಮ ಪ್ರಕರಣೇ ಗಾಧಿ ವೃತ್ತಾಂತೇ "ಮಾಯಾ ಮಹತ್ತ್ವಕಥನಂ" ನಾಮಾಷ್ಟ ಚತ್ವಾರಿಂಶಃ ಸರ್ಗಃ.

ಲೋಕದಲ್ಲಿ ಸ್ವಕರ್ಮಾನುಷ್ಠಾನವನ್ನು ಬಿಟ್ಟು, ಯಾವ ಮನುಷ್ಯನೂ ಎಂದಿಗೂ ಸರ್ವಥಾ ಶ್ರೇಯಸ್ಸನ್ನು ಹೊಂದಲಾರನು. (ಸ್ವಕರ್ಮತ್ಯಾಗ ಮಾಡಿದರೆ, ಪ್ರತ್ಯವಾಯಕ್ಕೆ ಒಳಗಾಗಿ ಸರ್ವಾನರ್ಥ ಭಾಜನನಾಗುವನು.

[ನಿಯತಂ ಕುರು ಕರ್ಮತ್ವಂ ಕರ್ಮಜ್ಯಾಯೋಹ್ಯ ಕರ್ಮಣಃ ॥ ೩-೮. ಗೀತಾ. ತಸ್ಮಾದಸಕ್ತಸ್ಸತತಂ ಕಾರ್ಯಂ ಕರ್ಮ ಸಮಾಚರ ॥ ಅಸಕ್ತೋಹ್ಯಾಚರನ್‌ಕರ್ಮ ಪರಮಾಪ್ನೋತಿ ಪೂರುಷಃ. ಗೀತಾ. ೩-೧೯ ಯಜ್ಞೋದಾನಂ ತಪಶ್ಚೈವ ಪಾವನಾನಿ ಮನೀಷಿಣಾಂ. ಗೀತಾ. ೧೮-೫. ಯೋಗಿನಃ ಕರ್ಮ ಕುರ್ವಂತಿ ಸಂಗಂ ತ್ಯಕ್ತ್ವಾ ಆತ್ಮಶುದ್ಧಯೇ. ಗೀತಾ. ೫-೧೧. ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ಇತ್ಯಾದಿ ಭಗವದ್ವಚನಗಳನ್ನು ನೆನಪಿನಲ್ಲಿಡಿ].

ಶ್ರೀ ವಸಿಷ್ಠನು ಹೇಳಿದನು :—

೭೦. ಭುವನತ್ರಯದಲ್ಲಿರುವ ಸಕಲ ಋಷಿಗಳ ಸಮೂಹಗಳಿಂದಲೂ ಪೂಜಿಸಲ್ಪಡತಕ್ಕವನಾದ ಆ ಪದ್ಮನಾಭನು, ಈ ಪ್ರಕಾರವಾಗಿ ಆ ಗಾಧಿಯನ್ನು ಕುರಿತು ಉಪದೇಶ ಮಾಡಿದವನಾಗಿ ಬಳಿಕ ಪವಿತ್ರ ಪಾಣಿಗಳಾದ ನಾರದಾದಿ ಸಕಲ ಸುರರ್ಷಿ ಸಂಘಗಳಿಂದ ಪರಿವೃತನಾಗಿ ತನ್ನ ನಿವಾಸವಾದ ಕ್ಷೀರ ಸಮುದ್ರವನ್ನು ಕುರಿತು ಹೊರಟುಹೋದನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ಮಹಾರಾಮಾಯಣದ ಉಪಶಮ ಪ್ರಕರಣದಲ್ಲಿ ಗಾಧಿ ವೃತ್ತಾಂತದೊಳಗೆ "ಮಾಯಾಮಹತ್ತ್ವ ಕಥನ" ಎಂಬ ನಲವತ್ತೆಂಟನೆಯ ಸರ್ಗವು

ಏಕೋನಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚ :—

ಅಥ ಗಾಧಿರ್ಗತೇ ವಿಷ್ಣೌ ಪುನರ್ಭೂತಾದಿಕಂ ಕ್ರಮಾತ್ ।
ಸ್ವಯಂ ಮೋಹವಿಚಾರಾರ್ಥಂ ಬಭ್ರಾಮಾಭ್ರಮಿವಾಂಬರೇ ॥ ೧ ॥

ಉಪಲಭ್ಯ ತಥೈವಾತ್ಮ ವೃತ್ತಾಂತಂ ಜನತಸ್ತತಃ ।
ಪರಿಮಾರಾಧಯಾಮಾಸ ಪುನರದ್ರಿ ಗುಹಾಂ ಗತಃ ॥ ೨ ॥

ನಲವತ್ತೊಂಭತ್ತನೆಯ ಸರ್ಗ

ಶ್ರೀ ವಸಿಷ್ಠನು ಹೇಳಿದನು :—

೧. ರಾಮ, ಹೀಗೆ ಹೇಳಿ, ಮಹಾವಿಷ್ಣುವು ಹೊರಟುಹೋಗಲಾಗಿ, ಆ ಗಾಧಿಯು ಪುನಃ, (ಹಿಂದೆ ತಾನು ಅನುಭವಿಸಿದುದೆಲ್ಲವೂ ಕೇವಲ ಮಾಯಾ ರೂಪವಾದ ಆತ್ಮ ಚಿತ್ತಭ್ರಮೆಯೇ ಎಂದು ಶ್ರೀ ಭಗವಂತನು ಹೇಳಿದ) ಮೋಹಸ್ವರೂಪವನ್ನು ಸ್ವತಃ ವಿಚಾರ ಮಾಡಿ ತಿಳಿಯುವುದಕ್ಕಾಗಿ, ಆಕಾಶದಲ್ಲಿ ಮೇಘವು ಭ್ರಮಿಸುವಂತೆ, ಭೂತಗ್ರಾಮಾದಿ ಪ್ರದೇಶಗಳಲ್ಲೆಲ್ಲ ತಿರುಗಿದನು.

(ಗಾಧಿಯ ಮನಸ್ಸಿನಲ್ಲಿ ಅಸಂಭಾವನಾ, ವಿಪರೀತಾರ್ಥಭಾವನಾರೂಪ ಮಾಲಿನ್ಯವು ದೃಢವಾಗಿದ್ದುದರಿಂದ ಭಗವಂತನ ಉಪದೇಶದಲ್ಲಿ ಪ್ರತಿಪತ್ತಿಯನ್ನು ಪಡೆಯದೆ, ಜಗತ್ತಿಗೆಲ್ಲ ಅಧಿಷ್ಠಾನವಾದ ಆತ್ಮತತ್ತ್ವ ಸಾಕ್ಷಾತ್ಕಾರವಿಲ್ಲದೆಯೇ ಪೂರ್ವಾನುಭೂತ ದೇಹಾದಿಗಳ ಬಾಧವು (ನಿವೃತ್ತಿ-ನಾಶ) ಆಗುವುದೋ ಅಥವಾ ಇಲ್ಲವೋ ಎಂಬುದನ್ನು ಸ್ವತಃ ಪರೀಕ್ಷಿಸಿ ಅನುಭವಿಸುವ ಇಚ್ಛೆಯುಳ್ಳವನಾಗಿ ಪುನಃ ಆ ದೇಶಗಳಲ್ಲೆಲ್ಲ ಭ್ರಮಿಸಿದನು. ತಾ. ಪ್ರ.)

೨. ಅಲ್ಲಿ ಪೂರ್ವದಂತೆಯೇ ಜನರ ಬಾಯಿಂದ ತನ್ನ ಶ್ವಪಚತ್ವಾದಿ ವೃತ್ತಾಂತವನ್ನು ಅದೇ ಪ್ರಕಾರದಿಂದ ಸಮಗ್ರವಾಗಿ ಕೇಳಿ, ಲಕ್ಷಣಗಳಿಂದ ನೋಡಿ ತಿಳಿದುಕೊಂಡು, (ಭಗವಂತನ ವಾಕ್ಯ ತಾತ್ಪರ್ಯ ಬೋಧೆಗೋಸ್ಕರ) ಪುನಃ ಪರ್ವತದ ಗುಹೆಗೆ ಹೋಗಿ ಶ್ರೀ ಹರಿಯನ್ನು ಮತ್ತೆ ಆರಾಧನೆ ಮಾಡಿದನು.

ಆಜಗಾಮೈನಮಲ್ಪೇನ ಕಾಲೇನಾಥ ಜನಾರ್ದನಃ ।
ಸಕೃದಾರಾಧನೇನೈವ ಮಾಧವೋ ಯಾತಿ ಬಂಧುತಾಂ ॥ ೩ ॥

ಉವಾಚ ಗಾಧಿಂ ಭಗವಾನ್ಮಯೂರಮಿವ ವಾರಿದಃ ।
ಕಿಂ ತ್ವಂ ಪ್ರಾರ್ಥಯಸೇ ಭೂಯಸ್ತಪಸೇತಿ ಪ್ರಸಾದವಾನ್ ॥ ೪ ॥

ಗಾಧಿ ರುವಾಚ :—

ಭ್ರಾಂತೋಽಸ್ಮಿ ದೇವ ಷಣ್ಮಾಸಾನ್ಭೂತ ಕೀರ ಜನಾಸ್ಪದಂ ।
ತತ್ರ ವ್ಯಭಚರತ್ಯಸ್ಮಾದ್ವೃತ್ತಾಂತೋ ನ ಕಥಾಸ್ವಪಿ ॥ ೫ ॥

ಮಾಯಯಾ ಭೂತಭೂದ್ದೃಷ್ಟಾ ತ್ವಯೇತ್ಯುಕ್ತೋಽಸ್ಮಿ ಕಿಂ ಪ್ರಭೋ ।
ಮೋಹನಾಶಾಯ ಮಹತಾಂ ವಚೋ ನೋ ಮೋಹವೃದ್ಧಯೇ ॥ ೬ ॥

---

೩. ಅನಂತರ ಸ್ವಲ್ಪ ಕಾಲದೊಳಗಾಗಿ, ಶ್ರೀಹರಿಯು ಪ್ರಸನ್ನನಾಗಿ ಆ ಗಾಧಿಯ ಹತ್ತಿರಕ್ಕೆ ಹೋದನು. ಒಂದು ಸಲ ಭಕ್ತಿಯಿಂದ ಆರಾಧನೆ ಮಾಡಿದ ಮಾತ್ರದಿಂದಲೇ ಮಾಧವನು ಆರಾಧಕನ ಆತ್ಮೀಯಾಪ್ತ ಬಂಧುವಾಗಿಬಿಡುವನು. (ಭಕ್ತರಿಗೆ ಪರಮಾತ್ಮನು ಅಷ್ಟೊಂದು ಸುಲಭನೆಂದರ್ಥ).

೪. ಆಗ ಭಗವಂತನು ಗಾಧಿಯಲ್ಲಿ ವಿಶೇಷವಾಗಿ ಅನುಗ್ರಹವನ್ನಿಟ್ಟವನಾಗಿ, ಮೇಘವು ನವಿಲನ್ನು ತನ್ನ ದರ್ಶನದಿಂದ ಆಹ್ಲಾದಗೊಳಿಸುತ್ತಾ, ತನ್ನ ಗರ್ಜನೆಯೆಂಬ ಮಾತುಗಳಿಂದ ಮಾತನಾಡಿಸುವಂತೆ, ಅವನನ್ನು ಕುರಿತು. "ಎಲೈ ಗಾಧಿಯೇ ಮತ್ತೆ ತಪಸ್ಸು ಮಾಡಿ ನನ್ನಿಂದ ಏನನ್ನು ಪ್ರಾರ್ಥಿಸುವೆ?" ಎಂದು ಮಾತನಾಡಿಸಿದನು.

ಗಾಧಿಯು ಹೇಳಿದನು ;—

೫-೬. ಹೇ ದೇವ, ನಾನು ಆರು ತಿಂಗಳ ಕಾಲ ಪುನಃ (ನಿನ್ನಿಂದ ಉಪದಿಷ್ಟನಾದ ಮೇಲೆಯೂ) ಭೂತ ಗ್ರಾಮದಲ್ಲಿಯೂ ಕೀರ ದೇಶದಲ್ಲಿಯೂ ಸರ್ವತ್ರ ಅಲೆದಲೆದು ಬಂದಿರುವೆನು. ಅಲ್ಲಿ ಎಷ್ಟು ಹುಡುಕಿ ಪ್ರಯತ್ನಪಟ್ಟು ನೋಡಿದರೂ, ನನ್ನ ಪೂರ್ವಾನುಭೂತ ವೃತ್ತಾಂತವೆಲ್ಲವೂ, ಜನರ ಪ್ರವಾದಗಳಲ್ಲಿಯೂ, ಆಯಾ ಲಿಂಗಗಳು (ಲಕ್ಷಣ-ಚಿಹ್ನೆ) ಪ್ರತ್ಯಭಿಜ್ಞಾನ ಇತ್ಯಾದಿ ಸಂವಾದಗಳಲ್ಲಿಯೂ ಕೂಡ ಸ್ವಲ್ಪಮಾತ್ರವೂ ವ್ಯಭಿಚರಿತ (ವ್ಯತ್ಯಸ್ತ) ವಾಗದೆ ಏಕರೂಪವಾಗಿಯೇ ಈಗಲೂ

ಶ್ರೀ ಭಗವಾನುವಾಚ :—

ಕಾಕತಾಲೀಯ ಯೋಗೇನ ಚೇತಸಿ ಶ್ವಪಚಾ ಸ್ಥಿತಿಃ ।
ಸರ್ವೇಷಾಂ ಭೂತ ಕೀರಾಣಾಂ ತವೇವ ಪ್ರತಿಬಿಂಬತಿ　　|| ೭ ||

ತೇನಾಂಗ ತವ ವೃತ್ತಾಂತಂ ಯಥಾವತ್ಕಥಯಂತಿ ತೇ ।
ಪ್ರತಿಭಾಸೋ ಹಿ ಸಾಯಾತಿ ಪುನರಪ್ರತಿಭಾಸತಾಂ　　|| ೮ ||

ನಿಸ್ಸಂದೇಹವಾಗಿ ಬುದ್ಧಿಗೋಚರವಾಗುತ್ತಿರುವುದು. ಆದರೂ ಹೇ ಪ್ರಭೋ, ನೀನು ನನ್ನನ್ನು ಕುರಿತು, ನಾನು ಹಿಂದೆ ಭೂತಗ್ರಾಮಾದಿಗಳನ್ನು ಕಂಡು ಶ್ವಪಚತ್ವಾದಿಗಳನ್ನು ಅನುಭವಿಸಿದುದೆಲ್ಲವೂ ಮಾಯೆಯೇ ಎಂದು ಹೇಳಿದೆಯಲ್ಲ ಅದೇಕೆ? ಲೋಕದಲ್ಲಿ ಮಹಾತ್ಮರ ಉಪದೇಶವು ಮೋಹನಾಶಕ್ಕೆ ಹೇತುವಾಗ ಬೇಕೇ ಹೊರತು, ಮೋಹವೃದ್ಧಿಗೆ ಎಂದಿಗೂ ಹೇತುವಾಗಲಾರದಲ್ಲಾ! (ನೀನು ಹೇಳಿದುದು, ನನ್ನ ಅನುಭವಕ್ಕೆ ಕೇವಲ ವಿರುದ್ಧವಾಗಿರುವುದರಿಂದ ಅದರಲ್ಲಿ ನನಗೆ ಪ್ರತ್ಯಯವೇ ಹುಟ್ಟದಿರುವುದು. ಅದರ ತಥ್ಯಾಂಶವನ್ನು ದಯಮಾಡಿ ಮತ್ತೊಮ್ಮೆ ಅನುಗ್ರಹಿಸಬೇಕು ಎಂದು ಗಾಧಿಯು ಭಗವಂತನನ್ನು ಪ್ರಾರ್ಥಿಸಿದನು). (ಮಾಯಾದೃಷ್ಟವಾದ ವಸ್ತುಗಳು ಅತ್ಯವಶ್ಯವಾಗಿ ಕಾಲಾಂತರದಲ್ಲಿ ಇಲ್ಲವಾಗಿ ಬಿಡಬೇಕು. ನಾನು ನೋಡಿದುದಾದರೋ ಅವ್ಯಭಿಚಾರಿಗಳಾಗಿವೆ. ನೀನು ಹೇಳಿದಂತೆ ಇದೆಲ್ಲವೂ ಮಾಯೆಯೆಂದು ಅವಧರಿಸುವುದಕ್ಕೆ ಹೇಗೂ ಸಾಧ್ಯವೇ ಇಲ್ಲ. ನಿನ್ನ ಮಾತಿನಿಂದ ನನಗೆ ಮೋಹವು ಮತ್ತೂ ಹೆಚ್ಚುವುದೇ ಹೊರತು ಮೋಹನಾಶಕವಾಗಿಲ್ಲ, ಎಂಬುದು ಗಾಧಿಯ ತಾತ್ಪರ್ಯ).

ಶ್ರೀ ಭಗವಂತನು ಹೇಳಿದನು :—

೭. ಅಯ್ಯಾ ಗಾಧಿ, ನಿನ್ನ ಮನಸ್ಸಿನಲ್ಲಿ ಆ ಶ್ವಪಚತ್ವಾದಿ ಸ್ಥಿತಿಗಳು ಹೇಗೆ ಗೋಚರಿಸಿದುವೋ ಹಾಗೆಯೇ ಆ ಭೂತ ಗ್ರಾಮ, ಕೀರ ದೇಶಗಳಲ್ಲಿರುವ ಜನರಿ ಗೆಲ್ಲ ಮನಸ್ಸಿನಲ್ಲಿ ಒಟ್ಟಿಗೆ ನೀನು ಶ್ವಪಚತ್ವಾದಿ ಅವಸ್ಥೆಯನ್ನು ಅನುಭವಿಸಿದೆ ಯೆಂದು ಕಾಕತಾಳೀಯ ನ್ಯಾಯದಿಂದ ಅಪರೋಕ್ಷವಾಗಿ ಭ್ರಾಂತಿ ಮೂಲಕ ಪ್ರತಿ ಬಿಂಬಿಸಿ ಗೋಚರಿಸುತ್ತಿರುವುದು.

೮. ಅದು ಕಾರಣ ಆ ಜನಗಳು ನಿನ್ನ ಆ ಪೂರ್ವ ವೃತ್ತಾಂತವನ್ನು ನೀನು ಅನುಭವಿಸಿದಂತೆಯೇ ತಮ್ಮ ಭ್ರಾಂತಿಯಿಂದಲೇ ಹೇಳುವರು. ಒಂದು ಸಲ

ಕೇನಚಿಚ್ಛ್ವಪಚೇನಾಂತೇ ಗ್ರಾಮಸ್ಯ ರಚಿತಂ ಗೃಹಂ ।
ತತ್ತ್ವಯಾ ದೃಷ್ಟಮಾವಿಷ್ಟಮಿಷ್ಟಕಾ ಖಂಡತಾಂ ಗತಂ ॥ ೯ ॥

ಕದಾಚಿತ್ಪ್ರತಿಭೈಕೇವ ಬಹೂನಾಮಪಿ ಜಾಯತೇ ।
ಕಾಕೋಲತಾಲ ಸ್ಥಿತಿವದ್ವಿಚಿತ್ರಾ ಹಿ ಮನೋಗತಿಃ ॥ ೧೦ ॥

ತಥಾಹಿ ಬಹವಃ ಸ್ವಪ್ನಮೇಕಂ ಪಶ್ಯಂತಿ ಮಾನವಾಃ ।
ಸ್ವಾಪ ಭ್ರಮದವೈರೇಯ ಮದಮಂಥರ ಚಿತ್ತವತ್ ॥ ೧೧ ॥

ಒಂದು ವಿಧವಾಗಿ ಪ್ರತಿಭಾಸವುಂಟಾದರೆ ಅದು ಮತ್ತೆ (ಪ್ರಬಲ ಪ್ರಮಾಣದಿಂದ ಬಾಧಿತವಾಗದೆ) ಪ್ರತಿಭಾಸವಲ್ಲವಾಗುವುದು ಬಹು ಕಷ್ಟವು. (ಪ್ರತಿಭಾಸ-ಮಾಯಾ-ಅವಿದ್ಯೆ-ಭ್ರಾಂತಿ ಶುಕ್ತಿಯಲ್ಲಿ ರಜತ ಜ್ಞಾನ ರೂಪ ಅಧ್ಯಾಸವೆಂದರ್ಥ.)

೯. ಆ ಭೂತ ಗ್ರಾಮದ ಹತ್ತಿರ ಯಾವನೋ ಒಬ್ಬ ಶ್ವಪಚನು ಒಂದು ಮನೆಯನ್ನು ಮಾಡಿಕೊಂಡಿದ್ದನು. ಅದನ್ನು ನೋಡಿ– 'ನಾನು ಹಿಂದೆ ವಾಸ ಮಾಡಿಕೊಂಡಿದ್ದ ಮನೆಯು ಇದೇ. ಇದು ಈಗ ಶಿಥಿಲವಾಗಿ ಇಟ್ಟಿಗೆಗಳ ಚೂರಾಗಿ ಹೋಗಿರುವುದು" ಎಂಬ ಭ್ರಾಂತಿ ಮೂಲಕವಾದ ಅಭಿನಿವೇಶನಕ್ಕೆ ವಿಷಯವನ್ನಾಗಿ ಮಾಡಿಕೊಂಡೆ.

೧೦. ದ್ರೋಣ ಕಾಗೆಯೆಂಬ ಪಕ್ಷಿಯು ಆಕಸ್ಮಿಕವಾಗಿ ಒಂದು ತಾಳೆ ಗಿಡದ ಬುಡದಲ್ಲಿ ಕುಳಿತುಕೊಳ್ಳುವಂತೆ ಯಾವುದೋ ಒಂದು ವೇಳೆಯಲ್ಲಿ (ಕೆಲವು ಸಮಯದಲ್ಲಿ) ಅನೇಕ ಜನರಿಗೆ ಭ್ರಾಂತಿ ರೂಪವಾದ ಪ್ರತಿಭಾಸವು ಏಕ ರೂಪವಾಗಿಯೇ ಮನಸ್ಸಿನಲ್ಲಿ ಉದಯಿಸುವುದು. ಮನಸ್ಸಿನ ಗತಿಯು ನಿಜವಾಗಿಯೂ ಅತಿ ವಿಚಿತ್ರವಾದುದು.

೧೧. ನಿದ್ದೆಯಂತೆ ಪ್ರಾಣಿಗಳಿಗೆ ಭ್ರಾಂತಿಪ್ರದವಾದ ಮದ್ಯದ ಪಾನದಿಂದುಂಟಾದ ಮದದಿಂದ ಮಂದ ಬುದ್ಧಿಯುಳ್ಳ ತುಲ್ಯ ರೂಪರಾದ ಅನೇಕ ಮದ್ಯಪಾಯಿಗಳು ಹೇಗೆ ದಿಕ್ಕುಗಳೆಲ್ಲ ಗಿರ್ರನೆ ಚಕ್ರಗಳ ಹಾಗೆ ಸುತ್ತುತ್ತಿರುವಂತೆ ಕಾಣುವರೋ ಹಾಗೆಯೇ ತುಲ್ಯ ರೂಪರಾದ ಅನೇಕ ಜನರು ಏಕ ಕಾಲದಲ್ಲಿ ಏಕ ರೂಪವಾದ ಸ್ವಪ್ನವನ್ನೂ ಕಾಣುವರು.

ಏಕಸ್ಯಾಮೇವ ನೀಲಾಯಾಂ ರಮಂತೇ ಬಹು ಬಾಲಕಾಃ ।
ಏಕಸ್ಯಾಮೇವ ನೀಲಾಯಾಂ ವನಸ್ಥಲ್ಯಾಮಿವೈಣಕಾಃ ॥ ೧೨ ॥

ಬಹವಸ್ತುಲ್ಯ ಕಾಲಂ ಚ ಪ್ರತಿಭಾಸೇನ ಕರ್ಮಣಾಂ ।
ಜನಾ ಯತಂತೇ ಸ್ವಫಲಪಾಕೇಽತಿಬಹುಲಾಕೃತೌ ॥ ೧೩ ॥

ಪ್ರತಿಬಂಧಾಭ್ಯನುಜ್ಞಾನಾಂ ಕಾಲೋ ದಾತೇತಿ ಯಾ ಶ್ರುತಿಃ ।
ವಿಪ್ರ ಸಂಕಲ್ಪಮಾತ್ರೋಽಸೌ ಕಾಲೋ ಹ್ಯಾತ್ಮನಿ ತಿಷ್ಠತಿ ॥ ೧೪ ॥

೧೨-೧೩. ಕಪ್ಪಗಿರುವ ಹುಲ್ಲು ಬೆಳೆದಿರುವ ಒಂದೇ ಒಂದು ವನ ಭೂಮಿಯಲ್ಲಿ ಅನೇಕವಾದ ಜಿಂಕೆ ಮರಿಗಳು ಏಕ ಕಾಲದಲ್ಲಿ ಒಟ್ಟಿಗೆ ವಿಹರಿಸುವಂತೆ ಒಂದೇ ಆಟದಲ್ಲಿಯೇ ಅನೇಕ ಮಂದಿ ಬಾಲಕರು ಕ್ರೀಡಿಸುವರು. ಹೀಗೆಯೇ (ವಧ ಬಂಧ ಪರಾಜಯ, ಪಲಾಯನ ಮೊದಲಾದ) ನಾನಾ ಆಕಾರಗಳುಳ್ಳಂಥ ಸ್ವ ಪ್ರಾರಬ್ಧ ಕರ್ಮಫಲ ಪಾಕವು ಲಭ್ಯವಾಗಿದ್ದರೂ ಕೂಡ (ಸೈನಿಕರೇ ಮೊದಲಾದ) ಅನೇಕ ಜನಗಳು ಏಕ ಕಾಲದಲ್ಲಿ (ಜಯ ಲಾಭ ಭೋಗಾದಿ) ತುಲ್ಯ ರೂಪಗಳಾದ ಕರ್ಮಗಳ (ಪ್ರಯೋಜನಗಳ) ಭ್ರಾಂತಿಯಿಂದ, ತಮ್ಮ ಚಿತ್ತ ಪ್ರತಿಭಾಸದ ಮೂಲಕ ಅವುಗಳಲ್ಲಿನ ಲೋಭದ ದೆಸೆಯಿಂದ ಯುದ್ಧಾದಿಗಳಲ್ಲಿ ಪ್ರಯತ್ನಿಸುವರು.

(ಇಲ್ಲಿ ೧೨ನೆಯ ಶ್ಲೋಕದಲ್ಲಿರುವ ನೀಲಾಯಾಂ ಎಂಬ ಪದಕ್ಕೆ ತಾತ್ಪರ್ಯ ಪ್ರಕಾಶಿಕೆಯಲ್ಲಿ ಶಾದ್ವಲ ಶ್ಯಾಮಲಾಯಾಂ ಎಂದರ್ಥ ಮಾಡಿರುವರು. ಶಾದ್ವಲಃ ಎಂದರೆ ಹಚ್ಚಗೆ ಹುಲ್ಲು ಬೆಳೆದಿರುವ ಹುಲ್ಲುಗಾವಲು ಎಂದರ್ಥ. ಹೀಗಿರುವಾಗ ಮೂಲ ಟೀಕೆಗಳ ಔಚಿತ್ಯವು ಏನೋ ತಿಳಿಯದು.) ಸ್ಥಲಿ= ಅಕೃತ್ರಿಮವಾದ ಭೂಮಿ.

೧೪. ಹೇಮ ವಸಂತಾದಿ ರೂಪ ಕಾಲವು ಪ್ರತಿಬಂಧಾಭ್ಯನುಜ್ಞಾನ ಹೇತುವಾಗಿದ್ದರೂ ಕೂಡ ಕೇವಲ ಸಂಕಲ್ಪ ಮಾತ್ರವೇ ಆಗಿರುವುದರಿಂದ 'ಕಾಲವು ಪ್ರತಿಬಂಧ (ಅಡ್ಡಿ-ಆತಂಕ) ಅಭ್ಯನುಜ್ಞಾನ (ಸಾಹಾಯ್ಯ)ಗಳನ್ನು ಕೊಡತಕ್ಕದು' ಎಂಬ ಲೋಕದಲ್ಲಿನ ಜನಗಳ ಪ್ರವಾದ ಶ್ರವಣವೂ, ನಾನು ಹೇಳಿದ 'ಜಗತ್ತೆಲ್ಲ ಮಾನಸ ಕಲ್ಪನೆಯೇ' ಎಂಬ ಮಾತೂ ಒಂದಕ್ಕೊಂದು (ಪರಸ್ಪರ ವಿರೋಧವನ್ನು

ಹೊಂದುವುದಿಲ್ಲ. ಅಕಲ್ಪಿತವಾಗಿ ಅಖಂಡವಾದ ಕಾಲವೆಂಬುದೇ ಪರಮಾತ್ಮನು. ಅವನು ಸ್ವಾತ್ಮನಲ್ಲಿಯೇ ಇರುವನು. ಅವನು ಯಾರಿಗೂ ಪ್ರತಿಬಂಧವನ್ನೂ ಮಾಡುವುದಿಲ್ಲ: ಅಭ್ಯನುಜ್ಞೆಯನ್ನೂ ಕೊಡುವುದಿಲ್ಲ.

[ಪ್ರಪಂಚದಲ್ಲಿ ಹೇಮಂತಾದಿಕಾಲವೂ ದೇಶವುಂತಾದುವೂ ಭತ್ತ ಮೊದಲಾದ ಕೆಲವು ಬೀಜಗಳು ಮೊಳೆಯುದಕ್ಕೆ ಪ್ರತಿಬಂಧಕವಾಗಿಯೂ ಮತ್ತೆ ಕೆಲವು ಯವಾದಿ ಬೀಜಗಳಿಗೆ ಅನುಕೂಲ (ಸಹಾಯಕವಾಗಿಯೂ) ಇರುವುದು ಪ್ರಸಿದ್ಧವಾಗಿದೆ. ಜಗತ್ತೆಲ್ಲವೂ ಮಾನಸಕಲ್ಪನಾಮಾತ್ರವೇ ಆಗಿರುವ ಪಕ್ಷದಲ್ಲಿ, ದೇಶಕಾಲಾದಿ ವ್ಯವಸ್ಥೆಯೇ ಇಲ್ಲವಾಗುವುದು. ಹೀಗೆ ಬಾಹ್ಯಕಾಲಾದಿಗಳಿಗೆ ವ್ಯವಸ್ಥಾಪಕತ್ವವೇ ಇಲ್ಲದೆ ಹೋಗಿ ಲೋಕರೂಢಿಗೆ ಬಾಧೆಯುಂಟಾಗುವುದು. ಅದು ಕಾರಣ ಜಗತ್ತೆಲ್ಲವೂ ಮಾನಸ ಕಲ್ಪನಾ ಮಾತ್ರವೇ ಎಂದು ನಂಬುವುದಕ್ಕಾಗಿಲ್ಲ, ಎಂಬುದು ಗಾಧಿಯು ಆಶಂಕೆ. (ಆಶಯ.) ದಿಗ್ವಿಶೇಷಾವಚ್ಛಿನ್ನವಾದ ಸೂರ್ಯಚಂದ್ರಾದಿಗಳ ಉದಯಾಸ್ತಾದಿ ಕ್ರಿಯೆಯನ್ನು ನೋಡಿ ಶಾಸ್ತ್ರೀಯವಾಗಿ ಮನಸ್ಸಿನಿಂದಲೇ ದಿನ, ಪಕ್ಷ, ಮಾಸ, ರುತು ಮೊದಲಾದ ಕಾಲಬೇಧವು ಕಲ್ಪಿತವಾಗಿರುವುದರಿಂದ, ಪ್ರತಿಬಂಧಾಭ್ಯನುಜ್ಞಾನಹೇತುವಾದ ಕಾಲವೂ ಕೂಡ ಮನಸ್ಸಂಕಲ್ಪಮಾತ್ರವೇ ಆಗಿರುವ ಕಾರಣ, ಯಾವ ವಿರೋಧವೂ ಇಲ್ಲವೇ ಇಲ್ಲವೆಂದು ಭಗವಂತನು ಹೇಳಿದ ಸಮಾಧಾನ, ಮತ್ತು ಗಾಧಿಯು ನೀರಿನೊಳಗೆ ಮುಳುಗಿದ್ದಾಗ ತಾನು ತನ್ನ ಮನಸ್ಸಿನೊಳಗೆ ಕಂಡು ಅನುಭವಿಸಿದುದೂ, ಅಥಿತಿಯು ಹೇಳಿದುದೂ, ಪುನಃ ತಾನು ಪೂರ್ವಾನುಭೂತಪ್ರದೇಶಗಳಿಗೆಲ್ಲಾ ಹೋಗಿ ಅಲ್ಲಿಯ ಚಿಹ್ನಗಳನ್ನು ಕಂಡುದೂ ಅಲ್ಲಿಯ ಜನರಿಂದ ಕೇಳಿ ತಿಳಿದೂ ಪರಸ್ಪರ ಅವಿಸಂವಾದಿಗಳಾಗಿ ಏಕರೂಪವಾಗಿರುವುದರಿಂದ ಒಂದಕ್ಕೊಂದು ಸಹಕರಿಸಿ ಬಲವಾಗಿರುವ ಅನುಭವವನ್ನು "ಅದೆಲ್ಲ ವ್ಯವಹಾರವೂ ಕೇವಲ ಭ್ರಾಂತಿ"ಯೆಂದು ಶ್ರೀಮನ್ನಾರಾಯಣನು ಹೇಳಿದ ಒಂದು ಮಾತಿನಿಂದ ಅಪಲಪಿಸಿ ಅನುಭವಾರೂಢವಾಗಿರುವ ಆ ವ್ಯವಹಾರಗಳಲ್ಲಿ ಅಸತ್ಯತ್ವ (ಅಪ್ರಮಾಣ) ಬುದ್ಧಿಯನ್ನು ಇಡುವುದೆಂತು? ಎಂಬುದು ಇನ್ನೊಂದು ಶಂಕೆ. ಕಂಡಿದ್ದು, ಕೇಳಿದ್ದು, ಹೇಳಿದುದು ಮೊದಲಾದ ಪೂರ್ವೋಕ್ತವ್ಯವಹಾರಗಳೆಲ್ಲವೂ ಸ್ವಪ್ನಭ್ರಮದರ್ಶನ ಸದೃಶಗಳಾದ, ಮಾನಸಿಕ ಕಲ್ಪನಾಮಾತ್ರಜನ್ಯಗಳಾದ ಭ್ರಾಂತಿಗಳೇ ಆಗಿರುವ ಕಾರಣ, ಒಂದು ಪ್ರಮಾಣದಿಂದ ಉಂಟಾದ ಯಥಾರ್ಥಜ್ಞಾನವು ಮತ್ತೊಂದು ಪ್ರಬಲವಾದ ಸ್ವತಂತ್ರಪ್ರಮಾಣದಿಂದ ಸಹಕೃತವಾಗುವಂತೆ, ಅನ್ಯೋನ್ಯ ಸಹಕಾರದಿಂದ ಎಂದಿಗೂ ಪ್ರಮಾಣಗಳಾಗಲಾರವು. ಕಾಕತಾಳನ್ಯಾಯದಂತೆ ಅಕಸ್ಮಿಕವಾಗಿ ಏಕಕಾಲದಲ್ಲಿ ಒಂದೇ ಬಗೆಯಾದ ಭ್ರಾಂತಿಗಳು (ಗಾಧಿಯ ಮತ್ತು ಭೂತ ಗ್ರಾಮ ಕೀರದೇಶವಾಸಿ ಜನಗಳ) ಎಲ್ಲರ ಮನಸ್ಸುಗಳ

ಅಮೂರ್ತೋ ಭಗವಾನ್ಕಾಲೋ ಬ್ರಹ್ಮೈವ ತಮಜಂ ವಿದುಃ ।
ನ ಜಹಾತಿ ನ ಚಾದತ್ತೇ ಕಿಂಚಿತ್ಕಸ್ಯ ಕದೇತಿ ಚ ॥ ೧೫ ॥

ಲೌಕಿಕೋ ಯಸ್ತ್ವಯಂ ಕಾಲೋ ವರ್ಷಕಲ್ಪಯುಗಾತ್ಮಕಃ ।
ಸಂಕಲ್ಪ್ಯತೇ ಪದಾರ್ಥೌಘೈಃ ಪದಾರ್ಥೌಘಶ್ಚ ತೇನ ತು ॥ ೧೬ ॥

ಲ್ಲಿಯೂ ಉದಯಿಸಿರುವುವು. ಎಲ್ಲವೂ ಸಮಾನ ಧರ್ಮಿಗಳೇ, ಭ್ರಾಂತಿಗಳೇ ಆಗಿವೆ. ಒಂದು ಸ್ವಪ್ನ ದರ್ಶನದ ಯಥಾರ್ಥವಾದ ಸ್ಥಿತಿಯನ್ನು ಮತ್ತೊಂದು ಸ್ವಪ್ನ ದರ್ಶನದಿಂದಲಾಗಲೀ ಸಾವಿರಾರು ಇತರಸ್ವಪ್ನ ದರ್ಶನಗಳ ಸಹಾಯದಿಂದ ಲಾಗಲೀ ನಿರ್ಧರಿಸುವುದು ಸಾಧ್ಯವಲ್ಲ. ಸಾವಿರಾರು ಜನರ ಭ್ರಾಂತಿ ಮೂಲಕವಾದ ಸ್ವಪ್ನ ಸದೃಶಗಳಾದ ಅನುಭವಗಳೂ ಕೂಡ ಎಂದಿಗೂ ಪ್ರಮಾಹೇತುಗಳಾಗುವುದಿಲ್ಲ. ಸಾವಿರಾರು ಜನ ಭ್ರಾಂತರು ಏಕಕಾಲದಲ್ಲಿ, ಏಕ ರೂಪವಾಗಿ ಶುಕ್ತಿಯನ್ನು ನೋಡಿ ಅದು ರಜತವೆಂಬ ಭ್ರಾಂತಿಯಿಂದ ವ್ಯವಹಾರ ಮಾಡಿದರೂ ಕೂಡ ಶುಕ್ತಿಯು ಎಂದಿಗಾದರೂ ರಜತವಾಗುವುದೇನು? ಅವರ ಭ್ರಾಂತಿಗಳು ಕಾರ್ಯಕಾರಿಯಾಗುವುದೇನು? ಅಥವಾ ರಜತತತ್ತ್ವಜ್ಞನಾದ ಸರಾಫನು (ವ್ಯಾಪಾರಿಯು) ಭ್ರಾಂತ (ಮಿಥ್ಯಾ) ರಜತಕ್ಕಾಗಲಿ, ಭ್ರಾಂತರ ವ್ಯವಹಾರಕ್ಕಾಗಲಿ ಬೆಲೆ ಕೊಡುವನೇನು? ಇದರಂತೆಯೇ ಆ ಎಲ್ಲರ ವ್ಯವಹಾರಗಳೆಲ್ಲವೂ ಭ್ರಾಂತಿಗಳೇ ಆಗಿರುವುದರಿಂದ ಅನ್ಯೋನ್ಯ ಸಹಕಾರದಿಂದ ಪ್ರಮಾಜನಕಗಳಾಗುವುದಿಲ್ಲ.)

೧೫. ಅಕಲ್ಪಿತವೂ, ಅಖಂಡವೂ ಆಗಿರುವ ಭಗವತ್ಸ್ವರೂಪನಾದ ಕಾಲಕ್ಕೆ ಯಾವ ದೇಹಾದ್ಯಾಕಾರವೂ ಇಲ್ಲ. ಅದು ಜನ್ಮಾದಿ ವಿಕ್ರಿಯಾ ರಹಿತವಾದ ಸಾಕ್ಷಾತ್ಪರಬ್ರಹ್ಮವೇ ಎಂದು, ಅದು ಯಾವಾಗಲೂ, ಎಲ್ಲಿಯೂ ಯಾರಿಗೂ ಯಾವುದನ್ನೂ ಕೊಡುವುದಿಲ್ಲವೆಂದೂ ತೆಗೆದುಕೊಳ್ಳುವುದಿಲ್ಲವೆಂದೂ ಜ್ಞಾನಿಗಳು ತಿಳಿದಿರುವರು.

೧೬. ಲೌಕಿಕವಾದ ವರ್ಷಕಲ್ಪಯುಗಾದ್ಯಾತ್ಮಕವಾಗಿರುವ ಈ ಕಾಲವೆಂಬುದು ಪದಾರ್ಥಸಮುದಾಯಗಳಿಂದ ಸಂಕಲ್ಪಿಸಲ್ಪಡುವುದು. ಅದರಂತೆಯೇ, ಇದರಿಂದ ಪದಾರ್ಥಸಮುದಾಯವೂ ಸಂಕಲ್ಪಿತವಾಗಿರುವುದು. [ಜನ್ಯಸಾಮಾನ್ಯ ಪ್ರಪಂಚದಲ್ಲಿ ಕಾಲೋಪಾಧಿಕವಾಗಿರುವುದರಿಂದ ಸೂರ್ಯ ಕ್ರಿಯಾದಿ ಪದಾರ್ಥ ಸಮುದಾಯಗಳಿಂದ ಸಂಕಲ್ಪಿಸಲ್ಪಡುವುದು. ಆ ಕಾಲವೂ ಕೂಡ ಪ್ರತಿಬಂಧಾಭ್ಯನುಜ್ಞೆಗಳಿಂದ ಸಕಲಪದಾರ್ಥ ಸಮುದಾಯವನ್ನೂ, ಅವುಗಳ ಕ್ರಿಯಾಫಲಾದಿವ್ಯವಸ್ಥೆಯನ್ನೂ ಸಂಕಲ್ಪಿಸುವುದು.]

ಸಮಾನಪ್ರತಿಭಾಸೋತ್ಥಸಂಭ್ರಮಂ ಭ್ರಾಂತಚೇತಸಃ ।
ತಥಾ ತಂ ದೃಷ್ಟವಂತಸ್ತೇ ಭೂತಕೀರಜನೋಚ್ಚಯಾಃ ॥ ೧೭ ॥

ಸ್ವವ್ಯಾಪಾರಪರೋ ಭೂತ್ವಾ ಧಿಯಾತ್ಮಾನಂ ವಿಚಾರಯ ।
ಸಾಧೋ ಗತಮನೋಮೋಹಮಿಹೈವಾಸ್ಸ್ವ ವ್ರಜಾಮ್ಯಹಂ ॥ ೧೮ ॥

ಇತ್ಯುಕ್ತ್ವಾ ಭಗವಾನ್ವಿಷ್ಣುರ್ಜಗಾಮಾಂತರ್ಧಿಮೀಶ್ವರಃ ।
ಅತಿಷ್ಠತ್ಕಂದರೇ ಗಾಧಿರಾಧಿಪೀವರಯಾ ಧಿಯಾ ॥ ೧೯ ॥

ತತಃ ಕತಿಪಯೇಷ್ವದ್ರೌ ಮಾಸೇಷ್ವತಿ ಗತೇಷು ಸಃ ।
ಪುನರಾರಾಧಯಾಮಾಸ ಪುಂಡರೀಕಕರಂ ದ್ವಿಜಃ ॥ ೨೦ ॥

---

೧೭. ಹೀಗಿರುವ ಕಾರಣ, ಆ ಭೂತಗ್ರಾಮದಲ್ಲಿಯೂ ಕೀರದೇಶದಲ್ಲಿಯೂ ಇದ್ದ ಜನಸಮುದಾಯಗಳು ಭ್ರಾಂತಮನಸ್ಕರಾಗಿ, ಏಕಕಾಲದಲ್ಲಿ ಏಕರೀತಿಯಾದ ಪ್ರತಿಭಾಸ ವಶದಿಂದ ಉದ್ಭವಿಸಿದ ಆ ಬಗೆಯಾದ ನಾನಾ ಸಂಭ್ರಮವನ್ನು ಆ ಪ್ರಕಾರವಾಗಿ ಕಂಡರು.

೧೮. ಅಯ್ಯ ಸಾಧುವಾದ ಗಾಧಿ, ನೀನು ಇನ್ನುಮುಂದೆ ಈ ಬಗೆಯಾದ ಮನೋಭ್ರಾಂತಿಯನ್ನೆಲ್ಲ ಸಂಪೂರ್ಣವಾಗಿ ಪರಿತ್ಯಜಿಸಿ, ವಿಹಿತವಾದ ನಿನ್ನ ವರ್ಣಾಶ್ರಮೋಚಿತವಾದ ಕರ್ಮಾನುಷ್ಠಾನದಲ್ಲಿ ತತ್ಪರನಾಗಿದ್ದುಗೊಂಡು, ನಿನ್ನ ವಿವೇಕ ವೈರಾಗ್ಯಪೂರ್ಣವಾದ ಮನಸ್ಸಿನಿಂದಲೇ ಸ್ವಾತ್ಮಸ್ವರೂಪವನ್ನು ವಿಚಾರಮಾಡುತ್ತಾ ಇಲ್ಲಿಯೇ ಇರುವವನಾಗು. ನಾನು ಹೋಗುವೆನು. (ಎಂದು ಭಗವಂತನು ಗಾಧಿಗೆ ಹೇಳಿದನು).

೧೯. ಪರಮೇಶ್ವರನಾದ ಭಗವಂತನಾದ ವಿಷ್ಣುವು, ಗಾಧಿಯನ್ನು ಕುರಿತು ಹೀಗೆ ಉಪದೇಶಿಸಿ ಕೂಡಲೇ ಅಂತರ್ಹಿತನಾದನು. ಗಾಧಿಯೂ ಕೂಡ ವಿವಿಧ ಚಿಂತೆಗಳಿಂದ ವೃದ್ಧಿ ಹೊಂದಿದ ತನ್ನ ಮನಸ್ಸಿನಿಂದ, ಭಗವದ್ವಾಕ್ಯಾರ್ಥವನ್ನು ಸರಿಯಾಗಿ ತತ್ವತಃ ತಿಳಿಯಲಾರದೆ ವಿಪರೀತಾರ್ಥವನ್ನು ಭಾವಿಸಿಕೊಂಡು, ನಾನಾ ವಿಧ ವಿಚಾರ ಮಾಡುತ್ತ ಆ ಪರ್ವತದ ಗುಹೆಯಲ್ಲಿಯೇ ಇದ್ದನು.

೨೦. ಆ ಬೆಟ್ಟದ ಮೇಲೆ, ಹಾಗೆಯೇ ಕೆಲವು ತಿಂಗಳುಗಳು ಕಳೆದು ಹೋದುವು. ಬಳಿಕ, ಮತ್ತೆಯೂ, ಆ ಗಾಧಿ ಬ್ರಾಹ್ಮಣನು ಪದ್ಮಹಸ್ತನಾದ ಶ್ರೀ ಮಹಾವಿಷ್ಣುವನ್ನು ಆರಾಧಿಸಿದನು.

ದದರ್ಶ ಚೈಕದಾ ನಾಥಮಾಗತಂ ಪ್ರಣನಾಮ ತಂ ।
ಪೂಜಯಾಮಾಸ ಮನಸಾ ಚೋಕ್ತೇನೋವಾಚ ಚೇಶ್ವರಂ ॥ ೨೧ ॥

ಗಾಧಿರುವಾಚ :—

ಭಗವನ್ಸಂಸ್ಮರಂಶ್ಚೈತಯಾತ್ಮನಃ ಶ್ವಪಚಸ್ಥಿತಿಂ ।
ಇಮಾಂ ಸಂಸಾರಮಾಯಾಂ ಸ ಪರಿಮುಹ್ಯಾಮಿ ಚೇತಸಾ ॥ ೨೨ ॥

ತದುಕ್ತ್ವಾ ಪ್ರಸ್ವ ಯಥಾವಸ್ತು ಮಹಾಮೋಹನಿವೃತ್ತಯೇ
ಏಕಸ್ಮಿನ್ನೇವ ವಿಮಲೇ ಮಾಂ ನಿಯೋಜಯ ಕರ್ಮಣಿ ॥ ೨೩ ॥

---

೨೧. ಬಳಿಕ, ಯಾವುದೋ ಒಂದು ಸಮಯದಲ್ಲಿ, ತನ್ನೆದುರಿಗೆ ಪ್ರತ್ಯಕ್ಷನಾಗಿ ಬಂದು ನಿಂತಿರುವ ಶ್ರೀಮನ್ನಾರಾಯಣನನ್ನು ಕಂಡನು. ಭಕ್ತಿಯಿಂದ ಪ್ರಣಾಮಗಳನ್ನು ಅರ್ಪಿಸಿದನು. ಮನೋವಾಕ್ಕಾಯಗಳೆಂಬ ತ್ರಿಕರಣಗಳಿಂದ ಯಥಾವಿಧಿಯಾಗಿ ಪೂಜೆಯನ್ನು ಮಾಡಿದನು. ಮತ್ತೂ ಆಮೇಲೆ, ಪ್ರಶ್ನಿಸಬಹುದೆಂಬ ಅನುಜ್ಞಾವಚನವನ್ನು ಪಡೆದು, ಭಗವಂತನನ್ನು ಈ ರೀತಿಯಾಗಿ ಪ್ರಶ್ನಿಸಿದನು.

೨೨. ಗಾಧಿಯು ಹೇಳಿದನು:— ಸ್ವಾಮಿ, ಭಗವಂತ, ನಾನು ಹಿಂದೆ ಅನುಭವಿಸಿದ ಈ ನನ್ನ ಶ್ವಪಚತ್ವವನ್ನೂ, ಜನನ ಮರಣಾದ್ಯನರ್ಥ ಬಹುಳವಾದ ಈ ಸಂಸಾರ ಮಾಯೆಯನ್ನೂ ಕೂಡ, ಮನಸ್ಸಿನಲ್ಲಿ ಸ್ಮರಿಸಿಕೊಂಡು ಪುನಃಪುನಃ ಹೆಚ್ಚಾದ ಮೋಹಜಾಲಕ್ಕೆ ಸಿಕ್ಕಿಬಿದ್ದು, ಅತ್ಯಂತ ಭ್ರಾಂತನಾಗುತ್ತಿರುವೆನು.

೨೩. ಅದು ಕಾರಣ, ಈಗ ನೀನು ಅನುಗ್ರಹ ಮಾಡಿ, ನನ್ನ ಈಗಿನ ಮಹಾ ಮೋಹವು ನಿವೃತ್ತಿಯಾಗುವುದಕ್ಕೋಸ್ಕರ ಉಪಾಯಭೂತವಾದ ಆತ್ಮತತ್ತ್ವವನ್ನು ಉಪದೇಶಿಸಿ, (ತತ್ಕ್ಷಣವೇ ಹೊರಟುಹೋಗದೆ, ನನ್ನ ಮನಸ್ಸಿನ ಸಂಶಯ ಮೋಹಗಳ ಉಚ್ಛೇದವಾಗುವವರೆಗೂ ಇಲ್ಲಿಯೇ ಇರಬೇಕೆಂದು ಅನನ್ಯಗತಿಕನಾಗಿ ಪ್ರಾರ್ಥಿಸುವೆನು. ಮತ್ತು, ನನಗೆ ಪುನಃ ಮೋಹವು ಬರದಿರುವಂತೆ, ಅದ್ವಿತೀಯವಾದ ಮತ್ತು ಅವಿದ್ಯಾದಿ ದೋಷ ಲೇಶವೂ ಇಲ್ಲದೆ ನಿತ್ಯಶುದ್ಧವಾದ) ಆತ್ಮತತ್ತ್ವ ವಿಚಾರಾತ್ಮಕವಾದ ವ್ಯವಹಾರದಲ್ಲಿ (ಕರ್ಮದಲ್ಲಿ) ಮಾತ್ರ ನಿರತನಾಗುವಂತೆ ನಿಯೋಗಿಸುವವನಾಗು.

ಶ್ರೀ ಭಗವಾನುವಾಚ :—

ಬ್ರಹ್ಮನ್ ಜಗದಿದಂ ಮಾಯಾಮಹಾಶಂಬರಡಂಬರಂ ।
ಸರ್ವಾ ಆಶ್ಚರ್ಯಕಲನಾಃ ಸಂಭವಂತೀಹ ವಿಸ್ಮೃತೇಃ ॥ ೨೪ ॥

ಭೂತಕೀರಪುರೇ ಮೋಹಾದ್ದೃಷ್ಟವಾಂಸ್ತತ್ತಥಾ ಭವಾನ್ ।
ಇತ್ಯೇತತ್ಸಂಭವತ್ಯೇವ ದೃಶ್ಯತೇ ಹಿ ಜನೈರ್ಭ್ರಮಃ ॥ ೨೫ ॥

ಭೂತಾಸ್ತ್ವಮಿವ ಕೀರಾಶ್ಚ ದೃಷ್ಟವಂತಸ್ತಥಾ ಭ್ರಮಂ ।
ಮುಧೈವೇತ್ಯಪಿ ಸತ್ಯಾಭಂ ಸಮಕಾಲಾದಿಸಂಭವಾತ್ ॥ ೨೬ ॥

ಇದಂ ತು ಶ್ರುಣು ವಕ್ಷ್ಯಾಮಿ ಯಥಾಭೂತಮನಿಂದಿತಂ ।
ಯಥೈತಿ ತನುತಾಂ ಚಿಂತಾ ಮಾರ್ಗಶಿರ್ಷಲತೇವ ತೇ ॥ ೨೭ ॥

ಶ್ರೀ ಭಗವಂತನು ಹೇಳಿದನು:-

೨೪. ಅಯ್ಯ ಬ್ರಾಹ್ಮಣ, ಈ ಜಗತ್ತು ಮಾಯೆಯೆಂಬ ದೊಡ್ಡ ಇಂದ್ರ ಜಾಲದ ಆಡಂಬರವು. ಸ್ವಾತ್ಮ ತತ್ವಸ್ವರೂಪದ ವಿಸ್ಮೃತಿಯಿಂದ (ಆವರಣನಿಮಿತ್ತವಾದ ಅಜ್ಞಾನಮೂಲಕ) ಸಕಲ ಆಶ್ಚರ್ಯ ಕಲ್ಪನೆಗಳೂ ಸಂಭವಿಸುವುವು

೨೫. ಹೀಗಿರುವಕಾರಣ, ನೀನು ಭೂತಗ್ರಾಮ, ಕೀರರಾಜಧಾನಿಗಳಲ್ಲಿ ಆಗ ಆ ಪ್ರಕಾರವಾಗಿ ನೋಡಿದೆನೆಂದು ಹೇಳಿದುದೆಲ್ಲವೂ ಅಜ್ಞಾನದಿಂದ ಹಾಗೂ ಸಂಭವವೇ ಆಗಬಹುದು. ಏಕೆಂದರೆ, ಸಕಲ ಜನರೂ ನಿನ್ನಂತೆಯೇ ಭ್ರಾಂತಿಯನ್ನು ಕಾಣುವರು. (ನಿದ್ರಾ, ಮದ್ಯಪಾನಾದಿಕಾಲಗಳಲ್ಲಿ ಜನರು ಕೇವಲ ಅಸಂಭಾವಿತಗಳಾದ ನಾನಾ ವಿಚಿತ್ರ ವಿಭ್ರಮಗಳನ್ನು ಅಜ್ಞಾನದಿಂದ ಸರ್ವದಾ ಸಾವರಗಟ್ಟಳೆ ಕಾಣುತ್ತಲೇ ಇರುವರು. ಮಾಯೆಯಲ್ಲಿ ಅಸಂಭಾವಿತವಾದುದೂ ಸಂಭವಿಸುವುದು.)

೨೬. ನಾನು ಮೊದಲೇ ಹೇಳಿದಂತೆ, (ಕಾಕತಾಳೀಯ ಪ್ರಯೋಗದಿಂದ,) ಆ ಭೂತಗ್ರಾಮದವರೂ ಕೀರದೇಶದವರೂ ಸಮಾನ ಸಂಕಲ್ಪದಿಂದ, ಕಾಲದೇಶಾದಿಗಳು ಸಮನಾಗಿ ಸಂಭವಿಸಿದ ಕಾರಣ, ನಿನ್ನಂತೆಯೇ ಮಿಥ್ಯೆಯಾಗಿದ್ದರೂ ಕೂಡ ಸತ್ಯದಂತೆ ಪ್ರತಿಭಾಸಿಸುವ ಆ ಪ್ರಕಾರವಾದ ಮನೋಭ್ರಾಂತಿಯನ್ನು ಕಂಡರು.

೨೭. ಸಿನ್ನ ಶ್ವಪಚ, ನಿಂದಾಸಂಬಂಧನಿವಾರಕವಾದ (ಅನಿಂದಿತ) ಯಥಾಸ್ಥಿತವಾದ ಇನ್ನೊಂದು ರಹಸ್ಯ ವಿಚಾರವನ್ನು ಈಗಲೇ ನಿನಗೆ ಹೇಳುವೆನು; ಕೇಳು. ಇದನ್ನು ಕೇಳಿ ತಿಳಿಯುವುದರಿಂದ, ನಿನ್ನ ಚಿಂತೆಯು, ಮಾರ್ಗಶೀರ್ಷಮಾಸದಲ್ಲಿನ ಲತೆಯಂತೆ, ದಿನೇದಿನೇ ಕೃಶವಾಗಿ ಕೊನೆಗೆ ಸಮೂಲವಾಗಿ ನಾಶಹೊಂದುವುದು.

ಯೋಽಸೌ ಕಟಂಜಕೋ ನಾಮ ಶ್ವಪಚೋ ಭೂತಮಂಡಲೇ ।
ತೇನೈವ ಸನ್ನಿವೇಶೇನ ಸ ತಥೈವಾಭವತ್ಪುರಾ ॥ ೨೮ ।

ತಥೈವ ವಿಕಲತ್ರತ್ವಂ ಪ್ರಾಪ್ಯ ದೇಶಾಂತರಂ ಗತಃ ।
ಬಭೂವ ಕೀರನೃಪತಿಃ ಪ್ರವಿವೇಶಾನಲಂ ತತಃ ॥ ೨೯ ॥

ಭವತಃ ಕೇವಲಂ ಚಿತ್ತೇ ಜಲಾಂತರ್ವರ್ತಿನಸ್ತದಾ ।
ಪ್ರತಿಭಾತಾ ತಥಾಭೂತಾ ಕಟಂಜಾಚಾರ ಸಂಸ್ಥಿತಿಃ ॥ ೩೦ ॥

ದ್ರಷ್ಟಾನುಭೂತಮಪ್ಯರ್ಥಂ ಕದಾಚಿದ್ವಿಸ್ಮರಯತ್ಯಲಂ ।
ಕದಾಚಿದಸ್ಮೃದೃಷ್ಟಂತು ಚೇತಃ ಪಶ್ಯತಿ ದೃಷ್ಟವತ್ ॥ ೩೧ ॥

---

೨೮. ಆ ಭೂತಮಂಡಲಗ್ರಾಮದಲ್ಲಿ ಯಾವ ಕಟಂಜಕನೆಂಬ ಶ್ವಪಚನನ್ನು ಯಾವ ಸನ್ನಿವೇಶದಿಂದ ಯಾವ ಪ್ರಕಾರವಾಗಿ ನೋಡಿದೆಯೋ, ಅವನು, ನಿನ್ನಿಂದ ನೋಡಲ್ಪಟ್ಟದ್ದಕ್ಕೆ ಸಮಾನವಾದ ಶರೀರ, ಗ್ರಾಮ, ಮನೆ, ಹೆಂಡತಿ, ಮಕ್ಕಳು ಮುಂತಾದ ಅದೇ ಸನ್ನಿವೇಶದಿಂದಲೇ, ಅದೇಪ್ರಕಾರವಾಗಿಯೇ ಹಿಂದೆ ಅಲ್ಲಿ ಇದ್ದನು.

೨೯. ಹಾಗೆಯೇ ಅವನು ಪತ್ನೀ ಪುತ್ರಪೌತ್ರಾದಿ ತನ್ನ ಕುಟುಂಬವನ್ನು ಕಳೆದುಕೊಂಡು ವಿಧುರನಾಗಿಬಿಟ್ಟು, ದೇಶಾಂತರಕ್ಕೆ ಹೊರಟುಹೋದನು. ಆಮೇಲೆ ಅವನು ಕೀರದೇಶದ ರಾಜನೂ ಆಗಿದ್ದು ಕೊನೆಗೆ ಅಗ್ನಿಪ್ರವೇಶವನ್ನು ಮಾಡಿದನು.

೩೦. ನೀರಿನೊಳಗೆ ಮುಳುಗಿದ್ದ ನಿನ್ನ ಮನಸ್ಸಿನಲ್ಲಿ, ಆಗ ಆ ಪ್ರಕಾರವಾಗಿದ್ದ ಕಟಂಜಾಚಾರ ಸಂಸ್ಥಿತಿಯು ಕೇವಲ ಭ್ರಾಂತಿಯಿಂದಲೇ (ನನ್ನ ಸಂಕಲ್ಪವಶದಿಂದ) ಪ್ರತಿಭಾಸಹೊಂದಿತು.

೩೧. ಲೋಕದಲ್ಲಿ ಮನಸ್ಸು, ತಾನೇ ಸಾಕ್ಷಾತ್ತಾಗಿ ಇಂದ್ರಿಯಗಳಿಂದ ನೋಡಿ ಚಿರಕಾಲ ಅನುಭವಿಸಿದ ವಿಷಯವನ್ನೂ ಕೂಡ ಒಂದುಸಲ ಸಂಪೂರ್ಣವಾಗಿ ಮರೆತುಬಿಡುವುದು. ಮತ್ತೊಂದು ಸಮಯದಲ್ಲಾದರೋ, ಸುತರಾಂ ಹಿಂದೆ ಯಾವಾಗಲೂ ನೋಡದ ಅನನುಭೂತವಾದ ವಿಷಯವನ್ನು ಸಾಕ್ಷಾತ್ತಾಗಿ ಅನುಭವಿಸಿದ್ದಂತೆ ತಿಳಿಯುವುದು.

ಯಥಾ ಸ್ವಪ್ನ ಮನೋರಾಜ್ಯಧಾತು ಸಂಕ್ಷಿತಿ ವಿಭ್ರಮಾಃ ।
ಜಾಗ್ರತ್ಯಪಿ ತಥೈವಾಂಗ ದೃಶ್ಯಂತೇ ಮನಸಾ ಸ್ವಯಂ ॥ ೩೨ ॥

ಭವಿಷ್ಯದ್ಭೂತ ಕಾಲಸ್ಥಂ ಯಥಾ ತ್ರೈಕಾಲ್ಯದರ್ಶಿನಃ ।
ಪ್ರತಿಭಾಮೇತಿ ಗಾಧೇ ಯತ್ಕಟಂಜಾ ಚರಿತಂ ತಥಾ ॥ ೩೩ ॥

ಅಯಂ ಸೋಹಮಿದಂ ತನ್ಮ ಇತಿ ಮಜ್ಜತಿ ನಾತ್ಮವಾನ್ ।
ಅಯಂ ಸೋಹಮಿದಂ ತನ್ಮ ಇತಿ ಮಜ್ಜತ್ಯನಾತ್ಮವಾನ್ ॥ ೩೪ ॥

---

೩೨. ಸ್ವಪ್ನದಲ್ಲಿಯೂ, ಮನೋರಾಜ್ಯದಲ್ಲಿಯೂ, ಸನ್ನಿಪಾತ ಜರಾದಿಗಳು ಬಂದ ಕಾಲದಲ್ಲಿಯೂ ಮನಸ್ಸು ತಾನಾಗಿಯೇ ಹೇಗೆ ನಾನಾ ವಿಧ ಭ್ರಾಂತಿಗಳನ್ನು ಕಲ್ಪಿಸಿಕೊಂಡು ಕಾಣುವುದೋ ಹಾಗೆಯೇ ಮನಸ್ಸು ಜಾಗ್ರತ್ತಿನಲ್ಲಿಯೂ ಕೂಡ ಸ್ವತಃ ನಾನಾ ಭ್ರಮಗಳನ್ನು ಕಾಣುವುದು.

೩೩. ಅಯ್ಯ ಗಾಧಿ, ತ್ರಿಕಾಲ ಜ್ಞಾನಸಂಪನ್ನನಾದ ಒಬ್ಬ ಯೋಗಸಂಸಿದ್ಧ ಪುರುಷನಿಗೆ ಮುಂದೆ ಆಗುವುದೂ, ಹಿಂದೆ ಆಗಿಹೋದುದೂ ಕೂಡ, ವರ್ತಮಾನ ದಲ್ಲಿ (ಕಣ್ಣೆದುರಿಗೆ) ಇಲ್ಲದಿದ್ದರೂ ಹೇಗೆ ಮನಸ್ಸಿನಲ್ಲಿ ಸ್ಫುರಿಸುವುದೋ, ಹಾಗೆ ಈ ಕಟಂಜನ ಚರಿತ್ರೆಯೂ (ಯಾವಾಗಲೋ ಎಲ್ಲಿಯೋ ನಡೆದುದು ಮತ್ತು ಹಿಂದೆಂದೂ ನಿನಗೆ ಅನುಭೂತವಾಗದುದು)

೩೪. ವಸ್ತುತಃ ಅತೀತವಾಗಿದ್ದರೂ ನಿನ್ನ ಮನಸ್ಸಿನಲ್ಲಿ ಈಗ ಭ್ರಾಂತಿಯಿಂದ ಪ್ರತಿಭಾಸಿಸುತ್ತಿರುವುದು. ಅನಾತ್ಮಜ್ಞನಿಗೆ ಅನಾತ್ಮಗಳಾದ ದೇಹೇಂದ್ರಿಯಗಳಲ್ಲಿ "ನಾನು" (ಅಹಂ) ಎಂಬ ಅಭಿಮಾನವೂ, ಅನಾತ್ಮೀಯಗಳಾದ ಪತ್ನೀ ಪುತ್ರ ಗೃಹಾ ರಾಮಕ್ಷೇತ್ರಾದಿಗಳಲ್ಲಿ "ನನ್ನದು" (ಮಮ) ಎಂಬ ಅಭಿಮಾನವೂ ಇರುವುದರಿಂದ ಅವನು "ನಾನು ನನ್ನದು" ಎಂಬ ಮೋಹಸಾಗರದಲ್ಲಿ ಮುಳುಗುವನು. ಆತ್ಮಜ್ಞ ನಾದರೋ, ದೇಹಾದಿಗಳಲ್ಲಿ ಆತ್ಮಬುದ್ಧಿಯನ್ನು ಸ್ವಾತ್ಮ ತತ್ತ್ವಜ್ಞಾನದಿಂದ ನಿಶ್ಶೇ ಷವಾಗಿ ನಾಶಪಡಿಸಿಕೊಂಡಿದ್ದರಿಂದ, ಅನಾತ್ಮಜ್ಞನಂತೆ ಎಂದಿಗೂ ಮೋಹಸಾಗರದಲ್ಲಿ ಮುಳುಗಿರುವುದಿಲ್ಲ. ಹೀಗಿರುವ ಕಾರಣ ಅನಾತ್ಮಜ್ಞನಾದ ನೀನು ಮೋಹದಿಂದ ಕಟಂಜನ ದೇಹದಲ್ಲಿ 'ನಾನು' ಎಂದೂ ಕಟಂಜನ ಪತ್ನೀಪುತ್ರಾದಿಗಳು 'ನನ್ನವರು' ಎಂದೂ ತಿಳಿದುಕೊಂಡು ಭ್ರಮಿಸಿದೆ.)

ಸರ್ವಮೇವಾಹಮೇವೇತಿ ತತ್ತ್ವಜ್ಞೋ ನಾವಸೀದತಿ ।
ನ ಗೃಹ್ಣಾತಿ ಪದಾರ್ಥೇಷು ವಿಭಾಗಾನಥ ಭಾವನಾಂ ॥ ೩೫ ॥

ತೇನಾಸೌ ಭ್ರಮ ಯೋಗೇಷು ಸುಖದುಃಖ ವಿಲಾಸಿಷು ।
ನ ನಿಮಜ್ಜತಿ ಮಗ್ನೋಽಪಿ ತುಂಬೀಪಾತ್ರ ಮಿವಾಂಭಸಿ । ॥ ೩೬ ॥

ತ್ವಂ ತಾವದ್ವಾಸನಾಜಾಲಗ್ರಸ್ತಚಿತ್ತೋ ವಿಚೇತನಃ ।
ಕಿಂಚಿಚ್ಛೇಷ ಮಹಾವ್ಯಾಧಿರಿವ ನ ಸ್ವಸ್ಥಮಾಗತಃ ॥ ೩೭ ॥

---

೩೫. ಇದೂ ಅಲ್ಲದೆ ತತ್ತ್ವಜ್ಞನಿಗೆ "ಸರ್ವವೂ ನಾನೇ" ಎಂಬ ಸರ್ವಾಹಂ ಭಾವನೆಯುಂಟಾಗಿ ಬಿಡುವ ಕಾರಣ, ಅವನು ಹಾಗೂ ಕ್ಲೇಶಭಾಜನನಾಗುವುದಿಲ್ಲ. ಏಕೆಂದರೆ ತತ್ತ್ವಜ್ಞನು ಸಕಲ ಪಥಾರ್ಥಗಳಲ್ಲಿ ಸ್ವತ್ವ, ಪರತ್ವ ವಿಭಾಗ ರೂಪವಾದ (ಇದು ನನ್ನದು, ಇದು ಇತರರದು) ಭೇದ ಭಾವನೆಯನ್ನು ಎಂದಿಗೂ ಮನಸ್ಸಿಗೆ ತೆಗೆದುಕೊಳ್ಳುವುದಿಲ್ಲ. [ಸರ್ವಾತ್ಮತಾಭಾವನೆಯು ಪರಿಚ್ಛಿನ್ನಾಹಂಭಾವನೆಯಂತೆ ಮೋಹಹೇತುವಾಗುವುದಿಲ್ಲ.]

(ಸರ್ವಾತ್ಮ ಭಾವನೆಯುಳ್ಳ ತತ್ತ್ವಜ್ಞನ ವಿಷಯದಲ್ಲಿ "ಯತ್ರತ್ವಸ್ಯ ಸರ್ವಮಾತ್ಮೈವಾಭೂತ್ ತತ್ಕೇನ ಕಂ ಪಶ್ಯೇತ್" ಇತ್ಯಾದಿ ಶ್ರುತಿಯು ಭ್ರಾಂತಿ ಮೂಲವಾದ ಕ್ರಿಯಾಕಾರಕಾದಿ ಭೇದ ಬುದ್ಧಿಯನ್ನೂ, ಸರ್ವ ವ್ಯವಹಾರವನ್ನೂ ಬೋಧಿಸುವುದು.)

೩೬. ಸರ್ವಾಹಂಭಾವನೆಯಲ್ಲಿಯೂ ಕೂಡ ಅಹಂಕಾರವಿರುವದ್ದರಿಂದ ಮಗ್ನಪ್ರಾಯನಾಗಿದ್ದರೂ ಕೂಡ ಹೀಗಿರುವುದರಿಂದ ಯಾವಾಗಲಾದರೂ ಕೆಲವು ಸಮಯಗಳಲ್ಲಿ ಸುಖ ದುಃಖ ವಿಲಾಸ ಶೀಲಗಳಾದ ಭ್ರಮಗಳು ಸಂಭವಿಸಿದರೂ ಕೂಡ ಸೋರೆಯ ಬುರುಡೆಯು ನೀರಿನಲ್ಲಿದ್ದರೂ ಮುಳುಗದಿರುವಂತೆಯೇ ತತ್ತ್ವಜ್ಞನು ಆ ಮೋಹಗಳಲ್ಲಿ ಮುಳುಗದೆ ಅವಿಕಾರಿಯಾಗಿಯೇ ಇರುವನು.

(ತತ್ತ್ವವಿತ್ ತು ಮಹಾಬಾಹೋ ಗುಣಕರ್ಮ ವಿಭಾಗಯೋಃ ।
ಗುಣಾಗುಣೇಷು ವರ್ತಂತೇ ಇತಿ ಮತ್ವಾ ನ ಸಜ್ಜತೇ ॥. ಭಗವದ್ಗೀತಾ ೩-೨೮.)

೩೭. ನೀನಾದರೋ ವಾಸನಾಜಾಲದಿಂದ ಆಕ್ರಮಿಸಲ್ಪಟ್ಟ ಚಿತ್ತವುಳ್ಳವನಾಗಿ ಇನ್ನೂ ವಿವೇಕಶೂನ್ಯನಾಗಿರುವೆ. ಪೂರ್ತಿಯಾಗಿ ರೋಗವು ವಾಸಿಯಾಗದೆ, ಇನ್ನೂ ಸ್ವಲ್ಪ ರೋಗವು ಉಳಿದಿರುವ ವ್ಯಾಧಿಯುಳ್ಳ ನರನು ಮತ್ತೆಯೂ ನರಳಬೇಕಾಗಿರುವಂತೆ (ಸ್ವಸ್ಥತೆಯನ್ನು ಹೊಂದದೆ ಇರುವಂತೆ) ನೀನೂ ಸ್ವರೂಪಾವಸ್ಥಿತನಾದ ಆತ್ಮನನ್ನು ಪಡೆದವನಾಗಿಲ್ಲ. ಅದು ಕಾರಣ ಶೋಕಮೋಹಗಳಿಂದ ನರಳುತ್ತಿರುವೆ.

ಜ್ಞಾನಸ್ಯಾ ಪರಿಪೂರ್ಣತ್ವಾನ್ನ ಶಕ್ನೋಷಿ ಮನೋಭ್ರಮಂ ।
ವಿನಿವಾರಯಿತುಂ ಮೋಘಮುಸನ್ಯ್ಯಗ್ಯತ್ನವಾನಿವ ॥ ೩೮ ॥

ಯದೇವ ತೇ ಮನೋಮಾತ್ರೇ ಸಹಸಾ ಪ್ರತಿಭಾಸತೇ ।
ತರುರುಚ್ಚಜನೇನೇವ ತೇನೈವಾಕ್ರಮ್ಯಸೇ ಕ್ಷಣಾತ್ ॥ ೩೯ ॥

ಚಿತ್ತ ನಾಭಿಃ ಕಿಲಾಸ್ಯೇಹ ಮಾಯಾ ಚಕ್ರಸ್ಯ ಸರ್ವತಃ ।
ಸ್ಥೀಯತೇ ಚೇತ್ತದಾಕ್ರಮ್ಯ ತನ್ನ ಕಿಂಚಿತ್ಪ್ರಬಾಧತೇ ॥ ೪೦ ॥

ತ್ವಮುತ್ತಿಷ್ಠ ಗಿರೇಃ ಕುಂಜೇ ದಶವರ್ಷಾಣ್ಯಖಿನ್ನಧೀಃ ।
ತಪಃ ಕುರು ತತೋ ಜ್ಞಾನಮನಂತಂ ಸಮವಾಪ್ಸ್ಯಸಿ ॥ ೪೧ ॥

---

೩೮. ಚೆನ್ನಾಗಿ ಪ್ರಯತ್ನಮಾಡಿ ಕಷ್ಟಪಟ್ಟು ಸ್ವಂತ ಮನೆಯನ್ನು ಕಟ್ಟಿಕೊಳ್ಳದ, ಪರಗೃಹಪ್ರವೇಶಮಾಡದ, ಮನುಷ್ಯನು ಮಳೆಯ ಬಾಧೆಯನ್ನು ನಿವಾರಿಸಿಕೊಳ್ಳಲು ಅಶಕ್ತನಾಗಿರುವಂತೆ ನಿನಗೆ ಇನ್ನೂ ತತ್ತ್ವಜ್ಞಾನವು ಪರಿಪೂರ್ಣವಾಗಿಲ್ಲವಾದ ಕಾರಣ, ನೀನು ನಿನ್ನ ಮನೋಭ್ರಮೆಯನ್ನು ನಿವಾರಿಸಿಕೊಳ್ಳಲು ಅಸಮರ್ಥನಾಗಿರುವೆ.

೩೯. ಹೀಗಿರುವುದರಿಂದ, ನಿನ್ನ ಮನಸ್ಸಿನಲ್ಲಿ ಯಾವುದೇ ಒಂದು ಪದಾರ್ಥವು ತಟ್ಟನೆ ಪ್ರತಿಭಾಸಿಸುವುದೋ, ಆ ಪದಾರ್ಥದಿಂದಲೇ, ಎತ್ತರವಾಗಿ ಬೆಳೆದಿರುವ ಮನುಷ್ಯನು ಒಂದು ಮರವನ್ನು (ಆಕ್ರಮಿಸುವಂತೆ) ಸುಲಭವಾಗಿ ಹತ್ತುವಂತೆ, ನೀನು ಆ ಪದಾರ್ಥದ ಮೇಲಿನ ಅಭಿಮಾನದಿಂದ ಆ ಕೂಡಲೆ ಪರಿಭವವನ್ನು ಹೊಂದುವೆ.

೪೦. ಈ ಸಂಸಾರ ಮಾಯೆಯೆಂಬ ಚಕ್ರಕ್ಕೆ ಚಿತ್ತವೆಂಬುದು ನಾಭಿ (ಗುಂಬ) ಯಾಗಿರುವುದು. ಈ ಸಂಸಾರ ಚಕ್ರವು ನಾಭಿಯಂತಿರುವ ಚಿತ್ತದ ಮೂಲಕವೇ ಸರ್ವತ್ರ ಸರ್ವದಾ ಭ್ರಮಿಸುತ್ತಿರುವುದು. (ಸುತ್ತುತ್ತಿರುವುದು.) ಸಂಸಾರ ಭ್ರಮಣಹೇತುವಾದ ಇಂತಹ ಚಿತ್ತವನ್ನು ಆಕ್ರಮಿಸಿಕೊಂಡು (ಆತ್ಮಸ್ವರೂಪದಲ್ಲಿ ಲಯಗೊಳ್ಳಿಸುವುದರಿಂದ ತಿರಸ್ಕರಿಸಿ) ವಿವೇಕದಿಂದ ಇದ್ದುಬಿಟ್ಟರೆ ಆಗ ಆ ಮಾಯಾಚಕ್ರವು ಸ್ವಲ್ಪವಾದರೂ ಬಾಧೆಪಡಿಸುವುದಿಲ್ಲ.

೪೧. ಅಯ್ಯ ಗಾಧಿ. ಇನ್ನು ನೀನು ಏಳು. (ಈ ಮಹಾ ಮೋಹವನ್ನು ಬಿಟ್ಟು ಎದ್ದೇಳು.) ಇದೇ ಪರ್ವತದ ಲತಾಗೃಹದಲ್ಲಿ ಹತ್ತು ವರ್ಷಗಳ ಕಾಲ, ಅನಿರ್ವಿಣ್ಣ ಮನಸ್ಕನಾಗಿ, ಚಿತ್ತನಿರೋಧಾಭ್ಯಾಸರೂಪ ತಪಸ್ಸನ್ನು ಮಾಡು. ಅದರಿಂದ ಅನಂತವಾದ ಅಖಂಡಾತ್ಮೈಕ್ಯಜ್ಞಾನವನ್ನು ಪಡೆಯುವೆ. ಎಂದು ಗಾಧಿಗೆ ವಿಷ್ಣುವು ಹೇಳಿದನು.

ಇತ್ಯುಕ್ತ್ವಾ ಪುಂಡರೀಕಾಕ್ಷಸ್ತತ್ರೈವಾಂತರಧೀಯತ ।
ವಾತಾಭ್ರವದ್ದೀಪಕವದ್ಯಮುನೋರ್ಮೀಪವತ್ಕ್ಷಣಾತ್ ॥ ೪೨ ॥

ಗಾಧಿರ್ವಿವೇಕವಶಜಂ ವೈರಾಗ್ಯಪದಮಾಗತಃ ।
ಶರತ್ಸಮಯಪರ್ಯಂತೇ ವೈರಸ್ಯಮಿವ ಪಾದಪಃ ॥ ೪೩ ॥

ವಿಚಿತ್ರಂ ಚೇಷ್ಟಿತಂ ಧಾತುರಸಮಂಜಸಮಾಗತಂ ।
ಭ್ರಮದ್ಭ್ರಮಭರೋನ್ಮುಕ್ತಮತಿರ್ಮಂದಮಗರ್ಹಯತ್ ॥ ೪೪ ॥

ಜಗಾಮ ಕರುಣಾದ್ರಾತ್ಮಾ ನಿಯಮಾಯೋತ್ತಮ ಶ್ರಿಯೇ ।
ವಿಶ್ರಾಂತ್ಯೈ ಋಷ್ಯಮೂಕಂ ತು ಪಯೋಧರ ಇವಾಚಲಂ ॥ ೪೫ ॥

ಶ್ರೀ ವಸಿಷ್ಠನು ಹೇಳಿದನು:—

೪೨. ರಾಮ, ಹೀಗೆ ಹೇಳಿ, ವಾತಾಹತವಾದ ಮೇಘದಂತೆಯೂ, ಆರಿಹೋದದೀಪದಂತೆಯೂ ಯಮುನಾನದಿಯ ತರಂಗದಂತೆಯೂ, ಆ ಪುಂಡರೀಕಾಕ್ಷನು (ವಿಷ್ಣುವು) ಆಕ್ಷಣದಲ್ಲಿಯೇ ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

೪೩. ಅನಂತರ ಶರತ್ಕಾಲವು ಮುಗಿದಮೇಲೆ ವೃಕ್ಷವು (ವಿರಸ) ರಸಶೂನ್ಯವಾಗುವಂತೆ ಗಾಧಿಯು, ಸರ್ವತ್ರ ಪ್ರಾಪಂಚಿಕ ವಿಷಯಗಳಲ್ಲಿ ವಿರಸನಾಗಿ (ಸ್ನೇಹಶೂನ್ಯವಾಗಿ ಅಭಿಮಾನರಹಿತನಾಗಿ) ವಿವೇಕಜನ್ಯವಾದ ವೈರಾಗ್ಯವನ್ನು ಪಡೆದನು.

೪೪. ಆ ಬಳಿಕ, ವಿಶೇಷವಾಗಿ ಭ್ರಮಿಸುತ್ತಿದ್ದ ಭ್ರಾಂತ್ಯತಿಶಯದಿಂದ ಸಂಪೂರ್ಣವಾಗಿ ಬಿಡಲ್ಪಟ್ಟ ಮನಸ್ಸುಳ್ಳವನಾಗಿ, ಪ್ರಾಕ್ತನ ಕರ್ಮವಾಸನಾರೂಪ ದೈವದ ತನಗೆ ಸರ್ವಥಾ ಅಯುಕ್ತವಾಗಿ (ಅಸಮಂಜಸ) ಸಂಪ್ರಾಪ್ತರಾಗಿದ್ದ ಶ್ವಪಚವು ವಾದಿ ಪ್ರದರ್ಶನ ರೂಪವಾದ ಅತಿವಿಚಿತ್ರ ದುರ್ವ್ಯಾಪಾರವನ್ನು ಮೆಲ್ಲಮೆಲ್ಲನೆ ನಿಂದಿಸಿದನು.

೪೫. ಅನಂತರ ಜಲಭರಿತವಾದ ಮೇಘವು ಪರ್ವತದ ಮೇಲೆ ವಿಶ್ರಮಿಸಿಕೊಳ್ಳುವಂತೆ, ಕರುಣಾರ್ದ್ರ ಹೃದಯನಾದ ಆ ಗಾಧಿಯು, ಚಿತ್ತ ನಿರೋಧಾಭ್ಯಾಸಕ್ಕೋಸ್ಕರವೂ, ತನ್ಮೂಲಕ ಮೋಕ್ಷವೆಂಬ ಪರಮ ಶ್ರೇಯಸ್ಸನ್ನು ಪಡೆದು ಸ್ವಾತ್ಮಸ್ವರೂಪದಲ್ಲಿದ್ದು ನಿರಂತರ ವಿಶ್ರಾಂತಿ ಪಡೆಯುವುದಕ್ಕೋಸ್ಕರವೂ ಮತಂಗಾಶ್ರಮಸ್ಥವಾದ ಋಷ್ಯಮೂಕಪರ್ವತಕ್ಕೆ ಹೋದನು.

ನಿರಸ್ತಾಶೇಷ ಸಂಕಲ್ಪ ಸ್ತಪಸ್ತತ್ರ ಚಕಾರಹ |
ದಶವರ್ಷಾಣಿ ತೇನಾಸಾವಾತ್ಮಜ್ಞಾನ ಮವಾಪಹ ‖ ೪೬ ‖

ಅಥ ತದನು ಸ್ವಾಂ ಪ್ರಾಪ್ಯ ಸತ್ತಾಂ ಮಹಾತ್ಮಾ |
ವ್ಯಪಗತ ಭಯಶೋಕೋ ಭೋಗಭೂಮಾವನೀಷು ‖
ಸತತ ಮುದಿತ ಜೀವನ್ಮುಕ್ತರೂಪಃ ಪ್ರಶಾಂತಃ |
ಸಕಲ ಇವ ಶಶಾಂಕೋ ಘೂರ್ಣಿತಾಪೂರ್ಣಚೇತಾಃ ‖ ೪೭ ‖

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಮೋಕ್ಷೋಪಾಯೇಷು
ಉಪಶಮ ಪ್ರಕರಣೇ ಗಾಧಿ ವೃತ್ತಾಂತೇ "ಗಾಧೇರ್ಜ್ಞಾನ ಪ್ರಾಪ್ತಿ" ರ್ನಾಮ
ಏಕೋನಪಂಚಾಶಃ ಸರ್ಗಃ

---

೪೬. ಅಲ್ಲಿ ಸಮಸ್ತ ಸಂಕಲ್ಪಗಳನ್ನೂ ಸಂಪೂರ್ಣವಾಗಿ ಬಿಟ್ಟುಬಿಟ್ಟು ಹತ್ತು ವರ್ಷಗಳ ಕಾಲ ಚಿತ್ತೈಕಾಗ್ರತೆಯಿಂದ, ಚಿತ್ತ ನಿರೋಧರೂಪವಾದ ತಪಸ್ಸನ್ನು ಮಾಡಿ ಅದರಿಂದ ಆತ್ಮಜ್ಞಾನವನ್ನು ಪಡೆದನು.

["ಮನಸಶ್ಚ ಇಂದ್ರಿಯಾಣಾಂಚ ಐಕಾಗ್ರ್ಯಂ ಪರಮಂತಪಃ"]

೪೭. ಹೀಗೆ ಆತ್ಮಜ್ಞಾನಪ್ರಾಪ್ತಿಯನಂತರ, ಮಹಾತ್ಮನಾದ ಆ ಗಾಧಿಯು ಪಾರಮಾರ್ಥಿಕವಾದ ಆತ್ಮಸತ್ತೆಯನ್ನು ಪಡೆದು, ಭಯಶೋಕಾದಿಗಳನ್ನು ಪರಿಹರಿಸಿಕೊಂಡು, (ಜೀವಿಸಿರುವಾಗಲೇ ಉದಯಿಸಿದ ಮುಕ್ತಾತ್ಮ ಸ್ವರೂಪವುಳ್ಳವನಾಗಿ) ಜೀವನ್ಮುಕ್ತದೆಶೆಯನ್ನು ಹೊಂದಿದವನಾಗಿಯೂ ಅಖಂಡಾತ್ಮಾನಂದ ಮದದಿಂದ ಘೂರ್ಣಿತವೂ (ಸುತ್ತುತ್ತಿರುವ) ಮತ್ತು ಪರಿಪೂರ್ಣವೂ ಆದ ಮನಸ್ಸುಳ್ಳವನಾಗಿ ಸಕಲ ಪ್ರಾಪಂಚಿಕ ಭೋಗಗಳಲ್ಲಿ ಅಸಂಗನಾಗಿಯೂ ಷೋಡಶಕಲಾಪರಿಪೂರ್ಣನಾದ ಚಂದ್ರನಂತೆ ಪ್ರಶಾಂತನಾಗಿಯೂ ಅಪರಿಚ್ಛಿನ್ನ ಬ್ರಹ್ಮಾಕಾಶದಲ್ಲಿ ನಿರಂತರವೂ (ಅಸ್ತನಾಗದೆ) ವಿಹರಿಸಿದನು.

ಇಂತಿದು ಆರ್ಷವೂ, ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಉಪಶಮ ಪ್ರಕರಣದಲ್ಲಿ ಗಾಧಿ ವೃತ್ತಾಂತದೊಳಗೆ "ಗಾಧಿ ಜ್ಞಾನಪ್ರಾಪ್ತಿ ನಿರೂಪಣ" ಎಂಬ
ನಲವತ್ತೊಂಬತ್ತನೆಯ ಸರ್ಗವು.